

ಕರ್ಮವೀರ

ದೀಪಾವಳಿ ಸಂಚಿಕೆ ೧೯೫೧

ಬೆಲೆ: ರೂ. ೧-೪-

ಶ್ರೀರಾಮ

ಶ್ರೀ ಯಲ್ಲಮ್ಮ ಕಾಟನ್ ಉಲ್ಲನ್ & ಸಿಲ್ಕ್ ಮಿಲ್ಸ್, ಕಂಪನಿ ಲಿಮಿಟೆಡ್, ದಾವಣಗೆರೆ ಸಿಟಿ

(ಇಂಡಿಯು ಕಂಪೆನಿ ಆಕ್ಟ್ ಪ್ರಕಾರ ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾದ್ದು)

ಡಾಯರೆಕ್ಟರ್ ಮಂಡಳ:

೧. ಶ್ರೀ. ರಾವ್‌ಸಾಹೇಬ್ ಎಲ್. ಅರ್. ಕೊಳ್ಳೇಕರ್ ಹುಬ್ಬಳ್ಳಿ
೨. ಶ್ರೀ. ಬಿ. ಕರಿಬಸಪ್ಪ ಶೆಟ್ಟರವರು, ಕಂಪಲಿ (ಜಿ. ಬಳ್ಳಾರಿ)
೩. ಶ್ರೀ. ನಾಗುರಾವ್ ನೀಮುಕರ್, ಹೈದರಾಬಾದ್ (Dn.)
೪. ಶ್ರೀ. ಕೆ. ಎಸ್. ವಿಠ್ಠಲರಾವ್, ಬೆಂಗಳೂರು (ಶ್ಯಾಮಸನ್ಸ್ ಡ್ರೆಸಸ್)
೫. ಶ್ರೀ. ಪುಂಡಲೀಕಸಾ ತುಳಜನ್‌ಸಾ ಹಬೀಬ್, ಹುಬ್ಬಳ್ಳಿ
೬. ಶ್ರೀ. ಇಜಂತಕರ್ ನಾಗೇಂದ್ರರಾವ್, ಕಂಪಲಿ (ಜಿ. ಬಳ್ಳಾರಿ)
೭. ಶ್ರೀ. ಯು. ಪಿ. ಶಿವಾಜಿರಾವ್, ಶಿವಮೊಗ್ಗ
೮. ಶ್ರೀ. ಜಿ. ಡಿ. ಮಾಲಶೆ, ಟೆಕನಿಕಲ್ ಡೈರೆಕ್ಟರ್, ದಾವಣಗೆರೆ ಸಿಟಿ
೯. ಶ್ರೀ. ವಿರುಪಣ್ಣ ದೊಡ್ಡಯಲ್ಲಪ್ಪ ಅಂಬರ್‌ಕರ್, ದಾವಣಗೆರೆ ಸಿಟಿ
೧೦. ಶ್ರೀ. ಎ. ವೈ. ಪಾಂಡುರಂಗರಾವ್ (ಎಕ್ಸ್ ಆಫಿಸಿಯೋ) ದಾವಣಗೆರೆ ಸಿಟಿ
೧೧. ಶ್ರೀ. ಆರ್. ವೈ. ಅಂಬರ್‌ಕರ್ (ಎಕ್ಸ್ ಆಫಿಸಿಯೋ) ದಾವಣಗೆರೆ ಸಿಟಿ
೧೨. ಕೆಲಸಗಾರರ ಹಾಗೂ ಕೂಲಿಕಾರರ ಪರವಾಗಿ ಒಬ್ಬರು.

ಮ್ಯಾನೇಜಿಂಗ್ ಏಜಂಟ್ಸ್, ಸೆಕ್ರೆಟರೀಸ್ ಹಾಗೂ ಟ್ರೇಝರರ್ಸ್ :

ಅಂಬರ್‌ಕರ್ ಕಾರ್ಪೊರೇಶನ್ (ಇಂಡಿಯಾ) ಲಿ., ದಾವಣಗೆರೆ ಸಿಟಿ

ಅರಳೆ, ರೇಶಿಮೆ ಹಾಗೂ ಉಣ್ಣೆ ಬಟ್ಟೆಗಳನ್ನು ತಯಾರಿಸುವ ಒಂದು ಕೋಟಿ ರೂಪಾಯಿ ಬಂಡವಾಲದ ಅತ್ಯಾಧುನಿಕ ಯಂತ್ರ ಸಲಕರಣೆಗಳಿಂದ ಪ್ರಾರಂಭಿಸಲ್ಪಡುವ ಕರ್ನಾಟಕದ ಮೊಟ್ಟಮೊದಲನೆಯ ಗಿರಣಿ.

ಇದಕ್ಕೆ ಭಾರತ ಹಾಗೂ ಮೈಸೂರ ಸರಕಾರದ ಸಕಲ ಸೌಕರ್ಯಗಳೂ, ಕನ್ನಡಿಗರ ಶಕ್ತಿ-ಸಾಮರ್ಥ್ಯವೂ ಆಧಾರವಾಗಿದೆ. ಡಾಯರೆಕ್ಟರ ಮಂಡಳದಲ್ಲಿರುವವರೂ, ಜನಾದರಣೀಯರೂ, ಹೆಸರಾದ ಉದ್ದಿಮೆದಾರರೂ, ಜವಳಿ ಯಂತ್ರಜ್ಞರೂ, ವ್ಯಾಪಾರಸ್ಥರೂ ಇರುವರು. ಇದಲ್ಲದೆ ಕೆಲಸಗಾರರಿಗೂ, ಕೂಲಿಕಾರರಿಗೂ ಸಹ ಡೈರೆಕ್ಟರ ಮಂಡಳದಲ್ಲಿ ಪ್ರಾತಿನಿಧ್ಯ ಕೊಡಲಾಗಿದೆ. ಸದ್ಯದ ಬೆಳೆಯುತ್ತಿರುವ ಬಟ್ಟೆಯ ಬೇಡಿಕೆ, ಕರ್ನಾಟಕದಲ್ಲಿ ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತಿರುವ ಉತ್ತಮ ತರಗತಿಯ ಹತ್ತಿ ಹಾಗೂ ಮೈಸೂರ ಸರಕಾರದ ಕೃಪೆಯಿಂದ ಅತಿ ಕಡಿಮೆ ದರದಲ್ಲಿ ಈ ಗಿರಣಿಗೆ ದೊರೆಯತಕ್ಕ ವಿದ್ಯುಚ್ಛಕ್ತಿ ಹಾಗೂ ಜವಳಿ ಬಟ್ಟೆ ಜೊತೆಗೆ ರೇಶಿಮೆ ಹಾಗೂ ಉಣ್ಣೆ ಬಟ್ಟೆಗಳನ್ನು ತಯಾರಿಸುವದು ಹಾಗೂ ಡಾಯರೆಕ್ಟರರ ಅನುಭವ ಮತ್ತು ಯೋಗ್ಯತೆಯನ್ನು ನೋಡಿದರೆ

ಈ ಗಿರಣಿಯು ಅತ್ಯಂತ ಲಾಭದಾಯಕವೂ ಹಾಗೂ ಇಡೀ ನಾಡಿಗೆ ಆದರ್ಶ ಸಂಸ್ಥೆಯಾಗಬಲ್ಲದು.

೧. ಈ ಕಂಪೆನಿಯು ಎಲ್ಲಾ ಕಡೆಗಳಿಂದ ಎಲ್ಲಾ ಜನಾಂಗದವರಿಂದ ಕೂಡಿದ ೧೦೫ ಪ್ರಮೋಟರುಗಳಿಂದ ಕೂಡಿ ರಜಿಸ್ಟರ್ ಮಾಡಲ್ಪಟ್ಟಿದೆ.
೨. ಈ ಕಂಪೆನಿಗೆ ಅಖಿಲ ಹಿಂದೂಸ್ಥಾನದ ಕೈಗಾರಿಕಾ ಸಂಸ್ಥೆಯ ಅಧ್ಯಕ್ಷರಾದ ಡಾಕ್ಟರ್ ಸರ್ ಯಂ. ವಿಶ್ವೇಶ್ವರಯ್ಯನವರ ಪೂರ್ಣ ಆಶೀರ್ವಾದವಿರುತ್ತೆ.

ಅಧಿಕೃತ ಬಂಡವಾಲ ಒಂದು ಕೋಟಿ ರೂಪಾಯಿ

ರೂ. ೧೦೦ ಗಳ ೭೦,೦೦೦ ಸಾಮಾನ್ಯ ಷೇರುಗಳು	ರೂ.	೭೦,೦೦,೦೦೦
,, ೧೦೦ ಗಳ ೬% ಟ್ಯಾಕ್ಸ ಫ್ರೀ ೨೫,೦೦೦ ಕ್ಯುಮ್ಯುಲೇಟಿವ್ಹ ಪ್ರಿಫರನ್ಸ ಷೇರುಗಳು	,,	೨೫,೦೦,೦೦೦
,, ೧೦೦ ಗಳ ೫,೦೦೦ ಸಾಮಾನ್ಯ ಷೇರುಗಳು (ಗಿರಣಿಯ ಕಾರ್ಮಿಕರ ಹಾಗೂ ಕೆಲಸಗಾರರ ಸಲುವಾಗಿ ಕಾಯ್ದಿಟ್ಟವುಗಳು)	,,	೫,೦೦,೦೦೦
ಒಟ್ಟು ರೂಪಾಯಿ		೧,೦೦,೦೦,೦೦೦

ಸಾಮಾನ್ಯ ಷೇರುಗಳ ಅರ್ಜಿಯೊಂದಿಗೆ ರೂ. **೨೦** ಕಳಿಸಿ ಉಳಿದ ರೂ. **೮೦** ಗಳನ್ನು **ನಾಲ್ಕು** ಕಂತುಗಳಲ್ಲಿ ಕೊಡಬಹುದು.

ಹೆಚ್ಚಿನ ವಿವರಗಳಿಗೆ ಮೇಲ್ಕಂಡ ಕಂಪನಿಗೆ ಬರೆಯಿರಿ.



ದೀಪಾವಳಿಯು
ನಮ್ಮೆಲ್ಲ ಗ್ರಾಹಕರಿಗೆ, ಹಿತೈಷಿಗಳಿಗೆ

ಶುಭದಾಯಕವಾಗಲಿ !

ಹಾರೈಸಿದವರು:

ಶ್ರೀ ಕೃಷ್ಣ ಭವನ - ಹುಬ್ಬಳ್ಳಿ

ತಾರಿನ ಪತ್ರೆ: 'ಭವನ'
ಟೆಲಿಫೋನ ನಂ. ೧೦೯

ಆದರ್ಶ ಬೋರ್ಡಿಂಗ್ ಮತ್ತು ಲಾಜಿಂಗ್ ಹೌಸ್

★ ಗಾಳಿ ಬೆಳಕುಳ್ಳ ಕೋಣೆಗಳು ★ ರುಚಿ-ಶುಚಿ ಊಟಉಪಹಾರಗಳು
★ ಕೋರ್ಟು, ಕಚೇರಿ, ರೇಲ್ವೆ ಸ್ಟೇಶನ್, ಬಸ್ ಸ್ಟ್ಯಾಂಡುಗಳಿಗೆ ಸಮೀಪ.

ಪರವೂರಿನಲ್ಲಿದ್ದೂ ಮನೆಯಲ್ಲಿದ್ದಂಥ ನೆಮ್ಮದಿ!

ನಿಮ್ಮ ಹಿತಸಾಧನೆಯೆ ನಮ್ಮ ಧ್ಯೇಯಸಾಧನೆಯ ವೈಶಿಷ್ಟ್ಯ



ನಿಮಗೆ ಹಳೆ-ಹೊಸ ಕಾರುಗಳು, ಟ್ರಕ್ಕುಗಳು ಸ್ಟಾಯರ ಟ್ರ್ಯಾಕ್ಟರುಗಳು ಮುಂತಾದ್ದು ಕೊಳ್ಳಬೇಕಾದಲ್ಲಿ ಕೊಳ್ಳುವ ಮೊದಲು ನಮ್ಮನ್ನು ವಿಚಾರಿಸಿದಲ್ಲಿ ನೀವು ಹೆಚ್ಚಿನ ಲಾಭವನ್ನೂ ಸೌಕರ್ಯವನ್ನೂ ಪಡೆಯುವಿರಿ.

STEYR
TRACTORS

ಧಾರವಾಡ, ಕಾರವಾರ, ಬೆಳಗಾಂವ ಮತ್ತು ವಿಜಾಪುರ ಜಿಲ್ಹೆಗಳಿಗಾಗಿ ಸ್ಟಾಯರ ಟ್ರ್ಯಾಕ್ಟರುಗಳು
ಓಲ್ಡ್ಸ ಮೊಬಾಯಿಲ್ ಕಾರುಗಳು ಮತ್ತು ಬೆಡ್‌ಫೋರ್ಡ ಟ್ರಕ್ಕುಗಳು ಇವುಗಳ ಡೀಲರರು

— ದೀಪಾವಳಿಯು ನಮ್ಮೆಲ್ಲ ಗ್ರಾಹಕರಿಗೂ ಹಿತಚಿಂತಕರಿಗೂ ಸುಖಪ್ರದವಾಗಲಿ —

ಹಾನಗಲ್ ಆಟೊ ಮೊಬಾಯಲ್ಸ, ಹುಬ್ಬಳ್ಳಿ.



ಎಲ್ಲ ವಾಚುಗಳು ೨೦, ಮೈಕ್ರನ್ಸ ರೋಲ್ಡಗೋಲ್ಡ ಸ್ಟೀಲ್‌ಬ್ಯಾಕ, ೧೭ ಜ್ಯುಎಲ್ಲುಗಳುಳ್ಳವು

No. 2650	Rs. 112/-	No. 2649	Rs. 112/-
No. 2647	Rs. 128/-	No. 2648	Rs. 120/-
No. 2657	Rs. 132/-	ಎದ್ದು ಕಾಣುವ ನೀಲವರ್ಣದ ಅಂಕಿಗಳುಳ್ಳವಕ್ಕೆ ರೂ. ೨ ಹೆಚ್ಚಿಗೆ	

ಚಿತ್ರದಲ್ಲಿ ತೋರಿಸಿದವು ನೈಜ ಆಕಾರದವು. ೨ ವರ್ಷ ಗ್ಯಾರಂಟೀ

★★ PHOENIX WATCH Co. ★★


BRANCH- 129, RADHA BAZAR ST, CALCUTTA. ★ H.O. 169, HORNBY ROAD, FORT, BOMBAY.

NUA 509

ಮಲ್ಲಿಕಾರ್ಜುನ ಪ್ರಿಂಟಿಂಗ ವರ್ಕ್ಸ, ಹುಬ್ಬಳ್ಳಿ

ನೀವು ಬೇಕಾದಲ್ಲಿ ಇದ್ದರೂ
ದೇಶ ದೇಶಗಳಲ್ಲಿಯ- ಮೂಲೆಮೂಲೆಗಳಲ್ಲಿಯ ವಾರ್ತೆಯನ್ನೂ
ಪ್ರಮುಖ ಮುಖಂಡರ ಭಾಷಣಗಳನ್ನೂ ಕೇಳಬಲ್ಲಿರಿ. ಇದಕ್ಕೆ ನಿಮ್ಮ ಮನಮೆಚ್ಚಿನ

ಬುಶ್ ರೇಡಿಯೋಗಳನ್ನೇ ಕೊಳ್ಳಿರಿ



ನಮ್ಮಲ್ಲಿ ಜಗಪ್ರಸಿದ್ಧವಾದ AC. ಮತ್ತು AC/DC. ೫, ೬, ೭, ವಾಲ್ವಗಳ ರೇಡಿಯೋಗಳು
ಇದಲ್ಲದೆ ಬ್ಯಾಟ್ರಿ ಸೆಟ್ಟುಗಳು ಯೋಗ್ಯ ಬೆಲೆಗೆ ಸಿಗುತ್ತವೆ. ತೀವ್ರವೇ ವಿಚಾರಿಸಿರಿ.

ಮಾಲಕರು : ಪಿ. ಜಿ. ಮಾಗಡಿ

ಜಾಬ್ ವ ಬುಕ್‌ವರ್ಕ, ಪ್ರಿಂಟಿಂಗ್ ವ ಕ್ಯಾಶಬುಕ್, ಲೆಜರ, ಅಕೌಂಟಬುಕ್ ವ ಸ್ಟೇಶನರಿಸಾಮಾನ, ಮತ್ತು ರಬ್ಬರಸ್ಟಾಂಪುಗಳಿಗೆ ವಿಚಾರಿಸಿರಿ.

ಬನ್ನಿರಿ ! ತಾ. ಪತ್ತೆ "ಕ್ಯಾಪ್‌ಮಾರ್ಟ" ಫೋ. ನಂ. ೯೬ ಬನ್ನಿರಿ !!

ಎಂ. ಜಿ. ಗುಳೇದಗುಡ್ಡ & ಬ್ರದರ್ಸ, ಹುಬ್ಬಳ್ಳಿ

(ಬ್ರ್ಯಾಂಚ: ಧಾರವಾಡ) ಫೋ. ನಂ. ೬೦

ನಮ್ಮಲ್ಲಿ ಕ್ಯಾಪ್ ರೇಡಿಮೇಡ, ಹೋಜರಿ, ಛತ್ರಿ, ಹ್ಯಾಟ್, ಮತ್ತು ಇತರ ಮಾಲು ಯೋಗ್ಯ ದರದಲ್ಲಿ ಶಿಗುತ್ತವೆ.

INDEX TO ADVERTISERS

—Continued to next page

INDEX TO ADVERTISERS (Continued)

COVER PAGES

ART PAPERS

ಮುಖಚಿತ್ರ

ಈ ಸಂಚಿಕೆಯ ಮುಖಪುಟದ ತ್ರಿವರ್ಣಚಿತ್ರವು ಹಂಪಿಯ ಸಮೀಪದಲ್ಲಿರುವ ಮಾನೌಮಿ ದಿಬ್ಬದ ಕಟ್ಟೆಯ ಸುತ್ತಲೂ ಕೆತ್ತಲ್ಪಟ್ಟ ವಿವಿಧ ಶಿಲಾಮೂರ್ತಿಗಳಲ್ಲಿ ಒಂದನ್ನು ಅನುಸರಿಸಿ ಬರೆದುದು. ಕಲಾವಿದ ಶ್ರೀ. ಕೃಷ್ಣ ಕ್ಷತ್ರಿಯವರು ಈ ಪ್ರತೀಕ್ಷಾಪರ ಶಿಲಾಬಾಲಿಕೆಯ ಭಾವ ಭಂಗಿಗಳನ್ನಷ್ಟೇ ತೆಗೆದುಕೊಂಡು ತಮ್ಮದೇ ವರ್ಣ-ವಿನ್ಯಾಸದಿಂದ ಅದಕ್ಕೆ ಬೇರೊಂದು ಕಳೆಯನ್ನು ಕೊಟ್ಟಿದ್ದಾರೆ. ಇನ್ನೂ ಮೂವತ್ತು ವಯಸ್ಸಿನವರಾದ ಶ್ರೀ ಕ್ಷತ್ರಿಯವರು ಹಂಪಿ, ಬದಾಮಿ ಮೊದಲಾದ ನಮ್ಮ ಶಿಲ್ಪವೈಭವದ ತವರುಮನೆಗಳಿಗೆ ಭೆಟ್ಟಿ ಕೊಟ್ಟು ಅಲ್ಲಿನ "ಕಗ್ಗಲ್ಲ ಕಾವ್ಯ"ಗಳಿಗೆ ಬಣ್ಣದ ಮಿರುಗನ್ನು ಕೊಟ್ಟು ತೋರುವ ಕೆಲಸವನ್ನು ಕೈಕೊಂಡಿದ್ದಾರೆ. ಕರ್ನಾಟಕದ ಗುಡಿಗುಂಡಾರಗಳನ್ನು ಸುತ್ತಿದ್ದರೆ ಚಿತ್ರಕಲಾವಿದರಿಗೆ ಧಾರಾಳವಾಗಿ ಸ್ಫೂರ್ತಿ-ಪ್ರೇರಣೆಗಳು ದೊರೆಯಬಹುದೆಂದು ಅವರ ಅಭಿಪ್ರಾಯವಿದೆ.

ಪರಿವಿಡಿ



ಪಟ್ಟದ ಕಲ್ಲು :

ಔತ್ತರೇಯ ಮತ್ತು ದಾಕ್ಷಿಣಾತ್ಯ ಶಿಲ್ಪಗಳ ಪವಿತ್ರ ಸಂಗಮ.

(ಪುಟ ೩೭ ನೋಡಿರಿ)

ಬಾದಾಮಿಯ ಮೇಣಬಸದಿಯ ಅಪೂರ್ವ ಕೆತ್ತನೆ ಕೆಲಸಗಳು



ಕರ್ಮವೀರ

ಸಂಸ್ಥಾಪಕರು : ರಂ. ರಾ. ದಿವಾಕರ ● ದೀಪಾವಳಿ ಸಂಚಿಕೆ ೧೯೫೧ ● ಸಂಪಾದಕರು : ಹ. ರಾ. ಪುರೋಹಿತ

ನಮ್ಮ ನುಡಿ

ನಮ್ಮ ನಾಡಿಗೆ ಸ್ವಾತಂತ್ರ್ಯ ಬಂದ ನಂತರ ಇದು ನಾಲ್ಕನೇ ದೀವಳಿಗೆ. 'ಕರ್ಮವೀರ' ಕೊಡುವ ದೀಪಾವಳಿ ಸಂಚಿಕೆಯೂ ಇದು ನಾಲ್ಕನೆಯದು. ಈ ಕಾಣಿಕೆ ನಮ್ಮ ಓದುಗರ ದೀಪಾವಳಿಯಲ್ಲಿ ಹೃದಯ-ಮನಸ್ಸುಗಳನ್ನು ಬೆಳಗಿಸುವ ದೀಪವಾಗಲೆಂದು ಹಾರೈಸುವೆವು.

★

ಓದುಗರ ಸೇವೆಯಲ್ಲಿ ನಮ್ಮ ದಕ್ಷತೆ ದಿನದಿನವೂ ಹೆಚ್ಚಬೇಕೆಂಬ ಹಂಬಲದಿಂದ ಪ್ರತಿಯೊಂದು ಅನುಭವವನ್ನು ಮುಂದಿನ ಕಾರ್ಯದಲ್ಲಿ ಮಾರ್ಗದರ್ಶಕವಾಗಿ ಮಾಡುತ್ತಿದ್ದೇವೆ. ನಮ್ಮ ಈ ದೀಪಾವಳಿ ಸಂಚಿಕೆಯು ಅಂತರ್ಬಾಹ್ಯ ಸೌಂದರ್ಯಗಳೆರಡರ ದೃಷ್ಟಿಯಿಂದಲೂ ಓದುಗರಿಗೆ ಎಂದಿಗಿಂತಲೂ ಹೃದ್ಯವಾದೀತೆಂದು ನಂಬಿದ್ದೇವೆ. ಈ ಬಾರಿಯ ಸಂಚಿಕೆಯು ನಮ್ಮ ಅನುಭವ ಒಂದು ನಿಟ್ಟಿನ ಪರಿಪಕ್ವತೆಯನ್ನು ಮುಟ್ಟದೆಯೆಂಬ ಭರವಸೆಯನ್ನುಂಟುಮಾಡುವಂತಿದೆ. ದೇವರ ದಯೆ ಮತ್ತು ಓದುಗರ ಬೆಂಬಲವಿದ್ದರೆ ಐದನೆಯ ವಿಶೇಷ ಸಂಚಿಕೆ ಈ ನಾಲ್ಕಕ್ಕಿಂತಲೂ ಉತ್ತಮವಾದೀತೆಂಬ ವಿಶ್ವಾಸವಿದೆ.

★

ಸ್ವಾತಂತ್ರ್ಯ ಬಂದು ನಾಲ್ಕು ವರ್ಷವಾದರೂ ಯುದ್ಧ ಮುಗಿದು ಆರು ವರ್ಷವಾದರೂ ನಮ್ಮ ದೇಶದಲ್ಲಿ ಬಹುಜನರ ಜೀವನ ದುರ್ಭರವಾಗಿಯೇ ಉಳಿದಿದೆಯೆಂಬುದು ನಿಜ. ಹಬ್ಬ ಹುಣ್ಣಿವೆಗಳು ಹಿಂದಿನ ಸುಖ-ಭೋಗಗಳಲ್ಲಿ ಎಷ್ಟೋ ಅಂಶವನ್ನು ಕಳೆದುಕೊಂಡಿವೆ. ಆದರೆ ಅವು ತಮ್ಮ ಅರ್ಥವನ್ನು ಕಳೆದುಕೊಳ್ಳದಿದ್ದಷ್ಟು ಕಾಲ ಚಿಂತೆಗೆ ಕಾರಣವಿಲ್ಲ. ಪ್ರತಿ ಹಬ್ಬಕ್ಕೂ ಒಂದು ಅರ್ಥವಿದೆ. ದೀಪಾವಳಿ ಪ್ರಕಾಶದ ಹಬ್ಬ. ಇಂದು ನಮಗೆ ಹೊರ ಪ್ರಕಾಶಕ್ಕಿಂತ ಒಳ ಬೆಳಕಿನ ಅವಶ್ಯಕತೆ ಎಂದಿಗಿಂತ ಹೆಚ್ಚಾಗಿದೆ. ತಿಳಿವಳಿಕೆಯ ಬೆಳಕು, ಸಹಾನುಭೂತಿ-ಬಾಂಧವ್ಯಗಳ ಬೆಳಕು, ಕರ್ತವ್ಯಬುದ್ಧಿಯ ಬೆಳಕು — ಈ ಬೆಳಕನ್ನು ನಮ್ಮ ಹೃದಯದ ಆಕಾಶಬುಟ್ಟಿಯಲ್ಲಿಟ್ಟು ಎತ್ತರಕ್ಕೇರಿಸೋಣ. ದೀಪಾವಳಿಯ ಸಾರ್ಥಕ್ಯ ಅಲ್ಲಿದೆ.

★

ಕೊನೆಯದಾಗಿ, ಧನ್ಯವಾದ ಸಮರ್ಪಣೆಯ ಕರ್ತವ್ಯ. ಈ ಸಂಚಿಕೆಗಾಗಿ ಲೇಖನ-ಚಿತ್ರಗಳನ್ನು ಒದಗಿಸಿದ ವಿದ್ವಾಂಸರಿಗೆ ನಮ್ಮ ಮೊದಲನೆ ಅಭಿವಂದನೆಗಳು. ಕಸೂತಿ ಕಲೆಯನ್ನು ಕುರಿತ ಲೇಖಕ್ಕಾಗಿ ವಸ್ತುವನ್ನೂ ಚಿತ್ರಗಳನ್ನೂ ತಮ್ಮ "ದಿ ರೊಮಾನ್ಸ್ ಆಫ್ ಇಂಡಿಯನ್ ಎಂಬ್ರಾಯ್ಡರಿ" ಪುಸ್ತಕದಿಂದ ಆರಿಸಿಕೊಳ್ಳಲು ಅಪ್ಪಣೆ ಕೊಟ್ಟ ಶ್ರೀಮತಿ ಕಮಲಾಬಾಯಿ ಡೊಂಗರಕೇರಿ ಹಾಗು ಆ ಪುಸ್ತಕದ ಪ್ರಕಾಶಕರಾದ ಮುಂಬಯಿಯ ಥ್ಯಾಕರ್ ಆ್ಯಂಡ್ ಕೋ., ಅವರಿಗೆ ನಮ್ಮ ಧನ್ಯವಾದ ಸಲ್ಲಬೇಕಾಗಿದೆ. ಈ ಬಾರಿಯೂ ಕೆಲ ಲೇಖಗಳು ಸ್ಥಳಾಭಾವದಿಂದ ಉಳಿದುಹೋದುದಕ್ಕಾಗಿ ಆಯಾ ಲೇಖಕರ ಕ್ಷಮೆ ಕೋರುವೆವು. ಈ ಸಂಚಿಕೆಯ ಸೌಂದರ್ಯವನ್ನು ಹೆಚ್ಚಿಸಲು ಮುಖಚಿತ್ರವೊದಗಿಸಿದ ಕಲಾವಿದ ಶ್ರೀ. ಕೃಷ್ಣ ಕ್ಷತ್ರಿ, ಒಳಗಿನ ಚಿತ್ರಗಳನ್ನೊದಗಿಸಿದ ಶ್ರೀ. ಪಾಂಡುರಂಗರಾವ ದೇಸಾಯಿ, ಜಿ. ಕೆ. ಮೂರ್ತಿ, ಅಣ್ಣಾ ಜತಾರ, ಕೆ. ಜಿ. ಹೆಗಡೆ, ಧಾರವಾಡ ಆಕಾಶವಾಣಿ, ಜ. ನಾ. ಕಮಲಾಪುರ ಹಾಗೂ ಇತರರಿಗೆ ಹಾಗೆಯೆ ಪಡಿಯಚ್ಚುಗಳನ್ನೊದಗಿಸಿದ ಮುಂಬಯಿಯ ವಾಗಳೆ ಕಂಪನಿ, ಮೈಸೂರು ಆಕಾಶವಾಣಿ, ಧಾರವಾಡದ ಶ್ರೀನಿವಾಸ ಕಂಪನಿ, ಹುಬ್ಬಳ್ಳಿಯ ಐಡಿಯಲ್ ಫೋಟೋ ಝಿಂಕೋ ವರ್ಕ್ಸ್ ಇವರಿಗೂ ನಮ್ಮ ಕೃತಜ್ಞತೆಗಳು. ಅಂತೆಯೇ ಜಾಹೀರಾತುಗಳ ನೆರವಿತ್ತ ಮಹನೀಯರೂ ವಾಚಕರೆಲ್ಲರೂ ಅಭಿನಂದನಾರ್ಹರು. ನಮ್ಮ ಮುದ್ರಣಾಲಯದ ಮತ್ತು ಇತರ ವಿಭಾಗಗಳ ಕೆಲಸಗಾರರು ಹಾಗು ಸಹಕಾರಿಗಳು ಈ ಸಂಚಿಕೆಯನ್ನು ಸರ್ವಾಂಗಸುಂದರ ಮಾಡಲು ಹಗಲಿರುಳು ದುಡಿದಿದ್ದಾರೆ. ಅವರನ್ನು ಅಭಿನಂದಿಸುವುದು ನಮ್ಮ ಕರ್ತವ್ಯ.

ಈ ದೀಪಾವಳಿ ಸರ್ವರಿಗೂ ಆನಂದದಾಯಕವಾಗಲೆಂದೂ ಮುಂದಿನ ದೀಪಾವಳಿ ದೇಶಕ್ಕೆಲ್ಲ ಇನ್ನೂ ಹೆಚ್ಚು ಸೌಭಾಗ್ಯ ಸಮೃದ್ಧಿ ಸೌಖ್ಯಗಳನ್ನು ತರಲೆಂದೂ ಹಾರೈಸುತ್ತೇವೆ.

ಮುಡಿಸಿಹರು ದೀಪ

ಮುಡಿಸಿಹರು ನಮ್ಮವರು,
ಮುಡಿಸಿಹರು ದೀಪ.
ಬಿಡಿಸಿಹರು ದೀಪದಲಿ
ಝುಗಝುಗಿಪ ರೂಪ.

೧

ಹಬ್ಬಗಳಿಗಿದು ಹಬ್ಬ
ಸೊಡರುಗಳ ಹಬ್ಬ
ನಮ್ಮವರು ವಿರಚಿಸಿದ
ಸಂಸ್ಕೃತಿಯ ದಿಬ್ಬ!
ಯುಗ-ಸಂಪ್ರವರ್ತಕರು
ಸದ್ಧರ್ಮದೀಪಕರು
ಸತ್ಕಲಾರೂಪಕರು
ಚೆದರಿಸುತ ಮಬ್ಬ
ಬರೆಯುತ್ತ ಬಂದಿಹರು
ದೀಪಗಳ ಕಬ್ಬ!

೨

ಕಾಲಾವಕಾಶಗಳ
ಹೆಬ್ಬಯಲಿನಲ್ಲಿ
ರಚಿಸಿಹರು ದೀಪಗಳ
ಗೋಪುರವನಿಲ್ಲಿ.
ಮೆರೆಸಿಹರು ಮಾತೆಯನು
ಜೀವರಸದಾತೆಯನು
ಲೋಕವಿಖ್ಯಾತೆಯನು
ಗರ್ಭಗುಡಿಯಲ್ಲಿ
ಅಂಗಣದಿ ಮುಂಗಲದ
ರಂಗೋಲಿ ಚೆಲ್ಲಿ.

೩

ವಾಲ್ಮೀಕಿ ಮೊದಲಾಗೆ
ಕವಿರವಿಯ ವರೆಗೆ
ಬುದ್ಧದೇವನ ಬಳಸಿ
ಬಾಪುವಿನ ವರೆಗೆ
ತಂದಿಹರು ದೀಪಗಳ
ಸೌಂದರದ ರೂಪಗಳ
ನಿಲ್ಲಿಸುತ ಸ್ತೂಪಗಳ
ನಿಜದೊಂದೆ ಗುರಿಗೆ
ಎತ್ತಿಹರು ಆರತಿಯ
ತಾಯ ಸಿರಿಮುಡಿಗೆ.

೪

ತಂದರಲ ಗಾಂಧೀಜಿ
ಹಿರಿದೊಂದು ಪಂಜ
ಚೆದರಿಸಿತು ಆ ಪಂಜು
ಕವಿದಿರ್ದ ಮಂಜ.
ಅದರ ಸೋಂಕಿಗೆ ಹೊತ್ತಿ
ಆತ್ಮ ಕೋಟ್ಯನುಕೋಟಿ
ಹಂತಹಂತದೊಳೊಪ್ಪಿ
ಬೆಳಗೆ ಬೆಳಬೆಳಗೆ
ದೀಪಗಳ ಗೋಪುರವು
ಎದ್ದಿತ್ತು ಬಾನ್ಗೆ.

೫

ದಿವ್ಯಾತ್ಮನೆಳೆದಂತೆ
ದಿಟದೊಂದೆ ಸೂತ್ರ
ಮೂರು ಬಣ್ಣದ ನಡುವೆ
ಸೆಳೆಯುತ್ತ ನೇತ್ರ
ತಾಯ ನಗೆಯಂದದಲಿ
ಸ್ವಾತಂತ್ರ್ಯ – ಛಂದದಲಿ
ಸುಖ-ಶಾಂತಿ-ಬಂಧದಲಿ
ಆಡಿತ್ತು ಚಕ್ರ
ಬೆಳಕಿನಲಿ ಬೆಳಕಾಗಿ
ಕೂಡಿತ್ತು ಚಕ್ರ.

—ಡಿ. ಎಸ್. ಕರ್ಕಿ

ರೀತಿ – ನೀತಿ

ಏಕೊ ಎನ್ನ ಸುತ್ತುಮುತ್ತು
ಸುಳಿಯುತಿಹುದು ಆ ಹುಳ;
ಅದರ ಮನಸಿನಾಶೆಯೇನೊ!
ಸೂಸುತಿಹುದು ಪರಿಮಳ.

ಅಲ್ಲಿ ಕುಳಿತೆ, ಇಲ್ಲಿ ನಿಂತೆ
ಎಲ್ಲಿ ಹೋದರಲ್ಲಿಯೆ
'ಗುಂಯೆ'ಂದು ಗಾನಿಸುತ್ತ
ಇಹುದು ಬೆನ್ನ ಬಿಡದೆಯೆ.

ಎಲ್ಲಿ ಕರೆದರಿಲ್ಲ ಸರಳ–
ವಾಗಿ ಬರುವ ರೀತಿಯು
ಅಲ್ಲಿ ಕರೆಯು ಇಲ್ಲದೇನೇ
ಬರುವುದಾವ ನೀತಿಯು?

—ಶಿಗ್ಗಾಂವಿ ವೀರೇಶ್ವರ

ಸಂಪಾದಕರಿಂದ

ಸ್ವಾತಂತ್ರ್ಯದ ನಾಲ್ಕು ವರ್ಷಗಳು

(ಸಿಂಹಾವಲೋಕನ)

ಭಾರತವು ಪರದಾಸ್ಯ ಶೃಂಖಲೆಗಳನ್ನು ಹರಿದೊಗೆದು ಸ್ವತಂತ್ರವಾಗಿ ನಾಲ್ಕು ವರುಷಗಳಾಗಿ ಹೋದವು. ಈ ಅವಧಿಯಲ್ಲಿ ಸ್ವತಂತ್ರ ಭಾರತ ಸರಕಾರವು ಜಗತ್ತಿನಲ್ಲಿ ಭಾರತದ ಮೇಲ್ಮೆಯನ್ನು ಹೆಚ್ಚಿಸಿ, ಇಲ್ಲಿನ ಜನತೆಯ ಜೀವನ ಮಟ್ಟವನ್ನು ಸುಧಾರಿಸಿ ಸರ್ವಸಮೃದ್ಧ ರಾಷ್ಟ್ರವನ್ನಾಗಿ ಮಾಡುವುದಕ್ಕಾಗಿ ಪ್ರಯತ್ನಿಸುತಿರುವದು. ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಸರಕಾರ ಎದುರಿಸಬೇಕಾಗಿ ಬಂದ ಕಠಿಣ ಸಮಸ್ಯೆಗಳನ್ನು ನೆನೆದರೆ ರಾಷ್ಟ್ರವೀಗ ಸಾಧಿಸಿದ ಪ್ರಗತಿಯು ಪ್ರಶಂಸನೀಯವೆಂದು ಹೇಳಬೇಕಾಗುವದು. ದೇಶವು ಆಯಾ ರಂಗಗಳಲ್ಲಿ ಎಷ್ಟರಮಟ್ಟಿಗೆ ಮುಂದುವರಿದಿದೆಂಬುದನ್ನು ಸಿಂಹಾವಲೋಕನ ದೃಷ್ಟಿಯಿಂದ ವಿಮರ್ಶಿಸಲಾಗುವದು.

ಆರ್ಥಿಕ ಪರಿಸ್ಥಿತಿ

ರಾಷ್ಟ್ರದ ವಿಭಜನೆಯಾಗಿ ಫಲವತ್ತಾದ ಸಿಂಧ ಪಂಜಾಬ ಪ್ರಾಂತಗಳು ಪಾಕಿಸ್ತಾನಕ್ಕೆ ಹೋದದರಿಂದ ರಾಷ್ಟ್ರವು ಆಹಾರದ ಕೊರತೆಯನ್ನನುಭವಿಸಬೇಕಾಗಿಬಂದಿದೆ. ಸಾಲದ್ದಕ್ಕೆ ಕಳೆದ ವರ್ಷ ಕೊರಿಯಾ ಯುದ್ಧದ ಮೂಲಕ ಅಂತಾರಾಷ್ಟ್ರೀಯ ಪರಿಸ್ಥಿತಿ ಹದಗೆಟ್ಟಿತು; ದೇಶವು ಅವರ್ಷಣ, ನೆರೆ, ಭೂಕಂಪ ಮೊದಲಾದ ನೈಸರ್ಗಿಕ ವಿಪತ್ತುಗಳನ್ನೂ ಎದುರಿಸಬೇಕಾಯಿತು. ಪರಿಣಾಮವಾಗಿ ರಾಷ್ಟ್ರದಲ್ಲಿ ಆಹಾರದ ಕೊರತೆ ವಿಪರೀತವೆನಿಸಿತು. ಬರಗಾಲದ ಬವಣೆಯನ್ನನುಭವಿಸಬೇಕಾಯಿತು. ಜನ ಉಪವಾಸ ಸಾಯುವ ಪ್ರಸಂಗ ಬಂದಿತು. ರಾಷ್ಟ್ರೀಯ ಸರಕಾರದ ಶಕ್ತಿ ಸಾಮರ್ಥ್ಯಗಳನ್ನು, ಕರ್ತೃತ್ವಶಕ್ತಿಯನ್ನು ಪರೀಕ್ಷಿಸಲು ಸೃಷ್ಟಿದೇವತೆಯೆ ಇವೆಲ್ಲ ವಿಪತ್ತುಗಳನ್ನು ತಂದೊಡ್ಡಿರುವಳೊ ಎನಿಸಿತು. ಸರಕಾರಕ್ಕೆ ಇದೊಂದು ಬಗೆಯ ಆಹ್ವಾನವೇ ಆಗಿದ್ದಿತು. ರಾಷ್ಟ್ರವು ಒಳ್ಳೆ ಧೈರ್ಯದಿಂದ, ಇದೊಂದು ಯುದ್ಧವೆಂದು ಭಾವಿಸಿ ಯಶಸ್ವಿಯಾಗಿ ಹೋರಾಡಿತು. ನಿಸರ್ಗದ ಪ್ರಕೋಪದಿಂದ ಸುಮಾರು ೬೦ ಲಕ್ಷ ಟನ್ನು ಆಹಾರಪದಾರ್ಥಗಳಿಗೆ ಎರವಾಗಬೇಕಾಯಿತು. ಕಳೆದ ವರ್ಷದ ಜನೆವರಿಯಲ್ಲಿ ಇದ್ದ ಸಂಗ್ರಹಕ್ಕಿಂತ ೧೯೫೧ ಜನೆವರಿಯಲ್ಲಿ ಆಹಾರಪದಾರ್ಥಗಳ ಸಂಗ್ರಹವು ಒಂಭತ್ತು ಲಕ್ಷ ಟನ್ನಿನಷ್ಟು ಕಡಿಮೆಯಾಗಿದ್ದಿತು. ಮುಂಗಾರಿ ಬೆಳೆಯೂ ಹುಲುಸಾಗದ್ದರಿಂದ ಪರಿಸ್ಥಿತಿ ಮತ್ತಷ್ಟು ಕೆಟ್ಟಿತು. ಆಹಾರ ಪದಾರ್ಥಗಳ ಹಂಚುವಿಕೆಯಲ್ಲಿ ವ್ಯತ್ಯಯ ಬರಹತ್ತಿತು.

ಈ ಪರಿಸ್ಥಿತಿಯಲ್ಲಿ ಹೊರಗಿನಿಂದ ಆಹಾರ ಪದಾರ್ಥಗಳನ್ನು ಶಕ್ಯವಿದ್ದಷ್ಟು ಆಯಾತ ಮಾಡಿದ ಹೊರತು ಗತಿಯಿರಲಿಲ್ಲ. ಸುದೈವದಿಂದ ಬ್ರಹ್ಮದೇಶ, ಆಸ್ಟ್ರೇಲಿಯಾ, ಕಾನಡಾ, ಅಮೇರಿಕೆ, ಬ್ರಿಟನ್, ಪಾಕಿಸ್ತಾನ, ರಸಿಯಾ ಮತ್ತು ಚೀನ ಎಲ್ಲ ರಾಷ್ಟ್ರಗಳು ಶಕ್ಯವಿದ್ದಮಟ್ಟಿಗೆ ಆಹಾರ ಪದಾರ್ಥಗಳನ್ನು ಕೊಟ್ಟು ಸಹಾಯ ಸಲ್ಲಿಸಿದವು. ಈ ದೇಶಗಳಿಂದ ಧಾನ್ಯಗಳನ್ನು ತರಿಸಿ ಕೊರತೆಯಿದ್ದ ಪ್ರದೇಶಗಳಿಗೆಲ್ಲ ಹಂಚುವ ಮಹತ್ವದ ಕಾರ್ಯವನ್ನು ಸರಕಾರವು ಯಶಸ್ವಿಯಾಗಿ ಮಾಡಿತು. ಭಾರತದಲ್ಲಿಯ ಸಮೃದ್ಧ ರಾಜ್ಯಗಳೂ ಉಳಿಕೆಯನ್ನು ಕೊರತೆಯ ಪ್ರಾಂತಗಳಿಗೆ ಕಳಿಸಲು ಮುಂದಾದವು. ಎತ್ತುವಳಿಯೂ ಭರದಿಂದ ನಡೆಯಿತು. ಒಸ್ಪತ್ತೂಟವನ್ನು ಬಿಟ್ಟು ಆಹಾರ ಪದಾರ್ಥಗಳನ್ನುಳಿಸಿರೆಂಬ ಪ್ರಚಾರವೂ ಸಾಗಿತು. ಇದೆಲ್ಲದರ ಪರಿಣಾಮವಾಗಿ ಆಹಾರ ರಂಗದಲ್ಲಿ ಭೀಕರ ಪರಿಸ್ಥಿತಿಯು ಇಲ್ಲದಂತಾಗಿದೆ. ಆಹಾರ ಪದಾರ್ಥಗಳನ್ನು ಪೂರಯಿಸುವದನ್ನೇ ಸರಕಾರವು ಲಕ್ಷಿಸಬೇಕಾಗಿ ಬಂದದ್ದರಿಂದ ಜನತೆಯ ಜೀವನ ಮಟ್ಟವನ್ನು ಸುಧಾರಿಸುವತ್ತ ಹೆಚ್ಚು ಗಮನ ಕೊಡುವದಾಗಲಿಲ್ಲೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಅಂತಾರಾಷ್ಟ್ರೀಯ ಪರಿಸ್ಥಿತಿಯ ಮೂಲಕ ಪದಾರ್ಥಗಳ ಧಾರಣೆಯು ಮಿತಿಮೀರಿ ಏರಹತ್ತಿತು. ಏಪ್ರಿಲ ೧೯೫೧ ರಷ್ಟೊತ್ತಿಗೆ ಧಾರಣೆಸೂಚಿ ಸಂಖ್ಯೆ ೪೬೨ ಕ್ಕೇರಿತು. ಅಂದಿನಿಂದ ಹೆಚ್ಚು ಕಡಮೆ ಪ್ರಮಾಣದಲ್ಲಿ ಇದೇ ಧಾರಣೆ ಉಳಿದಿದೆ. ಉಳಿದ ದೇಶಗಳಲ್ಲಿಯೂ ಧಾರಣೆಗಳು ಏರಿವೆಂಬುದೊಂದು ಗಮನಾರ್ಹ ಸಂಗತಿ. ಧಾರಣೆಗಳನ್ನು ಇಳಿಸುವ ಬಗ್ಗೆ ಸರಕಾರದವರು ಬೇರೆ ಬೇರೆ ಉಪಾಯಗಳನ್ನು ಯೋಜಿಸುತಿರುವರು. ಮಹತ್ವದ ಆಯಾತ ಪದಾರ್ಥಗಳ ಮೇಲಿನ ನಿಯಂತ್ರಣವನ್ನು ಇತ್ತೀಚೆ ತೆಗೆದುಹಾಕಿದ್ದರಿಂದ ಧಾರಣೆಗಳು ಇಳಿಯುವದಕ್ಕೆ ಸಹಾಯಕವಾಗಬಹುದಾಗಿದೆ. ಈ ಅವಧಿಯಲ್ಲಿ ಔದ್ಯೋಗಿಕ ಉತ್ಪಾದನೆಯೂ ಅಭಿವೃದ್ಧಿ ಹೊಂದುತ್ತ ನಡೆದದ್ದು ಕಂಡುಬಂದಿದೆ. ಆದರೆ ಜಗತ್ತಿನಲ್ಲಿಯೆ ಕಚ್ಚಾ ಸರಕುಗಳ ಕೊರತೆ ಹೆಚ್ಚಿದ್ದರಿಂದ, ಇದ್ದ ಸರಕುಗಳನ್ನು ಪುನಃಶಸ್ತ್ರೀಕರಣಕ್ಕಾಗಿ ಉಪಯೋಗಿಸಬೇಕೆಂಬ ಪ್ರವೃತ್ತಿ ಆಯಾ ರಾಷ್ಟ್ರಗಳಲ್ಲಿ ಉಂಟಾದ್ದರಿಂದ ಪರಿಸ್ಥಿತಿ ಸ್ವಲ್ಪ ನಿರಾಶಾದಾಯಕವಾಗಿದೆ. ಪರದೇಶಗಳೊಡನೆ ನಡೆದ ವ್ಯಾಪಾರ, ವಿಶೇಷತಃ ಪಾಕಿಸ್ತಾನದೊಡನೆ ಮಾಡಿಕೊಂಡ ಒಡಂಬಡಿಕೆಯಿಂದ ಸಾಗಿಸಿದ ವ್ಯಾಪಾರದ ಪರಿಣಾಮವಾಗಿ ವ್ಯವಹಾರಸ್ಥರಲ್ಲಿ ಒಂದು ಬಗೆಯ ವಿಶ್ವಾಸವುಂಟಾಗಿದೆ.

ಈ ಸಂಬಂಧದಲ್ಲಿ ವಿಚಾರ ಮಾಡುವಾಗ ಆಗ್ನೆಯ ಏಶಿಯದ ಅಭಿವೃದ್ಧಿಗಾಗಿ ಗೊತ್ತುಪಡಿಸಿದ ಕೋಲಂಬೊ ಯೋಜನೆಯನ್ನು ಅಲಕ್ಷಿಸಿದರೆ ನಡೆಯದು. ಇದರನ್ವಯ ಭಾರತ, ಪಾಕಿಸ್ತಾನ, ಸಿಲೋನ, ಮಲಯಾ ಮತ್ತು ಬ್ರಿಟಿಶ ಬೋರ್ನಿಯೋಗಳ ಅಭಿವೃದ್ಧಿಗಾಗಿ ಒಟ್ಟು ೧೮೬೮೦ ಲಕ್ಷ ಪೌಂಡ್ ವೆಚ್ಚ ಮಾಡಲಾಗುವುದು. ಇದರಿಂದ ೧೯೫೬-೫೭ ರಲ್ಲಿ ೧೩೦ ಲಕ್ಷ ಎಕರೆ ಭೂಮಿಯು ಸಾಗಾಗಿ ನೀರಾವರಿ ಕ್ಷೇತ್ರವಾಗುವದಲ್ಲದೆ ೬೦ ಲಕ್ಷ ಟನ್ನು ಹೆಚ್ಚು ಧಾನ್ಯಗಳ ಉತ್ಪಾದನೆಯಾಗುವದು, ೧೧ ಲಕ್ಷ ಕಿಲೋವಾಟ ಹೆಚ್ಚಿನ ವಿದ್ಯುಚ್ಛಕ್ತಿಯ ಉತ್ಪಾದನೆಯಾಗುವದು. ಈ ವೆಚ್ಚದಲ್ಲಿ ಸುಮಾರು ಮೂರು ನಾಲ್ಕಾಂಶದಷ್ಟು ಭಾರತದ ಯೋಜನೆಗಳಲ್ಲಿಯೆ ವ್ಯಯವಾಗಬೇಕೆಂದು ಗೊತ್ತಾಗಿದೆ. ಯೋಜನಾ ಆಯೋಗದವರು ಈಗಾಗಲೆ ಪಂಚವಾರ್ಷಿಕ ಯೋಜನೆಯ ಕರಡನ್ನು ಸಿದ್ಧಪಡಿಸಿದ್ದು ಅದರ ಮೇಲೆ ತಜ್ಞರ ಅಭಿಪ್ರಾಯ ತಿಳಿದ ಬಳಿಕ ಅದಕ್ಕೊಂದು ಬಗೆಯ ಮೂರ್ತಸ್ವರೂಪ ಕೊಟ್ಟು ಕಾರ್ಯರೂಪದಲ್ಲಿ ತರುವದರಿಂದ ಉದ್ದೇಶ ಸಾಧಿಸಬಹುದು.

ಆಹಾರ ಮತ್ತು ಒಕ್ಕಲತನ

ಈ ಮೊದಲು ಉಲ್ಲೇಖಿಸಿದಂತೆ ಭಾರತದಲ್ಲಿ ಕಳೆದ ವರ್ಷ ಆಹಾರ ಸಮಸ್ಯೆ ಅತ್ಯಂತ ಭೀಕರವಾಗಿದ್ದಿತು. ಭಾರತದ ವಿಭಜನೆಯಿಂದ ೧೦೦ ಕ್ಕೆ ೮೪ ರಷ್ಟು ಹಿಂದಿನ ಸಾಗಾದ ಕ್ಷೇತ್ರವು ಭಾರತಕ್ಕೆ ಬಂದರೂ ನೀರಾವರಿ ಕ್ಷೇತ್ರವು ಮಾತ್ರ ೧೦೦ ಕ್ಕೆ ೬೯ ರಷ್ಟು ಬಂದಿತು. ಕೊರತೆ ಪ್ರದೇಶಗಳಿಗೆ ೮ ಲಕ್ಷ ಟನ್ನು ಆಹಾರ ಧಾನ್ಯಗಳನ್ನು ಒದಗಿಸುತಿದ್ದ ಸಿಂಧ, ಪಂಜಾಬ ಸಿಲ್ಹೆಟದಂತಹ ಫಲವತ್ತಾದ ಭೂಮಿಯು ಪಾಕಿಸ್ತಾನಕ್ಕೆ ಹೋಯಿತು. ಆಹಾರದ ಕೊರತೆಯಿಂತು ಹೆಚ್ಚಿದ್ದರಿಂದ ಸರಕಾರದವರು ೧೫ ಲಕ್ಷ ಟನ್ನುಗಳಿಗಿಂತ ಹೆಚ್ಚು ಧಾನ್ಯವನ್ನು ಹೊರಗಿನಿಂದ ತರಿಸಬಾರದೆಂದು ನಿರ್ಧರಿಸಿದ್ದರೂ ೧೯೫೦ ರಲ್ಲಿ ೨೦ ಲಕ್ಷ ಟನ್ನ ಧಾನ್ಯವನ್ನು ತರಿಸಬೇಕಾಗಿ ಬಂದಿತು. ೫೧.೬ ಲಕ್ಷ ಟನ್ನಿನಷ್ಟು ಧಾನ್ಯ ಎತ್ತುವಳಿಯಾಗುವದೆಂದೆಣಿಸಿದ್ದರೆ ಕೇವಲ ೪೩.೬ ಲಕ್ಷ ಟನ್ನ ಮಾತ್ರ ಸಂಗ್ರಹವಾಯಿತು.

ರಾಷ್ಟ್ರವನ್ನು ಆಹಾರಸ್ವಾವಲಂಬಿಯನ್ನಾಗಿ ಮಾಡುವದಕ್ಕಾಗಿ ಸರಕಾರದವರು ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯಿರಿ ಚಳವಳವನ್ನು ಭರದಿಂದ ಸಾಗಿಸಿದ್ದು ಸರ್ವಶ್ರುತ. ಒಕ್ಕಲಿಗರಿಗೆ ಈ ಬಗೆ ವಿವಿಧ ಅನುಕೂಲತೆಗಳನ್ನು ಒದಗಿಸಿಕೊಡಲಾಗುತ್ತಿದೆ. ಈ ಚಳವಳಿಯು ಅಂಗವಾಗಿ ಜೂನ ೧೯೫೧ರೊಳಗಾಗಿ ೯೮ ಸಾವಿರ ಬಾವಿಗಳನ್ನು ಕಡಿಸಲಾಯಿತು, ಇಲ್ಲವೆ ದುರಸ್ತಿಮಾಡಿಸಲಾಯಿತು; ೨೯ ಸಾವಿರ ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಮುಗಿಸಿದ್ದಾಯಿತು; ೨೨ ಸಾವಿರ ಯಾತದ ನೀರಾವರಿಯನ್ನು ಯೋಜಿಸಲಾಯಿತು. ಸುಮಾರು ಸಾವಿರ ಕೆರೆಗಳನ್ನು ಅಗಿಸಲಾಯಿತು, ದುರಸ್ತಿ ಮಾಡಿಸಲಾಯಿತು. ಸುಮಾರು ಏಳು ಲಕ್ಷ ಎಕರೆಯಷ್ಟು ಹೊಸ ಭೂಮಿಯನ್ನು ಟ್ರಾಕ್ಟರುಗಳಿಂದ ಹಸನ ಮಾಡಿಸಲಾಯಿತು. ಸುಮಾರು ೧॥ ಲಕ್ಷ ಎಕರೆ ಭೂಮಿಯನ್ನು ಯಾಂತ್ರಿಕ ಸಾಗುವಳಿಗೆ ಹದಮಾಡಲಾಯಿತು. ಇನ್ನುಳಿದ ಭೂ ಅಭಿವೃದ್ಧಿ ಕ್ಷೇತ್ರವು ಆರು ಲಕ್ಷ ಮಿಕ್ಕಿತು. ಗೊಬ್ಬರ ಪೂರೈಕೆ, ಸುಧಾರಿಸಿದ ಬೀಜಗಳ ಹಂಚುವಿಕೆ, ತಗಾವಿ ಮುಂತಾದ್ದು ಕೊಡುವದು, ಎತ್ತುವಳಿಗಾಗಿ ಬೋನಸ್ಸು ಕೊಡುವದು ಮೊದಲಾದ ಯೋಜನೆಗಳಿಂದಲೂ ಆಹಾರ ಪದಾರ್ಥಗಳ ಬೆಳೆಯನ್ನು ಹೆಚ್ಚಿಸಲು ಪ್ರಯತ್ನಿಸಲಾಯಿತು. ೧೯೫೧—೫೨ ರಲ್ಲಿ ೫೦ ಲಕ್ಷ ಎಕರೆ ಭೂಮಿಯಲ್ಲಿ ಹೆಚ್ಚು ಆಹಾರ ಧಾನ್ಯ ಬೆಳೆವ ಯೋಜನೆ ಕೈಕೊಂಡು ೧೪ ಲಕ್ಷ ಟನ್ನು ಆಹಾರ ಧಾನ್ಯ ಬೆಳೆವ ಗುರಿಯನ್ನು ಮುಟ್ಟಬೇಕೆಂದು ಯೋಜಿಸಿದೆ. ಭಾರತವಿಟ್ಟುಕೊಂಡ ದಶವಾರ್ಷಿಕ ಅಭಿವೃದ್ಧಿ ಯೋಜನೆಯಿಂದ ಪ್ರತಿವರ್ಷ ೫೦ ಲಕ್ಷ ಎಕರೆ ಭೂಮಿಯನ್ನು ಒಳ್ಳೆ ರಭಸದ ಸಾಗುವಳಿ ಕ್ಷೇತ್ರದಲ್ಲಿ ತಂದು, ಹತ್ತು ಲಕ್ಷ ಎಕರೆ ಪಡಭೂಮಿಯನ್ನು ಹೊಸದಾಗಿ ಸಾಗುಮಾಡಿ, ೫ ಸಾವಿರ ಬೀಜದ ಹೋರಿಗಳನ್ನು ೧೫೦ ಲಕ್ಷ ದನಗಳನ್ನು ಗುಂಡಿಶೆಲೆ ಬೇನೆಯಿಂದ ಮುಕ್ತಮಾಡುವದು, ೩ ಕೋಟಿ ಗಿಡಗಳನ್ನು ಹಚ್ಚಿ ೧೦ ಸಾವಿರ ಹಳ್ಳಿಗಳಲ್ಲಿ ಭೂಮಿ ಸೇನೆಯನ್ನು ರಚಿಸಿ ಕಾರ್ಯತತ್ಪರರನ್ನಾಗಿ ಮಾಡಲಾಗುವದು. ಸರಕಾರದವರು ಕೈಕೊಂಡ ಈ ಯೋಜನೆಗಳೆಲ್ಲ ಯಶಸ್ವಿಯಾಗಬೇಕಾದರೆ ಸಂಬಂಧಿಸಿದ ಜನರು ಎಲ್ಲ ಬಗೆಯಿಂದ ಸಹಕರಿಸಬೇಕಲ್ಲದೆ ಅಧಿಕಾರಿಗಳೂ ಒಳ್ಳೆ ಆಸ್ಥೆಯಿಂದ ಅವರಿಗೆ ಸಹಾಯ ಮಾಡುವದು ಅವಶ್ಯವಾಗಿದೆ.

ಮುಂಬಯಿ ರಾಜ್ಯದಲ್ಲಿ ಹೆಚ್ಚು ಆಹಾರ ಬೆಳೆಯುವ ಚಳವಳಿಯಿಂದ ಧಾನ್ಯದ ಉತ್ಪಾದನೆಯ ಹೆಚ್ಚಳವು ೧೯೪೮-೪೯ರಲ್ಲಿ ಒಂದು ಲಕ್ಷ ಟನ್ನಾಗಿದ್ದರೆ ೧೯೫೦-೫೧ ರಲ್ಲಿ ೨ ಲಕ್ಷ ಟನ್ನಿನಷ್ಟಾಗಿದೆ. ಉತ್ತಮ ಬೀಜ ಗೊಬ್ಬರಗಳ ಪೂರೈಕೆಯಿಂದ ೧೯೦೦೦ ಟನ್, ರಾಸಾಯನಿಕ ಗೊಬ್ಬರದಿಂದ ೧೬೫೦೦ ಟನ್, ೧೪ ಯಾತದ ನೀರಾವರಿಗಳಿಂದ ೩೧೦೦೦ ಎಕರೆ ಭೂಮಿ ನೀರುಂಡ ಮೂಲಕ ೬೫೦೦ ಟನ್ ಧಾನ್ಯ ಹೆಚ್ಚಿಗೆ ಬಂತು. ಟ್ರಾಕ್ಟರ ಮೂಲಕ ಭೂಮಿ ಹಸನು ಮಾಡುವದೂ ನಡೆಯಿತು.

ಮೈಸೂರಿನಲ್ಲಿ ೨೫ ಲಕ್ಷ ಎಕರೆ ಪಡಭೂಮಿಗಳನ್ನು ಸಾಗುವಳಿಗಾಗಿ ರೈತರಿಗೆ ಕೊಡಲಾಗಿದೆ. ಸಣ್ಣ ಸಣ್ಣ ನೀರಾವರಿ ಯೋಜನೆಗಳು ಕೈಕೊಳ್ಳಲ್ಪಟ್ಟಿವೆ. ಮಾದರಿ ಫಾರ್ಮುಗಳನ್ನು ಯೋಜಿಸಿ ಒಕ್ಕಲಿಗರ ಮಕ್ಕಳಿಗೆ ಶಿಕ್ಷಣ ಕೊಡಲಾಗುತ್ತಿದೆ. ಟ್ರಾಕ್ಟರುಗಳ ಮೂಲಕ ಭೂಮಿಗಳನ್ನು ಹಸನ ಮಾಡುವದನ್ನು ನಡೆಸಿದೆ. ೨೦ ಕೋಟಿ ರೂಪಾಯಿಗಳ ಲಕ್ಕವಳ್ಳಿ ಯೋಜನೆ, ೨ ಕೋಟಿ ರೂಪಾಯಿಗಳ ತುಂಗಭದ್ರ ಆಣೆಕಟ್ಟು ಯೋಜನೆ ಮತ್ತು ಅಷ್ಟೇ ವೆಚ್ಚದ ನೂಗೂ ಯೋಜನೆಯನ್ನು ಕೈಕೊಂಡಿದ್ದು ಅವು ಭರದಿಂದ ಪ್ರಗತಿ ಹೊಂದುತ್ತಿವೆ. ವಿವಿಧ ನೀರಾವರಿ ಯೋಜನೆಗಳ ಪರಿಣಾಮವಾಗಿ ೩೦೦೦ ಎಕರೆ ಕ್ಷೇತ್ರಕ್ಕೆ ಹೊಸದಾಗಿ ನೀರು ಪೂರೈಸಲಾಗುವದು. ಹಳೆಯ ೨೫ ಸಾವಿರ ಎಕರೆ ಭೂಮಿಗೂ ನೀರು ಪೂರೈಸಲಾಗುವದು. ೯೦ ಲಕ್ಷ ರೂಪಾಯಿ ವೆಚ್ಚ ಮಾಡಿ ಚಿತ್ರದುರ್ಗ ಜಿಲ್ಹೆಯ ವೇದವತಿ ದಂಡೆಯಲ್ಲಿ ೧೨೪೫ ಎಕರೆ ನೀರಾವರಿ ಭಾವಿಗಳನ್ನು ಅಗೆಯುವ ಯೋಜನೆ ಕೈಕೊಂಡಿದ್ದು ಎರಡು ವರ್ಷಗಳಲ್ಲಿ ಇದು ಮುಗಿಯಬಹುದು. ಇದರಿಂದ ೧೦ ಸಾವಿರ ಎಕರೆ ಪ್ರದೇಶವು ನೀರಾವರಿಯಲ್ಲಿ ಬರುವದು.

ಮದರಾಸ ರಾಜ್ಯದಲ್ಲಿಯಾದರೊ ಒಂದೇಸವನೆ ನಾಲ್ಕುವರ್ಷ ನಿಸರ್ಗ ಕೋಪದ ಪರಿಣಾಮವಾಗಿ ಒಕ್ಕಲತನದ ಪರಿಸ್ಥಿತಿ ಬಹಳ ಮಟ್ಟಿಗೆ ಹದಗೆಟ್ಟಿತು. ಆದರೂ ೧೯೫೦-೫೧ ರಲ್ಲಿ ೧॥ ಲಕ್ಷ ಟನ್ನ ಹೆಚ್ಚು ಧಾನ್ಯ ಬೆಳೆಸಲಾಯಿತು. ಪಂಚವಾರ್ಷಿಕ ನೀರಾವರಿ ಯೋಜನೆಯನ್ನಿಟ್ಟುಕೊಂಡಿದ್ದು ೧೦.೫೪ ಕೋಟಿ ರೂಪಾಯಿಗಳನ್ನು ಈಗಾಗಲೆ ವೆಚ್ಚ ಮಾಡಲಾಗಿದೆ. ಇದರ ಮೊದಲನೆಯ ೩೦೦ ಸಣ್ಣ ನೀರಾವರಿ ಯೋಜನೆಯ ಪರಿಣಾಮವಾಗಿ ೩ ಲಕ್ಷ ಎಕರೆ ಭೂಮಿಯು ನೀರಾವರಿ ಕ್ಷೇತ್ರವಾಗಿ ೧॥ ಲಕ್ಷ ಟನ್ನು ಆಹಾರಧಾನ್ಯ ಬೆಳೆಯುವುದು. ೨೩.೩೩ ಕೋಟಿ ರೂಪಾಯಿಗಳು ಹತ್ತುವ ಯೋಜನೆಗಳನ್ನು ಗೊತ್ತುಪಡಿಸಿದ್ದು ಪ್ರಗತಿಪರವಾಗಿ ಸಾಗಿವೆ. ಆದರೆ ಈ ಯಾವ ಯೋಜನೆಗಳೂ ನಮ್ಮ ಕರ್ನಾಟಕ ಭಾಗದಲ್ಲಿ ಇಲ್ಲದಿರುವದೊಂದು ವಿಷಾದದ ಸಂಗತಿಯಾಗಿದೆ. ತುಂಗಭದ್ರಾ ಯೋಜನೆಯಿಂದ ಮೊದಲ ಮೆಟ್ಟಲೆಂದು ಬಳ್ಳಾರಿ ಮತ್ತು ಕರ್ನೂಲು ಜಿಲ್ಹೆಯಲ್ಲಿ ೩ ಲಕ್ಷ ಎಕರೆ ಭೂಮಿಗೆ ನೀರು ಸಿಕ್ಕುವುದು. ೩೫ ಸಾವಿರ ಕಿಲೊವ್ಯಾಟ ಶಕ್ತಿ ಉತ್ಪಾದಿತವಾಗುವದು. ೨೫ ಕೋಟಿ ರೂಪಾಯಿಗಳ ಈ ಯೋಜನೆಯನ್ನು ಈಗಾಗಲೆ ಕೈಕೊಂಡಿದ್ದಾಗಿದೆ.

ಉದ್ಯೋಗ ಧಂದೆಗಳ ಅಭಿವೃದ್ಧಿ

ಭಾರತವು ಸ್ವತಂತ್ರವಾದಾಗ ಅದರ ಉತ್ಪಾದನ ಶಕ್ತಿಯು ಬಹಳ ಕೆಳಮಟ್ಟದಲ್ಲಿ ಇದ್ದಿತು. ಪರಕೀಯ ಸರಕಾರವು ಇತ್ತ ಹೆಚ್ಚು ಗಮನ ಕೊಟ್ಟಿರಲಿಲ್ಲ. ಭಾರತದಲ್ಲಿ ಉದ್ಯೋಗಗಳ ಅಭಿವೃದ್ಧಿಯಾದರೆ ತಮ್ಮಲ್ಲಿಯ ಉದ್ಯೋಗಗಳಿಗೆ ಸಂಚಕಾರ ಬರುವದೆಂಬ ಅಂಜಿಕೆಯೇ ಇದಕ್ಕೆ ಕಾರಣವೆನ್ನಬಹುದು. ಅರಳೆ, ಜವಳಿ, ಉಕ್ಕು, ಕಲ್ಲಿದ್ದಲಿ, ಸಿಮೆಂಟು, ಉಪ್ಪು, ಕಲ್ನಾರು ಮೊದ

ಲಾದವುಗಳೆಲ್ಲದರ ಕೊರತೆಯಿದ್ದಿತು. ಸಾರಿಗೆ ಸಂಪರ್ಕಗಳ ತೊಂದರೆ, ಕಚ್ಚಾ ಸಾಮಗ್ರಿಗಳ ಕೊರತೆ ಮತ್ತು ಕೂಲಿಕಾರರ ಅಸಂತೋಷ ಮೊದಲಾದ ಕಾರಣಗಳಿಗಾಗಿ ಉತ್ಪಾದನೆ ಕಡಮೆಯಾಯಿತು. ಸರಕಾರದವರು ಇದನ್ನು ಸರಿಪಡಿಸಲು ಬಹಳ ಪ್ರಯತ್ನಿಸಿದರು. ಖಾಸಗಿ ಬಂಡವಳಗಾರರಿಗೂ ಪ್ರೋತ್ಸಾಹವನ್ನಿತ್ತರು. ಜವಳಿ ಉದ್ಯೋಗದ ಅಭಿವೃದ್ಧಿಯಾಗಬೇಕಾದರೆ, ಅದರ ಉತ್ಪಾದನೆ ಹೆಚ್ಚಬೇಕಾದರೆ ಹೊರಗಿನಿಂದ ಅರಳೆಯನ್ನು ತರಿಸುವದವಶ್ಯವೆನಿಸಿದ್ದರಿಂದ ಸರಕಾರದವರು ಅತ್ತ ವಿಶೇಷ ಆಸ್ಥೆಯನ್ನು ವಹಿಸಿದರು. ಸ್ಥಳೀಯ ಮಗ್ಗಗಳಿಗೆ ನೂಲು ಒದಗಿಸಲು ನೂಲಿನ ನಿರ್ಯಾತವನ್ನು ಸಂಪೂರ್ಣವಾಗಿ ನಿಲ್ಲಿಸಲಾಯಿತು. ಅಮೇರಿಕೆಯಿಂದ ೬೦ ಸಾವಿರ ಗಂಟು ಅರಳೆಯನ್ನು ತರಿಸಿ ಹಿಂದೀ ಗಿರಣಿಗಳಿಗೆ ಕೊಡಲಾಯಿತು. ಉಳಿದ ಸರಕುಗಳ ಉತ್ಪಾದನೆಯಲ್ಲಿಯೂ ಹೆಚ್ಚಳವನ್ನು ಸಾಧಿಸಲು ಬಗೆಬಗೆಯಿಂದ ಪ್ರಯತ್ನಿಸಲಾಗುತಿದೆ. ಸಿಮೆಂಟಿನ ಉತ್ಪಾದನೆ ೧೯೪೭ ರಿಂದ ಬಹಳ ಹೆಚ್ಚಿದೆ. ಉಪ್ಪಿನಲ್ಲಿ ಸ್ವಾವಲಂಬಿಯಾಗಬೇಕೆಂಬುದು ಭಾರತ ಸರಕಾರದ ಧೋರಣವಾಗಿದೆ. ೧೯೫೦ ರಲ್ಲಿ ಉಪ್ಪಿನ ಉತ್ಪಾದನೆಯು ೭೧೩ ಲಕ್ಷ ಮಣಕ್ಕೇರಿತು. ಇದರಿಂದ ರಾಷ್ಟ್ರವು ಉಪ್ಪಿನ ವಿಷಯದಲ್ಲಿ ಸ್ವಾವಲಂಬಿಯಾದಂತಾಗಿದೆ.

ಮುಂಬಯಿ ರಾಜ್ಯದಲ್ಲಿ ಸರಕಾರದವರು ಆಯಾ ಉದ್ಯೋಗಗಳಲ್ಲಿ ತಜ್ಞರ ಸಲಹೆ ಸೂಚನೆಗಳನ್ನು ಕೊಡುವ ಯೋಜನೆ ಮಾಡಿದ್ದಾರೆ. ಸಂಶೋಧನಾಕಾರ್ಯವೂ ನಡೆದಿದೆ. ೧೯೫೦-೫೧ ರಲ್ಲಿ ಉದ್ಯೋಗಗಳ ಅಭಿವೃದ್ಧಿಗಾಗಿ ೧೦ ಲಕ್ಷ ರೂಪಾಯಿ ಸಾಲ ಕೊಡಲಾಯಿತು. ಮದರಾಸಿನಲ್ಲಿ ಸಾಬೂನು, ಹಗ್ಗ, ಮೀನದೆಣ್ಣೆ, ರೇಶಿಮೆ, ಕಾಗದ ಮೊದಲಾದವುಗಳ ಉತ್ಪಾದನೆಗಾಗಿ ಮಾದರಿ-ಕಾರಖಾನೆಗಳನ್ನು ತೆರೆದು ತಜ್ಞರನ್ನು ತರಬೇತು ಮಾಡುತಿರುವರು. ಸಿಮೆಂಟ ಉತ್ಪಾದನೆಯಲ್ಲಿ ಮದರಾಸು ಬಹಳ ಮುಂಬರಿದಿದೆ. ಸಕ್ಕರೆಯ ಉದ್ಯೋಗವೂ ಭರದಿಂದ ಪ್ರಗತಿ ಹೊಂದುತಿದೆ. ಮೈಸೂರು ಸರಕಾರವಾದರೂ ೫೨೦ ಲಕ್ಷ ರೂಪಾಯಿಗಳನ್ನು ಉದ್ಯೋಗ ಧಂದೆಗಳ ಅಭಿವೃದ್ಧಿಗಾಗಿ ಹಾಕಿದ್ದಾರೆ.

ಭಾರತದಲ್ಲಿ ಸದ್ಯದಲ್ಲಿ ೧೩೫ ಯೋಜನೆಗಳು ಕಾರ್ಯಾಚರಣೆಯಲ್ಲಿವೆ. ಇನ್ನು ೧೨೨೦ ಯೋಜನೆಗಳ ಬಗ್ಗೆ ಪರಿಶೋಧನೆ ನಡೆದಿದೆ. ಪ್ರಗತಿಪಥದಲ್ಲಿ ಇರುವ ೧೩೫ ಯೋಜನೆಗಳಲ್ಲಿ ೧೧ ವಿವಿಧೋದ್ದೇಶ ಯೋಜನೆಗಳಾಗಿದ್ದು ೬೦ ಕೇವಲ ನೀರಾವರಿ ಮತ್ತು ೬೪ ಕೇವಲ ವಿದ್ಯುಚ್ಛಕ್ತಿ ಪೂರೈಕೆಯ ಕೇಂದ್ರಗಳಾಗಿವೆ. ೧೨ ದೊಡ್ಡ ಯೋಜನೆಗಳ ವೆಚ್ಚ ೪೪೪ ಕೋಟಿ ರೂ. ಎಂದು ಅಂದಾಜಿದೆ. ಉಳಿದವುಗಳ ಅಂದಾಜ ವೆಚ್ಚ ೧೫೧ ಕೋಟಿ ರೂಪಾಯಿ. ಪರಿಶೋಧನೆಯಲ್ಲಿ ಇರುವ ಯೋಜನೆಗಳ ಅಂದಾಜ ವೆಚ್ಚ ೧೩೧೦ ಕೋಟಿ ಈ ೧೩೫ ಯೋಜನೆಗಳಿಂದ ೧೯೫೧-೫೨ ರಲ್ಲಿ ಸುಮಾರು ೬ ಲಕ್ಷ ಎಕರೆ ಭೂಮಿಗೆ ನೀರು ಸಿಕ್ಕು ೨ ಲಕ್ಷ ಟನ್ನು ಹೆಚ್ಚು ಧಾನ್ಯದ ಉತ್ಪಾದನೆಯಾಗುವದು. ೧೯೫೫-೫೬ ರಷ್ಟೊತ್ತಿಗೆ ಈ ಉತ್ಪಾದನೆಯು ೧೮ ಲಕ್ಷ ಟನ್ನು ಮಿಕ್ಕುವದು. ಮುಂದೆ ೫ ವರ್ಷಗಳಲ್ಲಿ ಇದು ೪೮ ಲಕ್ಷ ಟನ್ನಿಗೇರುವದು. ೧೯೪೭ ರಿಂದ ೧೯೫೧ ರ ಕೊನೆಯ ವರೆಗಿನ ಆಹಾರ ಪದಾರ್ಥಗಳ ಆಯಾತ ವೆಚ್ಚವು ೫೪೩ ಕೋಟಿ ರೂಪಾಯಿ ಇದೆ. ಈ ೧೩೫ ಯೋಜನೆಗಳಿಗಾದರೂ ೫೯೦ ಕೋಟಿ ರೂಪಾಯಿ ಹತ್ತುವದೆಂದು ಅಂದಾಜು. ಇದನ್ನು ನೋಡಿದರೆ ಧಾನ್ಯಗಳ ಆಯಾತಕ್ಕಾಗಿ ಇಷ್ಟೊಂದು ಹಣವನ್ನು ವೆಚ್ಚ ಮಾಡುವದಕ್ಕಿಂತ ಹೊಸ ಹೊಸ ಯೋಜನೆಗಳನ್ನು ಮಾಡಿ ರಾಷ್ಟ್ರದ ಉತ್ಪಾದನ ಶಕ್ತಿಯನ್ನು ಹೆಚ್ಚಿಸಿಕೊಳ್ಳುವದು ಅವಶ್ಯ ಮತ್ತು ಜಾಣತನದ್ದೆನಿಸದಿರಲಾರದು.

ಸಂರಕ್ಷಣ ಸೇನೆ

ಭಾರತವು ಸ್ವತಂತ್ರವಾದ ಬಳಿಕ ಭಾರತೀಯ ಸೈನ್ಯ ಶಾಖೆಯವರು ದ್ವಿವಿಧ ಕಾರ್ಯವನ್ನು ಮಾಡಬೇಕಾಯಿತು. ದೇಶದಲ್ಲಿ ಉಂಟಾಗಿರುವ ಹಿಂಸಾಪ್ರವೃತ್ತಿಗಳನ್ನು ಒಳಸಂಚುಗಳನ್ನು ಎದುರಿಸಬೇಕಾಗಿಬಂದಿತು; ಅಲ್ಲದೆ ನಿಸರ್ಗ ಕೋಪದಿಂದ ಉಂಟಾದ ನೆರೆಹಾವಳಿ,ಭೂಕಂಪ, ಬರಗಾಲಗಳ ಅನರ್ಥಗಳನ್ನು ಕಡಮೆ ಮಾಡಲೂ ಪ್ರಯತ್ನಿಸಬೇಕಾಯಿತು. ಇವೆರಡೂ ಕಾರ್ಯಗಳಲ್ಲಿ ಸೈನ್ಯ ಶಾಖೆಯವರು ಉಳಿದವರ ಸಹಾಯವನ್ನು ತೆಗೆದುಕೊಂಡರೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಕಾಶ್ಮೀರ ಮತ್ತು ಹೈದರಾಬಾದಗಳಲ್ಲಿ ನಮ್ಮ ಸೈನ್ಯ ತನ್ನ ಸಾಹಸವನ್ನೂ ಸೇವಾಬುದ್ಧಿಯನ್ನೂ ಪ್ರದರ್ಶಿಸಿದೆ. ಇದಲ್ಲದೆ ಸೈನ್ಯ ಶಾಖೆಯನ್ನು ಪುನರ್ಘಟಿಸಿ ಆಧುನಿಕ ಶಸ್ತ್ರಾಸ್ತ್ರ ಸನ್ನದ್ಧರನ್ನಾಗಿ ಮಾಡುವದು ಮಹತ್ವದ ಕಾರ್ಯವಾಗಿದ್ದಿತು. ಸೈನ್ಯಶಾಖೆಯಲ್ಲಿಯ ವಿವಿಧ ಅಧಿಕಾರಿಗಳನ್ನು ತರಬೇತುಗೊಳಿಸುವಲ್ಲಿಯೂ ಶಾಖೆಯು ತೊಡಗಿತು.

ಸೈನ್ಯ ಶಾಖೆಯಲ್ಲಿ ಮಹತ್ವದ ಬದಲಾವಣೆಗಳನ್ನು ಮಾಡಲಾಗಿದೆ. ಸೈನ್ಯ, ನೌಕಾ ಮತ್ತು ವೈಮಾನಿಕ ಪಡೆಗಳನ್ನು ಆಯಾ ಪ್ರತ್ಯೇಕ ಸೇನಾಪತಿಗಳ ನೇತೃತ್ವದಲ್ಲಿ ಸಂಘಟಿಸಿ ಅವರವರಿಗೆ ಪ್ರತ್ಯೇಕ ಕೆಲಸಗಳನ್ನು ಹಂಚಿ ಕೊಡಲಾಯಿತು. ಸೈನ್ಯ ಶಾಖೆಯಲ್ಲಿ ರಾಷ್ಟ್ರೀಕರಣ ನಡೆದಿದ್ದರೂ ಇನ್ನೂ ಕೆಲ ಬ್ರಿಟಿಶ್ ಅಧಿಕಾರಿಗಳನ್ನೂ ತಜ್ಞರನ್ನೂ ಇಟ್ಟುಕೊಂಡು ಆಧುನಿಕ ಪದ್ಧತಿಯಿಂದ ಸೈನ್ಯಶಾಖೆಯನ್ನು ತರಬೇತುಗೊಳಿಸುವಲ್ಲಿ ಅವರ ಸಹಾಯವನ್ನು ತೆಗೆದುಕೊಳ್ಳಲಾಗುತ್ತದೆ.

೧೯೫೦ ನೆ ನವಂಬರ ೨೩ ರಂದು ರಾಷ್ಟ್ರೀಯ ಸಂರಕ್ಷಣ ವಿದ್ಯಾಪೀಠವು ಸ್ಥಾಪಿತವಾಗಿದ್ದು ಸದ್ಯದಲ್ಲಿ ಡೆಹರಾಡೂನಿನಲ್ಲಿಯೇ ಅದರ ಕಾರ್ಯಕಲಾಪಗಳು ನಡೆಯುತ್ತಿವೆ. ಪುಣೆಯ ಹತ್ತಿರದ ಖಡಕವಾಸಲಾದಲ್ಲಿ ಇದರ ಶಾಶ್ವತ ಕಟ್ಟಡ ಕಟ್ಟಲಾಗುತ್ತಿದ್ದು ಅಲ್ಲಿ ಸೈನ್ಯ ನೌಕಾ ಮತ್ತು ವೈಮಾನಿಕ ದಳಗಳ ಅಧಿಕಾರಿಗಳಿಗೆ ಸಂಯುಕ್ತ ಮೂಲ ಶಿಕ್ಷಣ ಕೊಡಲಾಗುವದು. ಶಸ್ತ್ರಾಸ್ತ್ರಗಳಲ್ಲಿ ಸ್ವಾವಲಂಬಿಯಾಗುವದು ಯಾವದೊಂದು ಸ್ವತಂತ್ರ ರಾಷ್ಟ್ರಕ್ಕೆಅತ್ಯವಶ್ಯ. ಇಂದು ಜಗತ್ತಿನಲ್ಲೆಲ್ಲ ಯುದ್ಧದ ವಾತಾವರಣ ಹಬ್ಬಿದೆ. ಎಲ್ಲಿ ನೋಡಿದಲ್ಲಿ ಅಶಾಂತ ಪರಿಸ್ಥಿತಿ. ಭಾರತ ಸರಕಾರವಾದರೊ ತನ್ನದೇ ಆದ ತಾಟಸ್ಥ್ಯ ಧೋರಣವನ್ನು ವಹಿಸಿದೆ. ಯಾವುದೊಂದು ರಾಷ್ಟ್ರದ ಮೇಲೆ ದಾಳಿ ಮಾಡಬೇಕೆಂದಾಗಲಿ, ಎರಡನೆಯವರ ಭೂಮಿ ಸೀಮೆಗಳನ್ನಾಕ್ರಮಿಸಬೇಕೆಂದು ಭಾರತವು ಬಯಸದಿದ್ದರೂ ರಾಷ್ಟ್ರ ರಕ್ಷಣೆಗಾಗಿಯಾದರೂ ಅದು ಶಸ್ತ್ರಾಸ್ತ್ರ ಸೈನ್ಯಪಡೆಯಲ್ಲಿ ಸ್ವಾವಲಂಬಿಯಾಗಬೇಕಷ್ಟೆ. ಈ

ಧೋರಣಕ್ಕನುಸಾರವಾಗಿ ಸೈನ್ಯ ಶಾಖೆಯವರು ಹಲವಾರು ಯೋಜನೆಗಳನ್ನು ಕೈಕೊಂಡಿದ್ದಾರೆ.


ಪ್ರಮುಖ ರಾಜ್ಯಗಳಲ್ಲಿ ವಿಶ್ವವಿದ್ಯಾಲಯದ ಮತ್ತು ಹಾಯಸ್ಕೂಲುಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರ ರಾಷ್ಟ್ರೀಯ ಸೈನ್ಯಪಡೆಯನ್ನು ಸಂಘಟಿಸಿ ಅವರಲ್ಲಿ ರಾಷ್ಟ್ರ ರಕ್ಷಣೆಯಲ್ಲಿ ಆಸ್ಥೆಯನ್ನು ಉಂಟುಮಾಡಲಾಗುತ್ತಿದೆ. ಈಗಾಗಲೆ ಮೂರು ವೈಮಾನಿಕ ದಳಗಳನ್ನು ಜೋಡಿಸಿದ್ದು ನೌಕಾ ದಳವನ್ನೂ ಜೋಡಿಸುವ ಯೋಜನೆಯಿದೆ. ಸಂಸ್ಥಾನಗಳಲ್ಲಿದ್ದ ಸೈನ್ಯಪಡೆಯನ್ನು ಪರೀಕ್ಷಿಸಿ ಯೋಗ್ಯರೆನಿಸಿದವರನ್ನು ಹಿಂದೀ ಸೈನ್ಯದಲ್ಲಿ ಸಮಾವೇಶಗೊಳಿಸಲಾಗಿದೆ. ಪ್ರಾದೇಶಿಕ ಸೈನ್ಯ ಪಡೆಯ ಶಾಖೆಯೊಂದು ೧೯೪೯ ಅಕ್ಟೋಬರದಲ್ಲಿ ಸ್ಥಾಪಿತವಾಗಿ ಭರದಿಂದ ಪ್ರಗತಿ ಹೊಂದುತ್ತಿದೆ.

೧೯೪೭ ಅಗಸ್ಟರಂದು ಮೂರು ಸಾವಿರ ಮೈಲಿನಷ್ಟು ವಿಶಾಲ ಕರಾವಳಿ ಪ್ರದೇಶವಿದ್ದ ಭಾರತದಲ್ಲಿ ಕೇವಲ ೪ ಹಡಗುಗಳು, ಎರಡು ಫ್ರಿಗೇಟುಗಳು, ಒಂದು ಕಾರ್ವೆಟ, ಒಂದು ಪರೀಕ್ಷಕ ಹಡಗು, ಕೆಲ ಟ್ರಾಲರಗಳು ಮತ್ತು ಮಯಿನ್ ಸ್ವೀಪರುಗಳು ಮತ್ತು ಒಂದು ಲ್ಯಾಂಡಿಂಗ ಹಡಗು ಇಷ್ಟು ಮಾತ್ರ ಇದ್ದವು. ಸ್ವತಂತ್ರ ಭಾರತ ಸರಕಾರವು ಕೂಡಲೆ ಇದನ್ನು ಹೆಚ್ಚಿಸುವ ಯೋಜನೆಯನ್ನು ಕೈಕೊಂಡಿತು. ೧೯೪೮ ರಲ್ಲಿ ಎಚ್. ಎಂ. ಎಸ್. ಅಚಿಲೆಕ್ ಎಂಬ ಕ್ರೂಜರನ್ನು ಕೊಂಡುಕೊಳ್ಳಲಾಯಿತು. ಮುಂದೆ ಬ್ರಿಟನ್ನಿನಿಂದಮೂರು ವಿನಾಶಿಕೆಗಳನ್ನು ತರಲಾಯಿತು. ನೌಕಾಧಿಕಾರಿಗಳನ್ನು ತರಬೇತುಗೊಳಿಸುವಲ್ಲಿಯೂ ಹೊಸ ಯೋಜನೆ ಕೈಗೊಳ್ಳಲಾಗಿದೆ.

ಈ ನಾಲ್ಕು ವರ್ಷಗಳಲ್ಲಿ ಭಾರತದ ವೈಮಾನಿಕ ಪಡೆಯಲ್ಲಿ ಬಹಳ ಪ್ರಗತಿಯಾಗಿದೆ. ಹೊಸದಿಲ್ಲಿಯಲ್ಲಿ ಸುಧಾರಿಸಿದ ವೈಮಾನಿಕ ಕೇಂದ್ರವನ್ನು ಸ್ಥಾಪಿಸಿದೆ. ಪಾಲಂ ಮತ್ತು ಬೆಂಗಳೂರು ವೈಮಾನಿಕ ಕೇಂದ್ರಗಳಲ್ಲಿಯೂ ಮಹತ್ವದ ಸುಧಾರಣೆಗಳನ್ನು ಮಾಡಿದೆ. ಅಂಬಾಲಾ ಜೋಧಪುರಗಳಲ್ಲಿ ವೈಮಾನಿಕ ಶಿಕ್ಷಣದ ಏರ್ಪಾಡು ಮಾಡಿದೆ. ಅಲ್ಲಿ ವೈಮಾನಿಕರಿಗೆ ಆವಶ್ಯಕ ಎಲ್ಲ ಬಗೆಯ ಶಿಕ್ಷಣವನ್ನು ಕೊಡಲಾಗುತ್ತಿದೆ. ಜಾಲಹಳ್ಳಿಯಲ್ಲಿ ಗ್ರೌಂಡ ಟ್ರೇನಿಂಗ ಕೊಡಲಾಗುತ್ತದೆ. ತಾಂಬರಂದಲ್ಲಿಯೂ ಈ ಶಿಕ್ಷಣದ ವ್ಯವಸ್ಥೆಯಿದೆ. ಸದ್ಯದಲ್ಲಿ ವೈಮಾನಿಕ ಪಡೆಯ ಅವಶ್ಯಕತೆ ಬಹಳಿದ್ದುದರಿಂದ ಇತ್ತ ವಿಶೇಷ ಗಮನವೀಯಲಾಗಿದೆ.

ವಿಶ್ವದಲ್ಲಿ ಪ್ರಮುಖ ಸ್ಥಾನ

ಭಾರತವು ಸ್ವತಂತ್ರವಾದ ಈ ನಾಲ್ಕು ವರ್ಷಗಳಲ್ಲಿ ಸರ್ವ ವಿಧ ಪ್ರಗತಿಯನ್ನು ಸಾಧಿಸಲು ಪ್ರಯತ್ನಿಸಿ ಜಗತ್ತಿನಲ್ಲಿ ವಿಶಿಷ್ಟ ಸ್ಥಾನವನ್ನು ಪಡೆಯಲು ಸಮರ್ಥವಾಗಿದೆಯೆಂದು ಹೆಮ್ಮೆಯಿಂದ ಹೇಳಬಹುದಾಗಿದೆ. ಎಲ್ಲ ರಾಷ್ಟ್ರಗಳೊಡನೆಯೂ ಸ್ನೇಹ ಸಂಬಂಧವನ್ನಿಟ್ಟುಕೊಳ್ಳುವಲ್ಲಿ ಯಶಸ್ವಿಯಾಗಿದೆ. ಮಹತ್ವದ ಜಾಗತಿಕ ಸಮಸ್ಯೆಗಳ ಪರಿಹಾರದಲ್ಲಿ ಸ್ವತಂತ್ರ ಭಾರತವು ಒಳ್ಳೆ ಪಾತ್ರವನ್ನು ವಹಿಸುತ್ತಬಂದಿದೆ. ಮಾನವ ಜನಾಂಗದ ಉನ್ನತಿಗಾಗಿ ನಿಸರ್ಗದ ಉಪಯೋಗವನ್ನೆ ಮಾಡಿಕೊಳ್ಳಬೇಕೆಂಬ ಸಹಕಾರಿ ಪ್ರಯತ್ನಗಳಲ್ಲಿ ಭಾರತವು ಅಯಾ ರಾಷ್ಟ್ರಗಳಲ್ಲಿ ವಿಚಾರ ವಿನಿಮಯದ ಕೇಂದ್ರ ಸ್ಥಾನವಾಗಿ ಪರಿಣಮಿಸಿದೆ. ಹಲವಾರು ಅಂತಾರಾಷ್ಟ್ರೀಯ ಸಭೆಸಮ್ಮೇಲನಗಳು ಭಾರತದಲ್ಲಿ ಸಮ್ಮಿಲಿತವಾದುದುಂಟು. ಏಶಿಯಾ ರಾಷ್ಟ್ರಗಳಲ್ಲೆಲ್ಲ ಸ್ನೇಹ ಸಂಬಂಧವನ್ನು ಪ್ರಸ್ಥಾಪಿಸಲು ಈ ವರ್ಷ ಮಾರ್ಚದಲ್ಲಿ ಹೊಸದಿಲ್ಲಿಯಲ್ಲಿ ಸಮ್ಮೇಲನವನ್ನು ಕೂಡಿಸಲಾಗಿದ್ದಿತು. ಸ್ವತಂತ್ರ ಭಾರತ ಸರಕಾರವು ತನ್ನದೆ ಆದ ರಾಜ್ಯಘಟನೆಯನ್ನು ಸಿದ್ಧಪಡಿಸಿಕೊಂಡಿದೆ. ಜಾತ್ಯತೀತ ರಾಷ್ಟ್ರವೆಂಬ ಘನವಾದ ಉದ್ದೇಶವನ್ನಿಟ್ಟುಕೊಂಡಿದೆ. ದೇಶದಲ್ಲಿಯ ಹಿಂಸಾಪ್ರವೃತ್ತಿಗಳನ್ನೆಲ್ಲ ಹತ್ತಿಕ್ಕಲು ಪ್ರಯತ್ನಿಸದೆ, ಯಶಸ್ವಿಯಾಗಿದೆ. ಹೊಸರಾಜ್ಯಘಟನೆಯನ್ವಯ ಮಹಾ ಚುನಾವಣೆಗಳನ್ನು ಇಂದು ಹೋರಾಡಲು ಸಿದ್ಧವಾಗಿದೆ. ಮುಂದೆ ಅಧಿಕಾರದಲ್ಲಿ ಬರುವ ಸರಕಾರವೂ ಜಾಗತಿಕ ಶಾಂತಿ ಸ್ಥಾಪನೆಯ ಘನವಾದ ಉದ್ದೇಶದ ಹಿನ್ನೆಲೆಯಲ್ಲಿ ಎಲ್ಲ ಅಡಳಿತೆಯನ್ನು ಸಾಗಿಸಿ ರಾಷ್ಟ್ರದಲ್ಲಿ ರಾಮರಾಜ್ಯವನ್ನು ಸ್ಥಾಪಿಸುವದಲ್ಲದೆ ಜಗತ್ತಿನಲ್ಲಿಯೂ ಭಾರತಕ್ಕೆ ಉನ್ನತ ಸ್ಥಾನವನ್ನು ಕಲ್ಪಿಸಿಕೊಡುವದೆಂದು ನಂಬುತ್ತೇವೆ.



ಶ್ರೀ. ವೆಂಕಟರಾವ ನಾಯಕ

ಅವರಿಂದ

ಅದ್ಭುತಪ್ರಿಯ ಅಮೇರಿಕಾ

ಅಮೇರಿಕದಲ್ಲಿ ವಿದೇಶೀಯರಿಗೆ ನೋಡಿದೊಡನೆ ಕಂಡುಬರುವ ವೈಶಿಷ್ಟ್ಯಗಳೇನು? ಆ ಜನರ ಅದ್ಭುತಪ್ರಿಯತೆ, ಅತುಲ ಸಾಹಸ, ಎಲ್ಲದರಲ್ಲಿಯೂ ತಾವು ಅದ್ವಿತೀಯರಾಗಬೇಕೆಂಬ ಆಕಾಂಕ್ಷೆ— ಅವರಿಗೆ ದೊರೆತ ಯಶಸ್ಸಿನಿಂದ ಅಸಹನೆಯೂ ಅವರಲ್ಲಿ ಬೆಳೆದಿದೆ. ಈ ವರ್ಷ ಅಮೇರಿಕಾ ಸಂಚಾರ ಮಾಡಿಬಂದ ಶ್ರೀ. ನಾಯಕರು ತಮ್ಮ ಅನುಭವವನ್ನು ಇಲ್ಲಿ ಸಂಕ್ಷಿಪ್ತವಾಗಿ ಬಣ್ಣಿಸಿದ್ದಾರೆ.

ಒಂದು ದೊಡ್ಡ ನಗರದ ನಾಲ್ಕು ಬೀದಿಗಳು ಕೂಡುವ ಕೂಟದಲ್ಲಿ ನಿಂತ ಪೋಲೀಸನೊಬ್ಬನ ಕಣ್ತಪ್ಪಿಸಿ ಓರ್ವ ದಾರಿಕಾರನು ವೇಗದಿಂದ ಬೀದಿಯನ್ನು ದಾಟ ಹೋಗಲು ಯತ್ನಿಸಿದನಂತೆ! ಹಾಗೆ ಅವನು ದಾಟಬೇಕೆಂದು ಬೀದಿಯ ಅಂಚಿಗೆ ಬಂದೊಡನೆ ಕಾರ್ಯದಕ್ಷನಾಗಿದ್ದ ಪೋಲೀಸನು ಗಕ್ಕನೆ ಅವನ ಕೈಹಿಡಿದು ನಿಲ್ಲಿಸಿದನಂತೆ! ಮತ್ತು ಆ ದಾರಿಕಾರನಿಗೆ "ಲಗುಬಗೆಯಿಂದ ಬೀದಿಯನ್ನು ದಾಟ ನೀನು ಉಳಿಸಿಕೊಳ್ಳುವ ಐದು ನಿಮಿಷಗಳ ಕಾಲಾವಧಿಯಿಂದ ಮುಂದೆ ಏನು ಮಾಡಲಿರುವೆ?" ಎಂದು ಪ್ರಶ್ನೆಯನ್ನು ಕೇಳಿದನಂತೆ! ಪೋಲೀಸನ ಈ ಪ್ರಶ್ನೆಗೆ ದಾರಿಕಾರನು ಸಮಂಜಸವಾದ ಸಮರ್ಪಕವಾದ ಉತ್ತರವನ್ನು ಕೊಡಲು ಆಗದೆ ಪೆಚ್ಚಾದನಂತೆ!

ಅಮೇರಿಕೆಯ ಯಾಂತ್ರಿಕ ಪ್ರಗತಿ ಹಾಗು ನಿರಲಸವಾದ ಉದ್ಯೋಗತತ್ಪರತೆ ಇವುಗಳನ್ನು ನೋಡಿ ಈ ವೇಗ, ಈ ಅದ್ಭುತ ಸಾಹಸ, ಈ ಭೌತಿಕ ಸುಖಲೋಲುಪತೆ ಇವುಗಳೆಲ್ಲ ಯಾತಕ್ಕೋಸುಗ ಎಂದು ಅಲ್ಲಿಯ ಜನರನ್ನು ಕೇಳಬೇಕೆಂಬ ಚಪಲವುಂಟಾಗುತ್ತದೆ. ಯಾರಾದರೂ ಧೈರ್ಯದಿಂದ ಅಂತಹ ಪ್ರಶ್ನೆಯನ್ನು ಅಮೇರಿಕೆಯ ಜನರಿಗೆ ಕೇಳಿದರೆ ಅಮೇರಿಕನ್ನರ ಮುಖವೂ ದಾರಿಕಾರನಂತೆ ಹುಚ್ಚಾಗುವ ಸಂಭವವಿದೆ. ಆದರೆ ಇದರಿಂದ ಅಮೇರಿಕೆಯ ಇಂದಿನ ಅದ್ಭುತ ಪ್ರಗತಿಯು ತಿರಸ್ಕರಣೀಯವೆಂದೆನ್ನಲಾಗದು. ತದ್ವಿರುದ್ಧ ಸಾಹಸವು ಅವರ ಸಹಜ ಸ್ವಭಾವವಾಗಿದೆ; ಜೀವಜೀವಾಳವಾಗಿದೆ; ರಕ್ತಗತವಾಗಿಬಿಟ್ಟದೆಂಬುದೇ ಇದರರ್ಥವೆಂದು ಸ್ಪಷ್ಟವಾಗುವದು. ಯಾಕಂದರೆ ಸ್ವಭಾವಸಹಜವಾದ ಮಾತಿನ ಬಗೆಗೆ ಪೂರ್ವಾಪರಗಳನ್ನಾಗಲಿ ಗೊತ್ತುಗುರಿಗಳನ್ನಾಗಲಿ ವಿಚಾರಿಸುತ್ತ ಮನುಷ್ಯನು ಕುಳಿತುಕೊಳ್ಳುವದಿಲ್ಲ. ಇರಲಿ.

ಅಮೇರಿಕೆಯ ದರ್ಶನದಿಂದ ಹಾಗು ಅಮೇರಿಕನ್ನರ ಸಮಾಗಮದಿಂದ ಸಾಮಾನ್ಯವಾಗಿ ಪ್ರವಾಸಿಕರ ಮನಸಿನಲ್ಲಿ ಆ ದೇಶದ ಹಾಗು ಜನರ ಬಗೆಗೆ ಕೆಲ ಮಾತುಗಳು ಅಚ್ಚೊತ್ತಿದಂತೆ ನಿಲ್ಲುತ್ತವೆ. ಅವುಗಳಲ್ಲಿ ಎಲ್ಲಕ್ಕಿಂತ ಹೆಚ್ಚು ಎದ್ದುಕಾಣುವ ವಿಷಯವೆಂದರೆ ಅದ್ಭುತ ಸಾಹಸಗಳಲ್ಲಿ ಅವರಿಗಿರುವ ಆಸ್ಥೆ ಆಸಕ್ತಿಗಳು. ಹಿಂದಿನ ವೈಭವವನ್ನೆಲ್ಲ ಮೀರಿ ನಿಲ್ಲಬೇಕೆಂಬ ಮಹತ್ವಾಕಾಂಕ್ಷೆ ಅವರದಿನ್ನೊಂದು ಗುಣ. ಹಾಗೆಯೆ ತಮ್ಮ ಔದಾರ್ಯ ಅನ್ಯಾದೃಶವಾಗಿದೆಂದು ಪ್ರದರ್ಶಿಸುವ ಆತುರತೆ ಅವರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಊಟ ಉಪಚಾರ ತಿಂಡಿತೀರ್ಥಗಳಲ್ಲಿ ಎಲ್ಲವೂ ಭವ್ಯ ಹಾಗು ಅದ್ಭುತ ಪ್ರಮಾಣದಲ್ಲಿರಬೇಕೆಂಬುದೇ ಅವರ ಮನೀಷೆ. ಆದರಿಂದಲೇ ಅವರಿಗೆ ಸಮಾಧಾನ.

ಸಾಮಾನ್ಯತಃ ಶ್ರೀಮಂತರ ಮಕ್ಕಳು ಸ್ತುತಿಪ್ರಿಯರಿರುವಂತೆ ಅಮೇರಿಕೆಯವರು ಇಂದು ಅತ್ಯಂತ ಪ್ರಶಂಸಾಪ್ರಿಯರಾಗಿರುವರು. ವಿಶೇಷತಃ ಇತ್ತೀಚೆಗೆ ಜಾಗತಿಕ ರಾಜಕಾರಣದಲ್ಲಿ ಅಮೇರಿಕೆಗೆ ಬಂದಿರುವ ಮಹತ್ವದ ಮೂಲಕ ಈ ಪ್ರಶಂಸಾಪ್ರೀತಿ ಹೆಚ್ಚಾಗಿ ಕಂಡುಬರುತ್ತದೆ. ಹಾಗೆಯೆ ಅದರ ಜೊತೆಯಲ್ಲಿ ಪರಮತಾಸಹಿಷ್ಣುತೆಯೂ ಎದ್ದುಕಾಣುತ್ತಿದೆ. "ತನ್ನನ್ನೂ ತನ್ನ ದೇಶವನ್ನೂ ಹೊಗಳದಿದ್ದವರು ತನ್ನ ವೈರಿಗಳು; ತನ್ನ ನಿಂದಕರು" ಎಂಬ ತಾಳ್ಮೆಗೇಡಿತನಕ್ಕೆ ಅಮೇರಿಕನ್ನರು ತುತ್ತಾಗಿರುವಂತೆ ನನಗೆ ತೋರಿತು. ಯಾಕಂದರೆ ನನ್ನ ಸಂಚಾರದಲ್ಲಿ ಭಾರತದ ಪರರಾಷ್ಟ್ರ ಧೋರಣದ ಬಗೆಗೆ ಅಮೇರಿಕೆಯು ಅಸಂತುಷ್ಟವಾಗಿದ್ದ ಅಂಶವು ಎಲ್ಲೆಡೆಯಲ್ಲಿಯೂ ಎದ್ದು ಕಾಣುತ್ತಿದ್ದಿತಲ್ಲದೆ ಭಾರತ ಧುರೀಣರ ವಿಷಯವಾಗಿ ಅನಾದರದ, ಅಗೌರವದ ಉದ್ಗಾರಗಳು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದವು. ಭಾರತದ ಬಗೆಗೆ ವಿಪರೀತ ಜ್ಞಾನವನ್ನು ಮಾಡಿಕೊಡುವಂತಹ ಸುದ್ದಿಗಳಿಗೆ ಹೆಚ್ಚು ಮಹತ್ವವನ್ನು ಕೊಡುವ ಅಲ್ಲಿಯ ಪತ್ರಿಕೆಗಳ ಪ್ರವೃತ್ತಿಯಿಂದ ನಿಜವಾಗಿ ನನಗೆ ಬಹಳ ಖೇದವೆನಿಸಿತು. ಉದಾಹರಣೆಗಾಗಿ ಹೇಳುವದಾದರೆ ನಾನು ಹಾಗು ನನ್ನ ಸಂಗಡ ಸಂಚರಿಸಿದ ಹದಿನಾಲ್ಕು ದೇಶಗಳ ಮೂವತ್ತೈದು ಪತ್ರಿಕಾಸಂಪಾದಕರ ಹದಿನೈದು ದಿವಸಗಳ ಸಂಚಾರದಲ್ಲಿ ಭಾರತದ ಬಗೆಗೆ ಅಲ್ಲಿಯ ಪತ್ರಿಕೆಗಳಲ್ಲಿ ಬಂದ ಸುದ್ದಿಯೆಂದರೆ ನಾಗಪಂಥದ ಸನ್ಯಾಸಿಯೋಬ್ಬನು ಅಂತಾರಾಷ್ಟ್ರೀಯ ಶಾಂತಿಗೆ ಅಧ್ಯಕ್ಷ ಟ್ರೂಮನ್ನರೂ ಮಾರ್ಶಲ್ ಸ್ಟಾಲಿನ್ನರೂ ಬತ್ತಲೆಯಾಗಿ ಒಂದೆಡೆಯಲ್ಲಿ ಸೇರುವದವಶ್ಯವೆಂದು ಭಾಷಣದಲ್ಲಿ ಸೂಚಿಸಿದ್ದುದಾಗಿದ್ದಿತು. ಈ ಸುದ್ದಿಗೆ ಅವಾಸ್ತವವಾದ ಪ್ರಾಧಾನ್ಯವನ್ನು ಕೊಟ್ಟು ಭಾರತೀಯರ ಬಗೆಗೆ ಅಮೇರಿಕೆಯ ಜನರ ಮನಸನ್ನು ಕಲುಷಿತಗೊಳಿಸಲು ಮಾಡಿದ ಆ ಹೀನ ಪ್ರವೃತ್ತಿಯು ನಿಜವಾಗಿ ನನಗೂ ನನ್ನ ಜೊತೆಗಾರರಿಗೂ ನೋವನ್ನುಂಟುಮಾಡಿತು. ಆದರೆ ಇದು ಮೇಲೆ ಹೇಳಿದಂತೆ ಮತಭೇದದ ಬಗೆಗಿರುವ ಅವರ ತಾಳ್ಮೆಗೇಡಿತನದ ಪರಿಣಾಮವೆಂದು ಸಮಾಧಾನಪಟ್ಟೆವು.

ಪ್ರಾಕೃತಿಕ ಸಂಪತ್ತಿನ ವೈಪುಲ್ಯ ಹಾಗು ವೈಜ್ಞಾನಿಕ ಮತ್ತು ತಾಂತ್ರಿಕ ಸಾಧನಗಳ ವೆಗ್ಗಳತೆ- ಇವುಗಳಿಂದ ಅಮೇರಿಕೆಯ ಭೌತಿಕ ಸಂಪತ್ತು ಅಪಾರವಾಗಿ ಬೆಳೆದಿದೆ. ಪ್ರಯುಕ್ತ ಅದುವೇ ಇಂದು ಅಲ್ಲಿಯ ಜನರಿಗೆ ಅಧಿದೇವತೆ, ಆರಾಧ್ಯ ದೇವತೆಯಂತೆ ತೋರುತ್ತಿರುವಲ್ಲಿ ಅಚ್ಚರಿಯೇನಿಲ್ಲ. ಆದರೆ ಈ ಮನೋವೃತ್ತಿಯ ಫಲವಾಗಿ ಕೆಲ ಪ್ರವೃತ್ತಿವಿಶೇಷಗಳು ಜನತೆಯಲ್ಲಿ ಮೈದೋರುತ್ತಿವೆ. ಅಮೇರಿಕೆಯವರು ಪ್ರದರ್ಶಿಸುತ್ತಲಿರುವ ಔದಾರ್ಯವು ಅಂತಹವುಗಳಲ್ಲಿ ಒಂದಾಗಿದೆ. ಈ ಔದಾರ್ಯವು ನಿಷ್ಕಾಮ ಔದಾರ್ಯವಾಗಿರುವದೆಂದು ನಿಸ್ಸಂಕೋಚವಾಗಿ ಹೇಳಲಾಗದು. ಅದರ ಹಿನ್ನೆಲೆಯಲ್ಲಿ ಭೌತಿಕ ಲಾಭದ ಆಕಾಂಕ್ಷೆಯಿರುತ್ತದೆಂಬದನ್ನು ಸೂಕ್ಷ್ಮದೃಷ್ಟಿಯುಳ್ಳವರು ಕಂಡುಹಿಡಿಯಬಲ್ಲರು. ಅದರಂತೆಯೇ ಸತತೋದ್ಯೋಗ, ಸಾಹಸಪ್ರೀತಿ, ಇವುಗಳಿಗೆ ದೊರೆತಿರುವ ಏಕಪ್ರಕಾರವಾದ ಯಶಸ್ಸಿನಿಂದ ಅವರಲ್ಲಿ ಒಂದು ಬಗೆಯ ಆತ್ಮವಿಶ್ವಾಸದ ಆವಿರ್ಭಾವವು ಕಂಡುಬರುತ್ತಿರುವದು. ಆದರೆ ಅದಕ್ಕೆ ವಿನಯದ ಬೆಂಬಲವಿದ್ದರೆ ಅಹಂಕಾರದ ವಾಸನೆಯು ಬರುತ್ತಿರಲಿಲ್ಲೆಂದು ಒಮ್ಮೊಮ್ಮೆ ನೋಡಿದವರಿಗೆ ಅನಿಸುತ್ತದೆ.

ಯೇನ ಕೇನ ಪ್ರಕಾರೇಣ ಧನಾರ್ಜನೆಯನ್ನು ಮಾಡಿ ಭವ್ಯವಾದ ಗಗನಚುಂಬಕಗಳನ್ನೂ ಗಾಳಿಗೋಪುರಗಳನ್ನೂ ಕಟ್ಟಿಸುವದೇ ಜೀವಿತ ಸಾಫಲ್ಯದ ಲಕ್ಷಣವೆಂದು ಸಾಮಾನ್ಯವಾಗಿ ಅಮೇರಿಕೆಯ ಜನರು ತಿಳಿದಿರುವಂತೆ ತೋರುತ್ತದೆ. ಅಂತೆಯೇ ಅವರು ದಿನಕ್ಕೊಂದು ಬಗೆಯಾದ ಹೊಸ ಹೊಸ ಸ್ಪರ್ಧೆಯಲ್ಲಿ ಉತ್ಸಾಹ, ಶಕ್ತಿಗಳನ್ನು ತೋರುತ್ತಿರುವರು. ಮಾರ್ಕೆಟ್ಟಾದರೆ ಸಾಲದು; ಅವರಿಗೆ ಸುಪರ್ ಮಾರ್ಕೆಟ್ಟು ಬೇಕು. ಕಾನ್‌ಸ್ಟಲೇಶನ್ನಿನಿಂದ ತೃಪ್ತಿಯಿಲ್ಲ; ಸುಪರ್ ಕಾನ್‌ಸ್ಟಲೇಶನ್ನು ಬೇಕು ಅವರಿಗೆ. ೧೦೨ ಅಂತಸ್ತಿನ ಎಂಪಾಯರ ಸ್ಟೇಟ ಬಿಲ್ಡಿಂಗನ್ನು ಹಿಮ್ಮೆಟ್ಟಿಸುವ ಅದ್ಭುತ ಭವ್ಯ ಕಟ್ಟಡದ ವಿಚಾರವೇ ಅವರ ತಲೆಯಲ್ಲಿ. ವೃತ್ತಪತ್ರಿಕೆಗಳ ಪುಟಸಂಖ್ಯೆ ದಿನಾಲು ೫೦—೬೦ ರಷ್ಟಾದರೂ ಸಮಾಧಾನವಿಲ್ಲ. ೧೦೦ ಪುಟಗಳಿರಬೇಕೆಂದು ಹವಣಿಕೆ. ಪ್ರತಿ ನಾಲ್ವರಿಗೆ ಒಂದು ಮೋಟಾರ ಕಾರಿದ್ದರೂ ಪ್ರತಿಯೊಬ್ಬನಿಗೆ ಒಂದರಂತಿರಬೇಕೆಂದು ಧಡಪಡ; ತಳಮಳ. ಜಗತ್ತಿನಲ್ಲಿಯೇ ಎಲ್ಲಕ್ಕೂ ದೊಡ್ಡದಾದ ಸ್ಟೀವನ್ಸ ಹೊಟೆಲ್ಲು ಅಮೇರಿಕೆಯಲ್ಲಿರುವದೆಂದು ಹೇಳುವಲ್ಲಿ ಅವರಿಗಿರುವ ಹೆಮ್ಮೆಯು ಎಲ್ಲ ದೊಡ್ಡ ವಸ್ತುಗಳಿಗೆ ಅಮೇರಿಕೆಯೆ ತವರ್ಮನೆಯಾಗಿರಬೇಕೆಂಬ ಅವರ ಮಹತ್ವಾಕಾಂಕ್ಷೆಯ ದ್ಯೋತಕ. ಭವ್ಯ ವಿಮಾನ, ಅದ್ಭುತ ನೌಕೆ, ಅಪ್ರತಿಮ ಕಾರು ಇವುಗಳನ್ನು ನಿರ್ಮಿಸಬೇಕೆಂಬ ಆತುರತೆ ಅವರಲ್ಲಿ ಅಪರಿಮಿತವಾಗಿದೆ. ಹಾಗೆಯೆ ನದಿಗಳಿಗೆ ಭವ್ಯ ಸೇತುಗಳನ್ನು ಕಟ್ಟುವದು, ಗುಪ್ತ ಮಾರ್ಗಗಳನ್ನು ಅದ್ಭುತ ರೀತಿಯಲ್ಲಿ ನಿರ್ಮಿಸುವದು, ದೊಡ್ಡ ದೊಡ್ಡ ಅರಣ್ಯಗಳನ್ನು ಆಸ್ಥೆಯಿಂದ ಸಂರಕ್ಷಿಸಿ ಅಲ್ಲಿ ಹೆಮ್ಮರಗಳು ಬೆಳೆವಂತೆ ಮಾಡಿ ನಾಡಿನ ಭೌತಿಕ ಸಂಪತ್ತನ್ನು ಹೆಚ್ಚಿಸುವುದು, ಹಣ್ಣುಹಂಪಲು ಮೊದಲು ಗಾತ್ರದಲ್ಲಿ, ರುಚಿಯಲ್ಲಿ ಅಸದೃಶವಾಗಿರಬೇಕೆಂದು ಅಹರ್ನಿಶ ಯತ್ನಿಸುವದು ಇವೇ ಮೊದಲಾದವುಗಳು ಅವರಲ್ಲಿ ಎದ್ದು ಕಾಣುವ ವಿಶೇಷಾಂಶಗಳಾಗಿವೆ. ನಗರದ ಬೀದಿಗಳು ಆದರ್ಶರೀತಿಯಲ್ಲಿ ಹಸನಾಗಿರಬೇಕೆಂದು ಆ ಬಗೆಗೆ ಅವರು ವ್ಯಕ್ತಪಡಿಸುವ ಆಸ್ಥೆ ಆಸಕ್ತಿಗಳು ಅನುಕರಣೀಯವಾಗಿವೆ. ಉಡಿಗೆ ತೊಡಿಗೆ ಅಂಗಸೌಷ್ಠವ ಮೊದಲಾದವುಗಳನ್ನು ಕುರಿತು ಅವರು ವಹಿಸುತ್ತಿರುವ ದಕ್ಷತೆಯು ಪ್ರಶಂಸನೀಯವಾಗಿದೆ.

"ಅಲ್ಲೋ, ನಿನ್ನ ಗಿಳಿಯೇನಾಯಿತು?"
"ನಾನು ಮದುವೆಯಾದೆ. ಅದು ಎದೆಯೊಡೆದು ಸತ್ತಿತು."
"ಸವತಿಮತ್ಸರವೇನು?"
"ಛೇ ಛೇ, ವಾಕ್‌ಸ್ಪರ್ಧೆಯಲ್ಲಿ ಅದು ಹಣ್ಣಾಯಿತು."

ನಾ. ಕಸ್ತೂರಿ,

ಎಂ. ಎ., ಬಿ. ಎಲ್., ಅವರಿಂದ



ಕಾದಿರುವಳು

(ನಗೆ ಬರೆಹ)

ದೀಪಾವಳಿಗೆ ಬರಲಿರುವ ಗಂಡನ ಪತ್ರವನ್ನು ಕಾಯುತ್ತಿರುವಳಾಕೆ. ಅವಳ ಹೃದಯದಲ್ಲಿ ಏನೇನು ಆಗುತ್ತಿದೆ ಎಂದು ಕಸ್ತೂರಿಯವರಿಂದ ಕೇಳಿರಿ.

ದೀಪಾವಳಿಯಂಥ ದೊಡ್ಡ ಹಬ್ಬಕ್ಕೆ, ಒಂದೇ ದಿನ ಸೂಟ ಕೊಟ್ಟದಾರಲ್ಲಾ, ಕಟುಕರು! ಏನ ನ್ಯಾಯ? ದೇವರೇನೋ ದೊಡ್ಡ ಮನಸ್ಸು ಮಾಡಿ ಅದರ ಮುಂದೆ ಒಂದು ಭಾನುವಾರ ಸೇರಿಸಿದ, ಈ ವರ್ಷ, ನನಗೋಸ್ಕರ.. ನನಗೋಸ್ಕರ? ಛೆ. ನನ್ನಂಥ ಎಲ್ಲರಿಗೋಸ್ಕರ, ಎನ್ನಬೇಕು; ಇಲ್ಲದಿದ್ದರೆ ದೇವರಿಗೆ ಕೋಪ ಬಂದುಬಿಡ್ತದೆ... ಹೌದು. ದೇವರೇ ನನ್ನನ್ನ ಈಗ ಕಾಪಾಡಬೇಕು. ನನ್ನನ್ನು ಕಾಪಾಡಿ, ಆ ಹಾಳು ಅಂಚೆ ಜವಾನ ಬರುತ್ತಲೂ ಅವನ ಕೈಯಿಂದ ಅವರ ಪತ್ರ ಕೊಡಿಸಬೇಕು.

ಆ ಪತ್ರದಲ್ಲಿ ಏನು ಬರೆದಿರುತ್ತಾರೆ? ಅಯ್ಯೋ ಹುಚ್ಚಿ. ಯಾಕೆ ಹೀಗೆ ಯೋಚನೆ ಮಾಡ್ತಿಯಾ? ಭಾನುವಾರ ಬೆಳಿಗ್ಗೆ ಅಲ್ಲಿಗೆ ತಲಪಿ, ಸೋಮವಾರದ ಹಬ್ಬ, ಮಂಗಳವಾರ ಬುಧವಾರಗಳ ಸ್ವಂತ ರಜೆಗಳನ್ನೂ ಪೂರೈಸಿ, ಗುರುವಾರ, ಅಲ್ಲ ಶುಕ್ರವಾರ... ಓ, ಅದಾಗದು.. ಶನಿವಾರವೋ ಭಾನುವಾರವೋ ಊರಿಗೆ ಹಿಂತಿರುಗಲೇಬೇಕೆಂದು ಬರೆದಿರುತ್ತಾರೆ... ಅದು ಸರಿ! ನನಗೆ ಪತ್ರ ಬರೆಯದೆ, ತಂದೆಗೆ ಬರೆದುಬಿಟ್ಟರೆ ಏನು ಗತಿ? ಹೇಗೆ ಓದುವುದು? ದೀಪಾವಳಿಗೆ ಮಾವನ ಮನೆಗೆ ಹೊರಡೋದು ಅಂದ್ರೆ ಎಂದೂ ಇಲ್ಲದ ಬಿಗುಮಾನ ಈ ಅಳಿಯಂದಿರಿಗೆ... ಮಾವಂದಿರಿಗೂ ಬಿಗುಮಾನ, ಅನ್ನಿ. ತನ್ನ ಮನೆಗೆ ಬರುವ ಸುದ್ದೀನ ತನಗೆ ತಿಳಿಸದೆ ಮಗಳಿಗೆ ತಿಳಿಸಿದ ಎಂಬ ಕ್ರೋಧ.. ಆದರೆ, ಇವರು ಅದಕ್ಕೆಲ್ಲ ಜಗ್ಗುವುದಿಲ್ಲ.. ನನಗೇ ಬರೀತಾರೆ.. ಅಥವಾ, ಬರೆಯುವುದಿಲ್ಲವೋ? ಇವರೂ ಕೊಂಚ ಪುಕ್ಕಲು ಆಸಾಮೀನೇ.

ಅಯ್ಯೋ, ಅಂಚೆಯವನು ಬರುವ ಟೈಂ ಹತ್ತಿರ ಬಂತಲ್ಲಾ.. ನಿನ್ನೆ ಹನ್ನೊಂದೂಕಾಲಿಗೆ ಬಂದ.. ಮೊನ್ನೆ ಹತ್ತೂ ಐವತ್ತು.. ಇವತ್ತು.. ದೇವರೇ.. ಬೇಗ ಬರಿಸಪ್ಪ.. ಈ ಬೀದಿಯಲ್ಲಿ ಇನ್ನು ಯಾರ ಮನೆಗೂ ಪತ್ರಗಳಿಲ್ಲದೆ ಹೋಗಲಿ, ಇವತ್ತು.. ಛೆ! ಹಾಗಂದ್ರೆ ದೇವರಿಗೆ ಕೋಪ ಬರುತ್ತೆ. ಏಕೆ? ಅವರ ಮನೆಗಳಲ್ಲೂ ಹೆಣ್ಣು ಜೀವಿಗಳು.. ನನ್ನ ಹಾಗೆ.. ಓ! ಮರೆತೆ! ಆ ಕೊನೆಯ ಮನೆ ಸಾವಿತ್ರಿ ಗಂಡ ಆಗಲೆ ದೀಪಾವಳಿಗೆ ವಕ್ರಿಸಿ ಆರು ದಿನವಾಯಿತು. ಅವಳಿಗಿನ್ನೇಕೆ ಪತ್ರ... ನನಗೇ ಅಂತ ಈ ಸೂಟ ಸಿಕ್ಕದ ಕಚೇರಿ ನೌಕರಿ ದೇವರು ಎಲ್ಲಿ ಆರಿಸಿ ಇರಿಸಿದನೋ... ಥೂ. ಹಾಗೆಲ್ಲ ಯೋಚನೆ ಮಾಡಬಾರದು. ಸೂಟ ಸಿಗುವ ಕಚೇರಿಗಳಲ್ಲಿ ಪಗಾರ ಕಡಿಮೆ.. ಗಂಡನಿಗೆ ಸದಾ ಸೂಟೀನೂ ಸಿಗಬೇಕು, ಕೈ ತುಂಬ ಪಗಾರಾನೂ ಸಿಗಬೇಕು, ಅಂದ್ರೆ ಹೇಗಾಗುತ್ತೆ?.. ಮಾಸ್ತರಿ ಆದರೆ, ವರ್ಷಕ್ಕೆ ಆರು ತಿಂಗಳು ಮನೇಲೇ ಕೂತಿರಬಹುದು. ಆದರೆ, ಪಗಾರ? ನಿತ್ಯದರಿದ್ರ.. ಸತ್ಯಕುಚೇಲ...

ಅಂಚೆಯವ ಯಾಕಿನ್ನೂ ಬೀದಿ ತುದೀಲಿ ಕಾಣಿಸಿಕೊಳ್ಳಲಿಲ್ಲ... ದೇವರೇ.. ಐವತ್ತೆಣಿಸುವುದರೊಳಗೆ ಅವನನ್ನು ಕಾಣಿಸು.. ಒಂದು, ಎರಡು,

ಮೂರು, ನಾಲ್ಕು, ಐದು.. ಐವತ್ತು ಎಣಿಸುವುದು ಬಹಳ ನಿಧಾನ... ಹತ್ತು ಎಣಿಸುವುದರೊಳಗೆ ಕಾಣಿಸು... ಛೆ.. ಹಾಗೆಲ್ಲ ದೇವರ ಸತ್ವಾನ ಪರೀಕ್ಷೆ ಮಾಡಬಾರದು... ಅತ್ತ ಕಡೇನೇ ನೋಡುತ್ತ ನಿಂತಿರುವ ಬದಲು ನಾನು ನೆಟ್ಟಗೆ ಆ ಇಲೆಕ್ಟ್ರಿಕ್ ಕಂಬವನ್ನೇ ನೋಡುತ್ತಿರುತ್ತೇನೆ.. ಆಗ, ಅವನು ಬರುವ ಸಂಭವ ಹೆಚ್ಚು...

ಅಲ್ಲಾ, ಎಂಥ ಪೆದ್ದಿ ನಾನು ! ಒಂದು ವೇಳೆ ಅವನು ಬಂದ್ರೂ ಅವನು ತಂದ್ರೆ ತಾನೆ ? ತರದೆ ಇದ್ರೆ ಗತಿ ಏನು ? ಗತಿ ಏನು ಬಿಡೆ, ಮುಹಾ ? ನೋಡಬೇಕು, ಮಾತಾಡಬೇಕು, ಜೊತೇಲಿ ವಾಕಿಂಗ ಹೋಗಬೇಕು, ಎಂಬ ಆಸೆ ಅವರಿಗೂ ಇಲ್ಲವೇನೆ? ಬಂದೇ ಬರುತ್ತಾರೆ. ಮದುವೇಲಿ ಹಸೆ ಮೇಲಿಂದಿಳಿದು ಬರುವಾಗ, ಅಂಗೈ ಜಿಗುಟಿದ್ದರ ಅರ್ಥ ಇನ್ನೇನು ? ಕೈಯೊಳಗಿಟ್ಟ ಕೈಬೆರಳನ್ನ ಬಗ್ಗಿಸಿದ್ದರ ಅರ್ಥ ಇನ್ನೇನು ? ಹೋದ ವಾರ ಕಳುಹಿದ ಪತ್ರದ ತುಂಬ ಕೋಗಿಲೆ, ಕಾಜಾಣ, ಚಕ್ರಪಾಕ, ಮುತ್ತು, ಹವಳ, ಚಿನ್ನ, ರತ್ನ ಅಂತ ಒಂದು ತುದಿಯಿಂದ ಇನ್ನೊಂದು ತುದಿವರೆಗೂ ತಿದಿ ಒತ್ತಿದ್ದರಲ್ಲಾ. . . . ಬಂದೇ ಬರ್ತ್ತಾರೆ; ಗಂಡಸರೆಲ್ಲ ಕಳ್ಳರಲ್ಲ; ಕೆಲವರು ಒಳ್ಳೆಯವರೂ ಇದ್ದಾರೆ. ಬರೆದೇ ಬರೀತಾರೆ. . ಬರೆದ ಮೇಲೆ, ಟಪಾಲ್ ಪೆಟ್ಟಿಗೆ ಹೊಟ್ಟೆಗೆ ಹೋಗೇ ಹೋಗುತ್ತೆ. . ಯಾಕೆ ? ಅಂಚೆ ಚೀಟಿಗೆ ಗತಿ ಇಲ್ಲವೆ ನನ್ನ ಗಂಡನಿಗೆ ? ನಾಗರತ್ನನ ಗಂಡನಿಗಾದರೆ ಅವಳೇ ಕವರಿನಲ್ಲಿಟ್ಟು ರವಾನಿಸಿಕೊಡಬೇಕು ಸ್ಟಾಂಪುಗಳನ್ನ . . . ನನ್ನ ಚಿನ್ನಕ್ಕೆ ಅದೇನು ಬೇಕಿಲ್ಲ. ನಾಟ್‌ಪೇಡಾದರೂ ಹಾಕುತ್ತಾರೆ, ನನಗೇ ತಲಪಲಿ ಅಂತ. . . ಅಯ್ಯೋ ! 'ಚಿನ್ನ,' ಅಂತ ನಾನೂ ಅಂದುಬಿಟ್ಟೆ ! ಇವರ ಹುಚ್ಚು ನನಗೂ ಹಿಡೀತಿದೆ. . . ಹಿಡಿಯದೆ ? ಹಿಡಿಯುವುದೇ ಧರ್ಮ, ನ್ಯಾಯ.

ಹತ್ತು ಎಣಿಸುವಷ್ಟು ಟೈಂ ಆಗಲೇ ಮುಗಿದಿರಬೇಕು. ಒಳಗೆ ಹೋಗಿ ಗಡಿಯಾರ ನೋಡಿಕೊಂಡು ಬರಲೆ ? ಅಷ್ಟರಲ್ಲಿ ಅವನು ಬಂದೇ ಬಿಟ್ಟರೆ ? ಗಡಿಯಾರ ಠಣ್ ಅಂತ ಹನ್ನೊಂದರ ಒಂದನ್ನ ಬಾರಿಸೋ ಹೊತ್ತಿಗೆ ಸರಿಯಾಗಿ ಅಂಚೆಯವನು ನನ್ನ ಕಣ್ಣಿಗೆ ಬಿದ್ದ ಅಂದ್ರೆ, . . .ಅದು ಶುಭ ಸೂಚನೆ; ಅವನಿಗೆ ಎರಡಾಣೆ ಇನಾಮು. ಇವತ್ತು ಈಗಲೇ . . . ಅವನ ಹಿಂದೇನೆ . . ಅವರು ಏಕೆ ಬರಬಾರದು ? ಬರ್ತ್ತಾರೆ ಎಂಬ ಭರವಸೆ . . ದೇವರೇ . . ನಾನಿನ್ನೇನೂ ಕೇಳೋದಿಲ್ಲ . ಅವರಿಗೆ ಸಾವಿರ ರೂಪಾಯಿ ಪಗಾರ ಕೊಡಿಸಿಬಿಡು. . . . ದೀಪಾವಳಿ ತಿಂಗಳಲ್ಲಿ ಮಾತ್ರ . . ಇಲ್ಲ. . . ಬೇಡ. . ಏರೋಪ್ಲೇನ್‌ದೊಂದು ಬಿಟ್ಟ ಟಿಕೀಟು ಕೊಡಿಸಿಬಿಡು. . ಹಾಗೆಯೇ, ಒಂದು ವಾರದ ಸೂಟೀನೂ. . . ವಾರ ? ಏನೇ ಅದು . . ಹುಚ್ಚಿ. . .? ವಾರ ಅಂದ್ರೆ ಏಳೇ ದಿವಸ, ಗೊತ್ತೇನೇ ? ಹೌದು. . ಏರೋಪ್ಲೇನ್ ಈ ಊರಲ್ಲಿ ಇಳಿಯೋದೇ ಇಲ್ಲವಲ್ಲಾ . . . ಊರಿನ ಮೇಲೆ ಹಾರಿಹೋದರೆ ನನಗೇನು ಬಂತು ?

ಅದೆಲ್ಲ ಮುಂದಿನ ಮಾತು ? ಶ್ರಾವಣದಲ್ಲಿ ಮದುವೆಯಾಗಿ, . . . ಭಾದ್ರಪದದಲ್ಲಿ ನೌಕರಿ ಸಿಕ್ಕಿ, ಆಶ್ವೀಜದಲ್ಲಿ ರಜ ಕೊಡುತ್ತಾರೆಯೇ ? ಕೊಡದೆ ಹೋದರೆ, ಗಲಾಟೆ ಎಬ್ಬಿಸಿ ಸತ್ಯಾಗ್ರಹ ಹೂಡಿ ಕಿತ್ತುಕೊಳ್ಳಬೇಕು. . . ಗಂಡಸು, ಗಂಡ ಅಂದ್ರೆ ಅಷ್ಟು ಘಾಟ ಇರಬೇಡವೆ ? ಆದರೆ, ಇವರಿಗೆ . . . ಉಂಟೋ ಇಲ್ಲವೋ ? ಮುತ್ತು ಹವಳ ಅಂತ ಬರೆಯೋ ಕೈಗೆ, ಹಾಗೆ ಹೆದರಿಸಿ ಬರೆದು ಮೇಲಧಿಕಾರಿಗಳನ್ನ ಗಾಬರಿಪಡಿಸೋ ಧೈರ್ಯ. . . ಇರುತ್ತದೆ ! ಇರುವುದಿಲ್ಲವೆ ? ಇಷ್ಟಕ್ಕೂ ಇಂಥದ್ದೆಲ್ಲ ನಾನು ಯೋಚನೆ ಮಾಡೋದು. . ಅನುಮಾನಪಡೋದೇ ತಪ್ಪು. . ನನ್ನ ಮನಸ್ಸಿನಲ್ಲಿ ಇಂಥ ಅನುಮಾನ ಉದಯಿಸೋಗಳಿಗೆ ವಿಷಗಳಿಗೆಯಾಗಿದ್ದುಬಿಟ್ಟರೆ, ಆ ವಿಷಯ ನಿಜವಾಗಿ ಸ್ಥಿರಪಟ್ಟರೂ ಪಡಬಹುದು. . . ರಜೆ ಕೊಟ್ಟೇಕೊಡುತ್ತಾರೆ, ಕೊಡದೆ ಹೋದರೆ, ಹೊಡೆದೇ ತರುತ್ತಾರೆ. . . ಅದೇ ವಿಷಯ ಬರೆದೇ ಬರೆಯುತ್ತಾರೆ. . ಅಂಚೆಯವನು ತಂದೇತರುತ್ತಾನೆ.

ಒಂದು ಎರಡು ಮೂರು ನಾಲ್ಕು. . . ಥೂ ! ಎಣಿಸಿದ್ದೊಂದು ಫಲಿಸಿದ್ದೊಂದು ಅಂತ ಗಾದೆ ಇದೆ. ಅಂದರೆ, ಎಣಿಸುವುದು ಸರಿಯಲ್ಲ . . ಇಕೋ! ಈ ಕಲ್ಲು ತೆಗೆದುಕೊಂಡು ಆ ಸಂಪಿಗೆ ಮರಕ್ಕೆ ಹೊಡೆಯುತ್ತೇನೆ. . ಮರಕ್ಕೆ ತಗುಲಿದರೆ, ಇವತ್ತು ಪತ್ರ ಬರುತ್ತೆ . . . ಹಾ! . . . ಈಗ ಎಸೆದದ್ದು ಬರೇ ಪರೀಕ್ಷಾರ್ಥ . . . ಗುರಿ ಗೊತ್ತು ಮಾಡುವುದಕ್ಕಾಗಿ ಮಾತ್ರ. . ಈಗ ಎಸೆಯುವುದೇ ಲೆಕ್ಕಕ್ಕೆ... ಅಯ್ಯೋ ಹುಚ್ಚಿ! ಒಂದು ತಪ್ಪಿದರೆ ಮೂರು! ಅದಲ್ಲವೆ ಶಾಸ್ತ್ರ ? ಹಾ ! ತಗುಲಿತು ! ನೋಡಿದೆಯಾ.... ದೇವರು ತೋರಿಸಿಕೊಟ್ಟ.... ಇವತ್ತು ಅವರ ಸಂಗಡ ದೇವಸ್ಥಾನಕ್ಕೆ ಹೋಗಿ.... ಬೇಡ. ಅಲ್ಲೆಲ್ಲ ಜನರ ಗುಂಪು ಜಾಸ್ತಿ.. ಪಾರ್ಕಿನ ಕಡೆ ಹೋಗಿ, ಆ ಮೂಲೆ ಬೆಂಚು.... ಅದನ್ನ ಊರಿನವರು ಯಾರೂ ಪತ್ತೆ ಹಚ್ಚಿಲ್ಲ.. ಅದನ್ನ ಅವರಿಗೆ ತೋರಿಸಿಕೊಡ್ತೇನೆ.. ಅಲ್ಲಿ ಕೂತು.. ಇಬ್ಬರೂ ಸೇರಿ.. ದೇವರಿಗೆ ಥ್ಯಾಂಕ್ಸ್ ಹೇಳೋಣ.

ಅದು ಯಾರದು ? ಬೀದಿ ಕೊನೇಲಿ ? ಅಂಚೆಯವನೇ.. ಅಬ್ಬ.... ಕೊನೆಗೂ ಬಂದ ಮಾರಾಯ.. ಇವತ್ತೇನು ಸಾಯಕಲ್ಲು ಹತ್ತಿ ಬಂದ ಇವ ? ಚೀಲಾನೂ ಇಲ್ಲ.. ಓ ! ಸ್ಯಾನಿಟರಿ ಸಿಬ್ಬಂದಿ.. ಹಾಳು ಖಾಕಿ ಬಟ್ಟೆ, ಯಾರು ಯಾರೋ ತೊಡುವುದಕ್ಕೆ ಹತ್ತಿದಾರೆ.. ದೇವರೇ! ಹೇಳಿಬಿಡು, ಒಂದೇ ಬಾರಿ.... ಇವತ್ತು ಪತ್ರ ಬರುತ್ತೋ ಇಲ್ಲೋ ? ಅಕೊ ! ಒಂದು ಎಲೆ ಉದುರಿತು. ನನ್ನ ಎಡಗಡೆಗೇ ಬಿತ್ತು.. ಬಂದೇ ಬರುತ್ತೆ.. ಹ್ದ-ಬರೆಯದೆ ಇರುತ್ತಾರೆಯೆ ? ನನಗಿಂತ ಅವರಿಗೇ ಆತುರ ಇರುತ್ತೆ... ನಮಗೆ ಲಜ್ಜೆ ಇರಬೇಕಾದ್ದು ನ್ಯಾಯ. ಗಂಡಸರಿಗೇನು ಲಜ್ಜೆಯೇ, ಹೆದರಿಕೆಯೇ..? ಅದೂ ಅಲ್ಲದೆ, ದೀಪಾವಳಿ ಅಂದ್ರೆ ಅವರಿಗೆ ಮಾವ ಅದೇನೇನೋ ತೆತ್ತು ಬಿಡಬೇಕಲ್ಲ. ಅದನ್ನೆಲ್ಲ ಹೊಡೆದುಕೊಂಡು ನೋಡೋಣ ಎಂಬ ಆಶೆ ಬೇರೆ ಇರುತ್ತೆ ಎಂಥವರಿಗೂ. ಇವರಿಗಿಲ್ಲದೆ ಇರಬಹುದು...

ಅವರೇನೋ ನನ್ನನ್ನ ಮಾತಾಡಿಸೋಣ ಅಂತಲೇ ಬರಬಹುದು.. ಆದರೂ.. ಅಕೊ! ಠಣ್..

ಈಗ.. ಈಗ.. ಒಂದು.. ಎರಡು.. ಮೂರು.. ಥೂ.. ನಾನು ಯಾಕೆ ಹೀಗೆ ಪರದಾಡಬೇಕು? ಹೆಣ್ಣಿನ ಬಾಳು ಕಣ್ಣೀ. . . ಹೆಣ್ಣುಮನ ಚಂಚಲ.. ಬರದೆ ಇದ್ದರೆ ಅಷ್ಟೇ ಹೋಯ್ತು. ಬರೆಯದೆ ಇದ್ರೆ ಏನು ಮಹಾನಷ್ಟ? ಬೇಕಾದರೆ ಬರ್ತಾರೆ. . ಅವರಿಗೆ ಬೇಡವಾದರೆ, ನನಗೆ ಮಾತ್ರ ಏನು? ದೇವರೆ! ನಾನು ನಿಮಗೆ ತೊಂದರೆ ಕೊಟ್ಟೆ . . ನೀವೇನೂ ಶ್ರಮವಹಿಸಬೇಡಿ . . ಅವರಾಗಿ ಅವರು ಬರೆದರೆ ಬರೆಯಲಿ, ಬಂದರೆ ಬರಲಿ. ಇಲ್ಲಿಗೆ ಬರದೆ, ನನ್ನನ್ನ ಸಂಪೂರ್ಣ ಮರೆತು, ಅವರು ಅಲ್ಲಿ ಸುಖವಾಗಿ ದೀಪಾವಳಿ ಹಬ್ಬದ ದಿನ ಯಾರಾದರೂ ಸ್ನೇಹಿತರ ಮನೆಗೆ ಹೋಗಿ, ಇಲ್ಲ, ಅವರ ಹಳೆಯ ಕಾಲೇಜು ಹಾಸ್ಟಲಿಗೆ ಹೋಗಿ, ಒಬ್ಬಟ್ಟು ತಿಂದು ತಿಂದು ತಿಂದು ತಿಂದು ತೇಗಲಿ . . ಹೊಟ್ಟೆ ನೋವು ಬರಲಿ. . . . ಸಾಯಂಕಾಲ ಯಾರ ಜೊತೆ ಬೇಕಾದರೂ ವಾಕಿಂಗ್ ಹೋಗಲಿ. . . ಯಾವಳನ್ನಾದರೂ ಆ ಊರು ಪಾರ್ಕ್ ಬೆಂಚಿನ ಮೇಲೆ ಕೂಡಿಸಿಕೊಳ್ಳಲಿ. . . ದೇವರೆ! ನೀವೇನೂ ತಿದ್ದಬೇಡಿ. . ಅವರು ಯಾವ ಪಾತಾಳಕ್ಕಾದರೂ ಬೀಳಲಿ. . . . ಹುಂ. . .

ಛೆ. . . ನಾನು ಇಲ್ಲಿ ನಿಂತುಕೊಂಡು ಬೀಳಲಿ ಅಂದ್ರೆ ಬಿದ್ದುಬಿಡ್ತಾರೆಯೆ? ಬೀಳುತ್ತಾರೆ ಎಂಬ ಭಯ ಇದ್ದರೆ, ನಾನು ತಾನೆ ಹೇಳುತ್ತೇನೆಯೆ? ಇವೆಲ್ಲ ಒಂದು ನಟನೆ, ಅಲ್ಲವೆ, ದೇವರೆ? ನಿನಗೆ ಗೊತ್ತಿಲ್ಲವೆ? ನೀನು ಸರ್ವಾಂತರ್ಯಾಮಿ. . . . ಅದು ಸರಿ! ನಮ್ಮ ತಾಯೀನೂ ಹೀಗೆಯೇ ಅಪ್ಪ ದೀಪಾವಳಿಗೆ ಬರೋವಾಗ ತಳಮಳಿಸುತ್ತಿದ್ದಳೋ ಏನೋ? ಪಾಪ! ಅವಳನ್ನ ಅಡಿಗೆ ಮನೇಲಿ ಕೂರಿಸಿ ನಾನಿಲ್ಲಿ ಬಂದು ನಿಂತು. . . ಅವಳೇ ತಾನೆ ಹೇಳಿದ್ದು. . ನಿನ್ನ ಪಾಡಿಗೆ ನೀನು ನಾಲ್ಕು ದಿನ ಹಾಯಾಗಿರು.. ಪಾತ್ರ ತಿಕ್ಕಬೇಡ.. ಹೊಗೆಯಾಡಿಸಬೇಡ ಮುಖಕ್ಕೆ ಅಂತ. . . ತಾಯಿಗೆ ನನ್ನ ಮೇಲೆ ಎಷ್ಟು ಪ್ರೀತಿ; ಅಥವಾ ನನ್ನ ಮೇಲಲ್ಲ, ಅವರ ಮೇಲೆ.. ಅಳಿಯದೇವರ ಮೇಲೆ ಭಕ್ತಿ... ಅದನ್ನರಿತು ಅವರೂ ಬಂದರೆ ತಾನೆ? ಶನಿವಾರವಾಯಿತಲ್ಲ, ಆಗಲೇ? ನಾಳೆ ಭಾನುವಾರ,ಹಾಳ್ಪುಪಾಲಿನವರು ಕೈಕಟ್ಟಕೊಂಡು ಸಂಪು ಹೂಡೋ ದಿನ. . ದೀಪಾವಳಿ ಹಿಂದಿನ ಭಾನುವಾರ... ವರ್ಷಕ್ಕೊಂದು ಭಾನುವಾರ. . . ಕೊಂಚ ಎದ್ದು ಓಡಾಡಬಾರದೆ? ಇವರಿಗೇನು ಬಂತೊ ರೋಗ? ಸದ್ಯ; ನಾಳೆ ಭಾನುವಾರವಾದರೂ ಇವತ್ತು ದೇವರ ದಯೆಯಿಂದ ಶನಿವಾರವಲ್ಲ. . . ಅಷ್ಟಕ್ಕೇ ನಮ್ಮ ತೃಪ್ತಿ . . .

ಅಯ್ಯೋ! ಠಂ. . . . ಡಾ! ಅತ್ತಲಾಗಿನ ಕೊನೆಯಿಂದ ಇವನು ಇತ್ತಲಾಗಿನ ಕೊನೆಯು ಮನೆಮುಂದೆ ನನ್ನ ಕಣ್ಣಿಗೆ ಬೀಳದೆ ಹೇಗೆ ಧಾವಿಸಿದ? ಹಾಗಾದರೆ ಪತ್ರ. . ? . . . ಎಂದೂ ಇಲ್ಲದ್ದು ಇವನು ಇವತ್ತು ಈ ತುದಿಯಿಂದ ಹಂಚಿಕೆ ಪ್ರಾರಂಭಿಸಿದನೋ ಏನೊ! ಅಥವಾ ಇವನೇನು ಹೊಸಬನೋ? ಅಥವಾ, ಹುಂಬನೋ? . . . ಹೌದೆ! ಇವನು ಹಳಬನೇ . . . ಅಕೊ! ಕುಂಟುತ್ತಿದಾನಲ್ಲ, ಹಳಬನಂತೆಯೆ? ಹಳಬನಾದರೂ ಈ ಹೊಸ ರೀತಿ ಏಕೆ? ಅತ್ತಲಾಗೆಯೇ ಹೋಗುತ್ತಿದಾನೆ ದಡ್ಡ.. ಕೂಗೋಣವೆ, ಕೇಳೋಣವೆ? ಎದುರು ಮನೆ ಹುಡುಗನನ್ನ ಕರೆದು ಅವನ ಹತ್ತಿರಕ್ಕೆ ಓಡಿಸೋಣವೆ? . . . .

ಆಯಿತು, ನನ್ನ ಜನ್ಮ. ಬೆಂಗಳೂರು, ದೊಡ್ಡ ಷಹರು, ಕಾಸಿಗೊಂದು ಕೊಸರಿಗೆರಡು . . . ಕಾಲೇಜು ಸ್ನೇಹದ್ದು ಬೇರೆ ನಲವತ್ತೆಂಟು . . ನನ್ನನ್ನ ಬಿಟ್ಟೇಬಿಟ್ಟರು . . . ನಾನು ಇಂಟರ್ ಈ ಬಾರಿ ಫೆಯಿಲಾದದ್ದೇ ತಪ್ಪು . . ಪಾಸಾಗಿದಿದ್ದರೆ, ನಾನು ಬೆಂಗಳೂರಿಗೆ ಹೋಗಿ, ಆ ನಾರಿಗಳನ್ನೆಲ್ಲ ಓಡಿಸಿ, ಅವರ ಸಂಗಡವೇ ಸದಾ ಇರುತ್ತಿದ್ದೆ. . . ಕೆಲಸ ಕೆಡ್ತು. ನಾನಿದ್ದೇನು ಫಲ? ದೇವರಿದ್ದೇನು ಫಲ? ಟಪಾಲಿದ್ದೇನು ಫಲ?

ಅವರು ಬಂದರೂನೂ ನಾನು ಮುಖ ನೋಡೋದಿಲ್ಲ. . ಅವರು ಮಾತುಕೊಟ್ಟರೂ . . ಮೂರು ಗಂಟೆ ಸತಾಯಿಸುತ್ತೇನೆ . . ಬಿಂ ಅಂತ ಗೋಡೆ ಕಡೆ ತಿರುಗಿ ನಿಂತೇ ಇರುತ್ತೇನೆ. . ಈ ದುರಹಂಕಾರ . . ದುರಾಚಾರ . . ಇದಕ್ಕೆಲ್ಲ ತಕ್ಕ ಶಿಕ್ಷೆ ಮಾಡಲೇಬೇಕು . . . ಥೂ. . ಯಾರಿಗೂ ಹೇಳುವ ಹಾಗೂ ಇಲ್ಲ . .

ಹೆಣ್ಣಿನ ಬಾಳು ಕಣ್ಣೀರೇ . . . ನಿಜ ! ಆ ಅಂಚೆಯವನಿಗೂ ನನ್ನ ಕಂಡರೆ, ಅಸಡ್ಡೆ. ಆ ಅಂಚೆ ಪೆಟ್ಟಿಗೆಗೂ ನನ್ನ ಕಂಡರೆ ಹೊಟ್ಟೆಕಿಚ್ಚು. . ಆ. . ಅವರಿಗೂ ನನ್ನ ಕಂಡರೆ, ತಾತ್ಸಾರ. . ಅವತ್ತು ಅಂಗೈ ಜಿಗುಟಿದರು, ಇವತ್ತು ಹೃದಯಾನೇ ಜಿಗುಟುತ್ತಿದಾರೆ. . ಜಿಗುಟಲಿ. . ನನ್ನ ಬಾಳು ನಾನು ನೋಡಿಕೊಳ್ಳುತ್ತೇನೆ. . . ನನಗೂ ಸೇಡು ತೀರಿಸೋ ಸಮಯ ಬರುತ್ತೆ . . . ಕಾಯ್ತಾ ಇರ್ತೀನಿ . . ಇನ್ನು ತಂತೀನೇ ಗತಿ. . . ಹೌದೆ! ತಾರು ಕಳುಹಿಸಿದರೂ ಕಳುಹಿಸಬಹುದು . . ತಾರು ಬರುವ ತನಕ . . .

ಅವರ ತಾರು ಬರುವ ತನಕ ನಾನು ಊಟ ಮಾಡುವುದಿಲ್ಲ. . ನೀರು ಕುಡಿಯುವುದಿಲ್ಲ. . ಆ ದಾಹ ಅವರಿಗೆ ಹತ್ತಲಿ... ಆ ಹಸಿವೆ ಅವರನ್ನೂ ಪೀಡಿಸಲಿ.. ಎರಡು ದೇಹ ಒಂದೇ ದಾಹ ಅಂತ ಬರೆದಿದ್ದರಲ್ಲಾ.. ಲೊಟ್ಟೆ ಲೊಸಕು ಅಂತ.. ಕಾಡಿಸಲಿ ಅವರನ್ನೂವೆ ಅದೇ ದಾಹ... ಅದೇ ಸರಿ.

ಅಥವ, ಪತ್ರ ತಂತಿ ಇವೆಲ್ಲ ಏಕೆ, ತಾನೇ ಬಂದು ಬಿಡುವ ಅಂತ ನೆಟ್ಟಗೆ ಅವರೇ ಬರುತ್ತಿದಾರೊ ಏನೊ ರೈಲಲ್ಲಿ? ಬರಲಿ, ನೋಡುವ ... ಐವತ್ತು ಎಣಿಸುವುದರೊಳಗೆ ಬಂದೇ ಬಿಡಬೇಕು, ಮತ್ತೆ... ಒಂದು ಎರಡು ಮೂರು ನಾಲ್ಕು... ಐದು... ಬೇಡ.. ನೂರರ ತನಕ ಎಣಿಸುತ್ತೇನೆ.. ದೇವರೇ... ಬೇಗ ಕಾಣಿಸು... "ಅತ್ತೆ ಮಗನೆ! ಮುತ್ತಿನ ಚೆಂಡೆ... ಅವರಿವರ ಮಾತು ಕೇಳಬೇಡಪ್ಪ ... ಬಂದೇ ಬಿಡು, ಮಾವನ ಮಗಳೆ.. ಮಲ್ಲಿಗೆ ಅರಳೆ" ಇಕೊ! ಮಲ್ಲಿಗೆಯನ್ನೆ ಮುಡಿದು ನಿಂತಿದೇನೆ.... ನೂರರ ತನಕ...ಹತತ್ತಾಗಿ ಎಣಿಸುತ್ತೇನೆ... ಹತ್ತು...ಇಪ್ಪತ್ತು...ಮೂವತ್ತು... ನಾಲವತ್ತು..ಐವತ್ತು...ಅರವತ್ತು...ಒಬ್ಬರನ್ನೂ ಕಾಣೆನಲ್ಲಾ ಬೀದೀಲಿ...ಎದುರು ಮನೆ ಹುಡುಗ ನನ್ನ ಕರೆದು ಬೀದಿ ಕೊನೇಲಿ ನಿಲ್ಲೋ, ಯಾರಾದರೂ ಬರುವದು ಕಂಡರೆ ಸನ್ನೆ ಮಾಡೋ ಅಂತ ಹೇಳೋಣವೆ? ಥೂ..ನಾಚಿಕೆಗೇಡು..ಗಂಡಸರು ಮಾಡೋದಿಲ್ಲ ಅಂಥ ಕೆಲಸ. ಬಂದರೆ ಬರಲಿ... ಬರದೆ ಇದ್ದರೆ ಅಪ್ಪನಿಗೆ ಉಡುಗೊರೇನೇ ಲಾಭ. ಹುಂ...ಅದೂ ಸರೀನೆ....ದೇವರೇ! ಯಾಕೆ ಹೀಗೆ ಹಿಂಸೆ ಕೊಡ್ತೀಯಾ? ಅನಾಥೆ...ಅನಾಥೆ ಇವಳೊಬ್ಬಳಾಜನ್ಮರೋತಿ... ಹತ್ತು...ಇಪ್ಪತ್ತು ಮೂವತ್ತು..ಮೂವತ್ತೊಂದು..ಮೂವತ್ತೆರಡು.. ಮೂವತ್ತಮೂರು....

ಶ್ರೀ. ವೆಂಕಟರಾವ ನಾಯಕ
ಅವರಿಂದ



ಪ್ರಜಾಪ್ರಭುತ್ವದ ಆಹ್ವಾನ

ಎಲ್ಲರೂ ಪ್ರಜಾಪ್ರಭುತ್ವದ ಹೆಸರಲ್ಲಿ ಕೂಗಿಕೊಳ್ಳುವವರೆ. ಆದರೆ ಇಂದಿನ ಜಗತ್ತಿನಲ್ಲಿ ಇದು ಎಲ್ಲೆಲ್ಲಿ ಎಷ್ಟೆಷ್ಟು ಸಫಲವಾಗಿದೆ ? ಈ ಸಾಫಲ್ಯಕ್ಕೆ ಮೊದಲು ಪ್ರಜಾಪ್ರಭುತ್ವದ ಅಧ್ವರ್ಯುಗಳು ಏನೇನು ಪೂರ್ವಸಿದ್ಧತೆ ಮಾಡಬೇಕು ? ಈ ಬಗ್ಗೆ ಹೇಳುವವರು ವಿರಳ. ಶ್ರೀ. ನಾಯಕರು ಇದನ್ನು ವಿವರಿಸಿದ್ದಾರೆ.

ಸ್ವತಂತ್ರ ಭಾರತವು ಹೊಸ ಸಂವಿಧಾನವನ್ನು ಅಂಗೀಕರಿಸುವಾಗ ಪ್ರೌಢಮತಾವಲಂಬಿಯಾದ ಪ್ರಜಾಪ್ರಭುತ್ವ ಪದ್ಧತಿಯೇ ತನ್ನ ಪುರೋಭಿವೃದ್ಧಿಗೆ ಯೋಗ್ಯವಾದುದೆಂದು ಗೊತ್ತು ಮಾಡಿಕೊಂಡಿದೆ. ಆ ಗೊತ್ತಿನ ಪ್ರಕಾರ ಇಂದು ಪ್ರಜಾಪ್ರಭುತ್ವಬ ಮಹಾಪ್ರಯೋಗದ ನಾಂದಿಯನ್ನು ಕೈಕೊಳ್ಳಲಣಿಯಾಗಿದೆ, ಜಗತ್ತಿನ ಎಲ್ಲ ರಾಷ್ಟ್ರಗಳು ಈ ಪ್ರಯೋಗದ ಯಶೋಪಯಶಗಳನ್ನೂ ಭವಿತವ್ಯವನ್ನೂ ಅತ್ಯಂತ ಕುತೂಹಲದಿಂದ ನಿರೀಕ್ಷಿಸುತ್ತಿವೆ. ಹಾಗೆಯೆ ನಮ್ಮ ನಾಡಿನ ಹಿರಿಯ ರಾಜನೀತಿನಿಪುಣರೂ ಲೋಕಸೇವಕರೂ ಈ ಪ್ರಯೋಗದ ಆಗುಹೋಗುಗಳಲ್ಲಿ ಆಸ್ಥೆ ಆಸಕ್ತಿಗಳುಳ್ಳವರಾಗಿರುವರು. ಒಂದು ಬಗೆಯಿಂದ ಪ್ರಜಾಪ್ರಭುತ್ವವೀಯುತ್ತಿರುವ ಈ ಆಹ್ವಾನವನ್ನು ಭಾರತೀಯರು ಯಾವ ರೀತಿಯಲ್ಲಿ ಎದುರಿಸಬಲ್ಲರು? ಅವರ ಸಿದ್ಧತೆಯೇನು? ಎಂದು ಬಹುಜನರು ಲವಲವಿಕೆಯುಳ್ಳವರಾಗಿರುವರು. ವಿಶೇಷತಃ ಈ ಆಹ್ವಾನದ ಸ್ವರೂಪವನ್ನರಿತುಕೊಳ್ಳುವ ಅವಶ್ಯಕ ತಿಳಿವಳಿಕೆಯು ಜನಸಾಮಾನ್ಯದಲ್ಲಿ ಉಂಟೆ? ಇರದಿದ್ದರೆ ಅದನ್ನು ಅವರಲ್ಲಿ ಹರಡುವ ಬಗೆಯಾವುದು? ಇವೇ ಮೊದಲಾದ ಅಂಶಗಳು ಇಂದು ಅನೇಕ ಭಾರತೀಯರ ಅಂತರಂಗಮಂಥನವನ್ನು ನಡೆಸಿವೆ. ಈ ಪರಿಸ್ಥಿತಿಯಲ್ಲಿ ಭಾರತೀಯ ಪ್ರಜಾಪ್ರಭುತ್ವದ ಕಟ್ಟುನಿಟ್ಟುಗಳನ್ನು ಒಲವುನಿಲವುಗಳನ್ನು ಹೊಲಬುಹೊಳವುಗಳನ್ನು ಕುರಿತು ಕೆಲ ಮಾತುಗಳನ್ನು ಹೇಳುವದು ಅಪ್ರಸ್ತುತವಾಗಲಾರದು.

ಜಾನ ಡ್ಯೂಯಿ ಎಂಬ ಅಮೇರಿಕೆಯ ತತ್ವಜ್ಞಾನಿಗಳೂ ಅಧ್ಯಕ್ಷ ಪೀಠಕ್ಕಾಗಿ ಸೆಣಸಾಡಿದವರೂ ಆದ ಹಿರಿಯ ಲೇಖಕರು 'ಮಾನವನ ಸಮಸ್ಯೆಗಳು' ಎಂಬ ತಮ್ಮ ಅಮೋಘವಾದ ಗ್ರಂಥದಲ್ಲಿ ಪ್ರಜಾಪ್ರಭುತ್ವದ ಇಂದಿನ ರೂಪಗುಣಗಳನ್ನು ಕೂಲಂಕಷವಾಗಿ ವಿವೇಚಿಸಿರುವರು. ಅದರಲ್ಲಿ ಒಂದೆಡೆ ಪ್ರಜಾಪ್ರಭುತ್ವ ಮತ್ತು ಶಿಕ್ಷಣ ಇವುಗಳ ಸಂಬಂಧವು ಅನ್ಯೋನ್ಯವೂ ಪ್ರತಿ ಸಹಕಾರಿಯೂ ಜೀವಾಳದ್ದೂ ಆಗಿದೆಂದು ಹೇಳಿರುವರು. ಅಷ್ಟೇಕೆ? ಅದು ಒಂದು ಶೈಕ್ಷಣಿಕ ತತ್ವವೇ ಆಗಿದೆ. ಒಂದು ಉಪಾಯ ಧೋರಣವೇ ಆಗಿದೆಂದು ಸಹ ನುಡಿದಿರುವರು. ಅರ್ಥಾತ್ ಪ್ರಜಾಪ್ರಭುತ್ವದಲ್ಲಿ ನಾಗರಿಕನ ಶಿಕ್ಷಣವು ಅವ್ಯಾಹತವಾಗಿ ನಿರಂತರವಾಗಿ ಸಾಗುತ್ತಿರುವದು; ಸಾಗಲೇಬೇಕೆಂಬುದೇ ಅವರು ಹೇಳಿದ ಮಾತಿನ ರಹಸ್ಯವಾಗಿದೆ. ಇದನ್ನೇ ಅಬ್ರಹಾಂ ಲಿಂಕನ್ನರು ಪ್ರಜಾಪ್ರಭುತ್ವವೆಂದರೆ ಜನರ, ಜನರಿಂದ, ಜನರಿಗಾಗಿರುವ ಪ್ರಭುತ್ವವೆಂಬ ತಮ್ಮ ಅಮೌಲ್ಯವಾದ ಮಾತುಗಳಲ್ಲಿ ಸೊಗಸಾಗಿ ಬಣ್ಣಿಸಿರುವರು. ಜನರಿಂದ ಜನರಿಗಾಗಿ ರಾಜ್ಯವಾಗಬೇಕಾದರೆ ಅವರ ಆಶೆ ಆಕಾಂಕ್ಷೆ, ಅವರಿಟ್ಟುಕೊಂಡಿರುವ ಆದರ್ಶ ಸಮಾಜದ ರೂಪರೇಷೆಗಳು ಹಾಗು ಸಾಮಾಜಿಕ ಸಮಸ್ಯೆಗಳನ್ನು ಬಿಡಿಸುವಲ್ಲಿ ಅನುಸರಿಸಬೇಕಾದ

ಮಾರ್ಗ ಇವೇ ಮೊದಲಾದವುಗಳ ಸ್ಪಷ್ಟ ಕಲ್ಪನೆಯು ಜನಸಾಮಾನ್ಯಕ್ಕಿರಬೇಕಾಗುವದು. ಒಂದು ಸಮಯ ಅದು ಒಮ್ಮೆಲೆ ಜನಸಾಮಾನ್ಯದಲ್ಲಿ ಒಡಮೂಡಲಾರದೆಂದು ಒಪ್ಪಿಕೊಂಡರೂ ಸಮಾಜಧುರೀಣರಲ್ಲಿಯಾದರೂ ಆ ಕಲ್ಪನೆಯು ನಿಚ್ಚಳವಾಗಿರಬೇಕೆಂಬುದನ್ನು ಅಲ್ಲಗಳೆಯಲಾಗದು. ಈ ಅಂಶವನ್ನು ವಿವರಿಸುವಾಗ ಡ್ಯೂಯಿಯವರು ಒಂದು ಮಾರ್ಮಿಕವಾದ ಕಥೆಯನ್ನು ಹೇಳಿರುವರು. ಅದು ಹೀಗಿದೆ: "ನೀವು ದೇವರಾಗಿದ್ದರೆ ಈ ದೇಶಕ್ಕಾಗಿ ಏನು ಮಾಡಬಲ್ಲಿರಿ?" ಎಂದು ಒಬ್ಬ ಹೆಂಗಸು ಅಮೇರಿಕೆಯ ಸುಪ್ರಸಿದ್ಧ ಮುತ್ಸದ್ದಿಯೋರ್ವನನ್ನು ಕೇಳಿದಳಂತೆ! ಆಗ ಅವನು "ಸರಿ, ಅದು ಒಂದು ದೊಡ್ಡ ಪ್ರಶ್ನೆಯೆ. ಜನರನ್ನು ಆಪಾದಮಸ್ತಕ ಅವಲೋಕಿಸುವೆ ಮತ್ತು ಅವರಿಗೇನು ಬೇಕೆಂಬುದನ್ನು ನಿರ್ಧರಿಸುವೆ. ನಂತರ ಪ್ರಯತ್ನ ಮಾಡಿ ಅದನ್ನವರಿಗೆ ನೀಡುವೆ" ಎಂದು ಉತ್ತರಿಸಿದನಂತೆ! ಅದಕ್ಕೆ ಅವಳು "ಸರಿ, ನೀವು ಈ ಉತ್ತರವನ್ನು ಕೊಡುವಿರೆಂದು ಊಹಿಸಿದ್ದೆ. ಜನರಿಗೆ ಬೇಕಾದುದನ್ನು ಕೊಡಲು ಪ್ರಯತ್ನ ಮಾಡುವ ಮೊದಲು ಅವರಿಗೆ ಏನು ಬೇಕೆಂಬುದನ್ನು ಕೇಳುವ ಜನರಿರುವರು" ಎಂದು ಅಂದಳಂತೆ! ಈ ಕಥೆಯಲ್ಲಿರುವ ರಹಸ್ಯವೇನು? ಎಂದು ಕೇಳಬಹುದು. ಜನರಿಗೆ ಏನು ಬೇಕು? ಅವರ ಅಭಿರುಚಿಯೇನು? ಆವಶ್ಯಕತೆಗಳಾವುವು? ಅವರ ಕಲ್ಪನೆಗಳ ಸ್ವರೂಪವೆಂತು? ಇವೇ ಮುಂತಾದವುಗಳ ಬಗೆಗೆ ಅವರಿಗೇ ಪ್ರಶ್ನೆಗಳನ್ನು ಕೇಳಿ ಉತ್ತರಗಳನ್ನು ಪಡೆವುದು ಪ್ರಜಾಪ್ರಭುತ್ವದ ಜೀವಾಳವೆಂಬ ಅಂಶವು ಇದರಿಂದ ವ್ಯಕ್ತವಾಗುತ್ತದೆ. ಆದರೆ ಈ ಮಾತನ್ನು ಅನೇಕರು ಸಿದ್ಧಸಂಗತಿಯೆಂದು ಮೊದಲೇ ಗೃಹೀತವಾಗಿಟ್ಟುಕೊಂಡು ತಮಗೆ ಬೇಕಾದುದೇನೆಂಬುದನ್ನು ಕುರಿತು ಅವಶ್ಯವಾದ ಆಲೋಚನೆಯನ್ನು ಕೂಡ ಮಾಡುವದಿಲ್ಲ. ಆದರೆ ಇದು ಸರಿಯಲ್ಲ. ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ಪ್ರಜೆಯು ತನ್ನ ಮಟ್ಟಿಗೆ ತನಗೇನು ಬೇಕೆಂಬುದನ್ನು ಆಲೋಚಿಸಬೇಕಲ್ಲದೆ ಅದಕ್ಕಿರುವ ತೊಂದರೆಗಳ ವಿಚಾರವನ್ನು ಮಾಡಬೇಕಾಗುತ್ತದೆ. ಅಂದರೆಯೆ ಪ್ರಜಾಪ್ರಭುತ್ವದ ಪ್ರಯೋಗಕ್ಕೆ ಯೋಗ್ಯವಾದ ಸನ್ನಿವೇಶದ ನಿರ್ಮಾಣವಾಗಬಲ್ಲದು. ಇದನ್ನೇ ಬೇರೆ ಮಾತುಗಳಲ್ಲಿ ಹೇಳಬೇಕಾದರೆ ಪ್ರಜಾಪ್ರಭುತ್ವದ ಪ್ರಯೋಗಕ್ಕೆ ಪ್ರತಿಯೊಬ್ಬ ನಾಗರಿಕನು ಕರ್ತವ್ಯನಿಷ್ಠೆಯುಳ್ಳವನೂ ಕಾರ್ಯತತ್ಪರನೂ ಆಗಿರಬೇಕಲ್ಲದೆ ಬರಿ ಹಕ್ಕುಗಳಿಗಾಗಿ ಹೊಡೆದಾಡುವವನಿರಬಾರದೆಂದು ಹೇಳಬಹುದು.

ಸ್ವಾತಂತ್ರ್ಯದಲ್ಲಿ ಒಂದು ವೈಗುಣ್ಯವಿದೆಂದು ಮುಸೋಲಿನಿಯು ಒಂದೊಮ್ಮೆ ಹೇಳಿದನಂತೆ! ರಾಜಕೀಯ ಸ್ವಾತಂತ್ರ್ಯವು-ಪ್ರಜಾಪ್ರಭುತ್ವವು-ಬಹುಕಾಲ ಇದ್ದರೆ ಬೇಸರವನ್ನುಂಟು ಮಾಡುತ್ತದೆಂಬುದೇ ಅವನು ಎತ್ತಿ ತೋರಿದ ಆ ಕುಂದು. ಕೆಲಮಟ್ಟಿಗೆ ಈ ಮಾತು ನಿಜವೆಂದೆನ್ನಬಹುದು. ಯಾಕಂದರೆ ಸ್ವಾತಂತ್ರ್ಯದ ಉಪಭೋಗಕ್ಕೆ ಅವಶ್ಯಕವಾದ ಹಾಗು ಪೋಷಕವಾದ ಮನಸ್ಸಂಯಮ, ಆತ್ಮನಿಗ್ರಹ, ಲೋಕಹಿತದಕ್ಷತೆ ಇವೇ ಮೊದಲಾದವುಗಳ ಬಂಧನವು ಬಹುಕಾಲದವರೆಗೆ ತನ್ನ ಮೇಲಿರಬೇಕೆಂದು ಮಾನವ ವ್ಯಕ್ತಿಯು ಸ್ವಾಭಾವಿಕವಾಗಿ ಬಯಸುವದಿಲ್ಲ. ಈ ಸ್ವಭಾವದೋಷದ ಮೂಲಕ ನಾಗರಿಕ ವ್ಯಕ್ತಿಯು ಸ್ವಾತಂತ್ರ್ಯದಲ್ಲಾಗಲಿ ಪ್ರಜಾಪ್ರಭುತ್ವದಲ್ಲಾಗಲಿ ಬೇಸರ ಜುಗುಪ್ಸೆಗಳನ್ನು ತೋರಲಾರಂಭಿಸುವನು. ಇದರಿಂದ ಅವನಲ್ಲಿ ಕರ್ತವ್ಯದ ಅರಿವು ಮೆಲ್ಲಗೆ ಕಡಮೆಯಾಗಲಾರಂಭಿಸಿ ಕೆಲ ಸಂಚುಗಾರರ ಸರ್ವಾಧಿಕಾರಿತ್ವಕ್ಕೆ ಅವಕಾಶವುಂಟಾಗತೊಡಗುವದು. ಆದುದರಿಂದ ಪ್ರಜಾಪ್ರಭುತ್ವವು ಬಾಳಬೇಕಾದರೆ, ಸ್ವಾತಂತ್ರ್ಯವು ಅಬಾಧಿತವಾಗುಳಿಯಬೇಕಾದರೆ ಶಾಶ್ವತ ನಿರಂತರ ಕರ್ತವ್ಯದಕ್ಷತೆಯು ಪ್ರತಿಯೊಬ್ಬ ಪ್ರಜೆಯಲ್ಲಿ ಬೇಕು. ಕರ್ತವ್ಯದಕ್ಷತೆಯ ಮೌಲ್ಯವನ್ನು ಪ್ರತಿಯೊಬ್ಬ ನಾಗರಿಕನು ಕೊಡಲೊಪ್ಪದಿದ್ದರೆ ಪ್ರಜಾಪ್ರಭುತ್ವವು ಯಶಸ್ವಿಯಾಗಿ ಹಿತಾವಹವಾಗಿ ಬಾಳಲಾರದು.

ಸರ್ವಾಧಿಕಾರಿತ್ವ ಪ್ರಜಾಪ್ರಭುತ್ವಗಳಲ್ಲಿ ಇರುವ ಮೂಲಭೂತವಾದ ಮುಖ್ಯ ಭೇದಗಳನ್ನು ಅರಿತುಕೊಂಡರೆ ಸರ್ವಾಧಿಕಾರಿತ್ವದಿಂದಾಗುವ ಅನರ್ಥದ ಪರಿಚಯವು ಚನ್ನಾಗಿ ಆಗಬಲ್ಲದು. ಹಾಗಾದಲ್ಲಿ ಪ್ರಜಾಪ್ರಭುತ್ವದ ಭದ್ರತೆಗೆ ಬೇಕಾಗುವ ಗುಣಗಳಾವವು, ಅವುಗಳಕೃಷಿಯನ್ನು ಹೇಗೆ ಮಾಡಿಕೊಳ್ಳಬೇಕೆಂಬ ಅಂಶಗಳು ಸಂಪೂರ್ಣವಾಗಿ ಮನದಟ್ಟಾಗುವವು. ಆದುದರಿಂದ ತ್ರೋಟಕವಾಗಿ ಸರ್ವಾಧಿಕಾರಿತ್ವದ ಸ್ವರೂಪವನ್ನು ಇಲ್ಲಿ ವಿವರಿಸಬೇಕಾಗಿದೆ. ಸರ್ವಾಧಿಕಾರಿತ್ವದಲ್ಲಿ ಸಾಮಾನ್ಯ ಪ್ರಜಾವರ್ಗದ ಆಶೆ ಆಕಾಂಕ್ಷೆಗಳನ್ನು ಮನ್ನಿಸಬೇಕೆಂಬ ಅಪೇಕ್ಷೆಗೆ ಅಸ್ಪದವು ಯೋಗ್ಯ ಪ್ರಮಾಣದಲ್ಲಿ ಸಿಕ್ಕಲಾರದು. ಆದರಿಂದ ಸಾಮಾನ್ಯ ಪ್ರಜೆಗಳ ಆಕಾಂಕ್ಷೆಗಳನ್ನು ತನ್ನ ಅಧಿಕಾರಬಲದಿಂದ ಸರ್ವಾಧಿಕಾರಿಯು ಅದುಮಿಸಲು ಯತ್ನಿಸುವನು. ಆತನ ಬಾಹ್ಯನಿಗ್ರಹಕ್ಕೆ ತುತ್ತಾಗಿ ಪ್ರಜಾವರ್ಗವು ಬಾಳುವೆ ಮಾಡಬೇಕಾಗುವದು. ಇದಕ್ಕೆ ವಿರುದ್ಧವಾಗಿ ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ಪ್ರಜೆಯ ಸ್ವಯಂಸ್ಫೂರ್ತ ಮನೋನಿಗ್ರಹಕ್ಕೆ ಹೆಚ್ಚಿನ ಸ್ಥಾನವಿದ್ದುದು ಕಂಡುಬರುವದು. ಈ ನಿಗ್ರಹವು ಸಾಮಾನ್ಯಪ್ರಜೆಗಳಲ್ಲಿ ಬೇರೂರಲು ಪ್ರಜಾಧುರೀಣರಾದವರು ತಮ್ಮ ಆದರ್ಶ ಆತ್ಮಸಂಯಮದಿಂದ ಹಾಗು ನಿಃಸ್ಪೃಹತೆಯಿಂದ ಶ್ರೇಷ್ಠ ಮೇಲ್ಪಂಕ್ತಿಯನ್ನು ಹಾಕಿಕೊಡಬೇಕಾಗುವದು. ಅರ್ಥಾತ್

ಪ್ರಜಾಪ್ರಭುತ್ವದಲ್ಲಿ ಬಾಹ್ಯಪ್ರಭುತ್ವಕ್ಕಿಂತಲೂ ಅಂತಃಪ್ರಭುತ್ವಕ್ಕೆ ಆತ್ಮಪ್ರಭುತ್ವಕ್ಕೆ ಮಹತ್ವದ ಸ್ಥಾನವಿದೆಯೆಂಬುದನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು.

ಮತಪೆಟ್ಟಿಗೆ ಹಾಗು ಬಹುಮತದ ಆಳಿಕೆ ಇವುಗಳು ಪ್ರಜಾಪ್ರಭುತ್ವದ ಬಾಹ್ಯಚಿಹ್ನಗಳು ಮಾತ್ರ. ಆದರೆ ಅವುಗಳಲ್ಲಡಗಿದ ಮೂಲ ತತ್ವಗಳು ಎರಡಿವೆ. ಮೊದಲನೆಯದಾಗಿ ಪ್ರತಿಯೊಬ್ಬ ಮತದಾರನು ತನ್ನದೇ ಆದ ವಿವೇಕಯುಕ್ತ ವಿಚಾರ ಮಾಡಿ ಮತವನ್ನು ನೀಡಿಕೊಳ್ಳುವ ಸಂಧಿಸ್ವಾತಂತ್ರ್ಯವುಳ್ಳವನೂ ಹಕ್ಕುಕರ್ತವ್ಯಗಳುಳ್ಳವನೂ ಎಂಬುದೊಂದು; ಎರಡನೆಯದಾಗಿ ಆ ಮತವನ್ನು ಪ್ರಾಮಾಣಿಕವಾಗಿ ನಿಃಸ್ಪೃಹತೆಯಿಂದ ವ್ಯಕ್ತಪಡಿಸುವ ಅರ್ಹತೆಯುಳ್ಳವನಾಗಿರುವನೆಂಬುದಿನ್ನೊಂದು. ಈ ಎರಡು ತತ್ವಗಳ ಕಾರ್ಯಕ್ಷಮ ಅನುಷ್ಠಾನದಲ್ಲಿಯೇ ಪ್ರಜಾಪ್ರಭುತ್ವದ ಯಶಸ್ಸಿನ ಬೀಜಗಳಿವೆ. ಪ್ರಜಾಪ್ರಭುತ್ವವು ಪ್ರಜೆಗಳ ಶಿಕ್ಷಣದ ಅರ್ಹತೆ, ಸಾಮಾಜಿಕ ದೃಷ್ಟಿಕೋನ, ಮನೋವೃತ್ತಿ ಮೊದಲಾದವುಗಳಿಗೆ ಸಂಬಂಧಿಸಲಾರದ ಒಂದು ವಸ್ತುವಲ್ಲ. ವಾಸ್ತವಿಕವಾಗಿ ಅದು ಒಂದು ಜೀವನದ ದರ್ಶನ; ಮನಸ್ಸಿನ ಒಲವು.

ಮಾನವಸ್ವಭಾವದ ವಿಕಾಸದಲ್ಲಿ ಅದರ ಅಂತಃಸತ್ವದಲ್ಲಿ ಬುದ್ಧಿಯು ಬೆಳವಣಿಗೆಯಲ್ಲಿ ಮತ್ತು ಸಾಮೂಹಿಕವಾಗಿ ಸಹಕಾರದಿಂದ ಕಲೆಹಾಕಿದ ಅನುಭವಗಳಲ್ಲಿ ಒಂದು ಬಗೆಯ ಅಚಲ ಶ್ರದ್ಧೆಯೆ ಪ್ರಜಾಪ್ರಭುತ್ವದ ತಳಹದಿಯೆನ್ನಬಹುದು. ಈ ಎಲ್ಲ ಗುಣಗಳು ಪ್ರಜೆಗಳಲ್ಲಿ ಪರಿಪೂರ್ಣವಾಗಿರುವವೆಂಬ ತಿಳಿವಳಿಕೆಯು ಇದರ ತಳಹದಿಯಲ್ಲ. ಆದರೆ ಯೋಗ್ಯ ಅವಕಾಶವು ದೊರೆತರೆ ಸದ್ಗುಣಗಳು ಮಾನವನಲ್ಲಿ ಬೆಳೆದು ಬರಬಲ್ಲವು; ಹಾಗು ಅವುಗಳಿಂದ ಸಾಮೂಹಿಕ ಹಿತವನ್ನು ಸಾಧಿಸಬಹುದೆಂಬುದೇ ಈ ವಿಚಾರಸರಣಿಯ ಮುಖ್ಯಾಂಶ. ಇದಕ್ಕೆ ವಿರುದ್ಧವಾಗಿ ಸರ್ವಾಧಿಕಾರಿತ್ವದಲ್ಲಿ ಎಲ್ಲ ವಿಚಾರಗಳ ಗುತ್ತಿಗೆಯು ಕೆಲ ವ್ಯಕ್ತಿಗಳ ನೈಸರ್ಗಿಕ ಸೊತ್ತೆಂಬ ಭಾವನೆಯು ಬಲವಾಗಿರುತ್ತದೆ. ಇರಲಿ.

ಪ್ರಜಾಪ್ರಭುತ್ವವು ಇಂದು ಸರ್ವಾಧಿಕಾರಿತ್ವವನ್ನು ಎದುರಿಸುವಲ್ಲಿ ಜಗತ್ತಿನಲ್ಲಿಯೇ ಅದ್ಭುತವಾದ ಅಪೂರ್ವವಾದ ಪ್ರಯೋಗವನ್ನು ನಡೆಸಿದೆಂದು ಆಗಾಗ್ಗೆ ಹೇಳಲಾಗುತ್ತದೆ. ಆದರೆ ನಿಜವಾದ ಪ್ರಜಾಪ್ರಭುತ್ವವು ಎಲ್ಲಿಯಾದರೂ ಇರುತ್ತದೆಯೆ ಎಂದು ಯಾರೂ ನಿರ್ವಿಕಾರ ಮನಸ್ಸಿನಿಂದ ವಿಚಾರಮಾಡುತ್ತಿಲ್ಲ. ಪಶ್ಚಿಮದ ಪ್ರಜಾಪ್ರಭುತ್ವದ ಕೈವಾರಿಗಳಂತಿರುವ ಬ್ರಿಟನ್ ಅಮೇರಿಕೆಗಳಲ್ಲಿ ಪ್ರಜಾಪ್ರಭುತ್ವದ ಮೂಲತತ್ವಗಳಾದ ಸಮಾನತೆ ಬಂಧುತ್ವ ಇವುಗಳಿಗೆ ಇಂದು ದೊರೆಯುತ್ತಿರುವ ಪುರಸ್ಕಾರದ ಸ್ವರೂಪವನ್ನು ನೋಡಿದರೆ ಪ್ರಜಾಪ್ರಭುತ್ವದ ಅಣಕವು ನಡೆದಿದೆಂದೆನಿಸುವಂತಿದೆ. ಅಮೇರಿಕೆಯಲ್ಲಿ ನೀಗ್ರೋನಿಗೆ ದೊರೆವ ಸ್ಥಾನಮಾನಗಳೇನು? ಅವು ಸಮಾನತೆಯ ದ್ಯೋತಕಗಳೇ? ಹಾಗೆಯೆ ಬ್ರಿಟಿಶರ ಪ್ರೇರಣೆಯಿಂದ ದಕ್ಷಿಣ ಆಫ್ರಿಕೆಯಲ್ಲಿ ಉತ್ತೇಜನಗೊಂಡಿರುವ ವರ್ಣದ್ವೇಷದ ದೃಶ್ಯವು ಬಂಧುತ್ವದ ನಿದರ್ಶಕವೆ? ಎಂದು ಯಾರಾದರೂ ಕೇಳಿದರೆ ಉತ್ತರವಿಲ್ಲದೆ ಬಾಯ್ಮುಚ್ಚಿಕೊಂಡು ಪಶ್ಚಿಮದ ಪ್ರಜಾಪ್ರಭುತ್ವಗಳುಇರಬೇಕಾಗುವದು. ಪ್ರಜಾಪ್ರಭುತ್ವವು ಎದುರಿಸಬೇಕಾದ ಅನೇಕ ಸಮಸ್ಯೆಗಳಲ್ಲಿ ವಿಷಮತೆಯೂ ಒಂದಾಗಿದೆ. ಒಂದೇ ಜಗತ್ತೆಂದು ಒಂದೆಡೆಯಲ್ಲಿ ಕೂಗುತ್ತ ಜಗತ್ತನ್ನು ಇಬ್ಬಣಗಳಲ್ಲಿಯೋ ಅನೇಕ ಬಣಗಳಲ್ಲಿಯೋ ವಿಭಾಗಿಸುವ ಹೊಂಚುಗಾರಿಕೆಯಲ್ಲಿಯೆ ಯಾವಾಗಲೂ ಮಗ್ನವಾಗಿರುವಂತೆ ವರ್ತಿಸುವದು ಪ್ರಜಾಪ್ರಭುತ್ವವು ಕೊಡುತ್ತಿರುವ ಇನ್ನೊಂದು ಗಮನಿಸತಕ್ಕ ಆಹ್ವಾನವಾಗಿದೆ.

ಈ ಆಹ್ವಾನಗಳನ್ನು ಅಂಗೀಕರಿಸುವ ಮುನ್ನ ಸಾಮಾನ್ಯವಾಗಿ ಔದ್ಯೋಗಿಕ ಕ್ರಾಂತಿಗಳೇ ಮುಂತಾದವುಗಳಿಂದ ಉದ್ಭೂತವಾದ ಪರಿಸ್ಥಿತಿಯಲ್ಲಿ ಆ ಕಾಲಕ್ಕೆ ಇಟ್ಟುಕೊಂಡಿದ್ದ ಆಶೋತ್ತರಗಳ ಸಿದ್ಧಿಯಾಗಿದೆಯೋ ಹೇಗೆಂಬುದನ್ನು ವಿಚಾರಿಸುವದನುಚಿತವಾಗಲಾರದು. ಅಂತಹ ಆಶೋತ್ತರಗಳಲ್ಲಿ ಪ್ರಜಾತಂತ್ರ ಪದ್ಧತಿಯಿಂದ ಸಾಮಾನ್ಯ ತಿಳಿವಳಿಕೆಯು ಎಲ್ಲೆಡೆಯಲ್ಲಿಯೂ ಹರಡಿ ಜನಸಾಮಾನ್ಯವು ವಿವೇಕದಿಂದ ವರ್ತಿಸತೊಡಗುವದೆಂದೂ ಯುದ್ಧದ ಹಾಗು ಬೇರೆಬಗೆಯ ಕಿಕ್ಕಾಟದ ಪ್ರಸಂಗಗಳು ಇಲ್ಲದಂತಾಗುವವೆಂದೂ ಭಾವಿಸಲಾಗಿದ್ದಿತು. ಅಲ್ಲದೆ ದೇಶದೇಶಗಳ ನಡುವೆ ಪರಸ್ಪರ ಸಂಪರ್ಕವು ಬೆಳೆಯುತ್ತಹೋಗಿ ಅನ್ಯೋನ್ಯಾವಲಂಬನದ ದೃಶ್ಯವು ಮನದಟ್ಟಾಗಿ ನಿರಂತರ ಶಾಂತಿಸೌಹಾರ್ದಗಳು ಜಗತ್ತಿನಲ್ಲಿ ನಲಿಯುವವೆಂದು ಎಣಿಸಲಾಗಿದ್ದಿತು. ಹಾಗೆಯೆ ಔದ್ಯೋಗಿಕ ಉತ್ಪಾದನೆಯು ಅಭಿವೃದ್ಧಿಹೊಂದಿ ಜನತೆಯ ಜೀವನದ ಮಟ್ಟವು ಎತ್ತರವಾಗಿ ಬಡತನವು ಹೇಳಹೆಸರಿಲ್ಲದಂತಾಗುವದೆಂದು ನಿರೀಕ್ಷಿಸಲಾಗಿದ್ದಿತು. ಅದರಂತೆಯೆ ಸಾಮಾನ್ಯ ತಿಳಿವಳಿಕೆಯು ಬೆಳೆದು ಸರಕಾರದ ಶಕ್ತಿಪ್ರದರ್ಶನಕ್ಕೆ ಹೆಚ್ಚಿನ ಅವಶ್ಯಕತೆಯಿಲ್ಲದಂತಾಗಬಹುದೆಂದೂ ತಿಳಿಯಲಾಗಿದ್ದಿತು. ಆದರೆ ಕಳೆದ ಐವತ್ತು ವರ್ಷಗಳ ಇತಿಹಾಸವನ್ನು ನೋಡಿದರೆ ಹಾಗು ಪ್ರತ್ಯಕ್ಷವಾಗಿ ಪ್ರಜಾಪ್ರಭುತ್ವದ ಅನುಭವವಿದ್ದವರನ್ನು ವಿಚಾರಿಸಿದರೆ ಆ ಎಲ್ಲ ನಿರೀಕ್ಷೆಗಳೂ ಎಣಿಕೆಗಳೂ ಇಂದು ಸುಳ್ಳಾಗಿರುವ ಸಂಗತಿಯು ನಿಚ್ಚಳವಾಗಿ ಕಾಣದಿರದು. ನಿರಂತರ ಜಾಗತಿಕ ಶಾಂತಿಯ ಅಪೇಕ್ಷೆಯು ಇಂದು ಮುಟ್ಟದ ಅಧೋಗತಿ ಯಾವುದೆಂಬುದಕ್ಕೆ ೩೫

ವರ್ಷಗಳಲ್ಲಿ ಎರಡು ಜಾಗತಿಕ ಮಹಾಯುದ್ಧಗಳಾದುದೇ ಸಾಕ್ಷಿ. ಇದೇ ಬಗೆಯಾಗಿ ಆರ್ಥಿಕ ಭದ್ರತೆ ಬಡತನದ ನಿವಾರಣೆಗಳೂ ಕನಸಿನ ಮಾತುಗಳಾಗಿವೆ. ನಿರುದ್ಯೋಗದ ಸಮಸ್ಯೆ ದುರುಗುಟ್ಟಿಕೊಂಡು ನೋಡುತ್ತಿದೆ. ಸ್ವಾತಂತ್ರ್ಯದ ಉಪಭೋಗವು ಯೋಗ್ಯ ರೀತಿಯಲ್ಲಿ ಆಗಬೇಕೆಂಬ ಉದ್ದೇಶದಿಂದ ದಿನಾಲು ಹೆಚ್ಚೆಚ್ಚು ಶಾಸನಗಳನ್ನು ಮಾಡಿ ಜನರನ್ನು ನಿಯಂತ್ರಿಸುವದು ವಾಡಿಕೆಯಾಗತೊಡಗಿದೆ. ಇದನ್ನೆಲ್ಲ ನೋಡಿ ಅನೇಕರು ನಿರಾಶಾವಾದಿಗಳಾಗಿ ಪ್ರಜಾಪ್ರಭುತ್ವವು ಯಶಸ್ವಿಯಾಗಲಾರದೆಂಬ ತೀರ್ಮಾನಕ್ಕೆ ಬರಬಹುದು. ಆದರೆ ಆ ತೀರ್ಮಾನಕ್ಕೆ ಬರುವ ಮೊದಲು ಈ ಪ್ರಯೋಗವು ಅಯಶಸ್ವಿಯಾಗಿರುವ ಕಾರಣಗಳ ಪರಾಮರ್ಶೆಯು ಚೆನ್ನಾಗಿ ಆಗಬೇಕಾಗಿದೆ. ಹಾಗಾದಲ್ಲಿ ಪ್ರಜಾಪ್ರಭುತ್ವವು ತಂತಾನೆ ನಡೆವ ಒಂದು ಯಂತ್ರವೆಂದು ತಪ್ಪುತಿಳಿದುಕೊಂಡ ಸಂಗತಿಯೇ ಅದರ ಇಂದಿನ ಅಪಯಶಸ್ಸಿಗೆ ಕಾರಣವೆಂದು ಗೊತ್ತಾಗದಿರದು.

ಭಾರತವು ಸ್ವಾತಂತ್ರ್ಯವನ್ನು ಸಂಪಾದಿಸಿದ ನಂತರ ಅನೇಕ ಭಾರತೀಯರು ಸ್ವರಾಜ್ಯವು ಯಂತ್ರದಂತೆ ತಂತಾನೆ ಸರಿಯಾಗಿ ಸಾಗುವದೆಂದು ಭಾವಿಸಿದಂತೆ ಇಂದು ತೋರುತ್ತಿದೆ. ಮ. ಗಾಂಧಿಯವರೂ ಅವರ ಹಿರಿಯ ಅನುಯಾಯಿಗಳೂ ಸ್ವರಾಜ್ಯ ಸ್ಥಾಪನೆಯನ್ನು ಮಾಡಿದ ಬಳಿಕ ಅದರ ಲಾಭೋಪಭೋಗವನ್ನು ಮಾಡುವದಷ್ಟೇ ತಮ್ಮ ಕೆಲಸವೆಂದು ಅನೇಕರ ಭಾವನೆಯಿದ್ದಂತೆ ಅವರ ನಡತೆಯಿಂದ ವ್ಯಕ್ತವಾಗುತ್ತದೆ. ಹಾಗೆಯೆ ರಾಜ್ಯ ಸಂವಿಧಾನದಲ್ಲಿ ಪ್ರಜಾಪ್ರಭುತ್ವದ ನಿರೂಪಣೆಯಾದೊಡನೆಯೆ ಅದು ಅಸ್ತಿತ್ವದಲ್ಲಿ ಬಂದುಬಿಟ್ಟಿರುವದರಿಂದ ವಿಶೇಷ ಸಿದ್ಧತೆ ಪ್ರಯತ್ನಗಳಿಲ್ಲದೆ ಅದು ಯಶಸ್ವಿಯಾಗಬಹುದೆಂದು ಅನೇಕರು ಊಹಿಸಿರುವರೆಂದರೆ ತಪ್ಪಾಗದು. ಆದರೆ ಇವರೆಲ್ಲರು ಪ್ರಜಾಪ್ರಭುತ್ವವು ಒಂದು ಜೀವನ ನೀತಿ; ಅದೊಂದು ಬಾಳಿನ ಬಗೆಯೆಂಬುದನ್ನು ಮರೆತುಬಿಟ್ಟಿರುವರು. ಜೀವನವು ನಿಂತ ನೀರಲ್ಲ; ಅದು ಯಾವಾಗಲೂ ಮುಂದೆ ಹರಿಯುತ್ತಿದೆ, ಹರಿಯಬೇಕು. ಈ ಮಾತು ಸಮ್ಮತವಾಗಿದ್ದರೆ ಭಾರತೀಯರಲ್ಲಿ ಇಂದು ಕಂಡುಬರುತ್ತಿರುವ ಆತ್ಮಸಂತುಷ್ಟಿಯ ಮನೋವೃತ್ತಿಯು ಕೊನೆಗಾಣಬೇಕು. ಹಿರಿಯರು ಗಳಿಸಿಟ್ಟ ಸೊತ್ತಿನ ಮೇಲೆಯೇ ಉಪಜೀವಿಸುವ ಕರ್ತೃತ್ವಹೀನ ದಾಯಾದನಂತೆ ಭಾರತೀಯರ ಅವಸ್ಥೆಯಾಗಬಾರದು. ಆದರೆ ದುರ್ದೈವದಿಂದ ಆ ಅವಸ್ಥೆಗೆ ಭಾರತೀಯರು ಇಳಿಯುತ್ತಿರುವ ದುಶ್ಚಿಹ್ನಗಳು ಹೇರಳವಾಗಿ ತೋರುತ್ತಿವೆ. ಉದಾಹರಣಾರ್ಥವಾಗಿ ಇಂದು ಬೇರೆ ಬೇರೆ ರಾಜಕೀಯ ಸಂಸ್ಥೆಗಳಲ್ಲಿ ಕಾಣುತ್ತಿರುವ ಅಧಿಕಾರ ಲಾಲಸೆಯ ತೀಕ್ಷ್ಣ ಸ್ಪರ್ಧೆಯನ್ನೇ ಹೇಳಬಹುದು. ಪ್ರಜಾಪ್ರಭುತ್ವವು ಹೊಸ ಹೊಸ ಸನ್ನಿವೇಶಕ್ಕೆ ತಕ್ಕಂತೆ ಬೆಳೆಯಬೇಕಾಗುತ್ತದೆಂಬದನ್ನು ಗಮನಿಸಿ ತಮ್ಮಲ್ಲಿ ಅದಕ್ಕವಶ್ಯವಾದ ಅರ್ಹತೆಯುಂಟೋ ಇಲ್ಲವೋ ಅಥವಾ ಇರದಿದ್ದರೆ ಅಂತಹ ಅರ್ಹತೆಯುಳ್ಳವರ ಸಹಕಾರವನ್ನು ಪಡೆಯಬೇಕೋ ಬೇಡವೋ ಎಂಬ ಯಾವ ಸಮಂಜಸ ವಿಚಾರಗಳನ್ನೂ ಮಾಡದೆ ಅಧಿಕಾರಸ್ಥಾನದಲ್ಲಿರುವದೇ ಒಂದು ಭೂಷಣವೆಂದು ಬಗೆದು ಉಪಭೋಗಬುದ್ಧಿಯಿಂದಲೇ ಸ್ಪರ್ಧೆಯನ್ನು ನಡೆಸುವದು ಅಧೋಗತಿಯ ಒಂದು ಸ್ಪಷ್ಟ ಲಕ್ಷಣ. ಹಾಗೆಯೆ ಪ್ರಜಾಪ್ರಭುತ್ವದ ಹೆಗ್ಗುರುತಾದ ಪ್ರಾಮಾಣಿಕತೆ, ಯೋಗ್ಯತೆ ಶೀಲಸಂಪನ್ನತೆ ಇವುಗಳಿಗೆ ದೊರೆಯಬೇಕಾದ ಮನ್ನಣೆಯ ವಿಷಯದಲ್ಲಿ ಆತ್ಮವಂಚನೆ, ಪರವಂಚನೆ ನಡೆದಿರುವದು ಅಶುಭ ಶಕುನವೇ ಸರಿ. ಇದರ ಜೊತೆಯಲ್ಲಿ ಜಾತಿ ಮತ ಪಂಥ ಗುಂಪು ಮೊದಲಾದ ಭಾವನೆಗಳನ್ನು ಜನಸೇವಾ ಕಾರ್ಯದಲ್ಲಿ ನಿಜವಾಗಿ ಉಪಯೋಗಿಸದೆ ಕೇವಲ ಅಧಿಕಾರಪ್ರದರ್ಶನಕ್ಕಾಗಿ ದುರುಪಯೋಗಿಸಿಕೊಳ್ಳುವ ಮನೋವೃತ್ತಿಯಿದ್ದುದು ಸ್ವತಂತ್ರ ಭಾರತದ ಪ್ರಜಾಪ್ರಭುತ್ವಕ್ಕೆ ಒಂದು ದೊಡ್ಡ ಗಂಡಾಂತರ. ಎಲ್ಲಕ್ಕಿಂತ ಮಿಗಿಲಾಗಿ ಪರಸ್ಪರ ಪ್ರೇಮ, ಸಹಕಾರ ಬುದ್ಧಿ, ಗುಣಪಕ್ಷಪಾತ ಮೊದಲಾದವುಗಳನ್ನು ಉಪೇಕ್ಷಿಸಿ ಸಂಖ್ಯಾಬಲ, ಧನಬಲ ಮೊದಲಾದವುಗಳ ಮೂಲಕ ಅಜ್ಞ ಅಶಿಕ್ಷಿತ ಜನತೆಯ ಅಜ್ಞಾನದ ದುರ್ಲಾಭವನ್ನು ಪಡೆವ ಪ್ರವೃತ್ತಿಯು ಪ್ರಜಾಪ್ರಭುತ್ವದ ಯಶಸ್ಸಿಗೆ ಮೃತ್ಯುಪ್ರಾಯವಾದುದೆಂಬುದನ್ನು ಅರಿಯದಿದ್ದುದು ಖೇದಕರವಾಗಿದೆ. ಪ್ರಜಾಪ್ರಭುತ್ವದಲ್ಲಿ ವ್ಯಕ್ತಿತ್ವದ ವಿಕಾಸಕ್ಕೆ ಬಹಳ ಅವಕಾಶವಿರುತ್ತದೆಂದು ಅದನ್ನು ಪುರಸ್ಕರಿಸಲಾಗುತ್ತಿದೆಯಷ್ಟೆ! ವ್ಯಕ್ತಿತ್ವದ ವಿಕಾಸವೆಂದರೆ ಏನು? ಎಂಬುದನ್ನು ತಿಳಿದುಕೊಂಡು ಅದರಂತೆ ನಡೆವ ಯೋಗ್ಯತೆಯನ್ನು ಸಂಪಾದಿಸುವಂತೆ ಸಮಸ್ತ ಪ್ರಜಾವರ್ಗವನ್ನು ತರಬೇತಿಗೊಳಿಸುವದು ಪ್ರಜಾಪ್ರಭುತ್ವ ಪುರಸ್ಕರ್ತರ ಕರ್ತವ್ಯವಾಗಿದೆ. ಜನಸಾಮಾನ್ಯದಲ್ಲಿ ಪ್ರಾಮಾಣಿಕವಾದ ಸತ್ಯಯುಕ್ತವಾದ ಜ್ಞಾನವನ್ನು ಹರಡಿ ತಮ್ಮ ಆದರ್ಶ ನೀತಿಮತ್ತೆಯಿಂದ ಲೋಕಧುರೀಣರಾಗುವದು ಪ್ರಜಾಪ್ರಭುತ್ವದಲ್ಲಿ ಶ್ರದ್ಧೆಯುಳ್ಳವರೆಲ್ಲರ ಆದ್ಯಧರ್ಮವಾಗಿದೆ. ಈ ಧರ್ಮಪರಿಪಾಲನೆಯಲ್ಲಿ ಅವಿಚಲ ತತ್ವನಿಷ್ಠೆಗೆ ಅಗ್ರಸ್ಥಾನವಲ್ಲದೆ ಹೊರ ತೋರಿಕೆಯ ಲೋಕಪ್ರಿಯತೆಗಲ್ಲ. ಅರ್ಥಾತ್ ಪ್ರಜಾತಂತ್ರ ಮನೋಭೂಮಿಕೆಯಲ್ಲಿ ಬಾಹ್ಯ ದಮನಸಾಧನಗಳಿಗಿಂತ ಅಂತ-ರ್ದಮನೋಪಾಯಗಳಿಗೆ ಹೆಚ್ಚಿನ ಸ್ಥಾನವಿರುತ್ತದೆ. ಅರಸೊತ್ತಿಗೆಯಲ್ಲಿ ದುಷ್ಟನಿಗ್ರಹವು ರಾಜನ ಧರ್ಮವಾಗಿದ್ದಂತೆ ಪ್ರಜಾಪ್ರಭುತ್ವದಲ್ಲಿ ದುಷ್ಟಶಕ್ತಿಗಳ ದಮನವು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗಿದೆ. ಆ ಅಧಿಕಾರವು ಆತನಲ್ಲಿ ಬರಬೇಕಾದರೆ ನಾಗರಿಕನು ಆತ್ಮಪ್ರಭುವಾಗಬೇಕು. ಕ್ಷುದ್ರವಾದ ಆಶೆ ಆಮಿಷಗಳಿಗೆ ಆತನನ್ನು ಆಹುತಿಯಾಗಿಸಲು ಜಪ್ಪಿಸಿಕೊಂಡು ಕುಳಿತ ಅನಿಷ್ಟ ಸಮಾಜದ್ರೋಹಿ ಪ್ರವೃತ್ತಿಗಳನ್ನು ಪ್ರತಿಭಟಿಸಿ ನಿಲ್ಲುವ ನಿಃಸ್ಪೃಹತೆ ಅವನಲ್ಲಿ ಬೆಳೆಯಬೇಕು. ಮೂಲಭೂತವಾದ ಈ ಸಿದ್ಧತೆಯಿಲ್ಲದೆ ನಾಗರಿಕನು ಪ್ರಜಾಪ್ರಭುತ್ವದ ಯಶಸ್ಸಿಗೆ ಪೋಷಕನಾಗಲಾರನು. ಈ ಒರೆಗಲ್ಲಿನಲ್ಲಿ ಭಾರತೀಯ ನಾಗರಿಕರ ಹಾಗು ಅವರ ಮುಂದಾಳುಗಳ ಸತ್ವಪರೀಕ್ಷೆಯಾಗಿ ಅದರಲ್ಲಿ ಅವರು ತೇರ್ಗಡೆಯಾಗುವ ವರೆಗೆ ಈಗ ಅನುಭವಿಸುತ್ತಿರುವ ಕಷ್ಟ ಕಾರ್ಪಣ್ಯಗಳು ತೊಲಗಲಾರವು.

ಶ್ರೀ. ನಿ. ವ್ಯಾಸರಾಯ ಬಲ್ಲಾಳ
ಅವರಿಂದ

"ನಾನು ಬಂಜೆಯಲ್ಲ"

(ಚಿಕ್ಕ ಕಥೆ)

ಸಾಡೇಸಾತ ! "ಸಾಡೇಸಾತ" ವರ್ಷಗಳಿಂದ ದಾಂಪತ್ಯ ಜೀವನ ನಡೆಸಿದ್ದರೂ ಕುಲದೀಪಕ ಹುಟ್ಟಲಿಲ್ಲ. ಸಾಡೇಸಾತ ಗಂಟೆಗೆ ಅಂದು ಎದ್ದ ಶಾರದೆಗೆ ಉಂಟಾದ ಸಮಸ್ಯೆ ಹೇಗೆ ಬಿಟ್ಟುಹೋಯಿತು ?

ಶಾರದೆ ಬೆಳಗಿನ ಜಾವದ ಸಕ್ಕರೆ ನಿದ್ದೆ ಮುಗಿಸಿ ಕಣ್ಣು ಬಿಡುವಾಗ ಏಳೂವರೆಗೆ ಒಂದು ನಿಮಿಷ ಉಳಿದಿತ್ತು.

ಒಂದು ನಿಮಿಷ ಕಾಲ ಕಣ್ಣರಳಿಸಿ ಪಕ್ಕದ ಕೈ ಮೇಜಿನ ಮೇಲಿದ್ದ ಟೈಂಪೀಸನ್ನೇ ನೋಡುತ್ತ ಆಕೆ ಬಿದ್ದುಕೊಂಡಿದ್ದಳು. ಕಿಡಿಕಿಯ ಪರದೆಯ ಬದಿಯ ಬಿರುಕಿನಿಂದ ಮುಂಜಾವಿನ ಶೀತಗಾಳಿ ಒಳಗೆ ಸುಳಿಯುತ್ತಿದ್ದುದರ ಅನುಭವವಾಗುತ್ತಿತ್ತು.

ಶಾರದೆ ಆಲಸ್ಯದಿಂದ ರಗ್ಗನ್ನು ಮೈ ತುಂಬ ಹೊದೆದುಕೊಂಡು ಬದಿಗೆ ಹೊರಳಿ ಮಾಧವ ಎದ್ದಿದ್ದಾನೆಯೆ ಎಂದು ನೋಡಿದಳು. ಹೊರಗೆ ಬಚ್ಚಲು ಮನೆಯಿಂದ ಪಂಕಜ ಮಲ್ಲಿಕರ ಸಂಗೀತಕ್ಕೆ 'ಶವರ್ ಬಾತ್'ನ ನಳ ತೆರೆದ ಸದ್ದು ಶ್ರುತಿ ಹಿಡಿದಿರುವುದು ಕೇಳಿಬರುತ್ತಿದ್ದುದರಿಂದ 'ರಾಯರಪೂಜೆ ಆಗಲೇ ಆರಂಭವಾಗಿದೆ' ಎಂದು ಗೊಣಗುತ್ತ ಆಕೆ ಎದ್ದು ಕುಳಿತಳು.

ಆಗ ಪಕ್ಕದ ಕೋಣೆಯಿಂದ ಜ್ಯೋತ್ಸ್ನಾ ಭೋಳೆಯ 'ಕ್ಷಣ ಆಲಾಽಽಽ ಭಾಗ್ಯಾಚಾಽಽಽ' ಕೇಳಿಬರಲಾರಂಭಿಸಿತು. 'ಭಾನಯ್ಯನೂ ಎದ್ದಾಗಿದೆ' ಎಂದು ಶಾರದೆ ಮೈ ಕೊಡವಿಕೊಂಡು ಹಾಸಿಗೆ ಬಿಟ್ಟೆದ್ದಳು.

ಅಸ್ತವ್ಯಸ್ತವಾಗಿದ್ದ ಪತ್ತಲವನ್ನು ಸರಿಪಡಿಸಿಕೊಂಡು ಡ್ರೆಸ್ಸಿಂಗ್ ಟೇಬಲಿನ ಬಳಿ ಬಂದು ಕೆದರಿ ಹೋಗಿದ್ದ ತಲೆಯನ್ನು ಒಪ್ಪ ಮಾಡಿಕೊಳ್ಳಲೆಂದು ಆಕೆ ಬಾಚಣಿಗೆ ಎತ್ತಿದಾಗ ಲಲಿತ ಬಾಗಿಲಿನಲ್ಲಿ ನಿಂತು ಕರೆಯುತ್ತಿದ್ದಳು.

"ಅಕ್ಕಾ! ಘಂಟೆ ಏಳೂವರೆಯಾಯಿತು. ಹೊರಡುವುದಿಲ್ಲವೆ?"

ಶಾರದೆಯ ಕಣ್ಣುಗಳು ಪುನಃ ಅಲರಾಂ ಟೈಂಪೀಸಿನ ಕಡೆ ಹೊರಳಿದುವು. ಏಳೂವರೆಯಾಗಿ ಮೂರು ನಿಮಿಷ ಕಳೆದಿತ್ತು.

ಏಳೂವರೆ..... ಸಾಡೇಸಾತ್.... ಸಾಡೇಸಾತಿ. ಶಾರದೆಯ ಕೈಲಿದ್ದ ಬಾಚಣಿಗೆ ಮೇಜಿನ ಮೇಲೆ ಬಿತ್ತು. ಬರಿ ಕೈಯಿಂದಲೇ ತಲೆಯನ್ನು ಸವರಿಕೊಂಡು ಬಾಗಿಲ ಕಡೆ ನೋಡಿ ಕರೆದಳು.

"ಒಳಗೆ ಬಾರೆ, ಲಲಿತಾ....."

"ಘಂಟೆ ಏಳೂವರೆಯಾಗಿ ಹೋಯಿತು, ಅಕ್ಕ. ಎಂಟೂವರೆಯೊಳಗೆ ಬಿ. ಬಿ. ಮಾತುಂಗ ಮುಟ್ಟಬೇಕು. ಬೋರಿವಲಿ ಗಾಡಿ ತಪ್ಪಿಹೋದರೆ ಮತ್ತೆ ಮುಕ್ಕಾಲು ಘಂಟೆ ಸ್ಟೇಶನಿನಲ್ಲಿ ಕಾಯಬೇಕಾದೀತು."

"ಬೋರಿವಲಿಯಲ್ಲಿ ಏನಿದೆಯೆ, ಸುಡುಗಾಡು?"

"ಜೋಗೇಶ್ವರಿಯು ಪಿಕ್‌ನಿಕ್ ಮರೆತೇ ಹೋಗಿದೆಯೇನು?"

"ಹೌದೇನೇ! ಇವತ್ತು ಆದಿತ್ಯವಾರ?" ಎಂದು ಆಶ್ಚರ್ಯ ಸೂಚಿಸಿದ ಶಾರದೆಗೆ ಜೋಗೇಶ್ವರಿಯ ವಿಹಾರಕೂಟದ ನೆನಪು ಬಂದದ್ದು ಈಗಲೇ.

"ಘಂಟೆ ಏಳೂವರೆಯಾಗಿ ಹೋಯಿತು. ಬೇಗ ಹೊರಡಿ, ಅಕ್ಕ. ಶಾಲಿ ಬರುವ ಹೊತ್ತಾಯಿತು."

"ಏಳೂವರೆ. ಏಳೂವರೆ. ಏಳೂವರೆ.... ಹಾಳಾಗಲಿ, ಲಲಿತ. ನಿನಗೆ ಬೇರೇನೂ ಮಾತೇ ಬರುವದಿಲ್ಲವೇನು? ನಾನು ಬರುವುದಿಲ್ಲ ಜೋಗೇಶ್ವರಿಗೆ."

ಶಾರದೆ ಹಾಗೆ ಹೇಳಿದವಳೇ ಡ್ರೆಸ್ಸಿಂಗ್ ಟೇಬಲಿನ ಮುಂದಿದ್ದ ಕುರ್ಚಿಯ ಮೇಲೆ ಕುಸಿದು ಬಿದ್ದಳು. ಅವಳ ಕಣ್ಣುಗಳು ಪುನಃ ಗಡಿಯಾರದ ಕಡೆ ಹೊರಳಿದವು.

ಏಳೂವರೆಯಾಗಿ ಐದು ನಿಮಿಷ.

"ನಿಮಗೆ ಆಗಿದೆಯಾದರೂ ಏನು, ಅಕ್ಕ? ನಾನು ಹೋಗುವ ಮುಂಚೆ ಇದು ಕೊನೆಯ 'ಪಿಕ್‌ನಿಕ್'. ಖಂಡಿತ ಬರುತ್ತೇನೆ ಎಂದು ಹೇಳಿಯೂ ಈಗ ಬರುವುದಿಲ್ಲ ಎನ್ನುತ್ತೀರಿ. ನಾನೊಬ್ಬಳೇ ಹೋಗಬೇಕೇ?"

"ನಿನಗೆ ಬೇಕಾದರೆ ಹೋಗು; ಬೇಡವಾದರೆ ಬಿಡು, ಲಲಿತ. ನನ್ನನ್ನು ಸುಮ್ಮನೆ ಸಿಟ್ಟಿಗೆಬ್ಬಿಸಬೇಡ. ನಾನು ಬರುವ ಹಾಗಿಲ್ಲ."

ಲಲಿತ ಮತ್ತೆ ಮಾತನಾಡದೆ ತನ್ನ ಕೋಣೆಗೆ ಹೊರಟುಹೋದಳು. ಒಮ್ಮಿಂದೊಮ್ಮೆಗೆ ಜ್ಯೋತ್ಸ್ನಾ ಭೋಳೆಯ 'ಕ್ಷಣ ಆಲಾಽಽಽ ಭಾಗ್ಯಾಚಾಽಽಽ' ನಿಂತಿತು.

ಶಾರದೆ ಕುರ್ಚಿ ಬಿಟ್ಟು ಏಳುವವಳು- ಅಷ್ಟರಲ್ಲಿ ಅಡುಗೆಯ ಹುಡುಗ ಬಾಗಿಲಲ್ಲಿ ನಿಂತುದು ಕಂಡುಬಂತು.

"ಕಾಫಿ ಇಲ್ಲಿಗೆ ತರಲೇ ಅಥವಾ ಅಡುಗೆಯ ಮನೆಗೆ ಬರುತ್ತೀರಾ?"

"ಹೋಗೋ ಇಲ್ಲಿಂದ. ಮುಖ ತೊಳೆಯಲಿಕ್ಕೆ ಕೂಡಾ ಅವಕಾಶವಿಲ್ಲ, ಕಾಫಿಯಂತೆ," ಎಂದು ಶಾರದೆ ಸಿಟ್ಟಿನಿಂದಲೇ ಒದರಿಕೊಂಡಳು.

ತನಗೇಕೆ ಒಮ್ಮಿಂದೊಮ್ಮೆಗೆ ಇಷ್ಟು ಸಿಟ್ಟು ಬಂದಿದೆಯೆಂದು ಶಾರದೆಗೆ ತಿಳಿದಿರಲಿಲ್ಲ. ಆದರೆ ಏಳೂವರೆಗೆ ತಾನು ಎದ್ದದ್ದು ತಪ್ಪು ಎಂದು ಆಕೆ ತಿಳಿದಂತಿತ್ತು. ಲಲಿತ ಏಳೂವರೆಯ ನೆನಪು ಮಾಡಬಾರದಿತ್ತು ಎಂದು ಮನಸ್ಸು ಹೇಳುತ್ತಿತ್ತು. ಅನಂತಕೃಷ್ಣ ಭಾವಯ್ಯ ಏಳೂವರೆಗೆ ರೇಡಿಯೋ ಹಚ್ಚಬಾರದಿತ್ತು, ಎಂದು ಆಕೆ ಬಯಸಿದಂತಿತ್ತು.

ಅರ್ಧ ಘಂಟೆ ಕಾಲ 'ಶೂವರ್ ಬಾತ್'ನ ಸಂಭ್ರಮದಲ್ಲಿ ಮುಳುಗಿದ್ದ ಮಾಧವ ಟವೆಲ್ ಸುತ್ತಿಕೊಂಡೇ ತಲೆಯೊರಸುತ್ತ ಕೋಣೆಯೊಳಗೆ ಬಂದ. ಪಂಕಜ ಮಲ್ಲಿಕರ ಸಂಗೀತ ಇನ್ನೂ ನಿಂತಿರಲಿಲ್ಲ.

"ಕೆಬ್ ತಕ್ ನಿರಾಶ ಕೀss ಅಂಧಿಯಾರೇss" ಎಂದು ಹಾಡು ಸರಾಗವಾಗಿ ಬರುತ್ತಿತ್ತು. ಈಗ ಮಾತ್ರ ಶಾರದೆಗೆ ತಡೆದುಕೊಂಡಿರುವುದು ಸಾಧ್ಯವಾಗಲಿಲ್ಲ.

"ಬೆಳಿಗ್ಗೆಯೇ ಸುರು ಮಾಡಿದಿರೇನು? ಆಸೆಯ ಅರಮನೆಯಲ್ಲಿ ನಿತ್ಯ ಪೂಜೆ ಮಾಡುವ ರಾಣಿಯನ್ನೇ ಮದುವೆಯಾಗಬಹುದಿತ್ತಲ್ಲ, ನನ್ನ ಕೈ ಏಕೆ ಹಿಡಿದಿರಿ?"

ದಟ್ಟವಾದ ಕೂದಲಿನ ನಡುವೆ ಒಂದು ಹನಿ ನೀರನ್ನೂ ಇಳಿಗೊಡುವುದಿಲ್ಲ ಎಂದು ಟವೆಲ್ ಹಿಡಿದು ತಲೆಯೊಡನೆ ಯುದ್ಧ ಮಾಡುತ್ತಿದ್ದ ಮಾಧವನಿಗೆ ಶಾರದೆಯ ಮಾತು ಇರಿತದಂತೆ ಬಂತು. ತನ್ನ ಕೆಲಸ ನಿಲ್ಲಿಸಿ ಎರಡೂ ಕೈಗಳಿಂದ ತಲೆಯನ್ನು ಹಿಡಿದಂತೆಯೇ ಶಾರದೆಯ ಕಡೆ ನೋಡಿದ.

"ಏನೇ ಇದು ಅವಾಂತರ? ನಿನಗೇನಾಗಿದೆಯೆ? ಯಾರು ನಿನ್ನ ಹತ್ತಿರ ಈಗ ಮಾತನಾಡಿದರೆ?"

"ಮನಬಿಚ್ಚಿ ಕೆಟ್ಟ ಮಾತು ಆಡಿದ್ದರಾದರೂ ಇಷ್ಟು ನೋವಾಗುತ್ತಿದ್ದಿಲ್ಲ. ಹಾಡಿನ ನೆಪದಿಂದ ಚುಚ್ಚುಮಾತು ಆಡಬೇಕೇನೋ!"

"ಯಾವ ಹಾಡೇ?" ಎಂದು ಕೇಳಿದ ಮಾಧವ ಕ್ಷಣಕಾಲ ನಿಂತು "ಹೀಗೇನು? ಪಂಕಜ ಮಲ್ಲಿಕನಿಗೂ ಇಲ್ಲಿ ಬಹಿಷ್ಕಾರ ಹಾಕಬೇಕೇ, ನಿನಗೋಸ್ಕರ? ನಿನಗೆ ಆಗಿರುವುದಾದರೂ ಏನು, ಹೇಳಲ್ಲ. ಎಲ್ಲಾದರೂ ಹುಚ್ಚುಗಿಚ್ಚು ಹಿಡಿದಿದೆಯೇನು?"

ಈಗ ಮಾತ್ರ ಶಾರದೆಗೆ ಅಳು ತಡೆಯಲಾಗಲಿಲ್ಲ. ಮುಖ ತಗ್ಗಿಸಿ ಮೇಜಿನ ಮೇಲೆ ತಲೆಯಿರಿಸಿ ಬಿಕ್ಕಿ ಬಿಕ್ಕಿ ಅತ್ತಳು. "ನಾನು ಹುಚ್ಚಿಯೇ ಆಗಿದ್ದೇನೆ. ನಿಜಕ್ಕೂ ನಾನು ಹುಚ್ಚಿ. ನಿಮ್ಮ ಆಸೆಯ ಸೌಭಾಗ್ಯವನ್ನು ಒದಗಿಸಿ ಕೊಡುವ ಯೋಗ್ಯತೆಯಿರದ ಹುಚ್ಚಿ. ನಿಮ್ಮ ಪಾಲಿನ ಸಾಡೇಸಾತಿ ...."

ಮಾಧವನಿಗೆ ಸಿಟ್ಟೇರತೊಡಗಿತು. "ನಾನು ಡ್ರೆಸ್ ಮಾಡಿಕೊಳ್ಳುವ ತನಕ ಈ ಉತ್ಸವ ಬೇಡ ಶಾರದಾ. ಆ ಮೇಲೆ ಬೇಕಾದಷ್ಟು ಅಳು— ಸಂಜೆ ಬರುವ ತನಕ. ಮಧ್ಯಾಹ್ನ ಊಟಕ್ಕೂ ನಾನು ಬರುವುದಿಲ್ಲ ಇವತ್ತು," ಎಂದವನೇ ತನ್ನ ಪೋಷಾಕಿನ ಸಿದ್ಧತೆಯಲ್ಲಿ ತೊಡಗಿದ.

ಶಾರದೆಯ ಬಿಕ್ಕಳಿಕೆ ಕಡಿಮೆಯಾದರೂ ಅಳು ಪೂರ್ತಿ ನಿಲ್ಲಲಿಲ್ಲ. ಮಾಧವ ಡ್ರೆಸ್ ಮಾಡಿ, ಶೂಸ್ ಸಿಕ್ಕಿಸಿಕೊಂಡು ಬಲವಾಗಿ ಬಾಗಿಲೆಳೆದುಕೊಂಡು ಹೊರಟುಹೋಗುವ ವರೆಗೂ ಶಾರದೆ ತಲೆಯೆತ್ತಲಿಲ್ಲ.

ತನ್ನ ಮೇಲಿನ ಸಿಟ್ಟಿನಿಂದ ಗಂಡ ಕಾಫಿ ಕೂಡಾ ಕುಡಿಯದೆ ಹೋಗಿಬಿಡಬಹುದು ಎಂದು ಆಕೆ ಯೋಚಿಸಿದರೂ ತಾನಾಗಿ ಎದ್ದು ಹೋಗಿ ಆತನನ್ನು ಸಮಾಧಾನಪಡಿಸಬೇಕು ಎಂದು ತೋರಲಿಲ್ಲ. ಒಂದು ವಿಚಿತ್ರ ರೀತಿಯ ಆತ್ಮಾಭಿಮಾನ "ನೀನು ಮಾಡಿದ್ದು ಸರಿ" ಎನ್ನುತಿತ್ತು. "ಅವರು ಸಿಟ್ಟಿನಿಂದ ಉಪವಾಸ ಹೋದರೆ ನೀನೇನು ಮಾಡಲಾಗುತ್ತದೆ" ಎಂದು ಅದೇ ಅಭಿಮಾನ ಕೆಣಕಿ ಕೇಳುತ್ತಿತ್ತು.

ಪುನಃ ಶಾರದೆಗೆ ಏಳೂವರೆಯ ನೆನಪು ಬಂತು. ಏಳೂವರೆ ವರ್ಷಗಳ ಹಿಂದೆ ಆಕೆ ಮಾಧವನ ಕೈಹಿಡಿದಿದ್ದಳು.

ಏಳೂವರೆ ವರ್ಷಗಳ ಹಿಂದೆ ತಾನು ಪ್ರೀತಿಸಿದ ಮಾಧವನನ್ನು ಮದುವೆಯಾದ ಹೊಸತಿನಲ್ಲಿ ಗಂಡನ ಮನೆಗೆ ಬಂದಾಗ ತುಂಬು ಪ್ರೀತಿಯಿಂದ ಅವಳ ತಲೆಯನ್ನು ನೇವರಿಸುತ್ತ ಅತ್ತೆ ಹೇಳಿದ್ದರು:

"ನನ್ನ ಮಗುವನ್ನು ನಿನಗೊಪ್ಪಿಸುತ್ತೇನೆ, ಶಾರದಾ. ಅವನನ್ನು ಇನ್ನು ಮೇಲೆ ಕಾದುಕೊಂಡು ಬರುವ ಹೊಣೆಗಾರಿಕೆ ನಿನ್ನದು. ನೀನು ಹೋಗಲಿರುವ ದೂರದ ಮುಂಬಯಿಯಲ್ಲಿ ನೀನು ಮಾಧವನ ಹೆಂಡತಿಯಷ್ಟೇ ಅಲ್ಲ, ನನ್ನ ಮಗುವಿಗೆ ತಾಯಿ ಕೂಡಾ."

ಎಂಥ ದೊಡ್ಡ ಹೊಣೆ!

ಕಾಲೇಜಿನ ಪರಿಚಯದಿಂದ ಬೆಳೆದ ಸಲುಗೆ, ಸಲುಗೆಯಿಂದ ಬಂದ ಆತ್ಮೀಯತೆ. ಈ ಆತ್ಮೀಯತೆ, ಸುಧಾರಿತ ಮನೋವೃತ್ತಿಯ ತಂದೆ ತಾಯಂದಿರ ಸಹಕಾರಗಳಿಂದಾಗಿ ಚಿಗುರಿಸಿದ ದಾಂಪತ್ಯ!

ಮಾಧವನ ಕೈ ಹಿಡಿಯುವಾಗ ಶಾರದೆ ಕಂಡ ಭವಿಷ್ಯತ್ತಿನ ಕನಸಿನ ಹಿನ್ನೆಲೆಯಾಗಿದ್ದುದು ಅವರು ಕಾಲೇಜಿನಲ್ಲಿ ಜತೆಯಾಗಿ ಕಳೆದ ರಸನಿಮಿಷಗಳ ಸ್ಮೃತಿ. ಆದರೆ ಜೀವನ ಇಷ್ಟರಲ್ಲಿಯೇ ಕೊನೆಗೊಳ್ಳುವುದಿಲ್ಲ, ಈ ಅಸ್ಪಷ್ಟ ಹಿನ್ನೆಲೆಯ ಆಧಾರದಿಂದ ಬದುಕಿನ ಇತಿಮಿತಿಗಳನ್ನು ನಿರ್ಧರಿಸುವದು ಸಾಧ್ಯವಿಲ್ಲ ಎಂದು ಈಗ ಆಕೆಗೆ ತಿಳಿದಿದೆ— ಏಳೂವರೆ ವರ್ಷಗಳು ಕಳೆದ ಮೇಲೆ.

ಮಾಧವನಿಗೆ ತನ್ನ ಮೇಲೆ ಹೀಗೇಕೆ ಬೇಸರ ಬಂತು?

ಶಾರದೆ ಈ ಪ್ರಶ್ನೆಯನ್ನು ಒಂದೆರಡು ದಿನ ಅಥವಾ ಒಂದೆರಡು ತಿಂಗಳು ಯೋಚಿಸಿರಲಿಲ್ಲ. ಈಗ ನಾಲ್ಕು ವರ್ಷಗಳಿಂದ ಅದೇ ಪ್ರಶ್ನೆ ಹಗಲು ರಾತ್ರಿ ಅವಳನ್ನು ಕಾಡುತ್ತಿದೆ. ಮಾಧವನನು ಕಾಣುವ ಪ್ರತಿಯೊಂದು ನಿಮಿಷದಲ್ಲೂ ಅದು ಬೃಹದಾಕಾರ ತಳೆದು ನಿಲ್ಲುತ್ತದೆ.

ತನ್ನ ಗಂಡನಿಗೆ ತಾನು ಬೇಡವಾಗಿದ್ದೇನೆ. ಎಂದು ಮನಸ್ಸು ಕೂಗಿ ಕೂಗಿ ಹೇಳುತ್ತಿದೆ.

ನಮ್ಮ ದಾಂಪತ್ಯದಲ್ಲಿ ಈ ರೀತಿಯ ವಿರಸ ಹೇಗೆ ಬಂತು, ಎಂಬುದು ಶಾರದೆಗೆ ಇನ್ನೂ ಒಂದು ರೀತಿಯ ಸಮಸ್ಯೆಯೆ. ಎಂದಿನಿಂದ ಬಂತು ಎಂಬ ಪ್ರಶ್ನೆಗೆ ಮಾತ್ರ ಸಾಧಾರಣ ಸ್ಪಷ್ಟವಾದುದೊಂದು ಉತ್ತರ ಸಿಗುತ್ತಿತ್ತು.

ಅನಂತಕೃಷ್ಣ ಭಾವಯ್ಯನಿಗೆ ಮದುವೆಯಾಗಿ ಒಂದು ವರ್ಷ ಕಳೆದ ಮೇಲೆ ಮಾಧವ ಏಕೋ ಬದಲಾಗಹತ್ತಿದ. ಲಲಿತ ಅನಂತಕೃಷ್ಣನ ಕೈಹಿಡಿದ ಕೂಡಲೆ ಮುಂಬಯಿಗೆ ಬಂದಿರಲಿಲ್ಲ. ಅನಂತಕೃಷ್ಣ ಮದುವೆಯಾಗಿ ಒಂದೂವರೆ ವರ್ಷದ ತನಕ ಹೆಂಡತಿಯನ್ನು ಮುಂಬಯಿಗೆ ಕರೆತಂದಿರಲಿಲ್ಲ. ಮಾಧವ ಈ ವಿಚಾರ ಒತ್ತಾಯಪಡಿಸಿದ್ದರೂ ಲಲಿತಳ ಮೆಟ್ರಿಕ್ ಮುಗಿಯದೆ ಅವಳನ್ನು ಕರೆದುಕೊಂಡು ಬರುವುದಿಲ್ಲ ಎಂದು ಖಂಡಿತವಾಗಿಯೇ ಹೇಳಿದ್ದ.

ಆದರೆ ಲಲಿತಳ ಮೆಟ್ರಿಕ್ ಮುಗಿಯಲೂ ಇಲ್ಲ, ಆಕೆ ಮುಂಬಯಿಗೆ ಬೇಗನೆ ಬರುವುದೂ ಸಾಧ್ಯವಾಗಲಿಲ್ಲ. ಮೊದಲ ಹೆರಿಗೆಯನ್ನು ತಾಯಿಯ ಮನೆಯಲ್ಲೇ ಮುಗಿಸಿ ಮುದ್ದಾದ ಮಗು ವಸಂತನನ್ನು ಕರೆದುಕೊಂಡೇ ಶಾರದೆಯ ಮನೆಗೆ ಬಂದಿದ್ದಳು.

ಲಲಿತ ವಸಂತರು ಜೊತೆಯಲ್ಲೇ ಇರಲು ಬಂದಂದಿನಿಂದ ಮಾಧವ ಒಂದು ವಿಚಿತ್ರ ರೀತಿಯಲ್ಲಿ ಬದಲಾದ.

ಇದರ ಕಾರಣವನ್ನು ಊಹಿಸಲು ಶಾರದೆಗೆ ಕಷ್ಟವಾಗಲಿಲ್ಲ. ತಾನು ವಸಂತನನ್ನು ಆಡಿಸುವಾಗಲೆಲ್ಲ ತನ್ನ ಮನಸ್ಸಿನಲ್ಲೂ ಮಿತಿಮೀರಿದ ಕಳವಳವಾಗುತ್ತಿತ್ತು. ತನ್ನ ಮಗುವನ್ನು ಆಡಿಸುವ ಭಾಗ್ಯ ತನಗಿಲ್ಲವಲ್ಲಾ ಎಂದು ಅತ್ಯಂತ ದುಃಖವಾಗುತ್ತಿತ್ತು. ತಾನು ಮಾಧವನ ಆರೈಕೆಯಲ್ಲಿ ಅತ್ತೆ ಹೇಳಿದಂತೆ ತಾಯಿಯ ಪಾತ್ರವನ್ನು ವಹಿಸದಿದ್ದರೂ—ಮಾಧವನೇನು ಸಣ್ಣ ಮಗುವೆ, ತಾನು ಹೇಳಿದಂತೆ ಕೇಳಲು —ಮಾಧವನ ಮಗುವಿಗಾದರೂ ತಾಯಿಯಾಗಿ ಅವರ ಮಾತನ್ನು ಪಾಲಿಸುತ್ತೇನೆ ಎಂಬ ಸಮಾಧಾನವಾದರೂ ಸಿಗಬಹುದು, ಎಂದು ಬಯಸಿದರೆ, ವಿಧಿ ಅಲ್ಲಿಯೂ ಅಡ್ಡ ನಿಂತಿತ್ತು.

ಈ ಏಳೂವರೆ ವರ್ಷಗಳಲ್ಲಿ ಮಾಧವ ತನಗಾಗಿ ಎಷ್ಟೆಲ್ಲ ಖರ್ಚು ಮಾಡಿದ, ಎಂಥವೆಲ್ಲ ಚಿಕಿತ್ಸೆ ನಡೆಸಿದ ಎಂಬುದು ಶಾರದೆಗೆ ತಿಳಿದಿರಲಿಲ್ಲವೆಂದಲ್ಲ. ಆದರೆ, ಈ ಚಿಕಿತ್ಸೆ ಫಲಕಾರಿಯಾಗದಿದ್ದರೆ, ಮುಂಬಯಿಯ ತಜ್ಞ ವೈದ್ಯರೆಲ್ಲ ತನ್ನಲ್ಲಿ ಏನು ದೋಷವಿದೆಯೆಂದು ತಿಳಿಯಲು ಅಸಮರ್ಥರಾದರೆ, ಎರಡು ಶಸ್ತ್ರಕ್ರಿಯೆಗಳು ಫಲಕಾರಿಯಾಗದೆ ಹೋದರೆ, ಅದಕ್ಕೆ ತನ್ನ ಹೊಣೆಗಾರಿಕೆಯೇನು ಎಂಬುದು ಮಾತ್ರ ಅವಳಿಗೆ ತಿಳಿದಿರಲಿಲ್ಲ.

ಎಂತಲೇ ಈ ದುಃಖ.

ಲಲಿತಳ ಮಗು ಬೆಳೆಯುತ್ತ ಬಂದ ಹಾಗೆ ಮಾಧವ ಮನೆಯ ವಿಚಾರ ಆಸಕ್ತಿ ತೋರಿಸುವುದು ನಿಂತಿತು. ಮುಖ್ಯವಾಗಿ ಶಾರದೆಯನ್ನು ಕಂಡಾಗಲೆಲ್ಲ ಮುಖ ಮುರುಡಿಸುವುದು ಆರಂಭವಾಯಿತು. ಊಟ ಉಪಚಾರಗಳಲ್ಲಿ ಆಸಕ್ತಿ ಕಡಿಮೆಯಾಯಿತು. ಎಲ್ಲಕ್ಕಿಂತ ಹೆಚ್ಚು ವಾಚಾಳಿಯಾಗಿದ್ದ ಮಾಧವ ಮಿತಭಾಷಿಯಾದ. ಸಣ್ಣ ಪುಟ್ಟ ಕಾರಣಗಳಿಗಾಗಿ ಸಿಟ್ಟಿಗೇಳಲು ಆರಂಭಿಸಿದ.

ಸಣ್ಣ ತಮ್ಮ ರಾಧಾಕೃಷ್ಣ ಮಂಗಳೂರಲ್ಲಿ ಕಾಲೇಜು ಅಭ್ಯಾಸ ಮುಗಿಸಿ ಅಣ್ಣನೊಡನಿರಲು ಮುಂಬಯಿಗೆ ಬಂದ ಮೇಲಂತೂ ಮಾಧವ ತನಗೂ ತನ್ನ ಮನೆಗೂ ಏನೊಂದು ಸಂಬಂಧವೇ ಇರದವರಂತೆ ವರ್ತಿಸತೊಡಗಿದ. ಮಲಗಲು ಮಾತ್ರ ಆತ ಮನೆಗೆ ಬರುವುದೆಂದಾಯಿತು. 'ಕ್ಲಬ್' ಮತ್ತು 'ಕಾಂಟ್ರಾಕ್ಟ್ ಬ್ರಿಜ್' ಆತನ ಸರ್ವಸ್ವಗಳಾದವು.

ಮೂರು ವರ್ಷ ಕಾಲ ಸಂತೋಷದಲ್ಲೇ ಸಂದಾಯವಾಗಿದ್ದ ಶಾರದೆ ಮಾಧವರ ದಾಂಪತ್ಯಜೀವನ ಮತ್ತೆರಡು ವರ್ಷಕಾಲ ವಿರಸದ ಮೆಟ್ಟಿಲೇರಿದು, ಈಗ ರಾಧಾಕೃಷ್ಣ ಬಂದ ಮೇಲೆ, ಮನೆಗೆ ಸಂಬಂಧಿಸಿದ ಎಲ್ಲ ವ್ಯವಹಾರವನ್ನು ಆತ ನಡೆಸಲು ಸಮರ್ಥನೆಂದು ಮಾಧವ ತಿಳಿದ ಮೇಲೆ, ಬರೇ ಒಂದು ವ್ಯಾವಹಾರಿಕ ಸಂಬಂಧವಾಗಿ ಉಳಿದಿತ್ತು.

ಗಂಡನೊಂದಿಗೆ ಹೂಡಿದ ಸಂಸಾರದಲ್ಲಿ ವಿರಸದ ಛಾಯೆ ತಲೆದೋರಿದ ಮೇಲೆ ರಾಧಾಕೃಷ್ಣ ಮೊದಲಬಾರಿಗೆ ಅವಳ ಜೀವನದಲ್ಲಿ ಬೆಳಕು ತಂದ. ಲಲಿತಳ ಪಾಲಿಗೆ ವಸಂತನಾದರೆ ತನ್ನ ಪಾಲಿಗೆ ರಾಧಾಕೃಷ್ಣ ಎಂದು ಶಾರದೆ ನಿಶ್ಚಯಿಸಿದಳು. ತನಗೂ ಅವನಿಗೂ ವಯಸ್ಸಿನ ಅಂತರ ಬರೇಹತ್ತು ವರ್ಷಗಳಾದರೂ ಆತ ಎಂದೆಂದಿಗೂ ತನ್ನಮಗುವೆ ಎಂದು ಆಕೆಯ ತಿಳಿವಳಿಕೆಯಾಯಿತು. ಹೀಗಾಗಿ ಮನೆಯಲ್ಲಿ ಉಳಿದವರೆಲ್ಲರಿಗೆ ಹಟಮಾರಿಯೂ ನಿಷ್ಠುರಿಯೂ ಆಗಿದ್ದ ರಾಧಾಕೃಷ್ಣನಿಗೆ 'ಅತ್ತಿಗೆ' ಮಾತ್ರ ತಾಯಿಯಷ್ಟೇ ಪೂಜ್ಯಳಾದಳು.

ಅತ್ತೆ ಮಾಧವನ ಕುರಿತಾಗಿ ಹೇಳಿದ ಮಾತನ್ನು ಶಾರದೆ ರಾಧಾಕೃಷ್ಣನ ಆರೈಕೆಯ ವಿಚಾರದಲ್ಲಿ ಪಾಲಿಸಿದಳು. ಆತನ ಆಚಾರ, ವಿಚಾರ, ಊಟ, ವಿಹಾರ ಇವೆಲ್ಲವುಗಳನ್ನು ಶಾರದೆ ನಿಯಂತ್ರಿಸಿದಂತಿತ್ತು. ಆತ ಒಂದು ಘಂಟೆ ಮನೆಗೆ ತಡವಾಗಿ ಬಂದರೆ ಶಾರದೆಯ ಕಳವಳ ಹೇಳತೀರದು. ಆತ ಒಂದೆರಡು ದಿನ ಸೌಖ್ಯವಿಲ್ಲದೆ ಮಲಗುವಂತಾದರೆ ಶಾರದೆಗೆ ಅವನ ಆರೈಕೆಯ ಹೊರತು ಬೇರಾವ ವಿಚಾರದ ಕಡೆಗೂ ಗಮನ ಕೊಡುವುದೆ ಸಾಧ್ಯವಾಗುತ್ತಿರಲಿಲ್ಲ.

ರಾಧಾಕೃಷ್ಣನಿಗೂ ಶಾರದತ್ತಿಗೆಯ ಮಾತು ವೇದವಾಕ್ಯವಾಯಿತು. ಕಾಲೇಜಿನಿಂದ ಹೊರಬೀಳುವಾಗ ದೊರಕುವ ಕನಸಿನ ಉನ್ಮಾದಕಾರಿ ವಾತಾವರಣದಿಂದ ಆತ ಇನ್ನೂ ಬಿಡುಗಡೆಹೊಂದಿರಲಿಲ್ಲ. ಅನುಕೂಲ ಸ್ಥಿತಿಯಲ್ಲಿರುವ ಅಣ್ಣನ ಮನೆಯ ಆಶ್ರಯದಿಂದಾಗಿ ನಿರುದ್ಯೋಗದ ಹೆದರಿಕೆಯಿರಲಿಲ್ಲ. ಯೌವನದ ಹುಚ್ಚು ಹೊಳೆಯ ಸಂಭ್ರಮದಲ್ಲಿ ಕನಸು ಕಾಣುತ್ತಿದ್ದ ರಾಧಾಕೃಷ್ಣನಿಗೆ ತನ್ನ ಸುಖ ದುಃಖಗಳ ಅನುಭವದಲ್ಲಿ ಭಾಗ ವಹಿಸಲು ಸಂತೋಷದಿಂದ ಮುಂದೆ ಬಂದ ಅತ್ತಿಗೆ ದೇವರಂತೆಯೇ ಕಂಡುಬಂದುದರಲ್ಲಿ ಆಶ್ಚರ್ಯವಿರಲಿಲ್ಲ.

ಆದರೆ ಅನಂತಕೃಷ್ಣ ಬೇರೆ ಮನೆ ಮಾಡುತ್ತಾನೆಂದು ಮಾಧವ ಶಾರದೆಯೊಡನೆ ಹೇಳಿದ ಮೇಲೆ ರಾಧಾಕೃಷ್ಣನೂ ಅದೇ ರೀತಿ ಹೊರಟು ಹೋಗಬಹುದು ಎಂಬ ಭಯ ಮೊದಲ ಬಾರಿಗೆ ಅವಳನ್ನು ಆವರಿಸಿತು.

ಈ ರೀತಿಯ ಭಯ ಆರಂಭವಾದುದು ಅವರ ಮನೆಗೆ ಮಾಧವನ ಮಿತ್ರರಾದ ಡಾ. ವಾಗ್ ದಂಪತಿಗಳು ಅವರ ಒಬ್ಬಳೇ ಮಗಳು ಕಮಲಾಳೊಂದಿಗೆ ಅತಿಥಿಗಳಾಗಿ ಬಂದಾಗ. ಡಾಕ್ಟರ್ ಮತ್ತು ಶ್ರೀಮತಿ ವಾಗ್ ಮಾಧವನ ಮನೆಯಲ್ಲಿದ್ದುದು ಎರಡೇ ದಿನ. ಆದರೆ ಆ ಎರಡು ದಿನಗಳಲ್ಲಿಯೇ ಅವರ ಆಗಮನದಿಂದಾಗಿ ಸಾಕಷ್ಟು ಉತ್ಪಾತ ಆಗಿ ಹೋಯಿತು.

ತನ್ನ ಮಿತ್ರರ ಆಗಮನದ ವಿಚಾರ ಮಾಧವ ಮನೆಯಲ್ಲಿ ಯಾರಿಗೂ ತಿಳಿಸಿರಲಿಲ್ಲ. ಅಡುಗೆಯವನೊಡನೆ ಮಾತ್ರ ಈ ವಿಚಾರ ತಿಳಿಸಿ ಪುಣೆಯಿಂದ ಪ್ಯಾಸೆಂಜರ್ ಗಾಡಿ ಬರುವ ತನಕ ಎಲ್ಲರೂ ಊಟಕ್ಕೆ ಕಾದಿರಬೇಕೆಂದು ಸೂಚಿಸಿಹೋಗಿದ್ದ. ಎಂಟು ಘಂಟೆ ರಾತ್ರಿಗೆ ಎಲ್ಲರೂ ಊಟಕ್ಕೆ ಬಂದಾಗ ಅಡುಗೆಯ ಹುಡುಗ ಈ ಸುದ್ದಿ ತಿಳಿಸಿದ. ಅನಂತಕೃಷ್ಣನಿಗೆ ಎಲ್ಲಿಲ್ಲದ ಸಿಟ್ಟು ಬಂತು ವಸಂತನಿಗೆ ಮೂರು ದಿನಗಳಿಂದ ವಿಪರೀತ ಜ್ವರ. ಆ ಕಾರಣ ಮೂರು ರಾತ್ರಿ ನಿದ್ದೆಗೆಟ್ಟಿದ್ದುದರಿಂದ

ಈ ದಿನವಾದರೂ ತುಸು ಬೇಗನೆ ಮಲಗಬೇಕು ಎಂದು ಆಸೆಯಿಟ್ಟುಕೊಂಡಿದ್ದವನಿಗೆ ಈ ಅನಿರೀಕ್ಷಿತ ಅತಿಥಿಗಳ ಆಗಮನ ವಾರ್ತೆ ತುಂಬ ಬೇಸರವನ್ನುಂಟುಮಾಡಿತು. ಯಾರು ಬೇಕಾದರೂ ಬರಲಿ, ತಾನು ಮತ್ತು ಲಲಿತ ಊಟ ತೀರಿಸುವವರೇ ಎಂದು ಹಟ ಹಿಡಿದ. ಶಾರದೆಗೂ ಏನು ಮಾಡುವುದೆಂದು ತಿಳಿಯಲಿಲ್ಲ. ಮಾಧವ ಆಕೆಯೊಡನೆ ಏನನ್ನೂ ಹೇಳಿರಲಿಲ್ಲ. ಆ ಕಾರಣ ತಾನೇಕೆ ಭಾವಯ್ಯನಿಗೆ ಉಪದೇಶಿಸಬೇಕೆಂದು ಸುಮ್ಮಗಾದಳು. ರಾಧಾಕೃಷ್ಣ ಮನೆಯಲ್ಲಿರಲಿಲ್ಲ. ಹೀಗಾಗಿ ವಾಗ್ ದಂಪತಿಗಳು ಬಂದಾಗ ಬೇಸರದಿಂದ ಕಾದಿದ್ದುದು ಶಾರದೆ ಮಾತ್ರ.

ಹಲವಾರು ದಿನಗಳಿಂದ ಭುಸುಗುಟ್ಟುತ್ತಿದ್ದ ಅನಂತಕೃಷ್ಣ ಈ ಘಟನೆಯಿಂದಾಗಿ ಹೆಡೆಯರಳಿಸಿ, ಅತಿಥಿಗಳು ಹೋದ ಮೇಲೆ ಅಣ್ಣನೊಡನೆ ತಾನು ಬೇರೆ ಮನೆ ಮಾಡುವ ಇಚ್ಛೆ ಸೂಚಿಸಿದ. ಮಾಧವನಿಗೂ ತನ್ನ ತಮ್ಮನ ಹಾಗೂ ಅತ್ತಿಗೆಯ ಪರಿಚಯವನ್ನು ಅತಿಥಿಗಳಿಗೆ ಮಾಡಿಕೊಡಬೇಕು ಎಂದು ಆಶಿಸಿದ್ದಾತನಿಗೆ ಆ ರಾತ್ರಿಯ ಅನಂತಕೃಷ್ಣನ ವರ್ತನೆ ಅಪಮಾನದ ನೋವು ಕೊಟ್ಟಿತ್ತು. ಹೀಗಾಗಿ ಸೈರಣೆ ತಪ್ಪಿ ಆತನೂ ಅನಂತಕೃಷ್ಣನ ಆಸೆಗೆ ಪ್ರತಿ ಹೇಳಲಿಲ್ಲ.

ಶಾರದೆಗೆ ಮಾತ್ರ ಆ ರಾತ್ರಿ ಅನಂತಕೃಷ್ಣನ ವರ್ತನೆಗಿಂತಲೂ ಮಾಧವ ಊಟದ ವೇಳೆಯಲ್ಲಿ ಹೇಳಿದ ಒಂದು ಮಾತು ತುಂಬ ದುಃಖಕ್ಕೆ ಕಾರಣವಾಯಿತು. "ನಿಮ್ಮ ಮದುವೆಯಾಗಿ ಎಷ್ಟು ವರ್ಷ ಕಳೆಯಿತು?" ಎಂದು ಶ್ರೀಮತಿ ವಾಗ್ ವಿಚಾರಿಸಿದಾಗ ಮಾಧವ ಉತ್ತರವನ್ನು ಹಾಸ್ಯದಲ್ಲಿ ತೇಲಿಸಬೇಕೆಂಬ ಉದ್ದೇಶದಿಂದ "ಸಾಡೇಸಾತ್. ಇನ್ನಾದರೂ ನನ್ನ ಸಾಡೇಸಾತಿ ತೊಲಗಬಹುದೇನೋ" ಎಂದಿದ್ದ. ಈ ಮಾತಿನ ಹಿಂದಿದ್ದ ವ್ಯಂಗ್ಯ ಅರ್ಥವಾದುದು ಶಾರದೆಗೆ ಮತ್ತು ಡಾ. ವಾಗ್‌ರವರಿಗೆ ಮಾತ್ರ. ತಮ್ಮ ದಾಂಪತ್ಯಜೀವನದ ದಿನಗಳನ್ನು ವಿರಸದ ತಕ್ಕಡಿಯಲ್ಲಿ ತೂಗಿ ಏಳೂವರೆ ವರ್ಷಗಳು ಮುಗಿದುವು ಎಂದು ಮಾಧವ ಹೇಳಿದನಲ್ಲಾ ಎಂದು ಆಕೆ ಭಯಗ್ರಸ್ತಳಾದಳು.

ಮಾಧವನಿಗೆ ತಾನು ಭಾರವಾಗಿದ್ದೇನೆ, ಇನ್ನು ಅವನೊಂದಿಗೆ ತನ್ನ ಸಂಸಾರ ಎಂದೆಂದಿಗೂ ದುಃಖಮಯವೆ ಎಂಬ ಭಾವನೆ ಆಕೆಗೆ ಬಂದುದು ಅದೇ ಮೊದಲು.

ಈ ಹಿನ್ನೆಲೆಯಲ್ಲಿ ಅನಂತಕೃಷ್ಣ ಮನೆಬಿಡುವ ನಿರ್ಧಾರವನ್ನು ತಿಳಿಸಿದಾಗ ಶಾರದೆಗೆ ಅಸಮಾಧಾನಕ್ಕಿಂತ ಹೆಚ್ಚು ಅಸೂಯೆಯೇ ಉಂಟಾಯಿತು. ಲಲಿತಳೊಂದಿಗೆ ಅವಳು ಹೊಂದಿಕೊಂಡು ಹೋಗುವ ಪ್ರಶ್ನೆಯೇ ಇರಲಿಲ್ಲ. ಲಲಿತಳಿಗೆ ಶಾರದೆಯ ಕುರಿತು ಅತಿಯಾದ ಪ್ರೀತಿಯಾಗಲೀ ಆದರವಾಗಲೀ ಇರಲಿಲ್ಲ. ಆದರೆ ಮಾಧವನನ್ನು ಮಾತ್ರ ಕಂಡರಾಗುತ್ತಿದ್ದಿಲ್ಲ. ಮಾಧವನೂ ಇದಕ್ಕೆ ಪ್ರತಿಯಾಗಿ ಲಲಿತಳನ್ನು ಕಂಡೂ ಕಾಣದವರಂತೆಯೆ ಇರುತ್ತಿದ್ದ. ಹೀಗಾಗಿ ಅನಂತಕೃಷ್ಣ ಅತ್ತಿಗೆಯೊಡನೆ "ನಾನು 'ಓನರಶಿಪ್' ಶರ್ತದಲ್ಲಿ ಬೇರೆ ಮನೆ ತೆಗೆದುಕೊಂಡಿದ್ದೇನೆ, ಹೋಗುತ್ತೇನೆ" ಎಂದಾಗ ಶಾರದೆ ಮಾತೇ ಆಡಲಿಲ್ಲ.

ಆಗ ಮಾತ್ರ ಅವಳಿಗೆ ರಾಧಾಕೃಷ್ಣನೂ ಹೀಗೆಯೆ ಇನ್ನೊಂದು ದಿನ ಹೋಗಿಬಿಡಬಹುದು. ಎಂಬ ಹೆದರಿಕೆಯುಂಟಾಗಿತ್ತು. ಲಲಿತಳಂಥ ಇನ್ನೊಬ್ಬ ಹುಡುಗಿ ರಾಧಾಕೃಷ್ಣನನ್ನು ಎಳೆದುಕೊಂಡು ಹೋಗಲು ಕಾರಣವಾಗುವಳೇ ಎಂದು ಮನಸ್ಸಿನಲ್ಲಿ ಶಂಕೆಯೆದ್ದಿತು. ಹೀಗೆ ಶಂಕಿಸಲು ವಾಗ್ ದಂಪತಿಗಳೊಂದಿಗೆ ಮತ್ತು ಮುಖ್ಯವಾಗಿ ಅವರ ಮಗಳು ಕಮಲಳೊಂದಿಗೆ ಎರಡು ದಿನ ಮಾಧವ ರಾಧಾಕೃಷ್ಣರು ನಡೆದುಕೊಂಡ ರೀತಿಯೂ ಒಂದು ಕಾರಣವಾಗಿತ್ತು.

ಮಾಧವನಿಗಾದರೋ ವಾಗ್ ದಂಪತಿಗಳ ಪರಿಚಯವಿತ್ತು. ಹೀಗಾಗಿ ಅವನ ನಡತೆ ಸ್ವಾಭಾವಿಕ ಸಲುಗೆಯಿಂದುಂಟಾದ ವರ್ತನೆಯೆಂದು ಶಾರದೆ ತಿಳಿಯಬಹುದಿತ್ತು. ಆದರೆ ರಾಧಾಕೃಷ್ಣ ಅವರನ್ನು ಕಂಡುದು ಇದೇ ಮೊದಲು. ಅದೂ ಶಾರದೆಗೆ ತಿಳಿದ ಮಟ್ಟಿಗೆ ಮುಂಬಯಿಯ ಪರಿಚಿತ ಬಳಗದಲ್ಲಿ ಸ್ತ್ರೀಯರೊಂದಿಗೆ ರಾಧಾಕೃಷ್ಣ ಅಷ್ಟೇನೂ ಸಲುಗೆಯಿಂದ ವರ್ತಿಸುತ್ತಿರಲಿಲ್ಲ. ಹೀಗಿರುವಾಗ ಕಮಲಳ ಮೊದಲ ಪರಿಚಯದಲ್ಲೇ ಅಷ್ಟು ಸಲುಗೆಯನ್ನು ಹೇಗೆ ತೋರಿಸಿದ ಎಂದು ಆಕೆಗೆ ಆಶ್ಚರ್ಯವಾಯಿತು. ಅವರು ಬಂದ ಮಾರನೆಯ ದಿನ ರಾಧಾಕೃಷ್ಣ ಕಮಲಳ ಜೊತೆಯಲ್ಲಿ ಒಬ್ಬನೇ 'ಮೆಟನಿ' ಶೋ ನೋಡಲು ಹೋದಾಗ ಶಾರದೆಗೆ ಆಶ್ಚರ್ಯಕ್ಕಿಂತ ಹೆಚು ನೋವಾಯಿತು. ಆದರೆ ರಾಧಾಕೃಷ್ಣನೊಡನೆ ಮನಬಿಚ್ಚಿ ಹೀಗೆ ಹೇಳಲು ಅದೇ ಹಾಳು ಆತ್ಮಾಭಿಮಾನ ಬಿಡಲಿಲ್ಲ. ತನ್ನ ಕನಸಿನ ಹಾಗೂ ಮನಸಿನ ರಾಜ್ಯಗಳಿಗೆ ಸಂಬಂಧಿಸಿದ ಎಲ್ಲ ವಿಚಾರಗಳನ್ನು ಅತ್ತಿಗೆಯೊಡನೆ ಚರ್ಚಿಸುತ್ತಿದ್ದ ರಾಧಾಕೃಷ್ಣ ಕಮಲಾ ವಾಗ್‌ಳ ಕುರಿತಾಗಿ ಒಂದು ಮಾತೂ ಆಡದಿದ್ದುದರಿಂದ, ಶಾರದೆಗೆ ಆತ ಎಲ್ಲಾದರೂ ಆ ಬೆಡಗಿನ ಹುಡುಗಿಯಲ್ಲಿ ಅನುರಕ್ತನೇ ಎಂಬ ಸ್ವಾಭಾವಿಕ ಶಂಕೆ ಬಂತು.

ಈ ಘಟನೆ ನಡೆದು ಎರಡು ತಿಂಗಳ ಮೇಲೊಂದು ದಿನ ರಾಧಾಕೃಷ್ಣ "ಅಣ್ಣನ ಕೆಲಸದ ಮೇಲೆ ಪುಣೆಗೆ ಹೋಗಿ ಬರುತ್ತೇನೆ" ಎಂದು ಹೇಳಿದಾಗ ಶಾರದೆಗೆ ಆಶ್ಚರ್ಯವಾಗಲಿಲ್ಲ. ಆದರೆ ಇದೇನೋ ಕಮಲಾ ವಾಗ್‌ಳಿಗೆ ಸಂಬಂಧಿಸಿದ ವಿಚಾರ ಎಂದು ತಿಳಿಯಲು ಕಷ್ಟವಾಗಲಿಲ್ಲ.

ಅನಂತಕೃಷ್ಣ ಹೊರಗೆ ಹೊರಡುವಾಗ ಬಂದು ಬಾಗಿಲಿನ ಬಳಿ ನಿಂತು ಹೇಳಿದ "ನನಗೆ 'ಫರ್ನಿಚರ್' ಎಲ್ಲ ಹೊಸ ಮನೆಗೆ ಸಾಗಿಸಲಿಕ್ಕಿದೆ ಅತ್ತಿಗೆ. ಮಧ್ಯಾಹ್ನ ಊಟಕ್ಕೆ ಬಂದರೆ ಬಂದೆ. ಲಲಿತಾ ಸಂಜೆಗೆ ಬರುತ್ತಾಳೆ, ಪಿಕ್‌ನಿಕ್ ಮುಗಿಸಿ."

ಅವನು ಉತ್ತರದ ದಾರಿ ಕಾಯಲಿಲ್ಲ.

ಶಾರದೆ ಎದ್ದು ಬಚ್ಚಲು ಮನೆಯ ಕಡೆ ಹೋದಳು. ಮುಖ ತೊಳೆದು ಕಾಫಿಯ ಶಾಸ್ತ್ರ ತೀರಿಸಿ ಬಂದು ಕನ್ನಡಿಯಲ್ಲಿ ಮುಖ ನೋಡಿದಳು. ಕುಂಕುಮದ ತಟ್ಟೆಗೆ ಕೈಹಾಕುವಾಗ ಮನಸ್ಸು ಪ್ರಶ್ನಿಸಿತು. "ಈ ಸೌಭಾಗ್ಯದಿಂದ ನೀನೆಷ್ಟು ಸುಖಿ?" ಎಂದು. ಆಗ ಅಡುಗೆಯವನು ಪುನಃ ಬಂದ.

“ಇವತ್ತು ಮಧ್ಯಾಹ್ನ ಊಟಕ್ಕೆ ನೀವು ಒಬ್ಬರೇ ಎಂದು ಕಾಣುತ್ತದೆ. ರಾಯರು ಬರುತ್ತಾರೆಯೆ?” ಎಂದು ಕೇಳಿದ.

ಶಾರದೆ ಯಾವ ಉತ್ತರವನ್ನೂ ಹೇಳಲಿಲ್ಲವಾದ ಕಾರಣ ಅಡುಗೆಯವನಿಗೆ ಉತ್ತರ ದೊರಕಿತ್ತು.

ಒಂದು ಕ್ಷಣ ಶಾರದೆಗೆ 'ಪಿಕ್‌ನಿಕ್'ಗಾದರೂ ಹೋಗಿ ಒಂದು ದಿನ ಹಾಯಾಗಿ ಕಳೆಯಬಹುದಿತ್ತು ಎಂದೆನಿಸಿತು. ಅವಳು ಲಲಿತಳೊಡನೆ ಬರುವೆನೆಂದು ಒಪ್ಪಿಕೊಂಡದ್ದು ಇದೇ ಆಸೆಯಿಂದ. ಆದರೆ ಬೆಳಿಗ್ಗೆ ಏಳುವಾಗ 'ಏಳೂವರೆ'ಯ ನೆನಪಾಗಿ ಪ್ರಮಾದವಾಗಿಹೋಯಿತು.

ಅಷ್ಟೇ ಅಲ್ಲದೆ, ಭಾನುವಾರ ರಾಧಾಕೃಷ್ಣ ಖಂಡಿತ ಮರಳುತ್ತೇನೆಂದು ಹೇಳಿದ್ದ. ಈ ಸಲ ಎಲ್ಲ ಅಭಿಮಾನವನ್ನು ಬದಿಗಿರಿಸಿ ಕಮಲಾ ವಾಗ್ಳೊಂದಿಗೆ ಅವನ ಸಂಬಂಧ ಎಷ್ಟು ಮುಂದುವರಿದಿದೆಯೆಂದು ತಿಳಿಯಲೇಬೇಕೆಂದು ಶಾರದೆ ನಿಶಯಿಸಿದಳು.

ಬೆಳಿಗ್ಗೆ 'ಜನತಾ' 'ಡೆಕ್ಕನ್ ಕ್ವೀನ್' 'ಪೂನಾ ಮೇಲ್'ಗಳ ದಾರಿ ನೋಡಿಯಾಯಿತು. ರಾಧಾಕೃಷ್ಣ ಬರಲಿಲ್ಲ. ಸಂಜೆಗೆ ಬರಬಹುದೆಂದು ಸಮಾಧಾನ. ಆದರೆ ಆತ ಬಂದರೇನು ತನ್ನ ದುಃಖರಾಶಿ ಕಡಿಮೆಯಾಗುವುದೇ ಎಂದು ಇನ್ನೊಂದು ಆಲೋಚನೆ. ಯೋಚನೆಯ ರಾಜ್ಯದಲ್ಲಿ ಶಾರದೆ ಹಣ್ಣಾದಳು. ಅನಂತಕೃಷ್ಣ ಹೋಗುವಂತೆಯೇ ರಾಧಾಕೃಷ್ಣನೂ ಹೋಗುತ್ತಾನೆ. ಬೇಡವಾದ ಹೆಂಡತಿಯಾಗಿ ಗಂಡನೊಂದಿಗೆ ಇನ್ನು ಎಷ್ಟು ದಿನ ಸಂಸಾರವೋ ಎಂದು ಶಾರದೆ ಮತ್ತೆ ಮತ್ತೆ ಯೋಚಿಸಿದಳು. ಮಾಧವನ ಬೇಸರವನ್ನು ಸಮರ್ಥಿಸಲು, ಕ್ಷುಲ್ಲಕವೆಂದು ಕಂಡುಬರಬಹುದಾದರೂ ಒಂದು ಸಮರ್ಪಕ ಕಾರಣವಿದೆಯೆಂದು ಅವಳ ಮನಸ್ಸಿಗೆ ಹೊಳೆಯದೆ ಇಲ್ಲ.

ತಾನು ಬಂಜೆಯೆಂದು ಮನಸ್ಸು ಒಪ್ಪಿಕೊಳ್ಳುತ್ತಿರಲಿಲ್ಲ. ಎರಡು ಶಸ್ತ್ರಕ್ರಿಯೆಗಳ ಕಾಲದಲ್ಲಿ ಮಾಧವ ಖರ್ಚು ಮಾಡಿದ ಹಣ, ಪಟ್ಟ ಪರಿಶ್ರಮ, ತನ್ನ ಆರೋಗ್ಯದ ವಿಚಾರದಲ್ಲಿ ಅವನು ನೂರಾರು ಡಾಕ್ಟರುಗಳನ್ನು ಕಂಡು ಕೇಳಿದ ಸಲಹೆ, ಇವೆಲ್ಲವೂ ಆಕೆಗೆ ಗೊತ್ತು. ಆದರೂ ಆತ ತನ್ನಿಂದ ಇದೇ ಕಾರಣಕ್ಕಾಗಿ ದೂರವಾಗುತ್ತಿದ್ದಾನೆ ಎಂದು ಯೋಚಿಸುವಾಗಲೆಲ್ಲ ಅವಳ ಮನಸ್ಸಿಗೆ ಸಾವಿರ ಮುಳ್ಳು ಚುಚ್ಚಿದ ವೇದನೆಯಾಗುವುದು.

ಸಂಜೆ ಏಳು ಘಂಟೆಗೆ ರಾಧಾಕೃಷ್ಣ ಮನೆಗೆ ಬಂದ. ಅಡುಗೆಯವನು ವಾಯುಸೇವನೆಗೆಂದು ಹೊರಗೆ ಹೋಗಿದ್ದ. ಲಲಿತ, ವಸಂತರು ಇನ್ನೂ ಬಂದಿರಲಿಲ್ಲ. ಆ ಕಾರಣ ಮನೆಯಲ್ಲಿದ್ದುದು ಶಾರದೆ ಒಬ್ಬಳೇ.

ರಾಧಾಕೃಷ್ಣನನ್ನು ಕಂಡೊಡನೆಯೇ ಆಕೆ ಕೇಳಿದಳು.

“ಹೇಗಿದ್ದಾಳೆ ಕಮಲಾ ವಾಗ್, ರಾಧಾ?”

ರಾಧಾಕೃಷ್ಣನಿಗೆ ಈ ಪ್ರಶ್ನೆ ಕೂಡಲೇ ಅರ್ಥವಾಗಲಿಲ್ಲ. ಆದರೆ ಶಾರದೆಯ ಬಾಡಿದ ಮುಖ, ಕೆದರಿದ ತಲೆ, ಗುಳಿಬಿದ್ದ ಕಣ್ಣು ಇವೆಲ್ಲವನ್ನು ನೋಡಿದಾಗ ಆಕೆ ಬೇಸರದಲ್ಲಿರುವಳೆಂದು ತಿಳಿಯಲು ಕಷ್ಟವಾಗಲಿಲ್ಲ.

“ಯಾಕೆ ಅತ್ತಿಗೆ ಹಾಗೆ ಕೇಳುತ್ತೀರಿ?”

“ಪುಣೆಗೆ ಹೋದಿ. ಯಾಕೆ ಎಂದು ಹೇಳಿ ಹೋಗಲಿಲ್ಲ. ಹೇಗಿದ್ದರೂ ಹೋದವನು ಡಾ. ವಾಗ್‌ರ ಮನೆಗೆ ಹೋಗದೆ ಇರಲಿಕ್ಕಾಗುತ್ತದೆಯೆ? ಅದೇ ಕಮಲಾ ಹೇಗಿದ್ದಾಳೆಂದು ಕೇಳಿದೆ.”

ರಾಧಾಕೃಷ್ಣ ನಗಲಾರಂಭಿಸಿದ.

“ನಾನು ಹೋದದ್ದು ಡಾ. ವಾಗ್‌ರವರಲ್ಲಿಗೇ ಅತ್ತಿಗೆ. ಆದರೆ ಕಮಲಳನ್ನು ನೋಡಲಿಕ್ಕೆಂದಲ್ಲ.”

“ನಾನೇನು ಅವಳನ್ನು ನೋಡಲಿಕ್ಕೆಂದು ಹೋಗಿದ್ದಿಯೆಂದು ಹೇಳಿದೆನೇನು? ನಿನ್ನ ಹೆಂಡತಿಯಾಗಬಹುದಾದ ಹುಡುಗಿ. ಹೇಗಿದ್ದಾಳೆಂದು ಕೇಳಿದೆ, ಅಷ್ಟೆ.”

“ನನ್ನ ಹೆಂಡತಿ!”

“ಏನು ನಿನ್ನ ಹೆಂಡತಿಯಾಗಬಾರದೆ? ಕಲಿತ ಹುಡುಗಿ. ಬೇಕಾದಷ್ಟು ಫ್ಯಾಶನೇಬಲ್.”

“ಅಣ್ಣ ತಮಾಷೆಗೆ ಒಂದು ನಾಟಕ ಆಡಿಸಿದಾಂತ ನೀವು ಅದನ್ನು ನಂಬುವುದೇ ಅತ್ತಿಗೆ?”

ಈಗ ಮಾತ್ರ ಶಾರದೆ ತಬ್ಬಿಬ್ಬಾದಳು. “ಎಂಥಾ ನಾಟಕವೋ? ಏನು ಹೇಳಿದ್ದಾರೋ?” ಎಂದು ಕೇಳಿದಳು.

ಆದರೆ ರಾಧಾಕೃಷ್ಣನಿಗೆ ಉತ್ತರ ಕೊಡಲು ಅವಕಾಶ ಸಿಗಲಿಲ್ಲ. ಅರ್ಧ ತೆರೆದಿದ್ದ ಬಾಗಿಲುಗಳನ್ನು ದೂಡಿಕೊಂಡು ಮಾಧವ ಒಳಗೆ ಬಂದ. ರಾಧಾಕೃಷ್ಣನನ್ನು ನೋಡಿದೊಡನೆ “ಯಾವಾಗ ಬಂದಿ, ರಾಧಾ?” ಎಂದು ಕೇಳಿದ. ರಾಧಾಕೃಷ್ಣ ಕೋಣೆಯೊಳಗೆ ಹೋದ ತನ್ನ ಅಣ್ಣನನ್ನನುಸರಿಸಿದ.

ಅಣ್ಣತಮ್ಮಂದಿರು ಯಾವ ವಿಚಾರ ಮಾತನಾಡುತ್ತಿದ್ದಾರೋ, ಯಾವ ನಾಟಕ ಹೂಡಿದ್ದಾರೋ, ಏನಿದ್ದರೂ ತಾನಲ್ಲಿ ಈಗ ಸುಳಿಯುವುದು ಬೇಡ ಎಂದು ಶಾರದೆ ಬಾಲ್ಕನಿಗೆ ಬಂದು ನಿಂತಳು.

ಹದಿನೈದು ನಿಮಿಷಗಳಲ್ಲಿ ರಾಧಾಕೃಷ್ಣ ಮರಳಿ ಬಂದ, ಇವಳಿದ್ದಲ್ಲಿಗೆ.

“ಅತ್ತಿಗೆ!”

“ನಿಮಗೆ ನನ್ನ ಮೇಲೆ ಸಿಟ್ಟು ಬಂದಿದೆಯೆ, ಅತ್ತಿಗೆ?”

“ಸಿಟ್ಟೇಕೆ ರಾಧಾ?”

“ನಾನು ಪುಣೆಗೆ ಹೋದದ್ದು ನಿಮ್ಮ ಕೆಲಸದ ಸಲುವಾಗಿಯೆ, ಅತ್ತಿಗೆ. ಅಣ್ಣ ನಿಮ್ಮ ಹತ್ತಿರ ಹೇಳಬಾರದೆಂದು ಆಜ್ಞಾಪಿಸಿದ್ದ. ಆದರೆ ಅವನ ಮಾತು ಮುರಿದು ಈಗ ಹೇಳುತ್ತಿದ್ದೇನೆ.”

“ಅವರು ನಿನ್ನ ಅಣ್ಣ, ಅವರು ಹೇಳಿದ ಹಾಗೆಯೇ ಮಾಡಲ್ಲ!”

“ನಿಮ್ಮ 'ಕೇಸ್ ಹಿಸ್ಟರಿ', ಎಕ್ಸ್ ರೇ ಫೋಟೋ ಇವೆಲ್ಲ ತೆಗೆದುಕೊಂಡು ಹೋಗಿದ್ದೆ ಅತ್ತಿಗೆ. ಡಾ. ವಾಗ್‌ರವರ ಇಂಗ್ಲೆಂಡಿನ ಮಿತ್ರರೊಬ್ಬರು ಅಲ್ಲಿಗೆ ಬಂದಿದ್ದಾರೆ. ಸುಪ್ರಸಿದ್ಧ ಸರ್ಜನ್ ಅಂತೆ ಅವರು.”

ಈಗ ಮಾತ್ರ ಶಾರದೆಗಾದ ಆಶ್ಚರ್ಯ ಅಷ್ಟಿಷ್ಟಲ್ಲ. ಇದೇನು ಸ್ವಪ್ನವೇ ಅಥವಾ ರಾಧಾ

ತನ್ನನ್ನು ಅಣಕಿಸಲು ಸುಳ್ಳಾಡುತ್ತಿದ್ದಾನೆಯೆ ಎಂದು ಯೋಚಿಸಿದಳು.

"ವಾಗ್ ರವರ ನರ್ಸಿಂಗ್‌ಹೋಮುದಲ್ಲೇ ಬಂದು ಆಪರೇಶನ್ ಮಾಡುತ್ತಾರಂತೆ ಅತ್ತಿಗೆ. ಡಾ. ಶಿಂದೆ ಮತ್ತು ಶಿರೋಡ್ಕರ್‌ರನ್ನು ಇಲ್ಲಿಂದ ಕರೆಸಿಕೊಳ್ಳುತ್ತಾರಂತೆ."

ಈಗಲೂ ಶಾರದೆ ಮಾತನಾಡಲಿಲ್ಲ.

"ಡಾ. ವಾಗ್ ನಮ್ಮಲ್ಲಿಗೆ ಬಂದದ್ದು ಇದಕ್ಕಾಗಿಯೆ, ಅತ್ತಿಗೆ. ಅವರು ಹೋದಲ್ಲೆಲ್ಲ ಹೆಂಡತಿಯನ್ನೂ ಮಗಳನ್ನೂ ಕಟ್ಟಿಕೊಂಡು ಹೋಗುವುದು ವಾಡಿಕೆ. ಆ ಕಾರಣ ಅಣ್ಣ ಕಮಲಳೊಂದಿಗೆ ಸ್ವಲ್ಪ 'ಸೋಶಿಯಲ್' ಆಗಿ ಇರು ಎಂದು ಹೇಳಿದ, ಅತ್ತಿಗೆ."

ಶಾರದೆಯ ಮೌನ ಅದೇ ರೀತಿ ಮುಂದುವರಿದಿತ್ತು. ಅವಳ ಹೃದಯದಲ್ಲಿ ಪುನಃ ಉತ್ಪಾತವೆದ್ದಿತ್ತು. ಮಾಧವ ತನಗಾಗಿ ಇಷ್ಟೆಲ್ಲ ಮಾಡಿದ್ದಾನೆಯೆ! ತನ್ನಿಂದ ದೂರ ಹೋಗಿರುವ ಗಂಡ ತನ್ನಲ್ಲಿ ಇನ್ನೂ ಅಷ್ಟು ವಿಶ್ವಾಸವಿಟ್ಟುಕೊಂಡಿದ್ದಾನೆಯೆ!

ಮೂರುನಾಲ್ಕು ವರ್ಷಗಳ ರಸಹೀನ ದಾಂಪತ್ಯ ಜೀವನದ ಹಲವಾರು ಸನ್ನಿವೇಶಗಳು ಒಂದರ ಹಿಂದೆ ಒಂದು, ಒಂದೇ ಕ್ಷಣದಲ್ಲಿ ಕಣ್ಣಮುಂದೆ ಸುಳಿದಂತೆ ಆಕೆಗೆ ಕಂಡುಬಂತು.

ಹಾಗಾದರೆ ತಾನು ತಪ್ಪು ಮಾಡಿದವಳೆ? ಮಾಧವನ ದೃಷ್ಟಿಯಲ್ಲಿ ತಾನು ಅಪರಾಧಿಯೆ?

ಅತ್ತೆಯ ಮಾತು ಪುನಃ ಪುನಃ ನೆನಪಾಗುತ್ತಿತ್ತು. "ನನ್ನ ಮಗುವನ್ನು ನಿನಗೊಪ್ಪಿಸುತ್ತೇನೆ, ಶಾರದಾ. ಅವನನ್ನು ನೋಡಿಕೊಂಡು ಬರುವ ಹೊಣೆ ನಿನ್ನದು."

ಅತ್ತಿಗೆಯ ಮನಸ್ಸಿನ ಕೋಲಾಹಲವನ್ನು ಊಹಿಸಲು ರಾಧಾಕೃಷ್ಣ ಅಸಮರ್ಥನಾದರೂ ಮೌನ ಕಂಡು ಬೆದರಿದ.

"ಇನ್ನೂ ಕಮಲಾ ವಾಗ್‌ಳ ಯೋಚನೆಯೆ ಅತ್ತಿಗೆ?"

"ಇಲ್ಲ ರಾಧಾ."

ಇನ್ನೊಂದು ಮಾತು ನಿಮ್ಮೊಡನೆ ಹೇಳಬೇಕಾಗಿದೆ ಅತ್ತಿಗೆ. ನಾನು ಕುಮುದೆಯನ್ನು ಮದುವೆಯಾಗುವುದು ನಿಶ್ಚಯವಾಗಿದೆ."

ಕುಮುದೆ! ಶಾರದೆಯ ಸಣ್ಣ ತಂಗಿ ಕುಮುದೆ!

"ಇದು ಸತ್ಯವೇನೋ?"

"ಹೌದು ಅತ್ತಿಗೆ. ನನಗೆ ಕೆಲಸ ಸಿಗದೆ ಮದುವೆಯಾಗುವುದಿಲ್ಲ ಎಂದು ನಿಶ್ಚಯಿಸಿದ್ದೇನೆ. ಅಪ್ಪ ಕೂಡಾ ಹಾಗೆಯೇ ಹೇಳಿದ್ದಾರೆ. ಕೆಲಸ ಸಿಗುವ ತನಕ ನಿಮಗೆ ತಿಳಿಸಬಾರದು ಎಂದು ಕುಮುದ ಹೇಳಿದ್ದರಿಂದ ನಾನು ನಿಮಗೆ ಹೇಳಲಿಲ್ಲ, ಅತ್ತಿಗೆ."

ಈಗಲೂ ಶಾರದೆ ಮೌನ.

ಅಷ್ಟರಲ್ಲಿ ಮಾಧವ "ಶಾರದಾ" ಎಂದು ಕರೆದುದು ಕೇಳಬಂತು. ಶಾರದೆ ಲಗುಬಗೆಯಿಂದೆದ್ದು ತನ್ನ ಕೋಣೆಗೆ ಓಡಿದಳು.

ಮಾಧವ ಮಲಗಿ ಏನನ್ನೋ ಯೋಚಿಸುತ್ತಿದ್ದ. ಶಾರದೆ ಒಳಗೆ ಬಂದವಳೇ ಮಾಧವನ ಬಳಿ ಹಾಸಿಗೆಯ ಮೇಲೆ ಕುಳಿತು ಯಾಕೆ ಕರೆದಿರಿ? ಹಾಲು ತರಲೆ? ಎಂದು ಮೃದುವಾಗಿ ಕೇಳಿದಳು.

"ನಿನ್ನ ಸಿಟ್ಟು ಇಳಿದಿದೆಯೆ? ನಾಳೆ ಪುಣೆಗೆ ಹೋಗಬೇಕು. ಒಂದು ಸೂಟ್‌ಕೇಸು ಬಟ್ಟೆ ತುಂಬಿಸು. ಒಂದೆರಡು ವಾರ ಅಲ್ಲಿ ಇರಬೇಕಾದೀತು."

ಶಾರದೆ ಮಾಧವನ ಎದೆಯ ಮೇಲೆ ತಲೆಯಿಟ್ಟು ಅಳಲಾರಂಭಿಸಿದಳು. "ನನ್ನನ್ನು ಕ್ಷಮಿಸಿ. ನನ್ನನ್ನು ಕ್ಷಮಿಸಿ."

"ಅಳಲಿಕ್ಕೇನಾಗಿದೆಯೇ ಈಗ? ಎಲ್ಲಾದರೂ ಹುಚ್ಚುಗಿಚ್ಚು ಹಿಡಿದಿದೆಯೇನು?" ಎಂದು ಶಾರದೆಯನ್ನು ಬಿಗಿದಪ್ಪಿ ಮಾಧವ ಕೇಳಿದ.

ಈಗ ಶಾರದೆಗೆ ಮಾತು ಬೇಕಿರಲಿಲ್ಲ. ಮಾಧವನ ತೋಳಸೆರೆಯಲ್ಲಿ ಅವಳಿಗೆ ಪುನಃ ಸ್ವರ್ಗ ಸಿಕ್ಕಿತ್ತು. ಆ ಪ್ರೇಮದ ಹಿಡಿತದ ಸೆರೆಯಲ್ಲಿ ಅವಳ ಮೈ ಮನಗಳು ವಿಶ್ರಾಂತಿಯ ಹಾಡು ಹಾಡುತ್ತಿದ್ದವು.

ಮನಸ್ಸಿನಾಳದಲ್ಲಿ ಮಾತ್ರ ಒಂದು ಸಣ್ಣದನಿ ಶ್ರುತಿಹಿಡಿದಂತೆ ಕೂಗುತ್ತಿತ್ತು. "ನಾನು ಬಂಜೆಯಲ್ಲ, ನಾನು ಬಂಜೆಯಲ್ಲ."

ಶ್ರೀ. ರಂ. ರಾ. ದಿವಾಕರ,
ಭಾರತದ ಸುದ್ದಿ ಆಕಾಶವಾಣಿ
ಶಾಖೆಯ ಮಂತ್ರಿಗಳು, ಅವರಿಂದ



ಧಾರವಾಡದ ಆಕಾಶವಾಣಿ ಕೇಂದ್ರ

ಆಕಾಶವಾಣಿಯ ನಾಲ್ಕು ವರ್ಷ

ಆಕಾಶವಾಣಿಯು ಸಾಮಾನ್ಯ ಜನರಿಗೆ ಸಂಗೀತ, ಕಲೆ, ವಿಜ್ಞಾನ, ಮನೋರಂಜನೆಗಳನ್ನು ಅಗ್ಗವಾಗಿ ಒದಗಿಸುವ ಸಾಧನವಾಗಿದೆ. ಭಾರತದಲ್ಲಿ ಅದು ಕಳೆದ ನಾಲ್ಕು ಸ್ವಾತಂತ್ರ್ಯೋತ್ತರ ವರ್ಷಗಳಲ್ಲಿ ಸಾಧಿಸಿದ ಪ್ರಗತಿಯನ್ನು ಆ ಶಾಖೆಯ ಮಂತ್ರಿಗಳೇ ಇಲ್ಲಿ ವಿವರಿಸಿದ್ದಾರೆ.

ವಿದ್ಯುತ್ ಶಕ್ತಿಯ ಉಪಯೋಗ ಮುಂದೆ ಎಷ್ಟು ಆಗಬಹುದು ಎನ್ನುವುದನ್ನು ಅದನ್ನು ಕಂಡು ಹಿಡಿದ ಶಾಸ್ತ್ರಜ್ಞರು ಖಂಡಿತ ಊಹಿಸಿರಲಿಲ್ಲ. ಕ್ಷಣ ಮಾತ್ರದಲ್ಲಿ ಶಬ್ದವನ್ನೂ ಮಾನವನ ಧ್ವನಿಯನ್ನೂ ಪ್ರಪಂಚದ ಮೂಲೆಮೂಲೆಯಲ್ಲಿ ಕೇಳುವಂತೆ ಮಾಡಲು ಸಾಧ್ಯವೆನ್ನುವುದನ್ನು ಅವರು ಕನಸಿನಲ್ಲಿಯೂ ಎಣಿಸಿರಲಿಲ್ಲ. ವಿದ್ಯುತ್ ಶಕ್ತಿಯ ಪ್ರಸಾರ ಎಲ್ಲ ತರಹದ ತಡೆಗಳನ್ನೂ ಭೇದಿಸಿದೆ. ಇದರೊಡನೆ "ಫೋಟೋಗ್ರಫಿ" ಸೇರಿ "ಟೆಲಿವಿಜನ್" ಹುಟ್ಟಿದೆ. ಇನ್ನು ಕೆಲವಾರು ವರ್ಷಗಳಲ್ಲಿಯೇ ದೂರದಲ್ಲಿ ನಡೆಯುತ್ತಿರುವ ಘಟನೆಗಳು ನಮ್ಮ ಕಣ್ಣ ಮುಂದೆ ಸುಳಿಯುವಂತೆ ಆಗಲು ಸಾಧ್ಯವಾದೀತು.

ಭವಿಷ್ಯತ್ತಿನಲ್ಲಿ ಆಗುವದನ್ನು ಕನಸು ಕಾಣುತ್ತಿರುವಾಗ, ಈಗ ಭಾರತದಲ್ಲಿ ಪ್ರಸಾರ ಕಾರ್ಯ ಹೇಗೆ ಜರುಗುತ್ತಿದೆ ಎನ್ನುವುದನ್ನೂ ತಿಳಿದುಕೊಳ್ಳಬೇಕು. "ಟೆಲಿವಿಜನ್" ಇನ್ನೂ ಇಲ್ಲಿಗೆ ಬಂದಿಲ್ಲ; ಆದರೆ ಭಾರತದ ಪ್ರಸಾರಕಾರ್ಯದ ಚರಿತ್ರೆ ಬಹು ಸ್ವಾರಸ್ಯವಾಗಿದೆ. ಅದರ ಪೂರ್ಣ ಕತೆಯನ್ನು ಹೇಳಲು ನನಗೆ ಸಾಧ್ಯವಿಲ್ಲ. ಕಳೆದ ನಾಲ್ಕು ವರ್ಷಗಳಲ್ಲಿ ಆದ ಪ್ರಗತಿಯನ್ನು ಇಲ್ಲಿ ಹೇಳುತ್ತೇನೆ. ಸಾಕಷ್ಟು ಪ್ರಗತಿ, ಅಲ್ಪವಾದರೂ ಮಹತ್ವಪೂರ್ಣವಾದ ಈ ಕಾಲದಲ್ಲಿ ಆಗಿದೆಯೇ ಇಲ್ಲವೇ ಎಂದು ಓದುಗರೇ ತೀರ್ಮಾನಿಸಲಿ. ಈ ವಿಷಯಗಳಲ್ಲಿ ನಾವು ಪಾಶ್ಚಿಮಾತ್ಯ ದೇಶಗಳೊಡನೆ ಅಥವಾ ಅಮೆರಿಕಾ ದೇಶದೊಡನೆ ಹೋಲಿಸಿಕೊಳ್ಳುವುದುಂಟು; ಹಾಗೆ ಮಾಡುವುದೂ ಸಹಜ. ನಮ್ಮ ಗುರಿಯನ್ನು ಗೊತ್ತುಮಾಡಿಕೊಳ್ಳಲು ಮತ್ತು ಅದರೆಡೆಗೆ ಬೇಗಬೇಗ ಹೋಗಲು ಈ ಹೋಲಿಕೆಗಳು ಅಗತ್ಯವಾದರೂ ನಾವು ಆ ದೇಶಗಳಿಗೆ ಸರಿಸಮಾನವಾಗಿಲ್ಲ ಎಂದು ನಮ್ಮ ಮನಸ್ಸು ಹೆಚ್ಚಿಗೆ ಕುಗ್ಗಬೇಕಾದುದಿಲ್ಲ. ಆ ದೇಶಗಳು ಬಹಳ ವರ್ಷಗಳಿಂದ ಸ್ವತಂತ್ರವಾಗಿವೆ; ನಮಗಿಂತಲೂ ಬಹಳ ಮುಂಚಿನಿಂದ ವಿಜ್ಞಾನ ಮತ್ತು ಯಂತ್ರಶೋಧನೆಯ ಪಂಥ್ಯದಲ್ಲಿ ಅವರು ಆಸಕ್ತಿ ವಹಿಸಿದ್ದರು. ನಮ್ಮ ದೇಶಕ್ಕೆ ಅವರ ಅನುಕೂಲಗಳಾಗಲಿ, ಅವಕಾಶಗಳಾಗಲಿ ಒಂದೂ ಇರಲಿಲ್ಲ. ಆದ್ದರಿಂದ ಈ ವಿಷಯದಲ್ಲಿ ಹೋಲಿಕೆಗಳನ್ನು ತರುವುದು ಪ್ರಯೋಜನವಿಲ್ಲ. ಈಗ ಇರುವ ಕೆಲವು ವಿಷಯಗಳನ್ನೂ ಶೀಘ್ರ ಪ್ರಗತಿಯಾಗುವ ಮಾರ್ಗದಲ್ಲಿ ಇರುವ ತೊಡಕುಗಳನ್ನೂ ಹೇಳಬಯಸುತ್ತೇನೆ.

ಸ್ವಾತಂತ್ರ್ಯದ ಸಂತೋಷದ ಜೊತೆಗೆ ನಮಗೆಲ್ಲ ದೇಶವು ಇಬ್ಭಾಗವಾದುದರ ದುಃಖವೂ ಬಂತು. ಈ ವಿಭಜನೆಯ ಪರಿಣಾಮ ಸರಕಾರದ ಪ್ರತಿ ಶಾಖೆಯ ಮೇಲೂ ಭಾರತೀಯ ಜೀವನದ ಪ್ರತಿ ಚಟುವಟಿಕೆಯ ಮೇಲೂ ಆಯಿತು. ವಿಭಜನೆಗೆ ಮುಂಚೆ ಒಂಭತ್ತು ಪ್ರಸಾರ ಕೇಂದ್ರಗಳಿದ್ದವು; ವಿಭಜನೆಯಾದ ಮೇಲೆ ಅಖಿಲ ಭಾರತ ಆಕಾಶವಾಣಿ (All India Radio)ಗೆ

ಕೇವಲ ಆರು ಕೇಂದ್ರಗಳು ಉಳಿದವು. ನೌಕರರಿಗೆ ಮತ್ತು ಕಲಾವಿದರಿಗೆ ಸ್ಥಳಪಲ್ಲಟವಾಯಿತು. ನಮ್ಮ ಪ್ರಸಾರವನ್ನು ಕೇಳುವವರ ಸಂಖ್ಯೆಯೂ ಕುಗ್ಗಿತು. ಆದ್ದರಿಂದ ೧೯೪೭ನೆಯ ಆಗಸ್ಟ ೧೫ ರಿಂದ ನಮ್ಮ ಹೊಸ ಜೀವನ ಆರಂಭವಾಯಿತು; ಅಂದಿನಿಂದ ನಾವು ಈ ಸಂಸ್ಥೆಯನ್ನು ಹೊಸದಾಗಿ ಕಟ್ಟಲು ಮೊದಲು ಮಾಡಿದೆವು. ನಮ್ಮ ಶಾಖೆ ಭಾರತ ಸರಕಾರದ ಪ್ರವರ್ಧಮಾನ ಶಾಖೆಗಳಲ್ಲಿ ಒಂದಾಗಿದ್ದುದರಿಂದ, ಸರಕಾರದ ದುಡ್ಡಿನ ಮುಗ್ಗಟ್ಟು ಮತ್ತು ಇತರ ಕಷ್ಟಗಳಲ್ಲಿ ತಾನೂ ಸಹಜವಾಗಿ ಭಾಗಿಯಾಯಿತು.

೧೯೪೭ನೇ ಆಗಸ್ಟ ೧೫ರಲ್ಲಿ ಆಕಾಶವಾಣಿಯ ಕೇಂದ್ರಗಳು ಆರು ಮಾತ್ರ ಇದ್ದವು; ಅವುಗಳ "ಸ್ಟೂಡಿಯೋ''ಗಳಲ್ಲಿ ಒಟ್ಟು ೪೯ ಜನರು ಕೆಲಸ ಮಾಡುತ್ತಿದ್ದರು. ಇಂದು ಒಟ್ಟು ೨೧ ಕೇಂದ್ರಗಳಿವೆ. ಅವುಗಳಲ್ಲಿ ಜಲಂಧರ ಕೇಂದ್ರ ಅಮೃತಸರದೊಡನೆಯೂ ಶಿಲಾಂಗ್ ಕೇಂದ್ರ ಗೌಹಾತಿಯೊಡನೆಯೂ ಹೊಂದಿಕೊಂಡಿವೆ. ೯ ಕೇಂದ್ರಗಳು ಕೇವಲ ಸಣ್ಣವು; ಇನ್ನು ಎರಡರ ಪ್ರಸಾರ ಯಂತ್ರಗಳ ಶಕ್ತಿ ಒಂದು "ಕಿಲೋವಾಟ್'' ಗಿಂತ ಕಡಮೆ. ಆಕಾಶವಾಣಿಯಲ್ಲಿ ಒಟ್ಟು ೧೦೫ ಸ್ಟೂಡಿಯೋಗಳಿವೆ. ಶಾಂತಿನಿಕೇತನದಲ್ಲಿ ಮತ್ತು ಸಿಮಲಾದಲ್ಲಿ ಎರಡುಸಹಾ ಯಕ ಸ್ಟೂಡಿಯೋಗಳಿವೆ. ಸ್ವಾತಂತ್ರ್ಯ ಲಭಿಸಿದ ದಿನ ಇದ್ದ ಆರು ಕೇಂದ್ರಗಳು ೩೩೫·೨೫ 'ಕಿಲೊವಾಟ್', ಶಕ್ತಿಯ ಯಂತ್ರದಿಂದ ಪ್ರಸಾರ ಮಾಡುತ್ತಿದ್ದವು. ಆದರೆ ಇಂದು ಅವುಗಳ ಶಕ್ತಿ ೪೧೯.೧೫ 'ಕಿಲೋವಾಟ್'ಗಳಾಗಿವೆ. ೧೯೪೭ ರಲ್ಲಿ ಭಾರತದಲ್ಲಿ ಒಟ್ಟು ೨,೫೬,೧೬೧ ರೇಡಿಯೊಗಳು ಇದ್ದವು. ೧೯೫೧ ರ ಎಪ್ರಿಲಿನಲ್ಲಿ ಅದರ ಸಂಖ್ಯೆ ೬,೦೩,೭೧೦ ಆಯಿತು. ಸಾಮೂಹಿಕ ಉಪಯೋಗಕ್ಕೆ ರಾಜ್ಯಗಳ ಸರಕಾರಗಳು ಕೆಲವು ಗೊತ್ತಾದ ಹಳ್ಳಿಗಳಿಗೆ ೧೯೪೭ ರಲ್ಲಿ ೨,೯೯೩ ರೇಡಿಯೋಗಳನ್ನು ಕೊಟ್ಟವು; ೧೯೫೧ ರ ಎಪ್ರಿಲಿನಲ್ಲಿ ಸಾಮೂಹಿಕ ರೇಡಿಯೋಗಳ ಸಂಖ್ಯೆ ೪,೩೦೦ ಆಯಿತು. ಕೇವಲ ೧೨ ಭಾರತದ ಭಾಷೆಗಳಲ್ಲಿ ಮತ್ತು ೯ ವಿದೇಶಿ ಭಾಷೆಗಳಲ್ಲಿ ಆಕಾಶವಾಣಿ ೧೯೪೭ ರಲ್ಲಿ ಪ್ರಸಾರ ಮಾಡುತ್ತಿತ್ತು. ಇಂದು ೧೫ ಭಾರತದ ಭಾಷೆಗಳಲ್ಲಿ ಮತ್ತು ೮ ವಿದೇಶಿ ಭಾಷೆಗಳಲ್ಲಿ ಪ್ರಸಾರ ಮಾಡುತ್ತಿದೆ. ವಿದೇಶಿ ಭಾಷೆಗಳಲ್ಲಿ ೧೯೪೭ ರಲ್ಲಿ ಆಗ್ನೇಯ ಏಶಿಯ, ದೂರಪ್ರಾಚ್ಯ, ದಕ್ಷಿಣ ಮತ್ತು ಪೂರ್ವ ಆಫ್ರಿಕ, ಮಾರಿಶಸ್, ಬರ್ಮಾ, ಅಫಗಾನಿಸ್ತಾನ್, ವಾಯವ್ಯ ಗಡಿನಾಡು, ಇರಾಣ, ಇರಾಣಿ ಕೊಲ್ಲಿ, ಸಿರಿಯಾ, ಲೆಬನಾನ್, ಇರಾಕ್, ಟ್ರಾನ್ಸ ಜೋರ್ಡಾನ್, ಯಮೆನ್, ಈಜಿಪ್ಟ ಮತ್ತು ಸೌದಿ ಅರೇಬಿಯಗಳಿಗೆ ಪ್ರಸಾರ ಮಾಡುತಿತ್ತು. ಈಚೆಗೆ ಇವುಗಳ ಜೊತೆಗೆ ಮಲಯಾ, ಥೈಲಾಂಡ, ಇಂಡೊ ಚೈನಾ, ಇಂಡೋನೇಶಿಯಾ, ಚೀನ ಮತ್ತು ವೆಸ್ಟ ಇಂಡೀಸ್ ದ್ವೀಪಗಳಿಗೂ ಪ್ರಸಾರ ಮಾಡುತ್ತಿದೆ. ೧೯೪೭ ರಲ್ಲಿ ಆಕಾಶವಾಣಿಯ ವಿವಿಧ ಪ್ರಸಾರಗಳ ಒಟ್ಟು ಕಾಲ ದಿನಕ್ಕೆ ೧೨೦ ಗಂಟೆಗಳಾಗುತ್ತಿತ್ತು; ಅದೇ ಇಂದು ದಿನಕ್ಕೆ ೧೯೦॥ ಗಂಟೆಗಳಾಗುತ್ತದೆ. ೧೯೪೭ ರಲ್ಲಿ ಹೊರದೇಶಗಳಿಗೆ ೧೪ ಗಂಟೆ ೫ ನಿಮಿಷಗಳಷ್ಟು ಪ್ರಸಾರವನ್ನು ಆಕಾಶವಾಣಿ ಪ್ರತಿದಿನವೂ ಮಾಡುತಿತ್ತು. ಇಂದು ಅದೇ ಪ್ರಸಾರ ೧೯ ಗಂಟೆ ೩೫ ನಿಮಿಷಗಳಷ್ಟು ಹಿಡಿಯುತ್ತದೆ. ಆಗ ೫ ಕಾರ್ಯಕ್ರಮ ಸೂಚಕ ಪತ್ರಿಕೆಗಳು ಪ್ರಕಟವಾಗುತ್ತಿದ್ದವು; ಈಗ ೭ ಸೂಚಕ ಪತ್ರಿಕೆಗಳು ದೇಶದ ಉಪಯೋಗಕ್ಕೂ ೩ ಸೂಚಕ ಪತ್ರಿಕೆಗಳು ಹೊರಪ್ರಸಾರದ ಉಪಯೋಗಕ್ಕೂ ಪ್ರಕಟವಾಗುತ್ತಿವೆ.

ಸ್ಥೂಲವಾಗಿ ಹೇಳುವದಾದರೆ ಕಳೆದ ನಾಲ್ಕು ವರ್ಷಗಳಲ್ಲಿ ಮೇಲೆ ಹೇಳಿರುವಷ್ಟು ಪ್ರಗತಿಯಾಗಿದೆ. ಭಾರತಕ್ಕೆ ಇನ್ನೂ ಹೆಚ್ಚಾಗಿ 'ಮೀಡಿಯಮ್ ವೇವ್' ಕೇಂದ್ರಗಳು, ಮತ್ತು ಸ್ಥಳೀಯ ಭಾಷೆಗಳಲ್ಲಿ ಹೆಚ್ಚು ಪ್ರಸಾರವು ಬೇಕು. ಹೀಗೆ ಆದರೆ ದೇಶದೊಳಗಿನ ಪ್ರಸಾರಕಾರ್ಯ ಚನ್ನಾಗಿ ಅಭಿವೃದ್ಧಿಯಾಗುತ್ತದೆ. ಅಭಿವೃದ್ಧಿಯೋಜನೆಯಲ್ಲಿ ಅಗತ್ಯ ಪ್ರಸಾರಗಳಿಗೆಲ್ಲಾ ಎಡೆಯಿದೆ. ಆ ಯೋಜನೆ ಪೂರ್ಣವಾಗಿ ಕೈಗೂಡಿದಾಗ ಇಡಿ ಭಾರತಕ್ಕೆಲ್ಲ ಪ್ರಸಾರ ಮುಟ್ಟುತ್ತದೆ. ಮತ್ತು ೭೬ ವಿವಿಧ ಭಾಷೆಗಳಲ್ಲಿ ಪ್ರಸಾರ ಕಾರ್ಯ ಜರಗುತ್ತದೆ. ಸುಮಾರು ಎರಡು ಲಕ್ಷ ಜನರು ಮಾತನಾಡುವ ಪ್ರತಿ ಭಾಷೆಯಲ್ಲೂ ಒಂದಲ್ಲ ಒಂದು ವಿಧವಾದ ಪ್ರಸಾರ ಕಾರ್ಯವಿರುತ್ತದೆ. ಯೋಜನೆ ಬಯಸಿದಂತೆ ಮುಂದುವರಿಯಲು ಸಾಧ್ಯವಾಗಿಲ್ಲ. ಚಿಕ್ಕ ಕೇಂದ್ರಗಳನ್ನು ದೊಡ್ಡವನ್ನಾಗಿ ಮಾಡಿ, ಹೆಚ್ಚಿನ ಶಕ್ತಿಯುಳ್ಳ "ಮೀಡಿಯಮ್ ವೇವ್'' ಯಂತ್ರಗಳನ್ನು ಕೆಲವು ದೊಡ್ಡ ಕೇಂದ್ರಗಳಲ್ಲಿ ಇಡುವುದು ಇನ್ನೂ ಆಗದೆ ಉಳಿದಿದೆ. ಇದೆಲ್ಲ ಆಗಲು ಶ್ರೋತೃಗಳಿಂದ ಇನ್ನೂ ಹೆಚ್ಚು ಹಣ ಸರಕಾರಕ್ಕೆ ಸಲ್ಲಬೇಕು; ಆರ್ಥಿಕ ಸ್ಥಿತಿ ಉತ್ತಮವಾಗಬೇಕು; ಯಂತ್ರ ಸಾಮುಗ್ರಿ ಮತ್ತು ಸ್ಟೂಡಿಯೋಗಳಿಗೆ ಬೇಕಾಗುವ ಸಾಮುಗ್ರಿಗಳು ಬೇಗ ಸಿಗುವಂತಾಗಬೇಕು.

೧೯೪೭ ರ ಆಗಸ್ಟದಲ್ಲಿ ೧೨ ವಿವಿಧ ಕಾರ್ಯಕ್ರಮುಗಳು ನಡೆಯುತ್ತಿದ್ದವು. ಅವುಗಳಲ್ಲಿ ಸುದ್ದಿ, ಸಂಗೀತ, ವಿದ್ಯಾಪ್ರಸಾರ, ಹಳ್ಳಿಗರಿಗೆ ಪ್ರಸಾರ, ಭಾಷಣ ಮತ್ತು ನಾಟಕ ವಿಮರ್ಶೆ, ಶ್ರಮಜೀವಿಗಳ ಮತ್ತು ಹೆಂಗಸರು-ಮಕ್ಕಳ ಕಾರ್ಯಕ್ರಮಗಳೆಲ್ಲ ಸೇರಿವೆ. ಈ ನಾಲ್ಕು ವರ್ಷಗಳಲ್ಲಿ ಹೊಸದಾಗಿ ಸೇರಿಸಿದ ಕಾರ್ಯಕ್ರಮುಗಳಲ್ಲಿ ಶಾಸ್ತ್ರೀಯ ಸಂಗೀತ, ಜನಪ್ರಿಯ ಸಂಸ್ಕೃತ ಗ್ರಂಥಗಳಿಂದ ಓದುವುದು, ಹಿಂದೀ ಪಾಠಗಳು, ಅಂತಾ



ಮೈಸೂರಿನ ಆಕಾಶವಾಣಿ ಕೇಂದ್ರ

ಪಡಿಯಚ್ಚು : ಆಕಾಶವಾಣಿಯ ಕೃಪೆಯಿಂದ

ರಾಷ್ಟ್ರೀಯ ರೇಡಿಯೋ ಚರ್ಚೆ, ಅದೇ ರೀತಿಯ ಅಂತಾ ರಾಜ್ಯ ಚರ್ಚೆ-ಇವೆ. ಈ ಹೆಚ್ಚಿನ ಹೊಸ ಕಾರ್ಯಕ್ರಮಗಳು ಬಹುಮಟ್ಟಿಗೆ ಜನಗಳನ್ನು ಆಕರ್ಷಿಸಿವೆ. ಕೃಷಿಯೇ ಮುಖ್ಯವಾದ ಉದ್ಯಮವಾಗಿರುವ ಮತ್ತು ನೂರಕ್ಕೆ ೮೫ ಜನರು ಹಳ್ಳಿಗಳಲ್ಲಿಯೇ ವಾಸಮಾಡುತ್ತಿರುವ ಈ ದೇಶದಲ್ಲಿ ಹಳ್ಳಿಗರಿಗೆ ಸಂಬಂಧಿಸಿದ ಚರ್ಚೆಗಳ ಪ್ರಸಾರ ಬಹು ಮುಖ್ಯವೂ ಹೌದು, ಅವು ಮುಂದೆ ಇನ್ನೂ ಹೆಚ್ಚಾಗಿ ನಡೆಯಬೇಕು. ಚರ್ಚೆಗಳನ್ನು ಕೇಳುವುದರಲ್ಲಿ ಸಾಮಾನ್ಯ ಜನರೂ ಭಾಗವಹಿಸುವುದರಿಂದ, ಈ ಕಾರ್ಯಕ್ರಮ ಜನರ ನಿತ್ಯ ಜೀವನದ ಸಮಸ್ಯೆ ತೊಡಕುಗಳನ್ನು ಬಗೆಹರಿಸಲು ಸಹಾಯಕವಾಗುತ್ತದೆ; ಜನರ ಮನಸ್ಸಿನಲ್ಲಿ ಆಸಕ್ತಿ ಹುಟ್ಟಿಸಿ, ತೊಡಕುಗಳ ವಿಷಯಕ್ಕೆ ಅವರ ವಿಶೇಷ ಗಮನ ಸೆಳೆದು ಅವರನ್ನು ಕಾರ್ಯತತ್ಪರರನ್ನಾಗಿ ಮಾಡುತ್ತದೆ.

ಪ್ರಸಾರಸಂಸ್ಥೆ ಹೆಚ್ಚಾಗಿ ಅಭಿವೃದ್ಧಿಯಾಗಲು ಇರುವ ಮುಖ್ಯ ತೊಂದರೆಗಳಲ್ಲಿ ಹಣಕಾಸಿನ ಮುಗ್ಗಟ್ಟು ಒಂದಾದರೂ ಕರವನ್ನು ಹೆಚ್ಚಿಸಲು ಮತ್ತು ಇನ್ನೂ ಹೆಚ್ಚು ಜನರು ಪ್ರಸಾರವನ್ನು ಕೇಳುವಂತೆ ಮಾಡಲು ಅನೇಕ ಅಡಚಣೆಗಳಿವೆ. ಅನೇಕರಿಗೆ ರೇಡಿಯೋ ಯಂತ್ರಗಳನ್ನು ಕೊಂಡುಕೊಳ್ಳಲು ಹಣದ ಬಲವಿದ್ದರೂ ಅವರಲ್ಲಿ ರೇಡಿಯೋ ಪ್ರವೃತ್ತಿ ಸಾಕಷ್ಟು ಇಲ್ಲ. ಅಪೇಕ್ಷೆ ಇದ್ದರೂ ಕೊಳ್ಳಲು ಸಾಮರ್ಥ್ಯವಿಲ್ಲದವರ ವಿಷಯ ಬೇರೆ, ಹಣವಿದ್ದರೂ ಮನಸ್ಸಿಲ್ಲದವರ ವಿಷಯವೇ ಬೇರೆ. ಕಾರ್ಯಕ್ರಮಗಳನ್ನು ಇನ್ನೂ ಉತ್ತಮವಾಗಿ, ವೈವಿಧ್ಯಪೂರ್ಣವಾಗಿ ಮತ್ತು ಇನ್ನೂ ಆಕರ್ಷಕವಾಗಿ ಮಾಡಲು ಸಾಧ್ಯವಿರುವುದಾದರೂ ರೇಡಿಯೋವಿಗೆ ಕಿವಿಗೊಟ್ಟು ಆಲಿಸುವುದರ ಪ್ರಾಮುಖ್ಯ ಮತ್ತು ಅರ್ಧ ಅನೇಕ ಹಣವಂತರಿಗೆ ಗೊತ್ತಿಲ್ಲ. ಮನೋರಂಜನೆಗಳಲ್ಲದೆ ಮನೆಯಲ್ಲಿರುವವರೆಲ್ಲರಿಗೆ ಇದು ಬಹು ಪ್ರಯೋಜನಕರ ಎನ್ನುವುದನ್ನು ಅವರು ತಿಳಿದಿಲ್ಲ. ರೇಡಿಯೋ ಬಹು ಅವಶ್ಯ ಮತ್ತು ಪ್ರಯೋಜನ ಕೊಡಬಲ್ಲ ಅಮೂಲ್ಯ ವಸ್ತು. ಅದರಿಂದ ಆಗುವ ಉಪಯೋಗ ಅದರ ಮೇಲೆ ಖರ್ಚು ಮಾಡಿದುದಕ್ಕಿಂತಲೂ ಎಷ್ಟೋ ಹೆಚ್ಚು ಎಂದು ಜನರು ಇನ್ನೂ ಮನಗಂಡಿಲ್ಲ. ಅದೂ ಅಲ್ಲದೆ ವಿದ್ಯುತ್ ಶಕ್ತಿ ಎಲ್ಲರಿಗೂ ಸಿಗುವಂತಾಗಬೇಕು. ವಿದ್ಯುತ್ ಶಕ್ತಿ ಹೆಚ್ಚು ಹೆಚ್ಚು ಜನರಿಗೆ ಸಿಕ್ಕಂತೆ, ರೇಡಿಯೋ ಕೊಳ್ಳುವವರೂ ಹೆಚ್ಚುತ್ತಾರೆ. ಇಂದು ದೇಶದಲ್ಲಿ ಸುಮಾರು ೧೨ ಲಕ್ಷ "ಯುನಿಟ್"ಗಳಲ್ಲಿ ವಿದ್ಯುತ್ ಶಕ್ತಿ ಉಪಯೋಗಿಸುತ್ತಾರೆ; ಅದರಲ್ಲಿ ಅರ್ಧ ಕಡೆಗಳಲ್ಲಿ ರೇಡಿಯೋವನ್ನು ಇಟ್ಟುಕೊಂಡಿದ್ದಾರೆ. ವಿದ್ಯುತ್ ಶಕ್ತಿಯ ಉಪಯೋಗ ಹೆಚ್ಚಿದಂತೆ ರೇಡಿಯೋ ಪ್ರಸಾರ ಕೇಳುವವರ ಸಂಖ್ಯೆಯೂ ಮೇಲೆ ಹೇಳಿದ ಪ್ರಮಾಣದಲ್ಲಿ ಹೆಚ್ಚುತ್ತದೆಂದು ನಿರೀಕ್ಷಿಸಬಹುದು. ರೇಡಿಯೋ ಯಂತ್ರಗಳ ಅಧಿಕ ಬೆಲೆಯೂ ಮತ್ತೊಂದು ದೊಡ್ಡ ಅಡಚಣೆ. ರೇಡಿಯೋವನ್ನು ತಯಾರಿಸುವ ಇಲ್ಲವೇ ಅದರ ವಿವಿಧ ಭಾಗಗಳನ್ನು ಒಂದುಗೂಡಿಸುವ ಯಂತ್ರಗಳು ನಮ್ಮ ದೇಶದಲ್ಲಿ ಬಹಳ ಕಡಿಮೆ ಇವೆ. ಅವನ್ನು ತಯಾರಿಸಲು ಬೇಕಾದ ಸಾಮಗ್ರಿಯಲ್ಲಿ ಬಹುಭಾಗವನ್ನು ಮತ್ತು ಅದರ ಅನೇಕ ಭಾಗಗಳನ್ನು ಹೊರದೇಶಗಳಿಂದ ತರಿಸಿಕೊಳ್ಳಬೇಕು. ರೇಡಿಯೋವಿನ ಭಾಗಗಳನ್ನು ಎಷ್ಟು ಸಾಧ್ಯವೊ ಅಷ್ಟೆಲ್ಲವನ್ನು ತಯಾರಿಸಲು ಕೆಲವರು ಸರ್ವ ಪ್ರಯತ್ನಗಳನ್ನು ಮಾಡುತ್ತಿದ್ದರೂ ಅದರ ಪ್ರತಿಯೊಂದು ಭಾಗವನ್ನು ನಮ್ಮ ದೇಶದಲ್ಲಿ ತಯಾರಿಸಲು ಇನ್ನೂ ಕೆಲವು ವರ್ಷಗಳು ಬೇಕು. ಆದಾಗ್ಯೂ ಬೇಗನೇ ರೇಡಿಯೋವಿನ ಒಟ್ಟು ಬೆಲೆ ಕಡಿಮೆಯಾಗುವ ಭರವಸೆ ಇದೆ. ಅದರಿಂದ ಮಧ್ಯಮ ವರ್ಗದ ಜನರೂ ಅವನ್ನು ಕೊಂಡುಕೊಂಡು ಅದರ ಪೂರ್ಣ ಪ್ರಯೋಜನ ಪಡೆಯಬಹುದು.

ಇಷ್ಟೆಲ್ಲ ಕುಂದು ಕೊರತೆಗಳು ಈಗ ಇರುವುವಾದರೂ ಆಕಾಶವಾಣಿಗೆ ಒಂದು ವಿಶೇಷ ರೀತಿಯಲ್ಲಿ ಜನರ ಸೇವೆ ಮಾಡಲು ಅವಕಾಶವಿದೆ. ಮನಸ್ಸಿಗೆ ಆನಂದ ಉಂಟು ಮಾಡುವುದೇ ಅಲ್ಲದೆ ರೇಡಿಯೋವಿನಿಂದ ಸುದ್ದಿ ಸಮಾಚಾರಗಳೂ ತಿಳಿಯುತ್ತವೆ. ಜನರಿಗೆ ವಿದ್ಯಾಭ್ಯಾಸವಾಗುತ್ತದೆ. ಅನೇಕ ವಿಧಗಳಲ್ಲಿ ಸೇವೆ ಮಾಡುವುದಲ್ಲದೆ, ಇನ್ನು ಯಾವ ಸಂಸ್ಥೆಯಿಂದಲೂ ಆಗದಷ್ಟು ವಿವಿಧ ರೀತಿಯಲ್ಲಿ ಸೇವೆ ಸಹಾಯ ಮಾಡುವ ಶಕ್ತಿ ರೇಡಿಯೋವಿಗೆ ಇದೆ. ಒಂದು ಉದಾಹರಣೆ ತೆಗೆದುಕೊಳ್ಳಬಹುದು. ಸುದ್ದಿಯನ್ನು ಮೊದಲು ಕೊಡುವುದು ರೇಡಿಯೋ; ಎಲ್ಲ ಸುದ್ದಿಯನ್ನು ಸಮಗ್ರವಾಗಿ, ಸೂತ್ರರೂಪವಾಗಿ ಕೊಡುತ್ತದೆ. ಶಾಸನ ಸಭೆಯಲ್ಲಿ ದಿನವೆಲ್ಲ ನಡೆಯುವ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನು ಅದೇ ರಾತ್ರಿ ೯ ಗಂಟೆಯ ಪ್ರಸಾರದಲ್ಲಿ ಕೇಳಬಹುದು; ಇಲ್ಲದಿದ್ದಲ್ಲಿ ಅದೇ ಸುದ್ದಿಯನ್ನು ತಿಳಿದುಕೊಳ್ಳಲು ಮಾರನೇ ದಿನದ ಪತ್ರಿಕೆಗಳು ಬರುವ ತನಕ ಕಾಯಬೇಕಾಗುವುದು. ಆಕಾಶವಾಣಿ ಒಂದು ಕಲಾ ಕೇಂದ್ರ. ಈ ಕೇಂದ್ರದಿಂದ ಸಂಗೀತ-ಹಾಡುಗಾರಿಕೆ ಮತ್ತು ವಾದ್ಯಸಂಗೀತಗಳೆರಡೂ ಉತ್ತೇಜನಹೊಂದಿ ಜನಪ್ರಿಯವಾಗುತ್ತವೆ. ಹೀಗೆ ಮಾಡಲು ಬೇರೆ ಯಾವ ಸಂಸ್ಥೆಯಿಂದಲೂ ಸಾಧ್ಯವಿಲ್ಲ. ರಾಜರು ಮಹಾರಾಜರುಗಳು ಮತ್ತು ಸಿರಿವಂತರು ಕಲಾವಿದರಿಗೂ ಸಂಗೀತಗಾರರಿಗೂ ಪ್ರೋತ್ಸಾಹ ಕೊಡುತ್ತಿದ್ದ ಕಾಲವೊಂದು ಹಿಂದೆ ಇತ್ತು. ಆದರೆ ಆ ಕಲೆ ಮತ್ತು ಸಂಗೀತವನ್ನು ಮೆಚ್ಚುತ್ತಿದ್ದ ಜನ ಬಹಳ ಕಡಿಮೆಯಾಗಿತ್ತು. ಇದಕ್ಕೆ ಕಾರಣ ಅವನ್ನು ಪ್ರಸಾರ ಮಾಡುವ ಸಾಧನವಿರದಿದ್ದುದೇ. ಇಂದು ಆಕಾಶವಾಣಿಗೆ ತನ್ನ ಬೇರೆ ಬೇರೆ ಕೇಂದ್ರಗಳಿಂದ ಭಾರತದ ಅತ್ಯುತ್ತಮ ಸಂಗೀತವನ್ನು ದೇಶದ ಎಲ್ಲ ಮೂಲೆಗೂ ಪ್ರಸಾರ ಮಾಡುವ ಅವಕಾಶವಿದೆ. ಇಷ್ಟು ಹೆಚ್ಚು ಸಂಗೀತಗಾರರ ಸಂಗೀತವನ್ನು ಕೇವಲ ಅಲ್ಪ ವೆಚ್ಚದಿಂದ ಕೇಳುತ್ತಿರುವ ಬಹುಸಂಖ್ಯಾತರೂ ಹಿಂದೆ ಎಂದೂ ಇರಲಿಲ್ಲ. ಆಕಾಶವಾಣಿ ಸಂಗೀತವನ್ನು ಜನಪ್ರಿಯವಾಗಿ ಮಾಡುವ ಕೇಂದ್ರವೇ ಅಲ್ಲದೆ, ಕಲಾವಿದರಿಗೂ ಸಹಾಯ ಮಾಡುತ್ತದೆ. ಕಳೆದ ನಾಲ್ಕು ವರ್ಷಗಳಲ್ಲಿ ಆಕಾಶವಾಣಿ ಸಂಗೀತಗಾರರಿಗೆ, ಕಲಾವಿದರಿಗೆ ಮತ್ತು ಸಾಹಿತಿಗಳಿಗೆ ಸುಮಾರು ೧ ಕೋಟಿ ೩೫ ಲಕ್ಷ ಹಣವನ್ನು ಸಂಬಳ, ಸಾರಿಗೆ, ಫೀಸ್



ಧಾರವಾಡ ಆಕಾಶವಾಣಿಯ 'ಕಂಟ್ರೋಲ ರೂಂ'

ಮತ್ತು ರಾಯುಲ್ಪಿ ರೂಪಗಳಲ್ಲಿ ಹಂಚಿದೆ. ಸಂಗೀತ ನಾಟಕಗಳ ಜೊತೆಗೆ ಆಕಾಶವಾಣಿ ಭಾಷಣ ಮತ್ತು ಇತರ ಕಾರ್ಯಕ್ರಮಗಳ ಮೂಲಕ ವಿಚಾರಗಳನ್ನೂ ಎಲ್ಲರಿಗೂ ಇಷ್ಟವಾದ ಮತ್ತು ಉಪಯೋಗವಾಗುವ ಜ್ಞಾನವನ್ನೂ ಹರಡಲು ಸಮರ್ಥವಾಗಿದೆ.

ಇಷ್ಟು ಹೇಳಿದ ಮೇಲೆ, ಆಕಾಶವಾಣಿಯು ವಿವಿಧ ಬಗೆಗಳಲ್ಲಿ ತನಗೆ ಸಾಧ್ಯವಾದಷ್ಟು ಮಟ್ಟಿಗೂ ಮತ್ತು ಪ್ರಯೋಜನ ಪೂರ್ಣವಾಗಿಯೂ ಸೇವೆಯನ್ನು ತಮಗೆ ಮಾಡುತ್ತಿದೆ ಎನ್ನುವುದನ್ನು ಜನರು ತಿಳಿಯಬಹುದು. ಮೊದಲಲ್ಲಿ ಅನೇಕ ರೀತಿಯ ಕಾರ್ಯಕ್ರಮಗಳಿಂದ ನಮ್ಮ ಮನಸ್ಸಿಗೆ ತೃಪ್ತಿ, ಆನಂದಗಳನ್ನು ಉಂಟು ಮಾಡುತ್ತದೆ. ಇನ್ನು ಯಾವುದರ ಮೂಲಕವೂ ಇಷ್ಟು ಬಗೆಯ ರೀತಿಗಳಲ್ಲಿ ಮನಸ್ಸಿಗೆ ಹಿತವನ್ನು ಉಂಟುಮಾಡಲು ಆಗುವದಿಲ್ಲ. ಈ ಸಾಮಾನ್ಯ ಜನರನ್ನು ಉದ್ದೇಶಿಸಿ ಮಾತಾಡಲು ಸಾಧಕವಾಗಿ ಆಕಾಶವಾಣಿ ಒಂದು ವಿಶೇಷ ಕಾರ್ಯ ಮಾಡುತ್ತಿದೆ. ಮೇಲಾಗಿ, ಆಕಾಶವಾಣಿಯ ಕೇಂದ್ರಗಳಿಂದ ಪ್ರಸಾರವಾಗುವ ಸುದ್ದಿ ಮತ್ತು ಜ್ಞಾನಸಂಬಂಧವಾದ ವಿಚಾರಗಳು ಯಾವಾಗಲೂ ಬಹಳ ಸಂಕ್ಷೇಪವಾಗಿರುತ್ತವೆ. ವಿಷಯವನ್ನು ಬಿಟ್ಟು ಅತ್ತಿತ್ತ ಅಡ್ಡಹಾದಿ ಹಿಡಿಯದೆ ಇವು ಅರ್ಥಪೂರ್ಣವಾಗಿರುತ್ತವೆ. ಆದ್ದರಿಂದ ಕಾಲವು ಅವಶ್ಯವಾಗಿ ಉಳಿಯುತ್ತದೆ, ಹಾಗೆಯೆ ಶ್ರಮದ ಉಳಿತಾಯವು ಆಗುತ್ತದೆ; ಏಕೆಂದರೆ ಓದುವುದಕ್ಕಿಂತಲೂ ಕೇಳುವುದು ಬಹು ಸುಲಭ. ಸುದ್ದಿಗಳು ಸದಾ ನಿಷ್ಪಕ್ಷಪಾತವಾಗಿ, ಸತ್ಯವಾಗಿ ಇರುವುವಲ್ಲದೆ ಎಲ್ಲಕ್ಕಿಂತ ಮುಂಚೆ ಬರುತ್ತವೆ. ದಿನಕ್ಕೆ ಮೂರು ಸಲಕ್ಕೆ ಕಡಿಮೆಯಿಲ್ಲದಂತೆ ಸುದ್ದಿಯ ಪ್ರಸಾರವಾಗುವುದರಿಂದ, ನಿತ್ಯ ಆಕಾಶವಾಣಿ ಕೇಳುವವನು ಪ್ರಪಂಚದ ಸುದ್ದಿಗಳನ್ನು ಯಾವಾಗಲೂ ಮುಂದಾಗಿ ತಿಳಿದುಕೊಳ್ಳುವ ಮುಂದಾಳಾಗಿರುತ್ತಾನೆ. ಅದೂ ಅಲ್ಲದೆ ಈ ಪ್ರಸಾರಗಳು ಬಹು ಹಿತವಾಗಿಯೂ ಅಲ್ಪವೆಚ್ಚದಿಂದಲೂ ಕೂಡಿದ್ದಾಗಿರುತ್ತವೆ. ಭಾರತದ ಆಕಾಶವಾಣಿಯಿಂದ ಮಾತ್ರವೇ ಅಲ್ಲದೆ ಪ್ರಪಂಚದ ಎಲ್ಲ ಕೇಂದ್ರಗಳ ಪ್ರಸಾರವನ್ನೂ ಕೇಳಬಲ್ಲ ರೇಡಿಯೋ ಯಂತ್ರವನ್ನು ಇಟ್ಟುಕೊಂಡು, ಲೆಕ್ಕಹಾಕಿದರೆ ಒಂದು ಗಂಟೆಗೆ ಒಂದು ಆಣೆ ಖರ್ಚಾಧರೆ ಹೆಚ್ಚು ಎಂದು ತಿಳಿದು ಆಶ್ಚರ್ಯ ಹೊಂದಬಹುದು. ಆ ಲೆಕ್ಕವನ್ನು ಈ ರೀತಿ ಹಾಕಲಾಗಿದೆ. ಒಂದು ರೇಡಿಯೋ ಯಂತ್ರದ ಬೆಲೆ ೩೨೦ ರೂಪಾಯಿಗಳೆಂದು ಇಟ್ಟುಕೊಂಡು, ರೇಡಿಯೋ ಇಟ್ಟಿರುವ ಪ್ರತಿಯೊಬ್ಬ ಮನುಷ್ಯನು ಅಥವಾ ಅವನ ಮನೆಯವರು ಅದನ್ನು ದಿನಕ್ಕೆ ೬ ಗಂಟೆಗಳ ಕಾಲ ಕೇಳುತ್ತಾರೆಂದು ಭಾವಿಸಿದೆ. ರೇಡಿಯೋ ಯಂತ್ರದ ಬೆಲೆ ಇಳಿದ ಹಾಗೆಲ್ಲ ಅದನ್ನು ಕೇಳುವ ವೆಚ್ಚವೂ ಕಡಿಮೆಯಾಗುತ್ತದೆ.

ರೇಡಿಯೋ ಪ್ರಸಾರ ಸಂಸ್ಥೆಯನ್ನು ನಮ್ಮ ಮನೆಯ ಮುಂದೆ ಹರಿಯುವ ನದಿಗೆ ಹೋಲಿಸಬಹುದು. ನಮ್ಮ ಉಪಯೋಗಕ್ಕೆ ಅದರ ನೀರನ್ನು ಉಪಯೋಗಿಸಬೇಕಾದ್ದು ನಮಗೆ ಸೇರಿದ್ದು. ಹಾಗೆಯೇ ರೇಡಿಯೋ ಯಂತ್ರವನ್ನು ತಿರುಗಿಸಿ, ಕಿವಿಗೊಟ್ಟುಕೇಳಿ ಅದರ ಉಪಯೋಗ ಪಡೆಯುವುದು ನಮಗೆ ಸೇರಿದ್ದು. ವಿದ್ಯುತ್ ಶಕ್ತಿಯ ಉಪಯೋಗ ಹೆಚ್ಚು ಹೆಚ್ಚು ಆದಂತೆ ಮತ್ತು ಜನರಲ್ಲಿ ರೇಡಿಯೋ ಪ್ರವೃತ್ತಿ ಬೆಳೆದಂತೆ ಇನ್ನೂ ಹೆಚ್ಚು ಮತ್ತು ಇನ್ನೂ ಉತ್ತಮ ತರಹದ ಸೇವೆಗಳನ್ನು ಆಕಾಶವಾಣಿಯ ಸಂಸ್ಥೆಯಿಂದ ಕೇಳಲೂ ಬಹುದು, ಪಡೆಯಲೂ ಬಹುದು. ಈಗ ಇರುವ ಸ್ಥಿತಿಯಲ್ಲಿಯೇ ಆಕಾಶವಾಣಿಯ ವಿಷಯದಲ್ಲಿ ನಾವು ಹೆಮ್ಮೆಪಡಬಹುದು. ನಮ್ಮ ಗುರಿಯನ್ನು ಮುಟ್ಟಲು ಎಲ್ಲರೂ ಕೆಲಸ ಮಾಡಬೇಕು; ಈ ಕಾರ್ಯದಲ್ಲಿ ಬೇಗನೆ ಯಶಸ್ಸು ಸಿಗುವುದರಲ್ಲಿ ಯಾವ ಸಂಶಯವೂ ಇಲ್ಲ.

(ಮೂಲ ಇಂಗ್ಲಿಷಿನಿಂದ)

ನೀಲಗಿರಿ ವಿಸ್ತಾರವಾದ ಪರ್ವತಪ್ರದೇಶ; ಮದ್ರಾಸ ರಾಜ್ಯದಲ್ಲಿಯ ಒಂದು ಜಿಲ್ಲೆ. ಇದರ ಸೀಮೆ ಮೈಸೂರ ದಕ್ಷಿಣದಲ್ಲಿ ಸುಮಾರು ೫೦ ಮೈಲಿನಿಂದ ಆರಂಭವಾಗುತ್ತದೆ. ನೀಲಗಿರಿಯ ಕ್ಷೇತ್ರಫಲ ಸು.೧೭೦೦ ಚದರ ಮೈಲು. ಜನಸಂಖ್ಯೆ ಸುಮಾರು ಮೂರು ಲಕ್ಷ. ನೀಲಗಿರಿಯ ಉನ್ನತ ಶಿಖರ ದೊಡ್ಡ ಬೆಟ್ಟ; ಇದರ ಎತ್ತರ ೮೭೬೦ ಅಡಿ.

ನೀಲಗಿರಿ ನಿಸರ್ಗದೇವಿಯ ನೆಲೆವೀಡಾಗಿದೆ. ಇಲ್ಲಿ ನಿಸರ್ಗದ ವಿವಿಧ ವಿಚಿತ್ರ ರಮಣೀಯ ದೃಶ್ಯಗಳನ್ನು ಕಾಣಬಹುದು. ಇಲ್ಲಿಯ ಹವೆ ಶೀತವೂ ಉತ್ಸಾಹಕರವೂ ಆಗಿದ್ದುದರಿಂದ ಇದು ಪ್ರಪಂಚದ ಅತ್ಯುತ್ತಮ ಆರೋಗ್ಯ ನಿಲಯಗಳಲ್ಲಿ ಗಣ್ಯತೆಯನ್ನು ಪಡೆದಿದೆ. ಈ ಮೂಲಕ ನೀಲಗಿರಿಗೆ ಒಂದುಬಗೆಯ ಸರ್ವದೇಶೀ ಮಹತ್ವ ಬಂದಿದೆ. ನೀಲಗಿರಿ ಜಿಲ್ಲೆಯ ಮುಖ್ಯಸ್ಥಳವು ಉಟಕಮಂಡ ಅಥವಾ ಉದಕಮಂಡಲ. ಈ ಊರು ಬೆಟ್ಟದ ೭೨೦೦ ರಿಂದ ೮೦೦೦ ಅಡಿ ಮೇಲ್ಭಾಗದಲ್ಲಿ ಹರಡಿಕೊಂಡಿದೆ. ನೀಲಗಿರಿಯ ಅನೇಕ ಸ್ಥಳಗಳಲ್ಲಿ ಹಾಗೂ ಉದಕಮಂಡಲದಲ್ಲಿ ಇಂಗ್ಲಂಡ, ಅಮೆರಿಕ, ವೊದಲಾದ ಪ್ರಪಂಚದ ನಾನಾ ದೇಶದ ಜನಗಳು ಆರೋಗ್ಯ, ಉದ್ಯೋಗ, ಧರ್ಮಪ್ರಸಾರ, ಮುಂತಾದ ಹಲವು ಉದ್ದೇಶಗಳಿಂದ ಬಂದವರಾಗಿ ತಾತ್ಪೂರ್ತಿಕವಾಗಿಯೂ ಸ್ಥಿರವಾಗಿಯೂ ವಾಸಿಸುತ್ತಿರುವರು. ಉದಕಮಂಡಲವಂತೂ ಪ್ರತಿ ವರ್ಷ ಸಾವಿರಗಟ್ಟಲೆ ಜನಗಳನ್ನು ಬೇಸಿಗೆಯಲ್ಲಿ ಬರಮಾಡಿಕೊಳ್ಳುತ್ತದೆ.

ರಾಮಾಯಣ, ಮಹಾಭಾರತಾದಿ ಗ್ರಂಥಗಳಲ್ಲಿ ದರ್ದುರವೆಂಬ ಹೆಸರಿನಿಂದ ನೀಲಗಿರಿಯ ನಿರ್ದೇಶವು ಸಿಕ್ಕುತ್ತದೆ. ಸು. ೧೦ ನೆಯ ಶತಮಾನದಿಂದ ಗಂಗರ ಆಳಿಕೆಯಲ್ಲಿ ಕರ್ನಾಟಕದೊಡನೆ ನೀಲಗಿರಿಯ ರಾಜಕೀಯ ಸಂಬಂಧವು ಪ್ರಾರಂಭವಾಗುತ್ತದೆ. ಮುಂದೆ ೧೨ ನೆಯ ಶತಮಾನದಲ್ಲಿ ಹೊಯ್ಸಳರು ಈ ಪ್ರದೇಶವನ್ನು ಗೆದ್ದುಕೊಂಡು ತಮ್ಮ ರಾಜ್ಯಕ್ಕೆ ಸೇರಿಸಿದರು. ಹೊಯ್ಸಳರ ತರುವಾಯ ಇದು ವಿಜಯನಗರದ ರಾಜರ ಅಧಿಪತ್ಯಕ್ಕೆ ಒಳಪಟ್ಟಿತು.



ತೊದವ ಗೃಹಸ್ಥ

ಶ್ರೀ. ಪಾಂಡುರಂಗರಾವ ದೇಸಾಯಿ, ಎಂ. ಎ. ಅವರಿಂದ

ನೀಲಗಿರಿಯ ಒಡೆಯರು : ತೊದವರು

ಆಧುನಿಕ ನೀಲಗಿರಿಯ ಚರಿತ್ರೆ ೧೯ ನೆಯ ಶತಮಾನದಿಂದ ಪ್ರಾರಂಭವಾಗುತ್ತದೆ. ಈ ಆರಣ್ಯ ಪ್ರದೇಶದ ಉತ್ತಮವಾದ ವಾಯುಗುಣ ಮತ್ತು ಪ್ರಾಕೃತಿಕ ಸೊಬಗನ್ನು ಪರಿಶೋಧಿಸಿ ಇಂಗ್ಲಿಶ ಅಧಿಕಾರಿಗಳು, ಪಾಶ್ಚಾತ್ಯ ಉದ್ಯಮಕಾರರು ಮತ್ತು ಧರ್ಮೋಪದೇಶಕರು ಇದಕ್ಕೆ ನಾಗರಿಕತೆಯ ಸುಖಸೌಕರ್ಯಗಳನ್ನು ಒದಗಿಸಿ ಇದನ್ನು ಬಹುವಾಗಿ ಪ್ರಸಿದ್ಧಿಗೆ ತಂದರು.

ನೀಲಗಿರಿಯ ಪ್ರಸಿದ್ಧಿಯನ್ನೂ ಆಕರ್ಷತೆಯನ್ನೂ ಹೆಚ್ಚಿಸಲು ಇಲ್ಲಿಯ ಮೂಲನಿವಾಸಿಗಳು ಕೆಲಮಟ್ಟಿಗೆ ಕಾರಣವಾಗಿದ್ದಾರೆ. ಈ ಮೂಲನಿವಾಸಿಗಳು ಯಾರೆಂದರೆ ತೊದವರು, ಬಡಗರು, ಕೋತರು, ಕುರುಂಬರು ಮತ್ತು ಇರುಳರು. ಇವರಲ್ಲಿ ಬಡಗರು ತಮ್ಮವೇ ಆದ ಕೆಲವು ವೈಶಿಷ್ಟ್ಯವುಳ್ಳವರಾಗಿದ್ದರೂ [illegible] ಪುರಾ

ತನಕಾಗಲಿ ಅಸಂಸ್ಕೃತರಾಗಲಿ ಉಳಿದಿರುವುದಿಲ್ಲ. ಈ ಎಲ್ಲರಲ್ಲಿ ತೊದವರ ಮೇಲ್ಮೆ ಮಿಗಿಲಾಗಿದೆ. ಜಾತಿಜನಾಂಗಗಳ ಅಭ್ಯಾಸಕರ ಮಾತು ಹಾಗಿರಲಿ; ನೀಲಗಿರಿಗೆ ಬರುವ ಪ್ರತಿಯೊಬ್ಬ ಸಾಮಾನ್ಯ ಸುಶಿಕ್ಷಿತ ಯಾತ್ರಿಕನಲ್ಲಿ ತೊದವನನ್ನು ನೋಡುವ ಕುತೂಹಲವು ಇದ್ದೇ ಇರುತ್ತದೆ. ಕೆಲವರಿಗಂತೂ ನೀಲಗಿರಿ ಎಂದರೆ ತೊದವರು, ತೊದವರು ಎಂದರೆ ನೀಲಗಿರಿ, ಎಂಬ ಸಮೀಕರಣವು ಸ್ಮರಣೀಯವಾಗಿ ನಿಲ್ಲುತ್ತದೆ.

ತೊದವರು—ಪೂರ್ವಚರಿತ್ರೆ

ಕಳೆದ ನೂರೈವತ್ತು ವರ್ಷಗಳಲ್ಲಿ ಆಧುನಿಕ ನೀಲಗಿರಿಯ ಚರಿತ್ರೆಯ ಆರಂಭದಿಂದ ಅನೇಕ ಪಾಶ್ಚಾತ್ಯ ಪೌರಸ್ತ್ಯ ವಿದ್ವಾಂಸರು ತೊದವರನ್ನು ಕುರಿತು ಅನ್ವೇಷಣಗಳನ್ನು ನಡೆಸಿದ್ದಾರೆ. ಈ ಅನ್ವೇಷಣಗಳು ಇಂದಿಗೂ ನಡೆಯುತ್ತಿವೆ. ಈ ಪರಿಯ ಪ್ರಾಮುಖ್ಯ ತೊದವರಿಗೆ ಉಂಟಾಗಿದೆ. ಈ ಪ್ರಾಮುಖ್ಯದ ಕಾರಣಗಳು ಹಲವಿವೆ. ಅವು ಮುಂದಿನ ವಿವೇಚನೆಯಲ್ಲಿ ವಿಶದವಾಗುವವು.

ಪಾಶ್ಚಾತ್ಯರು ತೊದವರನ್ನು Todas ಎಂದು ಕರೆದಿರುವರು. ಆದರೆ ಇವರ ಯಥಾರ್ಥ ಹೆಸರು ತುದ ಇಲ್ಲವೆ ತೊದ. ಈ ಹೆಸರಿನ ಉತ್ಪತ್ತಿ ಸಂದಿಗ್ಧವಾಗಿದೆ. ಕೆಲವರು ತುರು ಎಂದರೆ ದನ ಎಂಬುದರೊಡನೆ ಇದರ ಸಂಬಂಧವನ್ನು ಸೂಚಿಸಿದ್ದಾರೆ. ಇನ್ನೆರಡು ವಿಧಗಳಿಂದ ಇದರ ಉತ್ಪತ್ತಿಯನ್ನು ಸೂಚಿಸಬಹುದು. ೧ 'ತುದಿ'ಯಿಂದ. ಈ ಅಭಿಪ್ರಾಯದಂತೆ ತೊದವರು ಎಂದರೆ ಪರ್ವತದ ಮೇಲ್ಭಾಗದಲ್ಲಿ ಇರುವವರು ಎಂದು ಅರ್ಥವಾಗುತ್ತದೆ. ೨ 'ತೊದಲ್' ಎಂಬ ಮಾತಿನ ಮೂಲದೊಡನೆ ಸಂಬಂಧ. ಈ ಊಹೆ ಸರಿಯಾಗಿದ್ದರೆ ತೊದವರು ಎಂದರೆ ಅಸ್ಪಷ್ಟ ಮಾತಿನವರು ಎಂಬ ಅಭಿಪ್ರಾಯವಾಗುತ್ತದೆ.

ತೊದವರು ನೀಲಗಿರಿಯ ಮೂಲನಿವಾಸಿಗಳೆಂದು ಒಪ್ಪಿಕೊಂಡರೂ ಅವರು ಅದಕ್ಕೂ ಪೂರ್ವದಲ್ಲಿ ಬೇರೆ ಎಲ್ಲಿಂದಲೋ ಬಂದು ಇಲ್ಲಿ ನೆಲಸಿರಬೇಕು ಎಂಬ ಅಭಿಪ್ರಾಯದಿಂದ ಅನ್ವೇಷಕರು ಅವರ ಮೂಲಸ್ಥಾನವನ್ನು ಕುರಿತು ಕೆಲವು ಊಹೆಗಳನ್ನು ಮಾಡಿದ್ದಾರೆ: ವ್ಯಾಪಾರದ ನಿಮಿತ್ತ ಪ್ರಾಚೀನಕಾಲದ ರೋಮನ್ನರಿಗೆ ನೀಲಗಿರಿಯೊಂದಿಗೆ ಸಂಬಂಧವಿದ್ದಿತು. ತೊದವರು ಆ ರೋಮನ್ ದಾಸಜನಗಳ ವಂಶದವರು ಎಂಬುದು ಒಂದು ಊಹೆ. ಇದು ನಿರಾಧಾರವೂ ಅಸಮರ್ಥನೀಯವೂ ಆಗಿದೆ. ಕರ್ನಾಟಕದ ಸೀಮಾಪ್ರದೇಶವಾಗಿದ್ದ ಪೂರ್ವ ಇಲ್ಲವೆ ಪಶ್ಚಿಮ ಘಟ್ಟದ ಬಯಲು ನಾಡುಗಳಿಂದ ತೊದವರು ನೀಲಗಿರಿಗೆ ಬಂದಿರಬೇಕು ಎಂಬುದು ಇನ್ನೊಂದು ಊಹೆ. ಇದಾದರೂ ಸಮರ್ಪಕವಾಗಿಲ್ಲ. ಅದಕ್ಕಾಗಿ ಸುಮಾರು ಎರಡು ಎರಡೂವರೆ ಸಾವಿರ ವರ್ಷಗಳಿಂದ ತೊದವರು ನೀಲಗಿರಿಯಲ್ಲಿಯೇ ನೆಲಸುತ್ತ ಬಂದಿರಬೇಕು ಎಂದು ತಿಳಿಯುವುದು ಸಾಧುವಾಗಿ ತೋರುತ್ತದೆ. ಇದರ ಕಾರಣಗಳು ಹೀಗೆ: ೧ ತೊದವರು ತಮ್ಮದೇ ಆದ ವೈಶಿಷ್ಟ್ಯವುಳ್ಳವರಾಗಿದ್ದು ಅವುಗಳನ್ನು ಅವರು ತಲತಲಾಂತರಗಳಿಂದ ಕಾಯ್ದುಕೊಂಡು ಬಂದಿದ್ದಾರೆ. ೨. ತೊದವರು ತಾವು ನೀಲಗಿರಿಯ ಒಡೆಯರೆಂದು ಹೇಳಿಕೊಳ್ಳುತ್ತಿದ್ದು, ಈ ಒಡೆತನವನ್ನು ಬೇರೆ ಮೂಲನಿವಾಸಿಗಳು ಒಪ್ಪುತ್ತಬಂದಿರುವರು. ೩. ಪುರಾತತ್ವದ ಸಾಕ್ಷ್ಯ. ಇದು ಬಲವತ್ತರವಾಗಿದೆ. ತೊದವರ ಹಟ್ಟಿಗಳ ಪಕ್ಕದಲ್ಲಿ ದೊಡ್ಡ ಕಲ್ಲುಗಳಿಂದ ದುಂಡಾಗಿ ಕಟ್ಟಿದ ಹೆಗ್ಗಲ್ಲ ಗೋರಿಗಳು (Megalithic tombs) ಸಿಕ್ಕುತ್ತವೆ. ಈ ಗೋರಿಗಳ ಮಧ್ಯದಲ್ಲಿ ಪ್ರೇತದ ಪೆಟ್ಟಿಗೆ (Cist) ಇರುತ್ತದೆ. ಈ ಪ್ರಾಚೀನ ಗೋರಿಗಳನ್ನು ತೊದವರು ಬಹಳ ಪೂಜ್ಯ ಭಾವನೆಯಿಂದ ಕಾಣುತ್ತಾರೆ. ಮಾತ್ರವಲ್ಲದೆ ಇಂದಿನ ತೊದವರ ಗೋರಿಗಳಾದರೂ ಇದೇ ಮಾದರಿಯವಾಗಿವೆ. ಈ ಪ್ರಾಚೀನ ಗೋರಿಗಳಲ್ಲಿ ದೊರೆತ ಮಣ್ಣಿನ ಪಾತ್ರೆಗಳ ಮುಚ್ಚಳದ ಮೇಲೆ ಎಮ್ಮೆಯ ಪ್ರತಿಮೆಗಳು ಸಿಕ್ಕಿವೆ. ಇಂದಿನ ತೊದವರಾದರೂ ಎಮ್ಮೆಯ ಉಪಾಸಕರಾಗಿದ್ದಾರೆ. ಇಂತಹ ಹೆಗ್ಗಲ್ಲ ಗೋರಿಗಳು ಬ್ರಹ್ಮಗಿರಿ ಮೊದಲಾದ ಪ್ರಾಚೀನ ಸ್ಥಳಗಳಲ್ಲಿ ದೊರೆತಿದ್ದು ಅವುಗಳ ಕಾಲವು ಕ್ರಿ. ಪೂ. ಅನೇಕ ಶತಮಾನಗಳ ಆಚೆಗೆ ಹೋಗುತ್ತದೆ. ಇದಲ್ಲದೆ ಇನ್ನೂ ಕೆಲವು ನಿದರ್ಶನಗಳಿವೆ.

ಮೈಸೂರು ಸೀಮೆಯ ಚಾಮರಾಜ ನಗರ ಮೊದಲಾದ ಗ್ರಾಮಗಳಲ್ಲಿ ದೊರೆತ ಶಾಸನಗಳಲ್ಲಿ ಹೊಯ್ಸಳ ಮನೆತನದ ವಿಷ್ಣುವರ್ಧನ ಮತ್ತು ಆತನ ಮಗ ನರಸಿಂಹ ಈ ರಾಜರು ನೀಲಗಿರಿಯ ಮೇಲೆ ದಂಡಯಾತ್ರೆಗಳನ್ನು ಮಾಡಿ ಈ ಪ್ರದೇಶವನ್ನು ಗೆದ್ದುಕೊಂಡರೆಂದು ವರ್ಣಿಸಿದೆ. ಈ ಶಾಸನಗಳಲ್ಲಿ ನೀಲಗಿರಿಯ ತೊದವರು ಹೊಯ್ಸಳ ಸೇನಾಬಲವನ್ನು ಇದಿರಿಸಿದರೆಂತಲೂ ಕಾಳನೆಂಬ ಅರಸನು ಹೊಯ್ಸಳರೊಡನೆ ಕಾದಿ ಕೊನೆಗೆ ಹತನಾದನೆಂತಲೂ ಉಕ್ತವಾಗಿದೆ. ಈ ಕಾಳ ಅರಸನು ತೊದವರ ನಾಯಕನಾಗಿರುವುದು ಅಸಂಭವನೀಯವಾಗಿಲ್ಲ. ಇದರಿಂದ ೧೨ ನೆಯ ಶತಮಾನದ ಪ್ರಾರಂಭದಲ್ಲಿ ನೀಲಗಿರಿಯ ತೊದವರು ಪ್ರಾಮುಖ್ಯತೆಯನ್ನು ಪಡೆದಿದ್ದು ಹೊಯ್ಸಳರ ಪ್ರಬಲ ಸೈನ್ಯವನ್ನು ಪ್ರತಿಭಟಿಸುವಷ್ಟು ಸುಸಂಘಟಿತರೂ ವೀರವೃತ್ತಿಯವರೂ ಆಗಿದ್ದರೆಂಬ ವಿಷಯವು ಪ್ರಕಟವಾಗುತ್ತದೆ. ಈ ಚಾರಿತ್ರಕ ಅಂಶವು ತೊದವರ ಕೆಲ ಸಂಪ್ರದಾಯಗಳ ಔಚಿತ್ಯವನ್ನು ಅರಿತುಕೊಳ್ಳಲು ಸಹಾಯಕವಾಗಿದೆ. ಅದು ಹೇಗೆ ಎಂಬುದನ್ನು ಮುಂದೆ ವಿವರಿಸಲಿರುವೆ.

ರೂಪ—ವೇಷ—ಸ್ವಭಾವ

ತೊದವರ ಮೈಬಣ್ಣವು ಸಾದಗಪ್ಪು; ಎತ್ತರ ೫-೫॥ ಅಡಿ. ಅವರು ಸುದೃಢಕಾಯರೂ ವರ್ಚಸ್ಸನ್ನು ಬೀರುವ ಮುಖಮುದ್ರೆಯುಳ್ಳವರೂ ಆಗಿ







೧. ತೊದವರ ವಿಶಿಷ್ಟ ನಮಸ್ಕಾರ ಪದ್ಧತಿ.
೨. ತೊದವ ನಾರಿಯರ ಕೇಶ ಪ್ರಸಾಧನ ವಿಧಿ.
೩. ತೊದವ ದಂಪತಿ.

ದ್ದಾರೆ. ಅವರು ಸ್ಫುರದ್ರೂಪಿಗಳಾಗದಿದ್ದರೂ ಕುರೂಪಿಗಳಂತೂ ಸರ್ವಥಾ ಅಲ್ಲ. ಗಾಂಭೀರ್ಯ ಮತ್ತು ಶೀವಿಯಿಂದ ಒಪ್ಪುವ ಅವರ ರೂಪ ಸಂಪತ್ತಿ ಚಿತ್ತಾಕರ್ಷಕವಾದುದು. "ಇವರು ಆರ್ಯಜನಾಂಗದವರಂತಿರುವರು. ಇವರ ಮುಖ ಭಂಗಿ ಐರೋಪ್ಯವಾಗಿದೆ. ಇವರ ಮೂಗು ರೋಮನ ಜನರ ಮೂಗಿನಂತಿದೆ. ಇವರ ಭವ್ಯಚರ್ಯೆ ಯೇಸುಕ್ರಿಸ್ತನನ್ನು ಜ್ಞಾಪಕಕ್ಕೆ ತಂದು ಕೊಡುತ್ತಿದೆ" ಮುಂತಾಗಿ ಪಾಶ್ಚಾತ್ಯ ಲೇಖಕರು ಬಗೆಬಗೆಯಿಂದ ತೊದವರ ರೂಪ ಸಂತಿಕೆಯನ್ನು ಪ್ರಶಂಸಿಸಿರುವರು.

ತೊದವರ ರೂಪಸಂಪತ್ತಿಯಲ್ಲಿ ಕೇಶಸಮೃದ್ಧಿಗೆ ಪ್ರಮುಖ ಸ್ಥಾನವಿದೆ. ಅವರ ತಲೆ ಮತ್ತು ಮುಖವು ನೀಳವಾದ ತುಂಬುಕೂದಲುಗಳಿಂದ ಆಚ್ಛಾದಿತವಾಗಿರುತ್ತದೆ. ಅವರು ಮೇಲಿಂದ ಮೇಲೆ ಎಣ್ಣೆಯನ್ನು ಹಚ್ಚಿ ತಿಕ್ಕಿ ತೀಡಿ ತಮ್ಮ ಕೂದಲನ್ನು ನಯವಾಗಿ ಬೆಳೆಸುತ್ತಾರೆ. ಕುಂತಲ ಸೌಂದರ್ಯದ ಕಡೆಗೆ ಪುರುಷರಿಗಿಂತ ಸ್ತ್ರೀಯರು ಹೆಚ್ಚು ಲಕ್ಷ್ಯವನ್ನು ಪೂರಯಿಸುತ್ತಾರೆ. ತೊದವ ಹೆಂಗಳೆಯರು ತಮ್ಮ ಕೂದಲನ್ನು ಕೋಲಿಗೆ ಸುತ್ತಿ ಉಂಗುರುಂಗುರು ಮಾಡಿಕೊಳ್ಳುವುದರಲ್ಲಿ ಕಾಲ ಕಳೆಯುತ್ತಾರೆ.

ತೊದವರ ಉಡುಪು ನಿರಾಡಂಬರವಾದುದು. ಅವರು ಅಂಚಿಗೆ ಒಂದೊಂದು ಕೆಂಪು ಪಟ್ಟೆಯುಳ್ಳ ಉದ್ದವೂ ಅಗಲೂ ಆದ ಬಿಳಿ ಬಟ್ಟೆಯನ್ನು ಮೈಗೆ ಸುತ್ತಿಕೊಳ್ಳುವರು. ಹೆಣ್ಣುಮಕ್ಕಳು ಮಣಿ ಮತ್ತು ಕವಡೆಗಳನ್ನು ಪವಣಿಸಿದ ಕೂದಲಿನ ಇಲ್ಲವೆ ಕಪ್ಪು ದಾರದ ಸರವನ್ನು ಕೊರಳಲ್ಲಿ ಹಾಕಿಕೊಳ್ಳುವರು. ಕೈಯಲ್ಲಿ ಬೆಳ್ಳಿಯ ಮತ್ತು ಕಬ್ಬಿಣ ಚಿತ್ತಾರ ಬಳೆತೊಡುವರು.

ತೊದವರು ಸರಳ ಸ್ವಭಾವದವರು ಮತ್ತು ಸ್ವಾಭಿಮಾನಿಗಳಾಗಿದ್ದಾರೆ. ಅವರ ಮನೋವೃತ್ತಿ ಸ್ವತಂತ್ರ ಮತ್ತು ನಿರ್ಭಯವಾದುದು. ಅವರಿಗೆ ಹಾಸ್ಯ ವಿನೋದಗಳು ರುಚಿಸುತ್ತವೆ.

ಗುಡಿಸಲು—ಮಂದಗಳು

ತೊದವರು ಗವಿಯಂತಹ ಗುಡಿಸಲುಗಳಲ್ಲಿ ವಾಸಿಸುತ್ತಾರೆ. ಅವರ ಗುಡಿಸಲುಗಳೋ ತಮ್ಮವೇ ಆದ ಒಂದು ರೀತಿಯಿಂದ ಕಟ್ಟಿರುತ್ತವೆ. ಅವುಗಳ ಆಕಾರವನ್ನು ಕೊಲ್ಲಾರ ಇಲ್ಲವೆ ಸವಾರಿ ಬಂಡಿಗೆ ಹೋಲಿಸಬಹುದು. ಬಿದಿರು, ಮರದ ಹಲಗೆ, ಹುಲ್ಲು, ಹಗ್ಗ ಮುಂತಾದ ವಸ್ತುಗಳನ್ನು ಉಪಯೋಗಿಸಿ ಅವುಗಳನ್ನು ಬಹು ಭದ್ರವಾಗುವಂತೆ ರಚಿಸಿರುತ್ತಾರೆ. ನೀಲಗಿರಿಯ ಉಗ್ರವಾದ ಮಳೆ, ಚಳಿ ಮತ್ತು ಗಾಳಿಗಳನ್ನು ತಡೆಯುವ ಗುಣವು ಈ ಗುಡಿಸಲುಗಳಲ್ಲಿ ಇರುತ್ತದೆ. ಇವು ಉದ್ದಗಲು ೨೦ ಮತ್ತು ೧೨ ಅಡಿಗಳ ವರೆಗೆ ಇರುತ್ತವೆ. ಇವುಗಳಿಗೆ ಬಾಗಿಲು ಇರುವುದಿಲ್ಲ. ಹೋಗುಬರುವ ಮುಂತಾದ ಎಲ್ಲ ವ್ಯಾಪಾರಗಳು ಉದ್ದಗಲು ೩೨×೧೮ ಅಂಗುಲದ ಒಂದೇ ಒಂದು ಚಿಕ್ಕ ಕಿಂಡಿಯ ಮೂಲಕವೇ ಸಾಗುತ್ತವೆ. ಮೈಯನ್ನು ಬಗ್ಗಿಸಿ ನೆಲಕ್ಕೆ ಹೊಟ್ಟೆಯನ್ನು ಹೊಸೆಯುವ ಕಷ್ಟಪಡದೆ ಒಳ ಹೋಗಲು ಇಲ್ಲವೆ ಹೊರ ಬರಲು ಸಾಧ್ಯವಾಗದು. ಈ ದ್ವಾರವನ್ನುಳಿದು ಹೊಗೆಗಾಗಲಿ ಬೆಳಕಿಗಾಗಲಿ ಬೇರೆ ಒಂದಾನೊಂದು ರಂಧ್ರವೂ ಇರುವುದಿಲ್ಲ. ಈ ಗುಡಿಸಲುಗಳು ಭೂಮಿಗಿಂತ ಸ್ವಲ್ಪ ಕೆಳಗಿನ ಮಟ್ಟದಲ್ಲಿದ್ದು ಅವುಗಳ ಸುತ್ತಲೂ ಆವಾರವಿರುತ್ತದೆ.

ಇಂತಹ ಐದಾರು ಗುಡಿಸಲುಗಳು ಕೂಡಿ ತೊದವರ ಒಂದು ಮಂದವಾಗುತ್ತದೆ. ಮಂದ ಎಂಬುದು ತೊದವರ ಊರು, ಹಳ್ಳಿ ಇಲ್ಲವೆ ಹಟ್ಟಿಯ ವಿಶಿಷ್ಟ ಹೆಸರು. ಈ ಹೆಸರು ಬೇರೆ ಎಲ್ಲಿಯೂ ಸಿಕ್ಕುವುದಿಲ್ಲ. ಒಂದೊಂದು ಮಂದದಲ್ಲಿ ೨-೩ ವಾಸದ ಮನೆಗಳು, ಒಂದು ದನದ ಕೊಟ್ಟಗೆ ಮತ್ತು ಒಂದು ಹೈನದ ಮನೆ ಇರುತ್ತವೆ. ಈ ಹೈನದ ಮನೆಯಲ್ಲಿ ಹಾಲು, ಮೊಸರು, ಬೆಣ್ಣೆ ಮುಂತಾದುವನ್ನು ಸಂಗ್ರಹಿಸಿರುತ್ತಾರೆ. ಇದು ಅತಿ ಪವಿತ್ರವಾದ



ತೊದವರ ಗುಡಿಸಲು

ಸ್ಥಳ; ನಮ್ಮಗಳ ಕೆಲವರ ಮನೆಗಳಲ್ಲಿ ದೇವರಮನೆ ಇದ್ದಂತೆ. ನಮ್ಮ ದೇವರ ಮನೆ ಮನೆಯ ಒಂದು ಭಾಗವಾಗಿರುತ್ತದೆ. ಆದರೆ ತೊದವರ ಹೈನದಮನೆ ಸ್ವತಂತ್ರವಾದ ಒಂದು ಗುಡಿಸಲು.

ಎಮ್ಮೆಗಳು ತೊದವರಿಗೆ ಪವಿತ್ರ ಮತ್ತು ಪೂಜ್ಯವಾದ ವಸ್ತು. ಹೈನವು ಅದಕ್ಕೂ ಪವಿತ್ರವಾದ ಪದಾರ್ಥ. ಆದುದರಿಂದ ಹೈನದ ಮನೆ ಅವರ ಪಾಲಿಗೆ ನಿಜವಾದ ದೇವರ ಗುಡಿಯೇ ಆಗಿರುತ್ತದೆ. ಈ ದೇವಾಲಯದಲ್ಲಿ ಮನೆಯವರನ್ನುಳಿದು ಹೊರಗಿನವರಿಗೆ ಪ್ರವೇಶವಿಲ್ಲ. ಹೈನದ ಮನೆಗೆ ತೊದವರು ಪಾಲ್‌ಚ್ಚಿ ಎನ್ನುವರು.

ತೊದವರ ಮುಂದಗಳು ಬೆಟ್ಟದ ಓರೆಗಳಲ್ಲಿ ರಮ್ಯವಾದ ಪ್ರಾಕೃತಿಕ ಪರಿಸರದಲ್ಲಿ ನೆಲಸಿರುತ್ತವೆ. ಒಂದೊಂದು ಹಟ್ಟಿ ಇಲ್ಲವೆ ಹಳ್ಳಿಗೆ ಒಂದಕ್ಕಿಂತ ಹೆಚ್ಚು ಮುಂದಗಳು ಇರುತ್ತವೆ. ತೊದವರು ವರ್ಷದ ಕೆಲ ಭಾಗವನ್ನು ಒಂದು ಮುಂದದಲ್ಲಿ, ಇನ್ನೂ ಕೆಲ ಭಾಗವನ್ನು ತಮ್ಮದೇ ಆದ ಇನ್ನೊಂದು ಮುಂದದಲ್ಲಿ ಕಳೆಯುತ್ತಾರೆ. ಹೀಗೆ ಸ್ಥಳಾಂತರ ಮಾಡಲಿಕ್ಕೆ ನೀಲಗಿರಿಯ ಹವಾಮಾನವು ಒಂದು ಕಾರಣವಾಗಿರಬಹುದು. ಇನ್ನೊಂದು ಕಾರಣ, ಎಮ್ಮೆಗಳನ್ನು ಮೇಯಿಸಲಿಕ್ಕೆ ಬೇಕಾದ ಹುಲ್ಲುಗಾವಲಿನ ಸೌಕರ್ಯವಾಗಿರಬಹುದು. ಹೀಗಿದ್ದುದರಿಂದ ಎಲ್ಲ ಮುಂದಗಳಲ್ಲಿ ಎಲ್ಲ ಕಾಲದಲ್ಲಿ ತೊದವರು ಒಕ್ಕಲಾಗಿರುವುದಿಲ್ಲ. ಅವರ ಮುಂದಗಳು ಅರ್ಧಕ್ಕಿಂತ ಹೆಚ್ಚು ಬರಿದಾಗಿರುತ್ತವೆ.

ಒತ್ತೆ—ಕಲ್—ಮುಂದ

ತೊದವರ ಮುಂದಗಳು ನೀಲಗಿರಿಯ ಹಲವು ಭಾಗಗಳಲ್ಲಿ ಹರಡಿಕೊಂಡಿವೆ. ಈ ಮುಂದಗಳ ಮೂಲಕ ಕೆಲವು ಊರು ಮತ್ತು ಕೆರೆಗಳ ಹೆಸರುಗಳು ಉಂಟಾಗಿವೆ. ಹೆಚ್ಚೇನು, ಒಂದು ಉದಾಹರಣೆ ಸಾಕು. ನೀಲಗಿರಿಯ ಮೇಲಿನ ತೊದವರ ಸ್ವಾಮಿತ್ವವನ್ನು ಸೂಚಿಸಲೋ ಎನ್ನುವಂತೆ ನೀಲಗಿರಿಯ ಮುಖ್ಯಸ್ಥಳವಾದ ಉಟಕಮುಂಡ ಎಂಬೀ ಹೆಸರು ತೊದವರ ಮುಂದದಿಂದ ಹುಟ್ಟಿದೆ. ಈಗ ಉಟಕಮುಂಡದಿಂದ ಫರ್ನಹಿಲ್ಲಿಗೆ ಹೋಗುವ ಮಾರ್ಗದಲ್ಲಿ ಒಂದು ಬಂಡೆಗಲ್ಲಿನ ಪೊಳ್ಳಿನಲ್ಲಿ ಮುನೀಶ್ವರ ಎಂಬ ಗುಡಿಯಿದೆ. ಈ ಸ್ಥಳದಲ್ಲಿ ಹಿಂದೆ ಒತ್ತೆ—ಕಲ್—ಮುಂದ ಎಂಬ ತೊದವರ ಒಂದು ಮುಂದವಿದ್ದಿತಂತೆ. ಒತ್ತೆ—ಕಲ್—ಮುಂದ ಎಂದರೆ ಒಂದು ಬಂಡೆಗಲ್ಲ ಬಳಿಯ ಮುಂದ. ಈ ಹೆಸರು ಐರೋಪ್ಯರ ಬಾಯಿಯಲ್ಲಿ ಉಟಕಮುಂಡ ಎಂಬುದಾಗಿ ಮಾರ್ಪಟ್ಟಿತು. ಅದನ್ನು ಸಂಸ್ಕೃತ ಪ್ರೇಮಿಗಳು ಉದಕಮುಂಡಲವೆಂದು ಪರಿವರ್ತಿಸಿದರು. ಇದೇ ಪರಿಯಲ್ಲಿ ಉಟಕಮುಂಡಕ್ಕೆ ನೀರನ್ನು ಪೂರಯಿಸುವ ಮಾರ್ಲಿಮುಂದ ಕೆರೆಯ ಹೆಸರಾದರೂ ಮಾರ್ಲಿಮುಂದ ಎಂಬ ತೊದವರ ಇನ್ನೊಂದು ಮುಂದದಿಂದ ಬಂದುದಾಗಿದೆ.

ಮುಂದ ಎಂಬುದನ್ನು ಕನ್ನಡ ಮುಂದಿಯೊಂದಿಗೆ ಹೋಲಿಸಬಹುದು. ಈ ಶಬ್ದವು ತೆಲುಗು ತಮಿಳು ಭಾಷೆಗಳಲ್ಲಿ ದೊರೆಯುವುದಿಲ್ಲ. ಆದುದರಿಂದ ಇದು ಕನ್ನಡವೇ ಆಗಿರಬೇಕು. ಇಂತು ಸುಪ್ರಸಿದ್ಧ ಉಟಕಮುಂಡ ನಗರದ ಹೆಸರಿನ ಮೂಲವನ್ನು ಕನ್ನಡದಲ್ಲಿ ಕಂಡುಹಿಡಿಯಬಹುದು.

ಉದ್ಯೋಗ—ಉಪಜೀವನ

ತೊದವರು ಒಂದು ಬಗೆಯ ಭ್ರಮಣಶೀಲ ಪಶುಪಾಲನ (nomadic and pastoral) ವೃತ್ತಿಯಿಂದ ಉಪಜೀವಿಸುತ್ತಾರೆ. ಅವರ ಉಪಜೀವನದ ಮುಖ್ಯ ಸಾಧನ ಎಮ್ಮೆಗಳು. ತೊದವರ ಎಮ್ಮೆಗಳು ಮೈಸೂರ ಸೀಮೆಯ ಉದ್ದಕೋಡಿನ ಎಮ್ಮೆಗಳಂತೆ ಸುಂದರವಾಗಿರುವವು. ಎಮ್ಮೆಗಳನ್ನು ಸಾಕುವುದು ಮತ್ತು ಹೈನದ ವ್ಯವಹಾರವೇ ತೊದವರ ಮುಖ್ಯ ಉದ್ಯೋಗ. ಅವರು ಸಾಮಾನ್ಯವಾಗಿ ಭೂಮಿಯನ್ನು ಉತ್ತು ಬಿತ್ತಿ ಬೆಳೆಯುವುದಿಲ್ಲ. ತೊದವರು ತಾವು ನೀಲಗಿರಿಯ ಒಡೆಯರೆಂದು ಹೇಳಿಕೊಳ್ಳುವರೆಂತಲೂ ಅವರೀ ಅಧಿಕಾರವನ್ನು ಬೇರೆ ಮೂಲನಿವಾಸಿಗಳು ಒಪ್ಪುತ್ತಾರೆಂತಲೂ ಹಿಂದೆ ನಿರೂಪಿಸಲಾಗಿದೆ. ಈ ಅಧಿಕಾರದ ಬಲದಿಂದ ತೊದವರು, ಬಡಗರು ಮತ್ತು ಕೋತರಿಂದ ಧಾನ್ಯರೂಪವಾಗಿ ಕಪ್ಪವನ್ನು ಎತ್ತುವರು. ಇದಕ್ಕೆ ಗೂಡು ಎನ್ನುವರು. ಈ ಗೂಡಿನಿಂದ ಅವರ ಉಪಜೀವನಕ್ಕೆ ಅನುಕೂಲವಾಗುತ್ತದೆ.

ಧಾನ್ಯವಿದ್ದರೆ ಬೇಯಿಸಿ ತಿನ್ನುವುದು; ಎಮ್ಮೆಯ ಹಾಲನ್ನು ಕುಡಿಯುವುದು; ಇದು ಯಾವುದೂ ಹೊಟ್ಟೆಗೆ ಸಾಲದೆಹೋದರೆ ಉಪವಾಸವಿರುವುದು; ಇದು ತೊದವನ ಜೀವನಕ್ರಮವಾಗಿದೆ. ಮೈ ಬಗ್ಗಿಸಿ ದುಡಿಯುವುದೆಂದರೆ ತೊದವನಿಗೆ ಬೇಸರ. ಈ ಸಂದರ್ಭದಲ್ಲಿ ಹಿಂದೆ ನಡೆದ ಒಂದು ಮನೋರಂಜಕ ಸಂಗತಿಯನ್ನು ಉದಾಹರಿಸಬಹುದು. ಒಂದು ಎಮ್ಮೆಯ ತಂಟೆಯ ವಿಚಾರದಲ್ಲಿ ಒಬ್ಬ ತೊದವನನ್ನು ಅಪರಾಧಿಯೆಂದು ಸೆರೆಮನೆಗೆ ಕಳುಹಿದರು. ಅಲ್ಲಿ ಆತನು ಬೇರೆ ಕೈದಿಗಳ ಜೊತೆಗೆ ಕೆಲಸ ಮಾಡಬೇಕಾಗಿದ್ದಿತು. ಆದರೆ ಸೆರೆಮನೆಯ ಅಧಿಕಾರಿಗಳು ಎಷ್ಟು ಹೇಳಿದರೂ ಆ ತೊದವನು ಕೆಲಸ ಮಾಡಲು ಒಪ್ಪಲೇ ಇಲ್ಲ. ಕೊನೆಗೆ ಅಧಿಕಾರಿಗಳೇ ಸೋಲಬೇಕಾಯಿತು. ಅವರು ಆತನನ್ನು ಕೆಲಸ ಮಾಡುವ ಬೇರೆ ಕೈದಿಗಳ ಮೇಲೆ ವಿಚಾರಣೆಗೆ ಮೇಸ್ತ್ರಿಯನ್ನಾಗಿ ನೇಮಿಸಿ ತಮ್ಮ ಮರ್ಯಾದೆಯನ್ನು ಕಾಪಾಡಿಕೊಂಡರಂತೆ.

ಸಾಮಾಜಿಕ ರೀತಿ ನೀತಿಗಳು

ತೊದವರಲ್ಲಿ ಕಿರಿಯರು ಹಿರಿಯರನ್ನು ವಂದಿಸುವ ಪದ್ಧತಿ ಗೌರವಪೂರ್ಣವಾಗಿದೆ. ಕಿರಿಯನಾದವನು ಕೆಳಗೆ ಕುಳಿತು ತಲೆ ಬಗ್ಗಿಸಿ ಹಿರಿಯನ ಒಂದು ಪಾದವನ್ನು ಎತ್ತಿ ತನ್ನ ತಲೆಯ ಮೇಲೆ ಇರಿಸಿಕೊಳ್ಳುವನು; ಆಮೇಲೆ ಇನ್ನೊಂದು ಪಾದವನ್ನು. ಈ ಅಭಿವಾದನಕ್ಕೆ 'ಅದಬುದ್ದಿಕೆನ್'

ಎನ್ನುವರು. ಇದು 'ಅಡಿ ಓದಿಕ್ಕಿರೆನ್' ಎಂದರೆ, 'ಪಾದವನ್ನು ಹಿಡಿದುಕೊಳ್ಳುವೆ' ಎಂಬ ತಮಿಳು ಮಾತಿನ ತ್ರುಟಿತ ರೂಪವು. ಹಿರಿಯರಾದ ಗಂಡಸರು ಇಲ್ಲವೆ ಹೆಂಗಸರು ಇಂತಹ ಆದರಕ್ಕೆ ಅರ್ಹರಾಗುತ್ತಾರೆ.

ತೊದವರಲ್ಲಿ ಮದುವೆಯ ರೀತಿ ಬಹು ಸರಳವಾಗಿದೆ. ಗಂಡನಾಗತಕ್ಕವನು ಹೆಂಡತಿಗಾಗಿ ಎಮ್ಮೆಗಳ ರೂಪದಿಂದ ತೆರವನ್ನು ಸಲ್ಲಿಸಬೇಕಾಗುತ್ತದೆ. ಮದುವೆಯ ಮಾತುಗಳು ನಿರ್ಧಾರವಾದ ಬಳಿಕ ವಧೂವರರ ಭೆಟ್ಟಿಯಾಗುತ್ತದೆ. ವಧುವಾದವಳು ಮೇಲೆ ವರ್ಣಿಸಿದಂತೆ ವರನಿಗೆ ಅಭಿವಾದನ ಮಾಡುತ್ತಾಳೆ. ಅನಂತರ ಗಂಡನ ಮನೆಯಲ್ಲಿ ಗೃಹಿಣಿಯಾಗಿ ಚಿಕ್ಕ ಪುಟ್ಟ ಮನೆಗೆಲಸಗಳನ್ನು ಮಾಡುತ್ತಾಳೆ. ಇಷ್ಟಕ್ಕೆ ಮದುವೆಯ ಸಮಾರಂಭವು ಮುಗಿದೇಬಿಡುತ್ತದೆ. ತೊದವರ ಮದುವೆಗಳು ಚಿಕ್ಕ ವಯಸ್ಸಿನಲ್ಲಿ ಆಗುತ್ತವೆ. ತೊದವರಲ್ಲಿ ಘಟಸ್ಫೋಟವು ಪ್ರಚಾರದಲ್ಲಿದೆ. ಹೆಂಡತಿ ಪ್ರಥಮ ಗರ್ಭವತಿಯಾದ ಏಳನೆಯ ತಿಂಗಳಲ್ಲಿ ಗಂಡನಾದವನು ತಾಳಿಯನ್ನು ಕಟ್ಟಿ ಆಕೆಯನ್ನು ಕಾಡಿಗೆ ಕರೆದುಕೊಂಡು ಹೋಗುವನು. ಅಲ್ಲಿ ಆಕೆಯ ಕೈಯಲ್ಲಿ ಬಿಲ್ಲನ್ನು ಕೊಟ್ಟು ದೀಪದ ಮುಂದೆ ಆಕೆಯ ಹೆಸರನ್ನು ಹೇಳುವನು. ಹೀಗೆ ಬಿಲ್ಲಿಗೊಂದು ಹೆಸರನ್ನು ಕೊಡುತ್ತಾರೆ.

ಮೊನ್ನೆ ಮೊನ್ನೆಯವರೆಗೆ ತೊದವರಲ್ಲಿ ಬಹುಪತಿತ್ವದ ಪದ್ಧತಿ ರೂಢಿಯಲ್ಲಿದ್ದಿತು. ಸೋದರರಾಗಲಿ ಸಮೀಪದ ಬಂಧುಗಳಾಗಲಿ ಒಬ್ಬ ಹೆಂಗಸನ್ನು ಮದುವೆಯಾಗುತ್ತಿದ್ದರು. ಹಿರಿತನದ ಕ್ರಮದಿಂದ ಹಿರಿಕಿರಿಯ ಮಕ್ಕಳನ್ನು ತಂದೆಗಳು ಹಂಚಿಕೊಳ್ಳುತ್ತಿದ್ದರು. ವಂಶಪರಂಪರೆ ಗಂಡುಸಂತತಿಯಲ್ಲಿ ನಡೆಯುವುದು. ಈ ಬಹುಪತಿತ್ವಕ್ಕೆ ಕಾರಣವಾಗಿರಬಹುದಾದ ಇನ್ನೊಂದು ನಿರ್ದಯ ರೂಢಿಯನ್ನು ತೊದವರು ಆಚರಿಸುತ್ತಿದ್ದರು. ಅದು ಸ್ತ್ರೀಶಿಶುಹತ್ಯ. ಹುಟ್ಟಿದ ಹೆಣ್ಣು ಕೂಸನ್ನು ದನದ ಕೊಟ್ಟಿಗೆಯ ಬಾಗಿಲಿಗೆ ತಂದಿರಿಸಿ ಅದರ ಮೇಲೆ ದನಗಳನ್ನು ಬಿಡುತ್ತಿದ್ದರು. ಏನೋ ಪುಣ್ಯದಿಂದ ಆ ಕಂದಮ್ಮ ಬದುಕಿಕೊಂಡರೆ ಅದನ್ನು ಬೆಳೆಸಿ ದೊಡ್ಡದನ್ನು ಮಾಡುವರು. ಈ ರೂಢಿಯನ್ನು ಇದೀಗ ನಿಲ್ಲಿಸಲಾಗಿದೆ.

ತೊದವರಲ್ಲಿ ಎರಡು ಮುಖ್ಯ ಜಾತಿಗಳನ್ನು ಗುರುತಿಸಲಾಗಿದೆ. ೧. ದೇವಾಲ್ಯಾಳ್ (ದೇವಾಲಯದ ಆಳ್); ಇವರು ಬ್ರಾಹ್ಮಣರಿದ್ದಂತೆ. ೨. ತರ್ಸರ್‌ಝಾಳ್ (ದಾಸರ ಆಳ್); ಇವರು ಶೂದ್ರರಿದ್ದಂತೆ. ಈ ಜಾತಿಯವರು ಪರಸ್ಪರ ಮದುವೆಯಾಗುವುದಿಲ್ಲ. ಧಾರ್ಮಿಕ ಕಾರ್ಯಗಳನ್ನು ನೆರವೇರಿಸಲಿಕ್ಕೆಂದು ಕೆಲವರ್ಗದವರು ಇದ್ದಾರೆ. ಇವರಿಗೆ ಪೇಯ್ಕಿ ಎನ್ನುವರು. ಪೇಯ್ಕಿಗಳಲ್ಲಿ ಪಾಲಾಳ್‌ಗಳು ಉತ್ತಮರು. ಪಾಲಾಳ್‌ಗಳ ಕಾವಲಿಗೆಂದು ಕಾವಲಾಳ್‌ಗಳು ಇರುವರು. ಪಾಲಾಳಿನ ಮೂಲಕ ದೇವನು ತನ್ನ ಇಚ್ಛೆಯನ್ನು ಪ್ರಕಟಸುವನು ಎಂದು ನಂಬುವರು. ಪಾಲಾಳ್, ಆಗಬೇಕಾದರೆ ಕಾಡಿನಲ್ಲಿ ಹೋಗಿ ನಿರ್ವಸ್ತ್ರ ಸ್ಥಿತಿಯಲ್ಲಿ ಅಲ್ಪಾಹಾರದಿಂದ ತಪಶ್ಚರ್ಯೆ ಮಾಡಬೇಕಾಗುತ್ತದೆ.



ತೊದವರ ಒಂದು ಕುಟುಂಬ

ಧಾರ್ಮಿಕ ನಂಬಿಕೆ — ನಡವಳಿಕೆಗಳು

ತೊದವರ ಗುಡಿಗಳು ಎರಡು ಬಗೆಯವು. ಒಂದನೆಯದು ಹಿಂದೆ ಹೇಳಿದ ಹೈನದ ಮನೆ. ಇನ್ನೊಂದು ತೊದವರ ವಾಸದ ಮನೆಯಂತಹ ಗುಡಿಸಲು. ಇದಕ್ಕೆ ಬೋದ ಎನ್ನುವರು. ಇಂತಹ ಗುಡಿಗಳು ಮೂರು ನಾಲ್ಕು ಕಡೆಗಳಲ್ಲಿ ಮಾತ್ರ ಇವೆ. ಈ ಗುಡಿಗಳಲ್ಲಿ ಪ್ರತಿಮೆ, ವಿಗ್ರಹ, ಯಾವುದೂ ಇರುವುದಿಲ್ಲ. ತೊದವರಲ್ಲಿ ನಿಶ್ಚಿತವಾದ ದೈನಂದಿನ ಧಾರ್ಮಿಕ ವಿಧಿಗಳು ಇಲ್ಲ. ದೇವ, ಸ್ವಾಮಿ, ಭೂತ, ಪಾಪ ಮೊದಲಾದ ಕಲ್ಪನೆಗಳು ಸಂಸ್ಕೃತ ಮಾತುಗಳಿಂದ ವ್ಯಕ್ತವಾಗುತ್ತವೆ. ಕೆಲವರು ಮೂಡುವ ರವಿಗೆ ಮತ್ತು ಚಂದ್ರನಿಗೆ ನಮಸ್ಕಾರ ಮಾಡುವರು. ಗ್ರಹಣಸಮಯದಲ್ಲಿ ಉಪವಾಸವಿರುವರು. ತೊದವರ ಮಾತಿನಲ್ಲಿ ಸೂರ್ಯನಿಗೆ ಬಿರ್‌ಷ್ಪ (ಪಿರಿಸುಪಿರಿಯ) ಮತ್ತು ಚಂದ್ರನಿಗೆ ತಿಗ್ಗುಲ್ (ತಿಂಗಳ್) ಎನ್ನುವರು. ತೊದವರ ಪ್ರಾರ್ಥನೆಯ ರೀತಿ ಹೀಗೆ: "ಎಲ್ಲರಿಗೆ ಒಳ್ಳೆಯದಾಗಲಿ; ಎಮ್ಮೆಗಳಿಗೆ ಒಳ್ಳೆಯದಾಗಲಿ." ಎಮ್ಮೆಗಳು ಆರೋಗ್ಯವಾಗಿದ್ದು ಹೆಚ್ಚು ಹಾಲು ಕರೆಯಲೆಂದು ತೊದವರು ಆಗಾಗ ಎಮ್ಮೆಕರುವನ್ನು ಬಲಿಕೊಡುವರು.

ಒಂದೊಂದು ಮುಂದವನ್ನು ಕಾಯಲಿಕ್ಕೆ ಒಬ್ಬೊಬ್ಬ ದೇವನಿರುವನೆಂದು ತೊದವರು ನಂಬುವರು. ಮೇಲೂರಲ್ಲಿ ತೊದವರ ಒಂದು ಗುಡಿಯಿದೆ. ಇಲ್ಲಿಯ ದೇವನು ಒಂದು ದೊಡ್ಡ ಗಂಟೆ. ಈತನೇ 'ಹಿರಿಯ ದೇವ'. ಈ ಹಿರಿಯ ದೇವನ ಪ್ರತಿನಿಧಿಯೆಂದು ಗುಂಪಿನಲ್ಲಿ ಉತ್ತಮವೆನಿಸಿದ ಎಮ್ಮೆಯ ಕೊರಳಲ್ಲಿ ಗಂಟೆಯನ್ನು ಕಟ್ಟಿ ಅದನ್ನು ಪೂಜಿಸುವರು. ಇದಲ್ಲದೆ ಬೇಟೆಯ ದೇವನೊಬ್ಬನು ಇರುವನು. ಈತನ ಹೆಸರು ಬೇಟಕನ್. ಬೇಟಕನ ತಂದೆ ಡಿರ್ಕಿಶ್; ಈತನ ತಂದೆ ಏನ್. ಈತನು ತೊದವರ ಮೂಲ ಪುರುಷನಂತೆ.

ಮೃತ ಸಂಸ್ಕಾರ—ಮರಣೋತ್ತರ

ಮೃತ ಸಂಸ್ಕಾರಕ್ಕೆ ತೊದವರು ಬಹಳ ಮಹತ್ವ ಕೊಡುವರು. ಅದೊಂದು ದೊಡ್ಡ ಸಮಾರಂಭವೇ ಆಗಿದೆ. ಇದರ ವಿವರಗಳು ಬಹಳವಾಗಿವೆ. ಸತ್ತವರಿಗೆ ಮರಣೋತ್ತರ ಜೀವನವಿದೆ; ಮತ್ತು ಆ ಜೀವನಕ್ಕೆ ಅನುಕೂಲವಾಗುವಂತಹ ಎಮ್ಮೆ, ಧಾನ್ಯ ಮೊದಲಾದ ಎಲ್ಲ ಸಲಕರಣೆಯೊಂದಿಗೆ ಅವರನ್ನು ಬೀಳ್ಕೊಡುವುದು ಈ ಲೋಕದ ಅವರ ಬಂಧು-ಮಿತ್ರರ ಕರ್ತವ್ಯವಾಗಿವೆ ಎಂಬ ನಂಬಿಕೆಯ ಮೂಲಾಧಾರದ ಮೇಲೆ ಈ ಸಮಾರಂಭದ ಆಡಂಬರವು ಹರಡಿಕೊಂಡಿದೆ. ತೊದವರು ಮೃತಶರೀರಕ್ಕೆ 'ಕೇಡ್' ಮತ್ತು ಶವಸಂಸ್ಕಾರಕ್ಕೆ 'ಕೇಡು' ಎನ್ನುವರು. ಶವಸಂಸ್ಕಾರವು ಎರಡಾವೃತ್ತಿ ನಡೆಯುತ್ತದೆ. ಒಂದನೆಯದು ಸತ್ತ ನಂತರ ಅಲ್ಪಾವಧಿಯಲ್ಲಿ ಮಾಡುವ ದಹನವಿಧಿ. ಇದಕ್ಕೆ 'ಹಾಸೆ ಕೇಡು' (Green-funeral) ಎನ್ನುವರು. ಇನ್ನೊಂದು ಮುಂದೆ ಕೆಲವು ತಿಂಗಳುಗಳಾದ ಬಳಿಕ ಆ ವರ್ಷದಲ್ಲಿ ಸತ್ತ ಬೇರೆ ತೊದವರೊಂದಿಗೆ ಸಾಮೂಹಿಕವಾಗಿ ಮಾಡುವ ಅಗ್ನಿಸಂಸ್ಕಾರ; ಇದಕ್ಕೆ 'ಬರ ಕೇಡು' (Dry funeral) ಎನ್ನುವರು. ಮೊದಲನೆಯ ಸಂಸ್ಕಾರದಲ್ಲಿ ಪ್ರೇತದ ಜೊತೆಗೆ ಎಮ್ಮೆಗಳನ್ನು ಅಟ್ಟಿಕೊಂಡು ಹೋಗುವರು. ಚಿತೆಯ ಹತ್ತಿರ ಅವುಗಳನ್ನು ತಂದು "ಅವನ ಜೊತೆಗೆ ಹೋಗಿರಿ'' ಎಂದು ಹೇಳುವರು. ಚಿತೆ ಉರಿಯುತ್ತಿರುವಾಗ "ನಿನಗಾಗಿ ಈ ಎಮ್ಮೆಗಳನ್ನು ಕೊಲ್ಲಬಹುದಲ್ಲವೆ?'' ಎಂದು ಮೃತನಿಗೆ ಕೇಳುವರು. ಅಸ್ಥಿಸಂಚಯದೊಂದಿಗೆ ಈ ಸಂಸ್ಕಾರವು ಮುಗಿತಾಯವಾಗುತ್ತದೆ.

ಎರಡನೆಯ ಸಂಸ್ಕಾರದ ಕಾಲಕ್ಕೆ ತೊದವರು ಗುಂಪುಗುಂಪಾಗಿ ನೆರೆಯುವರು. ತೊದವರ ಇಷ್ಟ ಮಿತ್ರರಾದ ಬಡಗರು ಬರುವರು. ತೊದವರ ಕೈಕಸಬಿನ ಕೆಲಸಗಾರರೂ ಹಾಡುಗಾರರೂ ಆದ ಕೋತರು ಸೇರುವರು. ಹಾಡು, ಅಳು, ಕೂಗಾಟಗಳಿಂದ ಗಲಿಬಿಲಿಯಾದ ಅದೊಂದು ಜಾತ್ರೆಯಾಗಿರುತ್ತದೆ. ಇದು ಎರಡು ಮೂರು ದಿನ ನಡೆಯುತ್ತದೆ. ಮೊದಲನೆಯ ದಿನ ಆಪ್ತೇಷ್ಟರು ಮೃತನ ಅಸ್ಥಿಗಳನ್ನಿರಿಸಿದ ಕೇಡ್-ಮನೆಗೆ ಬರುವರು. ಬಲಿ ಕೊಡಬೇಕಾಗಿದ್ದ ಎಮ್ಮೆಗಳನ್ನು ಅಟ್ಟಿ ತಂದು ಕೊಟ್ಟಿಗೆಯಲ್ಲಿ ಭದ್ರವಾಗಿ ಇರಿಸುವರು. ಎರಡನೆಯ ದಿನ ಹೊಸ ಬಟ್ಟೆಯನ್ನು ಸುತ್ತಿದ ಕೇಡನ್ನು (ಅಸ್ಥಿಗಳನ್ನು) ಹೊರಗೆ ತರುವರು. ಎಲ್ಲರೂ ಅದಕ್ಕೆ ನಮುಸ್ಕಾರ ಮಾಡುವರು, ಹಿಡಿ ಮಣ್ಣನ್ನು ಎರಚುವರು. "ಹಾ ಹಾ, ಎರ್ ಕಾರ್ ಉಲ್ತಮಾ!'' (ಎಮ್ಮೆ ಕರುಗಳಿಗೆ ಸುಖವಾಗಲಿ) ಎಂದು ಕೂಗಾಡುವರು. ಬಳಿಕ ಎಮ್ಮೆಗಳನ್ನು ಕೊಲ್ಲುವರು. ಎಮ್ಮೆಯ ರಕ್ತದಲ್ಲಿ ಅದ್ದಿದ ಬಾಣವನ್ನು ಮತ್ತು ಬಿಲ್ಲನ್ನು ತೋರಿಸಿ "ನಿನಗೆ ಈ ಧನುರ್ಬಾಣಗಳನ್ನು ಕೊಡೋಣವೆ?'' ಎಂದು ಮೃತನಿಗೆ ಕೇಳುವರು. ಅಂದಿನ ಹಗಲು ಮತ್ತು ರಾತ್ರಿಯೆಲ್ಲ ಹಾಡುವ ಅಳುವ ಕುಣಿಯುವ ಕ್ರಮುಗಳು ನಡೆಯುತ್ತವೆ. ಅಳುವಾಗ ಜೊತೆಜೊತೆಯಾಗಿ ದುಂಡಾಗಿ ಕುಳಿತು ತಲೆಗೆ ತಲೆಯನ್ನು ಹಚ್ಚಿ 'ಆ-ಆ-ಆ-ಆ' ಎಂದು ದನಿ ತೆಗೆಯುವರು. ಮರುದಿನ ಬೆಳಗಿನಲ್ಲಿ ದೊಡ್ಡ ಕಲ್ಲುಗಳಿಂದ ವರ್ತುಳಾಕಾರವಾಗಿ ರಚಿಸಿದ ದಹನಭೂಮಿಯಲ್ಲಿ ಬಿಲ್ಲುಬಾಣಗಳೊಂದಿಗೆ ಕೇಡನ್ನು ಸುಡುವರು. ಬಲಿಕೊಟ್ಟ ಎಮ್ಮೆಗಳ ಶವಗಳನ್ನು ಕೋತರು ತೆಗೆದುಕೊಳ್ಳುವರು.

ಹೀಗೆ ಸಂಸ್ಕಾರ ಪಡೆದ ಮೃತರು ಬೆಟ್ಟದ ಮೇಲುಗಡೆಯಿರುವ ಸ್ವರ್ಗದಲ್ಲಿ ಸುಖವಾಗಿ ಬಾಳುವರು. ಸ್ವರ್ಗದ ದಾರಿಯಲ್ಲಿ ಜಿಗುಳೆಗಳಿಂದ ತುಂಬಿದ ಒಂದು ಹೊಳೆ ಸಿಕ್ಕುತ್ತದೆ. ಒಂದು ದಾರದ ಆಧಾರದಿಂದ ಇದನ್ನು ದಾಟಬೇಕಾಗುತ್ತದೆ. ಪಾಪಿಷ್ಠರಿದ್ದರೆ ಈ ದಾರವು ಹರಿದು ಹೊಳೆಯಲ್ಲಿ ಮುಳುಗಿ ನರಕಕ್ಕೆ ಹೋಗುತ್ತಾರೆ. ತೊದವರೆಲ್ಲ ಸ್ವರ್ಗಕ್ಕೆ ಅರ್ಹರು. ತೊದವರ ಮರಣೋತ್ತರ ಕಲ್ಪನೆಯಿದು.

ಕ್ಷಾತ್ರವೃತ್ತಿಯ ನಿದರ್ಶನಗಳು

ಮೇಲೆ ಹೇಳಿದಂತೆ ತೊದವನು ಹುಟ್ಟುವ ಪೂರ್ವದಲ್ಲಿ ಮತ್ತು ಸತ್ತಬಳಿಕ ಶವಸಂಸ್ಕಾರದಲ್ಲಿ ಬಿಲ್ಲುಬಾಣಗಳ ಸಂಬಂಧವು ಬರುತ್ತದೆ. ಇದರಿಂದ ತೊದವನ ಸಮಗ್ರ ಜೀವನವು ಕ್ಷಾತ್ರ ವೃತ್ತಿಯದಾಗಿದೆ ಎಂಬ ಸೂಚನೆ ದೊರೆಯುತ್ತದೆ. ಈ ಬಿಲ್ಲುಬಾಣಗಳ ಅಭಿಪ್ರಾಯವು ತೊದವರನ್ನು ಕುರಿತು ಅಭ್ಯಾಸ ಮಾಡಿದ ಪಾಶ್ಚಾತ್ಯ ಮತ್ತು ಬೇರೆ ಸಂಶೋಧಕರಿಗೆ ಆಗಿರುವುದಿಲ್ಲ. ತೊದವರು ಇದನ್ನು ಅರಿಯರು. ಈ ಸಂಬಂಧವು ಇದೀಗ ಕಡಮೆಯಾಗುತ್ತ ನಡೆದಿದೆ. ಪಾಶ್ಚಾತ್ಯ ಲೇಖಕರು ಇದೊಂದು ಅರ್ಥಹೀನ ಪದ್ಧತಿಯೆಂದು ಹೇಳಿರುವರು. ಅದು ಹಾಗಿರದೆ ನಿಜವಾಗಿ ಅರ್ಥಪೂರ್ಣವಾಗಿದೆ. ಈ ಹಿಂದೆ ಕನ್ನಡ ಶಾಸನಗಳ ಆಧಾರದಿಂದ ನಾವು ಅವಲೋಕಿಸಿದಂತೆ ತೊದವರು ಶೂರರೂ ಸಾಹಸಿಗಳೂ ಸಮರಾಸಕ್ತರೂ ಆಗಿದ್ದರು. ಈ ಕ್ಷಾತ್ರ ವೃತ್ತಿಯ ಕುರುಹು ಈ ಬಿಲ್ಲು ಬಾಣಗಳ ಸಂಪರ್ಕ ರೂಪದಿಂದ ಉಳಿದುಕೊಂಡಿದೆ. ಬರಬರುತ್ತ ತೊದವರು ಪಶುಪಾಲನ ವೃತ್ತಿಯಲ್ಲಿ ನಿರತರಾಗಿ ಕ್ಷಾತ್ರ ವೃತ್ತಿಯನ್ನು ಮರೆತುಬಿಟ್ಟರು. ಆದರೂ ಅವರಾ ಹಿಂದಿನ ವೃತ್ತಿಯ ಅವಶೇಷವು ಈ ಕೆಲವು ಸಂಸ್ಕಾರಗಳಲ್ಲಿ ಉಳಿದುಕೊಂಡಿತು. ತೊದವರ ದೇವರುಗಳಲ್ಲಿ ಒಬ್ಬನಾದ ಬೇಟಕನ ಚರಿತ್ರೆಯಿಂದಲೂ ಈ ಅಂಶವು ಧ್ವನಿತವಾಗುತ್ತದೆ.

ಭಾಷೆ—ಕಲೆ—ವಿದ್ಯಾಸಂಸ್ಕಾರ

ಕ್ಷಾತ್ರ ವೃತ್ತಿಯ ಪರಿಣಾಮುವೋ ಎನ್ನುವಂತೆ ಭಾಷಾ ಮತ್ತು ಕಲಾ ಸಂಸ್ಕಾರದಲ್ಲಿ ಒಂದು ವಿಧದ ಕೊರತೆಯನ್ನು ತೊದವರಲ್ಲಿ ಗುರುತಿಸಬಹುದು. ಪ್ರೇತಸಂಸ್ಕಾರಕ್ಕೆ ಸಂಬಂಧಿಸಿದ ತೊದವರ ಹಾಡುಗಳೇನೋ ಇವೆ. ಆದರೆ ಹಾಡುಗಾರಿಕೆಯಿಂದ ಅವರು ದೂರರು. ತೊದವ ಹೆಂಗಳೆಯರಿಗೆ ಹಾಡಿ ಗೊತ್ತಿಲ್ಲ. ಹಾಡೆಂದರೆ "ಆ—ಆ—ಆ—ಆ'' ಎಂದು ಸುಮ್ಮನೆ ಎಳೆದೆಳೆದು ದನಿ ತೆಗೆಯುವರು. ಧಾರ್ಮಿಕ ಮೊದಲಾದ ಸಂದರ್ಭಗಳಲ್ಲಿ ತೊದವರು "ಹಃ ಹಾ, ಹೊಃ ಹೋ'' ಎಂದು ಸುಮ್ಮನೆ ಕೇಕೆ ಹಾಕುವರು. ತೊದವರ ಈ ಕೊರತೆಯನ್ನು ಕೋತರು ಪೂರಯಿಸುವರು. ಮೃತಸಂಸ್ಕಾರದಂತಹ ಸಂದರ್ಭಗಳಲ್ಲಿ ಗೀತ ವಾದ್ಯಗಳನ್ನು ಮಾಡುವವರು ಕೋತರು. ತೊದವರಿಗೆ ಬಿಲ್ಲು ಬಾಣ ಮತ್ತು ಬೇರೆ ಕೈಕಸಬಿನ ಕೆಲಸಗಳನ್ನು ಮಾಡಿಕೊಡುವವರು ಕೋತರೇ.

ತೊದವರ ನಾಡು ಕನ್ನಡ, ತಮಿಳು ಮತ್ತು ಮಲಯಾಳ ಪ್ರಾಂತಗಳ ಗಡಿಯಲ್ಲಿದೆ. ಅವರು ಈ ಮೂರು ಸಂಸ್ಕೃತಿಗಳ ವರ್ಚಸ್ಸಿಗೆ ಒಳಗಾಗಿದ್ದಾರೆ. ತೊದವರಿಗೊಂದು ಭಾಷೆಯಿದೆ. ಅದರ ಮೇಲೆ ಈಚೆಗೆ ತಮಿಳಿನ ಪ್ರಭಾವವು ಹೆಚ್ಚಾಗಿದ್ದರೂ ಅದರ ಮೂಲ ಪ್ರಕೃತಿ ಕನ್ನಡವೇ ಆಗಿದೆ. ತೊದವರು ಉಚ್ಚರಿಸುವ ಮಾತುಗಳು ಜರ್ಮನ್ ನುಡಿಯಂತೆ ಕೇಳಿಸುವವು. ಅವುಗಳಲ್ಲಿ ಸಿಡಿತದ ಮೊನೆ, ಕಂಠದಂತಗಳ ಪರಿಶ್ರಮ, ಶಕಾರ ಬಾಹುಲ್ಯ, ವ್ಯಂಜನಾಂತತ್ವ, ಮೊದಲಾದ ಲಕ್ಷಣಗಳನ್ನು ಕಾಣಬಹುದು. ಒಬ್ಬ ಕನ್ನಡಿಗನೂ ತೊದವ ಭಾಷೆಯ ಸಶಾಸ್ತ್ರ ಅಭ್ಯಾಸವನ್ನು ಮಾಡಿಲ್ಲ. ಹಾಗೆ ಮಾಡಿದರೆ ಪ್ರಾಚೀನ ಕನ್ನಡದ ಬಗೆಗೆ ಉದ್ಬೋಧಕ ಸಂಗತಿಗಳು ಪ್ರಕಾಶಕ್ಕೆ ಬರುವವು.

ತೊದವರಲ್ಲಿ ಆಧುನಿಕ ವಿದ್ಯಾಸಂಸ್ಕಾರವು ಬೆಳೆದಿಲ್ಲ. ಕೆಲವರು ತಮಿಳು ಓದು-ಬರೆಹವನ್ನು ಬಲ್ಲರು. ಇಂಗ್ಲಿಷನ್ನು ಕಲಿತವರು ಒಬ್ಬಿಬ್ಬರು ದೊರೆಯುವರು. ಆಧುನಿಕ ಯುಗದ ಪ್ರಪಂಚದ ಮೇಲ್‌ಮಟ್ಟದ ನಾಗರಿಕ ಜನಗಳ ಸಂಪರ್ಕದ ಮಧ್ಯದಲ್ಲಿ ವಾಸಿಸುತ್ತಿದ್ದ ತೊದವರು ತಮ್ಮ ಪ್ರಾಚೀನ ಸಂಸ್ಕೃತಿಯ ಅನೇಕ ವಿಚಿತ್ರಾಂಶಗಳನ್ನು ಇಂದಿಗೂ ಜಾಗ್ರತೆಯಾಗಿ ಕಾಪಾಡಿಕೊಂಡು ಬಾಳಿದ್ದಾರೆ. ಇದೊಂದು ಸೋಜಿಗದ ಸಂನಿವೇಶ. ತೊದವರ ಒಟ್ಟು ಜನಸಂಖ್ಯೆ ಆರುನೂರಕ್ಕೆ ಸ್ವಲ್ಪ ಹೆಚ್ಚು ಮಾತ್ರ. ತೊದವರ ಸಂಖ್ಯೆ ಹಿಂದಿನ ಕಾಲದಲ್ಲಿ ಹೆಚ್ಚಾಗಿದ್ದಿತು ಎನ್ನುವುದಕ್ಕೆ ನಿದರ್ಶನಗಳಿವೆ. ಇದೀಗ ಅವರಲ್ಲಿ ಆರೋಗ್ಯ, ಸಾಕ್ಷರತೆ ಮತ್ತು ಉದ್ಯೋಗ, ಇವುಗಳ ಅಭಿವೃದ್ಧಿಗಾಗಿ ಪ್ರಭುತ್ವದವರು ಮತ್ತು ಭಾರತ ಸೇವಕ ಸಮಾಜದಂತಹ ಸಂಸ್ಥೆಯವರು ಕೆಲಮಟ್ಟಿಗೆ ಪ್ರಯತ್ನಿಸಿದ್ದಾರೆ.

ಶ್ರೀ. ಶಿವರಾಮ ಕಾರಂತರಿಂದ



ನಿಸರ್ಗ, ಸಾಹಿತ್ಯ ಮತ್ತು ಕಾದಂಬರಿ

ನಿಸರ್ಗಕ್ಕೂ ಕಲೆಗೂ ಅನಾದಿಕಾಲದ ಸಂಬಂಧ. ಜೀವನಕ್ಕೆ ಹಿನ್ನೆಲೆಯಾಗಿ, ಜೀವನದ ಅಂಗವಾಗಿ ನಿಂತಿರುವ ನಿಸರ್ಗವು ಕಾದಂಬರಿಯಲ್ಲೂ ರಸಪೋಷಕವಾಗಿ ಚಿತ್ರಿಸಲ್ಪಡಬಹುದು. ಆದರೆ ಅದಕ್ಕೂ ಔಚಿತ್ಯ ಬೇಕು, ಮರ್ಮಜ್ಞತೆ ಬೇಕು.

ನಮ್ಮ ದೇಶದ ಗದ್ಯಪದ್ಯ ಸಾಹಿತ್ಯಗಳೆರಡರಲ್ಲಿಯೂ ಪ್ರಕೃತಿಯನ್ನು ಬಣ್ಣಿಸುವ ಕ್ರಮ, ಬಹು ಹಿಂದಿನಿಂದಲೂ ಮನ್ನಣೆಯನ್ನು ಪಡೆದು ಬಂದಿದೆ. ಈ ಆದರ, ಒಂದು ಬಗೆಯ ಶಾಸನವಾಗುವ ತನಕವೂ ಮುಟ್ಟಿತು. ಕವಿ ಕಂಡಿರಲಿ, ಕಾಣದಿರಲಿ, ತನ್ನ ಕಾವ್ಯವು ಸರ್ವಾಂಗ ಸುಂದರವಾಗಲು, ಅಷ್ಟಾದಶ ವರ್ಣನೆಗಳನ್ನು ಮಾಡಿಯೇ ತೀರಬೇಕಿತ್ತು. ಆದರೆ ಕಾವ್ಯದೃಷ್ಟಿಯಿಂದಲಾಗಲಿ, ಕಲಾದೃಷ್ಟಿಯಿಂದಲಾಗಲಿ-ವರ್ಣಿಸುವಾಗ, ಸಾಹಿತಿ ತಾನು ಅನುಭವಿಸದ ಯಾವ ಸುಖವನ್ನು ಬಣ್ಣಿಸುವುದಾದರೂ ಅದು ರೂಢಿಗೆ ಒಪ್ಪಿಗೆಯಾಗಿ ಕಂಡರೂ ಜಳ್ಳಾಗಿ ಕಾಣುವುದು ಸಹಜ. ಕವಿಯ ಸ್ಫೂರ್ತಿ, ಪ್ರತಿಭೆಗಳಿಗೆ ಅನುಭವ ಅಡಿಗಲ್ಲಾಗಿ ಇದ್ದರೇನೆ ಅವುಗಳ ತಳ ಭದ್ರವೆನಿಸೀತು. ಈ ತಳ ಚೆನ್ನಾಗಿರದೆ ಹೋದರೆ ಎಂಥ ಸ್ಫೂರ್ತಿ, ಪ್ರತಿಭೆಗಳೂ ತಮ್ಮ ಕೆಲಸ ಸಾಧಿಸಲಾರವು. ಯಾವವು ಕವಿಯ ಹೃದಯವನ್ನು ಕುಲುಕಿಲ್ಲವೋ ಅವು ಅನ್ಯರ ಹೃದಯವನ್ನು ಕುಲುಕುವುದಾದರೂ ಹೇಗೆ?

ಅನನುಭೂತವಾದ ಚಿತ್ರಗಳನ್ನು ಕೊಟ್ಟು ಸಾಹಿತಿ ಯಶಸ್ವಿಯಾಗಲಾರನಾದರೂ ಅನುಭವಿಸಿದ ನಿಸರ್ಗಸೌಂದರ್ಯವನ್ನು ಅವನು ಚಿತ್ರಿಸುವುದಕ್ಕೂ ಒಂದು ಮಿತಿಯಿದೆ. ಕಾದಂಬರಿಯೆಂಬುದು, ನಮಗೆ ಪಾಶ್ಚಾತ್ಯದಿಂದ ಬಂದ ಗದ್ಯವಿಧಾನ. ಯಾವುದಾದರೊಂದು ಕಥಾನಕವನ್ನೆತ್ತಿಕೊಂಡು ಚಿತ್ರಿಸುವಾಗ—ಮಾನವೀ ಆಟ, ಹೋರಾಟಗಳ ಹಿನ್ನೆಲೆಯಾದ ನಿಸರ್ಗವನ್ನು ಬಣ್ಣಿಸಬೇಕಾಗುತ್ತದೆ. ನಮ್ಮ ಕಾದಂಬರಿಗಳು ಒಂದಲ್ಲ ಒಂದು ಬಗೆಯ- ಮಾನವ ವ್ಯಕ್ತಿ ಇಲ್ಲವೆ ಸಮಾಜದ ಇಲ್ಲವೆ ಗುಂಪುಗಳ ಜೀವನಗಳ ಚಿತ್ರವಷ್ಟೆ. ಈ ಮಾನವರ ಜೀವನ ನಡೆಯುವುದಾದರೂ ಎಲ್ಲಿ? ಅವರ ರಂಗಸ್ಥಳವಾವುದು? ಪ್ರಕೃತಿ ಇಲ್ಲವೆ ನಿಸರ್ಗ. ನೆಲ, ನೀರು, ಬಾನುಗಳ ಆವರಣದಲ್ಲಷ್ಟೆ ಮಾನವನ ಜೀವನನಾಟಕ ಸಾಗಬೇಕು? ಹಾಗಿರುತ್ತ- ಅವನ ಜೀವನ ನಾಟಕವನ್ನು ಸದಾ ಸಾಕ್ಷಿಯಾಗಿ ನಿಂತು ನೋಡುತ್ತಿರುವ ನಿಸರ್ಗವನ್ನು ಚಿತ್ರಿಸಿ ಆಗಬೇಕಾದುದೇನು? ಎಲ್ಲಕ್ಕೂ ಅದು ಒಂದೇ ಬಗೆಯ ಮೂಕಸಾಕ್ಷಿಯಲ್ಲವೇ?

ಇಲ್ಲ, ಹಾಗಿಲ್ಲ. ಅದು ಒಂದೇ ಬಗೆಯಾಗಿಯೂ ಇಲ್ಲ; ಮೂಕಸಾಕ್ಷಿಯೂ ಅಲ್ಲ. ಆದುದರಿಂದಲೇ ಅದಕ್ಕೆ ಸ್ಥಾನ ದೊರೆಯಬೇಕು. ಅದು ನಮ್ಮ ಜೀವನದ ಹಿನ್ನೆಲೆ. ಅದರೊಂದಿಗೇನೆ ನಮ್ಮ ಬಾಳು ಬೆರೆತಿದೆ. ಹೀಗೆಂದೊಡನೆ—ಕಾದಂಬರಿಯಲ್ಲಿ ಚಿತ್ರಿತವಾಗುವ ಪ್ರತಿಯೊಂದೂ ನಿಸರ್ಗದೊಡನೆ ಬೆರೆತ ಬಾಳನ್ನೇ ಹೇಳಬೇಕೆಂದಿಲ್ಲ —ಎಂಬುದನ್ನು ನಾವು ಒಪ್ಪಬೇಕು. ಕೆಲವೊಂದು ಕಥಾನಕದಲ್ಲಿ ನಿಸರ್ಗ ಪ್ರಧಾನ ಪಾತ್ರ ವಹಿಸಬಹುದು. ಕೆಲವುಗಳಲ್ಲಿ ಬರಿಯ ಪೋಷಕ

ವಸ್ತುವಾಗಬಹುದು; ಇನ್ನು ಕೆಲವುಗಳಲ್ಲಿ ಅದು ಅಮುಖ್ಯವೆನಿಸಲೂ ಬಹುದು. ಅದರ ಪಾಲು ಎಷ್ಟೆಂದು ತೆಗೆದುಕೊಂಡ ಪ್ರಸಂಗ, ಕಥೆ, ಸಮಸ್ಯೆಗಳನ್ನು ಹೊಂದಿಯೇ ನಿರ್ಣಯಿಸಬೇಕು. ಸಾಹಿತ್ಯದಲ್ಲಿ ನಿಸರ್ಗದ ಬಣ್ಣನೆಗೆ ಔಚಿತ್ಯವಿರುವುದಾದರೆ ಅದು ಈ ದೃಷ್ಟಿಯಿಂದ ಹೊರತು, ನಿಸರ್ಗದ ಬಣ್ಣನೆ ಇದ್ದೇತೀರಬೇಕು ಎಂಬ ನಿಯಮವಿಲ್ಲ.

ಇನ್ನು ನಿಸರ್ಗವನ್ನು ಚಿತ್ರಿಸುವಾಗಲೂ-- ಎರಡು ದೃಷ್ಟಿಗಳಿಂದ ಅದನ್ನು ಬಣ್ಣಿಸಬಹುದಾಗುತ್ತದೆ. ಒಂದು ನೇರವಾದ ವಾಸ್ತವಿಕ ದಾರಿ, ಇನ್ನೊಂದು ಪ್ರೇರಕವಾದ, ಪೂರಕವಾದ ಪೋಷಕವಾದ ಆವರಣವನ್ನು ನಡೆವ ಒಂದೊಂದು ಘಟನೆಗೂ ಕಲ್ಪಿಸಿಕೊಡುವ ಮಾರ್ಗ. ಕಲಾದೃಷ್ಟಿಯಿಂದ ಮೊದಲನೆಯದಕ್ಕಿಂತ ಎರಡನೆಯ ದಾರಿ ಹಿರಿದು; ಉತ್ತಮ. ಏಕೆಂದರೆ "ವಾಸ್ತವಿಕ" ಎಂಬ ಮಾತು ಸಹ ಕಲಾವಿದನ ದೃಷ್ಟಿಯಿಂದ ಮಿತವರಿತ ಮಾತು. "Art mirrors life" ಎನ್ನುತ್ತಾರೆ ಬಲ್ಲವರು. ಅದು ಜೀವನವನ್ನು ಪ್ರತಿಬಿಂಬಿಸುತ್ತದೆ ಎಂದೊಡನೆ, ಈ ಪ್ರತಿಬಿಂಬ ಚಾಚೂ ತಪ್ಪದಂಥ ಅನುಕರಣೆಯಲ್ಲ; ಘಟನೆಗಳ ಮರಕಳಿಕೆಯಲ್ಲ; ದಾಖಲೆಯಲ್ಲ. ಒಬ್ಬ ಚಿತ್ರಕಾರ ಎದುರಿನ ಬೆಟ್ಟವನ್ನು ಚಿತ್ರಿಸುವುದಾದರೂ ಸರಿಯೇ, ಒಬ್ಬ ಕವಿ ಒಂದು ಸೂರ್ಯಾಸ್ತವನ್ನು ಬಣ್ಣಿಸುವುದಾದರೂ ಸರಿಯೆ - ಇಬ್ಬರ ಹೃದಯ, ಮನಸ್ಸುಗಳು - ನಿರ್ಜೀವ, ಯಾಂತ್ರಿಕ ಗಾಜುಗಳಲ್ಲ. ಚಿತ್ರಕಾರನಾದವನ ಸಾಧನಗಳು ಮೂಲ ಚಿತ್ರಕ್ಕೆ ಸಾಕಷ್ಟು ಸಮೀಪವಾದವುಗಳು; ಬೆಟ್ಟದಲ್ಲಿ ತುಂಬಿರುವ ಬಣ್ಣ, ರೇಖೆ, ಛಾಯೆ, ಬೆಳಕುಗಳನ್ನು ಹೆಚ್ಚು ಕಡಿಮೆ - ಅವೇ ಬಗೆಯ ವಸ್ತುಗಳ ಸಹಾಯದಿಂದ ಆತ ಚಿತ್ರಿಸುತ್ತಾನೆ. ಆದರೂ ಕೆಮೆರಾದಂತೆ ತಾದ್ರೂಪಿಕವಾದ ಚಿತ್ರಣ ಅವನದಲ್ಲ. ಇದು ಅವನ ಶಕ್ತಿಹೀನತೆಯ ಗುಣವಲ್ಲ; ಯಾಂತ್ರಿಕ ಚಿತ್ರಣದ ಕೆಲಸವನ್ನು ಕೆಮೆರಾವೇ ಮಾಡೀತು ಅವನಗಿಂತ ಉತ್ತಮವಾಗಿ; ಅಲ್ಲಿ ವ್ಯಕ್ತಿ ಮಾಡಬೇಕಾದ ಕೆಲಸವೇನಿಲ್ಲ, ಅದೂ ಬಣ್ಣದ ಫೋಟೋಗಾರಿಕೆ ಇಂದು ಸಾಧ್ಯವಾಗಿರುವಾಗ.

ಎದುರಿನ ಬೆಟ್ಟವನ್ನು ಕಂಡು, ಯಾವ ಭಾವ ಪ್ರೇರಣೆಯಾಗುತ್ತದೆಯೋ ಅದನ್ನು ಚಿತ್ರಿಸುವವನು ಚಿತ್ರಕಾರ. ಈ ಭಾವನೆ ಮೂಡುವುದಕ್ಕೆ ಎದುರಿನ ನೋಟದಲ್ಲಿನ ಯಾವ ರೇಖೆ, ಯಾವ ಬಣ್ಣ, ಯಾವ ಚಲನ ಕಾರಣವಾಯಿತೆಂದು ಶೋಧಿ, ಅವನ್ನೇ ಮುಖ್ಯವಾಗಿರಿಸಿ ತನ್ನ ಕೆಲಸ ಸಾಧಿಸುವವನವನು. ಅವನು ಕಾಣುವ ದೃಶ್ಯದಲ್ಲಿ - ಮುಗಿಲು, ರೇಖೆ, ಗಿಡಮರಗಳೆಲ್ಲ ಆ ಬೆಟ್ಟದ ಹಿಂದು ಮುಂದಿರಬಹುದು. ಅವುಗಳಲ್ಲಿ ಎಷ್ಟನ್ನೋ ಆತ ಮರೆಯುತ್ತಾನೆ. ಅಮುಖ್ಯವಾದುವನ್ನು ಬಿಡುತ್ತಾನೆ. ಉಳಿದವನ್ನು ಸಮತೋಲವಾಗುವಂತೆ ಪುನಾರಚಿಸುತ್ತಾನೆ. ಅವವುಗಳ ದೂರ, ಅಂತರ, ಗಾತ್ರ, ಛಾಯಾ ತೇಜಗಳ ತೀಕ್ಷ್ಣತೆ, ಮೊದಲಾದವುಗಳನ್ನು ಆತ ಈ ಕಾರ್ಯದಲ್ಲಿ ವ್ಯತ್ಯಾಸಗೊಳಿಸಲೂ ಬಹುದು. ತನ್ನೊಳಗೆ ಪ್ರೇರಿತವಾದ ಭಾವವನ್ನೂ ತಿರುಗಿ ಅವನು ಬಿಂಬಿಸುವ ರೀತಿ ಪುನಃಸೃಷ್ಟಿಯಾಗುತ್ತದೆ. ಆಗ ಅದು ಕೇವಲ ತಾದ್ರೂಪಿಕ ಚಿತ್ರವಾಗಲಾರದಷ್ಟೆ. ಹಾಗಿರಲು ವಾಸ್ತವತೆಯೆಂದರೇನು? ಅಂಥ ಚಿತ್ರಗಳನ್ನು ಕಂಡು ನಾವೂ "ಎಷ್ಟು ನಿಜ" ಎಂದು ಉದ್ಗರಿಸಿದರೂ ಅದನ್ನು ನೋಡಿ ಮೂಲ ನಿಸರ್ಗದ ನೆನಪು ನಮಗಾಗಲಾರದು. ಅವನು ಬರೆವ ಚಿತ್ರ, ಅವನು ಅನುಭವಿಸಿದ ಭಾವನೆಯ ಬಿಂಬಗಳು ನಮಗೆ ಒಪ್ಪಿಗೆಯಾಗುತ್ತವೆ. ಈ ಹೊಸ ಬಿಂಬನಿರ್ಮಾಣಕ್ಕೆ ಒಪ್ಪದಂಥ ರೇಖೆ, ಬಣ್ಣ, ಮೇಳ, ತೋಲಗಳನ್ನು ಬಿಟ್ಟು ನಿರ್ಮಾಣವಾದ ಹೊಸ ಕೃತಿ ಅದು. ಆದರೂ ಅದು ಸಹಜ, ನಿಜ, ವಾಸ್ತವ-ಎನ್ನುತ್ತೇವೆ.

ಚಿತ್ರಕಾರನ ಸಾಧನಕ್ಕೂ ಅವನ ಅನುಭವವನ್ನು ಪ್ರೇರಿಸಿದ ಮೂಲವಸ್ತುಗಳಿಗೂ ಹೆಚ್ಚಿನ ಸ್ನೇಹವಿದೆ. ಆದರೆ ಬೆಟ್ಟವನ್ನೋ ಅದೇ ಸೂರ್ಯಾಸ್ತವನ್ನೋ ಚಿತ್ರಿಸಲು ಹೊರಟ ಕವಿಯ ಪಾಡೋ! ಅದು ಮತ್ತೂ ಕಠಿಣ. ಬಣ್ಣ ಕುಂಚಗಳು ಅವನ ಚಿತ್ರಣಸಾಮಗ್ರಿಗಳಲ್ಲ. ಮತ್ತು ಅವನ ಸಾಧನ, ಅವನು ಕಂಡ "ಬೆಟ್ಟ"ವೇ ನಮಗೆ ಕಾಣಿಸದು. ಬರೆದ ಅವನಿಗೇನೇ ಅದು ನೆನಪಿನಿಂದ ಗೋಚರಿಸಬಹುದು. ಅವನ ಬೆಟ್ಟ ನಾವು ಕಂಡ ಮತ್ತೊಂದು ಬೆಟ್ಟದ ನೆನಪನ್ನು ಹುಟ್ಟಿಸೀತು. "ಅದುಮುಗಿಲು ಮುಟ್ಟುತ್ತಿತ್ತು" ಎಂದರೆ ಯಾವುದೋ ನಾವು ಕಂಡ ಬೆಟ್ಟ, ನಾವು ಕಂಡ ಮುಗಿಲುಗಳನ್ನು ಮುಟ್ಟುವಂತೆ ಕಾಣಿಸತೊಡಗುತ್ತದೆ. ಅದು "ಗಗನಚುಂಬಿಯಾಗಿತ್ತು" ಎಂದರೆ ಬಾನನ್ನು ಇಣಕಿನೋಡಬಲ್ಲ ಯಾವುದೋ ಗಿರಿಶೃಂಗದ ಶಿಖರ ನಮ್ಮ ಕಲ್ಪನೆಯಲ್ಲಿ ಕೆರಳೀತು. ಅದನ್ನೆಲ್ಲ "ವಾಸ್ತವಿಕ" ಎನ್ನುತ್ತೀರಿ. ಅದು ತಾದ್ರೂಪಿಕವೇ? ತೀರ ವಾಸ್ತವಿಕ ಬೆಟ್ಟದ ವರ್ಣನೆಯಾಗಲು — ಭೂಗೋಲದಲ್ಲಿ ಹೇಳುವಂತೆ-ಅದರ ಮೈಗಳು ಇಂತಿಷ್ಟು ಕೋನದಲ್ಲಿ ಬಾಗಿವೆ, ಶಿಖರ ಸಮುದ್ರಮಟ್ಟದಿಂದ ಇಂತಿಷ್ಟು ಅಡಿ ಎತ್ತರವಾಗಿದೆ—ಎನ್ನಬೇಕು. ಸಾಹಿತ್ಯದ ದಾರಿ ಹಾಗಿಲ್ಲ; ಹಾಗಲ್ಲ. ಸಾಹಿತ್ಯದ ಮಾತುಗಳೇ ಆ ತೆರನವಲ್ಲ. ಸಾಹಿತ್ಯದಲ್ಲಿ ಬಳಸುವ ಒಂದೊಂದು ಮಾತು ಸದೃಶವಾದ ಒಂದೊಂದು ಬಿಂಬವನ್ನು ನಮ್ಮ ಮನಸ್ಸಿನಲ್ಲಿ ಉಂಟುಮಾಡುತ್ತದೆ. ಬೆಟ್ಟದ ಆಕಾರವನ್ನೊ ಭವ್ಯತೆಯನ್ನೋ, ಬೆಡಗನ್ನೋ ಗುರಿಯಾಗಿಟ್ಟುಕೊಂಡು ಬಣ್ಣಿಸುವ ಸಾಹಿತಿ ತನ್ನ ಮಾತುಗಳಿಂದ, ಉಪಮೆಗಳಿಂದ-ತನ್ನಲ್ಲಿ ಉಂಟಾದ ಭಾವಬಿಂಬವನ್ನು ನಮ್ಮಲ್ಲಿ ಮೂಡಿಸಲು ಪ್ರಯತ್ನಿಸುತ್ತಾನೆ. ಅದರ ಬಾಹ್ಯ ರೂಪವನ್ನು ಚಿತ್ರಿಸುವಾಗಲೂ ಇದೇ ಬಗೆಯ ಅನುಭವದ ಪರಿಚಯ ಮಾಡಿಕೊಡುತ್ತಾನೆ. ಮೂಲ ಪ್ರೇರಣೆಗೆ ಎಷ್ಟೆಷ್ಟು ಸಮೀಪವಾದ ಬಿಂಬವನ್ನು ಅವನ ಮಾತುಗಳು ನಮ್ಮ ಮನಸ್ಸಿನಲ್ಲಿ ಹುಟ್ಟಿಸಲು ಶಕ್ತವಾಗುತ್ತವೋ, ಅಷ್ಟಷ್ಟು ಸಹಜ ಚಿತ್ರ ಅದೆನಿಸುತ್ತದೆ. ಆದುದರಿಂದಲೇ ಕಲೆಯಲ್ಲಿ, ಸಾಹಿತ್ಯದಲ್ಲಿ—ವಾಸ್ತವಿಕತೆ, ಸಹಜತೆ ಎಂಬ ಮಾತುಗಳಿಗೆ ಮಿತವಾದ ಅರ್ಥವಿದೆ. ಅವು ಪ್ರೇರಿಸಬಲ್ಲ ಚಿತ್ರಗಳಿಗೆ—ಓದುಗನ ಅನುಭವ ಸಾದೃಶ್ಯದ ಮಿತಿಯೂ ಇದೆ. ಇಷ್ಟನ್ನು ಹೇಳಿದುದರಿಂದ—ನಿಸರ್ಗಚಿತ್ರಣಕ್ಕೆ, ಅದರ ನಿಕಟ ಪರಿಚಯವು ಸಾಹಿತಿಯಲ್ಲಿ ಇರಬೇಕೆಂದ ಹಾಗಾಯಿತೇ ಹೊರತು, ಅದರ ಔಚಿತ್ಯವನ್ನು ಕುರಿತು ಹೇಳಿದಂತಾಗಲಿಲ್ಲ.

ಕನ್ನಡದಲ್ಲಿ, ಇಲ್ಲವೆ ನಮ್ಮ ಭಾರತೀಯ ಭಾಷೆಗಳಲ್ಲಿ ನಿಸರ್ಗವೇ ಪ್ರಧಾನಪಾತ್ರವಾಗಿ ಉಳ್ಳ ಕಾದಂಬರಿ ಇನ್ನೂ ಹುಟ್ಟಿಲ್ಲ. ಹಳೆಯ ಕಾವ್ಯಗಳಲ್ಲಿ ಕಾಳಿದಾಸನ "ಋತುಸಂಹಾರ" ಆ ಗುರಿಯನ್ನು ಸೇರಬಹುದು. ಕಾದಂಬರಿಯೆಂದೊಡನೆ—ಮನುಷ್ಯನ ಕತೆಗಳೆಂದೇ ನಾವೇಕೆ ತಿಳಿಯಬೇಕು? ಬರೆಯುವಾತನೇನೋ ಮನುಷ್ಯ. ಆದರೆ ಅವನ ಕಥಾಸೃಷ್ಟಿಯ ನಾಯಕ, ಪ್ರತಿನಾಯಕ, ಪೋಷಕಪಾತ್ರಗಳೆಲ್ಲವೂ ನಿಸರ್ಗವಾಗಬಲ್ಲುದು. ಜೆ. ಬಿ. ಪ್ರೀಸ್ಟ್ಲೆ "ಮಿಡ್ ನಾಯ್ಟ್ ಇನ್ ದಿ ಡೆಸರ್ಟ್" ಎಂಬೊಂದು ಕಾದಂಬರಿ ಬರೆದಿದ್ದಾನೆ. "ಮರುಭೂಮಿಯಲ್ಲಿ ಮಧ್ಯರಾತ್ರಿ" ಎಂದ ಹಾಗೆ ಆ ಹೆಸರಿದೆ. ಅಮೇರಿಕದ ಎರಿಜೋನಾ ಮರುಭೂಮಿಯ ನಡುವೆ ನಿಂತಿರುವ ಗ್ರ್ಯಾಂಡ್ ಕೆನ್ಯನ್ಸ್ ಕೊರಕಲೇ ಆ ಕಾದಂಬರಿಯ ಕಥಾವಸ್ತು. ಬರಿಯ ಮರುಭೂಮಿ, ಕೊರಕಲಿನ ನಿಸರ್ಗವೊಂದೇನೆ ಆ ಕಾದಂಬರಿಯ ಮುನ್ನೂರು ಪುಟಗಳನ್ನು ತುಂಬಿದೆ. ಆದರೆ—ಅರೇಬಿಯನ್ ನೈಟ್ಸ್ ಕತೆಗಳಂತೆ—ಯಕ್ಷ, ಕಿನ್ನರ, ಗಂಧರ್ವರಿಂದ ತುಂಬಿದ ಸ್ವರ್ಗಲೋಕದಂತೆ—ಅನಂತ ಬಣ್ಣ ಬೆಡಗುಗಳಿಂದ ತುಂಬಿದ್ದು ನಮ್ಮನ್ನು ಆ ಕಾದಂಬರಿ ವಿಚಿತ್ರ ಸ್ವಪ್ನರಾಜ್ಯಕ್ಕೆ ಕರೆದೊಯ್ಯುತ್ತದೆ. ಅದನ್ನು ಪ್ರೇರಿಸಿದ ಗ್ರಾಂಡ ಕೆನ್ಯನ್ಸ್ ಅಂಥ ಅನುಪಮ ನಿಸರ್ಗದ ನೋಟ. ಅಲ್ಲಿನ ಕೊರಕಲುಗಳು, ಅವುಗಳ ವಿಚಿತ್ರ ಗೋಡೆಗಳು, ಪ್ರಪಾತಗಳು, ನದಿಕೊರೆದಾದ ಗಿರಿಗಹ್ವರಗಳು—ಎಷ್ಟೆಲ್ಲ ಬಣ್ಣ ತಾಳಿ ಅರಮನೆಗಳಾಗುತ್ತವೆ. ದೇಗುಲಗಳಾಗುತ್ತವೆ; ಉದ್ಯಾನಗಳಾಗುತ್ತವೆ. ಸ್ವರ್ಗಗಳಾಗುತ್ತವೆ. ನರಕಗಳೂ ಆಗುತ್ತವೆ. ಅದರ ಮೇಲೆ ಚೆಲ್ಲುವ ವಿವಿಧ ಕಾಲದ ಸೂರ್ಯಚಂದ್ರರ ರಶ್ಮಿಗಳು, ಕತ್ತಲಿನ ಮಾಯಕದಪರದೆ-ಈ ನಿರ್ಜೀವಜಗತ್ತಿಗೆ-ಪ್ರತಿ ಸಂದುಗೊಂದಿನಲ್ಲೂ ಜೀವದುಸಿರಲಿ ತುಂಬಿಸುತ್ತದೆ. ಆ ಕೊರಕಲು ಚೈತನ್ಯಮಯವಾದೊಂದು ಜೀವಲೋಕವೆನಿಸುತ್ತದೆ.

ಇಷ್ಟಲ್ಲದೆ ಹೋದರೂ-ನಾವು ವಾಸಿಸುತ್ತಿರುವ ನೆಲ, ಹರಿಯುವ ಜಲ, ತೇಲುವ ಮುಗಿಲು, ಅನಂತವಾಗಿ ಆಚಂದ್ರಾರ್ಕವಾಗಿ ಪಸರಿಸಿಕೊಂಡಿರುವ ಬಾನು - ಇವುಗಳೆಡೆಯಲ್ಲಿ ವಿವಿಧ ಮಾಯಾ

ಜಾಲಗಳನ್ನೆರಚುವ ಸೂರ್ಯ, ಚಂದ್ರ, ತಾರೆಗಳು, ಬೆಳಗು ಬೈಗು ರಾತ್ರಿಗಳು, ಋತುವಿಶೇಷಗಳು- ನಮ್ಮ ನಿತ್ಯಜೀವನದ ನಾಟಕವನ್ನು ಎಷ್ಟೊಂದು ಮಟ್ಟಿಗೆ ನಡೆಸುತ್ತಲಿಲ್ಲ; ನುಡಿಸುತ್ತಲಿಲ್ಲ.

ಉನ್ನತವಾದ ಗಿರಿಶೃಂಗಗಳು ನಮ್ಮೆದೆಯನ್ನು ಹಿಗ್ಗಿಸವೆ, ಕತ್ತನ್ನು ನಿರಿಸವೆ? ಹೆಮ್ಮೆಯನ್ನು ಪ್ರೇರಿಸವೆ? ನಯವಾಗಿ, ಉರುಟಾಗಿ, ಹದವಾಗಿ ಇಳಿದೇರುವ ಗುಡ್ಡಗಳ ಮೆಯ್ಯಂಚು ನಮ್ಮಲ್ಲಿ ಲಾಸ್ಯ ಭಾವವನ್ನು ಹುಟ್ಟಿಸವೇ, ವಿಶಾಲವಾಗಿ ಮೈಯೊಡ್ಡಿ ಬಿದ್ದಿರುವ ಪರ್ವತಗಳು, ಬಂಡೆಗಳು ವಿಶ್ರಾಮವನ್ನು ಸೂಚಿಸವೇ? ಒಮ್ಮೆಗೆ ಬಯಲಿಂದ ತಲೆಯೆತ್ತಿ ನಿಂತ ಬಂಡೆಯ ಕೋಡುಗಳು, ಅದರ ಮುರುಕು ಮೈಗಳು ಭೀತಿ ಮೂಡಿಸವೇ? ಇಳಿಜಾರುಗಳಲ್ಲಿ ತೂಗಾಡುವ ಹುಲ್ಲಿನ ಧಾವಳಿ ನಮ್ಮನ್ನು ತೂಗಿಸದೇ? ವಿಸ್ತೃತವಾಗಿ ಚಾಚಿದ ಕಡಲಿನ ಅಂಚು, ದಿಗಂತ, ಕಡಲ ದಂಡೆ ನಮ್ಮಲ್ಲೂ ಅನಂತತೆಯ ಮಹಿಮೆಯನ್ನು ಮೂಡಿಸವೇ?

ಬಾನಿನಲ್ಲಿ ತೇಲುತ್ತಿರುವ ಆ ಮುಗಿಲುಗಳಿಗೆಷ್ಟು ರೂಪ, ಎಷ್ಟು ಬಣ್ಣ, ಎಷ್ಟು ಬಗೆಯ ಓಟ, ಅದು ದಿಗಂತದ ಅಂಚಿನಲ್ಲಿ ನಿಡಿದಾಗಿ ಚಾಚಿದಾಗ ಒಂದು ಭಾವ! ಹತ್ತಿಯಾಗಿ ಬಾನೆಲ್ಲ ಹರಡಿಕೊಂಡಾಗ ಮತ್ತೊಂದು ಭಾವ! ರಾಶಿಯಾಗಿ ತೇರಿನಂತೆ ಉರುಳುತ್ತಿರುವಾಗ ಮೂರನೆಯ ಭಾವ! ಬಣ್ಣ ಕಳೆದು, ಜಡೆಗೆದರಿ ಬಾನ್ ತುಂಬಿ ಬರುವಾಗ ಭಯಾನಕ ಭಾವ! ಗಾಳಿ ಅವುಗಳೊಡನೆ ಕೂಡಿ ಆಡುವಾಗ ಒಂದು ಭಾವ; ಬರಿದೆ ನೋಡುವಾಗ ಮತ್ತೊಂದು ಭಾವ- ಅನಂತಾನಂತ ಭಾವಗಳ ಬುಗ್ಗೆ ಈ ಮುಗಿಲೊಂದೇ!

ಮುಗಿಲು ಕವಿದು ಬೆಳಕು ಕಡಿಮೆಯಾದರೆ ಬೇಸರ, ಕತ್ತಲು ತುಂಬಿದರೆ ಭೀತಿ, ಬೆಳಕು ಹೆಚ್ಚಿದರೆ ದಣಿವು, ಆಯಾಸ. ಸಂಜೆಯ ಹೊಂಬಣ್ಣ ಗಿಡಮರಗಳ ಮೇಲೆ ಕುಣಿದಾಡುವಾಗ ಉಲ್ಲಾಸ; ಜತೆಗೆ ಎಳೆಗಾಳಿ ಬೀಸಿದರೆ ಉತ್ಸಾಹ. ನಿಸರ್ಗ ಬುದ್ಧಿಜೀವಿಯಾದ ನಮ್ಮನ್ನೇ ಏಕೆ- ಪಶು ಪಕ್ಷಿಗಳನ್ನು ತನ್ನ ವಿವಿಧ ವಿಲಾಸಗಳಿಂದ ಆಟವಾಡಿಸುವುದನ್ನು ಕಾಣಲಾರೆವೇ?

ಮುಗಿಲು ತೆತ್ತ ಮಳೆ, ಮಳೆ ಹೆತ್ತ ಹೊಳೆ, ಹೊಳೆ ಉತ್ತ ನೆಲ- ಇವುಗಳ ರೂಪವೂ ಅನಂತ. ಅವು ಪ್ರೇರಿಸುವ ಭಾವನೆಗಳೂ ಅನಂತ. ದಿಗಂತ ವಿಶ್ರಾಂತವಾಗಿ ಮಲಗಿರುವ ಕಡಲು, ಬೆಟ್ಟದಿಂದ ಧುಮುಕುವ ನದಿ, ಬಂಡೆಯನ್ನು ಕೊರೆಯುವ ಅಬ್ಬಿ, ಹರಡಿ, ಉರುಡಿ ಆಡುವ ತೊರೆ, ಶಾಂತವಾಗಿ ಹರಿಯುವ ನದಿ- ಇವುಗಳಷ್ಟೆಷ್ಟು ಭಾವನೆಗಳನ್ನು ಹುಟ್ಟಿಸುವುದಿಲ್ಲ!

ನಿಸರ್ಗದ ವಿವಿಧ ರೂಪಗಳೊಡನೆ, ರೀತಿಗಳೊಡನೆ ನಮ್ಮ ಜೀವನದ ಹೋರಾಟ ನಡೆಯಬೇಕು. ಅವೇ ನಮ್ಮ ಜೀವನವನ್ನು ರೂಪಿಸಲೂಬಹುದು. ಅಂಥ ಪ್ರಯತ್ನವೇ ಮುಖ್ಯವಾಗಿರುವಲ್ಲಿ ಪ್ರಾದೇಶಿಕ ಕಾದಂಬರಿಯುಂಟಾಗುತ್ತದೆ. ಮಾನವ ನೆಲಸಿರುವ ಆವರಣ (ನಿಸರ್ಗ) ದಿಂದಾಗಿ ಅವನ ಜೀವನದ ಹೋರಾಟ, ನಡವಳಿಕೆ, ನಂಬಿಕೆಗಳು ರೂಪುಗೊಂಬುದನ್ನು ಕಾದಂಬರಿಕಾರ ಚಿತ್ರಿಸುವಾಗ- ನಿಸರ್ಗ, ಮುಂದೆ ನಲಿಯುವ ಜನಗಳಷ್ಟೇ ಕಾದಂಬರಿಯ ಮುಖ್ಯ ವಸ್ತುವಾದೀತು. ರೈತನ ಹೊಲ, ಗದ್ದೆ, ತೋಟದ ಬಣ್ಣನೆಗಳು, ಋತುಮಾನಕ್ಕನುವರ್ತಿಯಾದ ಬೆಳೆಯ ಬಣ್ಣನೆಗಳು, ಅವನ ದಿನನಿತ್ಯದ ಕೆಲಸಗಳಿಗೆ ಅರ್ಥವನ್ನೂ ಕಳೆಯನ್ನೂ ಕೊಡಬಲ್ಲುವು. ಅವನ ಕಷ್ಟದ, ಬೇಸರಿಕೆಯ ಬಾಳನ್ನು ಚಿತ್ರಿಸುವಾಗ- ಮುಗಿಲಿಲ್ಲದ ಬಾನು, ಮುಗಿಲಿದ್ದೂ ಮಳೆ ಬಾರದ ಬೇಗುದಿ, ಒಡೆದು ಸಿಂಬಿಯಾದ ನೆಲ, ಬತ್ತಿದ ಕೆರೆ, ತೊರೆ, ಚಲಿಸದ ರೆಂಬೆ ಕೊಂಬೆಗಳು- ಅವನ ಬೆವರಿಳಿಸುವ ಜೀವನವನ್ನು ಮತ್ತಷ್ಟು ಚನ್ನಾಗಿ, ಆಳವಾಗಿ ದಾರುಣವಾಗಿ ತೋರಿಸಬಲ್ಲುವು. ಅವನ ತೃಪ್ತ, ಶಾಂತ ಜೀವನಕ್ಕೆ ಹಿನ್ನಲೆಯಾಗಿ- ತುಂಬಿದ ಪೈರು ಪಚ್ಚೆ, ನೆಲವನ್ನಾಚ್ಛಾದಿಸುವ ಹಸುರುಗಂಬಳಿ, ನಲಿದು ತೇಲುವ ಬೆಳ್ಮುಗಿಲುಗಳು- ಅದರ ಸೊಗವನ್ನು ಇಮ್ಮಡಿಸಬಹುದು. ಹೀಗೆ ಮಾಡುವಾಗಲೆಲ್ಲ- ಕಾದಂಬರಿಯಲ್ಲಿನ ಪಾತ್ರಗಳು ನಲಿದಾಡಲು ಅತ್ಯವಶ್ಯವಾದ ಉಸಿರನ್ನು ಒದಗಿಸಿ ಕೊಟ್ಟಂತಾದೀತು.

ಕಾದಂಬರಿಯು-ಬರಿಯ ಹೊಟ್ಟೆಯ ಹೋರಾಟವನ್ನು ತೋರಿಸಲು ಹೋಗದೆ, ಬೇರಾವುದೋ ಸಾಂಸಾರಿಕ ಸಮಸ್ಯೆಯನ್ನು ಚಿತ್ರಿಸಲು ಹೊರಟಾಗ ನಿಸರ್ಗದ ಪಾತ್ರ ಮಿತಗೊಳ್ಳಬಹುದು, ಬೇರೆಯೇ ತೆರನದಾಗಬಹುದು. ಕುಲದ ಅಂತರದಿಂದಲೋ, ಸಂಪತ್ತಿನ ವ್ಯತ್ಯಾಸದಿಂದಲೋ, ಕಟ್ಟಳೆಯ ನಿರ್ಬಂಧದಿಂದಲೋ ಒಂದುಗೂಡಲು ಬಯಸಿಯೂ ಕೂಡಲಾರದ ಗಂಡುಹೆಣ್ಣುಗಳ— ಬಯಕೆ, ವಿರಹ, ಮಿಲನದಂಥ ಸೆಳವುಗಳನ್ನು ಅದು ಚಿತ್ರಿಸಲು ಹೊರಟದೆಯೆಂದು ಊಹಿಸಿರಿ. ಆಗ ಗುಡ್ಡ ಬೆಟ್ಟಗಳು ಮುಖ್ಯಪಾತ್ರ ವಹಿಸಬೇಕಿಲ್ಲ. ನೈಸರ್ಗಿಕ ಹಿನ್ನೆಲೆ ಅನವಶ್ಯವೆನಿಸದಿರಲೂ ಬಹುದು. ಅಥವಾ ಒಂದೇ ನೈಸರ್ಗಿಕ ಹಿನ್ನೆಲೆಯ ಮುಂದೆ-ಭಿನ್ನ ಸಮಸ್ಯೆಗಳೂ ಪ್ರಾಪ್ತಿಸಬಹುದು. ಆಗಲೂ ಕಾದಂಬರಿ ನಿಸರ್ಗದಿಂದ ತೀರ ತೀರ ದೂರವಾಗಿರಲಾರದು. ಕಾರಣ— ನಮ್ಮ ಮಾತಿನ ಬೊಕ್ಕಸ, ನುಡಿಕಟ್ಟು, ಉಪಮೆಗಳೆಷ್ಟೋ ಅದರಿಂದಲೇ ಹುಟ್ಟಿದವುಗಳು.

ಉದಾಹರಣೆಗಾಗಿ—ಪ್ರಣಯಿಗಳಿಬ್ಬರ ಮನವನ್ನೋ, ಮುಖವನ್ನೋ, ಅಂಗವಿನ್ಯಾಸವನ್ನೋ, ಚಲನವನ್ನೋ ಚಿತ್ರಿಸುವಾಗ ಸಾಹಿತಿಯಾದವನು —ನಿಸರ್ಗದ ಬೊಕ್ಕಸದಿಂದಲೇ ಆಯ್ದಂಥ ಸ್ಮರಣ ಸಾದೃಶ್ಯಗಳಿಂದ ಸೂಚಿಸುತ್ತಾನೆ. ಕಾಮಿನಿಯ ನಗುವನ್ನು ಬಿರಿದ ಮಲ್ಲಿಗೆಯ ಜೊಲ್ಲೆಗೊ, ಮುತ್ತಿನ ಸರಕ್ಕೊ ಹೋಲಿಸುತ್ತಾನೆ. ಕರಪಲ್ಲವವಾಗಿಸುತ್ತಾನೆ; ಕಟಿ ಸಿಂಹವಾಗಿಸುತ್ತಾನೆ. ಅವಳ ನಿರಾಶೆಯನ್ನು ಕವಿದ ಕಾರ್ಮುಗಿಲಿಗೆ ಹೋಲಿಸುತ್ತಾನೆ. ಅವಳ ಎದೆಯ ತಳಮಳವನ್ನು ಸಿಡಿಲಿನಬ್ಬರಕ್ಕೆ ಸಮನಿಸುತ್ತಾನೆ. ಪ್ರಣಯಿಯನ್ನು ತಬ್ಬಿಕೊಳ್ಳುವ ಪ್ರೇಯಸಿಯ ತೋಳತೆಕ್ಕೆಯನ್ನು ಮಾಮರವನ್ನು ಅಪ್ಪುವ ಮಲ್ಲಿಕಾಲತೆಯಂತೆಂದು ನೆನವರಿಸುತ್ತಾನೆ. ಇನಿಯನ ಬರವಿಂದ ಉತ್ಸಾಹಗೊಂಡ ಅವಳ ನಡಿಗೆಯನ್ನು ಹರಿಣದ ಲಘು ನಡೆಗೆ ಹೋಲಿಸುತ್ತಾನೆ. ಇವೆಲ್ಲ ನಿಸರ್ಗದಿಂದ ಆಯ್ದುವಲ್ಲವೇ? ಇವು ತಮ್ಮ ಒಂದೊಂದು ಗುಣದಿಂದಾಗಿ ಕಥಾಜೀವಿಗಳ ರೂಪ, ಶೀಲ, ಹಾವ, ಭಾವಗಳಿಗೆ ನಂಟುಳ್ಳವಾಗುತ್ತವೆ.

ಇಷ್ಟಲ್ಲದೆಯೂ ಕಾದಂಬರಿಕಾರ—ತನ್ನ ಕಥಾವಸ್ತುವಿನ ಚಿತ್ರಣಕ್ಕೆ ಸಹಾಯಕನಾಗಿ, ಪೂರಕವಾಗಿ ನಿಸರ್ಗವನ್ನು ಜತೆಗೂಡಿಸಿ ನಿಲ್ಲಿಸಬಹುದು. ಒಂದು ಶೃಂಗಾರದ ಸನ್ನಿವೇಶವನ್ನು ಆತ ಚಿತ್ರಿಸುತ್ತಿದ್ದಾನೆಂದು ತಿಳಿಯಿರಿ. ಅದು ನಿಜಜೀವನದಲ್ಲಿ ನಡೆದಾಗ ಗಿಡಮರವಿಲ್ಲದ ಬರಿಯ ನೆಲದ ಮೇಲೆ ನಡೆದಿರಲೊಲ್ಲದೇಕೆ-ಈತ ಅದನ್ನು ತಕ್ಕ ಆವರಣದಲ್ಲಿ ನಡೆಸುತ್ತಾನೆ. ಗಿಡಮರ, ಹೂ ಹಕ್ಕಿಗಳನ್ನೊ, ಎಳೆಬಿಸಿಲನ್ನೊ, ಮುಂಗುರುಳನ್ನು ತೀಡುವ ಮಂದಮಾರುತವನ್ನೊ ತಂದಿರಿಸಿ ತಕ್ಕ ಹಿನ್ನೆಲೆ, ಆವರಣ ಕಲ್ಪಿಸುತ್ತಾನೆ. ಕಾದಂಬರಿಯ ಘಟನೆಗಳಲ್ಲಿ ಭಾವಗಳ ಉದ್ದೀಪನೆ ಉಂಟಾದಾಗಲೆಲ್ಲ ಈ ರೀತಿ ನಿಸರ್ಗದ ಪೋಷಣೆ ಭಾವರಸಗಳ ಪುಷ್ಟಿಯನ್ನೆ ಸಮರ್ಥಿಸಬಲ್ಲುದು. ಆಗ ಹಿನ್ನೆಲೆಯಲ್ಲಿ—ಬಳುಕಿ ನಿಂತು, ನಕ್ಕು ನಲಿದು ಓಡುವ ನದಿಯೂ ನದಿಯಲ್ಲಿ ಚಲಿಸುವ ವರ್ಣವಿಚಿತ್ರ ಮೀನುಗಳೂ ಮೇಲಿಂದ ಬೀಳುವ ಸೂರ್ಯರಶ್ಮಿಯೂ ಶೃಂಗಾರಕ್ಕೆ ಸೊಗಸು ಕೊಡುವಂತೆಯೇ, ಕೆಲವೊಂದು ಮಾನಸಿಕ ಹೋರಾಟದಿಂದ ನುಚ್ಚುನುರಿಯಾದವನ ಮನಸ್ಸನ್ನು ಚಿತ್ರಿಸುವಾಗ—ಅವನನ್ನೊಂದು ಕಡಲ ದಂಡೆಯ ಬಂಡೆಯ ಮೇಲೆ ಕುಳ್ಳಿರಿಸಬಹುದು. ಹಾಗೆ ಕುಳ್ಳಿರಿಸಿ—ಗಾಳಿ ಬೀಸಿ, ಅಲೆಗಳನ್ನುರುಳಿಸಿ, ನೊರೆತವನ್ನೇಳಿಸಿ, ನೀರನ್ನು ಸೊಕ್ಕಿಸಿ, ಬಂಡೆಗೆ ಅಪ್ಪಳಿಸುವಂತೆ ಮಾಡಿ—ನೀರು ಜೀರ್ಣವಿದೀರ್ಣವಾಗುವಂತೆ ಮಾಡಿ ಅವನ ಹೃದಯವೂ ಹರಿಹಂಚಾಗಿದೆ—ಎಂದು ಆವರಣಮಾತ್ರದಿಂದಲೇ ಸೂಚಿಸಬಹುದು. ಆಗ "ಎದುರಿನ ನೋಟವನ್ನೇ ತಲ್ಲೀನನಾಗಿ ನೋಡುತ್ತಿದ್ದ" ಎಂಬುದರಿಂದಲೇ ಅವನ ಮನಸ್ಸಿನ ಪ್ರತಿಬಿಂಬವೆಲ್ಲ ಸೃಷ್ಟಿಗೊಳ್ಳಲಾರದೇ?

ಹೀಗೆ — ವಾಸವಿಕವಾದ, ಪ್ರಾದೇಶಿಕವಾದ ಹಿನ್ನೆಲೆಗಳನ್ನು ಚಿತ್ರಿಸುವಂತೆ-ಮನಸ್ಸಿಗೆ ಸಮಾನವಾದ ಹಿನ್ನೆಲೆಯನ್ನೆ ನಿಲ್ಲಿಸಿ ಬರೆದ ಚಿತ್ರವನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಮಾಡುವುದಕ್ಕೂ ನಿಸರ್ಗ ಬೆಂಬಲವಾಗಬಲ್ಲದು.

ಆದರೆ ಎಷ್ಟೋ ಬಾರಿ ಕಾದಂಬರಿಕಾರ-ಪೋಷಕ ಗುಣವುಳ್ಳ ನಿಸರ್ಗದ ಯಾವ ಚಿತ್ರವನ್ನು ಬರೆಯದೆಯೆ-ಬರಿಯ ಬೆಟ್ಟವನ್ನೆ, ಬಾನನ್ನೆ, ಉದ್ಯಾನವನ್ನೆ ಬಣ್ಣಿಸಿ, ಅನಂತರ ಅರ್ಥಾತ್ ಸಂಬಂಧವಿಲ್ಲದ ರೀತಿಯಲ್ಲಿ ಹೇಳಿ, ಮುಂದೆ "ಅಲ್ಲಿಗೆ ಆಗ ಆ ರೈತನು ಬಂದು ತನಗಾಗಿ ಕಾದಿದ್ದ ಹೆಂಡತಿಯನ್ನು ಮನೆಗೆ ಕರೆದೊಯ್ದನು" ಎಂದು ಬಿಟ್ಟರೆ—ಎಷ್ಟೋ ಕಾದಂಬರಿಗಳಲ್ಲಿ ನಿಸರ್ಗ ಈ ತೆರನಾಗಿರುವುದೂ ಉಂಟು—ಆ ರೈತನಿಗಾಗಲಿ, ಅವನ ಹೆಂಡತಿಗಾಗಲಿ, ಅವಳ ಕಾದಿರುವಿಕೆಗಾಗಲಿ ಪೋಷಕವಾಗುವ ಗುಣ ಹಿನ್ನೆಲೆಯಲ್ಲಿ ಕಾಣದೆ ಹೋದರೆ, ಅದಕ್ಕೆ ಕಾದಂಬರಿಯಲ್ಲಿ ಸ್ಥಾನವಿಲ್ಲ. ಬಣ್ಣಿಸಿದ ನಿಸರ್ಗ ಚನ್ನಾಗಿಯೇ ಇರಬಹುದು. ಇನ್ನೂ, ಅದು ಪೋಷಕವಾಗುವ ರೀತಿಯಲ್ಲಿದ್ದರೂ-ಮುಂದಿನ ಪಾತ್ರಗಳ ನಡವಳಿಕೆ ಮನೋಧರ್ಮಗಳ ಅಳತೆ, ತೂಕಗಳನ್ನು ಹೊಂದಿಕೊಂಡು ಅದರ ವಿಸ್ತಾರ, ಇಲ್ಲವೆ ಚುಟುಕತನ ಇರುವುದು ಅವಶ್ಯವಿರುತ್ತದೆ.

ನಿಸರ್ಗದ ಬಣ್ಣನೆ ಎಷ್ಟೇ ಚೆಲುವಿನದಿರಲಿ, ಅದಕ್ಕೆ ಕಾದಂಬರಿಯಲ್ಲಿ ಸ್ವತಂತ್ರವಾದ ಚೆಲುವೆಂಬುದಿಲ್ಲ. ಕಾದಂಬರಿಯ ಉದ್ದೇಶವನ್ನು ಸಾಧಿಸುವುದರಲ್ಲಿ, ಅದೆಷ್ಟು ಸಹಾಯಕವಾಗಿದೆ ಎಂಬುದರ ಮೇಲೆ ಆದಕ್ಕೆ ಔಚಿತ್ಯ, ಆದಕ್ಕೆ ಸ್ಥಾನ, ಮನ್ನಣೆಗಳು ದೊರೆಯಬೇಕು.

ಇಂದು ನಮ್ಮೀ ನಾಡು

೧

ಇಂದು ನಮ್ಮೀ ನಾಡು ಜಾತ್ರೆ ಗಜಬಿಜಿ ಕಳೆದು
ಪಡಖಾನೆಯಲಿ ಪಟ್ಟ ಜನದ ಪಾಡು;
ಬುಂಡೆ ತುಂಬಿದೆ ಹೆಂಡ; ಕೆಸರು ತುಂಬಿದೆ ಹೊಂಡ;
ಆರಿ ಕರಕುತ್ತಲಿದೆ ಕೆಂಪು ಕೆಂಡ.

೨

ತೇರ ಹಿಡಿದೆಳೆದ ಕೈ, ಬಾಗಿ ಪೊಡಮಟ್ಟ ಮೈ,
ಭಕ್ತಿ ತುಳುಕಾಡಿದ್ದ ಅಂತರಂಗ
ಈಗ ನರಕಕ್ಕೆ ಕೈಮರ, ಕರಡಿಗುಹೆ, ಘೋರ
ರಾಕ್ಷಸತೆ ಮೊರೆವ ಪಾತಾಳಕುಹರ.

೩

ಬೀದಿ ಬೀದಿಯ ಸುತ್ತಿ ಬಂದು ಹೂವಿನ ತೇರು
ಹೇಮಂತದಶ್ವತ್ಥದಂತೆ ನಿಂತು-
ಗುಡಿಯ ಮುಂಗಡೆ ಶೂನ್ಯಮನಕೆ, ಹೃದಯಕೆ, ನೆಟ್ಟ
ಕಂಕಾಲದ ಪತಾಕೆ—ಸುಯ್ಯುತಿಹುದು.

೪

ಉತ್ಸವದ ಮೂರ್ತಿ ರಥವಿಳಿದು ದೇವಾಲಯದ
ಮೂಲೆಕತ್ತಲಿನಲ್ಲಿ ಮುಗ್ಗುತಿಹುದು;
ಬಾವಲಿಯ ಹಿಕ್ಕೆಗಾಗಿದೆ ಕುಕ್ಕೆ; ಇನ್ನೆಂದು
ಜಾತ್ರೆ? ನಿಟ್ಟುಸಿರನ್ನು ಸೂಸುತಿಹುದು.

೫

ಮೂಲವಿಗ್ರಹ ಮಾತ್ರ ಅಚಲ; ಕಲ್ಲಿನ ಘೋರ
ವೈರಾಗ್ಯವನು ಹಲ್ಲಿ ಲೊಚಗುಟ್ಟಿತು;
ಬಾವಲಿಯ ಕೀಚು ನಿರ್ಮಾಲ್ಯದುರ್ಗಂಧಕ್ಕೆ
ನಾಲಗೆಯನಿತ್ತು ಪಡಿನುಡಿಗೊಟ್ಟಿತು.

೬

ಜಾತ್ರೆ ಬರುವುದು; ಜಾತ್ರೆ ಕಳೆವುದಕಟಾ! ತೇರು
ಅರಳುವುದು, ಮತ್ತೆ ಬೋಳಾಗುತಿಹುದು;
ನರರ ಕಂಠದಿ ಬಾನ ಘಂಟೆ ಬಾರಿಸುತೊಮ್ಮೆ
ಬಳಿಕ ನಾರಿಯ ಢೋಲು ಬೊಬ್ಬಿರಿವುದು.

೭

ಮೂಲವಿಗ್ರಹವೆ ಉತ್ಸವಮೂರ್ತಿಯಾಗಿ ಹೊರ
ವಂಟು ರಥದಲಿ ಸದಾ ಸೊಗಸುವನಕ,
ದಿನದಿನವು ಜಾತ್ರೆಯುತ್ಸಾಹ ಮೊರೆಯುವ ತನಕ,
ತೊಲಗುವುದೆ ಹೇಳು, ಆ ಮೃತ್ಯುಪಥಕ?

—ಗೋಪಾಲಕೃಷ್ಣ ಅಡಿಗ

ಶ್ರೀ. ಜ. ನಾ. ಕನಮುಲಾಪೂರ,
ಬಿ. ಎಸ್‌ಸಿ. ಅವರಿಂದ

ಚಾಲುಕ್ಯ ಶಿಲ್ಪ: ಬೆಳವಣಿಗೆ ಮತ್ತು ರೂಪರೇಷೆಗಳು

ಧರ್ಮ, ತತ್ವಜ್ಞಾನಗಳಲ್ಲಿ ಹೇಗೋ ಶಿಲ್ಪಕಲೆಯಲ್ಲಿಯೂ ಕರ್ನಾಟಕವು ಉತ್ತರ - ದಕ್ಷಿಣಗಳ ಮಧುರ ಸಮ್ಮಿಲನವನ್ನು ಸಾಧಿಸಿದೆ. ಚಾಲುಕ್ಯರ ಶಿಲ್ಪದ ಬೆಳವಣಿಗೆಯ ಕತೆ ಅಪೂರ್ವವಾದ ಕಲಾಭಿವೃದ್ಧಿಯ ಇತಿಹಾಸವಾಗಿದೆ. ಕರ್ನಾಟಕದ ಶಿಲ್ಪಿಗಳ ಕುಸುರುಗೆಲಸವು ವಿದೇಶೀಯರನ್ನು ಬೊಟ್ಟು ಕಚ್ಚಿಸಿದೆ. ಚಿನ್ನದಲ್ಲಿ ಮಾಡಲಾರದ ಕೆಲಸವನ್ನು ಕಲ್ಲಿನಲ್ಲಿ ಮಾಡಿದ ಅವರ ಕೌಶಲವು ನಮಗೆ ಹೆಮ್ಮೆಯ ಮಾತಾಗಿದೆ.

ಪ್ರಾಯಶಃ ಕರ್ನಾಟಕದಲ್ಲಿ ಕಂಡುಬರುವಷ್ಟು ಶಿಲ್ಪಕಲಾವೈವಿಧ್ಯ ಭಾರತದಲ್ಲಿ ಮತ್ತೆ ಲ್ಲಿಯೂ ಕಂಡುಬರುವದಿಲ್ಲ. ಇದಕ್ಕೆ ಕಾರಣವೂ ಇಲ್ಲದಿಲ್ಲ. ಕರ್ನಾಟಕದಲ್ಲಿ ಹಿಂದೂ ಹಾಗೂ ಮುಹಮ್ಮದೀಯ ಎರಡೂ ಧರ್ಮದ ರಾಜಮನೆತನಗಳೂ ಆಳಿದುದುಂಟು; ಆದ್ದರಿಂದ ಹಿಂದೂ ಹಾಗೂ ಮುಹಮ್ಮದೀಯ ಎರಡೂ ರೀತಿಯ ಶಿಲ್ಪಕಲೆಗಳೂ ಇಲ್ಲಿ ಕಂಡುಬರುತ್ತವೆ. ಹಾಗೆಯೇ ಕರ್ನಾಟಕವು ಆರ್ಯಾವರ್ತಕ್ಕೂ ದಕ್ಷಿಣ ಭಾರತಕ್ಕೂ ಮಧ್ಯದಲ್ಲಿದೆ. ಅಲ್ಲದೆ ಕರ್ನಾಟಕದ ಇತಿಹಾಸದಲ್ಲೆಲ್ಲ ಅದು ಈ ಎರಡೂ ಭಾಗಗಳೊಂದಿಗೆ ಎಲ್ಲ ಬಗೆಯ ಸಂಪರ್ಕಸಂಬಂಧಗಳನ್ನಿಟ್ಟುಕೊಂಡಿದೆ; ಈ ಕಾರಣದಿಂದ ಇಲ್ಲಿ ಔತ್ತರೇಯ ಹಾಗೂ ದಾಕ್ಷಿಣಾತ್ಯ ಎರಡೂ ಶಿಲ್ಪಶೈಲಿಗಳು ಕಂಡುಬರುವವು. ಇವಲ್ಲದೆ, ಇವೆರಡು ರೀತಿಗಳ ಸುಸಂಗಮದ ಪರಿಣಾಮವಾದ ಚಾಲುಕ್ಯ ಶಿಲ್ಪಕ್ಕೆ ಕರ್ನಾಟಕ ತವರುಮನೆಯಾಗಿದೆ; ಚಾಲುಕ್ಯಶಿಲ್ಪದ ಬೆಳವಣಿಗೆಯೇ ಆದ ಹೊಯ್ಸಳ ಶಿಲ್ಪಕ್ಕೆ ಮೈಸೂರು ಸಂಸ್ಥಾನ ಆಶ್ರಯಸ್ಥಾನವಾಗಿದೆ. ಇಷ್ಟೆಲ್ಲ ಸಾಲದೆಂಬಂತೆ, ಐಹೊಳೆ ಬಾದಾಮಿಗಳಲ್ಲಿ ಕಲ್ಲಿನಲ್ಲಿ ಕೊರೆದ ಗುಹಾಂತರ್ದೇವಾಲಯಗಳೂ ಅಲ್ಲದೆ ಇನ್ನೂ ವಿಶಿಷ್ಟವಾಗಿ ಕೆಲವು ಅರ್ಧ ಕೊರೆಯಲ್ಪಟ್ಟ ಹಾಗೂ ಅರ್ಧ ಕಟ್ಟಲ್ಪಟ್ಟ ದೇವಾಲಯಗಳೂ ನೋಡಸಿಗುವದುಂಟು.

ಇವೆಲ್ಲವುಗಳಲ್ಲಿ ಕರ್ನಾಟಕದ ಸ್ವಂತದ ಅಥವಾ ಕರ್ನಾಟಕದ ವೈಶಿಷ್ಟ್ಯವೆನಿಸಬಹುದಾದ ಶಿಲ್ಪವೆಂದರೆ ಚಾಲುಕ್ಯಶಿಲ್ಪ. ಚಾಲುಕ್ಯಶಿಲ್ಪ ಇಂಥದೇ ಎಂದು ಹೇಳುವದು ಅಶಕ್ಯವಲ್ಲದಿದ್ದರೂ ಸ್ವಲ್ಪ ಕಷ್ಟಸಾಧ್ಯವಾದ ಮಾತು. ಶಿಲ್ಪಶೈಲಿಗಳನ್ನು ಬೇರೆ ಬೇರೆ ವಿದ್ವಾಂಸರು ಬೇರೆ ಬೇರೆ ರೀತಿಯಾಗಿ ವ್ಯಾಖ್ಯಾಯಿಸಿದ್ದಾರೆ. ಸದ್ಯಕ್ಕೆ, ಅನವಶ್ಯಕವಾದ ವಿವರಗಳನ್ನು ಬಿಟ್ಟರೆ, ಇಷ್ಟನ್ನು ಹೇಳಬಹುದು: ಚಾಲುಕ್ಯಶಿಲ್ಪವೆಂದರೆ ಕೇವಲ ಚಾಲುಕ್ಯ ಮನೆತನದ ರಾಜರುಗಳಿಂದ ಕಟ್ಟಸಲ್ಪಟ್ಟ ದೇವಾಲಯಗಳು ಎಂದರ್ಥ ಮಾಡಿಕೊಳ್ಳಬಾರದು. ಈ ರೀತಿಯ ಶಿಲ್ಪದಲ್ಲಿ ಚಾಲುಕ್ಯರ ಕಾಲದಲ್ಲಿ ಅವರ ಹಾಗೂ ಅವರ ಸಾಮಂತರಾಜರ, ಮಾಂಡಲಿಕರ, ಪಾಳೆಯಗಾರರ ಆಳಿಕೆಯಲ್ಲಿದ್ದ ಭಾಗಗಳಲ್ಲಿ ನಿರ್ಮಿತವಾದ ಎಲ್ಲ ದೇವಾಲಯಗಳ ಸಮಾವೇಶವಾಗುವದು. ಚಾಲುಕ್ಯರ ಆಳಿಕೆಯ ಕಾಲವನ್ನು ಎರಡು ಭಾಗವಾಗಿ ವಿಂಗಡಿಸಬಹುದು. ಮೊದಲನೆಯದು ಬಾದಾಮಿಯ ಚಾಳುಕ್ಯರದು–ಜಯಸಿಂಹನಿಂದ ಪ್ರಾರಂಭವಾಗಿ ೨ನೆಯ ಕೀರ್ತಿವರ್ಮನ ವರೆಗೆ–ಎಂದರೆ ಸುಮಾರು ಕ್ರಿ. ಶ. ೫೦೦ ರಿಂದ ೭೬೦ ರ ವರೆಗೆ; ೨ನೆಯದು ಕಲ್ಯಾಣದ ಚಾಳುಕ್ಯರದು–೨ನೇ ತೈಲಪನಿಂದ ೩ನೇ ತೈಲಪನ ವರೆಗೆ–ಎಂದರೆ ಸುಮಾರು ಕ್ರಿ. ಶ. ೯೭೦ ರಿಂದ ೧೧೭೦ ರ ವರೆಗೆ; ಒಟ್ಟನಲ್ಲಿ ಸುಮಾರು ೫೦೦ ವರ್ಷಗಳ ಕಾಲ. ಈ ದೇವಾಲಯಗಳ ನಿರ್ಮಾಣದ ಕಾಲವು ದೀರ್ಘವಾಗಿರುವಂತೆ ಅವು ಕಂಡುಬರುವ ಕ್ಷೇತ್ರವಾದರೂ ಸಾಕಷ್ಟು ವಿಸ್ತಾರವಾದುದಾಗಿದೆ. ಚಾಲುಕ್ಯಶಿಲ್ಪದ ಹುಟ್ಟು ಐಹೊಳೆಯಲ್ಲಿ ಆಯಿತೆನ್ನಬಹುದು. ಉತ್ತರದಿಂದ ಬಂದೆವೆಂದು ಹೇಳಿಕೊಳ್ಳುವ ಚಾಲುಕ್ಯರು ಮೊದಲು ನೆಲೆಸಿದುದು ಐಹೊಳೆಯಲ್ಲಿಯೇ. ಸುಮಾರು ಕ್ರಿ. ಶ. ೫೦೦ ರಿಂದ ೫೫೦ರ ವರೆಗೆ-ಎಂದರೆ ೧ನೇ ಪುಲಿಕೇಶಿಯು ಐಹೊಳೆಯನ್ನು ಬಿಟ್ಟು ವಾತಾಪಿಪುರ (ಬಾದಾಮಿ)ವನ್ನು ರಾಜಧಾನಿಯನ್ನಾಗಿ ಮಾಡಿಕೊಳ್ಳುವ ವರೆಗೆ–ಐಹೊಳೆಯೇ ಚಾಲುಕ್ಯರ ರಾಜಧಾನಿಯಾಗಿತ್ತು. ಇದರ ಕುರುಹುಗಳು ಆ ಪುರಾತನ ಗ್ರಾಮದಲ್ಲಿ ಇಂದಿಗೂ ಕಂಡುಬರುವವು. ಮೊದಲಿನ ಕಾಲದ ದೇವಾಲಯಗಳು ಹೆಚ್ಚಾಗಿ ಕಂಡುಬರುವದು ಐಹೊಳೆ, ಪಟ್ಟದಕಲ್ಲುಗಳಲ್ಲಿ ಮಾತ್ರ. ಆದರೆ ಎರಡನೆಯ ಕಾಲದಲ್ಲಿ ಮಾತ್ರ ಅವು ನಾಲ್ಕೂ ದಿಕ್ಕಿನಲ್ಲಿ ಬಹುದೂರದ ವರೆಗೆ ಪಸರಿಸಿದವು. ಇವು ಮುಖ್ಯವಾಗಿ ಕಂಡುಬರುವದು ಧಾರವಾಡ ಜಿಲ್ಹೆಯಲ್ಲಿ–ಇಲ್ಲಿ ಬಹುಶಃ ಪ್ರತಿಯೊಂದು ಗ್ರಾಮದಲ್ಲಿಯೂ ಈ ರೀತಿಯ ಉದಾಹರಣೆಗಳನ್ನು ಕಾಣಬಹುದಾಗಿದೆ. ಈ ಶೈಲಿಯ ಉತ್ತರದ ತುದಿ ನೈಜಾಂ ರಾಜ್ಯದಲ್ಲಿ ಕಲ್ಯಾಣ; ಹಾಗೂ ಬೊಂಬಾಯಿ ರಾಜ್ಯದಲ್ಲಿ ಬೆಳಗಾಂವಿ, ವಿಜಾಪೂರ ಜಿಲ್ಹೆಗಳ ಮಧ್ಯಭಾಗ; ದಕ್ಷಿಣದ ತುದಿ ಮೈಸೂರ ಸಂಸ್ಥಾನದ ಉತ್ತರದ ಗಡಿ; ಪೂರ್ವಕ್ಕೆ ತುಂಗಭದ್ರೆಯೇ ತುದಿಯಾದರೂ ಅದರಾಚೆಗೆ ಬಳ್ಳಾರಿ ಜಿಲ್ಹೆಯಲ್ಲಿ ಕೆಲವು ದೇವಾಲಯಗಳುಂಟು; ಹಾಗೆಯೇ ಪಶ್ಚಿಮಕ್ಕೆ

ಸಹ್ಯಾದ್ರಿಯೇ ಗಡಿಯಾದರೂ ಅದನ್ನು ದಾಟಿ ಕೊಂಕಣದಲ್ಲಿಯೂ ಅಲ್ಲೊಂದಿಲ್ಲೊಂದು ಉದಾಹರಣೆಗಳು ಸಿಕ್ಕುವದುಂಟು.

ಅನೇಕ ಶಿಲ್ಪಕಲಾವಿದರ ಹಾಗೂ ವಿದ್ವಾಂಸರ ಮತದಂತೆ ಔತ್ತರೇಯ (ಆರ್ಯ ಅಥವಾ ವೈಷ್ಣವ) ಹಾಗೂ ದಾಕ್ಷಿಣಾತ್ಯ (ದ್ರಾವಿಡ ಅಥವಾ ಶೈವ) ಶಿಲ್ಪಶೈಲಿಗಳ ಸುಂದರ ಸಮನ್ವಯದ ಪರಿಣಾಮವೇ ಚಾಲುಕ್ಯಶಿಲ್ಪ. ಚಾಲುಕ್ಯಶಿಲ್ಪಿಗರು ಆರ್ಯ, ದ್ರಾವಿಡ ಎರಡೂ ರೀತಿಗಳಿಂದಲೂ ತಮಗೆ ಬೇಕಾದ ವೈಶಿಷ್ಟ್ಯಗಳನ್ನು ಆಯ್ದುಕೊಂಡು, ಬೇರೆ ಕೆಲವು ಕಲ್ಪನೆಗಳೊಡನೆ ಅವುಗಳನ್ನು ಸೇರಿಸಿ, ತಮ್ಮದೇ ಆದ ಶಿಲ್ಪಶೈಲಿಯನ್ನು ಸ್ಥಾಪಿಸಿದರು. ಈ ಮಾತು ಸ್ಪಷ್ಟವಾಗಬೇಕಾದರೆ, ಈ ಕೆಳಗಿನ ಕೆಲವು ವಿವರಗಳನ್ನು ಅಭ್ಯಸಿಸಬಹುದು.

ಮೊದಲನೆಯದಾಗಿ, ದ್ರಾವಿಡ ಗೋಪುರದ ಮುಖ್ಯ ಲಕ್ಷಣವೆಂದರೆ, ಅಡ್ಡಮಾಟದ ಅಂತಸ್ತುಗಳಿರುವದು; ಇದಕ್ಕೆ ವಿರುದ್ಧವಾಗಿ ಔತ್ತರೇಯ ಶಿಖರದ ವೈಶಿಷ್ಟ್ಯವೆಂದರೆ, ಉದ್ದಮಾಟದ ಸ್ತೂಪಾಕಾರದ ಒಂದೇ ಒಂದು ಗೋಪುರವಿದ್ದು, ತೀರ ಸಾಮಾನ್ಯತೆಯನ್ನು ಹೋಗಲಾಡಿಸುವದಕ್ಕಾಗಿ ಮುಖ್ಯ ಗೋಪುರದ ಸುತ್ತಲೂ ಅಥವಾ ನಾಲ್ಕು ಮೂಲೆಗಳಲ್ಲಿ ಅದೇ ರೀತಿಯ ಆದರೆ ಚಿಕ್ಕವಾದ ಉಪಗೋಪುರಗಳಿರುವದು. ಚಾಲುಕ್ಯ ರೀತಿಯಲ್ಲಿ ಈ ಎರಡೂ ವೈಶಿಷ್ಟ್ಯಗಳು ಕಂಡುಬರುತ್ತವೆ. ಮೊದಮೊದಲಿನ ದೇವಾಲಯಗಳಲ್ಲಿ ಈ ಎರಡು ರೀತಿಗಳ ಮಿಶ್ರಣವು ಸ್ಪಷ್ಟವಾಗಿ ಕಂಡುಬಂದರೂ ನಂತರದ ಉದಾಹರಣೆಗಳಲ್ಲಿ ಈ ಸ್ಪಷ್ಟತೆಯು ಕಡಿಮೆಯಾಗುತ್ತ ಹೋಗಿ, ಕೊನೆಕೊನೆಯ ದೇವಾಲಯಗಳಲ್ಲಿ ಮೂಲದ ಕಲ್ಪನೆಯು ಕೂಡ ಬಾರದಷ್ಟು ಬದಲಾವಣೆಯಾಗಿದೆ. ಚಾಲುಕ್ಯಶಿಲ್ಪಿಗಳು ದ್ರಾವಿಡ ರೀತಿಯಲ್ಲಿಯ ಅಂತಸ್ತುಗಳ ಕಲ್ಪನೆಯನ್ನು ಇಟ್ಟುಕೊಂಡರು; ಆದರೆ ಅವರು ಪ್ರತಿ ಅಂತಸ್ತಿನ ಎತ್ತರವನ್ನು ಕಡಿಮೆಮಾಡಿ, ಅವುಗಳ ಸಂಖ್ಯೆಯನ್ನು ಹೆಚ್ಚು ಮಾಡಿದರು. ಅಲ್ಲದೆ ಪ್ರತಿಯೊಂದು ಅಂತಸ್ತನ್ನೂ ಅಲಂಕಾರದಿಂದ ತುಂಬಿ ತುಳುಕುವಂತೆ ಮಾಡಿ, ಈ ಅಲಂಕಾರಕ್ಕಾಗಿ ಔತ್ತರೇಯ ತರಹದ ಗೋಪುರಗಳನ್ನು, ಮಾಡಗಳನ್ನು ಉಪಯೋಗಿಸಿದರು.

ಎರಡನೆಯದಾಗಿ, ದಾಕ್ಷಿಣಾತ್ಯ ದೇವಾಲಯಗಳು ಕ್ಷೇತ್ರದಲ್ಲಿ ಅತ್ಯಂತ ವಿಶಾಲವಾದುವು. ಇವಕ್ಕೆ ಹೋಲಿಸಿದರೆ ಔತ್ತರೇಯ ದೇವಸ್ಥಾನಗಳು ತೀರ ಚಿಕ್ಕವು. ಆದರೆ ಚಾಲುಕ್ಯ ದೇವಾಲಯವು ಮಧ್ಯಮ ತರಗತಿಯದು. ಅಲ್ಲದೆ, ದ್ರಾವಿಡ ರೀತಿಯಲ್ಲಿ, ಮುಖ್ಯದೇವಾಲಯವಲ್ಲದೆ, ಅದರ ಸುತ್ತಲೂ ಇತರ ಅನೇಕ ಉಪದೇವಾಲಯಗಳು, ಕೆಲವೆಡೆಗಳಲ್ಲಿ ಒಂದಕ್ಕಿಂತ ಹೆಚ್ಚು ಗರ್ಭಗುಡಿಗಳು, ಸುತ್ತಲೂ ಒಂದೋ, ಒಂದಕ್ಕಿಂತ ಹೆಚ್ಚೋ ಪ್ರಾಕಾರಗಳು, ಪ್ರಾಕಾರದ ಗುಂಟ ಪೌಳಿಗಳು, ಅವುಗಳಲ್ಲಿ ಪುನಃ ಚಿಕ್ಕ ಚಿಕ್ಕ ಗುಡಿಗಳು-ಹೀಗಾಗಿ ಅದೊಂದು ದೇವಾಲಯಗಳ ಗುಂಪೇ ಆಗಿರುತ್ತದೆ. ಇದಕ್ಕೆ ವಿರುದ್ಧವಾಗಿ-ಪಂಚಾಯತನವೆಂದು ಕರೆಯಲ್ಪಡುವ ಕೆಲವು ಉದಾಹರಣೆಗಳನ್ನು ಬಿಟ್ಟರೆ ಔತ್ತರೇಯ ರೀತಿಯಲ್ಲಿ ನಾವು ಕಾಣುವದು ಏಕಾಕಿಯಾದ ದೇವಾಲಯಗಳನ್ನು. ಈ ವಿಷಯದಲ್ಲಿಯೂ ಚಾಲುಕ್ಯ ರೀತಿಯು ಮಧ್ಯಮಾರ್ಗಾವಲಂಬಿಯಾಗಿದ್ದರೂ ಅದರ ಒಲವು ಹೆಚ್ಚಾಗಿ ದ್ರಾವಿಡ ರೀತಿಯ ಕಡೆಗಿದೆಯೆಂದು ಹೇಳಬಹುದು.

ಈ ರೀತಿಯಾಗಿ ಆರ್ಯ, ದ್ರಾವಿಡ ಸಂಸ್ಕೃತಿಗಳ ಸಂಘರ್ಷದ, ನಾಗರಿಕತೆಗಳ ಮಿಲನದ ಭೂಮಿಯಾದ ಕರ್ನಾಟಕವು ಔತ್ತರೇಯ, ದಾಕ್ಷಿಣಾತ್ಯ ಶಿಲ್ಪಕಲೆಗಳ ಪವಿತ್ರ ಸಂಗಮದ ಭೂಮಿಯೂ ಆಗಿದೆ. ಈ ಎರಡೂ ರೀತಿಗಳು ಒಂದನ್ನೊಂದು ಸಂಧಿಸಿದುದು, ಎದುರುಗೊಂಡುದು ಸ್ಪಷ್ಟವಾಗಿ ಕಂಡುಬರುವದು ಒಂದು ಕಾಲಕ್ಕೆ ಚಾಲುಕ್ಯ ರಾಜರ ಉಪರಾಜಧಾನಿಯಾದ ಪಟ್ಟದಕಲ್ಲಿನಲ್ಲಿ. ಅಲ್ಲಿ ಈ ಎರಡೂ ರೀತಿಗಳ ದೇವಾಲಯಗಳೂ ಅವುಗಳ ಸಂಗಮದ ಉದಾಹರಣೆಗಳೂ ಕಂಡುಬರುವವಲ್ಲದೆ, ಅಲ್ಲಿಯ ವಿರೂಪಾಕ್ಷ ದೇವಾಲಯದ ನವರಂಗದ ಕಂಬಗಳಲ್ಲಿ ಕೆತ್ತಲ್ಪಟ್ಟ ಸ್ತ್ರೀವಿಗ್ರಹಗಳು ಸೀರೆಯುಟ್ಟ ರೀತಿಗಳಲ್ಲಿ ತಮಿಳುನಾಡಿನ ರೀತಿ, ಹಾಗೂ ಗುಜರಾತಿನ ರೀತಿ ಎರಡೂ ಕಂಡುಬರುತ್ತವೆ.

ಮೇಲೆ ಹೇಳಿದಂತೆ ಚಾಲುಕ್ಯರ ಆಳಿಕೆಯಲ್ಲಿ ೨ ಭಾಗಗಳು : ಮೊದಲನೆಯದು ಬಾದಾಮಿ ಚಾಲುಕ್ಯರದು, ೨ನೆಯದು ಕಲ್ಯಾಣದ ಚಾಲುಕ್ಯರದು. ಮೊದಲನೆಯ ಕಾಲದ ದೇವಾಲಯಗಳು ಐಹೊಳೆ (ಸುಮಾರು ೫೦-೬೦ ಚಿಕ್ಕ ದೊಡ್ಡ ದೇವಸ್ಥಾನಗಳು), ಪಟ್ಟದಕಲ್ಲು (೯-೧೦ ಹಿಂದೂ, ೧ ಜೈನ), ಬದಾಮಿ (ಮಾಲಗತ್ತಿ ಶಿವಾಲಯ, ಭೂತನಾಥ ದೇವಾಲಯಗಳ ಗುಂಪು), ಮಹಾಕೂಟೇಶ್ವರ ಮತ್ತು ಕುಕನೂರು (ನವಲಿಂಗ, ಕಲ್ಲೇಶ್ವರ ದೇವಸ್ಥಾನಗಳು) ಈ ಸ್ಥಳಗಳಲ್ಲಿ ಮಾತ್ರ ಕಂಡುಬರುತ್ತವೆ. ಎರಡನೆಯ ಕಾಲದ ದೇವಾಲಯಗಳು ಪಸರಿಸಿದ ಕ್ಷೇತ್ರ ವಿಶಾಲವಾದುದು; ಆದರೂ ಅವುಗಳಲ್ಲಿ ಮುಖ್ಯವಾದುದು: ಲಕ್ಕುಂಡಿ (ಜೈನ, ಕಾಶೀ ವಿಶ್ವೇಶ್ವರ, ನನ್ನೇಶ್ವರ), ಹಾವೇರಿ (ಸಿದ್ಧೇಶ್ವರ), ನೀರಲಗಿ (ಸಿದ್ಧರಾಮೇಶ್ವರ), ಗಳಗನಾಥ (ಗಳಗೇಶ್ವರ), ಹಾನಗಲ್ಲು (ತಾರಕೇಶ್ವರ, ಗಣಪತಿ), ಬಂಕಾಪುರ (ಅರವತ್ತು ಕಂಬದ ಗುಡಿ), ಕುಂದಗೋಳ (ಶಂಭುಲಿಂಗ), ಲಕ್ಷ್ಮೇಶ್ವರ (ಈಶ್ವರ), ತಿಳವಳ್ಳಿ (ಶಾಂತೇಶ್ವರ), ಅನವಟ್ಟಿ (ಕೈಥಬೇಶ್ವರ), ಇಟಗಿ (ಮಹಾದೇವ), ಕುರುವತ್ತಿ (ಮಲ್ಲಿಕಾರ್ಜುನ), ಗದುಗು (ತ್ರಿಕೂಟೇಶ್ವರ), ಡಂಬಳ (ದೊಡ್ಡಬಸಪ್ಪ), ಉಣಕಲ್ಲ (ಚಂದ್ರಮೌಳೀಶ್ವರ), ಬಾಳಂಬೀಡ (ಕಲ್ಲೇಶ್ವರ) ಮುಂತಾದವು.

ಮೊದಲಿನ ಕಾಲದಲ್ಲಿ ಪ್ರಾಸಾದನಿರ್ಮಾಣದ ವಿದ್ಯೆಯು ಇನ್ನೂ ಶೈಶವಾವಸ್ಥೆಯಲ್ಲಿತ್ತು. ಈ ಕಾಲದ ದೇವಾಲಯಗಳು-ಪಟ್ಟದಕಲ್ಲಿನ ವಿರೂಪಾಕ್ಷ, ಪಾಪನಾಥ ದೇವಾಲಯಗಳು, ಐಹೊಳೆಯ ದುರ್ಗದ ಗುಡಿ ಇವನ್ನು ಬಿಟ್ಟರೆ-ಸಾಮಾನ್ಯ ತರಹದವಾಗಿದ್ದವು. ಆದರೆ ಎರಡನೆಯ ಕಾಲದ ಹೊತ್ತಿಗೆ ಈ ಕಲೆಯು ಸಾಕಷ್ಟು ಅಭಿವೃದ್ಧಿ ಹೊಂದಿತ್ತು; ಈ ಕಾಲದಲ್ಲಿಯ ದೇವಾಲಯಗಳು ರಚನೆಯಲ್ಲಿ ಹೆಚ್ಚು ಜಟಿಲವಾಗಿವೆಯಲ್ಲದೆ, ಒಂದೊಂದೂ ಅಲಂಕಾರಗಳಿಂದ ತುಂಬಿ ತುಳುಕುತ್ತಿವೆ. ಕೆಲವು ಉದಾಹರಣೆಗಳಲ್ಲಿಯಂತೂ ಅಲಂಕಾರ ಎಷ್ಟೊಂದು ಅತಿಯಾಗಿದೆಯೆಂದರೆ, ಅವುಗಳಲ್ಲಿ ಅಲಂಕಾರವಿಲ್ಲದ ಒಂದು ಚೌರಸ ಅಡಿಯಷ್ಟು ಭಾಗವನ್ನು ಹುಡುಕುವದೂ ಕಠಿಣವಾಗುತ್ತದೆ. ಈ ತರಹದ ಅಲಂಕಾರದ ಅತಿಶಯತೆಯನ್ನು ಕಂಡು ಒಬ್ಬ ಪಾಶ್ಚಾತ್ಯ ಶಿಲ್ಪಶಾಸ್ತ್ರಜ್ಞ ಅನ್ನುತ್ತಾನೆ: In the more ornate examples, the amount of ornamental detail crowded over the surface of one temple would suffice for 2 or more if sparingly and judiciously applied. (ಹೆಚ್ಚು ಅಲಂಕಾರಮಯ ಉದಾಹರಣೆಗಳಲ್ಲಿ, ಒಂದೇ ದೇವಸ್ಥಾನದಲ್ಲಿ ಕಿಕ್ಕಿರಿಸಲ್ಪಟ್ಟಿರುವ ಸೂಕ್ಷ್ಮಕೆತ್ತನೆಗಳು ಸ್ವಲ್ಪ ಹಿಡಿತದಿಂದ ಉಪಯೋಗಿಸಿದ್ದರೆ ಎರಡು ಅಥವಾ ಅದಕ್ಕೂ ಹೆಚ್ಚು ದೇವಸ್ಥಾನಗಳಿಗೆ ಸಾಲುವಂತಿವೆ). ಇದಲ್ಲದೆ ಈ ಎರಡನೆಯ ಕಾಲದಲ್ಲಿ ಕೆಲಸದಲ್ಲಿ ಸೂಕ್ಷ್ಮತೆಯೂ ಹೆಚ್ಚಾಯಿತು. ಇದಕ್ಕೆ ಮುಖ್ಯ ಕಾರಣವೆಂದರೆ, ಈ ಕಾಲದಲ್ಲಿ ಕೆತ್ತನೆಯ ಕೆಲಸಕ್ಕಾಗಿ ಉಪಯೋಗಿಸುತ್ತಿದ್ದ ಶಿಲೆಯಲ್ಲಿಯ ಬದಲಾವಣೆ. ಮೊದಲು ಉಪಯೋಗದಲ್ಲಿದ್ದುದು ಕೆಂಪು ಬಣ್ಣದ ಉಸುಕು ಕಲ್ಲು (Sand-stone). ನಂತರ ಬಳಕೆಯಲ್ಲಿ ಬಂದುದು ಹಸುರು ಅಥವಾ ನೀಲಿಮಿಶ್ರಿತ, ನಯವಾದ, ನುಣುಪಾದ, ಆದರೂ ಗಟ್ಟಿಯಾದ ಬಳಪದ ಕಲ್ಲು (Hornblende). ಉಸುಕು-ಕಲ್ಲಿನಲ್ಲಿ ಸೂಕ್ಷ್ಮಕೆಲಸ ಸಾಧ್ಯವಿರಲಿಲ್ಲ; ಆದ್ದರಿಂದ ಆಗಿನ ದೇವಾಲಯಗಳಲ್ಲಿ ಪ್ರತಿಯೊಂದರಲ್ಲಿ ನಾವು ಕಾಣುವದು ಭವ್ಯತೆಯನ್ನು ಮಾತ್ರ. ಅಲ್ಲದೆ, ಈ ಉಸುಕು-ಕಲ್ಲು ತೀವ್ರ ಸ್ವರೂಪದ ಮಳೆಗಾಳಿಗಳ ಹೊಡೆತವನ್ನು ಸಹಿಸುತ್ತಿರಲಿಲ್ಲ; ಅದ್ದರಿಂದಲೇ ಈ ದೇವಾಲಯಗಳ ಎಷ್ಟೋ ಭಾಗಗಳು ಇಂದು ಸವೆದು, ಮುರಿದು, ಬಿದ್ದುಹೋಗಿವೆ. ಆದರೆ ಎರಡನೆಯ ಕಾಲದ ಬಳಪದ ಕಲ್ಲು ಮಾತ್ರ ಕೆತ್ತನೆಯ ಕೆಲಸಕ್ಕೇ ಹೇಳಿ ಮಾಡಿಸಿದಂತಿದೆ. ಇದರಲ್ಲಿ ಎಂತಹ ಸೂಕ್ಷ್ಮ ನಕ್ಷೆಗಳನ್ನೂ ಬಿಡಿಸಬಹುದು. ಈ ಕಾಲದ ಶಿಲ್ಪಿಗಳ ಅಮೋಘವಾದ

ಅಮರಕಲಾಕೃತಿಗಳಿಗೆ ಈ ಕಲ್ಲೂ ಬಹುಮಟ್ಟಿಗೆ ಕಾರಣವಾಗಿತ್ತೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಈ ವಿಷಯದಲ್ಲಿ ಕರ್ನಲ್ ಮೆಡೋಸ್ ಟೇಲರರು (Colonel Meadows Taylor) ಹೇಳುವದನ್ನು ಕೇಳಿ: No chased work in gold or silver could possibiy be finer and the patterns to this day are copied by goldsmiths, who take casts and moulds from them, but fail in representing the sharpnèss and finish of the original. (ಚಿನ್ನ-ಬೆಳ್ಳಿಗಳಲ್ಲಿನ ಚಿತ್ತಾರದ ಕೆಲಸ ಕೂಡ ಇದಕ್ಕಿಂತ ಸೂಕ್ಷ್ಮವಾಗಿರುವದು ಸಾಧ್ಯವಿಲ್ಲ. ಚಿನಿವಾರರು ಇದರ ಅಚ್ಚುಗಳನ್ನು ತೆಗೆದುಕೊಂಡು ಹೋಗಿ ನಕಲು ತೆಗೆಯಲು ಪ್ರಯತ್ನಿಸುತ್ತಾರೆ. ಆದರೆ ಇದರಲ್ಲಿಯ ಸೊಬಗನ್ನು ಪಡಿಮೂಡಿಸಲು ಅಸಮರ್ಥರಾಗುತ್ತಾರೆ.) ಆದ್ದರಿಂದಲೇ ಈ ಶಿಲೆಯೊಂದಿಗೆ ಸೂಕ್ಷ್ಮತೆ, ಕುಸುರು ಕೆಲಸಗಳು ತಮ್ಮಷ್ಟಕ್ಕೆ ತಾವೇ ಬಂದವು. ಈ ಶಿಲೆಯ ಮತ್ತೊಂದು ಗುಣವೆಂದರೆ, ಅಗೆದು ತೆಗೆದ ನಂತರ ಕೆಲಕಾಲದ ವರೆಗೆ ಅದು ಮಿದುವಾಗಿಯೂ ನುಣುಪಾಗಿಯೂ ಇದ್ದು, ಗಾಳಿ ಬೆಳಕುಗಳು ತಾಕಿದಂತೆ ಗಟ್ಟಿಯಾಗಿಯೂ ಬಿರುಸಾಗಿಯೂ ಆಗುವದು. ಮುಂದೆ ಹೊಯ್ಸಳ ಶಿಲ್ಪಿಗಳು ಜಗತ್ಪ್ರಸಿದ್ಧವಾದ ಬೇಲೂರು, ಹಳೆಬೀಡು ದೇವಾಲಯಗಳನ್ನು ನಿರ್ಮಿಸಿದುದೂ ಇದೇ ಶಿಲೆಯಿಂದಲೇ. ಉತ್ತರ ಕರ್ನಾಟಕದಲ್ಲಿ (ಮುಖ್ಯವಾಗಿ ಧಾರವಾಡ ಜಿಲ್ಲೆಯಲ್ಲಿ) ಈ ತರಹದ ಕಲ್ಲು ಸಿಕ್ಕುವದು ಹಿರೇಕೆರೂರ ತಾಲೂಕಿನ ದೂದಿಹಳ್ಳಿ, ಹಾವೇರಿಯ ಹತ್ತಿರದ ದೇವಗಿರಿ, ಬ್ಯಾಡಿಗಿ, ಸವಣೂರು, ರಾಣೇಬೆನ್ನೂರು ತಾಲೂಕಿನ ಮೋಟೆಬಿನ್ನೂರು, ಹಾನಗಲ್ಲು ತಾಲೂಕಿನ ಕೆಲವು ಭಾಗಗಳು, ಕರ್ಜಗಿ ತಾಲೂಕಿನ ಸಂಗೂರು, ಗದುಗಿನ ಹತ್ತರದ ಬೆಳಧಡಿ ಮುಂತಾದ ಸ್ಥಳಗಳಲ್ಲಿ. ಗದುಗಿನ ಬಳಿಯ ಗುಡ್ಡಗಳಲ್ಲಿ ಮೊನ್ನೆಮೊನ್ನೆವರೆಗೂ ಅರ್ಧ ಕೆತ್ತನೆಯ ಕೆಲಸ ಮಾಡಿದ ಕಲ್ಲುತುಂಡುಗಳು ದೊರೆತಿವೆ. ಗದುಗು, ಡಂಬಳ, ಲಕ್ಕುಂಡಿ ಮೊದಲಾದ ಸ್ಥಳಗಳಲ್ಲಿಯ ದೇವಾಲಯಗಳಿಗೆ ಇಲ್ಲಿಂದಲೇ ಕಲ್ಲನ್ನು ಒಯ್ದಿರಲಿಕ್ಕೆ ಸಾಕು.

ಇನ್ನು ಚಾಲುಕ್ಯ ಶಿಲ್ಪದ ಕೆಲವು ಸಾಮಾನ್ಯ ಲಕ್ಷಣಗಳನ್ನು ನೋಡುವಾ. ಚಾಲುಕ್ಯ ರೀತಿಯ ದೇವಾಲಯಗಳು ದೂರದಿಂದ ನೋಡಿದಾಗ ಅಷ್ಟೊಂದು ಮನಹಿಡಿಯುವಂತಹವಾಗಿ ಕಾಣುವದಿಲ್ಲ. ಆದರೆ ಹತ್ತರ ಹೋದಹೋದಂತೆ, ಸೂಕ್ಷ್ಮವಾಗಿ ನೋಡನೋಡಿದಂತೆ, ಅವುಗಳಲ್ಲಿಯ ಕೆತ್ತನೆಯ ಕೆಲಸ ಆಕರ್ಷಕವಾದುದಿಷ್ಟೇ ಅಲ್ಲ, ಆಶ್ಚರ್ಯಕರವಾದುದಾಗಿದೆ. ಇವುಗಳಲ್ಲಿಯ ಸೂಕ್ಷ್ಮ ಮತ್ತು ವಿವರವಾದ ಅಲಂಕಾರಗಳನ್ನು ಕಂಡು ಹೆನ್ರಿ ಕಜಿನ್ಸ್ (Henry Cousins) ಎಂಬ ಶಿಲ್ಪಶಾಸ್ತ್ರಜ್ಞ 'One cannot help wondering at the amount of lovely details, all finished with scrupulous care.' (ಸರ್ವಶಃ ಜಾಗರೂಕತೆಯಿಂದ ನೆರವೇರಿಸಿದ ಸೂಕ್ಷ್ಮ ಸುಂದರ ಕೆಲಸಗಾರಿಕೆಯನ್ನು ಕಂಡು ಯಾರೂ ಆಶ್ಚರ್ಯಪಡದಿರಲಾರರು) ಎಂದು ಹೇಳುತ್ತಾನೆ.

ಬಾದಾಮಿಯ ಚಾಲುಕ್ಯರ ಕಾಲದ ದೇವಾಲಯಗಳಲ್ಲಿ ತೀರ ಚಿಕ್ಕದಾದವುಗಳಲ್ಲಿ ಸಾಮಾನ್ಯವಾಗಿ ಎರಡೇ ಭಾಗಗಳು-ಒಂದು ಗರ್ಭಗುಡಿ, ಇನ್ನೊಂದು ಅದಕ್ಕೆ ಹೊಂದಿಕೊಂಡಿದ್ದ ಒಂದು ಮಂಟಪ. (ತೀರ ಹಳೆಯ-ಎಂದರೆ ಐಹೊಳೆಯಲ್ಲಿಯ ಕ್ರಿ. ಶ. ೫೭೦ ರ ಸುಮಾರಿನ 'ಮೇಗುಡಿ' ಹೆಚ್ಚು ಕಡಿಮೆ ಅದೇ ಕಾಲದ್ದಾದ 'ಕೊಂಟಗುಡಿ', ಪ್ರಾಯಶಃ ಇವೆರಡಕ್ಕೂ ಮುಂಚಿನದಾದ ಲಾಡಖಾನನ ಗುಡಿ, ಮುಂತಾದ ದೇವಾಲಯಗಳಲ್ಲಿ, ಪ್ರತ್ಯೇಕ ಗರ್ಭಗುಡಿ ಕೂಡ ಇರುವದಿಲ್ಲ; ಇರುವ ಒಂದೇ ಒಂದು ದೊಡ್ಡ ಹಜಾರದಲ್ಲಿ ಒಂದು ಗೋಡೆಗೆ ಹೊಂದಿಕೊಂಡು, ಒಂದು ಪೀಠದ ಮೇಲೆ ವಿಗ್ರಹವಿರುವದು). ಮಧ್ಯಮ ತರಗತಿಯ ದೇವಾಲಯಗಳಲ್ಲಿ ಗರ್ಭಗೃಹ-ಸುಕನಾಸಿಗಳಿಂದೊಡಗೂಡಿದ ವಿಮಾನಭಾಗ, ಅದರ ಮುಂದೆ ವಿಶಾಲವಾದ, ಅನೇಕ ಕಂಬಗಳುಳ್ಳ ನವರಂಗ ಅಥವಾ ಸಭಾಮಂಟಪ, ಅದರ ನಂತರ ಚಿಕ್ಕದಾದ ಒಂದು ಮುಖಮಂಟಪ ಈ ಭಾಗಗಳಿರುತ್ತವೆ. ಪ್ರಾಕಾರ, ಪ್ರದಕ್ಷಿಣಾಪಥ, ದ್ವಾರಮಂಟಪ ಮುಂತಾದವುಗಳು ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದಂತಹ ದೊಡ್ಡ ದೇವಾಲಯಗಳಲ್ಲಿ ಮಾತ್ರ ಕಂಡುಬರುತ್ತವೆ. ಕಲ್ಯಾಣದ ಚಾಲುಕ್ಯರ ಕಾಲದ ದೇವಾಲಯಗಳು ಇಷ್ಟು ಸಾಮಾನ್ಯ ರೀತಿಯವಲ್ಲ. ವಿಮಾನಭಾಗ, ನವರಂಗ, ಮುಖಮಂಟಪಗಳು ಅವುಗಳಲ್ಲಿಯ ಅವಶ್ಯಕ ಭಾಗಗಳಾದರೂ ಅವುಗಳ ಸಂಖ್ಯೆಯಲ್ಲಿ ಹಾಗೂ ರಚನೆಯಲ್ಲಿ ಬೇಕಾದಷ್ಟು ವೈವಿಧ್ಯ ಕಂಡುಬರುತ್ತದೆ. ಕೆಲವು ದೇವಾಲಯಗಳಲ್ಲಿಯಂತೂ ಹೊಯ್ಸಳ ದೇವಾಲಯಗಳಲ್ಲಿಯಂತೆ ಒಂದಕ್ಕಿಂತ ಹೆಚ್ಚು ಗರ್ಭಗೃಹಗಳು ಇರುವದೂ ಉಂಟು.

ತಳವಿನ್ಯಾಸವು ಮೊದಮೊದಲಿನ ಉದಾಹರಣೆಗಳಲ್ಲಿ ಚೌಕಾಗಿಯೋ, ಚತುರಸ್ರಾಕಾರವಾಗಿಯೋ ಇರುತ್ತದೆ. ನಂತರದ ಕೆಲವು ದೇವಾಲಯಗಳಲ್ಲಿ ಗರ್ಭಗೃಹದ ಗೋಡೆಯ ಕೆಲವು ಭಾಗ ಹೊರಕ್ಕೆ ಚಾಚಿದಂತೆಯೂ ಮತ್ತೆ ಕೆಲವು ಭಾಗ ಒಳಕ್ಕೆ ಹೋದಂತೆಯೂ ಇದೆ. ಕೊನೆಕೊನೆಯ ದೇವಾಲಯಗಳಲ್ಲಿ ಮಾತ್ರ ತಳವಿನ್ಯಾಸವು ಸಂಪೂರ್ಣವಾಗಿ ಬಹುಮೂಲೆಗಳುಳ್ಳದ್ದು ಅಥವಾ ನಕ್ಷತ್ರಾಕಾರದ್ದು. ಈ ಕೊನೆಯ ರೀತಿಗೆ ತಿಳವಳ್ಳಿಯ ಶಾಂತೇಶ್ವರನ ಹಾಗೂ ಡಂಬಳದ ದೊಡ್ಡಬಸಪ್ಪನ ದೇವಾಲಯಗಳು ಉತ್ತಮ ಉದಾಹರಣೆಗಳಾಗಿವೆ. ಹೀಗೆ ತಳವಿನ್ಯಾಸವು ಬರಬರುತ್ತ ನಕ್ಷತ್ರಾಕಾರದ್ದಾದುದಕ್ಕೆ ಒಂದು ಕಾರಣವನ್ನೂ ಹೇಳುತ್ತಾರೆ. ಚಾಲುಕ್ಯ ಅಥವಾ ಹೊಯ್ಸಳ ಶಿಲ್ಪಿಗಳು ಅತ್ಯಂತ ಅಲಂಕಾರಪ್ರಿಯರು. ದೇವಸ್ಥಾನದ ಗೋಡೆಗಳ ಮೇಲೆ ಎಷ್ಟು ವಿಗ್ರಹಗಳನ್ನು ಕೆತ್ತಿದರೂ ಅವರಿಗೆ ತೃಪ್ತಿಯೆನಿಸುತ್ತಿರಲಿಲ್ಲ. ಅವರ ಮನಸ್ಸು ಅಲಂಕಾರ ಮಾಡಲಿಕ್ಕೆ ಹೆಚ್ಚು ಉದ್ದವಾದ ಜಾಗೆ ಸಿಗುವದು ಹೇಗೆ-ಎಂಬದನ್ನೇ ವಿಚಾರ ಮಾಡುತ್ತಿತ್ತು. ಇದರ ಪರಿಣಾಮವೇ ನಕ್ಷತ್ರಾಕಾರದ ತಳವಿನ್ಯಾಸ.

ಇನ್ನು ಈ ದೇವಾಲಯಗಳು ಯಾವ ಮತದ ದೇವತೆಗಳುಳ್ಳವು-ಎಂಬದನ್ನು ವಿಚಾರ ಮಾಡಿದರೆ, ಸದ್ಯಕ್ಕೆ ಎಲ್ಲ ದೇವಾಲಯಗಳಲ್ಲಿಯೂ ಒಂದು ಲಿಂಗ ಒಂದು ನಂದಿ ಇರುವದು ಕಂಡುಬಂದರೂ ಮೊದಲನೆಯ ಕಾಲದ ಬಹುತರ ಎಲ್ಲ ದೇವಾಲಯಗಳು ವೈಷ್ಣವ ಮತಕ್ಕೆ ಸಂಬಂಧಪಟ್ಟವಿದ್ದವು. ಇಂದು ಗರ್ಭಗುಡಿಯಲ್ಲಿ ಯಾವದೇ ವಿಗ್ರಹವಿದ್ದರೂ ಯಾವದೇ ದೇವಾಲಯದ ಮೂಲ ಮುಖ್ಯ ದೇವತೆಯನ್ನು, ಅದರ ಗರ್ಭಗುಡಿಯ ದ್ವಾರದ ಮೇಲೆ ಕೆತ್ತಿದ ವಿಗ್ರಹದಿಂದ ಕಂಡುಹಿಡಿಯಬಹುದು. ವೈಷವ ದೇವಾಲಯಗಳಲ್ಲಿ ಈ ವಿಗ್ರಹ ಲಕ್ಷ್ಮಿಯದೋ ಗಜಲಕ್ಷ್ಮಿಯದೋ ಗರುಡನದೋ ಇರುತ್ತದೆ; ಶೈವ ದೇವಾಲಯಗಳಲ್ಲಿ ಈ ಸ್ಥಳದಲ್ಲಿ ಗಣಪತಿಯ ಅಥವಾ ಕಾರ್ತಿಕೇಯನ ವಿಗ್ರಹವಿರುತ್ತದೆ; ಜೈನ ದೇವಾಲಯಗಳಲ್ಲಿ ಕುಳಿತುಕೊಂಡ ಅಥವಾ ನಿಂತುಕೊಂಡ ಜಿನನ ಮೂರ್ತಿಯಿರುತ್ತದೆ. ಮೊದಲಿನ ದೇವಾಲಯಗಳಲ್ಲಿ ಬಹಳಷ್ಟು ವೈಷ್ಣವ ದೇವಾಲಯಗಳಿದ್ದರೂ ನಂತರದ ದೇವಾಲಯಗಳಲ್ಲಿ ವೈಷ್ಣವ ದೇವಾಲಯಗಳೊಂದಿಗೆ, ಜೈನ ಹಾಗೂ ಶೈವ ದೇವಾಲಯಗಳೂ ಇವೆ. ಈ ದೇವಾಲಯಗಳಲ್ಲಿ ಬಹಳಷ್ಟು ದೇವಾಲಯಗಳು ಪೂರ್ವಪಶ್ಚಿಮವಾಗಿದ್ದು, ಪೂರ್ವಕ್ಕೆ ಮುಖಮಾಡಿಕೊಂಡಿವೆ. ಶೈವ ದೇವಾಲಯಗಳು ಪೂರ್ವ ಅಥವಾ ಪಶ್ಚಿಮ ದಿಕ್ಕುಗಳನ್ನು ಮಾತ್ರ ಎದುರಿಸುತ್ತವೆ; ಆದರೆ ವೈಷ್ಣವ ದೇವಾಲಯಗಳಲ್ಲಿ ಕೆಲವು ಉತ್ತರಾಭಿಮುಖವಾಗಿಯೂ ಇರುವದುಂಟು. ಗಣಪತಿಯ ಹಾಗೂ ಜೈನ ದೇವಾಲಯಗಳಿಗೆ ಮಾತ್ರ ದಕ್ಷಿಣ ದಿಕ್ಕಿನಿಂದ ಪ್ರವೇಶ.

ಅಲಂಕಾರ ದೃಷ್ಟಿಯಿಂದ ನೋಡಿದಾಗ, ಈ ದೇವಸ್ಥಾನಗಳಲ್ಲಿ ಅಲಂಕಾರವಿಲ್ಲದ ಭಾಗವೇ ಅಪರೂಪ. ಇದ್ದುದರಲ್ಲಿ ಜೈನ ಮಂದಿರಗಳಲ್ಲಿ ಅಲಂಕಾರ ಕಡಿಮೆ. ಅಲಂಕಾರಕ್ಕಾಗಿ ಉಪಯೋಗಿಸುತ್ತಿದ್ದ ಮುಖ್ಯಭಾಗಗಳೆಂದರೆ ಕಂಬಗಳು, ಮೇಲ್ಛಾವಣಿ (ಭುವನೇಶ್ವರಿ), ಹಾಗೂ ಬಾಗಿಲು-ಚೌಕಟ್ಟುಗಳು. ಇತ್ತೀಚಿನ ಕೆಲ ದೇವಾಲಯಗಳಲ್ಲಿ (ಉದಾಹರಣೆ-ಕುರವತ್ತಿಯ ಮಲ್ಲಿಕಾರ್ಜುನನ ಗುಡಿ) ಹೊಯ್ಸಳ ದೇವಾಲಯಗಳಲ್ಲಿಯಂತೆ ಮದನಕೈ ವಿಗ್ರಹಗಳೂ ಕಂಡುಬರುವದುಂಟು. ಕಂಬಗಳು ಮೊದಮೊದಲು

ಚೌಕವಾಗಿದ್ದು, ನಂತರದವು ದುಂಡಾಗಿವೆ. ಹಳೆಯ ದೇವಾಲಯಗಳಲ್ಲಿ ಐಹೊಳೆಯ ದುರ್ಗದ ಗುಡಿಯಲ್ಲಿಯ ಹಾಗೂ ಪಟ್ಟದಕಲ್ಲಿನ ವಿರೂಪಾಕ್ಷ, ಪಾಪನಾಥ ದೇವಾಲಯಗಳಲ್ಲಿಯ ಕಂಬಗಳಿಗೆ ಹೊಂದಿಕೊಂಡು ಸುಂದರ ಸ್ತ್ರೀ ಪುರುಷ ವಿಗ್ರಹಗಳು ಕೆತ್ತಲ್ಪಟ್ಟಿವೆ. ನಂತರದ ಕೆಲವು ಶೈವ ದೇವಾಲಯಗಳಲ್ಲಿ ಹಾಗೂ ಮಠಗಳಲ್ಲಿಯ ದುಂಡು ಕಂಬಗಳು ಅತ್ಯಂತ ನುಣುಪಾಗಿಯೂ ಚಕ್ರಕ್ಕೆ ಕೊಟ್ಟು ಮಾಡಲ್ಪಟ್ಟಂತೆಯೂ ಇವೆ. ಉಳಿದವುಗಳಲ್ಲಿ ಅಲಂಕಾರ ತುಂಬಿ ತುಳುಕುತ್ತಿದೆ. ಈ ಅಲಂಕಾರಪೂರಿತವಾದ ಕಂಬಗಳು ದೂರದಿಂದ ನೋಡಲು ಒಂದೇ ರೀತಿಯಾಗಿ ಕಾಣಿಸಿದರೂ ರೇಖಾವಿನ್ಯಾಸ, ಅಲಂಕಾರ ವಿವರಗಳಲ್ಲಿ ಒಂದೊಂದೂ ಒಂದೊಂದು ರೀತಿಯದಾಗಿದೆ. ಪ್ರವೇಶದ್ವಾರದ ಅಲಂಕಾರಕ್ಕೆ ಮುಖ್ಯ ಉದಾಹರಣೆಯೆಂದರೆ ಲಕ್ಕುಂಡಿಯ ನನ್ನೇಶ್ವರ ದೇವಾಲಯ; ಇಲ್ಲಿ ಎರಡೂಬದಿಗಳಲ್ಲಿ ಬೇರೆ ಬೇರೆ ತರಹದ ಬಳಿಗಳ, ಸುಳುವುಗಳೂ ಇತರ ಅಲಂಕಾರಗಳ ಅನೇಕ ಪಟ್ಟಿಗಳೂ ಇವೆ. ಈ ರೀತಿಯ ಸುಂದರವಾದ ಅಲಂಕಾರವನ್ನು ಕಂಡು ಬೆರಗುಗೊಂಡ Alexr. Rea ಯವರ ಉದ್ಗಾರ ನೋಡಿ: No one who has examined any single specimen of Chalukyan carving can have failed to note its marvellous intricacy and artisfic finish even in the minutest details. ಅನೇಕ ದೇವಾಲಯಗಳಲ್ಲಿ ಪ್ರವೇಶದ್ವಾರದ ಎಡಬಲಗಳಲ್ಲಿ ಜಲದೇವತೆಗಳಾದ ಗಂಗೆ-ಯಮುನೆಯರ ವಿಗ್ರಹಗಳಿವೆ.

ಆದರೆ ಚಾಲುಕ್ಯದೇವಾಲಯಗಳಲ್ಲಿ ಎಲ್ಲಕ್ಕೂ ಸುಂದರವಾದ ಭಾಗಗಳೆಂದರೆ ಅವುಗಳ ಭುವನೇಶ್ವರಿಗಳು. ಇವುಗಳಲ್ಲಿ ಕೆಲವು ಅರ್ಧಗೋಲಾಕಾರವಾಗಿಯೂ ಮತ್ತೆ ಕೆಲವು ತಟ್ಟೆಯಾಗಿಯೂ ಇದ್ದು, ಅವುಗಳ ವಿನ್ಯಾಸ, ಆಕಾರ, ನಕ್ಷೆಗಳಲ್ಲಿ ಸ್ವಾರಸ್ಯಮಯವಾದ ವೈವಿಧ್ಯ ಕಂಡುಬರುವದು. ಹಾನಗಲ್ಲಿನ ತಾರಕೇಶ್ವರ, ಅನವಟ್ಟಿಯ ಕೈಥಬೇಶ್ವರ, ಬಂಕಾಪುರದ ಅರವತ್ತು ಕಂಬದ ಗುಡಿಗಳಲ್ಲಿಯ ಅರ್ಧಗೋಲಾಕಾರದ ಭುವನೇಶ್ವರಿಗಳು ನಿಜವಾಗಿಯೂ ಆಶ್ಚರ್ಯದಿಂದ ಬೆರಳು ಕಚ್ಚಿಸುವಂತಹವಾಗಿವೆ. ಇವುಗಳಲ್ಲಿ ಕೆಲವು ಸೂತ್ರಪಾತ ವಿನ್ಯಾಸದೃಷ್ಟಿಯಿಂದ ಸುಂದರವಾಗಿದ್ದರೆ, ಉಳಿದುವು ವಿಗ್ರಹಸಂಯೋಜನೆಯ ದೃಷ್ಟಿಯಿಂದ ಶ್ರೇಷ್ಠವಾಗಿವೆ.

ಮೊದಲಿನ ದೇವಾಲಯಗಳಲ್ಲಿ ಕೆತ್ತಲ್ಪಟ್ಟ ಮೂರ್ತಿ, ವಿಗ್ರಹಗಳು ಹೆಚ್ಚು ಸಹಜವಾಗಿವೆ, ಆದರೆ ನಂತರದ ದೇವಾಲಯಗಳಲ್ಲಿಯ ದೇವತಾ ವಿಗ್ರಹಗಳು ಸಹಜವಾಗಿರದೆ, ಕೆಲವು ವಿಶಿಷ್ಟ ನಿಯಮಗಳಿಗೆ ಒಳಪಟ್ಟಂತಿವೆ. ಹಳೆಯ ದೇವಾಲಯಗಳ ಗೋಡೆಯ ಮೇಲೆ ರಾಮಾಯಣ, ಮಹಾಭಾರತ, ಭಾಗವತಗಳಲ್ಲಿಯ ಕಥಾಸನ್ನಿವೇಶಗಳನ್ನು ಚಿತ್ರಿಸಿದ್ದಾಗಿದೆ: ಹೊಸ ದೇವಾಲಯಗಳಲ್ಲಿಯ ಗೋಡೆಗಳನ್ನು ಸ್ವತಂತ್ರ ವಿಗ್ರಹಗಳು ಆಕ್ರಮಿಸಿವೆ. ಸಾಲಭಂಜಿಕೆಗಳಲ್ಲಿ ನರ್ತನ ಮಾಡುತ್ತಿರುವ ಸ್ತ್ರೀ ವಿಗ್ರಹಗಳೂ ಕೆಲವೆಡೆ ಕಂಡುಬರುತ್ತವೆ. ಕೊನೆಯದಾಗಿ ಚಿತ್ರಪಟ್ಟಿಕೆಗಳಲ್ಲಿ ಕಂಡುಬರುವ ಚಿಕ್ಕಪುಟ್ಟ ಪ್ರಾಣಿಗಳನ್ನು ಬಿಟ್ಟರೆ ಹೆಚ್ಚಾಗಿ ಪ್ರಾಣಿಗಳಿಗೆ ಈ ಕೆತ್ತನೆಗಳಲ್ಲಿ ಪ್ರವೇಶವಿಲ್ಲ. ಇದ್ದುದರಲ್ಲಿಯೇ ವಿಶೇಷವಾಗಿ ಉಪಯೋಗಿಸಲ್ಪಟ್ಟ ಪ್ರಾಣಿಯೆಂದರೆ ಆನೆ.

ಸರಿ. ಇದೀಗ ಚಾಲುಕ್ಯ ಶಿಲ್ಪಶೈಲಿಯ ನಿಮಿಷಾವಲೋಕನವಾಯಿತು. ಆದರೆ ಕೊನೆಗೊಂದು ದುಃಖದ ಮಾತು. ಅದೆಂದರೆ, ಅನೇಕ ಕಡೆಗಳಲ್ಲಿಯ ದೇವಸ್ಥಾನಗಳು ಅತ್ಯಂತ ಹೀನಸ್ಥಿತಿಯಲ್ಲಿವೆ. ಜನ ಅವುಗಳ ಕಡೆಗೆ ಅಷ್ಟು ಲಕ್ಷ್ಯಕೊಡುತ್ತಿಲ್ಲ. ಹೊರಗಿನವರು ಬಂದು ನಮ್ಮ ದೇವಾಲಯಗಳ ಸೌಂದರ್ಯ ಮಹತ್ವಗಳನ್ನು ನಮಗೆ ಬೋಧಿಸಬೇಕಾಗಿದೆ. ಪಟ್ಟದಕಲ್ಲಿನ ದೇವಾಲಯಗಳನ್ನು ಕಂಡು ಪ್ರಖ್ಯಾತ ಪಾಶ್ಚಾತ್ಯ ಶಿಲ್ಪ ವಿಶಾರದ E. B. Havell ಹೇಳುವದನ್ನು ಕೇಳಿ: 'There is a closer affinity between these South Indian temples and the Parthenon of Greece......'. ಆದರೆ ಗ್ರೀಸದ ಪಾರ್ಥೆನಾನ್ ಜಗತ್ಪ್ರಸಿದ್ಧವಾಯಿತು; ಪಟ್ಟದಕಲ್ಲಿನ ದೇವಾಲಯಗಳ ಮಹತ್ವವನ್ನೋ, ನಮ್ಮವರೇ ಅರಿಯಲಿಲ್ಲ. ಈ ಪರಿಸ್ಥಿತಿ ಹೋಗಬೇಕು. ಚಾಲುಕ್ಯರ ಶಿಲ್ಪವೆಂದರೆ ಕರ್ನಾಟಕ ಶಿಲ್ಪ; ಕರ್ನಾಟಕ ಶಿಲ್ಪವೆಂದರೆ, ನಮ್ಮ ಸಂಸ್ಕೃತಿಧನದ ಒಂದು ಮುಖ್ಯ ಪಾಲು. ಅದನ್ನು ಬೆಳೆಸಿಕೊಳ್ಳಲು ಸಾಧ್ಯವಿಲ್ಲದಿದ್ದರೂ ಉಳಿಸಿಕೊಳ್ಳಬೇಕಾದುದು ನಮ್ಮವರ ಕರ್ತವ್ಯ.

ಸ್ವಾರ್ಥವೆಂದರೆ ತನಗೆ ತೋರಿದಂತೆ ತಾನು ಬಾಳುವುದಲ್ಲ; ತನಗೆ ತೋರಿದಂತೆ ಮಂದಿ ಬಾಳಬೇಕೆಂದು ಹೇಳುವುದು. ಮಂದಿಯ ಜೀವನದಲ್ಲಿ ಕೈಹಾಕದೆ ಅವರನ್ನು ಅವರ ಪಾಡಿಗೆ ಬಿಡುವುದೇ ನಿಃಸ್ವಾರ್ಥ.

— ಒಸ್ಕಾರ ವೈಲ್ಡ

ಶ್ರೀರಂಗ ಪ್ರಣೀತ



ಮೈರಾವಣ

(ಏಕಾಂಕ)

ಪ್ರಾಮಾಣಿಕ, ಶುದ್ಧಚರಿತ್ರರೇ ಚುನಾವಣೆಗಳಲ್ಲಿ ಆರಿಸಿ ಬರುವಂತೆ ಮಾಡಬೇಕೆಂದು ನೆಹರೂ ಹೇಳುತ್ತಾರಲ್ಲ. ಇಲ್ಲಿ ನೋಡಿರಿ ವಾಸ್ತವತೆಯ ಮೈರಾವಣನನ್ನು !

ಪಾತ್ರವರ್ಗ :

ಸರಳಣ್ಣ	ಗುಂಬಜ್ಜ
ಚದುರಪ್ಪ	ಹುಂಬಯ್ಯ

[ಸರಳಣ್ಣನ ಮನೆಯ ಅಟ್ಟದ ಮೇಲಿನ ಕೋಣೆಯ ಒಳಭಾಗ. (ಪ್ರೇಕ್ಷಕರ) ಎಡಬದಿಯ ಗೋಡೆಗಿದ್ದ ಎರಡು ಕಿಟಕಿಗಳ ನಡುವೆ ಗೋಡೆಗೆ ಕುರ್ಚಿ, ಮುಂದೆ ಮೇಜು, ಮೇಲೆ ಮತದಾರರ ಪಟ್ಟಿಯ ಹಾಳೆಗಳು ಹರವಿ ಬಿದ್ದಿವೆ. ಎದುರಿನ ಗೋಡೆಯ ಮಧ್ಯದಲ್ಲಿ ಕೆಳಗಿನಿಂದ ಮೇಲೇರಿ ಬರುವ ಬಾಗಿಲು; ಮುಂದೆ ಕಟಾಂಜನ ಕಾಣುವುದು. (ಪ್ರೇಕ್ಷಕರ) ಬಲಬದಿಯ ಗೋಡೆಗೆ, ತುಸು ಗೋಡೆಯನ್ನು ಬಿಟ್ಟು, ಸೋಫಾ-ಕುರ್ಚಿಗಳಿವೆ. ಕೋಣೆಯ ಮಧ್ಯಮಾಳಿಗೆಯಿಂದ ವಿದ್ಯುದ್ದೀಪ ಇಳಿಬಿದ್ದಿದೆ. ಮೇಜು ಮತ್ತು ಬಾಗಿಲಿನ ನಡುವಿನ ಮೂಲೆಗೆ ಒಂದೆರಡು ಶೆಲ್ಫುಗಳಿವೆ; ಅವುಗಳ ಮೇಲೂ ಮತದಾರರ ಪಟ್ಟಿಯ ಹಾಳೆಗಳೆ ಓರಣವಾಗಿ ನಿಂತಿವೆ; ಶೆಲ್ಫುಗಳ ಹಲಗೆಗೆ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ಎಂದು ಚೀಟಿಗಳನ್ನು ಬರೆದು ಅಂಟಸಿದೆ. ಕುರ್ಚಿಯ ಬಲಬದಿಗೆ—ರಂಗಭೂಮಿಯ ಮುಂಭಾಗಕ್ಕೆ—ಮನೆಯೊಳಗಿನಿಂದ ಅಟ್ಟಕ್ಕೆ ಬರುವ ದಾರಿ. ಈ ದಾರಿ ಮತ್ತು ಕುರ್ಚಿಯ ನಡುವೆ ಒಂದು ಟೆಲಿಫೋನು ಗೋಡೆಗೆ ಹತ್ತಿ ಇಡಲ್ಪಟ್ಟಿದೆ. ಸಮಯ ಬೆಳಗಿನ ೯ ಗಂಟೆಯ ಸುಮಾರು. ತೆರೆ ಎದ್ದಾಗ ರಂಗಭೂಮಿಯಲ್ಲಿ ಸರಳಣ್ಣನೊಬ್ಬನೆ ಇದ್ದಾನೆ. ಕುರ್ಚಿಯಲ್ಲಿ ಕುಳಿತವನು ಇದೇ ಎದ್ದು ನಿಂತಂತಿದೆ. ಮುಖದ ಮೇಲೆ ವ್ಯಗ್ರನಾದ ಕಳೆ. ಕೈಗಡಿಯಾರವನ್ನು ಒಂದೆರಡು ಸಲ ನೋಡಿಕೊಳ್ಳುವನು. ಬಲಬದಿಗೆ ಮುಖ ಮಾಡಿ ಏನನ್ನೊ ಕೇಳಿದಂತೆ ಮಾಡುವನು. ಒಂದು ನಿಮಿಷದಲ್ಲಿ ಒಳಪಾವಟಗೆಗಳ ತುದಿಗೆ ನಿಂತು ಕೆಳಗೆ ನೋಡುತ್ತ— " ಏನಂದೆ ? ಅಂ ?... ತುಸು ತಡೆ... ಇನ್ನೂ ಯಾರೂ ಬಂದಿಲ್ಲ " ಎಂದು ಮತ್ತೆ ಕುರ್ಚಿಯ ಕಡೆ ನಡೆದು ಬರುವನು. ಕೈಗಡಿಯಾರ ನೋಡುವನು. ಹೊರಗಿನಿಂದ ದನಿ ಕೇಳಿದಂತಾಗಿ, ಹೊರಪಾವಟಗೆಗಳ ತುದಿಗೆ ನಡೆದು ಹೋಗಿ, ಕಟಾಂಜನಕ್ಕೆ ಕೈಯಿಟ್ಟು ನಿಂತು, ಕೆಳಗೆ ನೋಡುತ್ತ—]

ಸರಳಣ್ಣ :— ಯಾರು ? .... ಏನ್ಬೇಕಂದ್ರಿ ? .... ಸರಳಣ್ಣ ಅವರ ಮನೆ ? .... ಯಾಕ ? .... ನಾನೇ ಸರಳಣ್ಣ .... ಏನ್ಹೇಳಿದ್ರಿ ? ಮುಂದ್ಹೋಗಿ ಕೇಳ್ರಿ .... ಹಂ .... ಆ ಬೇವಿನ ಗಿಡ ಕಾಣ್ತದ ನೋಡ್ರಿ– (ಮರಳಿ ಒಳಗೆ ಹೆಜ್ಜೆ ಇಡುತ್ತ, ಹೊರಗಿನವರಿಗಾಗಿ, ತುಸು ಎತ್ತರದ ದನಿಯಲ್ಲಿ) ಹಂ–ಹಂ. . (ಒಳಗೆ ಬರುತ್ತ, ಉಸುರ್ಗರೆದು, ಮುಗುಳ್ನಗೆಗಾಗಿ ಅರಳಿದ ಮುಖದಿಂದ) " ಇಲೆಕ್ಶನ್ಕ ನಿಂತ ಸರಳಣ್ಣ " ಅಂತ ! . . ಹಣೆಗೆ ಕಚ್ಚುಬಿದ್ದಿದೆಯೊ, ಬೆನ್ನಿಗೆ ವಾಳ ಆಗಿದ್ಯೊ ಅನ್ನೋಹಾಂಗ, ಇಲೆಕ್ಶನ್ಕ ನಿಂತದ್ದು ಒಂದು ಗುರುತು ಹಿಡಿಯೋ ಚಿಹ್ನ ಆಧಾಂಗ ಆಗೇದ ! . . ಹುಂ . . . (ಮೇಜಿಗೆ ಬಂದು, ಇನ್ನೂ ಯಾರೂ ಬಾರದ್ದಕ್ಕೆ ತುಸು ನಿರಾಶಿತನೊ ಬೇಜಾರಗೊಂಡವನೊ ಎನ್ನುವ ಮುಖಮುದ್ರೆಯಿಂದ) ಆಯ್ತು. . ಯಾರಾದ್ರೂ ಬರೋತನಕ ಇದನ್ನೊಮ್ಮೆ ಗಟ್ಟಿಸಿ ಅಂದ್ಕೊಂಡೇ ನೋಡೋಣ. (ಎಂದು ಮೇಜಿನಿಂದ ಬರೆದಿಟ್ಟ ಕಾಗದವನ್ನೆತ್ತಿಕೊಂಡು, ಕಣ್ಣಿಗೆ ಕನ್ನಡಕವನ್ನೇರಿಸಿ ತನ್ನಷ್ಟಕ್ಕೆ ಗಟ್ಟಿಯಾಗಿ ಓದತೊಡಗುವನು). "ನಿಮ್ಮ ದೇಶ ಸ್ವತಂತ್ರ, ನೀವೂ ಸ್ವತಂತ್ರರು, ನಿಮ್ಮ ಹುರಿಯಾಳುಗಳೂ ಸ್ವತಂತ್ರ. ಈ ಮೂರು ಸ್ವತಂತ್ರಗಳು ಒಂದು ಕಡೆ ಸೇರಿದರೆ, ಮೂರಕ್ಕೆ ಮುಕ್ತಿ ಅಂತಾರಲ್ಲ ಹಾಗೆ, ಒಡ

ತನೆ ಬರಗಾಲಗಳಿಂದ ನಿಮಗೆ ಮುಕ್ತಿ ಖಂಡಿತ. ನಾನೂ ನಾಗರಕ, ನೀವೂ ನಾಗರಕರು; ನಮ್ಮ ನಿಮ್ಮೊಳಗ ಏನು ಅಂತರ ಅದ ? ಏನೂ ಇಲ್ಲ. ಏನೂ ಇಲ್ಲ ಅಂದೆ." (ಒಮ್ಮೆಲೆ ತಡೆದು, ಮನೆಯೊಳಗೆ ಇಳಿಯುವ ಪಾವಟಗೆಗಳ ಕಡೆ ನೋಡುತ್ತ) ಏನಂದೆ? ಏನೂ ಇಲ್ಲ–ಅಂದೆ? ಏನು ? ಯಾರಿದ್ದಾರ ಅಂತೀಯಾ ? ಯಾರೂ ಇಲ್ಲ-ಅಂದೆ. [ಆದರೆ ಇವನು ಓದುವದನ್ನು ಪ್ರಾರಂಭಮಾಡುವ ಹೊತ್ತಿಗೇ ಸರಿಯಾಗಿ ಒಂದು ವ್ಯಕ್ತಿಯು ಹೊರಪಾವುಟಗೆಗಳನ್ನು ಹತ್ತಿ ಬಾಗಿಲಿಗೆ ಬಂದು ನಿಂತುದು, ಆ ಕಡೆ ತನ್ನ ಬೆನ್ನು ಇದ್ದುದರಿಂದ, ಸರಳಣ್ಣನಿಗೆ ಕಾಣಿಸಿರುವುದಿಲ್ಲ. "ಯಾರೂ ಇಲ್ಲ ಅಂದೆ" ಎಂದಾಗ ಆ ವ್ಯಕ್ತಿಯು ಮುಚ್ಚಿದ ಬಾಯಿ ಹಿಗ್ಗುವುದು ಮುಗುಳ್ನಗೆಯಿಂದ] (ಸಿಡುಕಿನ ದನಿಯಲ್ಲಿ) ಏನದು ? ಯಾರ ಇಲ್ಲಿದ್ರ ಮಾತಾಡ್ತಾರ್ದ ? ಯಾಕ? ನನಗೇ ನನ್ನ ಗುರುತು ಇಲ್ಲ ಅಂತೀ ಏನು, ಒಬ್ಬನೇ ಇದ್ದಾಗ ಸುಮ್ನಿರ್ಲಿಕ್ಕೆ ! [ಬಾಗಿಲದ ವ್ಯಕ್ತಿ ನಗಲು ಗಕ್ಕನೆ ತಿರುಗಿ] ಯಾರು ? . . (ನಗೆಯಿಂದ) ಏ–ನೀ ಇದ್ದೀಯಾ ? (ಒಳಪಾವಟಗೆಗಳ ಹತ್ತಿರ ಬಂದು) ಏ ಇಲ್ಲಿ ಬಿಡ? ಸುಮ್ನೆ ಚಾಷ್ಟಿಗೆ ಹೇಳಿದೆ. ನನಗೇನು ಹುಚ್ಚು ಹಿಡಿದಿದೆ ಏನು ನನ್ನಷ್ಟಕ್ಕೆ ನಾ ಮಾತಾಡ್ಲಿಕ್ಕೆ? ಚದುರಪ್ಪ ಇದ್ದಾನ ಇಲ್ಲಿ, ಅವನೂ ನಾನೂ ಮಾತಾಡ್ತಾ ಇದ್ದೀವಿ. . ಏನಂದಿ ? .. ಛೆ-ಛೆ- ಬ್ಯಾಡ, ಬ್ಯಾಡ ಅಂದೆ (ಎನ್ನುತ್ತ ಮೇಜಿನ ಹತ್ತಿರ ಬಂದು, ಎಡಗೈಯನ್ನು ಅದರ ಮೇಲಿಟ್ಟು, ಚದುರಪ್ಪನನ್ನು ದಿಟ್ಟಿಸುವನು).

ಚದುರಪ್ಪ: (ನಗೆಯಿಂದಲೆ) ಏನೊ "ಬ್ಯಾಡ" ಅಂದೆಯಲ್ಲೊ ? (ಎನ್ನುತ್ತ ಒಳಗೆ ಬರುವನು).

ಸರಳಣ್ಣ: ಚದುರಪ್ಪ ಬಂದಾನ ಅಂದ್ಮ್ಯಾಡ್ಲೆ ಚಹ ಮಾಡಲೇನು ಅಂದಳು, ಬ್ಯಾಡ ಅಂದೆ.

ಚದುರಪ್ಪ: (ಒಂದು ಕುರ್ಚಿಯನ್ನು ಎತ್ತಿತಂದು ಮೇಜಿನ ಹತ್ತಿರ ಇಡುತ್ತ) ಬ್ಯಾಡ ಅಂದಿ! ನಾಡವ್ರು ಮಾಡ್ತೀನಿ ಅಂದ್ರ ನೀ ಯಾಕ ಬ್ಯಾಡ ಅಂದಿ ?

ಸರಳಣ್ಣ: ನನ್ನ ತತ್ತ್ವ ಅದು. ನಿನಗ್ಗೊತ್ತಿಲ್ಲೇನು ?

ಚದುರಪ್ಪ: (ಕುಳಿತು, ಒಮ್ಮೆಲೆ ಚಕಿತನಾಗಿ ಅವನನ್ನು ದಿಟ್ಟಿಸುತ್ತ) ತತ್ತ್ವ ? ಅಂದ್ರ ನಿನ್ನೆ ನೀ ಅಂದದ್ದು ಚಾಷ್ಟೀಲೆ ಅನ್ನಲಿಲ್ಲ, ತತ್ತ್ವ ಅಂತೇ ಹೇಳಿದಿ ಅಂತೀಯಾ ?

ಸರಳಣ್ಣ: (ಎಡಗಾಲನ್ನಿಳಿಬಿಟ್ಟು ಮೇಜಿನ ಮೇಲೆ ಕುಳಿತು) ಅಲ್ಲೊ, ಚದುರಪ್ಪಾ, ನನ್ನ ಸ್ವಭಾವ ಗೊತ್ತಿದ್ದೂ ಕೇಳ್ತೀಯಲ್ಲ? ನಿಮಗ ಚಹ ಕೊಡೋದನ್ನ ತಪ್ಪಿಸಬೇಕು ಅಂತ ನಾ ಮಾಡೀನೆ ?

ಚದುರಪ್ಪ: (ಹಿರಿತನದ ದನಿಯಲ್ಲಿ) ಹುಚ್ಚನ್ಹಾಂಗ ಮಾತಾಡ್ಬೇಡ. ನಾ ಹಾಂಗ ಅಂದ್ನೇನು? ನನಗೂ ಚಹ ಕೊಡೋದಿಲ್ಲ ಅಂತ ಅಂದೆ ನೀನು ನಿನ್ನೆ. ಆ ಮಾತು ಚಾಷ್ಟಿ ಅಂತ ತಿಳಿದೆ ನಾನು.

ಸರಳಣ್ಣ: ನಿನಗೂ ಅಂದ್ರೇನೊ? ಯಾರಿಗೆ ಕೊಟ್ರೂ ಕೊಟ್ಹಾಂಗೇ ಅಲ್ಲ ?

ಚದುರಪ್ಪ: ಅಲ್ಲೊ, ಸರಳಣ್ಣಾ, ಹರಿಶ್ಚಂದ್ರನ ಸನ್ನಿಪಾತ ಏರಿಧಾಂಗ ನಡೆಸೀದೆಯಲ್ಲೋ ನಿನ್ನ ಸರಳತನ? ಮತದಾರಗ ಮೋಟಾರ ಕೊಡ್ತಾರ್ರು, ವಾಹನ ಕೊಡ್ತಾರದು, ಲಂಚ ಕೊಡ್ತಾರ್ರು ಅಂಥೇ-ಳಿದ್ರ ಮನೀಗೆ ಬಂದವ್ರಿಗೆ ಚಹಾನೂ ಕೊಡ್ತಾರ್ರು ಅಂತೀಯಲ್ಲ ನೀನು ?

ಸರಳಣ್ಣ: ಅಂದ್ರ ? ಲಂಚ ಅಂದ್ರೇನು ? ಬರೀ ರೊಕ್ಕ ಹಣಾನೇ ಲಂಚ ಅಲ್ಲ? ಕೇವಲ ತಮ್ಮ ಮನಸ್ಸಿನಿಂದ ಅವರು ಒಪ್ಪಿ ನನಗ ಮತ ಕೊಡಬೇಕು, ಅದಕ್ಕ ಅಡ್ಡಿ ಬರುವಂತಹ ಯಾವ ಸಂಗತೀನೇ ಇರಲಿ, ಅದು ಲಂಚ. ಈಗ ನೋಡಲ್ಲ? ನೀ· ನನ್ನ ಗೆಳೆಯ. ಈ ಇಲೆಕ್‌ಶನ್‌ದಾಗ ನನ್ನ ಸಲುವಾಗಿ ಓಡಾಡ್ತಿ. ಈಗ ನಾ ದಿನಾಲು ನಿನಗೆ ಮನೀವಳ್ಗ ಚಹ – ಫರಾಳ ಕೊಟ್ಟೆ ಅಂತ ತಿಳಿ. ನಾಳೆ ಇಲೆಕ್‌ಶನ್ ದಿನ ನೀ ವಿಚಾರ ಮಾಡ್ತಿ. "ಸರಳಣ್ಣ ನನ್ನ ಗೆಳೆಯ ಅಂತ ಅವನ ಸಲುವಾಗಿ ಓಡಾಡಿದೆ. ಮಹಾರಾಯ ನ್ಯಾಲೆ ದಿನಾ ಚಹಾ– ಫರಾಳ ಕೊಟ್ಟ. ಅದ್ಕ ನನ್ನ ಮತಾನೂ ಅವನಿಗೇ ಕೊಟ್ಟುಬಿಡೋಣ" ಅಂತ........ಅಂತಹ ಪ್ರಸಂಗದಾಗ ಏನು ಅಂತೀ ?

ಚದುರಪ್ಪ: (ಹಣೆಹಣೆಗಟ್ಟಿಸಿ) ಕಠಿಣ ! ಕಠಿಣ–ಅಂತೀನಿ. ಅಲ್ಲೊ, ನಾ ನಿನ್ನ ಸಲುವಾಗಿ ಬರೀ ಓಡಾಡ್ತೀನಿ, ನಿನಗ ಮತ ಕೊಡೋದಿಲ್ಲ, ನೀ ಚಹಾ – ಫರಾಳ ಕೊಟ್ರ ಅದ್ಕಾಗಿ ನಿನಗ ಮತ ಕೊಡ್ತೀನಿ ಅಂತ ತಿಳಿದೀಯಾ ?

ಸರಳಣ್ಣ: ಯಾಕ ತಿಳೀಬಾರ್ದು ?

ಚದುರಪ್ಪ: ನಾ ನಿನ್ನ ಗೆಳೆಯ ! ಇಲೆಕ್‌ಶನ್‌ದಾಗ ನಿನ್ನ Agent (ಏಜೆಂಟ) ನಾನು. ನನ್ನ ಮ್ಯಾಲೆ ವಿಶ್ವಾಸ ಇಲ್ಲ ?

ಸರಳಣ್ಣ: ವಿಶ್ವಾಸ ಪೂರಾ ಅದ. ನನ್ನ ವಿಶ್ವಾಸ ಪೂರಾ ನಿನ್ನ ಮ್ಯಾಲೆ ಅದ ಅಂತ ನಿನಗೂ ಗೊತ್ತು.

ಚದುರಪ್ಪ: ಮತ್ತ— ?

ಸರಳಣ್ಣ: ಅಂತೇ ಇನ್ನೊಬ್ಬರಿಗೆ ನಿನ್ನ ಮತ ಕೊಡೋದು ಸುಲಭ.

ಚದುರಪ್ಪ: (ಪುಟದೆದ್ದು) ಏನಂದೆ ?

ಸರಳಣ್ಣ: (ಮುಂದೆ ಬಂದು) ಕೂಡೊ, ಕೂಡು. ಅನುಭವದಿಂದ ಈ ಮಾತು ಹೇಳ್ತೀನಿ. "ನನ್ನ ಮ್ಯಾಲೆ ಇಷ್ಟು ವಿಶ್ವಾಸ ಅದ ಇವನ್ದು, ನಾ ಯಾರಿಗೆ ಮತ ಕೊಟ್ಟರೂ ತನಗೇ ಕೊಟ್ಟೇನಿ ಅಂತ ತಿಳೀತದ ಈ ಮಬ್ಬು" ಅಂದ್ಕೊಂಡು ಬೇಕಾದವರಿಗೆ ಕೊಡೋದು ಸುಲಭ ಹೌದೊ ಅಲ್ಲೊ ? ತಡೀಯೊ ? ನಿನಗ ಯಾರು ಯೋಗ್ಯ ಅನ್ನಿಸ್ತಾರ ಅವರಿಗೆ ನೀ ಮತ ಕೊಟ್ಟರ ನನಗ ಆನಂದ ಅದ. ಅದ್ಕೇ ಹೇಳ್ತೀನಿ, ನಡುವೆ ಈ ಚಹಾ – ಫರಾಳದ ಭಿಡೆ ಬ್ಯಾಡ. ತತ್ತ್ವ ಅಂದ್ರ ತತ್ತ್ವ ಅಷ !

ಚದುರಪ್ಪ: (ತಿರಸ್ಕಾರದ ದನಿಯಲ್ಲಿ) ಸುಟ್ಟಿತು ನಿನ್ನ ತತ್ತ್ವ ! ನಾಳೆ ಇಲೆಕ್‌ಶನ್‌ದ ದಿನ ನಿಮ್ಮ ನೆರೆಮನೇವಳಗ ಯಾರಾದ್ರು ಸತ್ತರ, ತತ್ತ್ವ ಅಂತ, ನೀ ಅವರಿಗೆ ಹೆಗಲ ಸಹಿತ ಕೊಡೋದಿಲ್ಲ, ಕಾಣ್ತದ. (ಏಳುತ್ತ) ಹೋಗಲಿ ಬಿಡು. ನಿನ್ನ ತತ್ತ್ವ ನಿನಗಿರ್ಲಿ, ಈ ಇಲೆಕ್‌ಶನ್‌ದ ಮೂಗಿನೊಳಗ ನಿನ್ನ ತತ್ತ್ವದ ಕಡ್ಡೀ ಹಾಕ ಬ್ಯಾಡ .... ಹುಂ .... ನಾ ಬಂದಾಗ ಅದೇನೊ ಓದತಿದ್ದೆಯಲ್ಲ? ಅದೇನು ?

ಸರಳಣ್ಣ: ಅದಿನ್ನೂ ಕಚ್ಚಾ ಪ್ರತಿ. ಮತದಾರರಿಗೆ ಒಂದು ಬಿನ್ನಹ ಪತ್ರ ಕಳಿಸ್ಬೇಕು, ಆದಷ್ಟು ಬೇಗ, ಅಂತ ನೀ ಅಂದಿದ್ದೆಯಲ್ಲ ?

ಚದುರಪ್ಪ: ಹೌದೊ–ಅದನ್ನೆಲ್ಲಾ ಲಗೂಲಗೂ ಮುಗಿಸಿಕೋ ಬೇಕು ಅಂದ್ರ ಈ ಗುಂಬಜ್ಜ, ಹುಂಬಯ್ಯ ಒಬ್ಬರೂ ಬರಲಿಲ್ಲ ಅಲ್ಲ? (ಬಾಗಿಲ ಕಡೆ ಹೋಗುವನು. ಒಂದೆರಡು ನಿಮಿಷ ಹೊರಗೆ ನೋಡಿ ಮತ್ತೆ ಒಳಗೆ ಬರುವಾಗ ಶೆಲ್ಫುಗಳ ಕಡೆ ಲಕ್ಷ್ಯ ಹೋಗುವುದು. ಕೂಡಲೆ "ದಕ್ಷಿಣ" ಎಂದು ಬರೆದಲ್ಲಿ ಹೋಗಿ ಕೈಯಿಂದ ಕಾಗದಗಳನ್ನು ಎತ್ತಿ ಚಕಿತಮುದ್ರೆಯಿಂದ ಸರಳಣ್ಣನ ಕಡೆ ಮುಖ ತಿರುಗಿಸುವನು).

ಸರಳಣ್ಣ: ನಾನೇ ಅವನ್ನೆಲ್ಲಾ ನೋಡಿಟ್ಟೇನಿ, ಬ್ಯಾರೆ ಬ್ಯಾರೆದರೊಳ ಗಿನ್ನು ಕೂಡಿದ್ದುವು—

ಚದುರಪ್ಪ: ಯಾವು ಕೂಡಿದ್ದುವು? ಒಂದೊಂದು ದಿಕ್ಕಿನ ಪ್ರಕಾರ ಮತದಾರರ ಹೆಸರು ಕೂಡಿಸಿಟ್ಟಿದ್ದು, ಇಲ್ಲಿ ಇಷ್ಟು ಕಡಿಮೆ ಹ್ಯಾಂಗ ಆದುವು?

ಸರಳಣ್ಣ: ಅದರೊಳಗ ಎಷ್ಟೋ ಹೆಸರು ದಕ್ಷಿಣದ್ದು ಇದ್ದಿದ್ದಿಲ್ಲ—

ಚದುರಪ್ಪ: (ನಡುವೆಯೆ) ಏ, ಮಹಾರಾಯಾ. ಇದೆಲ್ಲ ವ್ಯವಸ್ಥಾ ನಮಗ ಬಿಟ್ಕೊಡು ಅಂತ ಹೇಳಿಲ್ಲ? ಒಟ್ಟು, ಎಲ್ಲಾರಿಗೆ ಒಮ್ಮೊಮ್ಮೆ ಭೆಟ್ಟಿಯಾಗಿ ಬರೋದ ನಿನ್ನ ಕೆಲಸ. (ಆ ಕಾಗದಗಳನ್ನು ಎತ್ತಿ ನೋಡುತ್ತ) ನಾ ಎಲ್ಲಾ ಹಚ್ಚಿಟ್ಟಿದ್ದೆ–(ಗೊಣಗುವನು).

ಸರಳಣ್ಣ: (ಹಟದಿಂದ) ಅದರೊಳಗ ಎಷ್ಟೊ ದಕ್ಷಿಣದ್ದು ಇದ್ದಿದ್ದಿಲ್ಲ ಅಂತ ಹೇಳಿಲಿಲ್ಲೇನೊ, ಚದುರಪ್ಪಾ—

ಚದುರಪ್ಪ: (ಸಿಡುಕಿನಿಂದ) ನಿನಗ ಯಾರು ಹೇಳಿದರು? ಅವೆಲ್ಲಾ ದಕ್ಷಿಣಾದ್ದೇ. (ವಟಗುಟ್ಟುತ್ತ) ಎಲ್ಲಾ ಸೊಂಟಕ್ಕ ಏರಿಸುವವರೆ!

ಸರಳಣ್ಣ: (ತಿಳಿಯದೆ) ಸೊಂಟಕ್ಕ?

ಚದುರಪ್ಪ: (ತಟ್ಟನೆ) ಅದು ನಮ್ಮ ಚಾಪ್ಟೀ ಶಬ್ದ. ಕೆಳಗಿನ ದಿಕ್ಕು ದಕ್ಷಿಣಾ ದಿಕ್ಕು, ಸೊಂಟ ಕೆಳಭಾಗಕ್ಕ ಇರ್ತದ—

ಸರಳಣ್ಣ: (ಮೋಲಿನಂತೆ) ದಕ್ಷಿಣಾ? ದಕ್ಷಿಣಾ—ಯಾಕ ಅಂತೀಯೊ?

ಚದುರಪ್ಪ: (ಕನಲಿ) ಯಾಕಂದ್ರ? ಅದು ಸಂಸ್ಕೃತ ಶಬ್ದ. ಸಂಸ್ಕೃತದಾಗ 'ದಕ್ಷಿಣಾ ದಿಕ್' ಅಂತಾರ. ಅದೇ ಬಾಯಿಯೊಳಗ ಕೂತದ.

ಸರಳಣ್ಣ: ಹಂ– (ಒಮ್ಮೆಲೆ ಒಳಪಾವಟಿಗೆಗಳತ್ತ) ಬಂದೆ. (ಚದುರಪ್ಪನಿಗೆ) ಆಯ್ತು–ನೀನೇ ನೋಡಿಕೋ ಹಾಗಾದ್ರ, ನಾಯೇನು ಕೈ-ಹಚ್ಚೋದಿಲ್ಲ.. ಬಂದೆ (ಒಳಗೆ ಇಳಿಯಲು ಹೊರಡುವನು).

ಚದುರಪ್ಪ: ಯಾಕ? ಎಲ್ಲಿ ಹೊರಟಿ?

ಸರಳಣ್ಣ: ಚಹ ಕುಡಿದು ಬರ್ತೀನಿ.

ಚದುರಪ್ಪ: ಹಂ.. ಏ, ತಡೆ. (ಸರಳಣ್ಣ ತಡೆಯುವನು). ಇದು ಏನದ ನೋಡು (ಕಿಸೆಯೊಳಗಿಂದ ನಾಣ್ಯವನ್ನು ತೋರಿಸುವನು)

ಸರಳಣ್ಣ: (ಬೆರಗಾಗಿ) ಏನದ ಅಂದ್ರ? ಒಂದಾಣೆಯ ನಾಣ್ಯ.

ಚದುರಪ್ಪ: ಹೌದಲ್ಲೊ? ಇದನ್ನ ತಗೊ. ಇದು ನನ್ನದು—ಅಂದ್ರ ನಾ ಮಾಡಿದ್ದಲ್ಲ. ನಾ ಗಳಿಸಿದ್ದು. ಇದನ್ನ ತಗೊಂಡು ಕೆಳಗ ಹೋಗು, ನನಗೂ ಒಂದು ಕಪ್ ಚಹ ತಗೊಂಡು ಬಾ.

ಸರಳಣ್ಣ: ಆಂ? (ಬಾಯ್ದೆರೆದು ನಿಲ್ಲುವನು).

ಚದುರಪ್ಪ: ಆಂ ಅಂತ ಬಾಯಿ ತೆರೆದೇನು ತೋರಿಸ್ತೀ? ಹಾಂಗ ಕೇಳಿದ್ರ— (ಅವನ ದನಿಯನ್ನು ಅಣಕಿಸುತ್ತ) ಆಂ— (ಎಂದು ಬಾಯ್ದೆರೆದು ತೋರಿಸಿ) ನೋಡಿದೆಯೋ? ನನ್ನದೂ ನಾಲಗೆ ಒಣಗೇದ... ಅದ್ಕ ಇದನ್ನ ತಗೊ. ಒಂದಾಣೆ ಲಂಚಾ ನಾ ಕೊಡ್ತೇನಿ, ಒಂದು ಕಪ್ ಚಹಾ ನೀ ಲಂಚ ಕೊಡೊ—

ಸರಳಣ್ಣ: (ಬೆಪ್ಪಾಗಿ) ಅಲ್ಲೋ—

ಚದುರಪ್ಪ: ಅಲ್ಲೇನು? ತಾಸುತಾಸಿಗೊಮ್ಮೆ ಚಹಕ್ಕ ಹೊರಗ ಹೋದರ ಕೆಲಸ ಹ್ಯಾಂಗ ಆಗ್ಬೇಕು? ನನ್ದೂ ತತ್ತ್ವ ಇದು. ಒಂದೇ ಆಣೆ ಅಂತ ಸಣ್ಣ ತತ್ತ್ವ ಅಂತ ತಿಳೀಬ್ಯಾಡ— (ಕೊಡುವನೇ)

ಸರಳಣ್ಣ: (ತೆಗೆದುಕೊಂಡು) ನಿರ್ವಾಹವೇ ಇಲ್ಲ.

ಚದುರಪ್ಪ: ನಿರ್ವಾಹ ಇಲ್ಲೊ, ನಾಚಿಕೆ ಇಲ್ಲೊ? ಹೋಗು, ಮಹಾರಾಯಾ, ಮೊದಲು ಚಹ ತಗೊಂಡು ಬಾ.

[ಸರಳಣ್ಣ ಒಳಪಾವಟಿಗೆ ವರೆಗೆ ಹೋಗಿ ಏನೋ ಹೇಳಬೇಕೆಂದು ನಿಂತು ಚದುರಪ್ಪನು ದಿಟ್ಟಿಸಿ ನೋಡಲು ಏನನ್ನೂ ಹೇಳದೆ ಕೆಳಗಿಳಿದು ಹೋಗುವನು. ಚದುರಪ್ಪನು ಆ ಕಡೆಗೆ ದಿಟ್ಟಿಸುತ್ತ ಆಶ್ಚರ್ಯ-ನಿರಾಶೆಗಳ ಮಿಶ್ರಣಮುದ್ರೆಯಿಂದ ತಲೆ ಅಲ್ಲಾಡಿಸುವಷ್ಟರಲ್ಲಿ ಸರಳಣ್ಣನು ಅವಸರವಸರವಾಗಿ ಮೇಲೇರಿ ಬಂದು –]

ಸರಳಣ್ಣ: (ತವಕದ ದನಿಯಲ್ಲಿ) ಚದುರಪ್ಪಾ, ಚದುರಪ್ಪಾ—

ಚದುರಪ್ಪ: (ಬೆರಗಾಗಿ) ಏನು– ಇಷ್ಟರೊಳಗೆ—? (ಒಮ್ಮೆಲೆ ಅವನ ಬರಿಗೈ ನೋಡಿ) ಚಹ ಎಲ್ಲಿ?

ಸರಳಣ್ಣ: ತರ್ತೀನಿ, ತಂದೆ... ಆಗಲೇ ನಿನಗ ಏನೊ ಹೇಳ್ಬೇಕಂದೆ, ಮರೀತು, ಕೆಳಗ ಹೋದ್ಕೂಡಲೆ ಲಕ್ಷ್ಯಕ್ಕ ಬಂತು, ಏನ್ಮೋಜಾಯ್ತಂತೀ, ಯಾವನೋ ಒಬ್ಬ, ನೀ ಬರೋ ಮುಂಚೆ, ಯಾರ್ದೊ ಮನಿ ಹುಡುಕ್ತಾ ಬಂದು, "ಇಲೆಕ್‌ಶನ್‌ಕ ನಿಂತ ಸರಳಣ್ಣೋರ ಮನೀ ಹತ್ತಿರ ಅದ ಅಂತರಿ"— (ನಗುತ್ತ) ಅಲ್ಲ, ಮೋಜು ಅಲ್ಲ? —"ಇಲೆಕ್‌ಶನ್‌ಕ ನಿಂತ ಸರಳಣ್ಣ" ಅಂತ—ಅಲ್ಲ—ಇಲೆಕ್‌ಶನ್‌ಕ ನಿಂತದ್ದು ದೊಡ್ಡ ಅದ್ಭುತ ಆಗೇದ—ಆಂ?—"ಇಲೆಕ್‌ಶನ್‌ಕ ನಿಂತ ಸರಳಣ್ಣ" ಅಂತ—ಹಹ! (ಹೊರಡುವನು).

ಚದುರಪ್ಪ: (ಮೋಲಿನಂತೆ ತಲೆ ಅಲ್ಲಾಡಿಸುತ್ತ "ಹುಂ" ಎಂದು ಉಸುರ್ಗರೆಯಲು ಸರಳಣ್ಣ ತಿರುಗಿ ನಿಲ್ಲುವನು. ಅವನನ್ನು ನೋಡಿ) ಅಂಥಾಂಗ ಮೋಜು—ಆಂ? ಒಳೇ ಮೋಜಪ!—"ಇಲೆಕ್‌ಶನ್‌ಕ ನಿಂತ ಸರಳಣ್ಣ ಅಂತ"—ಆಂ?—ಹಹ!

ಸರಳಣ್ಣ: ಹಹಹ!

ಇಬ್ಬರೂ: ಹಹಹ! (ಎಂದು ಗಟ್ಟಿಯಾಗಿ ನಗುವರು. ಸರಳಣ್ಣ ನಗುತ್ತ ತಲೆತೂಗುತ್ತ ಕೆಳಗೆ ಹೋಗುವನು).

ಚದುರಪ್ಪ: (ಶೆಲ್ಫುಗಳ ಮೇಲಿನ ಕಾಗದಗಳನ್ನು ತನಗೆ ಸರಿಯೆನ್ನಿಸಿದಂತೆ ಎತ್ತಿಟ್ಟು) ಏನೊ ದನಿ ಕೇಳ್ತದಲ್ಲ? (ಬಾಗಿಲಿಗೆ ಬಂದು ಕೆಳಗೆ ನೋಡುತ್ತ) ಏನರೊ ಅದು? ಯಾವಾಗ ಬರೋದು? ಏ, ಹುಂಬಯ್ಯ, ತಡ ಆಗೇದ ಅಂತ ಹೇಳ್ತೇನಿ, ನೀ ಹಂಗೇ ನಕ್ಕೋತ ಬರ್ತೀಯಲ್ಲ.

ಹುಂಬಯ್ಯ: (ಮೊದಲು ಮೇಲೆ ಬಂದು ಕೆಳಗೆ ನೋಡುತ್ತ) ನಾ ಹೇಳ್ಲಿಲ್ಲ, ಗುಂಬಜ್ಜ, ನಿನಗ, ಕಡೀಕ ಚದುರಪ್ಪ ನನ್ನ ಮ್ಯಾಲೆ ಸಿಟ್ಟಾಗ್ತಾನಂತ? (ಚದುರಪ್ಪನಿಗೆ) ಗುಂಬಜ್ಜಗ ಕೇಳು, ನಾವೇನು ಸುಮ್ಮಸುಮ್ನೆ ಹೊತ್ತು ಕಳೀತಿದ್ದೆವೇನು?

ಗುಂಬಜ್ಜ : (ಮೇಲೆ ಬಂದು) ಸಿಂಪಿಗ್ಯಾನ ಅಂಗ್ಡಿಗೆ ಹೋಗಿದ್ದಿವಿ, ತಡ ಆಯ್ತು.

ಚದುರಪ್ಪ : (ಒಳಗೆ ಬರುತ್ತ) ಸಿಂಪಿಗ್ಯಾನ ಅಂಗ್ಡ್ಯಾಗೇನಿತ್ತು? ಇಲೆಕ್ಶನ್‌ಕ ನಿಂತವರು ಒಬ್ರಾದ್ರ ಹಬ್ಬದರಿವೆ ನಿಮ್ಗೇನು?

ಹುಂಬಯ್ಯ : (ಗುಂಬಜ್ಜನಿಗೆ, ಇಬ್ಬರೂ ಇನ್ನೂ ಬಾಗಿಲದ ಹೊರಗೇ ಇದ್ದಾರೆ. ಕೆಣಕುವವನಂತೆ ಕಳ್ಳದನಿಯಲ್ಲಿ) ಹೇಳೋಣೇನು, ಅಜ್ಜ?

ಚದುರಪ್ಪ : (ತಿಳಿಯದ್ದಕ್ಕೆ ಸಿಡುಕಿನಿಂದ) ಮತ್ತೇನು ನಡಿಸೀರಪ್ಪ?

ಗುಂಬಜ್ಜ : (ಈಗ ಒಳಗೆ ಬಂದಿದ್ದಾನೆ) ಹೇಳೋಣಂತ, ಹೇಳೋಣು, ಅವಸರ ಯಾಕ?

ಹುಂಬಯ್ಯ : (ತಾನೂ ಒಳಗೆ ಬಂದು) ಏನು ತೋರಿಸಿಯೆ ಬಿಡೋಣ? ಆಂ? ಗುಂಬಜ್ಜ?

ಚದುರಪ್ಪ : (ಹುಂಬಯ್ಯನನ್ನು ದಿಟ್ಟಿಸಿ ನೋಡುತ್ತ) ಅಬ್ಬಬ್ಬಬ್ಬ! ಭಾರೀ ವೇಷ ಮಾಡಿದಿಯಲ್ಲೊ? ತಲೆಗ್ರುಮಾಲು, ಉದ್ದ ಕೋಟು, ಕೆಳಗ—ಛೆ-ಛೆ-ಛೆ-ಛೆ!—ಕೆಳಗ ಪ್ಯಾಂಟು–(ಒಮ್ಮೆಲೆ) ಎಲ! ಕಾಲೊಳಗ ಚಪ್ಪಲೀನೇ ಹಾಕಿದಿಯಲ್ಲೊ?

ಹುಂಬಯ್ಯ : ನಮ್ಮ ಕುಳ ಸ್ವತಂತ್ರ ಹುರಿಯಾಳು ಅಲ್ಲೇನು?

ಚದುರಪ್ಪ : ಅಂದ್ರ?

ಹುಂಬಯ್ಯ : (ಗುಂಬಜ್ಜನನ್ನು ನೋಡುವನು. ಅವನು ಕೈಸನ್ನೆಯಿಂದ "ಸಮಾಧಾನ, ತಡೆ" ಎಂದು ಸೂಚಿಸುವನು).

ಚದುರಪ್ಪ : (ಒಮ್ಮೆಲೆ) ತಡೀ. ಆಂ, ತಡೆ. (ಕಿಸೆಯಲ್ಲಿ ಕೈಹಾಕಿ-ಹೊರತೆಗೆದು) ಎಲೆಲೆ!

ಹುಂಬಯ್ಯ : (ಚಕಿತನಾಗಿ) ಏನೊ ಅದು?

ಚದುರಪ್ಪ : (ಒಳಪಾವಟಿಗೆಗಳತ್ತ ಹೊರಡುತ್ತ) ಪಾಪ! ಎಂಥಾ ಪರಿ ಕೇಳಿದ, ನೋಡದೇನೆ ಇಲ್ಲ ಅಂದ ಬಿಟ್ಟೆ!

ಹುಂಬಯ್ಯ : (ಹಟದಿಂದ) ಏನೊ ಅದು? ಕೆಳಗ ಮನೀವಳಗ ಯಾಕ ಹೊರಟೆ?

ಚದುರಪ್ಪ : ಅಲ್ಲ, ಕೆಳಗ ಹರಕತ್ತ ಆಗಿತ್ತಂತ, ಒಂದು ಬಿಡಿ ಆಣೆ ಅದ ಏನು ಅಂತ ಕೇಳಿದ, ಸರಳಣ್ಣ. "ಇಲ್ಲ" ಅಂದ್ಬಿಟ್ಟೆ. ಕೆಳಗ ಮ್ಯಾಲ ಹುಡುಕಾಡಲಿಕ್ಕೆ ಹತ್ಯಾನ, ಪಾಪ! ಈಗ ಕಿಸೇದಾಗ ಕೈಹಾಕಿದೆ, ಒಂದು ಬಿಡಿ ಆಣೆ! ತಡೀ, ತಡೀ ಆಂ? ಈಗ ಕೊಟ್ಬಂದೆ! ಬಂದೆ ಈಗ— (ಎನ್ನುತ್ತ ಲಗುಬಗೆಯಿಂದ ಇಳಿದು ಹೋಗುವನು).

[ಇಬ್ಬರೂ ಒಬ್ಬರೊಬ್ಬರ ಮುಖವನ್ನು ನೋಡುವರು. "ತಿಳಿಯಲಿಲ್ಲ, ಹೋಗಲಿ" ಎಂದು ಸೂಚಿಸಿ ಇಬ್ಬರೂ ನಡೆದು ಹೋಗಿ ಸೋಫಾದ ಮೇಲೆ ಕೂಡ್ರುವರು.]

ಹುಂಬಯ್ಯ : ಗುಂಬಜ್ಜ, ಒಟ್ಟು ನಿನಗೇನನ್ನಿಸ್ತದ?

ಗುಂಬಜ್ಜ : ಇಲ್‌ಕ್ಶನ್‌ದಾಗ ಅನ್ನಿಸೋದು ಸುಳ್ಳು, ಆಗೋದು ಖರೆ.

ಹುಂಬಯ್ಯ : ಈ ಇಲ್‌ಕ್ಶನ್‌ದಾಗ ಒಟ್ಟು ಏನಾಗೋದು? ಹಾಂಗ ಕೇಳಿದ್ರ, ಸರಳಣ್ಣನಷ್ಟು ಬುದ್ಧಿಮತ್ತೆ, ಯಾವ ಹುರಿಯಾಳಿಗೂ ಇಲ್ಲ–(ಗುಂಬಜ್ಜನ ಮುಗುಳ್ನಗೆಯನ್ನು ನೋಡಿ ತಡೆದು) ಅಲ್ಲಂತೀ ಏನು!

ಗುಂಬಜ್ಜ : ಇಲ್‌ಕ್ಶನ್‌ದಾಗ ಬೇಕಾಗೋದು ಬುದ್ಧಿ ಅಲ್ಲ, (Vote) ವೋಟ್ ಉ.

["ಹೌದು ನೋಡು ಗುಂಬಜ್ಜ" ಎನ್ನುತ್ತ ಚದುರಪ್ಪ ಕೆಳಗಿನಿಂದ ಬಂದು—]

ಚದುರಪ್ಪ : ಹೌದು ನೋಡು, ಗುಂಬಜ್ಜ. ಆಂ? ಏಳಿರಿನ್ನು, ಕೆಲಸಕ್ಕ ಸುರೂ ಮಾಡೋಣ. ಹುಂ!

ಹುಂಬಯ್ಯ : ಅಬ್ಬಬ್ಬಬ್ಬ! ಒಳೇ ಖುಶಿವಳಗ ಇದ್ದೀಯಲ್ಲೊ?

ಚದುರಪ್ಪ : ಹುಂ, ಹಿಡಿ ಈ ಸೋಫಾ (ಸೋಫಾ ಎತ್ತಿ ರಂಗದ ನಡುವೆ ಇಡುತ್ತ) ಹದಿನೈದಣೆ ಲಾಭ ಆದ್ರ ಖುಶೀ ಆಗ್ಬಾರ್ದ? ಹುಂ–ಒಂದೊಂದು ಕುರ್ಚೇನೂ ತಗೋರಿ.

ಹುಂಬಯ್ಯ : (ತಿಳಿಯದೆ) ಹದಿನೈದಣೆ ಲಾಭ?

ಚದುರಪ್ಪ : ಒಂದಾಣೆ ಕೊಟ್ರೆ ಹದಿನಾರಾಣೆ ಖುಶಿ ಸಿಕ್ಕಿತೂ ಅಂದ್ರ ಹದಿನೈದಾಣೆ ಫಾಯಿದೆ ಅಲ್ಲ?

[ಇಷ್ಟರಲ್ಲಿ ಸೋಫಾ ಮತ್ತು ಒಂದೆರಡು ಕುರ್ಚಿಗಳನ್ನು ರಂಗದ ಮಧ್ಯದಲ್ಲಿ ಪರಸ್ಪರ ಇದಿರಾಗುವಂತೆ ಇಟ್ಟಿದ್ದಾರೆ. ಸೋಫಾದ ಬೆನ್ನು ಮೇಜಿಗಿದೆ. ಸೋಫಾದ ಮೇಲೆ ಚದುರಪ್ಪನು ಮೇಜಿನ ಮೇಲಿನ ಕಾಗದಗಳನ್ನು ಒಗೆಯುತ್ತ "ಒಂದು ಸಣ್ಣ ಸ್ಟೂಲು ಇಡಿರೊ ನಡುವೆ" ಎನ್ನುವನು. ಗುಂಬಜ್ಜ ಒಂದು ಸ್ಟೂಲನ್ನು ಕುರ್ಚಿ ಸೋಫಾಗಳ ನಡುವೆ ಇಟ್ಟು, ತಾನೊಂದು ಕುರ್ಚಿಯ ಮೇಲೆ ಕೂಡ್ರುವನು. ಆ ಮೇಲೆ ಮೂವರೂ ಸೋಫಾದ ಮೇಲಿನ ಕಾಗದಗಳನ್ನು ಸ್ಟೂಲಿನ ಮೇಲಿಡುವರು. ಖಾಲಿಯಾದ ಸೋಫಾದ ಮೇಲೆ ಚದುರಪ್ಪನು ಕುಳಿತುಕೊಂಡು ಒಳಪಾವಟಿಗೆಗಳನ್ನು ಒಮ್ಮೆ ನೋಡಿ–]

ಚದುರಪ್ಪ : (ಕಳ್ಳದನಿಯಲ್ಲಿ) ಗುಂಬಜ್ಜಾ, ಹೇಳಿದೆಯಾ? (ಗುಂಬಜ್ಜನು ತಲೆತೂಗುವನು) ಯಾಕಂದ್ರ, ಇವನಿಗೆ ಇಲೆಕ್ಶನ್‌ದಾಗ ಹ್ಯಾಂಗ ನಡಿಬೇಕು ಅನ್ನೋದು ತಿಳಿಯೋದಿಲ್ಲ, ತಿಳಿದರೂ ಒಪ್ಪೋದಿಲ್ಲ.

ಹುಂಬಯ್ಯ : (ಕಳ್ಳದನಿಯಲ್ಲಿಯೆ) ಯಾಕರೊ? ದುಡ್ಡು ಖರ್ಚು ಮಾಡ್ಲಿಕ್ಕೆ ತಯಾರಿಲ್ಲೇನು?

ಚದುರಪ್ಪ : (ಅದೇ ದನಿಯಲ್ಲಿ) ಖರ್ಚುಮಾಡ್ಲಿಕ್ಕೆ ಒಲ್ಲೆ ಅನ್ನೋದಿಲ್ಲ ಅವ. ಆದ್ರ ಅಂಥಲ್ಲಿ ಇಂಥಲ್ಲಿ ಕೊಡಬೇಕಾಗ್ತದ, ಇವನ ಸರಳತನಕ್ಕ ಅದು ತಡೆಯೋದಿಲ್ಲ.

ಹುಂಬಯ್ಯ : (ಅಧೈರ್ಯದಿಂದ, ಆದರೂ ಕಳ್ಳದನಿಯಲ್ಲಿ) ಅಂದ್ರ ಮುಂದ ಗತಿ!

ಚದುರಪ್ಪ : ಅದ್ಕೇ ನಾನೂ ಗುಂಬಜ್ಜ ಯುಕ್ತಿ ಮಾಡಿದಿವಿ. ಮತದಾರರಿಗೆಲ್ಲಾ ಒಂದು ಬಿನ್ನಹ ಬರೀ ಅಂತ ಇವನಿಗೆ ಹೇಳೀವಿ, ಛಾಪಿಸೋದಕ್ಕ ಹತ್ತುಸಾವಿರದ ಬಿಲ್‌ಮಾಡು ಅಂತ ಛಾಪಗಾನೀ ಅವನಿಗೆ ಹೇಳೀವಿ . . ತಡಿಯೋ! ಗಾಬರಿ ಆಗಬ್ಯಾಡ. ದುಡ್ಡು ನಂ ಕೈಯ್ಯಾಗ ಬಂತಂದ್ರ ಆಮ್ಯಾಲೆ ಎಲ್ಲೆಲ್ಲಿ ಎಷ್ಟು ಖರ್ಚು ಮಾಡಿದ್ರ ಎಷ್ಟು ಮತ ಸಿಗ್ತಾವ ಅನ್ನೋದನ್ನ ನೋಡಿ ಪರಸ್ಪರ ವ್ಯವಸ್ಥಾ ಮಾಡ್ತೀವಿ. ಮತ್ತ ಇವನ ಲೆಕ್ಚರ ಬ್ಯಾಡ ಪ್ರಾಮಾಣಿಕತನದ ಮ್ಯಾಲೆ.

ಗುಂಬಜ್ಜ : (ಹುಂಬಯ್ಯನಿಗೆ) ನೋಡಿದ್ಯೊ ಇಲ್ಲೊ? ಪ್ರಾಮಾಣಿಕ ಮಂದಿಯನ್ನೇ ಆರಿಸಿರಿ ಅಂತ ನೆಹರು ಹೇಳಿದ, ಕೂತುಬಿಟ್ಟ. ಈಗ ಅಂತಹರನ್ನ ಆರಿಸೋ ಜವಾಬ್ದಾರಿ ನಮ್ಮ ಮ್ಯಾಲೆ ಬಿತ್ತು.

["ಚದುರಪ್ಪಾ, ಗುಂಬಜ್ಜ ಬಂದಾನೇನೊ? ಏ ಚದುರಪ್ಪಾ—" ಎನ್ನುತ್ತ ಸರಳಣ್ಣ ಅವಸರದಿಂದ ಮೇಲೆ ಬಂದು, ಎದುರಿಗೆ ಗುಂಬಜ್ಜನನ್ನೇ ನೋಡಿ, ಸಮಾಧಾನ ತಾಳಿ—]

ಸರಳಣ್ಣ : ಹಾಂ—ಬಂದೀದ್ದ್ಯಾ, ಗುಂಬಜ್ಜ... ಅಲ್ಲಪಾ, ನಾನು ಕಾಂಗ್ರೆಸ ಪಾರ್ಟಿ ಸೇರಿದರೂ ಸೇರಬಹುದು ಅಂತ ಯಾರು ಹೇಳಿದರು?

ಗುಂಬಜ್ಜ : ನಾನೇ ಹೇಳೀನಿ. ಯಾಕ?

ಸರಳಣ್ಣ : ಛೆ! ಎಂಥಾ ಮನುಷ್ಯನೊ ನೀನು! ಬೇಕೆಂತಲೆ ನಾನು ಸ್ವತಂತ್ರ ಹುರಿಯಾಳು ಅಂತ ನಿಂತೀನಿ, ನೀವೂ ನಾನೂ ಕೂಡಿಯೇ ವಿಚಾರ ಮಾಡೀವಿ—

ಗುಂಬಜ್ಜ : (ನಡುವೆಯೆ) ಇಲ್ಲ ಅಂತ ಯಾರ ಅಂದ್ರು?

ಸರಳಣ್ಣ : ಮತ್ತ ನೀನೇ—

ಗುಂಬಜ್ಜ : (ಅವನನ್ನು ಮಾತನಾಡಗೊಡದೆ) ತಡೀಯೊ, ಸರಳಣ್ಣಾ. ನಿನಗ ಎಷ್ಟು ಸಲ ಹೇಳಿಲ್ಲ, ನಂಮ್ಯಾಲೆ ವಿಶ್ವಾಸಿಟ್ಟು ಥಣ್ಣಗ ಕೂಡು ಅಂತ?

ಸರಳಣ್ಣ : ಅಲ್ಲ, ಮತ್ತ, ನೀನೇ ಈಗ ನಾ ಕಾಂಗ್ರೆಸ್ ಸೇರ್ತೀನಿ ಅಂತ—

ಗುಂಬಜ್ಜ : ನಿನ್ನ ಸಲುವಾಗಿ ಯಾರು ಹೇಳಿದರು? (ಸರಳಣ್ಣ ಆಂ ಎಂದು ಬಾಯ್ದೆರೆಯುವನು). ನೀ ನಿನ್ನ ಬಾಯಿಯಿಂದ ಹೇಳೀದ್ದ್ಯೇನು ಕಾಂಗ್ರೆಸ್ ಸೇರ್ತೀ ಅಂತ? (ಸರಳಣ್ಣ— ಇಲ್ಲ). ಇಲ್ಲ ಅಹುದಲ್ಲೊ? ಮುಗೀತಲ್ಲ? ನೀ ಸೇರು, ಬೇಕಾದ್ರ ಬಿಡು. ನನಗೇನೊ ಅನ್ನಿಸ್ತು, ನೀ ಸೇರ್ತೀ ಅಂತ—

ಸರಳಣ್ಣ : (ಚಕಿತನಾಗಿ) ನಿನಗ ಅನ್ನಿಸ್ತು?

ಗುಂಬಜ್ಜ : (ನಕ್ಕು) ಹುಚ್ಚ ಇದ್ದೀ ನೀನು! ನಿನ್ನ ಗೆಳೆಯ ನಾ ಅಹುದಲ್ಲೊ? ನಾ ಹೇಳಿದ್ರ ಜನರಿಗೆ ವಿಶ್ವಾಸ ಕೂಡತದ ಅಹುದಲ್ಲೊ? ಅದ್ಕ ನಾ ಸುದ್ದಿ ಹಬ್ಬಿಸಿಬಿಟ್ಟೆ, ನೀ ಕಾಂಗ್ರೆಸ್ ಸೇರ್ತೀ ಅಂತ ನನಗ ಅನ್ನಿಸ್ತು ಅಂತ.... ಹಂ— ತಡೀ. ಯಾಕ ಅಂತೀಯಾ? ನಿನ್ನಂಥವ ಕಾಂಗ್ರೆಸ್ ಸೇರ್ತಾನ ಅಂದ್ರ ಉಳಿದ ಪಾರ್ಟಿಯವರು ಹೆದರೋದು ಖಾತ್ರಿ. ಆ ಮ್ಯಾಲೆ ತಂ ಪಾರ್ಟಿ ಸೇರ್ತೀ ಏನು ಅಂತ ಅವರು ಕೇಳಲಿಕ್ಕೆ ಬರ್ತಾರ!

ಸರಳಣ್ಣ : ಅಲ್ಲ, ಇಷ್ಟು ತ್ರಾಸ ತಗೊಂಡು ಈ ಸುಳ್ಳು ವ್ಯವಹಾರ ಯಾಕ ಅಂತ—

ಚದುರಪ್ಪ : ನಿನಗ ತಿಳಿಯೋದಿಲ್ಲ ಅಂತ ಹೇಳಿಲ್ಲ? ನೀ ಏನು ಸುಳ್ಳು ಹೇಳ್ಬೇಕಾಗಿಲ್ಲಲ್ಲ? ನಿನ್ನಷ್ಟಕೆ ನೀ ಸರಳ ನಡೆದು ನಮ್ಮನ್ನ ನಂ ಹಾದಿಗೆ ಬಿಡು ಅಲ್ಲ?

ಹುಂಬಯ್ಯ : (ಒಮ್ಮೆಲೆ ನಕ್ಕು) ಹಾಂ ಹಾಂ! ಈಗ ತಿಳೀತು. ಅದ್ಕೇ ಜಗಳ ನಡೆದಿದೆ ಏನು?

ಸರಳಣ್ಣ : (ತಿಳಿಯದೆ) ಜಗಳ? ಏನು? ಎಲ್ಲಿ? (ಎನ್ನುತ್ತ ಸೋಫಾದ ಮೇಲೆ ಕೂಡ್ರುವನು)

ಹುಂಬಯ್ಯ : ಆ ದೊಡ್ಡ ಪಾರ್ಟೀವಳ್ಗ. ಸರಳಣ್ಣ ನಂ ಕಡೆ ಆದರೆ ನೀ ಬಿಡ್ಬೇಕಾಗ್ತದ ಅಂತ ಈಗ ಆರಿಸಿದವನಿಗೆ ಹೇಳಿದರೇನೊ, ಅವ ಸಿಟಿದು ಕೂತಾನ, ಹಾಂಗಿದ್ರ ತಾನೂ ಸ್ವತಂತ್ರ ನಿಲ್ಲತೀನಿ ಅಂತ—

ಗುಂಬಜ್ಜ : ಏ, ಹುಂಬಯ್ಯ, ಇನ್ನೊಬ್ಬರ ಗೊಡವೆ ನಮಗ ಯಾಕ? ನಂ ಕೆಲಸ ನಮಗ.

ಸರಳಣ್ಣ : ನಾನೂ ಅದೇ ಅಂತೀನಿ. ಹಂ—ಅಂಥಾಂಗ ಆ Appeal ಒಂದು ಬರೆದೀನಿ. ಅದನ್ನಿಷ್ಟು ನೋಡಿ ಬಿಡಿರಲ್ಲ? ಅದ್ರೊ ಮುಂಚೆ ಒಂದು ಮಾತು. "ಕರ್ನಾಟಕ ಏಕೀಕರಣವನ್ನು ಕೂಡಲೆ ಕಾರ್ಯದಲ್ಲಿ ತರುವುದು ನನ್ನ ಗುರಿಯಾಗಿದೆ" ಅನ್ನೋ ವಾಕ್ಯ ಅದರೊಳಗೆ ಹಾಕಿಯೆ ಬಿಡ್ಬೇಕಂತೀನಿ.

ಗುಂಬಜ್ಜ : (ತಲೆ ಅಲ್ಲಾಡಿಸುತ್ತ) ಉಹುಂ. ಯಾವುದಕ್ಕೂ ಇಷ್ಟು ಅವಸರ ಇರ್ಬಾರ್ದು, ಇಷ್ಟು ಖಂಡತುಂಡ ಇರ್ಬಾರ್ದು. ಈಗ ತಿಳಿ, ಇಲೆಕ್ಶನ್ ಮುಗೀಲಿಕ್ಕೆ ಇನ್ನೂ ಐದಾರು ತಿಂಗಳು. ಅಷ್ಟರೊಳಗ ಜನರಿಗೇ ಏಕೀಕರಣ ಬ್ಯಾಡಾಯ್ತು ಅಂತ ತಿಳಿ—

ಸರಳಣ್ಣ : (ನಕ್ಕು) ಛೆ! ಎಂಥಾ ಹುಚ್ಚು ಕಲ್ಪನೆ!

ಗುಂಬಜ್ಜ : ಎಂಥಾ ಜನರು ಅಂಥಾ ಕಲ್ಪನೆ. ಅದ್ಕೇ ಹೇಳ್ತೀನಿ. ಪ್ರಸಂಗ ಯಾವ್ದು ಬರ್ತದ ಅಂತ ಹೇಳಲಿಕ್ಕೆ ಬರೋದಿಲ್ಲ, ನೀ ಒಬ್ಬನೆ ಕೈ ಕಟ್ಟಿಕೊಂಡು ಕೂಡಬ್ಯಾಡ. "ಏಕೀಕರಣ ಇಲ್ದೆ ಕರ್ನಾಟಕದ ಉದ್ಧಾರ ಇಲ್ಲ ಅನ್ನೋದು ನನ್ನ ದೃಢ ಅಭಿಪ್ರಾಯ" ಅಂತ ಹಾಕಿ-ಬಿಡು. ಸದ್ಯಕ್ಕ ನಿನ್ನ ಮನಸ್ಸಿನಾಗಿಂದು ಹೇಳಿಧಾಂಗ ಆಯ್ತು; ಮುಂದ ಪ್ರಸಂಗ ಹ್ಯಾಂಗ ಬರ್ತದ ನೋಡಿದ್ರಾಯ್ತು. ಯಾಕರೆಪ?

ಚದುರಪ್ಪ, ಹುಂಬಯ್ಯ : ಅದೇ ಯೋಗ್ಯ.

ಸರಳಣ್ಣ : ಆದ್ರೂ—

ಗುಂಬಜ್ಜ : (ನಡುವೆಯೆ) ಇಲ್ಲಿಯೆ ತಪ್ಪಿದಿ ನೋಡು, ಸರಳಣ್ಣಾ. ಈಗಿನಿಂದ ರೂಢಿ ಮಾಡಿಕೊ. ನಾಲ್ಕು ಮಂದಿ ಕೂತೀವಿ, ವಿಚಾರ ಮಾಡಿದಿವಿ, ಮೂರ ಮಂದಿ ಬಹುಮತ ಆಯ್ತು; ಒಪ್ಪಬೇಕು ನೀ.

ಸರಳಣ್ಣ : (ನಕ್ಕು) ಹುಂ—ಆಗ್ಲಿ. ಏನಾದ್ರೂ ಶಬ್ದಗಳ ಹೆಚ್ಚು-ಕಡಿಮೆ. ಆದ್ರೆ ತತ್ತ್ವದೊಳಗ ಭೇದ ಬಂದ್ರೆ ಮಾತ್ರ ನಾ ಒಪ್ಪೋವನ ಅಲ್ಲ.

[ಒಮ್ಮೆಲೆ ಟೆಲಿಫೋನಿನ ಗಂಟೆ. ಗುಂಬಜ್ಜನು ತಟ್ಟನೆ ಎದ್ದು ಹೋಗಿ ಅದನ್ನೆತ್ತಿ ಮಾತನಾಡತೊಡಗುವನು.]

ಗುಂಬಜ್ಜ : ಆಂ?.. ಯಾರು ಬೇಕಂದ್ರಿ?.. ಹಂ.. ಹೌದು.. ಯಾರಂದ್ರಿ?.. ಪೇಪರು? ಯಾವ ಪೇಪರು?.. ಆಂ? ಏನು? .. ಯಾರ ಗಂಡ ಅಂದ್ರಿ?.. ಹಂ ಹಂ.. ನಿಂ ಪೇಪರದ ಹೆಸರು "ಶೋಷಕರ ಗಂಡ" ಅಂತ?.. ಹುಂ.. ಹುಂ.. ಹುಂ — ನೀವು ಹೇಳ್ರಿ ಮೊದಲು ಹೇಳೋದನ್ನ.. ಹಂ.. ಹಂ.. ಏನು?.. ಇರ್ಬಹುದು.. ಯಾರ ಜೋಡಿ?.. ರಾಯರ ಜೋಡೀನ? ಅವರೀಗ ಕೆಲಸದಾಗ ಇದ್ದಾರ... ಏನಂದ್ರಿ?.. ಒಳ್ಳೇ ಕೆಲಸ!.. ಊರೊಳಗ ಎದ್ದ ಸುದ್ದಿಗೆಲ್ಲಾ ಅವರೇನು ಮಾಡ್ಬೇಕು?.. ಏನಂದ್ರಿ?.. ಪೇಪರ ನಡಸ್ತೀರಿ, ಸುದ್ದಿ ಜವಾಬ್ದಾರಿ ನಿಮ್ಮದು.. ಇಲ್ಲಿಲ್ಲ—ನಾವೂ ಅವರೂ ಕೂಡಿಯೆ ಕೆಲಸದೊಳಗ ಇದ್ದೀವಿ... ನಮಸ್ಕಾರ... ಕ್ಷಮಿಸಿರಿ.. ನಮಸ್ಕಾರ ಅಂದೆ. (ಎಂದು ಇಟ್ಟುಬಿಡುವನು).

ಗುಂಬಜ್ಜ: (ಮುಂದೆ ಬರುತ್ತ, ತನ್ನಷ್ಟೇ ನೋಡುವ ಚದುರಪ್ಪನಿಗೆ) ಕೇಳಿದಿ ಇಲ್ಲೊ?

ಸರಳಣ್ಣ: ಯಾರು ಅವರು?

ಗುಂಬಜ್ಜ: (ಮೊದಲಿನ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತ) ಸೋಶಲಿಸ್ಟ ಪಾರ್ಟಿ ಪೇಪರದವರು ಅಂತ.

ಹುಂಬಯ್ಯ: ಅವನಿಗೇನು ಬೇಕಾಗಿತ್ತು?

ಗುಂಬಜ್ಜ: ಹ್ಯಾಂಗ ಪೇಪರ ನಡಸ್ತಾರವೊ ಏನ್ಮಣ್ಣೊ! ಪೇಪರ ನಡಿಸೋವವರು ತಾವು, ಸುದ್ದಿ ಖರೇನೊ ಇಲ್ಲೊ ಅನ್ನೋದನ್ನ ಹೇಳ್ಬೇಕಂತ ನಾವು!

ಸರಳಣ್ಣ: (ಕುತೂಹಲ ಹೆಚ್ಚಿ) ಯಾವ ಸುದ್ದಿ?

ಗುಂಬಜ್ಜ: ಸರಳಣ್ಣ ಅವರು ಸೋಶಲಿಸ್ಟ ಪಾರ್ಟಿ ಸೇರ್ತಾರಂತ.

ಸರಳಣ್ಣ: (ಚಕಿತನಾಗಿ) ಏನು?

ಹುಂಬಯ್ಯ: (ಮೋಜು ಎನ್ನಿಸಿ) ಏನು? ಆಂ? ಹಹಹ! ಈಗ ಈ ಸುದ್ದಿ ಎದ್ದಿತ? ಹಹಹ! ಹಹಹಹ!

ಸರಳಣ್ಣ: (ಕನಲಿ, ಹುಂಬಯ್ಯನಿಗೆ) ಏ, ತಡಿಯೋ! (ಗುಂಬಜ್ಜನಿಗೆ) ಏನದು? ನಾ ಸೊಶಲಿಸ್ಟ ಪಾರ್ಟಿ—

ಚದುರಪ್ಪ: (ನಡುವೆಯೆ) ಏ, ಸರಳಣ್ಣಾ, ನೀ ಏನು ಮುನ್ನೋಡಿ ನಿನ್ನ ಕೆಲಸ ಮಾಡುವವನೊ, ಏನು ಊರಾಗ ಎದ್ದ ಸುದ್ದೀ ಜೋಡಿ ಗುದ್ದಾಡುವವನೋ?

ಸರಳಣ್ಣ: (ಸಿಟ್ಟಿನಿಂದ) ಛೆ! ಇದೇನಿದು? ನಾ ಅಂದ್ರ ಏನು ಹುಲ್ಲು ಕಡ್ಡಿ ಅಂತ ತಿಳಿದಾರೇನು, ಗಾಳಿ ಬೀಸಿಧಾಂಗ ಬಾಗ್ಲಿಕ್ಕೆ? ಸೊಶಲಿಸ್ಟ ಪಾರ್ಟಿ ಅಂತ! ಯಾರ ಅವ? (ಎದ್ದು) ಎಲ್ಲಿ ಆಫೀಸಿನಾಗ ಇದ್ದಾನೇನು? ಕೇಳಿಯೆ ಬಿಡ್ತೀನಿ ಅವನ್ನ—

[ಮತ್ತೆ ಟೆಲಿಫೋನಿನ ಗಂಟೆ ಬಾರಿಸುವುದು. ಸರಳಣ್ಣ ಒಮ್ಮೆಲೆ ಚಕಿತನಾಗಿ ತಡೆಯುವನು. ಉಳಿದ ಮೂವ್ವರೂ ಒಬ್ಬರೊಬ್ಬರನ್ನು ಮುಗುಳ್ನಗೆಯಿಂದ ನೋಡುವರು. ಅದನ್ನು ನೋಡಿ ಸರಳಣ್ಣ ಸಿಟ್ಟಿನಿಂದಲೆ ಟೆಲಿಫೋನಿನ ಕಡೆಗೆ ನಡೆದು ಹೋಗಿ ಅದನ್ನೆತ್ತಿ—]

ಸರಳಣ್ಣ: (ಟೆಲಿಫೋನಿನಲ್ಲಿ ಸಿಟ್ಟಿನ ದನಿಯಲ್ಲಿ) ಆಂ? .... ಏನು? ಯಾರು?.. ಹುಂ.. ನಾನೇ.. ನೀವು ಯಾರು?.. ಯಾರು? ಭೂತ?.... ಏನಂದ್ರಿ? ಗುದ್ದಲೀಭೂತ? .... ಅಂದ್ರ? .... ಏನದು? ಏನು? .... ಏನೇನು? .... ಕಮ್ಯುನಿಸ್ಟ ಪಾರ್ಟಿ! .... ಏನದು? ಹುಂ- ಹುಂ– (ಟೆಲಿಫೋನನ್ನು ಜಾಡಿಸುತ್ತ) ಇಲ್ಲಿ ನೋಡಿರಿ-ಏ-ಎಲ! – ಬಂದ್ಮಾಡಿದನಲ್ಲೊ? ಏ-

ಚದುರಪ್ಪ: ಕಮ್ಯುನಿಸ್ಟ ಪಾರ್ಟಿ ಅಂದನಲ್ಲ?

ಸರಳಣ್ಣ: (ನಿಂತಲ್ಲಿಂದಲೆ) ದುಷ್ಟರು! ಕಮ್ಯುನಿಸ್ಟ ಪಾರ್ಟಿ ಸೇರ್ತಿನಂತ ನಾ. (ಟೆಲಿಫೋನಿನಲ್ಲಿ) ಹಲೋ–ಏ–ಹಲೊ–!

ಗುಂಬಜ್ಜ: ಎಲ ನಿನ! ನೀನು "ಹುಂ-ಹುಂ" ಅಂದಿ ಅಂತ ಅವ ಟೆಲಿಫೋನ್ ಬಂದ್ಮಾಡಿದನೊ ಏನೊ!

ಸರಳಣ್ಣ: ನಾನೊಂದು ಹೇಳಿಕೆಯನ್ನೆ ಹೊರಡಸ್ತೀನಿ.

ಗುಂಬಜ್ಜ: ಏನಂತ?

ಸರಳಣ್ಣ: ನಾನು ಸ್ವತಂತ್ರ ಹುರಿಯಾಳು ಆಗುವವ, ಯಾವ ಪಾರ್ಟಿನೂ ಸೇರೋದಿಲ್ಲ ಅಂತ.

ಚದುರಪ್ಪ: ಯಾವುದಾದರೂ ಪಾರ್ಟಿ ಸೇರ್ಬೇಕು ಅಂತ ನಿನ್ನ ವಿಚಾರೇನು?

ಸರಳಣ್ಣ: ಛೆ—ಎಂದಿಗೂ ಇಲ್ಲ.

ಗುಂಬಜ್ಜ: ಅಂದರ್‍ಯಾಕ ಗೋಳಾಡ್ತೀ? ಬೇಕಾದ ಸುದ್ದಿ ಎಬ್ಬಿಸೋವಲ್ಲರ್‍ಯಾಕ?

ಹುಂಬಯ್ಯ: ಇವರಿಗೆಲ್ಲಾ ನನ್ನ ಯುಕ್ತೀನೇ ಮದ್ದು.

ಚದುರಪ್ಪ: (ಚಕಿತನಾಗಿ) ನೀ ಎಂಥಾ ಯುಕ್ತಿ ಹುಡುಕಿದೆಯೊ?

[ಟೆಲಿಫೋನಿನ ಗಂಟೆ ಮತ್ತೆ ಬಾರಿಸುವದು.]

ಸರಳಣ್ಣ: (ಸಿಟ್ಟಿನಿಂದ) ಈ ಸಲ ಹೇಳಿಯೆ ಬಿಡ್ತೀನಿ—

ಗುಂಬಜ್ಜ: (ಅವನನ್ನು ತಡೆದು) ನೀನು ಕೂಡು. ಆಗಲೇ ಒಮ್ಮೆ ನಿನ್ನ "ಹುಂ ಹುಂ" ಅಂದು ಫೋಟಾಳಿ ಮಾಡಿದಿ. ಕೂಡು ನೀನು. ನಾನು ನೋಡಿಕೋತೀನಿ. (ಟೆಲಿಫೋನಿನ ಹತ್ತಿರ ಹೋಗಿ ಅದನ್ನೆತ್ತಿ) ಹೆಲೊ. . ಹಂ. . ಹೌದು. . ಸರಳಣ್ಣರಾಯರ ಮನೀ ಇದು. . . ಏನಂದ್ರಿ? . . ನಾನು — ಯಾರು? ನೀವು ಯಾರು ಹೇಳರಿ ಮೊದಲು. . (ಸರಳಣ್ಣ ಏಳುತ್ತಿರುವುದನ್ನು ನೋಡಿ, ಅವನನ್ನು ತಡೆಯಲು ಮುಂದೆ ಬರುವನು. ಟೆಲಿಫೋನನ್ನು ಕಿವಿಗೆ ಹಚ್ಚಿಕೊಂಡು, ಸರಳಣ್ಣನಿಗೆ ಕೈಸನ್ನೆ ಮಾಡುತ್ತ, ನಡೆದು ಮೇಜಿನ ದಂಡೆಗೆ ಬಂದು ಸರಳಣ್ಣನನ್ನು ಒಂದು ಕೈಯಿಂದ ಸೋಫಾದ ಮೇಲೆ ಕುಳ್ಳಿರಿಸುತ್ತ, ಟೆಲಿಫೋನಿನಲ್ಲಿ) ಹುಂ. . ಏನು? . . ಏ—ನಂ—ದ್ರಿ? . . ಸಾನಿ? ಯಾವ—

ಸರಳಣ್ಣ: (ಆವೇಶದಿಂದ ಏಳುತ್ತ) ಇಲ್ಲಿ ತಾರೊ, ಇವರ್ನೆಲ್ಲಾ ನೋಡಿಯೆ ಬಿಡ್ತೀನಿ.

ಗುಂಬಜ್ಜ: (ಅವನನ್ನೇ ಕೈಯಿಂದ ತಡೆಯುತ್ತ, ಟೆಲಿಫೋನಿನಲ್ಲಿ) ಹಂ–ಹೀಂಗ ಸ್ಪಷ್ಟ ಮಾತಾಡಿರಲ್ಲ? (ಮಿಕ್ಕವರಿಗೆ) ಕಿಸಾನ-ಅಂತ.

ಹುಂಬಯ್ಯ: ಹಹಹ! ಈ ಪಾರ್ಟಿ ಏನು— (ಗುಂಬಜ್ಜನ ಕೈಸನ್ನೆಗೆ ತಡೆಯುವನು).

ಗುಂಬಜ್ಜ: (ಟೆಲಿಫೋನಿನಲ್ಲಿ) ಏನಂದ್ರಿ? . . ಇರ್ಬಹುದು . . ಹೇಳಿ ಕೇಳಿ ಸ್ವತಂತ್ರ ಇದ್ದಾರ, ತಮ್ಮ ಮನಸಿಗೆ ಬಂಧಾಂಗ ಮಾಡ್ತಾರ . . . ಕೇಳರಿ ಅವರಿಗೆ— (ಸರಳಣ್ಣನು ಏಳಬೇಕೆನ್ನಲು, ತಡೆದು ಟೆಲಿಫೋನಿನಲ್ಲಿ) ಓಹೊ, ಕೇಳಿರಲ್ಲ? . . ಏನಂದ್ರಿ? . . ಈಗೇ ಕೇಳ್ತೀರಾ? . . ಅವರೀಗ ಮುಂಬಯಿಯೊಳಗಿದ್ದಾರ, ಅಲ್ಲಿ ಟೆಲಿಫೋನಿನ ನಂಬರ ಗೊತ್ತಿಲ್ಲ . . ನಮಸ್ಕಾರ. (ಇಟ್ಟುಬರುವನು).

[ಒಂದು ನಿಮಿಷ ಯಾರೂ ಮಾತನಾಡುವದಿಲ್ಲ].

ಸರಳಣ್ಣ: ಏನು? ಕಿಸಾನ ಮಜದೂರ ಪಾರ್ಟಿ ಸೇರ್ತೀನಿ ಅಂತ ಸುದ್ದಿ ಏನು?

ಹುಂಬಯ್ಯ: (ಎದ್ದು) ಗುಂಬಜ್ಜ, ನಮ್ಮ ಯುಕ್ತಿಯ ಪ್ರದರ್ಶನ ಮಾಡಿಯೆ ಬಿಡೋಣ.

ಚದುರಪ್ಪ: (ಕುತೂಹಲದಿಂದ) ಏನೊ ಅದು? ಒಂದೇ ಸವನೆ ಹೇಳತಾ ಇದ್ದಿ.

ಸರಳಣ್ಣ: (ನೊಂದವನಂತೆ) ಏ, ಗುಂಬಜ್ಜಾ, ಇವೆಲ್ಲಾ ಸುದ್ದಿ ನೀನೇ ಹಬ್ಬಿಸಿದಿ ಏನು?

[ಟೆಲಿಫೋನಿನ ಗಂಟೆ]

ಚದುರಪ್ಪ: (ಮುಂದಾಗಿ ಹೋಗಿ ಅದನ್ನೆತ್ತಿ) ಹೆಂ — ಏನು ? — ಯಾರು ?—ಹಿಂದು ಮಹಾಸಭಾನ ? . . ಯಾರ್ಬೇಕು ನಿಮಗ ? . . ಓಹೊ ! . . ಇದು ಪ್ರಧಾನಮಂತ್ರಿಯವರ ಮನೆ . . ನಿಮಗ ನಂಬರ ತಪ್ಪಿತು . . ನಮಸ್ಕಾರ (ಇಟ್ಟು ಬಿಡುವನು).

ಚದುರಪ್ಪ : (ಹುಂಬಯ್ಯನಿಗೆ) ನಿನ್ನ ಯುಕ್ತಿ ಏನಪ ?

ಸರಳಣ್ಣ : (ಮೊದಲಿನಂತೆ) ಛೆ! ಇದೇನು ತೀರಾ ಅಸಹ್ಯ !

ಹುಂಬಯ್ಯ : ಇಲ್ಲಿ ನೋಡು, ಸರಳಣ್ಣಾ. ಸಹ್ಯ – ಅಸಹ್ಯ ನೋಡತಾ ಕೂತಿ ಅಂದ್ರ ಇಲೆಕ್ಶನ್ ಬಿಟ್ಟುಬಿಡು. ಇಲೆಕ್ಶನ್ ಬೇಕಾಗಿತ್ತು, ಕೆಲಸ ನಮಗ ಬಿಟ್ಬಿಡು. ಸುದ್ದಿ ಎಬ್ಬಿಸೋವವರು ಎಬ್ಬಿಸಲಿ. ಅವರ್ನ ಎದುರಾಗಲಿಕ್ಕೆ ನಾನು ಗಟ್ಟಿ ಇದ್ದೀನಿ. ಇದು ನೋಡಿರಿ, ನೋಡಿದಿರಾ ? ಚದುರಪ್ಪ ಕೇಳಿದ, ನಾ ಇಂಥಾ ವೇಷ ಯಾಕ ಮಾಡೀನಿ ಅಂತ. ಹೇಳ್ತೀನಿ ತಗೋರಿ. . . . ಹೇಳೋದೇನು ? ನಿಮಗ ಪಾಠನೆ ಕಲಿಸ್ತೀನಿ (ಎನ್ನುತ್ತ ಮೇಜಿನ ಹಿಂದಿದ್ದ ಕುರ್ಚಿಯ ಬದಿಗೆ ಬಂದು ನಿಲ್ಲುವನು). ಏಳಿರಿ, ನನಗ ಇದಿರಾಗೆ ಕೂಡಿರಿ ಎಲ್ಲಾರು. (ಚದುರಪ್ಪ ನಗುತ್ತ, ಸರಳಣ್ಣ ಚಕಿತನಾಗಿ, ಎದ್ದು ಇದಿರಾಗಿ ಕುಳಿತುಕೊಳ್ಳುವರು). ಇದು ನೋಡಿರಿ ನನ್ನ ವೇಷ. ಈ ವೇಷ ಯಾಕ ಅಂತೀರಿ ? ನಾನು ಸ್ವತಂತ್ರ. ಬೇಕಾಧಾಂಗ ವೇಷ ಮಾಡಬಲ್ಲೆ. ನೋಡಿದಿರಾ? ತಡೀರಿ (ರುಮಾಲನ್ನೂ ಕೋಟನ್ನೂ ತೆಗೆಯುವನು. ರುಮಾಲದ ಕೆಳಗೆ ಗಾಂಧಿಟೋಪಿ, ಕೋಟದೊಳಗೆ ನೆಹರೂ ಶರ್ಟು) ನೋಡಿರಿ. ಇನ್ನೂ ತಡೀರಿ (ಮೇಜಿನ ಹಿಂದೆ ಪ್ಯಾಂಟನ್ನು ಸರಿಸಿ ಒಗೆಯಲು ಒಳಗೆ ಖಾದೀ ಧೋತರ). ನೋಡಿದಿರಾ ? ಯಾಕ ಅಂತೀರಾ ? ಕೆಲವು ಮಂದಿ ಇದನ್ನ ನೋಡಿಯೆ Vote (ಮತ)ಕೊಡ್ತಾರ. ಇಷ್ಟು ಸ್ವಲ್ಪದರಾಗ ಅವರ ಸಮಾಧಾನ ಆಗೋವಾಗ ನಮ್ಮದೇನು ಹೋಗ್ತದ ?

ಸರಳಣ್ಣ : ಛೆ ! ಇದೇನು ? ಹುಡುಗಾಟ —

ಹುಂಬಯ್ಯ : ತಡೀಯಪ್ಪ, ಇನ್ನೂ ಮುಗಿದಿಲ್ಲ ವೈರಾವಣನ ವೇಷಾಂತರ ಮಹಿಮಾ. ಈ ವೇಷ ನಿನಗ ಹುಡುಗಾಟ ಅನ್ನಿಸ್ತಿಲ್ಲ. ಆಗಲಿ ಇದನ್ನ ನೋಡು ಹಾಗಾದರೆ (ತಲೆಯ ಮೇಲಿನ ಟೊಪ್ಪಿಗೆ ತೆಗೆಯುವನು, ತಲೆಯತುಂಬ ಎಂಬ ಅಸ್ತವ್ಯಸ್ತ ಉದ್ದ ಬೆಳೆದ ಕೂದಲು; ಉಟ್ಟ ಧೋತರ ತೆಗೆದು ಬಿಸಾಡುವನು, ಕೆಳಗೆ ಶುಭ್ರ ಪೈಜಾಮಾ) ನೋಡಿದಿಯಾ ! (ಗುಂಬಜ್ಜನಿಗೆ) ಯಾರದೊ ಗಂಡ ಅಂದನಲ್ಲೊ ?

ಗುಂಬಜ್ಜ : ಶೋಷಕರ ಗಂಡ—

ಹುಂಬಯ್ಯ : ಹೆಂ– ಶೋಷಕರ ಗಂಡ, ಅರ್ಥಾತ್ ಸಮಾಜವಾದಿ ಪ್ರಚಂಡ ನಾನು — (ಚದುರಪ್ಪ ನಗಲು ಗಾಂಭೀರ್ಯದಿಂದ) ಯಾರವರು ನಕ್ಕವರು ? ಓಹೊ ! ಈ ವೇಷ ಎಂದರೆ ನೀವು ತಿರಸ್ಕಾರದಿಂದ ನಗುವಿರಲ್ಲವೆ ? ತಿಳಿಯಿತು ನಿಮ್ಮ ಸ್ವರೂಪ, ತಡೆಯಿರಿ. [ನೆಹರು ಶರ್ಟನ್ನು ತೆಗೆಯುವನು. ಕೆಳಗೆ ಕೆಂಪು ಬಣ್ಣದ ಅರ್ಧ

ತೋಳ್ಳಳ ಸೊಂಟದುದ್ದ ಕಿರಿ ಒಳ ಅಂಗಿ. ಪೈಜಾಮೂ ಕಳೆದೊಗೆಯುವನು. ಕೆಳಗೆ ಕೆಂಪುಬಣ್ಣದ ಹಾಫ್ ಪ್ಯಾಂಟು).

ಚದುರಪ್ಪ : (ನಗೆಯಿಂದ) ಭಲೆ! ಭಲೆ! ಹಹಹ! (ನಗೆಹೆಚ್ಚಾಗಿ) ಹಹಹ! ಡೆಮಾಕ್ರಸಿಯ ವಸ್ತ್ರಾಪಹರಣ! ಹಹಹ!

ಸರಳಣ್ಣ : (ವೈಲಿಗೆಯಾದಂತೆ ಎದ್ದು) ಮು ಗಿ ಯಿ ತಿ ಲ್ಲೊ ನಿನ್ನ ಮಂಗಾಟ?

ಹುಂಬಯ್ಯ : (ಹುಸಿ ರೇಗಿನಿಂದ) ಏನಂದೆ? ಮಂಗಾಟ? ನಿಮಗೆ ಮಂಗಾಟವಾಯಿತೆ? ನಮ್ಮ ಹೊಟ್ಟೆಯ ಪ್ರಶ್ನೆ ನಿಮಗೆ ಮಂಗಾಟ? ತಡೆಯಿರಿ (ಎನ್ನುತ್ತ ಕಿರಿಶರ್ಟನ್ನು ತೆಗೆದು ಬರಿಮೈಯ ಹೆಗಲಮೇಲೆ ಅದನ್ನೊಗೆದು, ಸಡ್ಡು ಹೊಡೆದು) ನಾನು ಯಾರೆಂದು ತಿಳಿದಿರುವಿ?

ಸರಳಣ್ಣ : (ಬೆರಗಾಗಿ) ಏನೊ ಇದು?

ಹುಂಬಯ್ಯ : (ದಣಿದವನ ದನಿಯಲ್ಲಿ) ಕಿಸಾನ-ಹೆಹೆ (ದನಗಳನ್ನು ಹೊಡೆಯುವವನಂತೆ ಮಾಡುವನು).

ಚದುರಪ್ಪ: ಭಲೆ! ಹ ಹ ಹ!

ಹುಂಬಯ್ಯ: (ಇಳಿದನಿಯಲ್ಲಿ) ಮಜದೂರ (ಎಂದು ಕುರ್ಚಿಯನ್ನು ಎತ್ತಿಕೊಂಡು ತಲೆಯ ಮೇಲಿಟ್ಟುಕೊಳ್ಳುವನು).

ಚದುರಪ್ಪ: ಶಹಾಬ್ಬಾಸ್!

ಹುಂಬಯ್ಯ: (ಅಳುದನಿಯಲ್ಲಿ) ಪ್ರಜಾ (ಎಂದು ನಿತ್ರಾಣನಂತೆ ಕುಕ್ಕರಿಸುವನು).

ಸರಳಣ್ಣ: (ಅವನನ್ನು ಒಂದು ನಿಮಿಷ ದಿಟ್ಟಿಸಿ, ಹುಂ· ಎಂದು ಟೆಲಿಫೋನಿನ ಕಡೆ ನಡೆಯುವನು).

ಚದುರಪ್ಪ: (ಹೆದರಿಕೆಯ ದನಿಯಲ್ಲಿ) ಏ–ಯಾಕೊ? ಏನ್ಮಾಡ್ತೀ?

ಸರಳಣ್ಣ: ಟೆಲಿಫೋನ್ ಮಾಡ್ತೀನಿ.

ಚದುರಪ್ಪ: ಯಾರಿಗೊ?

ಗುಂಬಜ್ಜ: ಏನಂತ?

ಹುಂಬಯ್ಯ: ಈಗ ಯಾಕ?

ಸರಳಣ್ಣ: (ಚದುರಪ್ಪಗೆ) ಯಾರಿಗೆ ಅಂದ್ರ, ಇಂಗ್ಲಂಡಕ. (ಗುಂಬಜ್ಜನಿಗೆ) ಏನಂತ ಅಂದ್ರ, ನಿಮ್ಮ ಡೆಮಾಕ್ರಾಸಿ ಬ್ಯಾಡ ಅಂತ. (ಹುಂಬಯ್ಯನಿಗೆ) ಈಗ ಯಾಕ ಅಂತೀಯಾ? ತಡೆದರ ಬುದ್ಧಿಭ್ರಂಶ ಆದೀತು ಅಂತ ಹೆದರಿಕೆ.

ಗುಂಬಜ್ಜ: (ಅವನನ್ನು ತಡೆದು) ತಿಳೀತು ಬಿಡು. (ಉಳಿದ ಇಬ್ಬರಿಗೆ) ಇವನಿಗೆ ಏನಾಗೇದ ಅಂತೀರಿ?

ಇಬ್ಬರೂ: (ಪಾಠ ಒಪ್ಪಿಸುವ ಸಾಲೆಯ ಹುಡುಗರಂತೆ) ಇಲೆಕ್ಶನ್‌ದ ಜ್ವರ ಏರೇದರಿ. . (ಕೂಡಲೆ ಮುವ್ವರೂ ನಗುವರು. ಒಂದು ನಿಮಿಷ ಅವರನ್ನು ದಿಟ್ಟಿಸಿದ ಸರಣ್ಣನ ಮುಖದಲ್ಲಿಯೂ ಮುಗುಳ್ನಗೆ ಮೂಡುವುದು.)

(ತೆರೆ)

"ನಾನು ಹೇಳಿದ್ದನ್ನೇ ಯಾವಾಗಲೂ ಮಾತಿಲ್ಲದೆ ಒಪ್ಪಿಕೊಳ್ಳುವವರೊಡನೆ ಸಂಭಾಷಣೆ ನನಗೆ ರುಚಿಸುವುದಿಲ್ಲ. ಪ್ರತಿಧ್ವನಿಯೊಡನೆ ಸರಸವಾಡುವುದು ಸ್ವಲ್ಪ ಹೊತ್ತು ತಮಾಷೆಯೆನಿಸುವುದು ನಿಜ. ಆದರೆ ಆಮೇಲೆ ಬೇಸರಿಕೆ ಬರುವುದು ಖಂಡಿತ."

—ಕಾರ್ಲೈಲ್

ಪ್ರೊ. ಎಸ್. ಚನ್ನಬಸಪ್ಪ
ಅವರಿಂದ

ರೂಪಾಯಿಯ ಬೆಲೆ : ಪುನಃ ಏರಿಸುವುದು ಅವಶ್ಯವೆ ?

೧೯೪೯ರಲ್ಲಿ ಬ್ರಿಟನ್ ಮತ್ತು ಇತರ ರಾಷ್ಟ್ರಗಳನ್ನನುಸರಿಸಿ ಭಾರತವೂ ತನ್ನ ನಾಣ್ಯದ ವಿನಿಮಯ ಬೆಲೆಯನ್ನಿಳಿಸಿತು. ಅದರಿಂದ ಒಳ್ಳೆಯದಾಯಿತೆ, ಕೆಟ್ಟದ್ದೆ ? ಈಗ ಪುನಃ ಬೆಲೆಯೇರಿಸಬೇಕೆಂದು ಸೂಚಿಸಲಾಗುತ್ತಿದೆ. ಹೀಗೆ ಮಾಡಿದರೆ ಲಾಭವಾದೀತೆ, ನಷ್ಟವೆ ? ಮೈಸೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರಾಧ್ಯಾಪಕರಾದ ಲೇಖಕರು ಈ ಪ್ರಶ್ನೆಯನ್ನು ಚರ್ಚಿಸಿದ್ದಾರೆ.

೧೯—೯—೧೯೪೯ ನೇ ದಿನ ಬ್ರಿಟನ್ ತನ್ನ 'ಪೌಂಡ್' ಹಣದ 'ವಿನಿಮಯದ ದರ'ವನ್ನು ೪ ಡಾಲರ್ ೩ ಸೆಂಟ್‌ಗಳಿಂದ ೨ ಡಾಲರ್ ೮೦ ಸೆಂಟ್‌ಗಳಿಗೆ ಇಳಿಸಿಬಿಟ್ಟಿತು. ಅದೇ ದಿನ ಭಾರತವೂ ತನ್ನ ರೂಪಾಯಿಯ 'ವಿನಿಮಯದ ದರ'ವನ್ನು ೩೦¼ ಸೆಂಟ್‌ಗಳಿಂದ ೨೧ ಸೆಂಟ್‌ಗಳಿಗೆ ಇಳಿಸಿಬಿಟ್ಟಿತು. ಇವನ್ನನುಸರಿಸಿ ಇನ್ನೂ ೨೬ ರಾಷ್ಟ್ರಗಳು ತಮ್ಮ ತಮ್ಮ 'ಹಣದ ವಿನಿಮಯದ ದರ'ವನ್ನು ಇಳಿಸಿದವು. ಆದರೆ ನಮ್ಮ ನೆರೆಯ ಪಾಕಿಸ್ಥಾನ ಮಾತ್ರ ತನ್ನ 'ಹಣದ ವಿನಿಮಯದ ದರ' ಇದ್ದಂತೆಯೇ ಇರುವುದೆಂದು ತಿಳಿಸಿಬಿಟ್ಟಿತು. ಅಂದು ಹಠಾತ್ತಾಗಿ ಸಂಭವಿಸಿದ ಈ ಘಟನೆಯು ಇಂದೂ ವಾಚಕರಿಗೆ ಚನ್ನಾಗಿ ಜ್ಞಾಪಕವಿದೆ.

ಪರಿಣಾಮವೇನಾಯಿತು ?

ಅಂದೇ ತಜ್ಞರು ವಾದಿಸಿದ್ದಂತೆ ಇದರಿಂದ ಬ್ರಿಟನ್ ಮತ್ತು ಭಾರತ ಎರಡು ರಾಷ್ಟ್ರಗಳಿಗೂ ಒಳ್ಳೆಯದಾಯಿತು. ಬ್ರಿಟನ್ನಿನ ಆ ಹದಗೆಟ್ಟದ್ದ ಆರ್ಥಿಕ ಪರಿಸ್ಥಿತಿ ಹಸನಾಯಿತು. 'ಅಹಿತ' ವಾಗಿದ್ದ 'ಕೊಡತಕ್ಕೊಳ್ಳುವ ಶಿಲ್ಕು' ೬ ತಿಂಗಳೊಳಗೇ 'ವಿಹಿತ' ವಾಗಿ ಪರಿವರ್ತನೆಯಾಯಿತು. ಮಹಾವ್ರಣವಾಗಿ ಪರಿಣಮಿಸಿದ್ದ ಡಾಲರ್ ಹಣದ ಕೊರತೆಯು ಎಂದೋ ನೀಗಿಹೋಯಿತು. 'ಸ್ಟರ್ಲಿಂಗ್ ಕ್ಷೇತ್ರ' ದ 'ಡಾಲರ್ ನಿಧಿ' ಈಗ ಸುಮ್ಮನೆ ಬೆಳೆಯುತ್ತಿದೆ. ಉದಾಹರಣೆಗಾಗಿ ೧೯೪೯ ರಲ್ಲಿ ಈ 'ಡಾಲರ್ ನಿಧಿ' ಕೇವಲ ೧೩೨೦,೦೦೦,೦೦೦ ಡಾಲರ್‌ಗಳಷ್ಟು ಮಾತ್ರವೇ ಇತ್ತು. 'ಸ್ಟರ್ಲಿಂಗ್ ಕ್ಷೇತ್ರ' ವು ೧೫೩೨,೦೦೦,೦೦೦ ರಷ್ಟು 'ಡಾಲರ್ ಕೊರತೆ'ಯಿಂದ ನರಳುತ್ತಿತ್ತು. ಆದರೆ ೧೯೫೦ ರ ವೇಳೆಗೆ ಆ ಕೊರತೆ ಅಷ್ಟೂ ಮಾಯವಾದದ್ದಲ್ಲದೆ ೮೦೫,೦೦೦,೦೦೦ ಡಾಲರುಗಳಷ್ಟು ಹಣವು ನಿಧಿಗೇ ಕೂಡಿಬಂತು. ೧೯೫೦ರ ಕೊನೆಯಲ್ಲಿ ಬ್ರಿಟನ್ನಿನ 'ಡಾಲರ್ ನಿಧಿ' ಯು ೩,೩೦೦,೦೦೦,೦೦೦ ಡಾಲರಗಳಷ್ಟು ಬೆಳೆಯಿತು. ಇನ್ನೂ ಬೆಳೆಯುತ್ತಲೇ ಇದೆ. ೫,೦೦೦,೦೦೦,೦೦೦ ಡಾಲರಿನ ಮಟ್ಟವನ್ನು ಮುಟ್ಟುವುದರಲ್ಲಿದೆ ಯೆಂದೂ ತಿಳಿದುಬರುತ್ತದೆ.

ಭಾರತ

೧೯೪೯ ರ ಸಪ್ಟೆಂಬರ ಕೊನೆಯಲ್ಲಿ ಭಾರತದ 'ಕೊಡತಕ್ಕೊಳ್ಳುವ ಶಿಲ್ಕು' ೨೪೮.೮ ಕೋಟಿ ರೂಪಾಯಿಗಳಷ್ಟು 'ಅಹಿತ' ವಾಗಿತ್ತು. ಬ್ರಿಟನ್ನಿನ ಮಾರ್ಗವನ್ನನುಸರಿಸಿ ತನ್ನ ಹಣದ ವಿನಿಮಯದ ದರವನ್ನು ಇಳಿಸಿದುದರ ಪರಿಣಾಮವಾಗಿ ಭಾರತವು ಅಷ್ಟು 'ಅಹಿತ' ವಾಗಿದ್ದ ತನ್ನ 'ಕೊಡತಕ್ಕೊಳ್ಳುವ ಶಿಲ್ಕ' ನ್ನು ೧೯೫೦ ರ ಸೆಪ್ಟೆಂಬರ್ ವೇಳೆಗೆ ೬೫.೯ ಕೋಟಿ ರೂಪಾಯಿಗಳಷ್ಟು 'ವಿಹಿತ' ವಾಗಿ ಬೆಳೆಸಿಕೊಳ್ಳಲು ಸಾಧ್ಯವಾಯಿತು.

ಪಾಕಿಸ್ಥಾನಕ್ಕೆ ಏನಾಯಿತು ?

ತನ್ನ ರೂಪಾಯಿಯ ಬೆಲೆಯನ್ನು ಇಳಿಸದುದರ ಪರಿಣಾಮವಾಗಿ ೧೯೫೦ರ ಸೆಪ್ಟೆಂಬರ್ ವರೆಗೂ ಪಾಕಿಸ್ಥಾನಕ್ಕೆ ಕೇಡಾಗಿದೆ ಎಂಬುದರಲ್ಲಿ ಸಂದೇಹವಿಲ್ಲ. ೧೯೫೦ರ ಜೂನ್‌ಗೆ ಅಂತ್ಯವಾದ ಅದರ ಒಂದು ವರ್ಷದ 'ಕೊಡತಕ್ಕೊಳ್ಳುವ ಶಿಲ್ಕಿ'ನ ಪರಿಸ್ಥಿತಿಯನ್ನು ಪರೀಕ್ಷಿಸಿದರೆ ವಾಚಕರಿಗೇ ಇದು ಚನ್ನಾಗಿ ವೇದ್ಯವಾಗುವುದು. ಖಾಸಗಿ ವ್ಯಾಪಾರದ ಕೊಡ ಮತ್ತು ತಕ್ಕೊಳ್ಳುವದೆರಡೂ ಹಿಂದಿನಂತೆ ೮೫ ಕೋಟಿ ರೂಪಾಯಿಯಷ್ಟೇ ಇತ್ತು. ಆದರೆ ಪಾಕಿಸ್ಥಾನ ಸರ್ಕಾರದ ಪರವಾದ ತಕ್ಕೊಳ್ಳುವದು ೩೭½ ಕೋಟಿ ರೂಪಾಯಿಯಷ್ಟೂ ಕೊಡುವದು ೫೦ ಕೋಟಿ ರೂಪಾಯಿಯಷ್ಟೂ ಇತ್ತು. ಅಂದ ಮೇಲೆ ಒಟ್ಟನಲ್ಲಿ ಶಿಲ್ಕು 'ಅಹಿತ'ವಾಗಿ ಪರಿಣಮಿಸಿತ್ತೆಂದಾಯಿತು. ಅಲ್ಲದೆ ಪಾಕಿಸ್ಥಾನದ ರಿಸರ್ವ್‌ಬ್ಯಾಂಕಿನಲ್ಲಿ ವಿದೇಶಕ್ಕೆ ಕೊಡುವದು ೫೦ ಕೋಟಿ ರೂಪಾಯಿಯಷ್ಟು ಖೋತಾ ಆಗಿ ಹೋಗಿತ್ತು. ಆ ಸಮಯಕ್ಕೆ ಸರಿಯಾಗಿ 'ಸ್ಟರ್ಲಿಂಗ್ ಬಾಕಿ' ವಸೂಲಾಗದೇ ಹೋಗಿದ್ದಿದ್ದರೆ ಈ 'ಅಹಿತ ಶಿಲ್ಕು' ಗಳ ದೆಸೆಯಿಂದ ಪಾಕಿಸ್ಥಾನದ ಕೊಡತಕ್ಕೊಳ್ಳುವ ಪರಿಸ್ಥಿತಿಯು ಉತ್ಕಟವೇ ಆಗುತ್ತಿತ್ತೆನ್ನಬಹುದು.

ಹೊಸ ಪರಿಸ್ಥಿತಿ

ಆದರೆ ಕಳೆದ ೧೦–೧೨ ತಿಂಗಳ ಅವಧಿಯಲ್ಲಿ ಪರಿಸ್ಥಿತಿಯು ತುಂಬಾ ಬದಲಾಯಿಸಿತು. ಅನಿರೀಕ್ಷಿತವಾಗಿ ಕೋರಿಯಾ ಯುದ್ಧ ಸಂಭವಿಸಿತು; ಇನ್ನೂ ಸಾಗುತ್ತಲೇ ಇದೆ. ಯುದ್ಧ ಭೀತಿಯು ಜಗತ್ತನ್ನೇ ಆವರಿಸಿತು. ಅಮೇರಿಕ ಬ್ರಿಟನ್ ಮುಂತಾದ ಮಹಾ ರಾಷ್ಟ್ರಗಳು ಮತ್ತೆ ತ್ವರಿತವಾಗಿ ಯುದ್ಧಸನ್ನದ್ಧವಾಗಹತ್ತಿದವು. ಕಚ್ಚಾ ಮಾಲುಗಳ ಅಪಾರ ದಾಸ್ತಾನು ಆರಂಭವಾಯಿತು. ಅಂತರರಾಷ್ಟ್ರೀಯ ವ್ಯಾಪಾರದ ಪಟ್ಟುಗಳು ಆಸ್ಟ್ರೇಲಿಯ, ಆಗ್ನೇಯ ಏಷ್ಯಾ, ಪಾಕಿಸ್ಥಾನ ಮುಂತಾದ 'ಕಚ್ಚಾ ಮಾಲು ಮಾರಾಟ' ದ ರಾಷ್ಟ್ರಗಳಿಗೆ ಬಹಳ ಲಾಭದಾಯಕವಾಗಿ ಪರಿಣಮಿಸಿತು. ೧೯೪೯ ರಲ್ಲಿ, ಕಷ್ಟವಾದರೂ ಚಿಂತೆಯಿಲ್ಲ ತನ್ನ ಹಣದ ಬೆಲೆಯನ್ನು ಇಳಿಸುವುದಿಲ್ಲವೆಂದು ಹುಚ್ಚು ಧೈರ್ಯ ಮಾಡಿದ ಪಾಕಿಸ್ಥಾನಕ್ಕೆ ಅನಿರೀಕ್ಷಿತವಾಗಿ ಒಂದು ಶುಕ್ರ ಮಹರ್ದಶೆ ಹೊಡೆಯಿತು.

೧೯೫೦ ರ ಮಾರ್ಚಿಗೆ ಕೊನೆಯಾದ ವರ್ಷದಲ್ಲಿ ಪಾಕಿಸ್ತಾನದ ವಿದೇಶೀ ವ್ಯಾಪಾರದ ಶಿಲ್ಕು ಸುಮಾರು ೮೦ ಕೋಟಿ ಪಾಕೀ ರೂಪಾಯಿಗಳಷ್ಟು 'ವಿಹಿತ' ವಾಗಿ ಬೆಳೆಯಿತು. ಭಾರತವೂ ಹಾಗೆಯೇ ಮಾಡಿದ್ದರೆ ಚನ್ನಾಗಿತ್ತೆಂದು ಈಗ ಕೆಲವರಿಗೆ ಅನ್ನಿಸಬಹುದು. ಆದರೆ ಅರಿತೂ ಅರಿತೂ ಅದೃಷ್ಟದ ಮೇಲೆ ಭಾರ ಹಾಕಿ ಒಪ್ಪಾಗುವುದೆಂಬ ಬಯಲಾಸೆಯಿಂದ ತಪ್ಪು ಮಾಡುವುದು ಒಟ್ಟಿನಲ್ಲಿ ಕ್ಷೇಮವಲ್ಲ. ೧೯೪೯ರಲ್ಲಿ ಇಂಗ್ಲೆಂಡ್ ಮತ್ತು ಭಾರತವು ಹಣದ ಬೆಲೆಯನ್ನು ಇಳಿಸಿದ್ದೇನೋ ಸರಿಯೆ; ಆದರೆ, ಪರಿಸ್ಥಿತಿಯು ಪ್ರತಿಕೂಲವಾಗಿ ಪರಿಣಮಿಸಿರುವ ಈಗ, ಮತ್ತೆ ತಮ್ಮ ಹಣದ ಬೆಲೆಯನ್ನು ವಿಮರ್ಶಿಸಲು ತಡಮಾಡಿದರೆ ಅದು ತಪ್ಪಾಗುವುದಿಲ್ಲವೇ ಎಂದು ವಿಚಾರಪರರು ಪ್ರಶ್ನಿಸುತ್ತಿದ್ದಾರೆ. ಅಂದ ಮೇಲೆ 'ರೂಪಾಯಿಯ ವಿನಿಮಯದ ದರ'ವನ್ನು ಏರಿಸುವ ಆವಶ್ಯಕತೆ ಒದಗಿದೆಯೆ ಎಂಬುದನ್ನು ವಿಚಾರ ಮಾಡುವುದು ಪ್ರಕೃತದ ಕೆಲಸ.

ನಮ್ಮ ರೂಪಾಯಿಯ ಬೆಲೆಯನ್ನು ಕೂಡಲೇ ಏರಿಸಬೇಕೆಂದು ಸಣಬು ಮತ್ತು ಹತ್ತಿ ವಸ್ತುಗಳ ಕೈಗಾರಿಕೋದ್ಯಮಿಗಳು ೮-೧೦ ತಿಂಗಳಿಂದಲೂ ಒತ್ತಾಯ ತರುತ್ತಿದ್ದಾರೆ. ಪೌಂಡು ಹಣದ ಬೆಲೆಯನ್ನೂ ಏರಿಸಬೇಕೆಂದು ಇಂಗ್ಲೆಂಡಿನಲ್ಲಿ ಎದ್ದಿರುವ ಆ ಚಳವಳಿಯಿಂದ ಬೇರೆ ಇವರು ಮತ್ತಷ್ಟು ಉತ್ತೇಜಿತರಾಗಿದ್ದಾರೆ. ಮಾಜಿ ಅರ್ಥಸಚಿವ ಡಾ|| ಜಾನ್ ಮಥಾಯ್‌ರವರ ಅಭಿಪ್ರಾಯವೂ ಇವರಿಗೆ ಬೆಂಬಲ ನೀಡುವಂತಿದೆ. ಆದರೆ ಹಾಲಿ ಅರ್ಥಸಚಿವರಾಗಿರುವ ಸರ್ ಚಿಂತಾಮಣಿ ದೇಶಮುಖರವರು, ಅರ್ಥಾತ್ ಭಾರತ ಸರ್ಕಾರದವರ ಅಭಿಪ್ರಾಯವು ಇವರಿಗೆ ಪ್ರತಿಕೂಲವಾಗಿದೆ.

ಈಗ ಭಾರತಕ್ಕಾಗಿರುವ ಅನಾನುಕೂಲವೇನು ಮತ್ತು ರೂಪಾಯಿಯ ಬೆಲೆಯನ್ನು ಏರಿಸುವುದರಿಂದ ನಿರೀಕ್ಷಿಸಬಹುದಾದ ಅನುಕೂಲಗಳೇನು? ಇದನ್ನು ಸ್ಥೂಲವಾಗಿ ವಿಮರ್ಶಿಸೋಣ:

ಒಂದನೆಯದಾಗಿ, ಕೊರಿಯಾ ಯುದ್ಧಾರಂಭದಿಂದೀಚೆಗೆ ಉಂಟಾದ ಹೊಸ ಪರಿಸ್ಥಿತಿಯ ದೆಸೆಯಿಂದ ಪಾಕೀ ರೂಪಾಯಿ ಮತ್ತು ಅಮೇರಿಕದ ಡಾಲರ್ ಇವುಗಳ ವಿನಿಮಯದ ದರ ಸುಭದ್ರವಾಯಿತು. ಪಾಕಿಸ್ಥಾನದ ಆರ್ಥಿಕ ಪರಿಸ್ಥಿತಿ ಬಲಗೊಂಡಿತು. ಪಾಕಿಸ್ಥಾನದ ಹಟದಂತೆ 'ನಮ್ಮ ೧೪೪ ರೂಪಾಯಿಗೆ ಪಾಕಿಸ್ಥಾನದ ೧೦೦ ರೂಪಾಯಿ ಸಮ' ವೆಂದು ಒಪ್ಪಿಕೊಳ್ಳುವುದು ಭಾರತ ಸರ್ಕಾರಕ್ಕೆ ಅನಿವಾರ್ಯವಾಯಿತು. ಈಚೆಗೆ ನಡೆದ ಭಾರತ ಮತ್ತು ಪಾಕಿಸ್ಥಾನ ವ್ಯಾಪಾರೀ ಒಪ್ಪಂದದಿಂದ ಒಂದು ಅನುಕೂಲವೇನೋ ಆಯಿತು. ೧೯೪೯ನೇ ಸೆಪ್ಟೆಂಬರಿನಿಂದ ಪಾಕಿಸ್ಥಾನದೊಡನೆ ನಿಂತುಹೋಗಿದ್ದ ಭಾರತದ ವ್ಯಾಪಾರವು ಮತ್ತೆ ಆರಂಭವಾಯಿತು. ಆದರೆ ಅದರಿಂದಾದ ಅನಿಷ್ಟವೆಷ್ಟು? ಪಾಕಿಸ್ಥಾನದಿಂದ ಆಮದು ಮಾಡಿಕೊಂಡ ಹತ್ತಿ ಮತ್ತು ಸಣಬಿನ ಬೆಲೆಗಳಿಗೂ ಭಾರತದ ಹತ್ತಿ ಮತ್ತು ಸಣಬಿನ ಬೆಲೆಗಳಿಗೂ ಬಹಳ ಅಂತರವುಂಟಾಗಿ 'ಸಣಬು ಹತೋಟಿ'ಯನ್ನು ತೆಗೆದು 'ಹತ್ತಿಯ ಬೆಲೆ'ಯನ್ನು ಏರಿಸಬೇಕಾಯಿತು. ತತ್ಪರಿಣಾಮವಾಗಿ ಭಾರತದಲ್ಲಿ ಸಣಬು ಮತ್ತು ಸಣಬಿನ ವಸ್ತು, ಹತ್ತಿ ಮತ್ತು ಹತ್ತಿಯ ವಸ್ತು, ಇವುಗಳ ಬೆಲೆಯು 'ನೂರಕೆ ನೂರರಷ್ಟು' ಏರಿಹೋಯಿತು. ಹೆಚ್ಚು ಲಾಭದ ಆಸೆಯಿಂದ ರೈತರು ಬತ್ತ ಇತ್ಯಾದಿ ಆಹಾರ ಧಾನ್ಯಗಳ ಬೆಳಸನ್ನು ಕಡಮೆ ಮಾಡಿ ಹತ್ತಿ ಮತ್ತು ಸಣಬಿನ ಬೆಳೆಗಾಗಿ ಹೆಚ್ಚು ಜಮೀನನ್ನು ಉಪಯೋಗಿಸಬಹುದು. ಆಹಾರ ವಸ್ತುಗಳ ಈ ದುರ್ಭಿಕ್ಷ ಕಾಲದಲ್ಲಿ ಹೀಗಾಗುವುದು ಕ್ಷೇಮಕರವೆಂದು ಹೇಳಲಾದೀತೆ?

ಎರಡನೆಯದಾಗಿ ಕಬ್ಬು, ಎಣ್ಣೆ ಬೀಜ ಇತ್ಯಾದಿ ಇನ್ನೂ ಕೆಲವು 'ರೊಕ್ಕದ ಬೆಳೆ' ಗಳ ಬೆಲೆ ಹತ್ತಿ ಮತ್ತು ಸಣಬಿನ ಬೆಲೆಗಳಂತೆಯೇ ಮಿತಿ ಮೀರಿ ಏರುತ್ತಿದೆ.

ಮೂರನೆಯದಾಗಿ, ನಮ್ಮ 'ಹೆಚ್ಚು ಆಹಾರ ಬೆಳೆಯುವ ಯೋಜನೆ' ಗಳೂ ೧೯೫೧ ರೊಳಗೆ ಭಾರತವನ್ನು ಆಹಾರ ವಸ್ತುಗಳ ವಿಷಯದಲ್ಲಿ 'ಸಂಪೂರ್ಣ ಸ್ವಾವಲಂಬಿ'ಯಾಗಿ ಮಾಡಬೇಕೆಂಬ ಆಶೆಯೂ ಗಗನಕುಸುಮದಂತಾಗಿ ವಿದೇಶಗಳಿಂದ ಅಪಾರ ದವಸ ಧಾನ್ಯಗಳ ಆಮದು ಅನಿವಾರ್ಯವಾಗಿಬಿಟ್ಟಿದೆ. ಈ ವರ್ಷ ಅಮೇರಿಕವು ಸಾಲವಾಗಿ ಕೊಟ್ಟಿರುವ ೨೦ ಲಕ್ಷ ಟನ್ನಿನಷ್ಟು ಆಹಾರ ಧಾನ್ಯವಷ್ಟೇ ಅಲ್ಲದೆ ಇನ್ನೂ ೩೭ ಲಕ್ಷ ಟನ್ನಿನಷ್ಟು ಆಹಾರ ವಸ್ತುಗಳನ್ನು ವಿದೇಶಗಳಿಂದ ತರಿಸಿಕೊಳ್ಳಲಿದ್ದೇವೆ. ಇನ್ನೂ ೨-೩ ವರ್ಷಗಳವರೆಗೆ ಹೀಗೆಯೆ ಲಕ್ಷೋಪಲಕ್ಷ ಟನ್ನುಗಳಷ್ಟು ಆಹಾರ ಧಾನ್ಯದ ಆಮದು ಭಾರತಕ್ಕೆ ಅನಿವಾರ್ಯವೇ ಸರಿ. ಇದೆಲ್ಲದಕ್ಕೂ ನಾವು ಹೆಚ್ಚು ಬೆಲೆಯನ್ನು ತರಲೇಬೇಕಾಗಿದೆ.

ಈ ಮೇಲಿನ ಮೂರು ಕಾರಣಗಳ ದೆಸೆಯಿಂದ ಬೆಲೆಗಳ ಮಟ್ಟವು ಮುಗಿಲು ಮುಟ್ಟಿ ಜನಜೀವನವು ದುರ್ಭರವಾಗುವುದಲ್ಲದೆ ಭಾರತದ ಕೊಡತಕ್ಕೊಳ್ಳುವ 'ಅಹಿತ' ಶಿಲ್ಕು ಅಪಾರವಾಗಬಹುದು. ಇದೇ ಸಾಲಿನಲ್ಲಿ ಭಾರತದ 'ಕೊಡತಕ್ಕೊಳ್ಳುವ ಶಿಲ್ಕು' ಸುಮಾರು ೧೦೦ ಕೋಟಿ ರೂಪಾಯಿಗಳಷ್ಟು 'ಅಹಿತ'ವಾಗಿ ಬೆಳೆಯುವುದೆಂಬುದಕ್ಕೆ ಸ್ಪಷ್ಟ ಸೂಚನೆಗಳಿವೆಯೆಂದು ಸಹ ಹೇಳಲಾಗುತ್ತಿದೆ.

ರೂಪಾಯಿಯ 'ವಿನಿಮಯದ ದರ'ವನ್ನು ಏರಿಸುವುದರಿಂದ ಅನಿಷ್ಟ ಮಾರಿಯಂತೆ ಎಗರಿ ಏರುತ್ತಿರುವ ಬೆಲೆಗಳ ಮಟ್ಟವನ್ನು ತಡೆಗಟ್ಟಬಹುದಲ್ಲದೆ ಸ್ವಲ್ಪಮಟ್ಟಿಗೆ ತಗ್ಗಿಸುವುದೂ ಸಾಧ್ಯ.

ರೂಪಾಯಿಯ ಬೆಲೆಯನ್ನು ಏರಿಸುವುದರಿಂದ ಅಮೆರಿಕದಿಂದ ಯಂತ್ರಸಾಮಗ್ರಿಗಳೇ ಮುಂತಾದ 'ಬಂಡವಾಳ ವಸ್ತು'ಗಳನ್ನು ಸ್ವಲ್ಪ ಅಗ್ಗವಾಗಿ ಪಡೆಯಬಹುದು. ಅಮೆರಿಕದಿಂದ ಆಮದಾಗುವ ವಸ್ತುಗಳೆಲ್ಲದರ ಬೆಲೆಯೂ ಕಡಿಮೆಯಾಗುವುದು. ಬ್ರಿಟನ್ ಮುಂತಾದ ಇತರ 'ಸ್ಟರ್ಲಿಂಗ ಕ್ಷೇತ್ರ'ದ ವಸ್ತುಗಳ ಆಮದಿನ ಬೆಲೆಯೂ ಕಡಿಮೆಯಾಗುವುದು.

ಒಂದು ದೇಶದ ಹಣದ ಬೆಲೆಯು ಇಷ್ಟರಲ್ಲೇ ಏರಿಸಲ್ಪಡಲಿದೆಯೆಂದು ಗೊತ್ತಾದೊಡನೆಯೇ ಸಾಮಾನ್ಯವಾಗಿ ಕ್ಷಿಪ್ರಲಾಭದಾಶೆಯಿಂದ ವಿದೇಶಿ ಸಟ್ಟಾ ವ್ಯಾಪಾರಿಗಳು ತಮ್ಮ ಹಣವನ್ನು ಆ ದೇಶಕ್ಕೆ ಬಂಡವಾಳ ರೂಪದಲ್ಲಿ ಯತ್ನಪೂರ್ವಕವಾಗಿ ತಂದು ಹಾಕುವುದುಂಟು. ಏಕೆಂದರೆ ಅಲ್ಲಿಯ ಹಣದ ಬೆಲೆಯು ಏರಿದ ಕೂಡಲೆ ಅವರು ತಂದು

ಹಾಕಿದ ಈ ಬಂಡವಾಳದ ಬೆಲೆಯೂ ಅವರ ದೇಶದ ಹಣದ ಲೆಕ್ಕದಲ್ಲಿ ಹೆಚ್ಚುವುದು. ಹೀಗೆ ಬಂದ 'ಹಾಟ್ ಮನಿ'ಯನ್ನು ಭಾರತದ ಕೈಗಾರಿಕೋದ್ಯಮಿಗಳು ದೀರ್ಘಾವಧಿ ಸಾಲಗಳಾಗಿ ಪಡೆಯುವುದು ಸಾಧ್ಯವಾದರೆ ಹೆಚ್ಚು ಬಂಡವಾಳದ ಅಗತ್ಯವಿರುವ ಈ ಕಾಲದಲ್ಲಿ ಸ್ವಲ್ಪ ಅನುಕೂಲವೇ ಆಗುತ್ತದೆನ್ನಬಹುದು. ಆದರೆ ಅಲ್ಪಾವಧಿಯೊಳಗೇ ಅದನ್ನು ಅವರು ಮತ್ತೆ ಹಿಂದಕ್ಕೆ ಕೊಡಬೇಕಾದಲ್ಲಿ ಅದು ಒಳ್ಳೆಯದಲ್ಲ.

ಪ್ರತಿಕೂಲಗಳು— ಭಾರತವು ತನ್ನ ರೂಪಾಯಿಯ ಬೆಲೆಯನ್ನು ಏರಿಸಿದರೆ ಅದರ ದುಷ್ಪರಿಣಾಮಕ್ಕೆ ಗುರಿಯಾಗುವ ಪಾಕಿಸ್ಥಾನ ಮುಂತಾದ ರಾಷ್ಟ್ರಗಳು ಪ್ರತೀಕಾರ ಮಾಡದಿರುವುದು ಸಾಧ್ಯವೆ? ಅವು ತಮ್ಮಿಂದ ಭಾರತಕ್ಕೆ ರಫ್ತಾಗುವ ಸಾಮಾನುಗಳ ಮೇಲೆ ಅನೇಕ ರೀತಿಯ ಸುಂಕಸಾರಿಗೆಗಳನ್ನು ಹೇರಬಹುದು. ಸೇಡಿನಿಂದ ಅಡ್ಡಿ ಅಡಚಣೆಗಳನ್ನು ಒಡ್ಡಬಹುದು. ಆ ಸಾಮಾನುಗಳ ಅಭಾವ ಹೆಚ್ಚಬಹುದು. ಇದರಿಂದ ನಮ್ಮ ಆಮದಿನ ಬೆಲೆ ಇಳಿಯುವ ಬದಲು ಇನ್ನೂ ಏರಬಹುದು. ಅಲ್ಲದೆ ನಾವು ರೂಪಾಯಿಯ ಬೆಲೆಯನ್ನು ನೂರಕ್ಕೆ ೧೫-೨೦ ರಷ್ಟು ಏರಿಸಿದರೆ ಅದೇ ಪ್ರಮಾಣದಲ್ಲಿ ಆಮದಿನ ಬೆಲೆಯೂ ಇಳಿಯುವುದೆಂಬ ಭರವಸೆಯೇನು? ವಿದೇಶಗಳಲ್ಲಿರುವ ಈಗಿನ ಕಲುಷಿತ ರಾಜಕೀಯ ವಾತಾವರಣ ಮತ್ತು ಕುಂಠಿತ ಆರ್ಥಿಕ ದಶೆಯನ್ನು ನೋಡಿದರೆ, ಅಂಥ ಪ್ರತೀಕಾರದ ಕ್ರಮಗಳ ಕ್ಷಿಪ್ರ ಅನುಸರಣೆ ನಡೆಯುವುದು ಅಸಂಭವವೆಂದು ಹೇಳಲು ಆಗುವುದಿಲ್ಲ. ಹಾಗೇನಾದರೂ ನಡೆದರೆ ಭಾರತದಲ್ಲಿ ಗರಗರನೆ ಸುತ್ತಿ ಏರುತ್ತಿರುವ ಬೆಲೆಗಳ ಮಟ್ಟವನ್ನು ತಗ್ಗಿಸುವ ಯತ್ನವು ಅಷ್ಟು ಫಲಕಾರಿಯಾಗುವುದಿಲ್ಲ.

ಇಂಗ್ಲೆಂಡ್ ಮುಂತಾದ ಇತರ 'ಸ್ಟರ್ಲಿಂಗ್ ಕ್ಷೇತ್ರದ' ರಾಷ್ಟ್ರಗಳೇನಾದರೂ ತಮ್ಮ ಹಣಗಳ ಬೆಲೆಯನ್ನೂ ಏರಿಸಿದರೆ ಆಗ ಅಮೇರಿಕದಿಂದ ಆಮದಾಗುವ ಆಹಾರೇತ್ಯಾದಿ ವಸ್ತುಗಳ ಆಮದಿನ ಬೆಲೆಯಲ್ಲಿ ಮಾತ್ರ ಭಾರತಕ್ಕೆ ಸ್ವಲ್ಪ ಅನುಕೂಲವಾಗುವದು, ಅಷ್ಟೆ.

ಎರಡನೆಯದಾಗಿ, ರೂಪಾಯಿಯ 'ವಿನಿಮಯದ ದರ'ವನ್ನು ಏರಿಸಿದರೆ ಭಾರತದ ರಫ್ತು ವ್ಯಾಪಾರದ ಪ್ರಮಾಣವು ಸ್ವಲ್ಪ ತಗ್ಗಬಹುದು. ಭಾರತದ ವಸ್ತುಗಳು ವಿದೇಶೀಯರಿಗೆ ತುಟ್ಟಿಯಾಗುವವು. ಇದರಿಂದ ಭಾರತದ ಸರ್ಕಾರದ ಆದಾಯ ಕಡಿಮೆಯಾಗುವುದು. ಹೇಗೆಂದರೆ, ಸರಕುಗಳ ರಫ್ತಿನ ಮೇಲೆ ವಸೂಲಾಗುವ ಸುಂಕದ ಮೊತ್ತ ಇಳಿಯುವುದು. ಅಲ್ಲದೆ, ಬೆಲೆ ಏರಿದ ನಮ್ಮ ರೂಪಾಯಿಯಲ್ಲಿ ಲೆಕ್ಕಹಾಕುವುದರಿಂದ, ಆಮದಾಗುವ ವಸ್ತುಗಳ ಬೆಲೆಯ ಮೊತ್ತವೂ ಕಡಿಮೆ ಬೀಳುವುದು. ಆದ್ದರಿಂದ ಅದರ ಕ್ರಯಾನುಸಾರ ವಸೂಲು ಮಾಡುವ ಆಮದು ಸುಂಕದ ಮೊತ್ತವೂ ಕಡಮೆಯಾಗಲೇಬೇಕು.

ಮೂರನೆಯದಾಗಿ, ಭಾರತದ ಕೊಡತಕ್ಕೊಳ್ಳುವ ಪರಿಸ್ಥಿತಿ ಈಗಾಗಲೇ 'ಅಹಿತವಾಗಿ' ಪರಿಣಮಿಸಿದೆ. ರೂಪಾಯಿಯ ಬೆಲೆಯನ್ನು ಏರಿಸುವುದರಿಂದ ಅದು ಇನ್ನೂ ಹೆಚ್ಚು 'ಅಹಿತ'ವಾಗುವ ಸಂಭವವಿದೆ. ರೂಪಾಯಿಯ ಬೆಲೆಯನ್ನು ನೂರಕ್ಕೆ ೧೫ ರಷ್ಟು ಹೆಚ್ಚಿಸಿದರೆ 'ಕೊಡತಕ್ಕೊಳ್ಳುವ ಶಿಲ್ಕು' ೫೦ ಕೋಟಿ ರೂಪಾಯಿಗಳಷ್ಟೂ, ನೂರಕ್ಕೆ ೩೦ ರಷ್ಟು ಹೆಚ್ಚಿಸಿದರೆ ೧೩೫ ಕೋಟಿ ರೂಪಾಯಿಗಳಷ್ಟೂ 'ಅಹಿತ'ವಾಗಿ ಪರಿಣಮಿಸುವುದೆಂದು ರಿಸರ್ವ ಬ್ಯಾಂಕು ಈ ಮುಂಚೆಯೇ ಅಂದಾಜು ಮಾಡಿದೆ. ಸಾಲದುದಕ್ಕೆ ರೂಪಾಯಿಯ ಬೆಲೆಯನ್ನು ಇನ್ನೂ ಏರಿಸದಿದ್ದಾಗ್ಯೂ, ಈ ವರ್ಷದ ಅಂತ್ಯದ ವೇಳೆಗೇಯೆ 'ಕೊಡತಕ್ಕೊಳ್ಳುವ ಶಿಲ್ಕು' ೧೦೦ ಕೋಟಿಯಷ್ಟು 'ಅಹಿತ'ವಾಗಿ ಬೆಳೆಯುತ್ತಿರುವ ಸ್ಪಷ್ಟ ಸೂಚನೆಗಳು ಇವೆ. ಇದನ್ನು ಮುಂಚೆಯೇ ಹೇಳಲಾಗಿದೆ.

ಆದರೆ ನಮ್ಮ ರಫ್ತು ವ್ಯಾಪಾರದಲ್ಲಿ ಒಂದು ಗಮನಾರ್ಹವಾದ ಅಂಶವಿದೆ. ಅಮೇರಿಕಕ್ಕೆ ಇಂಡಿಯದಿಂದ ರಫ್ತಾಗುತ್ತಿರುವ ವಸ್ತುಗಳಿಗೆ ಗಿರಾಕಿ ಕಡಿಮೆಯಾಗುವ ಬದಲು ಹೆಚ್ಚೇ ಆಗಬಹುದು. ಏಕೆಂದರೆ, ಅವು ಅಮೇರಿಕಕ್ಕೆ ಅಗತ್ಯವಾಗಿ ಬೇಕಾಗಿರುವ ವಸ್ತುಗಳು. ಯುದಸನ್ನದ್ಧವಾಗುತ್ತಿರುವ ಅಮೇರಿಕಕ್ಕೆ ಭಾರತದ ಸಣಬು ವಸ್ತುಗಳ ದಾಸ್ತಾನು ಅತ್ಯಾವಶ್ಯಕ. ಮ್ಯಾಂಗನೀಸ ಕೂಡ ಉಕ್ಕಿನ ಕೈಗಾರಿಕೆಗೆ ಅಗತ್ಯವಾಗಿ ಬೇಕು. ಅಲ್ಲದೆ ಅಮೇರಿಕವು ಇವೆಲ್ಲವನ್ನೂ ಬಹಳವಾಗಿ ದಾಸ್ತಾನು ಮಾಡಬೇಕೆಂದು ನಿರ್ಧಾರ ಮಾಡಿದೆ. ತನ್ನ ದಾಸ್ತಾನಿನ ಗುರಿಯಲ್ಲಿ ೧/೩ ಭಾಗದಷ್ಟನ್ನೂ ಅದು ಇದು ವರೆಗೆ ಸಾಧಿಸಿಲ್ಲ. ಆದ್ದರಿಂದ ಇನ್ನೂ ಕೆಲವು ವರ್ಷಗಳ ವರೆಗೆ ಭಾರತದ ಈ ವಸ್ತುಗಳಿಗೆ ಅಮೇರಿಕದ ಗಿರಾಕಿ ಬೇಕಾದಷ್ಟು ಇದ್ದೇ ಇರುತ್ತದೆಂದು ಹೇಳಬಹುದು. ಆದರೆ, ನಮ್ಮ ಚಹಾ, ಹತ್ತಿ, ಬಟ್ಟೆ, ಚರ್ಮ, ಎಣ್ಣೇ ಬೀಜಗಳಿಗೆ ಸ್ವಲ್ಪ ಗಿರಾಕಿ ತಗ್ಗಬಹುದೋ ಏನೋ. ಏಕೆಂದರೆ, ಈ ವಸ್ತುಗಳ ಮಾರಾಟದಲ್ಲಿ ತುಂಬ ಪೈಪೋಟಿ ಇದೆ. ಸಿಲೋನಿನ ಚಹಾಕ್ಕೆ ಗಿರಾಕಿ ಹೆಚ್ಚಬಹುದು. ಬ್ರಿಟನ್, ಭಾರತ ಚಹಾವನ್ನು ಅಷ್ಟಾಗಿ ಕೊಳ್ಳದೇ ಹೋಗಬಹುದು. 'ಸುಕರ ವಿನಿಮಯ' ರಾಷ್ಟ್ರಗಳಲ್ಲಿಯೂ ಸ್ಟರ್ಲಿಂಗ್ ರಾಷ್ಟ್ರಗಳಲ್ಲಿಯೂ ಇದು ವರೆಗೆ ಬ್ರಿಟಿಷ್ ಮತ್ತು ಜಪಾನ ಹತ್ತೀ ಬಟ್ಟೆಗಳಿಗಿಂತಲೂ ಭಾರತದ ಹತ್ತೀ ಬಟ್ಟೆಗಳು ಹೆಚ್ಚಾಗಿ ಖರ್ಚಾಗುತ್ತಿದ್ದುವು. ಈಗ ಭಾರತದ ಬಟ್ಟೆಗೆ ಬೆಲೆ ಏರಿ ಈ ಅವಕಾಶ ಕಡಿಮೆಯಾಗಬಹುದು. ಆದರೆ, ರೂಪಾಯಿಯ ಬೆಲೆಯನ್ನು ಹೆಚ್ಚಿಸಿಯೂ ನಮ್ಮ ರಫ್ತು ವ್ಯಾಪಾರದ ಒಟ್ಟು ಪ್ರಮಾಣವು ಹಿಂದಿನಷ್ಟೇ ಸ್ಥಿರವಾಗಿ ನಿಲ್ಲುವುದರಿಂದ ಉತ್ಪನ್ನ ರಫ್ತುಗಳಿಂದ ಹೆಚ್ಚು ಹಣ ದೊರೆಯುವುದು. ಆಮದಿನ ಪ್ರಮಾಣ ಸ್ವಲ್ಪ ಹೆಚ್ಚಬಹುದು. ಆದರೆ ರೂಪಾಯಿಯ ಬೆಲೆಯನ್ನು ಹೆಚ್ಚಿಸಿದ್ದರಿಂದ ಆಮದುಗಳಿಗಾಗಿ ತೆರಬೇಕಾದ ಹಣ ಕಡಿಮೆ ಬೀಳುವುದು. ಆದ್ದರಿಂದ ಭಾರತದ ಕೊಡತಕ್ಕೊಳ್ಳುವ ಶಿಲ್ಕು 'ಅಹಿತ'ವಾಗುವ ಬದಲು 'ವಿಹಿತ'ವಾಗಿಯೇ ಪರಿಣಮಿಸಿದರೆ ಅದು ಆಶ್ಚರ್ಯವೇನೂ ಅಲ್ಲ.

ಪಾಕಿಸ್ಥಾನ, ಬ್ರಿಟನ್ ಮತ್ತು ತನ್ನೊಡನೆ ೧೯೪೯ ರಲ್ಲಿ ತಮ್ಮ ತಮ್ಮ ಹಣಗಳ ವಿನಿಮಯದ ದರವನ್ನು ಇಳಿಸಿದ ಇತರ ರಾಷ್ಟ್ರಗಳ ಕೂಡ ಸಮಾಲೋಚಿಸಿ ಅವುಗಳು ಪ್ರತೀಕಾರ ಮಾಡ

ದಂತೆ ನೋಡಿಕೊಳ್ಳುವುದು ಸಾಧ್ಯವಾದರೆ, ರೂಪಾಯಿಯ ಬೆಲೆಯನ್ನು ಈಗಲೇ ಹೆಚ್ಚಿಸುವುದರಿಂದ ಭಾರತಕ್ಕೆ ಲಾಭವಾಗುವುದು. 'ಒಟ್ಟು ಬೆಲೆಗಳ ಮಟ್ಟ'ವು ಇಳಿಯುವುದು; 'ಜನ ಜೀವನದ ಖರ್ಚಿನ ಮಟ್ಟ'ವೂ ತಗ್ಗುವುದು. ಪಾಕಿಸ್ಥಾನದೊಡನೆ ವ್ಯಾಪಾರ ಹೆಚ್ಚಿ, ಕಚ್ಚಾ ಮಾಲು ಅಗ್ಗವಾಗಿ ಸಿಕ್ಕಿ, ಭಾರತದ ಹತ್ತಿ ಮತ್ತು ಸಣಬಿನ ಕೈಗಾರಿಕೆ ನಿರಾತಂಕವಾಗಿ ನಡೆಯುವುದು.

ಈಗ ಇದು ಸಾಧ್ಯವಾಗದಿದ್ದರೆ ಭಾರತವು ಇನ್ನೂ ಸ್ವಲ್ಪ ಕಾಲ ತಡೆದು ನೋಡುವುದು ಕ್ಷೇಮ. ಬ್ರಿಟನ್ ತನ್ನ ಪೌಂಡು ಹಣದ ಬೆಲೆಯನ್ನೂ ಏರಿಸಬೇಕೆಂದು ತೀರ್ಮಾನಿಸಬಹುದು. ಏಕೆಂದರೆ, ಅದೂ ಯುದ್ಧಸನ್ನದ್ಧವಾಗುತ್ತಿದೆ; ೪೩೦೦,೦೦೦,೦೦೦ ಪೌಂಡು ಹಣದಷ್ಟು ವೆಚ್ಚದ ಪುನಶ್ಯಸ್ತ್ರೀಕರಣದ ಯೋಜನೆಯನ್ನು ಹಾಕಿಕೊಂಡಿದೆ. ಇದಕ್ಕಾಗಿ ಡಾಲರ್ ರಾಷ್ಟ್ರಗಳಿಂದ ಅನೇಕ ವಸ್ತುಗಳ ಆಮದು ಬ್ರಿಟನ್ನಿಗೆ ಆವಶ್ಯಕ. ಪೌಂಡಿನ ಬೆಲೆಯನ್ನು ಏರಿಸಿದರೆ ಮಾತ್ರ ಅಂಥ ಸಾಮಾನುಗಳನ್ನು ಅದು ಅಗ್ಗವಾಗಿ ಕೊಳ್ಳಬಹುದು. ಆದರೆ 'ಬ್ರಿಟಿಷ್ ಟ್ರೆಜರಿ' ಈ ಸಲಹೆಗೆ ವಿರುದ್ಧವಾಗಿದೆಯೆಂದು ಹೇಳಲಾಗುತ್ತಿದೆ. 'ಸ್ಟರ್ಲಿಂಗ್ ಕ್ಷೇತ್ರ'ದ 'ಡಾಲರ್ ನಿಧಿ'ಯು ೫೦೦೦,೦೦೦,೦೦೦ ಮಟ್ಟವನ್ನು ಮುಟ್ಟದ ವಿನಾ ಪೌಂಡಿನ ಬೆಲೆಯನ್ನು ಏರಿಸುವ ವಿಚಾರಕ್ಕೆ ಗಮನ ಕೊಡಬಾರದೆಂದು ಅದು ಅಭಿಪ್ರಾಯಪಡುತ್ತಿರುವುದಾಗಿ ತಿಳಿದು ಬರುತ್ತದೆ. 'ಅಂತರ ರಾಷ್ಟ್ರೀಯ ಹಣದ ನಿಧಿ ಸಂಸ್ಥೆ'ಯ ಅಭಿಪ್ರಾಯವೂ ಇದಕ್ಕೆ ವಿರುದ್ಧವಾಗಿದೆ. ಇದು ನಿಜವಾದರೆ, ಪೌಂಡಿನ ಬೆಲೆಯನ್ನು ಏರಿಸುವುದು ಬಹಳ ತಡವಾಗುವುದಾದರೆ ಮತ್ತೂ ಅದುವರೆಗೆ ಭಾರತದ ಆರ್ಥಿಕ ಪರಿಸ್ಥಿತಿ ತೀರ ಹದಗೆಡುವಂತಿದ್ದರೆ, ಇನ್ನೂ ಸ್ವಲ್ಪ ಕಾಲ ಕಾದು ಭಾರತವು, ಏಕಾಂಗಿಯಾಗಿಯೇ ಆದರೂ ಚಿಂತೆಯಿಲ್ಲ, ತನ್ನ ಹಣದ ಬೆಲೆಯನ್ನು ಏರಿಸುವ ಸಾಹಸವನ್ನು ಮಾಡುವುದರಲ್ಲಿ ತಪ್ಪೇನೂ ಇಲ್ಲ. ಸ್ವಲ್ಪ ತಡೆದು ಮಾಡಿದರೆ, ದುಷ್ಪರಿಣಾಮಗಳು ಈಗ ಭಾವಿಸಿರುವಷ್ಟು ತೀವ್ರವಾಗಿರುವುದಿಲ್ಲ. ವಿರೋಧವೂ ತಗ್ಗಿ ಹೋಗುವುದು. ಒಟ್ಟಿನಲ್ಲಿ ಹೇಳುವುದಾದರೆ ರೂಪಾಯಿಯ ಬೆಲೆಯನ್ನು ಏರಿಸುವುದು ಅಗತ್ಯ ಮತ್ತು ಕ್ಷೇಮಕರ, ಈಗಲೆಯೊ, ಇಷ್ಟರಲ್ಲಿಯೊ, ಇನ್ನೂ ತಡೆದೊ? ಈ ವಿಚಾರ ಮಾತ್ರ ಯಾವಾಗಲೂ ವಿವಾದಾಸ್ಪದವಾದದ್ದು. ಸಂಬಂಧಪಟ್ಟ ರಾಷ್ಟ್ರಗಳ ರಾಜಕೀಯ ಧೋರಣೆಯನ್ನು ಗಮನಿಸಿ ಈ ನಿರ್ಧಾರಕ್ಕೆ ಬರಬೇಕಾದದ್ದು ಆವಶ್ಯಕ.

ಈಗಿನ ಕಲುಷಿತ ವಾತಾವರಣದಲ್ಲಿಯಂತೂ ಇದರ ಅವಶ್ಯಕತೆ ಅಷ್ಟಿಷ್ಟಲ್ಲ. ಭಾರತದ ಇಂದಿನ ಕ್ಲಿಷ್ಟ ಆರ್ಥಿಕ ವ್ಯಾಧಿಗೆ ಹಿಂದೆ ಪಾಕಿಸ್ಥಾನವು ತನ್ನ ರೂಪಾಯಿಯ ಬೆಲೆಯನ್ನು ಇಳಿಸಲು ಒಪ್ಪದೇ ಹೋದದ್ದೇ ಒಂದು ಬಲವತ್ತರವಾದ ಪರೋಕ್ಷ ಕಾರಣವೆಂಬುದನ್ನು ತಜ್ಞ ಜನರು ಬಲ್ಲವರೇ ಆಗಿದ್ದಾರೆ. ಮೊನ್ನೆತಾನೆ ಪಾಕಿಸ್ತಾನದೊಡನೆ ಮಾಡಿಕೊಂಡ ವ್ಯಾಪಾರೀ ಒಪ್ಪಂದ ಜನ್ಯವಾದ ನಮ್ಮ ಆರ್ಥಿಕ ವ್ಯಾಧಿಯು ಕೇವಲ ತಾತ್ಕಾಲಿಕವಾದದ್ದಲ್ಲವೆಂಬುದು ಖಚಿತವಾಗಬೇಕಾದರೆ ಸ್ವಲ್ಪ ಕಾಲ ಸಾವಧಾನದಿಂದಿರಬೇಕು. ಇಲ್ಲವಾದರೆ ಪಾಕಿಸ್ಥಾನದ ಹಟಯುಕ್ತ ಆರ್ಥಿಕ ಧೋರಣೆಯ ದೆಸೆಯಿಂದ ನಮ್ಮ ರೂಪಾಯಿಯ ಬೆಲೆಯನ್ನು ಅಕಾಲಿಕವಾಗಿ ಇಳಿಸಿ, ಅಂತರ ರಾಷ್ಟ್ರೀಯ ಕ್ಷೇತ್ರಕ್ಕೆ ವ್ಯಾಪಿಸಬಲ್ಲಂಥ ಅಲೆಯನ್ನು ಎಬ್ಬಿಸಿ, ಭಾರತವು ಮತ್ತೆ ಕೋಟಲೆಗೊಳಬೇಕಾದೀತು.

ಶ್ರೀ. ಗೊರೂರು ರಾಮುಸ್ವಾಮಿ ಐಯಂಗಾರ,
ಎಂ. ಎ., ಅವರಿಂದ

ಸಂಸ್ಕೃತದ ಕೆಲ ಸರಸೋಕ್ತಿಗಳು

ಸುಭಾಷಿತಗಳು, ಸರಸೋಕ್ತಿಗಳು, ಚಾಟು ಶ್ಲೋಕಗಳು ಸಂಸ್ಕೃತದ ಸಾಹಿತ್ಯ ಭಂಡಾರದ ಬಿಡಿ ರತ್ನಗಳು. ಎಷ್ಟೋ ವೇಳೆ ಕರ್ತನಾರೆಂದು ಗೊತ್ತಾಗದಿದ್ದರೂ ನಾಲ್ಕೇ ಪಂಕ್ತಿಗಳಲ್ಲಿ ಅವನು ವ್ಯಕ್ತಗೊಳಿಸಿದ ರಸಿಕತೆಗೆ ನಾವು ಮನಸೋಲುತ್ತೇವೆ.

ಪ್ರಿಯೆ ಹೀಗೆ ಬರೆಯುತ್ತಾಳೆ, "ನಾಥಾ ಒಂದು ವಿಜ್ಞಾಪನೆ. ನೀವಿರುವ ಸ್ಥಳಕ್ಕೇ ನಾನೂ ಬಂದು ಕೆಲವು ಕಾಲವಿದ್ದರೆ ಸುಖವಾಗುತ್ತದೆ. ಈಗ ಈ ದೇಶ ವಾಸಕ್ಕೆ ಯೋಗ್ಯವಾಗಿಲ್ಲ. ಇಲ್ಲಿ ಚಂದ್ರಕಿರಣವು ಸಹ ಸುಡುತ್ತಿದೆ.''

ವಿಜ್ಞಪ್ತಿರೇಷಾ ಮಮ ಜೀವಬಂಧೋ
ತತ್ರೈವ ನೇಯಾ ದಿವಸಾಃ ಕಿಯಂತಃ ।
ಸಂಪ್ರತ್ಯಯೋಗ್ಯಸ್ಥಿತಿರೇಷ ದೇಶಃ
ಕರಾ ಹಿಮಾಂಶೋರಪಿ ತಾಪಯಂತಿ ॥

ಹೀಗೆ ಸ್ತ್ರೀಯು ತನ್ನ ವಿನಯಕ್ಕೆ ಭಂಗಬರದಂತೆ ತನ್ನ ವಿರಹವನ್ನು ಚತುರತೆಯಿಂದ ಪ್ರಿಯನಿಗೆ ತಿಳಿಸುತ್ತಾಳೆ.

ಪ್ರಿಯನು ಅದಕ್ಕೆ ಪ್ರತಿಯಾಗಿ ಬರೆಯುತ್ತಾನೆ: "ಹೇ ಪ್ರಿಯೆ, ನೀನು ಹಾಗೆ ಶಂಕಿಸಬೇಡ. ನಿನ್ನನ್ನು ದಹಿಸುತ್ತಿರುವುದು ಚಂದ್ರ ಕಿರಣವಲ್ಲ. ನಿನ್ನ ವಿರಹದಿಂದ ನನ್ನ ಹೃದಯ ಯಾವಾಗಲೂ ದಹಿಸುತ್ತಿರುವುದು. ನನ್ನ ಹೃದಯುದಲ್ಲಿ ನೀನು ಇರುವುದರಿಂದ ನಿನ್ನನ್ನು ಅದು ಸುಡುತ್ತಿರುವುದು.''

ನೈತತ್ ಪ್ರಿಯೇ ಚೇತಸಿ ಶಂಕನೀಯಂ
ಕರಾ ಹಿಮಾಂಶೋರಪಿ ತಾಪಯಂತಿ ।
ವಿಯೋಗತಪ್ತಂ ಹೃದಯಂ ಮದೀಯಂ
ತತ್ರ ಸ್ಥಿತಾ ತ್ವಂ ಪರಿತಾಪಿತಾಸಿ ॥

"ನಾನು ಯಾವಾಗಲೂ ನಿನ್ನ ಜ್ಞಾಪಕದಲ್ಲಿದ್ದೇನೆ. ನಿನಗಿಂತ ಹೆಚ್ಚಾಗಿಯೇ ನಾನು ಅನುಭವಿಸುತ್ತಿದ್ದೇನೆ" ಎಂದು ಅವನ ತಾತ್ಪರ್ಯ.

ಪುರುಷನ ಇಂತಹ ಶಾಶ್ವತ ಪ್ರೇಮ ಸಂಪಾದನೆಗಾಗಿ ತಮ್ಮ ಕೆಲವು ಬೆರಳುಗಳನ್ನೇ ಕೊಡಲು ಸಹ ಅನೇಕ ಸ್ತ್ರೀಯರು ಸಿದ್ಧರಾಗಿರಬಹುದು. ಅದಿಲ್ಲದಿದ್ದರೂ ಇಂತಹ ಒಂದು ಪ್ರೇಮಪತ್ರಕ್ಕಾಗಿಯಾದರೂ ಆಕೆ ಪ್ರಿಯನನ್ನು ಸ್ವಲ್ಪಕಾಲ ಬಿಟ್ಟಿರಲು ಸಮ್ಮತಿಸಿಯಾಳು.

ಆದರೆ ಇಂತಹ ಪ್ರತ್ಯುತ್ತರ ಬರಬೇಕಾದರೆ, ಮೊದಲು ಮೇಲಿನಂಥ ಪತ್ರವನ್ನು ಬರೆಯುವ ಮನೋಭಾವ ಅವಳಿಗೆ ಇರಬೇಕಷ್ಟೆ. ಅದಿಲ್ಲದಿದ್ದರೆ ಪ್ರತ್ಯುತ್ತರದ ಆಸೆಯಿಂದ ಮಾತ್ರವೇ ಫಲವಿಲ್ಲ. ಒಂದುಪಕ್ಷ, ಪ್ರಿಯೆಗೆ ಬರೆಯುವುದಕ್ಕೆ ತಿಳಿಯದೆ ಇರಬಹುದು. ಹಿಂದಿನ ಕಾಲದ ಸ್ತ್ರೀಯರಲ್ಲಿ ಅನೇಕರಿಗೆ ಬರೆಯುವುದು ತಿಳಿದಿರಲಿಲ್ಲ. ಆದರೂ ಅಭಿಪ್ರಾಯಗಳನ್ನು ಗಮಕದ ಮೂಲಕ ವ್ಯಕ್ತಪಡಿಸುವುದು ಅವರಿಗೆ ತಿಳಿದಿದ್ದಿತು. ಒಬ್ಬ ಸ್ತ್ರೀ, ತನ್ನ ದೂತಿಯೊಡನೆ ಹೀಗೆ ಪ್ರಲಾಪಿಸುತ್ತಾಳೆ. "ದೂರದಲ್ಲಿರುವ ಪ್ರಿಯನನ್ನು ಸ್ವಪ್ನದಲ್ಲಿ ಕಾಣುವವಳೂ ಭಾಗ್ಯಶಾಲಿ. ನನಗೆ ಆ ಭಾಗ್ಯವೂ ಇಲ್ಲ. ಪ್ರಿಯನು ನನ್ನನ್ನು ಬಿಟ್ಟುಹೋಗುವಾಗ ಹಾಳು ನಿದ್ರೆಯನ್ನೂ ಜತೆಯಲ್ಲಿ ತೆಗೆದುಕೊಂಡು ಹೋಗಿದ್ದಾನೆ."

ಸ್ವಪ್ನೇ ಪಶ್ಯಂತಿ ಯಾ ನಾಥಂ
ಧನ್ಯಾಸ್ತಾಃ ಸಖಿ ಯೋಷಿತಃ ।
ಅಸ್ಮಾಕಂ ತು ಗತೇ ನಾಥೇ
ಗತಾ ನಿದ್ರಾ ಹಿ ವೈರಿಣೀ ॥

ಈ ವಿಧಧ ಗಮಕ ಸಂಭಾಷಣೆ, ಭಕ್ತಿರಸದೊಂದಿಗಿರುವುದನ್ನು ಕಂಡಾಗ ನಮ್ಮ ಆನಂದ ಇನ್ನೂ ಹೆಚ್ಚುತ್ತದೆ: "ಹೇ ಕೃಷ್ಣ, ಬೆಣ್ಣೆಯನ್ನು ಕದ್ದುಬಿಟ್ಟೆ, ಎಲ್ಲಿ ಬಚ್ಚಿಟ್ಟುಕೊಳ್ಳಲಿ, ಎಂದು ಆಲೋಚಿಸುತ್ತಿರುವೆಯಲ್ಲವೆ? ನನ್ನ ಮನಸ್ಸಿನಲ್ಲಿ ಬಚ್ಚಿಟ್ಟುಕೊ. ಅದಕ್ಕಿಂತ ನಿನಗೆಲ್ಲಿ ಅಂಧಕಾರ ಪ್ರದೇಶಸಿಕ್ಕೀತು ?''

ಕ್ಷೀರಸಾರಮಪಹೃತ್ಯ ಶಂಕಯಾ
ಸ್ವೀಕೃತಂ ಯದಿ ಪಲಾಯನಂ ತ್ವಯಾ ।
ಮಾನಸೇ ಮಮ ನಿತಾಂತತಾಮಸೇ
ನಂದನಂದನ ಕಥಂ ನ ಲೀಯಸೇ ॥

ಭಕ್ತಿಯ ವಿನಯ ಇಲ್ಲಿ ಬಹು ರಸವತ್ತಾಗಿ ಹೊರಬಿದ್ದಿದೆ.

ಮತ್ತೊಬ್ಬ ಭಕ್ತರು ಒಬ್ಬಳು ಗೋಪಸ್ತ್ರೀಯ ಬಾಯಲ್ಲಿ ಹೀಗೆ ಹೇಳಿಸಿದ್ದಾರೆ. "ಎಲೆ ಕೃಷ್ಣ, ನನ್ನ ಕೈಗಳಿಂದ ನೀನು ತಪ್ಪಿಸಿಕೊಂಡು ಹೋದುದರಲ್ಲಿ ಆಶ್ಚರ್ಯವೇನು? ಆದರೆ ಎಲ್ಲಿ ನೋಡೋಣ, ನನ್ನ ಹೃದಯದಿಂದ ಹೊರಕ್ಕೆ ಹೊರಡು, ಆಗ ನಿಜವಾಗಿ ನಿನ್ನ ಪೌರುಷವನ್ನು ಒಪ್ಪುತ್ತೇನೆ."

ಹಸ್ತಮಾಕ್ಷಿಪ್ಯ ಯಾತೋಽಸಿ
ಬಲಾತ್ ಕೃಷ್ಣ ಕಿಮದ್ಭುತಂ ।
ಹೃದಯಾದ್ಯದಿ ನಿರ್ಯಾಸಿ
ಪೌರುಷಂ ಗಣಯಾಮಿ ತೇ ॥

ಆ ಗೋಪಿಯ ಸ್ಥಾನದಲ್ಲಿ ನಾವು ಒಂದು ಗಳಿಗೆ ಇರುವಂತೆ ಭಾವಿಸಿಕೊಂಡರೆ, ಆಕೆಯ ಪ್ರೇಮ, ಶೋಕ, ಭಕ್ತಿ ಈ ತ್ರಿಪ್ರವಾಹದಲ್ಲಿ ನಾವು ತೇಲಿಹೋಗುವೆವು. ಇದು ಬರಿಯ ಮಾತಿನ ಚಾತುರ್ಯವಲ್ಲ. ಹೃದಯದ ಅನುಭವವನ್ನೂ ಆ ಮನೋಭಾವಗಳನ್ನೂ ಮನೋಹರವಾಗಿ ಹೊರಗೆಡಹುವ ರಸಿಕತೆ. ಶ್ರೀರಾಮಚಂದ್ರನ ಹೃದಯಗೀತ ಬರಿಯ ವಾಕ್‌ಚಾತುರ್ಯವಲ್ಲ. ಸೀತೆಯನ್ನು ಕುರಿತು ರಾಮ ಹೀಗೆ ಪ್ರಲಾಪಿಸುತ್ತಾನೆ: "ಹಿಂದೆ ನಾನು ಕತ್ತಿಗೆ ಹಾರವನ್ನೇ ಧರಿಸುತ್ತಿರಲಿಲ್ಲ. ನನಗೂ ಸೀತೆಗೂ ನಡುವೆ ಅದು ಯಾಕೆ ಎಂದು? ಆದರೆ ಈಗ ಸೀತೆಗೂ ನನಗೂ ನಡುವೆ ಎಷ್ಟು ಪರ್ವತ, ಎಷ್ಟು ನದಿ ಎಷ್ಟು ಕಾಡುಗಳು, ಅಯ್ಯೋ!"

ಹಾರೋ ನಾರೋಪಿತಃ ಕಂಠೇ
ಮಯಾ ವಿಶ್ಲೇಷಭೀರುಣಾ ।
ಇದಾನೀಮಂತರೇ ಜಾತಾಃ
ಪರ್ವತಾಃ ಸರಿತೋ ದ್ರುಮಾಃ ॥

ವಾಕ್‌ಚಾತುರ್ಯದಲ್ಲಿಯೂ ಪ್ರೌಢತೆಯನ್ನು ಪ್ರಕಟಿಸಿದ ಕವಿಗಳಿಗೆ ನಮ್ಮಲ್ಲಿ ಕಡಿಮೆ ಇಲ್ಲ. ಅನೇಕರದು ಅದ್ಭುತ ಚಮತ್ಕಾರ. ಒಬ್ಬ ಭಿಕ್ಷುಕ ಒಂದು ಶಂಖವನ್ನು ಭೊಂ ಭೊಂ ಎಂದು ಊದುತ್ತಾನೆ. ಅದನ್ನು ಸಾವಿರಾರು ಮಂದಿ ನೋಡುತ್ತಾರೆ. ಅವರಲ್ಲಿ ಒಬ್ಬನಿಗೆ ಮಾತ್ರ ಅದನ್ನು ಕಂಡು ಚತುರೋಕ್ತಿ ಹೊಳೆಯುತ್ತದೆ. "ಈ ಶಂಖವನ್ನು ನೋಡಿ, ಇದು ಜನಿಸಿದುದು ಸಮುದ್ರದಲ್ಲಿ. ಸಮುದ್ರ ಎಲ್ಲ ಐಶ್ವರ್ಯಗಳಿಗೂ ಆಕರ – ರತ್ನಾಕರ. ಆದುದರಿಂದ ಮಹಾಲಕ್ಷ್ಮಿ ಇದರ ಸ್ವಂತ ಸಹೋದರಿ ಆದರೆ ಇದರ ಕಾರ್ಯ ಯಾಚಕಕ್ಕಾಗಿ ರೋದನ. ಎಲ್ಲಾ ವಿಧಿ !"

ಪಿತಾ ರತ್ನಾಕರೋ ಯಸ್ಯ ಲಕ್ಷ್ಮೀರ್ಯಸ್ಯ ಸಹೋದರೀ ।
ಶಂಖೋ ರೋದಿತಿ ಭಿಕ್ಷಾರ್ಥೀ ಫಲಂ ಭಾಗ್ಯಾನುಸಾರತಃ ॥

ಮತ್ತೊಬ್ಬ ಕವಿಯು "ಇದೇನು ಅತಿಶಯ. ಶಂಖ ಪಡುವ ಕಷ್ಟವೇ ನಿಮಗೆ ದೊಡ್ಡದಾಗಿ ಕಾಣುತ್ತದೆಯಲ್ಲವೆ? ದೇವಾಸುರರು ಸಮುದ್ರವನ್ನು ಕಡೆದಾಗ ಅಲ್ಲಿ ಈಶ್ವರನೂ ಇದ್ದ. ವಿಷ್ಣುವೂ ಇದ್ದ. ಒಬ್ಬರಿಗೆ ಲಕ್ಷ್ಮಿ ಸಿಕ್ಕಿದಳು. ಮತ್ತೊಬ್ಬರಿಗೆ ವಿಷ. ವಿಧಿಯೇ ಬಲವತ್ತರವಾದುದು.

ದೈವಂ ಫಲತಿ ಸರ್ವತ್ರ
ನ ವಿದ್ಯಾ ನ ಚ ಪೌರುಷಂ ।
ಸಮುದ್ರಮಂಥನಾಲ್ಲೇಭೇ
ಹರಿರ್ಲಕ್ಷ್ಮೀಂ ಹರೋ ವಿಷಮ್ ॥

ಅವರ ಮಿತ್ರರು ಹೀಗೆಂದರು. "ವಿಧಿಯನ್ನು ಯಾಕೆ ದೂಷಿಸಬೇಕು? ನೆಕ್‌ಟೈ, ಕ್ರಾಪು, ಸಾಬೂನು ಇವು ತನಗೆ ಇಲ್ಲದಿದ್ದರೂ ವಿಷ್ಣು ಅಲಂಕಾರಪ್ರಿಯ. ವಿಷ್ಣು ಬುದ್ಧಿಶಾಲಿ. 'ಯೋಗ್ಯತೆಗೆ ಉಡುಪು ಪ್ರಧಾನ. ನೀವೇ ಸ್ವಲ್ಪ ಯೋಚಿಸಿ ನೋಡಿ. ಸಮುದ್ರರಾಜ ನೋಡಿದ. ಪೀತಾಂಬರವನ್ನು ಧರಿಸಿ ವಿಷ್ಣು ನಿಂತಿದ್ದ. ಆತನಿಗೆ ಲಕ್ಷ್ಮಿಯನ್ನು ಕೊಟ್ಟ. ಮಗ್ಗುಲಲ್ಲಿ ಕರಿಯ ಚರ್ಮ ಧರಿಸಿ ನಿಂತಿದ್ದವನಿಗೆ ವಿಷ ಕೊಟ್ಟ. ತಪ್ಪು ಯಾರದು ಎಂಬುದನ್ನು ನಾವೇ ತಿಳಿದುಕೊಳ್ಳಬಹುದು."

ಕಿಂ ವಾಸಸಾ ತತ್ರ ವಿಚಾರಣೀಯಂ
ವಾಸಃ ಪ್ರಧಾನಂ ಖಲು ಯೋಗ್ಯತಾಯಾಃ ।
ಪೀತಾಂಬರಂ ವೀಕ್ಷ್ಯ ದದೌ ಸ್ವಕನ್ಯಾಂ
ಚರ್ಮಾಂಬರಂ ವೀಕ್ಷ್ಯ ವಿಷಂ ಸಮುದ್ರಃ ॥

ಇದನ್ನು ಕೇಳಿದ ಮತ್ತೊಬ್ಬ ಕವಿಗೆ ಈ ಶಿವದೂಷಣೆಗೆ ಒಪ್ಪಿಗೆ

ಯಾಗಲಿಲ್ಲ. ಅವರು ಸ್ತ್ರೀಯಿಂದ ದುಃಖ ಅನುಭವಿಸಿದವರಿದ್ದಿರ ಬೇಕು. "ವಿಷ, ಲಕ್ಷ್ಮಿ, ಎಂದು ಸುಲಭವಾಗಿ ಹೇಳಿಬಿಡುತ್ತೀರಿ. ನಿಜವಾಗಿ ವಿಷ ಯಾವುದು ನಿಮಗೆ ಗೊತ್ತೆ? ಫಲವನ್ನು ನೋಡಿ ತಾನೇ ಗುಣವನ್ನು ಗ್ರಹಿಸಬೇಕು. ವಿಷವನ್ನು ಕುಡಿದ ಶಿವ ಕಣ್ಣು ಬಿಟ್ಟುಕೊಂಡು ಎಚ್ಚರವಾಗಿಯೇ ಇದ್ದಾನೆ. ಲಕ್ಷ್ಮೀ ಸ್ಪರ್ಶ ಹೊಂದಿದ ವಿಷ್ಣು ಯಾವಾಗಲೂ ಕ್ಷೀರಸಮುದ್ರದಲ್ಲಿ ಗೊರಕೆ ಹೊಡೆಯುತ್ತಿದ್ದಾನೆ. ಆದುದರಿಂದ ವಾಸ್ತವವಾಗಿ ಸ್ತ್ರೀಯೇ ನಂಜು."

ಹಾಲಾಹಲೋ ನೈವ ವಿಷಂ, ವಿಷಂ ರಮಾ
ಜನಾಃ ಪರಂ ವ್ಯತ್ಯಯಮತ್ರ ಮನ್ವತೆ ।
ನಿಪೀಯ ಜಾಗರ್ತಿ ಸುಖೇನ ತಂ ಶಿವಃ
ಸ್ಪೃಶನ್ನಿಮಾಂ ಮುಹ್ಯತಿ ನಿದ್ರಯಾ ಹರಿಃ ॥

ಈ ಸ್ತ್ರೀ ದ್ವೇಷಿಯ ಅಭಿಪ್ರಾಯವನ್ನು ಯಾರು ತಾನೇ ಒಪ್ಪುತ್ತಾರೆ? ಕಾಳಿದಾಸನೇ ಒಪ್ಪಲಿಲ್ಲ. ಪ್ರಾಜ್ಞನಾದ ಕಾಳಿದಾಸ, ಸೃಷ್ಟಿಯ ಅರ್ಧ ಭಾಗವನ್ನು ಒಂದೇ ಸಲಕ್ಕೆ ವಿಷವೆಂದು ಒಪ್ಪಿಯಾನೆ? ಕಾಳಿದಾಸ ಶಿವಭಕ್ತನಲ್ಲವೆ? ವಾಕ್, ಅರ್ಥದಂತೆ ಶಿವ ಪಾರ್ವತಿಯರು ಸೇರಿಲ್ಲವೆ? ಕಾಳಿದಾಸ ಕಾಳಿಯ ದಾಸನೇ ಅಲ್ಲವೆ? "ಸಾರವಿಲ್ಲದಿರುವ ಸಂಸಾರದಲ್ಲಿ ಸಾರವಾದುದು ಸ್ತ್ರೀ ಒಂದೇ. ಇದನ್ನು ತಿಳಿದು ತಾನೇ ಈಶ್ವರ ತನ್ನ ದೇಹದಲ್ಲಿ ಅರ್ಧವನ್ನು ಪಾರ್ವತಿಗೆ ಕೊಟ್ಟು ಅರ್ಧನಾರೀಶ್ವರನಾದನು.

ಅಸಾರಭೂತೇ ಸಂಸಾರೇ
ಸಾರಭೂತಾ ನಿತಂಬಿನೀ ।
ಇತಿ ಸಂಚಿಂತ್ಯ ವೈ ಶಂಭು –
ರರ್ಧಾಂಗೇ ಪಾರ್ವತೀಂ ದಧೌ ॥

ಅದನ್ನು ಕೇಳಿದ ಕವಿ ಭೇಷ್ ಎಂದರು. "ಕಾಳಿದಾಸ ಹೇಳಿದುದರಲ್ಲಿ ತಪ್ಪು ಉಂಟೆ? ಆದರೆ ಅದರಲ್ಲಿ ಒಂದು ವಿನೋದ ನೋಡಿ. ಶೂರರಾದ ಎಷ್ಟೋ ಬಿಲ್ಲಾಳುಗಳು ಇದ್ದಾರೆ. ಬಾಣ ಬಿಟ್ಟು ಯಾವುದನ್ನೂ ಎರಡಾಗಿ ಕತ್ತರಿಸಿ ಬಿಡುತ್ತಾರೆ. ಆದರೆ ಒಂದು ಬಾಣ ಬಿಟ್ಟು ಎರಡನ್ನು ಒಂದು ಮಾಡುವ ಶಕ್ತಿ ಇರುವುದು ಮನ್ಮಥನೊಬ್ಬನಿಗೆ ಮಾತ್ರ."

ಏಕಂ ವಸ್ತು ದ್ವಿಧಾ ಕರ್ತುಂ
ಬಹವಃ ಸಂತಿ ಧನ್ವಿನಃ ।
ಧನ್ವೀ ಸ ಮಾರ ಏವೈಕೋ
ದ್ವಯೋರೈಕ್ಯಂ ಕರೋತಿ ಯಃ ॥

ಸಂಸ್ಕೃತ ಸಾಹಿತ್ಯದಲ್ಲಿ ಈ ಬಗೆಯ ಸರಸೋಕ್ತಿಗಳಿಗೆ ಲೆಕ್ಕವುಂಟೆ?

ಕಿಡಿನುಡಿಗಳು

ಅನೇಕ ಹೆಂಡಂದಿರಿಗೆ ಗಂಡಂದಿರನ್ನು ಸದ್ಗೃಹಸ್ಥರನ್ನಾಗಿ ಮಾಡುವುದರಲ್ಲೆ ಹೊತ್ತು ಹೋಗಿಬಿಡುವುದರಿಂದ ಸ್ವತಃ ಸದ್ಗೃಹಿಣಿಯರಾಗಲು ಸಮಯವೇ ಇರುವುದಿಲ್ಲ. . . . .

—ಮೇರಿ ಅಲ್ಕಸ್

ಬ್ರಹ್ಮಚಾರಿಗಳು ಹೆಂಗಸರನ್ನು ವಿವಾಹಿತರಿಗಿಂತಲೂ ಚೆನ್ನಾಗಿ ಬಲ್ಲರು. ಇಲ್ಲದಿದ್ದರೆ ಅವರೂ ಮದುವೆ ಆಗುತ್ತಿದ್ದರು. . . . .

—ಎಚ್. ಎಲ್. ಮೆಂಕೆನ್

ಕವಿ-ವಿಜ್ಞಾನಿಗೆ

ಬೇಡ, ದಮ್ಮಯ್ಯ ! ಓ ವಿಜ್ಞಾನಿ,
ಈ ಅಲರ ಪಕಳೆಯನು ತೂಗದಿರು ನನ್ನೆದುರು
ನಿನ್ನ ಅತ್ಯಾಧುನಿಕ ತ್ರಾಸಿನಲಿ ;
ಹೇಳದಿರು ಅದರ ನಿರ್ದಿಷ್ಟ ಭಾರವ ನನಗೆ
ನಿನ್ನ ಮೆಟ್ರಿಕ್ ತೂಕದಲ್ಲಿ :
ದಶಾಂಶ ಚಿನ್ಹದ ಬಲಗಡೆಗೆ
ಪಂಚಮಸ್ಥಾನ ಪರ್ಯಂತ ಭಾಗಿಸಿ ಸರಿಮಾಡಿ !
    ದಮ್ಮಯ್ಯ ! ಬೇಡ, ಓ ವಿಜ್ಞಾನಿ,
    ನಿನಗೆ ನನ್ನಾಣೆ !

ಬೇಡ ಬೇಡೆನಗೆ ನೀ ಕೊಡಬೇಡ ಲೆಕ್ಕವನು–
ಈ ಗುಲಾಬಿಯಲಿ ಕಸದಂಶವಿಷ್ಟು,
ನೀರಿಷ್ಟು, ಇಂಥಿಂಥ ರಸಾಯನಗಳಿಷ್ಟಿಷ್ಟು
ಎಂದು ಶತಾಂಶ ಭಾಷೆಯಲಿ !
ರಸವೆ ಮೈವೆತ್ತು ಬಂದಿದೆಯೆಂದು ನಾನಿದಕೆ
ಸ್ತೋತ್ರವೊಂದನು ಸಮೆಯುತಿರೆ,
ತರಬೇಡ ನಿನ್ನ ಲೆಕ್ಕವನು—
ನನಗೆ ದುಃಖವನು !

ಹಸು ಕರುವ ನೆಕ್ಕುತ್ತೆ ನಿಂತಾಗ,
ನಾನದರ ವಾತ್ಸಲ್ಯಕ್ಕೆ ಮುಗ್ಧನಾಗಿ ಅರೆಮುಗಿದ ಕಣ್ಣಾಗಿರಲು,
ತಿವಿದು ಕಿವಿಯಲಿ ನಿನ್ನ ಸಂಶೋಧನೆಯ ಫಲಿತಾಂಶ
ಶಲ್ಯವನು,

ಹೇಳದಿರು ವಿಜ್ಞಾನಿ,
" ಈ ಕರುವ ಮೈಯ ಉಪ್ಪಿನ ರುಚಿಗೆ
ನೆಕ್ಕುತಿಹುದೀ ತಾಯಿ '' ಎಂದು ;
" ಕರುವಿನಾ ಮೈಯ ಒಂದೊಂದು ಚದುರಿಂಚಿನಲಿ
ದಿನವೊಂದರಲಿ ಹಸುವಿಂಗೆ ಒಂದೌಸಿನಲಿ
ಇಂತಿಷ್ಟು ಲಕ್ಷದಂಶದ ಉಪ್ಪು ದೊರೆವುದೆಂದೆನಗೆ
ಹೇಳಬೇಡವೊ, ನಮೋ ನಿನಗೆ !

ಹಾ ಬಂದೆಯಾ, ವಿಜ್ಞಾನಿ ?
ಏಕಾಂತದಲಿ ನಾನೆನ್ನ ನಲ್ಲೆಯನು ಚುಂಬಿಸಿರೆ
ತಂದೆಯಾ ನಿನ್ನ ಸೂಕ್ಷ್ಮಾತಿಸೂಕ್ಷ್ಮ ಯಂತ್ರವನು ?
ಹಚ್ಚದಿರು ನಮಗದನು ;
ನಮ್ಮ ಪ್ರೇಮದ ಭರವನಳೆದು
" ಇದೊ ನಿನ್ನ ಮೇಲಿವಳ ಪ್ರೇಮ
ನೂರೈವತ್ತನಾಲ್ಕರ ಮೇಲೆ
ಆರು ಶತಸಹಸ್ರಾಂಶವಿದೆ " ಎಂದೆನಗೆ ಉಸುರದಿರು !

ಬಣ್ಣಬಣ್ಣದ ಚಿಟ್ಟೆಯೊಂದ
ಕಬ್ಬಿಣದ ಘನದ ಮೇಲಿರಿಸಿ,
ಆರು ಮಣ ಏಳು ಸೇರಿನ ಸುತ್ತಿಗೆಯಿಂದ
ಸೆಕುಂದಿಗೆ ಇಪ್ಪತ್ತೊಂದೂವರೆ ಫೂಟಿನ ವೇಗದಿಂದ
ಕುಟ್ಟಿದರೆ,
ಆ ಚಿಟ್ಟೆಯ ಪ್ರಾಣ
ಒಂದು ಸೆಕುಂದಿನ ಆರುನೂರ ಎಪ್ಪತ್ತಮೂರಂಶದಲಿ
ಹಾರಿಹೋಗುವುದೆಂದು ಹೇಳಬೇಡ,
ಅರಗಿಸಲಾರೆನೀ ಜ್ಞಾನ,
ನಾನು ನಿತ್ರಾಣ !

ಬೇಡ ಬೇಡ !
ನನಗೆ ಡಾರ್ವಿನನ ಪರಿಣಾಮವಾದವನು ತಿಳಿಹೇಳಬೇಡ;
ನಾ ಕಳೆದುಕೊಂಡ ಬಾಲದ ಸ್ಥಳವ ಸಂದೇಹದಿಂ
ಮುಟ್ಟಿ ನೋಡುವ ಹಾಗೆ ಮಾಡಬೇಡ !

ಹಿಡಿವೆ ನಿನ್ನ ಕಾಲ
ನನ್ನನೆಳೆದು ಫ್ರಾಯ್ಡ್ ಥಿಯರಿಯ ಭೂತಗನ್ನಡಿಯೆದುರು
ನಿಲ್ಲಿಸಿ
ಪಶುವಿನ ಪಿಶಾಚಿಯನು
ನನ್ನ ಮುಖದಲಿ ನಾನೆ ಕಾಣುವೊಲು ಮಾಡಬೇಡ.
ಓ ವಿಜ್ಞಾನಿ,
ನಾನಿನ್ನೂ ದುರ್ಬಲ ಮನುಷ್ಯಪ್ರಾಣಿ !

ವಿಶ್ವದ ಸಮಸ್ಯೆಗೆ ನೀನುತ್ತರವ ಬಲ್ಲೆ,
ನನಗೆ ಗೊತ್ತು.
ಅದಕಾಗಿ ನಿನಗೆ ಧನ್ಯೋಸಿ ಎಂಬೆ
ಅಷ್ಟಕ್ಕೆ ಬಿಡು ನನ್ನ, ಬೇಡಿಕೊಂಬೆ :
ನಿನ್ನ ಸೂತ್ರಗಳ ಮಾರುದ್ದ ಮಾಲೆಯನು ಮಾತ್ರ
ನನ್ನ ಕೊರಳಿಗೆ ತೊಡಿಸಬೇಡ,
ಅದು ನನಗೆ ಮೃತ್ಯು !

— ಪಾ. ವೆಂ. ಆ.

ಲೇ :— ಜ್ಯೋತಿಷಿ ಶ್ರೀಕೃಷ್ಣಶಾಸ್ತ್ರಿ ಭಿಡೆ
ಭವಿಷ್ಯಕಥನ ಆಫೀಸ, ಕಾರ್ಲೇಕರ ಬಿಲ್ಡಿಂಗ,
ಖಡೇಬಜಾರ, ಬೆಳಗಾವಿ

ವರ್ಷ ಭವಿಷ್ಯ

೧೯೫೧ ಅಕ್ಟೋಬರ ೩೧ ರಿಂದ ೧೯೫೨ ಅಕ್ಟೋಬರ ೧೮ ರ ವರೆಗೆ

ಮೇಷ

ಈ ವರ್ಷ ಮಾರ್ಚ ಕೊನೆಯವರೆಗೆ ನಿಮಗೆ ಬಹಳ ಕಷ್ಟವನ್ನನುಭವಿಸಬೇಕಾಗಿ ಬಂದರೂ ಅನಂತರ ಸ್ವಲ್ಪಾದರೂ ಸಮಾಧಾನವೆನಿಸದಿರಲಾರದು. ಇದನ್ನು ಚೆನ್ನಾಗಿ ಖಾತ್ರಿಮಾಡಿಕೊಂಡು ಈ ರಾಶಿಯುವರು ತಮ್ಮ ಚಟುವಟಿಕೆಗಳನ್ನು ನಡೆಸಬೇಕೆಂದು ಮೊದಲೇ ಹೇಳಿಬಿಡುತ್ತೇವೆ.

ಈ ರಾಶಿಯುವರ ಆರೋಗ್ಯವು ಪ್ರಾಯಶಃ ಉತ್ತಮ ಉಳಿಯುವದು. ಎಪ್ರೀಲಿನಿಂದ ಶಾರೀರಿಕ ಮತ್ತು ಮಾನಸಿಕ ಸುಖ ವಿಶೇಷ ಪುಷ್ಟಿಕಾರಕವೆನಿಸುವದು. ಆದರೂ ನವಂಬರ ೧೫ ರಿಂದ ಜನೆವರಿ ೧೨ ರ ವರೆಗೆ ಅಪಘಾತದ ಸ್ಥಳದಿಂದ ಮತ್ತು ಅಗಸ್ಟ ೧೨ ರಿಂದ ಸಪ್ಟಂಬರ ೨೭ ರ ವರೆಗೆ ಅಪಚನವಾಗದಂತೆ ದಕ್ಷತೆಯಿಂದಿರಬೇಕು. ಮಾರ್ಚ ಕೊನೆಯುವರೆಗೆ ಪ್ರಾಪಂಚಿಕ ಸುಖ ಅಷ್ಟೊಂದು ಅನುಕೂಲ ದೊರೆಯುವದಿಲ್ಲ. ಮನೆಯಲ್ಲಿ ಕಲಹ ಮತ್ತು ಹೊರಗೆ ಭಾಗಾದಿತನ ಬಹಳ ಹೆಚ್ಚುವದು - ಎಪ್ರಿಲ ನಂತರ ಮಾತ್ರ ಅಷ್ಟೊಂದು ತೊಂದರೆಯೆನಿಸದು. ಆದರೆ ಜುಲೈ ೧೨ರ ನಂತರ ನೆರೆಹೊರೆಯುವರು ಏನಾದರೊಂದು ನೆವ ತೆಗೆದು ನಿಮ್ಮ ಸಮಾಧಾನದಲ್ಲಿ ವ್ಯತ್ಯಯವನ್ನುಂಟುಮಾಡುವರು.

ಸ್ತ್ರೀಯಳ ಕಾಯಿಲೆಯಿಂದಲೋ ಅವಳು ದೂರ ಹೋಗುವದರಿಂದಲೋ ಇಲ್ಲವೆ ಪರಸ್ಪರ ಮತಭೇದದಿಂದಲೋ ಅವಳ ಸುಖದಲ್ಲಿ ಜನೆವರಿ ೧೨ ರಿಂದ ಅಗಸ್ಟ ೧೨ ರವರೆಗೆ ಬಹಳ ವಿರಸವೆನಿಸುವದು. ಉಳಿದ ಸಮಯದಲ್ಲಿ ಮಾತ್ರ ಅದು ಬಹಳ ಸರಸವೆನಿಸುವದು. ಆದರೂ ಈ ವರ್ಷದಲ್ಲಿ ಈ ವರೆಗೆ ಪರಸ್ಪರರಲ್ಲಿ ಇದ್ದ ಗಾಢ ಪ್ರೇಮದಲ್ಲಿ ಶೈಥಿಲ್ಯವುಂಟಾಗುವದು. ಮದುವೆಯಾಗುವದಿದ್ದವರ ವಿವಾಹ ಎಪ್ರಿಲದಿಂದ ಮುಂದೆ ಅಲ್ಪಾಯಾಸದಿಂದ ಜರಗುವದು. ಆದರೆ ಸಮಾರಂಭದಲ್ಲಿ ಮಾತ್ರ ಉಭಯ ಪಕ್ಷದವರೂ ನಿರುತ್ಸಾಹಿಗಳಾಗುವಂಥ ಘಟನೆಗಳು ಸಂಭವಿಸುವವು. ಮನೆಯಲ್ಲಿ ಬಹುಶಃ ಎಲ್ಲ ಜನರು ನಿಮ್ಮ ಬಗ್ಗೆ ಸಾಶಂಕರಾಗುವರು. ಕೊಂಕು ಮಾತಾಡುವರು. ಮನಬಂದಂತೆ ಮಾತಾಡುವರು. ಅಲ್ಲದೆ ಅವರ ಬಗ್ಗೆ ನೀವೆಷ್ಟೇ ಮಾಡಿದರೂ ಅದಕ್ಕಾಗಿ ನಿಮಗೆ ಧನ್ಯವಾದಗಳನ್ನರ್ಪಿಸದೆ ತಿರುಗಿ ಮೂಗುಮುರಿಯುವರು. ಜುಲೈ ೧೨ ರ ವರೆಗೆ ಮಕ್ಕಳ ಉನ್ನತಿಯಲ್ಲಿಯೂ ಅನೇಕ ವಿಪತ್ತುಗಳು. ಅವರ ವರ್ತನೆಯೂ ಸರಿಯಿರುವದಿಲ್ಲ. ಅವರಲ್ಲಿ ಯಾರದಾದರೂ ವಿವಾಹವಾಗುವದಿದ್ದರೆ ಅದು ಬಹಳ ಕಷ್ಟದಿಂದ ಮಾರ್ಚ ನಂತರವೇ ಜರುಗುವದು. ಜುಲೈ ೧೨ರ ನಂತರ ಇದ್ದ ಊರು ಬಿಟ್ಟು ಬೇರೆ ಕಡೆಗೆ ಇರಲಿಕ್ಕೆ ಹೋಗಬೇಕೆಂದೆನಿಸುವದು. ಇಷ್ಟೇ ಅಲ್ಲ, ಕೆಲವರಿಗೆ ಅದು ಶಕ್ಯವೂ ಆಗುವದು. ಮನೆಯಲ್ಲಿದ್ದ ಆಸ್ತಿಯಲ್ಲಿ ಹೆಚ್ಚಳವಾಗುವದಿಲ್ಲ. ಇಷ್ಟೇ ಅಲ್ಲ, ತದ್ವಿರುದ್ಧ ಮಾರ್ಚ ವರೆಗೆ ಇಲ್ಲವೆ ಜುಲೈ ೧೨ರ ನಂತರ ಅದನ್ನು ಒತ್ತೆ ಹಾಕಬೇಕಾದ ಇಲ್ಲವೆ ಮಾರಬೇಕಾದ ಪ್ರಸಂಗ ಬರುವದು. ಬೆಳೆಯೂ ಅಕಲ್ಪಿತ ಕಾರಣದಿಂದ ಆಯುತ್ತ ಹೊತ್ತಿಗೆ ಕೆಡುವದರಿಂದ ಅದೂ ಉಡಿಯಲ್ಲಿ ಬೀಳುವದಿಲ್ಲ. ಮನೆ ದುರಸ್ತಿ ಮಾಡಬೇಕಾದ ಪ್ರಸಂಗ ಬರುವದು. ಬಾಡಿಗೆಯಿಂದ ಇದ್ದರೆ ಮನೆಯೊಡೆಯರಿಂದ ತೊಂದರೆ. ಅದನ್ನು ಬಿಡುವ ಪ್ರಸಂಗವೂ ಬರಬಹುದು: ಜನೆವರಿ ೧೨ ರಿಂದ ಜೂನ ೪ರ ವರೆಗೆ ವಾಹನಗಳು ಬಹಳ ಮಟ್ಟಿಗೆ ಕೆಡುವವು. ನೌಕರರು ಮಾರ್ಚ ಕೊನೆಯುವರೆಗೆ ಬಹಳ ದುರಭಿಮಾನಿಗಳಾಗಿ ವರ್ತಿಸುವರು.

ಧಂದೆ ಮತ್ತು ಕೂಲಿ ಮಾಡುವವರ ಸ್ಥಿತಿಯೂ ಮಾರ್ಚ ಕೊನೆಯುವರೆಗೆ ಹೀಗೆಯೇ ವಿಸ್ಖಲಿತ ಉಳಿದು ಮುಂದೆ ಮಾತ್ರ ಬಹಳ ಸುಧಾರಿಸುವದು. ಆದರೂ ಆ ಮಾನದಿಂದ ದ್ರವ್ಯಲಾಭ ಮಾತ್ರ ಕಡಿಮೆಯೇ. ಅದೂ ಉಡಿಯಲ್ಲಿ ಬೀಳುವಾಗ ಏನೇನೋ ಗೊಂದಲವೆದ್ದು ಬಹಳ ಕಾಲದವರೆಗೆ ವಿಲಂಬಿಸುವದು. ಮಾರ್ಚದ ವರೆಗೆ ಧಂದೆಯಲ್ಲಿ ಪತ್ತು, ಅಬ್ರು ಇಲ್ಲವೆ ಪ್ರತಿಷ್ಠೆಯನ್ನು ಕಾಯ್ದುಕೊಳ್ಳಬೇಕಾದರೆ ಸಾಕುಬೇಕಾಗಿ ಹೋಗುವದು. ಗಿರಾಕಿಗಳು ಯಾವಾಗಲೂ ತಪ್ಪು ತಿಳಿವಳಿಕೆ ಮಾಡಿಕೊಳ್ಳುವರು. ಡಿಸೆಂಬರ ೧ ರಿಂದ ೨೭, ಮಾರ್ಚ ೧೦ ರಿಂದ ಎಪ್ರಿಲ ೫, ಮೇ ೨೨ ರಿಂದ ಜೂನ ೧೫, ಜುಲೈ ೧೦ ರಿಂದ ಅಗಸ್ಟ ೩, ಸಪ್ಟೆಂಬರ ೨೧ ರಿಂದ ಅಕ್ಟೋಬರ ೧೭ ಈ ಕಾಲವು ಲಾಭಕ್ಕೆ ಬಹಳ ಅನುಕೂಲವೆನಿಸುವದು. ಯಾಂತ್ರಿಕ ಉದ್ಯೋಗ, ಬಟ್ಟೆ, ಹೊಲಿಗೆ, ಕುರಿ ಆಡು ಸಾಕುವಿಕೆ, ಒಕ್ಕಲತನ, ಕಣಿ ಕೆಲಸ ಮತ್ತು ಗಾಣದ ಕೆಲಸ ಮಾಡುವವರು ಈ ವರ್ಷ ಬಹಳ ದಕ್ಷತೆಯಿಂದ ಇರಬೇಕು. ಎಪ್ರಿಲ ಪ್ರಾರಂಭದ ವರೆಗಂತೂ ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಕುಳಿತುಕೊಳ್ಳಬೇಕು. ಆ ಅವಧಿಯಲ್ಲಿ ಮಿತ್ರರಿಂದಲೂ ಹೊಡೆತ ಬೀಳುವದು. ಪ್ರತಿಷ್ಠಿತ ಗಿರಾಕಿಗಳೂ ರೊಕ್ಕಕೊಡುವದನ್ನು ತಪ್ಪಿಸುವರು.

ನೌಕರಿ ಮಾಡುವವರಿಗೆ ಸಂಬಳ ಸಕಾಲಕ್ಕೆ ಸಿಕ್ಕರೂ ಬಢತಿಯ ಆಸೆ ಇಲ್ಲವೆ ಇಲ್ಲ. ಆದರೆ ಅನನುಕೂಲ ಸ್ಥಳದಲ್ಲಿ ಇದ್ದರೆ ಎಪ್ರಿಲದ ನಂತರ ಸ್ವಲ್ಪ ಪ್ರಯತ್ನದಿಂದ ಅನುಕೂಲ ಸ್ಥಳಕ್ಕೆ ವರ್ಗ ಮಾಡಿಸಿಕೊಳ್ಳಬಹುದು. ಮಾರ್ಚ ಕೊನೆಯ ವರೆಗೆ ವರಿಷ್ಠರು ಕೆಲಸದ ಬಗ್ಗೆ ತೊಂದರೆ ಕೊಟ್ಟಷ್ಟೇ ಮುಂದೆ ಆ ಬಗ್ಗೆ ಸಂತೋಷ ಪ್ರದರ್ಶಿಸುವರು.

ಕೋರ್ಟ ಕಚೇರಿ ದಾವೆಗಳಲ್ಲಿ ಇಲ್ಲವೆ ಖಾಸಗಿ ವ್ಯಾಜ್ಯದಲ್ಲಿ ಪ್ರತಿಪಕ್ಷಿಗಳಿಗೆ ಹಾನಿ ವಿಶೇಷ

ನಾದರೂ ಆ ಮಾನದಿಂದ ನಿಮಗೆ ಯಶಸ್ಸು ಸಾಕಷ್ಟು ದೊರೆಯುವದಿಲ್ಲ. ಕ್ಷುಲ್ಲಕ ಶತ್ರುವನ್ನೇ ದಾರಿಗೆ ತರಬೇಕಾದರೆ ಸಾಕುಬೇಕಾಗುವದು. ಮಾರ್ಚ ನಂತರ ದೊಡ್ಡ ಶತ್ರುಗಳಲ್ಲಿ ಒಬ್ಬನ ಬಡಿದಾಟದಲ್ಲಿಯ ಮುದ್ದೆ ತಾನಾಗಿಯೇ ಇಲ್ಲದಂತಾಗಿ ಅದರ ಲಾಭ ನಿಮಗೆ ಸಿಕ್ಕುವದು.

ಈ ರಾಶಿಯ ಸ್ತ್ರೀಯರಾರಾದರೂ ಹಡೆಯುವವರಿದ್ದರೆ ಮಾರ್ಚನಂತರ ಅತಿ ಸುಲಭವಾಗಿ ಹಡೆಯುವರು. ಜುಲೈ ೧೨ ರ ನಂತರ ಬಹುಶಃ ಗಂಡುಮಕ್ಕಳನ್ನು ಹಡೆಯುವರು.

ಮಾರ್ಚನಂತರ ಆಗುವ ಪರೀಕ್ಷೆಗಳಲ್ಲಿ ಯಶಸ್ಸಿನ ಬಗ್ಗೆ ವಿದ್ಯಾರ್ಥಿಗಳಿಗೆ ಎಷ್ಟು ಖಾತ್ರಿ ಹೇಳಬಲ್ಲೆವೊ ಅಷ್ಟು ಅದಕ್ಕೂ ಮೊದಲು ಇಲ್ಲ. ವಿಶೇಷವಾಗಿ ಗಣಿತದ ಬಗ್ಗೆ ಹೆಚ್ಚು ಕಾಳಜಿ ತೆಗೆದುಕೊಳ್ಳಬೇಕು.

ವೃಷಭ

ಈ ರಾಶಿಯವರಿಗೆ ಈ ವರ್ಷ ಪ್ರಪಂಚದಲ್ಲಿ ಹೆಚ್ಚು ಕಡಿಮೆ ತೊಂದರೆಯನ್ನನುಭವಿಸಬೇಕಾಗಿ ಬಂದರೂ ಔದ್ಯೋಗಿಕ ಯಶಸ್ಸು ಮತ್ತು ಲಾಭಕ್ಕೆ ಬಹಳ ಅನುಕೂಲವಿರುವದು. ಇದನ್ನು ಸ್ಮರಣೆಯಲ್ಲಿಟ್ಟುಕೊಂಡು ನೀವು ನಿಮ್ಮ ಚಟುವಟಿಕೆಗಳನ್ನು ನಡೆಸಬೇಕು.

ನಿಮ್ಮ ಆರೋಗ್ಯ ಮಾರ್ಚ ಕೊನೆಯ ವರೆಗೆ ನಿರೋಗಿಯಿದ್ದಷ್ಟು ಮುಂದೆ ಉಳಿಯಲಾರದು. ಯಾವದೊಂದು ಅಜ್ಞಾತ ರೋಗದಿಂದ ಇಲ್ಲವೆ ಗುಪ್ತ ಚಿಂತೆಯಿಂದ ಅದು ಆಗ ಕೆಡುವ ಅಂಜಿಕೆಯಿದೆ. ಅದರಲ್ಲಿಯೂ ನವಂಬರ ೨ರಿಂದ ಡಿಸೆಂಬರ ೧, ಫೆಬ್ರುವರಿ ೧೫ ರಿಂದ ಮಾರ್ಚ ೧೦, ಮೇ ೨೨ ರಿಂದ ಜೂನ ೧೫, ಜುಲೈ ೧೦ರಿಂದ ಅಗಸ್ಟ ೩ ಮತ್ತು ಅಗಸ್ಟ ೨೮ರಿಂದ ಸಪ್ಟೆಂಬರ ೨೧ ರ ಅವಧಿಯಲ್ಲಿ ನೀವು ಬಹಳ ನಿರೋಗಿಗಳಾಗಿ ಉಳಿಯುವಿರಿ. ಆದರೆ ಮಾರ್ಚ ೨ರಿಂದ ಜುಲೈ ೧೨ರ ವರೆಗಿನ ಅವಧಿಯಲ್ಲಿ ಉಳಿದ ಕಾರಣಗಳಿಗಾಗಿ ದೇಹ ಸ್ವಾಸ್ಥ್ಯಕ್ಕೆ ಬಹಳ ವ್ಯತ್ಯಯವುಂಟಾಗುವದು. ಅದರಂತೆ ವರ್ಷಾರಂಭದಿಂದ ಜುಲೈ ೧೨ರ ವರೆಗೆ ಮನೆಯಲ್ಲಿ ಮತ್ತು ಹಳ್ಳಿಯಲ್ಲಿ ಅನೇಕರೊಡನೆ ತಕರಾರು, ವಿರೋಧ ಮತ್ತು ವಾಗ್ಯುದ್ಧದ ಪ್ರಸಂಗ ಮೇಲಿಂದ ಮೇಲೆ ಬರುವದು. ಜುಲೈ ೧೨ರ ನಂತರ ಬಂಧುವರ್ಗದವರಿಗೆ ಕಾಯಿಲೆಯ ಅಂಜಿಕೆ ಇದೆ. ಸರ್ವಸಾಧಾರಣವಾಗಿ ನವಂಬರ ೧೫ರಿಂದ ಡಿಸೆಂಬರ ೧೩, ಜನೆವರಿ ೮ ರಿಂದ ಫೆಬ್ರುವರಿ ೨೯, ಮಾರ್ಚ ೧೪ ರಿಂದ ಎಪ್ರಿಲ ೨, ಮೇ ೨೫ ರಿಂದ ಜೂನ ೨೭, ಅನಂತರ ಸಪ್ಟೆಂಬರ ೨೦ರಿಂದ ಅಕ್ಟೋಬರ ೬ರ ವರೆಗಿನ ಅವಧಿಯು ದೇಹಸೌಖ್ಯಕ್ಕೆ ಅನುಕೂಲವೆನಿಸುವದು.

ಈ ವರ್ಷದಲ್ಲಿ ನಿಮಗೆ ಸ್ತ್ರೀಸುಖದಲ್ಲಿ ಮೇಲಿಂದ ಮೇಲೆ ವ್ಯತ್ಯಯ ಬರುವದು. ಜನೆವರಿ ೧೨ರಿಂದ ಜೂನ ೪ರ ವರೆಗೆಯಂತೂ ಉಭಯತರಲ್ಲಿ ತೀವ್ರ ಮತಭೇದವುಂಟಾಗಿ ಆಗಾಗ ವಾಗ್ಯುದ್ಧ ನಡೆಯುವದು. ನಿಮ್ಮ ಜನರು ಅವಳನ್ನು, ಅವಳ ಬಂಧುಗಳು ನಿಮ್ಮನ್ನು ಅವಲಂಬಿಸುವದು ನಿಮಗೆ ಸೇರುವದಿಲ್ಲ. ಉಭಯತರ ಸ್ವಭಾವದಲ್ಲಿ ಮಾರ್ಚ ನಂತರ ಬಹಳ ವಿಕ್ಷಿಪ್ತತೆಯುಂಟಾಗಿ ಅದರಿಂದ ಮನೆಯಲ್ಲಿಯ ಉಳಿದ ಜನರೂ ಯಾವಾಗಲೂ ಅಸಂತುಷ್ಟವುಳಿಯುವರು. ವಿವಾಹವಾಗುವವರಿಗೆ ಮಾರ್ಚ ಕೊನೆಯ ವರೆಗೆ ಬಾಸಿಂಗ ಬಲ ಬಹಳ ಇದೆ. ಆದರೆ ಮುಂದೆ ಮಾತ್ರ ಅಷ್ಟು ಜೋರು ಇಲ್ಲ. ವಿವಾಹ ಕೂಡಿಬಂದರೂ ಅದು ಆಗಬೇಕಾದರೆ ಸಾಕುಬೇಕಾಗುವದು. ಆಪ್ತರು ಮತ್ತು ನೆರೆಯವರು ಬಹಳ ವಿಘ್ನವನ್ನು ತಂದೊಡ್ಡುವರು. ಒಟ್ಟಾರೆ ಸ್ತ್ರೀಸುಖಕ್ಕೆ ನವಂಬರ ೧೫ರಿಂದ ಜನೆವರಿ ೧೨ ಮತ್ತು ಆಗಸ್ಟ ೧೨ರಿಂದ ಸಪ್ಟೆಂಬರ ೨೭ರ ವರೆಗಿನ ಅವಧಿಯು ಅನುಕೂಲವಾಗಿರುವದು. ಸ್ವತಃ ಮನೆಯೊಡೆಯರು ನೀವಾಗಿದ್ದರೆ ಬಾಡಿಗೆಯವರಿಂದ, ನೀವು ಬಾಡಿಗೆ ಮನೆಯಲ್ಲಿದ್ದರೆ ಒಡೆಯರಿಂದ ಅತಿಶಯ ತೊಂದರೆಯಾಗುವದು. ಅದರಲ್ಲಿಯೂ ಜನೆವರಿ ೧೪ ರಿಂದ ಫೆಬ್ರುವರಿ ೧೨, ಮಾರ್ಚ ೧೪ ರಿಂದ ಮೇ ೧೪ ಮತ್ತು ಜುಲೈ ೧೫ ರಿಂದ ಅಗಸ್ಟ ೧೫ರ ವರೆಗಿನ ಕಾಲದಲ್ಲಿ ಬಹಳ ಬಡಿದಾಟವಾಗುವದು. ಮಾರ್ಚದೊಳಗಾಗಿ ಆಸ್ತಿಯನ್ನು ಹೆಚ್ಚಿಸಿಕೊಳ್ಳುವಿರಿ. ಅದಾಗದಿದ್ದರೂ ಇದ್ದುದನ್ನಾದರೂ ಸುಧಾರಿಸಿಕೊಳ್ಳುವಿರಿ. ಅನಂತರ ಮಾತ್ರ ಇದ್ದುದನ್ನು ಸುರಕ್ಷಿತ ಹೇಗೆ ಇಟ್ಟುಕೊಳ್ಳಬೇಕೆಂಬ ಚಿಂತೆ ಒಂದೇಸವನೆ ಹತ್ತುವದು. ಖಾಸಗಿ ವ್ಯಕ್ತಿಗಳಿಂದ, ಸರಕಾರದವರಿಂದ ಹೀಗೆ ಇಬ್ಬರಿಂದಲೂ ಬಹಳ ತೊಂದರೆಯುಂಟಾಗುವದು. ಈ ವರ್ಷದ ಬೆಳೆಯು ಉತ್ಪನ್ನ ಚೆನ್ನಾಗಿ ಬಂದರೂ ಮುಂದಿನ ವರ್ಷದ ಬೆಳೆ ಮಾತ್ರ ಕೈಗೆ ಹತ್ತುವದಿಲ್ಲ. ಮನೆಯಲ್ಲಿಯ ಆಳುಗಳು ನೋಕರರು ಜನೆವರಿ ೧೨ ರಿಂದ ಜೂನ ೪ರ ವರೆಗೆ ನಿಷ್ಕಾರಣವಾಗಿಯೂ ಬಹಳ ರೊಚ್ಚಿಗೆಬ್ಬಿಸುವರು. ವಾಹನಗಳು ದನಕರುಗಳು ಎರಡನೆಯವರ ಉಪಯೋಗದಲ್ಲಿ ಇದ್ದರೆ ಚೆನ್ನಾಗಿ ಉಳಿಯುವವು. ಆದರೆ ನೀವೇ ಅವುಗಳ ಉಪಯೋಗ ಮಾಡಹತ್ತಿದರೆ ಏನಾದರೂ ಅಡಚಣಿಯುಂಟಾಗುವದು; ಅವು ಕಾಯಿಲೆ ಬೀಳುವವು ಇಲ್ಲವೆ ಕೆಟ್ಟು ಹೋಗುವವು.

ಧಂದೆ ಮಾಡುವವರಿಗೆ ಮಾರ್ಚ ೨೯ ರ ವರೆಗೆ ಬಹಳ ಏರಿಕೆಯ ಕಾಲ. ಹಿಡಿದದ್ದೆಲ್ಲ ಹೊನ್ನೇ ಆಗುವದು. ಆ ಅವಧಿಯಲ್ಲಿ ಮಿತ್ರಸುಖವೂ ಬಹಳ ಅನುಕೂಲ. ನಿಮ್ಮ ಲಾಭದಲ್ಲಿ ಅವರೇ ಸಹಾಯಕರಾಗುವರು. ಎಪ್ರೀಲಿನಿಂದ ಧಂದೆ ವ್ಯವಹಾರ ಪ್ರಗತಿಪರವಾಗಿ ಸಾಗಿದ್ದರೂ ವೆಚ್ಚವೂ ಮಿತಿಮೀರಿ ಹೆಚ್ಚಿ ನಾಲ್ಕು ದುಡ್ಡು ಕೂಡಿಹಾಕಬೇಕೆಂದರೆ ಆಗುವದಿಲ್ಲ. ಅಲ್ಲದೆ ಉದ್ದರಿ ಕೈಗಡ ಕೊಡಬೇಕಾದ ಪ್ರಸಂಗವೂ ಬರುವದು. ಅದರಿಂದ ಹಣದ ಅಡಚಣಿಯೂ ಎನಿಸುವದು. ಉಪಕಾರ ಮಾಡಿದವನೊಬ್ಬನು ಪೇಚಿನಲ್ಲಿ ಬೀಳುವದರಿಂದ ಮನಸ್ಸಿನಲ್ಲಿಲ್ಲದಿದ್ದರೂ ಕರ್ತವ್ಯವೆಂದು ಅವನಿಗೆ ಬಹಳ ಸಹಾಯಮಾಡಬೇಕಾಗುವದು. ಮಾರ್ಚ ವರೆಗೆ ತೇಜೀಮಂದಿ ಅಂದಾಜೂ ಬಹಳ ಮಟ್ಟಿಗೆ ನಿಜವಾಗಿ ಪರಿಣಮಿಸುವದು. ಮುಂದೆ ಮಾತ್ರ ಅದು ಶಕ್ಯವಿಲ್ಲ. ಅದರಲ್ಲಿಯೂ ನವಂಬರ ೨ ರಿಂದ ಡಿಸೆಂಬರ ೧, ಡಿಸೆಂಬರ ೨೭ ರಿಂದ ಜನೆವರಿ ೨೧, ಫೆಬ್ರುವರಿ ೧೫ ರಿಂದ ಮಾರ್ಚ ೧೦, ಎಪ್ರಿಲ ೫ ರಿಂದ ೨೮, ಅಗಸ್ಟ ೩ ರಿಂದ ೨೮ ಈ ಅವಧಿಯು ಲಾಭಕ್ಕೆ ಬಹಳ ಅನುಕೂಲ ಕಾಲವು. ವಿಶೇಷವಾಗಿ ಪಲ್ಲೆ ಕಾಯಿ, ಹಣ್ಣುಹಂಪಲು, ಉಣ್ಣೆ ಮತ್ತು ಉಣ್ಣೆ ವಸ್ತ್ರ, ಬ್ಯಾಂಕಿಂಗ, ಪತ್ರಿಕೆ, ಸರಾಫರು, ಗಾಡಿಯವರು, ಮೋಟರಿನವರು, ಅಡಿಕೆ, ತೆಂಗು ಮತ್ತು ಬಣಗಾರಿಕೆ ಮೊದಲಾದ ಧಂದೆ ಮಾಡುವವರಿಗೆ ಈ ವರ್ಷ ಬಹಳ ಲಾಭವೆನಿಸುವದು. ಅದೇ ರೀತಿ ವಕೀಲರು, ಬ್ಯಾರಿಸ್ಟರರು, ಕೀರ್ತನಕಾರರು, ಪುರಾಣಿಕರು, ಪ್ರವಚನಕಾರರು, ಕಾಲ್ಪನಿಕ ಕಥಾನಕ ಬರೆವವರು ಇಲ್ಲವೆ ಅಂಥ ಕಾವ್ಯಬರೆಯುವವರು ಇಂಥ ಬುದ್ಧಿಜೀವಿ ಜನರಿಗೆ ಈ ವರ್ಷ ಬಹಳ ಲಾಭದ್ದೆನಿಸುವದು.

ನೋಕರರಿಗಾದರೂ ಎಪ್ರೀಲಿನಿಂದ ಕೆಲಸದ ತೊಂದರೆ ವಿಶೇಷವೆನಿಸಿ ಅನನುಕೂಲ ಸ್ಥಳಕ್ಕೆ ಬದಲಿಯಾದರೂ ಮಾರ್ಚದೊಳಗಾಗಿ ಮೇಲಿನ ಗ್ರೇಡು ಬಢತಿ ಸಿಕ್ಕೇತೀರುವದರಿಂದ ತಕರಾರು ಮಾಡಲಿಕ್ಕೆ ಬಹಳಷ್ಟು ಅವಕಾಶವುಳಿಯುವದಿಲ್ಲ. ಆದರೆ ಎಪ್ರೀಲಿನಿಂದ ಮುಂದೆ ಲಂಚ ಮೊದಲಾದ್ದರ ಬಗ್ಗೆ ಮಾತ್ರ ಬಹಳ ಎಚ್ಚರಿಕೆಯಿಂದಿರಬೇಕು. ಏಕೆಂದರೆ ನೀವು ಲಂಚತೆಗೆದುಕೊಳ್ಳದಿದ್ದರೂ ತೆಗೆದುಕೊಂಡ ವಾಸನೆ ಹತ್ತುವಯೋಗ. ಲಂಚ ತೆಗೆದುಕೊಂಡರಂತೂ ವಿಪರೀತ ಫಜೀತಿಯಾಗುವದು. ಇದನ್ನು ಸ್ಪಷ್ಟಪಡಿಸಬೇಕಾದ ಅವಶ್ಯಕತೆಯಿಲ್ಲ.

ದಾವೆಯಲ್ಲಿ ಇಲ್ಲವೆ ಸ್ಪರ್ಧೆಯಲ್ಲಿ ಮಾರ್ಚದವರೆಗೆ ಒಳ್ಳೆ ಯಶಸ್ಸು ದೊರೆತರೂ ಮುಂದೆ ಮಾತ್ರ ಸತ್ಯಸಂಗತಿಯೂ ಅಸತ್ಯವಾಗಿ ಪರಿಣಮಿಸಿ ಅಪಯಶಸ್ಸು ಬರುವ ಅಂಜಿಕೆ. ಮಾರ್ಚ ೨೨ ರಿಂದ ಜೂನ ೪ರ ವರೆಗಿನ ಅವಧಿಯಲ್ಲಿ ಶತ್ರುಗಳ ನಾಶ ಪರಭಾರೆ ಆಗುವ ಸಂಭವವಿದೆ. ಅಗಸ್ಟ ೧೨ ರಿಂದ ಸಪ್ಟಂಬರ ೨೭ ರ ವರೆಗಿನ ಅವಧಿಯಲ್ಲಿ ನಿಮ್ಮ ಮೇಲೆ ದಾವೆಯಾಗುವ ಅಂಜಿಕೆಯಿದೆ.

ಮಾರ್ಚ ಕೊನೆಯ ವರೆಗೆ ಆಗುವ ಪ್ರಸೂತಿಯಲ್ಲಿ ಕನ್ಯಾ ಜನಿಸಿದರೂ ಅದು ಬಹಳ ಸುಲಭ ಮತ್ತು ಸುಖದ್ದೆನಿಸುವದು. ಅನಂತರ ಗಂಡುಮಗುವನ್ನು ಹೆತ್ತರೂ ಬಹಳ ಕಷ್ಟದಿಂದ ಹೆರಿಗೆಯಾಗುವದು. ವಿದ್ಯಾರ್ಥಿಗಳು ಮಾರ್ಚ ಕೊನೆಯ ವರೆಗೆ ಯಶಸ್ಸಿನ ಬಗ್ಗೆ ಖಾತ್ರಿಹಿಡಿಯಬೇಕು. ಮುಂದೆ ಮಾತ್ರ ಅದು ಶಕ್ಯವಿಲ್ಲ. ಬುದ್ಧಿವಂತನಿಗೂ ಪರೀಕ್ಷೆ ಬಹಳ ಕಠಿಣವೆನಿಸುವದು.

ಮಿಥುನ

ಈ ರಾಶಿಯವರಿಗೆ ದುಡಿದಂತೆ, ಶ್ರಮಪಟ್ಟಂತೆ ಯಶಸ್ಸು ಸಿಕ್ಕುವದು, ಲಾಭವಾಗುವದು ಎಂಬುದು ಮಾತ್ರ ನಿಶ್ಚಿತವಾಗಿದೆ.

ಜುಲೈ ೧೨ ರವರೆಗೆ ಈ ರಾಶಿಯ ಜನರ ಆರೋಗ್ಯ ಬಹಳ ನಿರೋಗಿ ಉಳಿಯುವದು. ಮುಂದೆ ಮಾತ್ರ ಅದು ನಿರೋಗಿಯೆನಿಸದು. ಮಾನಸಿಕ ತೊಂದರೆ ಯಾವಾಗಲೂ ಇದ್ದುದೇ. ಅದರಲ್ಲಿಯೂ ಅಕ್ಟೋಬರ ೨ ರಿಂದ ನವಂಬರ ೨೫, ಡಿಸೆಂಬರ ೧೩ ರಿಂದ ಜನೇವರಿ ೮, ಜನೇವರಿ ೨೯ ರಿಂದ ಫೆಬ್ರುವರಿ ೧೪, ಮೇ ೨೫ ರಿಂದ ಜೂನ ೧೦ ಮತ್ತು ಅನಂತರ ಜೂನ ೨೭ ರಿಂದ ಸಪ್ಟಂಬರ ೧ ರ ವರೆಗಿನ ಅವಧಿಯಲ್ಲಿ ಮಾನಸಿಕ ತೊಂದರೆ ವಿಶೇಷವೆನಿಸುವದು. ದೇಹಸುಖಕ್ಕೆ ಎಲ್ಲ ಬಗೆಯ ಅನುಕೂಲತೆ ತಾನಾಗಿಯೇ ದೊರೆಯುವದು. ಎಪ್ರಿಲಿನಿಂದ ಅದು ಮತ್ತಷ್ಟು ಹೆಚ್ಚುವದು. ಆದರೆ ಆ ಸುಖ ಮಾತ್ರ ನಿಮ್ಮ ಮೈಗೆ ಹತ್ತುವದಿಲ್ಲ. ಮನೆಯಲ್ಲಿ ಯಾವಾಗಲೂ ಕಲಹವೆ. ಒಬ್ಬರ ಮೋರೆ ಉತ್ತರಕ್ಕಾದರೆ ಮತ್ತೊಬ್ಬರ ಮೋರೆ ದಕ್ಷಿಣಕ್ಕಾಗುವದು. ನಿಮ್ಮ ತಾಯಿಯಿದ್ದರೆ ಆವಳಿಗೆ ಬಹಳ ಕಾಯಿಲೆಯಾಗುವದು. ಅವಳ ವಿಯೋಗವೂ ಕದಾಚಿತ್ ಸಂಭವಿಸಬಹುದು.

ಎಪ್ರೀಲಿನಿಂದ ಸ್ತ್ರೀ ಸುಖಕ್ಕೆ ಅನುಕೂಲವಿದ್ದರೂ ಪರಸ್ಪರರಲ್ಲಿಯ ಪ್ರೇಮ ಮೊದಲಿಗಿಂತ ಬಹಳ ಶಿಥಿಲವಾಗುವದು. ಮಾರ್ಚದಲ್ಲಿ ಮಾನಸಿಕ ತೊಂದರೆಯಾಗುವದು. ಮುಂದೆ ಜುಲೈ ೧೨ ರ ನಂತರ ನಿಮ್ಮಂತೆ ಅವಳಿಗೂ ಶಾರೀರಕ ಕ್ಲೇಶವಾಗುವ ಅಂಜಿಕೆಯಿದೆ. ಅದರಲ್ಲಿಯೂ ಡಿಸೆಂಬರ ೧ ರಿಂದ ೨೭, ಜನೇವರಿ ೨೧ ರಿಂದ ಫೆಬ್ರುವರಿ ೧೫, ಎಪ್ರೀಲ ೨೮ ರಿಂದ ಮೇ ೨೨, ಜೂನ ೧೫ ರಿಂದ ಜುಲೈ ೧೦ ಮತ್ತು ಸಪ್ಟಂಬರ ೨೧ ರಿಂದ ಅಕ್ಟೋಬರ ೧೭ರ ವರೆಗಿನ ಅವಧಿಯಲ್ಲಿ ಇಬ್ಬರ ಮನಸ್ಸೂ ಕೂಡಿಕೊಳ್ಳುವವು. ಹೊಲಮನೆಗಳ ಬಗ್ಗೆ ಬಹಳ ಗೊಂದಲವೆದ್ದು ಅದನ್ನು ಸರಿಪಡಿಸಬೇಕಾದರೆ ವೇಳೆಯ ಮತ್ತು ಹಣದ ಬಹಳ ವ್ಯಯಮಾಡಬೇಕಾಗುವದು. ಆದರೆ ಕೊನೆಯಲ್ಲಿ ಅವು ಕಾಯಂವಾಗಿ ಬಗೆಹರಿಯುವವು. ಮನೆಯಲ್ಲಿ ನಿಮ್ಮ ವರ್ಚಸ್ಸು ಸ್ವಲ್ಪ ಕಡಿಮೆಯೆನಿಸಿದರೂ ಹೊರಗೆ ಮಾತ್ರ ಅದು ಬಹಳ ಹೆಚ್ಚುವದು. ಗ್ರಾಮಕಂಟಕರಿಂದ ಬಹಳ ಉಪದ್ರವವೆನಿಸಿದರೂ ಸಜ್ಜನರ ಬೆಂಬಲ ಅಷ್ಟೇ ಹೆಚ್ಚು. ಇಡಿ ವರ್ಷ ಬಂಧುಗಳೊಡನೆ ತಿಕ್ಕಾಟವೇ ನಡೆಯುವದು. ಮಾರ್ಚದಷ್ಟೊತ್ತಿಗೆ ಆಸ್ತಿಯಲ್ಲಿ ಸ್ವಲ್ಪಾದರೂ ಹೆಚ್ಚಳವಾಗುವದು. ಹೊಸ ಮನೆ ಕೊಳ್ಳುವ ಇಲ್ಲವೆ ಕಟ್ಟಿಸುವ ಯೋಗ ಆಕಸ್ಮಾತ್ತಾಗಿ ಒದಗಿಬರುವದು. ನೌಕರರು, ಆಳುಗಳು ಸಕಾಲದಲ್ಲಿ ಮತ್ತು ಪ್ರಾಮಾಣಿಕ ರೀತಿಯಿಂದ ನಡೆದುಕೊಳ್ಳುವರು. ವಾಹನ ಸುಖ ಉತ್ತಮ ದೊರೆತು ದನಕರುಗಳಲ್ಲಿ ಬಹಳ ಹೆಚ್ಚಳವಾಗುವದು. ಮಕ್ಕಳ ಉತ್ಕರ್ಷ ಈ ವರ್ಷ ಬಹಳ ಆಗುವದು. ಡಿಸೆಂಬರ ೧ರಿಂದ ೨೭, ಮಾರ್ಚ೧೦ರಿಂದ ಎಪ್ರಿಲ ೫, ಎಪ್ರಿಲ ೨೮ ರಿಂದ ಮೇ ೨೨, ಜೂನ ೧೫ ರಿಂದ ಜುಲೈ ೧೦, ಆಗಸ್ಟ ೩ ರಿಂದ ೨೮, ಮತ್ತು ಸಪ್ಟಂಬರ ೩೦ ರಿಂದ ಅಕ್ಟೋಬರ೧೭ರ ವರೆಗಿನ ಅವಧಿಯಲ್ಲಿ ಮಕ್ಕಳ ಉತ್ಕರ್ಷ ವಿಶೇಷವಾಗುವದು.

ಧಂದೆ ಮಾಡುವವರಿಗೆ ಈ ವರ್ಷ ಉತ್ತಮವಿದೆ. ಎಪ್ರಿಲಿನಿಂದ ಅದು ಬಹಳ ಹೆಚ್ಚುವದು. ಠೋಕ ವ್ಯಾಪಾರಿಗಳಿಗಿಂತ ಕಿರುಕಳ ವ್ಯಾಪಾರಿಗಳಿಗೆ ಬಹಳ ಲಾಭವಾಗುವದು. ಆಸ್ತಿಯ ಮಾನದಿಂದ ಕೆಲ ಸಂಗ್ರಹವೂ ಆಗುವದು. ಎಣ್ಣೆ, ಬೆಣ್ಣೆ, ತುಪ್ಪ, ಬೆಲ್ಲ, ಕಲ್ಲೆಣ್ಣೆ, ಡಾಂಬರು ಜ್ವಾಲಾಗ್ರಾಹಿ ಪದಾರ್ಥಗಳು ಮತ್ತು ಎಲ್ಲ ಬಗೆಯ ಯಾಂತ್ರಿಕ ಮತ್ತು ಕಬ್ಬಿಣ ಸಾಮಾನುಗಳಲ್ಲಿ ವ್ಯವಹಾರ ಮಾಡುವವರಿಗೆ ಹೆಚ್ಚು ಲಾಭವಾಗುವದು. ಅದರಂತೆ ತಾತ್ವಿಕ ವಿಷಯದ ಗ್ರಂಥಕಾರರು, ಗವಾಯಿಗಳು, ವಾದನವಿಶಾರದರು, ಖಾಸಗಿ ಶಿಕ್ಷಣ ಹೇಳುವವರು ಇಲ್ಲವೆ ಶೈಕ್ಷಣಿಕ ಸಂಸ್ಥೆಗಳ ಚಾಲಕರು ಇಂಥ ಬುದ್ಧಿಜೀವಿಗಳಿಗೆ ಮತ್ತು ರೆವಿನ್ಯು, ಕಸ್ಟಂ, ಪರ್ಯಟನ ಶಾಖೆಯಲ್ಲಿಯ ನೋಕರರಿಗೂ ಈ ವರ್ಷ ಬಹಳ ಪ್ರಗತಿಪರವಾಗಿದೆ ಮತ್ತು ಲಾಭವೂ ಇದೆ. ವಿಶೇಶವಾಗಿ ನವಂಬರ ೧೫ ರ ವರೆಗೆ ಅನಂತರ ಜನೇವರಿ ೧೨ ರಿಂದ ಜೂನ ೪ ಮತ್ತು ಸಪ್ಟಂಬರ ೨೭ರ ನಂತರದ ಅವಧಿಯಲ್ಲಿ ಲಾಭದ ಪ್ರಮಾಣ ಹೆಚ್ಚುತ್ತಲೆ ಹೋಗುವದು. ಎಪ್ರಿಲಿನಿಂದ ಜುಲೈ ೧೨ರ ವರೆಗೆ ದೂರ ಯಾತ್ರೆ ಮಾಡುವ ಸಂಭವವೂ ಇದೆ. ಯಾವದಾದರೊಂದು ಸಣ್ಣ ದೊಡ್ಡ ಚುನಾವಣೆಗೆ ನಿಂತರೆ ಮಾರ್ಚ ವರೆಗೆ ಖಾತ್ರಿಯಿಂದ ಆರಿಸಿ ಬರುವಿರಿ. ಮಿತ್ರ ಸುಖವೂ ಅನುಕೂಲ ದೊರೆಯುವದು.

ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಎಪ್ರಿಲದಿಂದ ಬಹಳ ಉತ್ತಮ ಯಶಸ್ಸು ದೊರೆಯುವದು. ಆಗಸ್ಟ ೧೨ರಿಂದ ಸಪ್ಟಂಬರ ೨೭ರ ವರೆಗಿನ ಅವಧಿಯಲ್ಲಿ ಶತ್ರುಗಳಲ್ಲಿ ಕೆಲವರು ಚಿಂದಾಪಿಂದಿಯಾಗುವರು. ಆದರೆ ಜುಲೈ ೧೨ರ ನಂತರ ಇಂಥ ಕೆಲಸಗಳಿಗಾಗಿ ವೆಚ್ಚ ಮತ್ತು ದಗದಗಿ ಅಂದಾಜಿಗಿಂತ ಹೆಚ್ಚು.

ಹಡೆಯುವ ಹೆಣ್ಣುಮಕ್ಕಳು ಎಪ್ರಿಲದಿಂದ ಜುಲೈ ೧೨ರ ವರೆಗೆ ಅತಿ ಸುಲಭ ರೀತಿಯಿಂದ ಹಡೆಯುವರು. ಮಾರ್ಚ ವರೆಗೆ ಸ್ವಲ್ಪ ಕಷ್ಟದಿಂದ ಹೆರಿಗೆಯಾಗುವದು. ಆದರೆ ಜುಲೈ ೧೨ರ ನಂತರ ಮಾತ್ರ ಬಹಳ ಕಷ್ಟದಿಂದ ಪ್ರಸೂತಿಯಾಗುವ ಯೋಗವಿದೆ. ಬಹುಶಃ ಎಲ್ಲರಿಗೂ ಹೆಣ್ಣು ಹುಟ್ಟುವದು.

ವಿದ್ಯಾರ್ಥಿಗಳಿಗೆ ಎಪ್ರಿಲಿನಿಂದೆಷ್ಟು ಸಹಜವಾಗಿ ಯಶಸ್ಸು ಸಿಕ್ಕುವದೋ ಅಷ್ಟು ಸುಲಭ ರೀತಿಯಿಂದ ಅದಕ್ಕೂ ಮೊದಲು ಬೇಕಾದಷ್ಟು ಜೋರಿನಿಂದ ಅಭ್ಯಾಸ ಮಾಡಿದರೂ ಸಿಕ್ಕುವದು ಕಠಿನವಿದೆ.

ಕರ್ಕ

ಈ ವರ್ಷ ನಿಮ್ಮ ಆರೋಗ್ಯ ಮತ್ತು ಅದರ ತರುವಾಯ ಪ್ರಾಪಂಚಿಕ ಸುಖಕ್ಕೆ ಸಾಮಾನ್ಯ ಕಾಲವಿದ್ದರೂ ಉದ್ಯೋಗ ಧಂದೆ ಮತ್ತು ನೋಕರಿ ಚಾಕರಿಯಲ್ಲಿ ಯಶಸ್ಸು ಮತ್ತು ಲಾಭಕ್ಕೆ ಅಸಾಮಾನ್ಯವೇ ಆಗಿದೆ ಎಂಬುದನ್ನು ತಿಳಿಯಿರಿ.

ಈ ರಾಶಿಯ ಸ್ತ್ರೀಪುರುಷರ ಆರೋಗ್ಯ ಸರ್ವಸಾಮಾನ್ಯವಾಗಿ ಯಾವಾಗಲೂ ಕಿರಿಕಿರಿಯದೇ. ವಿಶೇಷವಾಗಿ ನವಂಬರ ೧೫ರಿಂದ ಜನೇವರಿ ೧೨, ಮಾರ್ಚ ೨೨ರಿಂದ ಜೂನ ೪ ಮತ್ತು ಜುಲೈ ೧೫ ರಿಂದ ಅಗಸ್ಟ ೧೫ ಈ ಅವಧಿಯಲ್ಲಿ ಆರೋಗ್ಯ ಹೆಚ್ಚು ಕೆಡುವ ಸಂಭವವಿರುವದರಿಂದ ಆ ಕಾಲಕ್ಕೆ ಆಹಾರವಿಹಾರಗಳಲ್ಲಿ ಬಹಳ ಜಾಗ್ರತೆ ವಹಿಸಬೇಕು. ಮಾನಸಿಕ ಸುಖಕ್ಕೆ ಎಪ್ರಿಲದಿಂದ ಬಹಳ ಉತ್ತಮ ಉಳಿದು ಜುಲೈ ೧೨ರ ನಂತರ ಅನುಕೂಲವೆನಿಸುವದು.

ಸ್ತ್ರೀಸುಖಕ್ಕೆ ಈ ವರ್ಷ ನಿಮಗೆ ಬಹಳ ಅನುಕೂಲವಿದ್ದರೂ ಜುಲೈ ೧೨ ರ ನಂತರ ಅವಳಿಗೆ ಕಾಯಿಲೆಯಾಗುವದರಿಂದ ಇಲ್ಲವೆ ನಿಮಗೆ ಎರಡನೇ ಊರಿಗೆ ಹೋಗಬೇಕಾಗಿ ಬರುವದರಿಂದ ಆ ಸುಖದಲ್ಲಿ ಸ್ವಲ್ಪ ವ್ಯತ್ಯಯವುಂಟಾಗುವದು. ಉಭಯತರಲ್ಲಿ ಗಾಢ ಪ್ರೇಮವುಳಿದರೂ ಜುಲೈ ೧೨ರವರೆಗೆ ಅವಳ ತವರುಮನೆಯವರೊಡನೆ ಸ್ವಲ್ಪ ಕೂಡಿ ನಡೆಯುವದಿಲ್ಲ. ನಿಮ್ಮ ವಿವಾಹವಾಗುವದಿದ್ದರೆ ಎಪ್ರೀಲಿಗಿಂತ ಮೊದಲೆ ಬಾಸಿಂಗಬಲ ಒದಗಿಬರುವದು. ಮುಂದೆಯೂ ಅದು ಒದಗಿಬರಬಹುದು. ಆದರೆ ಒಂದೆರಡು ಮುಹೂರ್ತ ತಪ್ಪಿಹೋಗುವಷ್ಟು ಗೊಂದಲವೇಳುವ ಅಂಜಿಕೆ. ಮಕ್ಕಳೊಡನೆಯೂ ಕೂಡಿ ನಡೆಯುವದಿಲ್ಲ. ಜನೇವರಿ ೧೨ ರಿಂದ ಅಗಸ್ಟ ೧೨ರ ವರೆಗೆಯಂತೂ ನಿಮ್ಮಿಬ್ಬರದೂ ಸ್ವಲ್ಪವೂ ಕೂಡಿ ನಡೆಯುವದಿಲ್ಲ. ಆದರೆ ಉಳಿದ ಅನುಕೂಲತೆಗಳು ಮಾತ್ರ ಅವರವರ ವಯೋಮಾನಕ್ಕನುಸಾರವಾಗಿ ಸಿಕ್ಕುತ್ತಲೆ ಹೋಗುವವು. ಅಪೇಕ್ಷೆಗಿಂತ ಹೆಚ್ಚು ಉನ್ನತಿಯಾಗುವದು. ಸ್ಥಾವರ ಆಸ್ತಿಯನ್ನು ಬಹಳಮಟ್ಟಿಗೆ ಮತ್ತು ಅಲ್ಪಶ್ರಮದಿಂದ ಮತ್ತು ಅಲ್ಪ ಬೆಲೆಯಲ್ಲಿ ಹೆಚ್ಚಿಸಿಕೊಳ್ಳುವ ಸಂಧಿ ಮೇಲಿಂದ ಮೇಲೆ ಉಂಟಾಗುವದು. ಅಗಸ್ಟ ೧೨ರಿಂದ ಸಪ್ಟೆಂಬರ ೨೭ರ ವರೆಗೆ ಇಂಥ ಮಹತ್ವದ ಘಟನೆ ಒಮ್ಮೆಯಾದರೂ

ಒದಗಿಬರುವದು. ಮನೆಮಾರಿನಲ್ಲಿ ಮತ್ತು ಆಸ್ತಿಯಲ್ಲಿ ಆಧುನಿಕ ಪದ್ಧತಿಯಿಂದ ಸುಧಾರಣೆಯಾಗುವದು. ವೆಚ್ಚ ಹೆಚ್ಚಾದರೂ ಇಚ್ಛಿತವು ಬಹಳಮಟ್ಟಿಗೆ ಸಫಲವಾಗದೆ ಉಳಿಯದು. ಸಣ್ಣ ದೊಡ್ಡ ಯಾವದೊಂದು ವಾಹನವನ್ನು ತೆಗೆದುಕೊಳ್ಳುವಿರಿ, ಮತ್ತು ಒಳ್ಳೆಯದೇ ದೊರೆಯುವದು. ನೋಕರ ಚಾಕರರು ಸ್ವಲ್ಪ ಆಲಸ್ಯದಿಂದ ಮತ್ತು ನಿಷ್ಕಾಳಜಿಯಿಂದ ವರ್ತಿಸಿದರೂ ಪ್ರಾಮಾಣಿಕವುಳಿಯುವರು. ನೆರೆಹೊರೆಯವರಲ್ಲಿ ಮತ್ತು ಆಪ್ತರಲ್ಲಿ ಸ್ವಭಾವತಃ ಆದರ ಉಳಿದರೂ ಎಪ್ರಿಲಿನಿಂದ ಹೆಚ್ಚು ವರ್ಚಸ್ಸು ಬೆಳೆಯುವದು. ಸಮಾಜದಲ್ಲಿ ಒಳ್ಳೇ ಪ್ರತಿಷ್ಠೆ. ಸಾರ್ವಜನಿಕ ಕೆಲಸಗಳನ್ನು ಬಹಳ ಮಾಡುವಿರಿ. ಒಮ್ಮೆ ಯಾತ್ರೆಗಾಗಿಯಾದರೆ ಮತ್ತೊಮ್ಮೆ ವಿಶೇಷ ಕೆಲಸದ ಸಲುವಾಗಿಯೆಂದು ದೂರದ ಪ್ರವಾಸ ಸಂಭವಿಸುವದು. ಬಂಧುವರ್ಗದೊಡನೆ ಸ್ವಲ್ಪ ವಿರೋಧ ಬಂದರೂ ತಾನಾಗಿಯೇ ಐಕಮತ್ಯವುಂಟಾಗುವದು. ಪ್ರಿಯ ಮಿತ್ರರಲ್ಲಿ ಒಬ್ಬಿಬ್ಬರ ಮೇಲೆ ಬಹಳ ದುಃಖದಾಯಕ ಪ್ರಾಪಂಚಿಕ ಆಘಾತವುಂಟಾಗುವದು. ಆದರೆ ಅವರೆಲ್ಲರಿಂದ ಒಳ್ಳೆ ಸುಖ ಸಿಕ್ಕುವದು.

ಉದ್ಯೋಗಧಂದೆಯ ವಿಷಯದಲ್ಲಿ ಈ ವರ್ಷ ಬಹಳ ಅನುಕೂಲವುಳಿದು, ದುರ್ಲಭ ಇಚ್ಛೆ ಇಲ್ಲವೆ ದುರ್ಘಟ ಘಟನೆಯೂ ಮನಸ್ಸಿನಂತೆ ಒದಗಿಬರುವದು. ಯಾವದೊಂದು ಕಾರ್ಯಮಾಡುವ ಹೌಸು ಅವರ್ಣನೀಯ. ಮಾರ್ಚದಲ್ಲಿ ಭಾಗ್ಯೋದಯಕ್ಕೆ ಪರಿತೋಷಕವಾಗುವ ಬಹಳ ಸಂಗತಿ ಸಂಭವಿಸುವದು. ಅನಂತರ ಉಳಿದ ಧಂದೆಗಳಲ್ಲಿ ಪ್ರಮಾಣ ಮೀರಿ ಹೆಚ್ಚು ಕಡಿಮೆಯಾಗಿ ಮಿತಿಮೀರಿ ಲಾಭವಾಗುವದು. ವಿಶೇಷವಾಗಿ ಲಾಭದ ದೃಷ್ಟಿಯಿಂದ ಡಿಸೆಂಬರ ೧೮ ವರೆಗೆ ಮತ್ತು ಅನಂತರ ಡಿಸೆಂಬರ ೨೭ ರಿಂದ ಜನೆವರಿ ೨೧, ಫೆಬ್ರುವರಿ ೧೫ ರಿಂದ ಮಾರ್ಚ ೧೦, ಎಪ್ರಿಲ ೫ ರಿಂದ ೨೮, ಮೇ ೨೨ ರಿಂದ ಜೂನ ೧೫, ಜುಲೈ ೧೦ ರಿಂದ ಅಗಸ್ಟ ೩ ಮತ್ತು ಅಗಸ್ಟ ೨೮ ರಿಂದ ಸಪ್ಟಂಬರ ೨೧ ರ ಅವಧಿಯು ಬಹಳ ಬಹಳ ಅನುಕೂಲ. ಸೋಡಾವಾಟರ, ಬೋರ್ಡಿಂಗ, ಲಾಜಿಂಗ, ಚಹಾಕಾಫಿ, ನೇಕಾರಿಕೆ, ಸ್ಟಾಂಪವೆಂಡರ, ಮೆಣಸಿನಕಾಯಿ, ತಂಬಾಕು, ಶೇರ ದಲಾಲಿ, ಔಷಧ, ಕಾಗದ ಮತ್ತು ಸಾವಕಾರಿ ಇವುಗಳಲ್ಲಿ ಯಾವದಾದರೂ ಧಂದೆಮಾಡಿದರೂ ಒಳ್ಳೆ ಪ್ರಗತಿಯಾಗುವದು. ಅದರಂತೆ ವಕೀಲಿ, ಡಾಕ್ಟರ, ಭಾಷಾಂತರಕಾರರು, ಅಕೌಂಟಂಟ, ಖಾಸಗಿ ಲೇಖಕ ಮತ್ತು ವೇದವ್ಯಾಸಂಗಿ ಇಂಥ ಬುದ್ಧಿಜೀವಿಗಳಿಗೂ ಈ ವರ್ಷ ಬಹಳ ಅನುಕೂಲ. ಅದರಂತೆ ಗಿರಣಿ, ಪೋಸ್ಟ, ಟೆಲಿಗ್ರಾಫ್ ಟೆಲಿಫೋನ, ರೇಲ್ವೆ ಮತ್ತು ಕೋರ್ಟಿನಲ್ಲಿ ನೋಕರಿಮಾಡುವ ವರ್ಗವು ಸುಖದ ದಿನಗಳನ್ನು ಕಳೆಯುವದು. ಮಾರ್ಚನಂತರ ಮೇಲಿನ ಗ್ರೇಡಿಗೆ ಹೋಗುವದು.

ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಮಾರ್ಚ ಕೊನೆಯ ವರೆಗೆ ನಿಶ್ಚಿತವಾಗಿ ಯಶಸ್ಸು ಸಿಕ್ಕುವದು ಅನಂತರವೂ ಅದು ಸಿಕ್ಕುವದಾದರೂ ತೊಂದರೆ ಮತ್ತು ವೆಚ್ಚವನ್ನು ನೋಡಿದರೆ ಬಹಳ ಭಯವೆನಿಸುವದು. ಈ ರಾಶಿಯ ಸ್ತ್ರೀಯರು ಹಡೆಯುವದಿದ್ದರೆ ಮಾರ್ಚ ಕೊನೆಯವರೆಗೆ ಅತ್ಯಂತ ಸುಲಭವಾಗಿ ಹಡೆಯುವರು. ಅನಂತರವೂ ಅಂಜಿಕೆ ಇಲ್ಲ. ಆದರೆ ಎಪ್ರೀಲಿನಿಂದ ಅಗಸ್ಟ ೧೨ರ ವರೆಗೆ ಆಗುವ ಹೆರಿಗೆಯ ನಂತರದ ಬಾಳಂತಿತನ ಸ್ವಲ್ಪೊಮ್ಮೆ ಹಿಡಿಯುವದಿಲ್ಲ. ಮಾರ್ಚ ವರೆಗೆ ಹೆಣ್ಣು ಅನಂತರ ಗಂಡಿನ ಪ್ರಮಾಣ ಹೆಚ್ಚು. ವಿದ್ಯಾರ್ಥಿಗಳು ಯಶಸ್ಸಿನ ಬಗ್ಗೆ ಸ್ವಲ್ಪವೂ ಚಿಂತೆ ಮಾಡಬೇಕಾಗಿಲ್ಲ. ಆದರೂ ಎಪ್ರೀಲ ನಂತರ ಪರೀಕ್ಷೆ ಇದ್ದವರು ನಿಷ್ಕಾಳಜಿಯಿಂದಿರಬಾರದು. ಅಭ್ಯಾಸವನ್ನು ಚನ್ನಾಗಿ ಮಾಡುವದು ಅವಶ್ಯ.

ಸಿಂಹ

ಈ ರಾಶಿಯವರಿಗೆ ಎಪ್ರಿಲಿನಿಂದ ಮುಂದೆಯೇ ಉಜ್ವಲ ಭಾಗ್ಯವಿರುವದೆಂಬುದನ್ನು ಮುಂದಟ್ಟು ಮಾಡಿಕೊಂಡು ಆ ರೀತಿ ನಡೆಯಬೇಕು.

ಕಳೆದ ಅನೇಕ ವರ್ಷಗಳಿಂದ ಇದ್ದ ಸಾಡೇ-ಸಾತಿಯ ಕಾಟ ಈ ರಾಶಿಯವರಿಗೆ ಕಡಿಮೆಯಾಗಿದೆಯಾದರೂ ಈ ವರ್ಷ ಅದರ ದೃಷ್ಟಿಯಿನ್ನೂ ಇರುವದರಿಂದ ಯಾವದೊಂದು ಕೆಲಸವನ್ನು ಅವಸಾನ ಮೀರಿ ಮಾಡದಿರುವದೇ ಒಳಿತು. ಮಾರ್ಚ ಕೊನೆಯವರೆಗೆ ಆರೋಗ್ಯದ ಬಗ್ಗೆ ಸ್ವಲ್ಪ ಜಾಗ್ರತೆ ವಹಿಸಬೇಕಾಗುವಂತೆ, ಮನೆಯಲ್ಲಿಯ ಯಾರೊಬ್ಬನ ಮನಸ್ಸನ್ನೂ ನೋಯಿಸುವದೂ ಕೂಡದು. ನವಂಬರ ೧೫ ರಿಂದ ಜನೆವರಿ ೧೨ ಮತ್ತು ಅಗಷ್ಟ ೧೨ ರಿಂದ ಸಪ್ಟಂಬರ ೨೭ ಈ ಅವಧಿಯಲ್ಲಿ ಜಾಗರಣೆಯಿಂದ ಮತ್ತು ಅತಿ ಶ್ರಮದಿಂದ ಆರೋಗ್ಯವನ್ನು ರಕ್ಷಿಸಿಕೊಳ್ಳಬೇಕು. ಅನಂತರ ಶಾರೀರ ಸುಖಕ್ಕೆ ಎಪ್ರಿಲಿನಿಂದಲೆ ಮುಂದೆ ಪರಿಪೋಷಕ ಘಟನೆಗಳು ಸಂಭವಿಸುವವು. ಒಟ್ಟಾರೆ ಮನೋತ್ಸಾಹ ಅನುಕೂಲ ಉಳಿದು, ಜನೆವರಿ ೧೨ ರಿಂದ ಅಗಷ್ಟ ೧೨ ರ ವರೆಗಿನ ಅವಧಿಯಲ್ಲಿ ಅದು ಬಹಳ ಅನುಕೂಲವಾಗಿ ಪರಿಣಮಿಸುವದು.

ಹೆಂಡತಿಯ ಆರೋಗ್ಯ ಜುಲೈ ೧೨ ರವರೆಗೆ ಸ್ವಲ್ಪ ಹೆಚ್ಚು ಕಡಮೆ ಕಿರಿಕಿರಿಯದೆ. ಆದರೆ ಯಾರ ಜನ್ಮಕುಂಡಲಿಯಲ್ಲಿ ಭಾರ್ಯಾ ಸ್ಥಾನದಲ್ಲಿ ರಾಹು ಕೇತು ಇರುವರೋ (ಜನ್ಮಲಗ್ನ ಇಲ್ಲವೆ ಜನ್ಮರಾಶಿಯಿಂದ) ಅವರಿಗೆ ಕದಾಚಿತ್ ಸ್ತ್ರೀ ವಿಯೋಗ ಆಗುವದು. ಅದಾಗದಿದ್ದರೆ ಈ ತಾ. ವರೆಗೆ ಅವಳ ವಿರಹವಾದರೂ ಸಂಭವಿಸುವದು. ಅಲ್ಲದೆ ಉಭಯತರಲ್ಲಿ ನಿಃಸೀಮ ಪ್ರೇಮದ ಅಭಾವ ಬಹಳ. ಪರಸ್ಪರ ವರ್ತನೆ ಕೃತ್ರಿಮ, ಅಹಂಕಾರದ್ದು ಇಲ್ಲವೆ ತೋರಿಕೆಯದೆನಿಸುವದು. ಈ ರಾಶಿಯವರ ವಿವಾಹವಾಗುವದಿದ್ದರೆ ಎಪ್ರಿಲಿನಿಂದ ಅದಕ್ಕೆ ಪ್ರಬಲ ಯೋಗವಿದೆ. ಆದರೂ ಅದು ಅಷ್ಟು ಅನುಕೂಲವಿಲ್ಲ. ಬಾಸಿಂಗ ಬಲ ಸಾಕಷ್ಟು ಇಲ್ಲ. ಈ ವರ್ಷ ಮನೆಯಲ್ಲಿ ಬಹುತರ ಎಲ್ಲರೊಡನೆ ಕೂಡಿ ನಡೆಯುವದಿಲ್ಲ. ಅಣ್ಣತಮ್ಮಂದಿರು ಅವಿಭಕ್ತ ಇದ್ದರೆ ವಿಭಕ್ತರಾಗಬೇಕಾದ ಸರತಿ ಬರುವದು. ಜನೆವರಿ ೨೯ ರಿಂದ ಫೆಬ್ರುವರಿ ೧೪, ಮೇ ೭ ರಿಂದ ೨೫, ಜೂನ ೨೭ ರಿಂದ ಸಪ್ಟಂಬರ ೨೦ ರವರೆಗಿನ ಅವಧಿಯಲ್ಲಿ ಗೃಹಕಲಹ ಬಹಳ ಹೆಚ್ಚುವದು. ಮಾರ್ಚ ವರೆಗಂತೂ ಮಕ್ಕಳು ಕೂಡ ಮನಸ್ಸಿನ ವಿರುದ್ಧ ವರ್ತಿಸುವರು. ಅನಂತರ ನೀವು ಹೇಳಿದಂತೆ ಕೇಳುವರು. ಆಗಿನಿಂದಲೆ ಅವರಲ್ಲಿ ಅನೇಕರ ಉನ್ನತಿಯಾಗಹತ್ತುವದು. ರೋಖ ಸಂಗ್ರಹ ಯಾವಾಗಲೂ ಹೆಚ್ಚಿಗಿದ್ದು ಸಾಲವೆಲ್ಲ ತೀರಿ ಸ್ವಲ್ಪಾದರೂ ಹೊಸ ಆಸ್ತಿ ಮಾಡುವಿರಿ. ವಾಹನಸುಖ ಚೆನ್ನಾಗಿ ದೊರೆತರೂ ದನಕರುಗಳಿಗೆ ಮಾತ್ರ ಯಾವದೊಂದು ಬೇನೆ ಬಂದು ಬಹಳ ಹಣ್ಣಾಗಬೇಕಾಗುವದು. ಕೆಲವು ಕೈಬಿಡುವ ಸಂಭವವೂ ಇದೆ. ಮನೆಯ ಹೊರಗಿನ ಆಪ್ತರಿಂದ ಸೌಖ್ಯ ಹೆಚ್ಚು. ಜುಲೈ ೧೨ರ ನಂತರ ಅವರಲ್ಲಿ ಕೆಲವರ ಕಲ್ಯಾಣವನ್ನು ನೀವು ನಿಮ್ಮ ಜಬಾಬದಾರಿಯಿಂದ ಮಾಡುವಿರಿ. ಮಿತ್ರಸುಖ ಅನುಕೂಲವಿದ್ದರೂ ಜುಲೈ ೧೨ರ ನಂತರ ಒಬ್ಬರು ನಿಮ್ಮನ್ನು ವಂಚಿಸುವ ಸಂಭವವಿದೆ.

ಕನ್ಯಾ

ಈ ರಾಶಿಯವರಿಗೆ ಈ ವರ್ಷದ ಮೊದಲಿನ ೫ ತಿಂಗಳು ಮಾತ್ರ ಬಹಳ ಉತ್ಸಾಹದ್ದಾಗಿ ಪರಿಣಮಿಸುವದು; ಆಗ ಸೌಖ್ಯವನ್ನನುಭವಿಸಿ ಮುಂದಿನ ಕಷ್ಟದ ದಿನಗಳಿಗಾಗಿ ಸಿದ್ಧತೆಯನ್ನು ಮಾಡಿಕೊಳ್ಳಿರೆಂದು ಮೊದಲೆ ಎಚ್ಚರಿಕೆ ಅವಶ್ಯ.

ಈ ರಾಶಿಯವರು ನವಂಬರ ೧೫ರಿಂದ ಜನೆವರಿ ೧೨ ರ ವರೆಗೆ ಮತ್ತು ಎಪ್ರಿಲಿನಿಂದ ಮುಂದೆ ತಮ್ಮ ಆರೋಗ್ಯವನ್ನು ಬಹಳಮಟ್ಟಿಗೆ ಕಾಯ್ದುಕೊಳ್ಳಬೇಕು. ಅಲ್ಲದೆ ಸಾಡೆಸಾತಿಯ ನಡುವಿನ ಎರಡೂವರೆ ವರ್ಷ ಈಗ ನಡೆದಿರುವದರಿಂದ ಶನಿ ಕಾಟ ಇನ್ನೂ ತಪ್ಪಿಲ್ಲಾದ್ದರಿಂದ ಪಚನವಾಗುವಷ್ಟನ್ನೇ ತಿನ್ನಬೇಕು. ರುಚಿಸುವಂತಹ ಮಾತುಗಳನ್ನೇ ಆಡಬೇಕು. ಇತರ ಶಾರೀರಿಕ ಸುಖವೂ ಅಷ್ಟಕ್ಕಷ್ಟೇ ಸಿಕ್ಕುವದು. ಜುಲೈ ೧೨ ರ ನಂತರ ಮಾಡಬಾರದ್ದನ್ನು ಮೊದಲೆ ಮಾಡಬೇಕೆಂಬ ವಿಪರೀತ ಬುದ್ಧಿಯುಂಟಾಗುವದು, ಆವಶ್ಯಕ ವಿಷಯಗಳ ವಿಸ್ಮರಣೆಯಾಗುವದು ಮತ್ತು ಮುದುಕರಂತೆ ಆಗಾಗ ಬುದ್ಧಿಭ್ರಂಶವಾಗಹತ್ತುವದು.

ಮಾರ್ಚ ಕೊನೆಯ ವರೆಗೆ ಸ್ತ್ರೀ ಸುಖ ಸ್ವಲ್ಪವೂ ವ್ಯತ್ಯಯವಿಲ್ಲದೆ ದೊರೆಯುವದು. ಆದರೆ ಅನಂತರ ಮಾತ್ರ ಕ್ಷುಲ್ಲಕ ಕಾರಣಗಳಿಗಾಗಿ ನಿಮ್ಮದು ಅವಳದು ಕೂಡಿ ನಡೆಯುವದಿಲ್ಲ. ಅಂದಿನಿಂದ ಅವಳ ಆರೋಗ್ಯವು ಕೆಲಮಟ್ಟಿಗೆ ಕೆಡುವ ಸಂಭವವಿದೆ. ಈ ರಾಶಿಯವರಲ್ಲಿ ಯಾರ ಮದುವೆಯಾಗುವದಿದೆಯೋ ಅವರ ಬಾಸಿಂಗಬಲ ಎಪ್ರಿಲ ವರೆಗೆ ಪೂರ್ಣ ಒದಗಿಬರುವದು. ಆದರೆ ಅನಂತರ ಮಾತ್ರ ಸ್ವಲ್ಪೂ ಯೋಗವಿರುವದಿಲ್ಲ. ಮಹತ್ಪ್ರಯಾಸದಿಂದ ಅದು ಹೇಗಾದರೂ ಕೂಡಿಬಂದರೂ ಕೊರಳಲ್ಲಿ ಮಾಲೆ ಬೀಳಬೇಕಾದರೆ ಹದಿನೆಂಟು ಅಡಚಣಿ ಬಂದು ಜೀವ ಒಲ್ಲೆನಿಸುವದು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಧಾರಣ ಸಿಕ್ಕುವದು. ಮನೆಯಲ್ಲಿಯ ಜನರು ಮತ್ತು ಹೊರಗಿನ ಆಪ್ತರು ಬಹಳ ಸಹಾನುಭೂತಿಯಿಂದ ವರ್ತಿಸುವರು. ಆದರೆ ಯಾವದೇ ಬಗೆಯ ಆಪ್ತತ್ವ ಇಲ್ಲವೆ ವ್ಯವಹಾರ ಸಂಬಂಧವಿಲ್ಲದಿದ್ದವರೊಡನೆಯೇ ತಿಕ್ಕಾಟ ನಡೆದು ಕೆಲವು ಸಲ ಕೈಗೆ ಕೈ ಹತ್ತುವ ಪ್ರಸಂಗವೂ ಬರುವದು. ಇದಕ್ಕೆ ಕ್ಷುಲ್ಲಕ ಕಾರಣಗಳೇ ಸಾಕು. ಈ ವಿಷಯದಲ್ಲಿ ಜನೆವರಿ ೧೨ರಿಂದ ಅಗಷ್ಟ ೧೨ರ ವರೆಗಿನಷ್ಟು ದೀರ್ಘಕಾಲದಲ್ಲಿ ಎಚ್ಚರಿಕೆಯಿಂದಿರಬೇಕು. ಆಸ್ತಿಯ ಮಾನದಿಂದ ಮಾರ್ಚ ವರೆಗೆ ರೊಖು ಮತ್ತು ಅನಂತರ ಸ್ವಲ್ಪ ಸ್ಥಾವರ ಸಂಗ್ರಹವಾಗುವ ಯೋಗವೂ ಇದೆ. ಎಪ್ರಿಲಿನಿಂದ ಭಾವೀ ಸೂಚಕ ಸ್ವಪ್ನಗಳು ಬಹುಶಃ ಬೀಳುವವು. ವಾಹನ ಸುಖ ಅನುಕೂಲ. ಮಕ್ಕಳ ಉನ್ನತಿ ಅಪೇಕ್ಷೆಯಂತೆ ಆಗುವದು. ಆದರೂ ಜುಲೈ ೧೨ರ ನಂತರ ಸಾಂಸರ್ಗಿಕ ರೋಗಜನ್ಯ ವಿಕಾರದಿಂದ ಅವರಲ್ಲಿ ಕೆಲವರಿಗೆ ತೊಂದರೆಯಾಗುವ ಅಂಜಿಕೆಯಿದೆ. ಈ ವರ್ಷ ಅವರಲ್ಲಿ ಒಬ್ಬರದಾದರೂ ಲಗ್ನ ಮುಂಜಿವೆ ಮೊದಲಾದ ಮಂಗಲಕಾರ್ಯಗಳಾಗುವದು ದುರ್ಮಿಳ. ಆದರೆ ಯಾವದೇ ಬಗೆಯ ಅಮಂಗಳ ಕಾರ್ಯವು ಸಂಭವಿಸುವದಿಲ್ಲ. ಮಿತ್ರಸುಖ ಅನುಕೂಲ. ಆದರೆ ಜುಲೈ ೧೨ ರ ನಂತರ ಒಬ್ಬಿಬ್ಬರು ತೊಂದರೆ ಕೊಡಬಹುದು.

ಧಂದೆ ಕೂಲಿ ಮಾಡುವವರೂ ಈ ವರ್ಷ ಬಹಳ ಜಾಗ್ರತೆಯಿಂದಿರಬೇಕು. ಯಾವದೊಂದು ಹೊಸ ಅವಾಢವ್ಯ ಸಾಹಸವನ್ನು ಕೈಕೊಳ್ಳಬಾರದು. ಸಿಕ್ಕಷ್ಟರಲ್ಲಿಯೇ ಸಂತೋಷ ಹೊಂದುವ ವೃತ್ತಿಯುಳ್ಳವರಾದರೆ ಉದ್ಯೋಗದಲ್ಲಿ ಅಬ್ರು, ಪತ್ತು ಮತ್ತು ಪ್ರತಿಷ್ಠೆ ಉಳಿದು ನಿಮ್ಮ ಉದರ ನಿರ್ವಾಹ ಸಹಜವಾಗಿ ಸಾಗುವದು. ಮಾರ್ಚದಲ್ಲಿ ತೇಜಿಯಲ್ಲಿರುವಿರಿ. ಆದರೆ ಮುಂದೆ ಮಾತ್ರ ಒಳ್ಳೇ ಜಪ್ಪಿಸಿಕೊಂಡು ಸಾಗಬೇಕು. ಅಂದರೇ ಆಯವ್ಯಯಗಳಲ್ಲಿ ವಿಶೇಷ ಅಂತರ ಬೀಳಲಿಕ್ಕಿಲ್ಲ. ವಾಚ ಮೇಕರ, ಕಿರಕಳ ಯಾಂತ್ರಿಕ ಸಾಮಾನುಗಳ ದುರಸ್ತಿ ಮಾಡುವವರು ಖೊಬ್ಬರಿ ಮೊದಲಾದ ಧಂದೆ ಮತ್ತು ಕೂಲಿ ಮಾಡುವವರಿಗೆ ಮಾತ್ರ ಮಾರ್ಚವರೆಗೆ ಬಹಳ ತೊಂದರೆ-ಏನೇನೋ ಮೈ-ಮೇಲೆ ಹಾಕಿಕೊಂಡು, ಅದನ್ನು ನಿರ್ವಹಿಸುವದಕ್ಕೆ ಬಹಳ ವೆಚ್ಚ ಮತ್ತು ತೊಂದರೆ ಪಡಬೇಕಾಗುವದು. ಆದರೆ ಲಾಟರಿ-ಸಟ್ಟಾ, ಭೂಗತ ಧನ ಲಾಭ ಮೊದಲಾದ ಆಕಸ್ಮಿಕ ಧನ ಲಾಭ. ಮೂಲ ಗ್ರಹದ ಪ್ರಭಾವದಿಂದ ಸ್ವಲ್ಪಾದರೂ ಆಗಿಯೇ ತೀರುವದು. ಎಪ್ರೀಲಿನಿಂದ ಮಾತ್ರ ಧಂದೆಯಲ್ಲಿ ಯಕ್ಷಿಣಿಯು ಮೋಡಿ ತಿರಿವಿದಂತೆ ಅಮೋಘ ಯಶಸ್ಸುಸಿಕ್ಕಹತ್ತುವದು. ಆದರಲ್ಲಿ ಮಾತಾಡಲು ಕೂಡ ಸವಡು ಸಿಕ್ಕುವದಿಲ್ಲ. ಆದರಲ್ಲಿಯೂ ಆಕ್ಟೋಬರ ೨ ರಿಂದ ನವಂಬರ ೨೫, ಜನೆವರಿ ೮ ರಿಂದ ೨೯, ಫೆಬ್ರುವರಿ ೧೪ ರಿಂದ ಮಾರ್ಚ ೨, ಮೇ ೭ ರಿಂದ ೨೫, ಜೂನ ೧೦ ರಿಂದ ೨೭ ಮತ್ತು ಸಪ್ಟಂಬರ ೧೮ ನಂತರದ ಆವಧಿಯು ದ್ರವ್ಯ ಲಾಭಕ್ಕೆ ಬಹಳ ಅನುಕೂಲ. ಬಗೆಬಗೆಯ ಯಂತ್ರ ಮಾರುವವರು ಎಲ್ಲ ಬಗೆಯ ಕಂಪನಿಯ ಏಜಂಟರು, ಖಟ್ಲೆಯಲ್ಲಿಯ ದಲಾಲರು, ಅರಿವೆ, ರೇಶಿಮೆ, ನೂಲು, ಸ್ಪಣಬು ವ್ಯಾಪಾರಸ್ಥರು, ಜೇನುತುಪ್ಪ ಬಗೆಬಗೆಯ ಅರ್ಕು ಮತ್ತು ಸುಗಂಧ ದ್ರವ್ಯಗಳ ವ್ಯಾಪಾರಿಗಳು ಈ ರಾಶಿಯವರಾಗಿದ್ದರೆ ವಿಪರೀತ ಲಾಭ ಸಿಕ್ಕುವದು. ಪ್ರತಿಷ್ಠೆಯೂ ಹೆಚ್ಚುವದು. ಆದರಂತೆಯೇ ಕೊಟಜ್ಞರು ಅಂದರೆ ಚಕ್ರಬಂಧ ಬಿಡಿಸುವವರು, ಓ. ಸಿ. ಆಡುವವರು ಇಂಥವರಿಗೂ ಈ ವರ್ಷ ತುಂಬ ಲಾಭದಾಯಕವಾದುದು. ಅದರಂತೆಯೇ ಈ ರಾಶಿಯ ಪೋಲೀಸರು, ಸೈನಿಕರು, ಬಗೆಬಗೆಯ ಕರ ವಸೂಲಿ ಶಾಖೆ, ಖಾಸಗಿ ಇಲ್ಲವೆ ಸರಕಾರಿ ಮೆಕ್ಯಾನಿಕಲ್, ಎಂಜಿನಿಯರ್ ಇಂಥ ನೌಕರರಿಗೂ ಈ ವರ್ಷ ಎಪ್ರೀಲಿನಿಂದ ಮುಂದೆ ಬಹಳ ಉತ್ತೇಜಕ ಮತ್ತು ಅಧಿಕಾರವೃದ್ಧಿಯುದಾಗಿ ಪರಿಣಮಿಸುವದೆಂದು ಹೇಳಬಹುದು.

ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಮಾರ್ಚ ಕೊನೆಯ ವರೆಗೆ ಯಶಸ್ಸು ಯಾತಕ್ಕೂ ಬಾರದಂತಹದು. ಅನಂತರ ಜುಲೈ ೧೨ರ ವರೆಗೆ ದೀರ್ಘ ಪ್ರಯತ್ನ ಮಾಡಿದರೆ ಅಲ್ಪ ಯಶಸ್ಸು ದೊರೆಯುವದು. ಆದರೆ ಅನಂತರ ಮಾತ್ರ ಪೂರ್ಣ ಯಶಸ್ಸು ದೊರೆತು, ಶತ್ರು ಸಂಪೂರ್ಣವಾಗಿ ನಿರ್ಮೂಲನಾಗುವನು.

ಮಾರ್ಚ ಕೊನೆಯ ವರೆಗೆ ಹಡೆಯುವ ಸ್ತ್ರೀಯರಿಗೆ ಅಲ್ಪಸ್ವಲ್ಪ ಕಷ್ಟವನ್ನನುಭೋಗಿಸಬೇಕಾಗುವದಲ್ಲದೆ ಹೆಣ್ಣೂ ಹುಟ್ಟುವದರಿಂದ ಮನಸ್ಸಿಗೂ ಅಸಮಾಧಾನ. ಆದರೆ ಎಪ್ರಿಲ ನಂತರ ಸುಲಭ ಪ್ರಸೂತಿಯಾಗಿ ಪುತ್ರಪ್ರಾಪ್ತಿಯೂ ಆಗುವದು. ಆದರೆ ಜುಲೈ ೧೨ ರ ನಂತರ ಹಡೆಯುವವರ ಮಕ್ಕಳು ಬಹಳ ಅಶಕ್ತ ಆಗುವರು. ವಿದ್ಯಾರ್ಥಿಗಳ ಮಟ್ಟಿಗೆ ಹೇಳಬೇಕಾದರೆ ಎಪ್ರಿಲಿನಿಂದ ಮುಂದೆ ಪರೀಕ್ಷೆ ಇದ್ದ ವಿದ್ಯಾರ್ಥಿಗಳಿಗೆ ಮಾತ್ರ ಈ ವರ್ಷ ಯಶಸ್ಸು ಸಿಕ್ಕುವದು.

ಸಾಮಾನು ಮಾರುವ ವ್ಯಾಪಾರಿಗಳು, ಭಟ್ಟರು, ಭಿಕ್ಷುಕರು,ಕಮ್ಮಾರರು, ಬಡಿಗರು, ಸಂಗೀತಜ್ಞರು ಮೊದಲಾದವರಿಗೆ ಈ ವರ್ಷ ಬಹಳ ಅನುಕೂಲ ವಿರುವದು. ಅದರಂತೆಯೇ ಶಿಕ್ಷಕರು, ದುಭಾಷಿಗಳು, ಸ್ಫುಟಲೇಖಕರು, ವೈಮಾನಿಕರು ಮೊದಲಾದವರಿಗೂ ಅನುಕೂಲ ಕಾಲವಿದೆ.

ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಮಾರ್ಚ ವರೆಗೆ ಸಂಪೂರ್ಣ ಯಶಸ್ಸು. ವಿರೋಧಿಗಳು 'ದೇವಾ ರಕ್ಷಿಸು' ಎಂದು ಮೊರೆ ಹೋಗಬೇಕಾಗುವದು. ಆದರೆ ಅನಂತರ, ಜುಲೈ ೧೨ ರ ನಂತರ ತೀರ ವಿರುದ್ಧವಾಗಿ ದಂಗೆ ಗೊಂದಲವು ಆಗುವ ಅಂಜಿಕೆಯುಂಟು. ಮಾರ್ಚದೊಳಗಾಗಿ ಹಡೆಯುವ ಹೆಣ್ಣುಮಕ್ಕಳು ಒಳ್ಳೆ ಸುಲಭ ರೀತಿಯಿಂದ ಹಡೆಯುವರು. ಮುಂದೆ ಜುಲೈ ೧೨ ರ ವರೆಗೆ ಹಡೆಯುವವರು ಸಾಧಾರಣ ಕಷ್ಟದಿಂದ, ಅನಂತರ ಅತಿ ತೊಂದರೆಯಿಂದ ಹಡೆಯುವ ಯೋಗವಿದೆ. ಬಹುಶಃ ಹೆಣ್ಣು ಹುಟ್ಟುವವು.

ಈ ರಾಶಿಯ ವಿದ್ಯಾರ್ಥಿಗಳು ಮಾರ್ಚ ವರೆಗೆ ಪರೀಕ್ಷೆಯಲ್ಲಿ ನಿಶ್ಚಯವಾಗಿ ಯಶಸ್ಸನ್ನು ಸಂಪಾದಿಸುವರು. ಅನಂತರ ಜುಲೈ ೧೨ ರ ವರೆಗೆ ಪರೀಕ್ಷೆಗೆ ಕಟ್ಟುವವರು ಬಹಳ ಅಭ್ಯಾಸ ಮಾಡಿದರೆ ಮಾತ್ರ ಅವರಿಗೆ ಸರಸ್ವತಿ ಪ್ರಸನ್ನಳಾಗುವಳು. ಅನಂತರ ನಡೆಯುವ ಪರೀಕ್ಷೆಗಳಲ್ಲಿ ಯಶಸ್ಸು ಸಿಕ್ಕಲಾರದು. ಇದೆಲ್ಲ ನಿಶ್ಚಿತವೆಂದು ತಿಳಿದುಕೊಂಡು ವಿದ್ಯಾರ್ಥಿಗಳು ಅಭ್ಯಾಸ ಮಾಡಬೇಕು.

ತುಲಾ

ಈ ರಾಶಿಯವರಿಗೆ ಈ ವರ್ಷ ಕಷ್ಟಸಾಧ್ಯ ರೀತಿಯಿಂದ ಯಶಸ್ಸು ಸಿಕ್ಕುವದೆಂದು ಮನಸ್ಸಿನಲ್ಲಿ ಚೆನ್ನಾಗಿ ತಿಳಿದುಕೊಂಡು ನಡೆಯಬೇಕು. ಅಂದರೆ ಯಾವದೇ ಬಗೆಯ ಅಸಮಾಧಾನಕ್ಕವಕಾಶ ಉಳಿಯಲಾರದು.

ಈ ರಾಶಿಯವರ ಆರೋಗ್ಯ ಜುಲೈ ೧೨ ರವರೆಗೆ ಅನುಕೂಲವಾಗಿಯೆ ಉಳಿದು ಯಾವದೇ ಬಗೆಯ ಕಾಯಿಲೆಯಾಗದು. ಅನಂತರ ಯಾವದೊಂದು ಸಣ್ಣ ದೊಡ್ಡ ಅಪಘಾತದಿಂದ ಬಹಳ ತೊಂದರೆಯಾಗುವದು. ಅದರಲ್ಲಿಯೂ ಅಗಸ್ಟ ೨೮ ರಿಂದ ಸಪ್ಟಂಬರ ೨೧ ರವರೆಗೆ ಹೆಚ್ಚು ಜಾಗ್ರತೆ ವಹಿಸಬೇಕು. ಮಾರ್ಚ ಕೊನೆಯವರೆಗೆ ಮನಸ್ಸಿನ ಸ್ಥಿತಿ ಉದಾಸೀನ ಮತ್ತು ನಿರಾಶಾಜನಕವುಳಿದರೂ ಎಪ್ರಿಲಿನಿಂದ ಆಗುವ ಅನೇಕ ಅನುಕೂಲ ಸಂಗತಿಗಳಿಂದ ಹುರುಪು ಹೆಚ್ಚುವದು. ನಿಶ್ಚಯ ಮನೋವೃತ್ತಿ ಮತ್ತು ಮಹತ್ವಾಕಾಂಕ್ಷೆ ಹೆಚ್ಚುವವು. ಮತ್ತು ಎಪ್ರಿಲಿನ ನಂತರ ಅಂಥ ಘಟನೆಗಳೂ ಸಂಭವಿಸುವವು. ಇದೀಗ ಸಾಡೇಸಾತಿ ಪ್ರಾರಂಭವಾಗಿದ್ದು ಕಳೆದ ವರ್ಷದಂತೆಯೇ ಶನಿಯು ಮೊದಲನೇ ಕಕ್ಷೆಯಲ್ಲಿ ಅಂದರೆ ಹನ್ನೆರಡನೆಯ ಅರ್ಥಾತ್ ವ್ಯಯಸ್ಥಾನದಲ್ಲಿ ಇರುವನು. ಆದುದರಿಂದ ಯಾವದೊಂದು ವಿಷಯದಲ್ಲಿ ಮುಂದೆ ಲಾಭವಾಗುವದೆಂದು ಮೊದಲೆ ವೆಚ್ಚ ಮಾಡಬೇಕಾಗಿ ಬರುವದು. ಇದರಿಂದ ಆಯಾ ಕೆಲಸಗಳಲ್ಲಿ ಮನಸ್ಸಿನ ಸ್ಥಿತಿ ಕೊರಗುತ್ತಲೆ ನಡೆಯುವದು. ಅಂದರೆ ಒಳ್ಳೆ ಸ್ಥಿತಿಯಲ್ಲಿಯೂ ಮನಸ್ಸು ಚಿಂತಾಗ್ರಸ್ತವಾಗಿ ಕೊರಗುವದು.

ಎಪಿಲ್ರಿನಿಂದ ಸ್ತ್ರೀ-ಸಹವಾಸಜನ್ಯ ಸುಖ ಹೆಚ್ಚಿಗೆ ದೊರೆತರೂ ಅವಳ ಆರೋಗ್ಯ ನವಂಬರ ೧೫ ರಿಂದ ಜನೆವರಿ ೧೨ ಮತ್ತು ಮಾರ್ಚ ೨೨ ರಿಂದ ಜೂನ ೪ ಈ ಅವಧಿಯಲ್ಲಿ ಒಮ್ಮೆಯಾದರೂ ಕಠಿಣಕ್ಕೆ ಬರುವ ಸಂಭವವಿದೆ. ಕುತ್ತಿಗೆಯಲ್ಲಿ ಇಲ್ಲವೆ ಕೆಳಹೊಟ್ಟೆಯಲ್ಲಿ ಯಾವದೊಂದು ವಿಕಾರವಾಗುವ ಸಂಭವವಿದೆ. ನಿಮ್ಮ ಮೇಲಿನ ಅವಳ ಪ್ರೇಮವು ಮೊದಲಿಗಿಂತ ಹೆಚ್ಚು ನಿರ್ವ್ಯಾಜವಾಗುವದು. ಕುಟುಂಬದಲ್ಲಿಯ ಉಳಿದ ಜನರೂ ಜುಲೈ ೧೨ ರ ವರೆಗೆ ಒಳ್ಳೇ ರೀತಿಯಿಂದ ವರ್ತಿಸುವರು. ಅನಂತರ ಮಾತ್ರ ಒಬ್ಬಿಬ್ಬರಲ್ಲಿ ಕಲಿಸಂಚಾರವಾಗಿ ಬಹಳ ತೊಂದರೆ ಕೊಡುವರು. ಮತ್ತು ಅದರಲ್ಲಿ ಆಪ್ತೇಷ್ಟರು ಅವರ ಪಕ್ಷವನ್ನೇ ವಹಿಸುವರು. ಜುಲೈ ೧೨ ರವರೆಗೆ ಮಕ್ಕಳಿಗೆ ಒಂದಿಲ್ಲೊಂದು ಬಗೆಯ ಕಾಯಿಲೆ ಇಲ್ಲವೆ ಬೇರೆ ಕಾರಣದಿಂದ ಮನೋಭಂಗ. ಆದರೆ ಮುಂದೆ ಅವರವರ ಯೋಗ್ಯತೆಯಂತೆ ಉತ್ಕರ್ಷವಾಗಹತ್ತುವದು.

ಆದರೆ ಇಡಿ ವರ್ಷ ಅವರ ಸ್ವಭಾವ ಮತ್ತು ವರ್ತನೆ ಹೆಂಡತಿಗೆ ಎಷ್ಟು ಪ್ರಿಯವಾಗಿರುವದೋ ಅಷ್ಟೇ ನಿಮಗೆ ಅಪ್ರಿಯವಾಗುವದು. ನಿಮ್ಮ ತಾಯಿಯ ಆರೋಗ್ಯ ಅನುಕೂಲವಿದ್ದರೂ ತಂದೆಯ ಆರೋಗ್ಯ ಕೆಡುವದು. ಜುಲೈ ೧೨ರ ನಂತರ ಎಲ್ಲರಿಗೂ ಕ್ಲೇಶ-ಆಸ್ತಿಯ ದೃಷ್ಟಿಯಿಂದ ಈ ವರ್ಷ ಹಾನಿಕಾರಕವೆನಿಸದಿದ್ದರೂ ಆಕಸ್ಮಿಕ ಕಿಟಕಿಟ ತೊಂದರೆ ಕೊಡುವವು. ಆಸ್ತಿಯನ್ನು ಹೆಚ್ಚಿಸಿಕೊಳ್ಳುವದಾಗುವದಿಲ್ಲ. ಇಷ್ಟೇ ಅಲ್ಲ. ಅವನ್ನು ಒತ್ತೆ ಹಾಕುವ ಪ್ರಸಂಗ ಬರುವದು. ಕೆಲವನ್ನು ಮಾರುವ ಪ್ರಸಂಗ ಬರದಿದ್ದರೆ ನಿಮ್ಮ ಸುದೈವ. ವಾಹನಗಳು, ದನಕರುಗಳು, ನೋಕರ ಚಾರರು ಸುಖದಿಂದ ಉಳಿಯುವರು ಆದರೆ ಜುಲೈ ೧೨ರ ನಂತರ ಅವುಗಳಿಂದ ಬರಬಹುದಾದ ಸುಖದಲ್ಲಿ ಅನಪೇಕ್ಷಿತ ಅಡಚಣಿ ಬರುವವು.

ಉದ್ಯೋಗ ಧಂದೆಯ ವಿಷಯದಲ್ಲಿ ಧಂದೆಯವರಿಗಿಂತ ನೋಕರರಿಗೇ ಹೆಚ್ಚು ಸುಖ ಈ ವರ್ಷ ದೊರೆಯುವದು. ಮಾರ್ಚ ಕೊನೆಯ ವರೆಗೆ ಎಷ್ಟೋ ಜನರಿಗೆ ಮೇಲಿನ ಗ್ರೇಡು ಕೂಡ ಸಿಕ್ಕುವದು. ಧಂದೆಯವರಿಗೆ ಎಪ್ರೀಲಿನಿಂದ ವ್ಯವಸ್ಥಿತ ಲಾಭವಾಗುವದು ನಿಶ್ಚಿತ. ಆದರೆ ಬಗೆ ಬಗೆಯ ವೆಚ್ಚ ಹೆಚ್ಚಿ ಅದನ್ನು ತೆತ್ತಬೇಕಾದರೆ ಸಾಕುಬೇಕಾಗಿ ಹೋಗುವದು. ಯಾರಿಗಾದರೂ ಸ್ವಲ್ಪೇ ಕೊಡುವದಿದ್ದರೂ ಅವರ ವರಾತು ವಿಪರೀತವೆನಿಸುವದು. ಅದರಲ್ಲಿಯೂ ಡಿಸೆಂಬರ ೧೫, ರಿಂದ ಜನೆವರಿ ೧೪, ಎಪ್ರೀಲ ೧೪ ರಿಂದ ಮೇ ೧೫ ಜೂನ ೧೬ ರಿಂದ ಸಪ್ಟಂಬರ ೧೫ ರ ವರೆಗಿನ ಕಾಲದಲ್ಲಿ ಬಹಳ ಲಾಭವಾಗುವದು. ನವಂಬರ ೧೫ ರಿಂದ ಜನೆವರಿ ೧೨ರ ವರೆಗೆ ಮುಳುಗುವ ವೆಚ್ಚ ಬಹಳ. ಇಲ್ಲವೆ ಯಾವುದೊಂದು ಸರಕಾರೀ ಪೇಚು ಬರುವದರಿಂದ ಬಹಳ ತೊಂದರೆ. ಬುದ್ಧಿ ಜೀವಿಗಳಿಗೆ ಈ ವರ್ಷ ಬಹಳ ಪ್ರತಿಕೂಲವಿರುವದಿಲ್ಲ. ಆದರೆ ವ್ಯಾಪಾರಸ್ಥರು ಶ್ರಮಜೀವಿಗಳು ಇವರಿಗೆ ಬಹಳ ತೊಂದರೆ ಮತ್ತು ಕಿಟಕಿಟ. ಆದರೂ ಎಪ್ರೀಲಿನಿಂದ ಕನಿಷ್ಠ ಶ್ರಮ ಮಾಡಿದಷ್ಟಾದರೂ ಲಾಭವಾಗಹತ್ತುವದು. ಅಂದಿನಿಂದಲೆ ಮಿತ್ರರುಹೆಚ್ಚು ಮಿತ್ರತ್ವದಿಂದ ವರ್ತಿಸಹತ್ತುವರು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಎಪ್ರಿಲ ಬಂದ ಕೂಡಲೆ ಬಹಳ ಶ್ರಮಿಸಬೇಕಾಗುವದು. ಆದರೆ ಅನಂತರ ಜುಲೈ ೧೨ರ ವರೆಗೆ ಶತ್ರುಗಳ ಮೇಲೆ ವಿಜಯ ಸಂಪಾದಿಸುವಿರಿ. ಸ್ವತಃ ನೀವು ಯಾರ ಮೇಲಾದರೂ ದಾವೆ ಮಾಡುವವರಿದ್ದರೆ ಮಾರ್ಚ ನಂತರವೇ ಮಾಡಬೇಕು. ಅಂದರೆ ಯಶಸ್ಸು ಬಹುಶಃ ಸಿಕ್ಕುವದು.

ವಿವಾಹವಾಗುವದಿದ್ದರೆ ಮಾರ್ಚ ನಂತರ ಸಹಜವಾಗಿ ಒದಗಿಬರುವದು. ಮತ್ತು ಗಂಡ ಇಲ್ಲವೆ ಹೆಂಡತಿ ಮನಸ್ಸಿನಂತೆ ಸಿಕ್ಕುವರು. ಮಕ್ಕಳ ವಿವಾಹಕ್ಕೆ ಮಾತ್ರ ಈ ವರ್ಷ ಅಷ್ಟೊಂದು ಅನುಕೂಲವಿಲ್ಲ. ಹಡೆಯುವ ಹೆಣ್ಣುಮಕ್ಕಳಿಗೆ ಜುಲೈ ೧೨ ರ ವರೆಗೆ ಸ್ವಲ್ಪಾದರೂ ಕಷ್ಟವೆನಿಸುವದು. ಅನಂತರ ಹೆತ್ತರೆ ಮಾತ್ರ ಸ್ವಲ್ಪವೂ ತೊಂದರೆಯಾಗುವದಿಲ್ಲ. ಮಾರ್ಚ ಕೊನೆಯ ವರೆಗೆ ಹಡೆದರೆ ಕನ್ಯಾ, ಅನಂತರ ಗಂಡು ಹುಟ್ಟುವ ಸಂಭವ ಹೆಚ್ಚಿಗೆ ಇದೆ.

ಯಾವ ವಿದ್ಯಾರ್ಥಿಗಳ ಪರೀಕ್ಷೆ ಮಾರ್ಚ ಆದ ನಂತರ ಆಗುವದಿದೆಯೋ ಅವರಿಗೆ ಯಶಸ್ಸು ನಿಶ್ಚಿತವಾಗಿ ದೊರೆಯುವ ಯೋಗವಿದೆ.

ವರೆಗೆ ಬಹಳ ತೊಂದರೆ ಕೊಡುವರು. ಪ್ರತಿ ವಿಷಯದಲ್ಲಿ ಅವರು ನಿಮ್ಮಲ್ಲಿಯ ಕುಂದನ್ನು ಮಾತ್ರ ಎಣಿಸುವರು. ಪ್ರಾಪಂಚಿಕ ಸುಖ ಮಾರ್ಚ ವರೆಗೆ ಅನುಕೂಲ ದೊರೆಯುವದು. ಅನಂತರ ಮಾತ್ರ ಕಿವಿ ಉದ್ದಾಗುವದರಿಂದ ನಿಮ್ಮನಿಮ್ಮಲ್ಲಿ ಯಾವಾಗಲಾದರೂ ಬಾಯಿಗೆ ಬಾಯಿಹತ್ತುವದು. ಜುಲೈ ೨೨ ರಿಂದ ಬಂಧುಪ್ರೇಮವೂ ಬಹಳ ಶಿಥಿಲವಾಗಹತ್ತುವದು. ಜುಲೈ ೧೨ ರ ವರೆಗೆ ನಿಮ್ಮ ತಂದೆ-ತಾಯಿಯ ಆರೋಗ್ಯ ಅನುಕೂಲವಿಲ್ಲ. ಮಾರ್ಚದಲ್ಲಿ ಒಂದೆರಡು ಧಾರ್ಮಿಕ ಕೃತ್ಯಗಳು ಸಂಭವಿಸುವವು. ಸ್ಥಾವರದಲ್ಲಿ ಸ್ವಲ್ಪ ಹೊಸ ಸಂಗ್ರಹವಾಗುವದು. ಆದರೆ ಜುಲೈ ೧೨ ರ ವರೆಗೆ ಆ ಬಗ್ಗೆ ಒಂದಿಲ್ಲೊಂದು ಬಗೆಯ ಶುಕ್ಲ ಕಾಷ್ಠ ಬೆನ್ನಿಗೆ ಹತ್ತಿದ್ದೇ. ಹೊಸ ವಾಹನಗಳು ದೊರೆಯುವವಾದರೂ ಅವು ಮೇ೨ನ ತಾರೀಕಿನ ವರೆಗೆ ಆಗಾಗ ಕೆಡುವದರಿಂದ ಅವುಗಳ ಉಪಯೋಗಕ್ಕಿಂತ ತೊಂದರೆಯೇ ಆಗುವದು. ನೌಕರ ಚಾಕರರೂ ಚುಕಾರತಟ್ಟುಗಳಂತೆ ವರ್ತಿಸುವರು. ದನಕರುಗಳಿಂದಲೂ ತೊಂದರೆಯೆನಿಸುವದು. ಮನೆಯಲ್ಲಿ ಇಲ್ಲವೆ ಹಳ್ಳಿಯಲ್ಲಿ ನಿಮ್ಮ ವರ್ಚಸ್ಸು ಮಾರ್ಚ ೨೯ ರಿಂದ ಜುಲೈ ೧೨ ರ ವರೆಗೆ ಹಾರಿ ಹೋದಂತೆಯೇ ಎಂದು ತಿಳಿಯತಕ್ಕದ್ದು.

ಧಂದೆ ಮಾಡುವವರಿಗೆ ಮತ್ತು ಕೂಲಿಕಾರರಿಗೆ ಈ ವರ್ಷ ಬಹಳ ಉತ್ತಮವಿದೆ. ಮಾರ್ಚ ವರೆಗೆ ಉದ್ಯೋಗಸ್ಥರಿಗೆ,ಅನಂತರ ನೋಕರರಿಗೆ ವಿಶೇಷ ಲಾಭದಾಯಕವಾಗಿದೆ. ಕಿರಕಳ ವ್ಯಾಪಾರಿಗಳಿಗಿಂತ ಠೋಕ ವ್ಯಾಪಾರಿಗಳಿಗೆ ಮತ್ತು ಕೆಳಗಿನ ನೋಕರರಿಗಿಂತ ವರಿಷ್ಠ ವರ್ಗದ ನೋಕರರಿಗೆ ವಿಶೇಷ ಲಾಭವಾಗುವದು. ಆದರೆ ಎರಡೂ ವರ್ಗಗಳ ನೋಕರರಿಗೆ ಅವರವರ ಯೋಗ್ಯತೆಗನುಗುಣವಾಗಿ ಸ್ವಲ್ಪಾದರೂಬಢತಿಯಾಗುವದು. ಪೋಲೀಸರು, ಮಿಲಿಟರಿ, ಹಡಗುಪಡೆ ಮತ್ತು ಕಸ್ಟಂ ಖಾತೆಯಲ್ಲಿಯ ನೋಕರರಿಗೆ ಈ ವರ್ಷ ಹೆಚ್ಚು ಅನುಕೂಲವಿದೆ. ಅದರಂತೆಯೇ ಇಟ್ಟಂಗಿ, ಹಂಚು,ಸಿಮೆಂಟ,ಇಮಾರತಿ ಕಟ್ಟಿಗೆಗಳ ವ್ಯಾಪಾರಿಗಳು ಮತ್ತು ಆ ಸಂಬಂಧದಲ್ಲಿ ಕೆಲಸ ಮಾಡುವ ಕಂತ್ರಾಟದಾರರು ಇವರಿಗೂ ಬಹಳ ಲಾಭ. ವಿಶೇಷವಾಗಿ ಅಕ್ಟೋಬರ ೨ ರಿಂದ ಫೆಬ್ರುಅರಿ ೧೪, ಮಾರ್ಚ ೨ ರಿಂದ ಮೇ ೭, ಮೇ ೨೫ ರಿಂದ ಸಪ್ಟಂಬರ ೧ ಮತ್ತು ಸಪ್ಟಂಬರ ೨೦ ರಿಂದ ಅಕ್ಟೋಬರ ೭ ರ ವರೆಗಿನ ಅವಧಿಯಲ್ಲಿ ಹೆಚ್ಚು ಲಾಭ. ಮಾರ್ಚ ವರೆಗೆ ಮಿತ್ರಸುಖ ಅನುಕೂಲವಾಗಿದ್ದರೂ ಮುಂದೆ ಪರಸ್ಪರರಲ್ಲಿ ಕಲುಷಿತ ವಾತಾವರಣವುಂಟಾಗುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಮಾರ್ಚ ೨೯ ರಿಂದ ಜುಲೈ ೧೨ ರ ವರೆಗೆ ವಿರೋಧಿಗಳಿಗೆ ಅನುಕೂಲವಿದ್ದರೂ ಉಳಿದ ಸಮಯದಲ್ಲಿ ಸ್ವತಃ ನಿಮಗೆ ಯಶಸ್ಸು ಸಿಕ್ಕುವ ಯೋಗವಿದೆ.

ಈ ರಾಶಿಯ ಯಾವ ಹೆಣ್ಣುಮಕ್ಕಳು ಎಪ್ರಿಲಿಗಿಂತ ಮೊದಲು ಹಡೆಯುವರೊ ಅವರಿಗೆ

ವೃಶ್ಚಿಕ

ಈ ರಾಶಿಯವರಿಗೆ ಈ ವರ್ಷ ಪ್ರಾಪಂಚಿಕ ಸುಖ ಅಷ್ಟಕ್ಕಷ್ಟೇ ದೊರೆತರೂ ಉದ್ಯೋಗ ಧಂದೆಯಲ್ಲಿ ಉತ್ಕರ್ಷವಾಗಿ ಬಹಳಷ್ಟು ಲಾಭ ಆಗುವದೆಂಬಲ್ಲಿ ಸ್ವಲ್ಪೂ ಸಂದೇಹವಿಲ್ಲ.

ಈ ರಾಶಿಯವರ ಆರೋಗ್ಯ ಎಪ್ರೀಲಿನಿಂದ ಜುಲೈ ೧೨ ರ ವರೆಗೆ ಬಹಳಷ್ಟು ಅನುಕೂಲ ಉಳಿಯುವದಿಲ್ಲ, ಮತ್ತು ಜೂನ ೪ ರ ವರೆಗೆ ಯಾವದೊಂದು ಅಪಘಾತದ ಅಂಜಿಕೆಯೂ ಇದೆ. ಆದರೆ ಉಳಿದ ಸಮಯದಲ್ಲಿ ಅದು ನಿರೋಗಿ ಉಳಿದು ಎಪ್ರೀಲ ವರೆಗೆ ಮಾನಸಿಕ ಸುಖ ಬಹಳ ಅನುಕೂಲವೆನಿಸುವದು. ಅವಾಂತರ ದೇಹಸೌಖ್ಯಕ್ಕೆ ಮಾರ್ಚ ೨೨ ರಿಂದ ಜೂನ ೪ ರ ವರೆಗಿನ ಕಾಲವನ್ನು ಬಿಟ್ಟು ಉಳಿದ ಕಾಲ ಬಹಳ ಅನುಕೂಲ. ಜನೆವರಿ ೧೨ ರಿಂದ ಅಗಸ್ಟ ೧೨ ರ ವರೆಗೆ ನಿಮ್ಮ ಸ್ವಭಾವ ಮಾತ್ರ ಬಹಳ ಹಟಮಾರಿಯಾಗಿ ತರ್ಕಟಯಾಗುವದು. ಮಹತ್ವಾಕಾಂಕ್ಷೆ ಹೆಚ್ಚುವದು. ಆದರೆ ಅದಷ್ಟೊಂದು ಸಫಲವಾಗುವದಿಲ್ಲ.

ಈ ವರ್ಷ ಸ್ತ್ರೀಸುಖಕ್ಕೆ ಬಹಳ ಅನುಕೂಲ. ಆದರೆ ಜುಲೈ ೧೨ ರ ವರೆಗೆ ಮನೆಯಲ್ಲಿಯ ಕಿಟಕಿಟ ಇಲ್ಲವೆ ಯಾವದೊಂದು ಇಷ್ಟಾಪತ್ತಿಯಿಂದ ಸಹವಾಸಜನ್ಯಸುಖಕ್ಕೆಬಹಳ ವ್ಯತ್ಯಯವುಂಟಾಗುವದು. ನಿಮ್ಮಿಬ್ಬರಲ್ಲಿ ಮತ್ತೈಕ್ಯವಿರುವದೇ ಅನೇಕರಿಗೆ ಸರಿಯೆನಿಸುವದಿಲ್ಲ. ಯಾರ ವಿವಾಹವಾಗಬೇಕಾಗಿದೆಯೋ ಅಂಥವರಿಗೆ ಎಪ್ರೀಲಿನಲ್ಲಿಯಷ್ಟು ಮುಂದೆ ಯಾವಾಗಲೂ ಬಾಸಿಂಗಬಲ ಅಷ್ಟು ಪ್ರಬಲವಾಗಿರುವದಿಲ್ಲ. ಎಷ್ಟೋ ಜನರ ವಿವಾಹ ಗೊತ್ತಾಗಿಯೂ ಅದು ಒದಗಿಬರುವದಿಲ್ಲ. ಇಲ್ಲವೆ ಅನ್ಯಕಾರಣಕ್ಕಾಗಿ ಮುಂದೆ ಹಾಕಬೇಕಾಗಿ ಬರುವದು. ಮಾರ್ಚದಲ್ಲಿ ಮಕ್ಕಳಲ್ಲಿ ಒಬ್ಬಿಬ್ಬರದಾದರೂ ಮನಸ್ಸಿನಂತೆ ಉತ್ಕರ್ಷವಾಗುವದು. ಎಪ್ರಿಲಿನ ನಂತರ ಅವರಲ್ಲಿ ಒಬ್ಬಿಬ್ಬರಾದರೂ ನಿಮ್ಮ ಮನಸ್ಸಿನ ವಿರುದ್ಧ ವರ್ತಿಸಿ ಈ ವರೆಗೆ ಸಂಪಾದಿಸಿದ ಲೌಕಿಕವನ್ನು ಕೆಡಿಸುವರು. ಉಳಿದ ಆಪ್ತರು ಮತ್ತು ನೆರೆಹೊರೆಯವರು ಜುಲೈ ೧೨ ರ

ಯಾವುದೇ ಬಗೆಯ ತೊಂದರೆಯಿಲ್ಲ. ಬಹುಶಃ ಗಂಡು ಹುಟ್ಟುವದು. ಆದರೆ ೧೦೦ ಕ್ಕೆ ಕನಿಷ್ಠ ಹತ್ತು ಜನರಿಗಾದರೂ ಅವಳಿ-ಜವಳಿ ಮಕ್ಕಳು ಹುಟ್ಟುವ ಸಂಭವವಿದೆ. ಅನಂತರ ಹಡೆಯುವ ವರಿಗೆ ಬಹುಶಃ ಹೆಣ್ಣು ಹುಟ್ಟಿ ಅವರ ಬಾಣಂತಿ ತನವೂ ಅಷ್ಟೊಂದು ನೈ ಹಿಡಿಯುವದಿಲ್ಲ.

ಯಾವ ವಿದ್ಯಾರ್ಥಿಗಳ ಪರೀಕ್ಷೆ ಮಾರ್ಚ ೨೯ ರ ವರೆಗೆ ಆಗುವದೊ ಅಂಥವರು ನಿಶ್ಚಿತವಾಗಿ ತೇರ್ಗಡೆ ಹೊಂದುವರು. ಆದರೆ ಅನಂತರ ಯಾರ ಪರೀಕ್ಷೆ ಆಗುವದಿದೆಯೋ ಅವರು ಒಳ್ಳೇ ಜೋರಿ ನಿಂದ ಅಭ್ಯಾಸ ಮಾಡಿದರೆ ಮಾತ್ರ ಸರಸ್ವತಿ ಪ್ರಸನ್ನಳಾಗುವಳು.

ಧನು

ಈ ರಾಶಿಯವರಿಗೆ ಈ ವರ್ಷ ಒಳ್ಳೆ ದೈವ ತೆರೆ ದಂತಿದೆ. ಎಪ್ರಿಲಿನಿಂದಂತೂ ಅತ್ಯಂತ ಸಮಾಧಾನ ಕಾರಕ ಸಂಗತಿಗಳು ಸಂಭವಿಸುವವು.

ಈ ರಾಶಿಯ ಜನರ ಆರೋಗ್ಯ ಜುಲೈ ೧೨ ರ ವರೆಗೆ ಒಟ್ಟಿಗೆ ಅನುಕೂಲವಿರುವದು. ಅದರ ಲ್ಲಿಯೂ ನವಂಬರ ೧೫ ರಿಂದ ಜನೆವರಿ ೧೨ ರ ವರೆಗಿನ ಅವಧಿಯಲ್ಲಿ ದನಗಳಿಂದ ಸ್ವಲ್ಪ ಅಪಘಾತದ ಅಂಜಿಕೆ ಇದೆ. ಜುಲೈ ೧೨ ರ ನಂತರ ವಾತ ಮತ್ತು ಶೈತ್ಯಜನ್ಯ ವಿಕಾರಗಳಿಂದ ಬಹಳ ಕ್ಲೇಶವುಂಟಾಗುವದು. ಅದರಂತೆಯೇ ಅನೇಕರಿಗೆ ಭೂತಬಾಧೆ ಇಲ್ಲವೆ ಮಂತ್ರತಂತ್ರಗಳ ಪ್ರಯೋಗದಿಂದಲೂ ಬಾಧೆಯುಂಟಾಗಿ ಬಹಳ ತೊಂದರೆಯೆನಿಸುವದು. ಮಾನಸಿಕ ಮತ್ತು ಆವಶ್ಯಕ ವಿಷಯಗಳಿಂದ ಸಿಕ್ಕತಕ್ಕ ಸುಖ ಎಪ್ರಿಲಿನಿಂದ ಬಹಳ ಹೆಚ್ಚುವದು. ಜುಲೈ ೧೨ ರ ವರೆಗೆ ಎಷ್ಟೋ ದುರ್ಘಟ ಕೆಲಸಗಳಲ್ಲಿ ಸಾಹಸಮಾಡುವ ಮಹತ್ವಾಕಾಂಕ್ಷೆಯುಂಟಾಗುವದು ಮತ್ತು ಅದರಲ್ಲಿ ಕೆಲಮಟ್ಟಿಗಾದರೂ ಪರಿಪೂರ್ಣ ಯಶಸ್ಸು ಸಿಕ್ಕುವದು. ಸ್ವಭಾವದಲ್ಲಿ ದರ್ಪೋಕ್ತಿ ಮತ್ತು ಪರಹಿತ ತುಚ್ಛತೆ ಆಗಾಗ ಕಂಡುಬರುವದು. ಅದರಿಂದ ನಿಮ್ಮ ಲೋಕಪ್ರಿಯತೆ ಬಹಳ ಮಟ್ಟಿಗೆ ಕಡಿಮೆಯಾಗುವದು.

ಸ್ತ್ರೀ ಸುಖಕ್ಕೆ ಈ ವರ್ಷ ಉತ್ತಮವಿದ್ದರೂ ಜುಲೈ ೧೨ ರ ನಂತರ ಅವಳ ಆರೋಗ್ಯದ ಬಗ್ಗೆ ಬಹಳ ಕಾಳಜಿ ಮಾಡಬೇಕಾಗುವದು. ಎಪ್ರೀಲಿನಿಂದ ಜುಲೈ ೧೨ ರ ವರೆಗೆ ಉಭಯತರಲ್ಲಿ ಕೂಡಿ ನಡೆದಷ್ಟು ಉಳಿದ ವೇಳೆಯಲ್ಲಿ ನಡೆಯುವದಿಲ್ಲ. ವಿವಾಹವಾಗುವದಿದ್ದರೆ ಎಪ್ರೀಲಿನಿಂದಲೆ ಹೆಚ್ಚು ಚಾಂಸಿಗ ಬಲವಿದೆ. ಆದರೂ ಈ ರಾಶಿಯ ಜನರ ವಿವಾಹ ಪ್ರಮಾಣ ಈ ವರ್ಷ ಬಹಳ ಕಡಿಮೆ. ನಿಮ್ಮ ಮಕ್ಕಳ ವಿವಾಹವಾಗುವದಿದ್ದರೆ ಮಾತ್ರ ಈ ಅವಧಿಯಲ್ಲಿ ಅಲ್ಪಾಯಾಸದಿಂದ ಸಂಭವಿಸುವದು. ಅವರಿಗೆ ಈ ವರ್ಷ ಸ್ವಭಾವತಃ ಪ್ರಗತಿಶೀಲವಿದ್ದು ಎಪ್ರಿಲಿನಿಂದಂತೂ ಅಸಂಭಾವ್ಯವೆನಿಸುವಷ್ಟು ಅವರ ಉತ್ಕರ್ಷವಾಗುವದು. ಅವರೊಡನೆ ಮತ್ತು ಅದರಂತೆ ಮನೆಯಲ್ಲಿಯೂ ಇತರರೊಡನೆ ಎಪ್ರೀಲಿಗಿಂತ ಮೊದಲು ಕೂಡಿ ನಡೆದಷ್ಟು ಮುಂದೆ ಕೂಡಿ ನಡೆಯುವದಿಲ್ಲ. ತದ್ವಿರುದ್ಧವಾಗಿ ಜುಲೈ ೧೨ ರ ವರೆಗೆ ಪ್ರತ್ಯಕ್ಷ ವಿರೋಧವೆ ಹೆಚ್ಚುತ್ತ ಹೋಗುವದು. ಇಡಿ ವರ್ಷ ಬಂಧುಗಳೊಡನೆಯೂ ಸ್ವಲ್ಪ ಹೆಚ್ಚು ಕಡಿಮೆ ಕೂಡಿನಡೆಯುವದಿಲ್ಲ. ಆಪ್ತರು ಮತ್ತು ನೆರೆಯವರಿಂದ ಎಪ್ರೇಲಿನಿಂದ ಹೆಚ್ಚು ಸುಖ ಸಿಕ್ಕಹತ್ತುವದು. ವಾಹನಗಳು, ದನಗಳು, ನೋಕರ, ಚಾಕರರು ಮುಂತಾದ ವಿಷಯಗಳಲ್ಲಿಯೂ ಈ ಕಾಲದಿಂದಲೆ ಹೆಚ್ಚು ಸಮಾಧಾನಕರ ಲಾಭದೊರೆಯುವದು. ಸ್ಥಾವರ ಆಸ್ತಿಯಲ್ಲಿ ಸ್ವಲ್ಪಾದರೂ ಹೆಚ್ಚಳವಾಗುವದು. ಆದರೆ ಆ ಮಾನದಿಂದ ಎಲ್ಲ ಆಸ್ತಿಯ ವಾರ್ಷಿಕ ಉತ್ಪನ್ನದ ಪ್ರಮಾಣವು ಹೆಚ್ಚದೆ ಸ್ವಲ್ಪಾದರೂ ಕಡಿಮೆಯಾಗುವದು.

ಧಂದೆ ಮತ್ತು ಕೂಲಿಕಾರರಿಗೆ ಈ ವರ್ಷ ಸ್ವಭಾವತಃ ಅನುಕೂಲವಾಗಿದ್ದರೂ ಎಪ್ರಿಲಿನಿಂದ ವಿಶೇಷ ಲಾಭಕರವಾಗುವದು. ನೋಕರರಿಗಿಂತ ಸ್ವತಂತ್ರ ಧಂದೆಮಾಡುವವರಿಗೆ ಬಹಳ ಲಾಭ ಸಿಕ್ಕುವದು. ವಕೀಲರು, ಡಾಕ್ಟರರು, ಗ್ರಂಥಕಾರರು ಮುಂತಾದ ಬುದ್ಧಿಜೀವಿಗಳಿಗೂ ವಿಶೇಷ ಭಾಗ್ಯದಾಯಕವೆನಿಸುವದು. ಎಲ್ಲ ಬಗೆಯ ಕ್ಷುಲ್ಲಕ ಧಾತುಗಳಲ್ಲಿ ವ್ಯಾಪಾರ ಮಾಡುವವರು ಕಿರಕಳ ವಸ್ತು ಮಾರಾಟಗಾರರು ಮತ್ತು ಅಂಥ ಕೆಲಸಗಳ ಕಲಾಕುಶಲರು ವೊದಲಾದವರಿಗೆ ದೊಡ್ಡ ವ್ಯಾಪಾರಸ್ಥರಿಗಿಂತ ಲಾಭದ ಪ್ರಮಾಣ ಹೆಚ್ಚು ಬೀಳುವದು. ಅದರಂತೆಯೇ ಎಲ್ಲ ಬಗೆಯ ಮನೋರಂಜನೆಯ ಸಾಮಾನುಗಳ ಮಾರಾಟಗಾರರು ಮತ್ತು ಅಂಥ ಆಟಗಳ ಮೇಲೆ ಉಪಜೀವನ ಮಾಡುವವರು ಬಹಳ ಪ್ರಗತಿಹೊಂದುವರು. ಅದರಂತೆಯೇ ಕೋರ್ಟು, ಬಗೆ ಬಗೆಯ ಕರವಸೂಲಿ ಖಾತೆ ಮತ್ತು ವಿವಿಧವಸ್ತುಗಳ ಎಜನ್ಸಿಯಲ್ಲಿಯ ನೋಕರರು ಇವರೂ ಈ ವರ್ಷ ಸುಖದ ದಿನಗಳನ್ನು ಅನುಭೋಗಿಸುವರು. ಮಾರ್ಚ ೨೯ ರಿಂದ ಅಗಸ್ಟ ೧೨ ರ ವರೆಗಿನ ಅವಧಿಯಲ್ಲಿ ಎಷ್ಟೋ ಜನರಿಗೆ ಮೇಲಿನ ಗ್ರೇಡು ಸಿಕ್ಕುವದು. ವರಿಷ್ಠರಿಗಿಂತ ಕೈಕೆಳಗಿನ ಜನರು ಮತ್ತು ಉಳಿದ ಜನರು ಒಳ್ಳೆ ರೀತಿಯಿಂದ ವರ್ತಿಸುವರು. ಅದರಲ್ಲಿಯೂ ಡಿಸೆಂಬರ ೧ ರಿಂದ ೨೭, ಜನೆವರಿ ೨೧ ರಿಂದ ಫೆಬ್ರುಅರಿ ೧೫, ಮಾರ್ಚ ೧೦ ರಿಂದ ಎಪ್ರಿಲ ೫, ಎಪ್ರಿಲ ೨೪ ರಿಂದ ಮೇ ೨೨, ಜೂನ ೧೫ ರಿಂದ ಜುಲೈ ೧೦, ಮತ್ತು ಅಗಸ್ಟ ೩ ರಿಂದ ಅಕ್ಟೋಬರ ೧೬ ಈ ಅವಧಿಯಲ್ಲಿ ವಿಶೇಷ ಲಾಭ ಮತ್ತು ಯಶಸ್ಸೂ ಸಿಕ್ಕುವದು. ಎಪ್ರಿಲದಿಂದ ಮಿತ್ರ ಸುಖವೂ ಅನುಕೂಲ ದೊರೆಯುವದು.

ವಾದವಿವಾದ ಮತ್ತು ಸ್ಪರ್ಧೆಯಲ್ಲಿ ಮಾರ್ಚ ೨೯ ರಿಂದ ಜುಲೈ ೧೨ ರ ವರೆಗೆ ನಿಶ್ಚಯವಾಗಿ ಯಶಸ್ಸು ಸಿಕ್ಕುವ ಯೋಗ ಬಹಳಿದೆ. ಉಳಿದ ಅವಧಿಯಲ್ಲಿ ಆ ಬಗೆಯ ಯೋಗವಿರುವದಿಲ್ಲ.

ಈ ರಾಶಿಯ ಸ್ತ್ರೀಯರ ಹೆರಿಗೆಯಾಗುವದಿದ್ದರೆ ಮಾರ್ಚ ೨೯ ರ ವರೆಗೆ ಆಗುವದು. ಆದರೆ ಅದು ಸ್ವಲ್ಪ ಕಷ್ಟದ್ದೆನಿಸುವದು. ಅನಂತರ ಆಗುವ ಹೆರಿಗೆ ಸುಲಭ ರೀತಿಯಿಂದ ಆಗುವದು. ಬಾಳಂತಿ

ತನವೂ ಚೆನ್ನಾಗಿ ಆಗುವದು ಆದರೆ ಜುಲೈ ೧೨ರ ನಂತರ ಹೆರಿಗೆಯಾದರೆ ಬಹುಶಃ ಕನ್ಯಾರತ್ನ ವಾಗುವ ಯೋಗವಿದೆ.

ಯಾವ ವಿದ್ಯಾರ್ಥಿಗಳ ಪರೀಕ್ಷೆ ಮಾರ್ಚ ೨೯ ಕ್ಕಿಂತ ಮೊದಲು ಆಗುವದಿದೆಯೋ ಅಂಥವರು ಅತ್ಯಂತ ಕಾಳಜಿಯಿಂದ ಅಭ್ಯಾಸ ಮಾಡಿದರೆ ಮಾತ್ರ ಸರಸ್ವತಿ ಪ್ರಸನ್ನಳಾಗುವಳು. ಅನಂತರ ಯಾರ ಪರೀಕ್ಷೆ ಆಗುವದಿದೆಯೋ ಅಂಥವರಿಗೆ ಯಶಸ್ಸು ಖಂಡಿತವಾಗಿ ಸಿಕ್ಕುವದು.

ಮಕರ

ಈ ವರ್ಷ ಈ ರಾಶಿಯವರ ಆರೋಗ್ಯ ಅಲ್ಪ ಸ್ವಲ್ಪ ಕೆಟ್ಟು ಪ್ರಾಪಂಚಿಕ ಸುಖದಲ್ಲಿ ಕೆಲಮಟ್ಟಿಗೆ ವ್ಯತ್ಯಯವುಂಟಾದರೂ ಔದ್ಯೋಗಿಕ ಯಶಸ್ಸಿಗೆ ಬಹಳ ಅನುಕೂಲವಿದೆ. ಪ್ರತಿಷ್ಠೆಯೂ ಹೆಚ್ಚು. ಲಕ್ಷ್ಮೀದೇವಿಯೂ ಪ್ರಸನ್ನಳಾಗುವಳೆಂಬುದನ್ನು ಚೆನ್ನಾಗಿ ಲಕ್ಷದಲ್ಲಿ ಇಟ್ಟುಕೊಂಡು ನಡೆಯಿರಿ.

ಈ ವರ್ಷ ನಿಮ್ಮ ಆರೋಗ್ಯ ಅಷ್ಟೊಂದು ಸಮಾಧಾನಕರವಿರುವದಿಲ್ಲ. ಯಾವಾಗಲೂ ಒಂದಿಲ್ಲೊಂದು ಬಗೆಯ ತಕರಾರು ಇದ್ದದ್ದೇ. ಎಪ್ರಿಲದಿಂದಂತೂ ಅದು ಸ್ವಲ್ಪ ಹೆಚ್ಚೇ ಎನಿಸುವದು. ಪ್ರಕೃತಿಯ ಮಾನದಿಂದ ನೋಡಿದರೆ ಸ್ವಭಾವ ಮಾತ್ರ ಬಹಳ ಉತ್ಸಾಹಿ ಮತ್ತು ಆಶಾವಾದಿಯುಳಿದು ಯಾವದೊಂದು ಕಠಿನ ಕೆಲಸವೂ ಪೂರ್ಣ ಮುಗಿಯುವಷ್ಟು ಧೈರ್ಯದಿಂದ ಮುನ್ನುಗ್ಗುವಿರಿ. ಆದರಲ್ಲಿಯೂ ಜನೆವರಿ ೧೮ರಿಂದ ಮಾರ್ಚ ೧೩, ಮೇ ೧೫ ರಿಂದ ಜೂನ ೧೬ ಮತ್ತು ಜುಲೈ ೧೬ ರಿಂದ ಸಪ್ಟೆಂಬರ ೧೬ ರ ವರೆಗಿನ ಕಾಲವು ಆರೋಗ್ಯಕ್ಕೆ ಅನುಕೂಲವಿರುವದು.

ಮಾರ್ಚ ೨೯ ರ ವರೆಗೆ ಸ್ತ್ರೀಸುಖ ಬಹಳ ಅನುಕೂಲ. ಅನಂತರ ಜುಲೈ ೧೨ ರಿಂದ ಕೆಲ ಅಪರಿಹಾರ್ಯ ಕಾರಣಗಳಿಗಾಗಿ ಅವಳು ಇಲ್ಲವೆ ನೀವು ಗ್ರಾಮಾಂತರಗಳಲ್ಲಿ ವಿರಹವ್ಯಥೆಯನ್ನು ಅನುಭೋಗಿಸಬೇಕಾಗುವದು. ಅನಂತರವಂತೂ ಅವಳ ಆರೋಗ್ಯ ಕೆಡುವದು. ಉಳಿದ ವಿಷಯಗಳಲ್ಲಿ ಜುಲೈ ೧೨ರ ವರೆಗೆ ಪ್ರಾಪಂಚಿಕ ತೊಂದರೆ ಮೇಲಿಂದ ಮೇಲೆ ಆಗಹತ್ತುವದು. ಒಬ್ಬರಿಗೊಬ್ಬರಿಗೆ ಕ್ಷಣವು ಕೂಡ ಕೂಡಿ ನಡೆಯುವದಿಲ್ಲ. ಎಷ್ಟೋ ಜನರು ವಿಭಕ್ತರಾಗುವರು ಮತ್ತು ಆಗ ಬಹಳ ಮಟ್ಟಿಗೆ ಬಾಯಿಗೆ ಬಾಯಿ ಹತ್ತಿ ಕೈಗೆ ಕೈ ಹತ್ತುವ ಸಂಭವವೂ ಇದೆ. ಮನೆ ಹೊರಗಿನ ಆಪ್ತರು ಮತ್ತು ನೆರೆಯವರು ಮಾತ್ರ ಬಹಳ ಸೌಜನ್ಯದಿಂದ ನಿಮ್ಮೊಡನೆ ನಡೆದುಕೊಳ್ಳುವರು ಮತ್ತು ಅದರ ಪ್ರತ್ಯಂತರ ನಿಮಗೆ ಜನೆವರಿ ೧೨ ರಿಂದ ಆಗಸ್ಟ ೧೨ ರ ವರೆಗೆ ಮೇಲಿಂದ ಮೇಲೆ ಕಂಡುಬರುವದು. ಆಸ್ತಿ ಕೆಲಮಟ್ಟಿಗಾದರೂ ಹೆಚ್ಚುವದು. ಉತ್ಪನ್ನವೂ ವ್ಯವಸ್ಥಿತವಾಗಿ ಸಿಕ್ಕುವದು. ಆದರೆ ಜುಲೈ ೧೨ ರ ನಂತರ ರೋಖ ಹಣ ಕೈಯಲ್ಲಿ ಸ್ವಲ್ಪವೂ ಉಳಿಯದೆ ಕೈಯಲ್ಲಿದ್ದ ಹಣವೂ ಪೂರ್ಣ ವೆಚ್ಚವಾಗಿ ಹೋಗುವದು. ಎಪ್ರಿಲದಲ್ಲಿ ಬಾಸಿಂಗಬಲವಿದ್ದಷ್ಟು ಮುಂದೆ ಇರುವದಿಲ್ಲ. ಮಕ್ಕಳ ವಿವಾಹವಾಗುವದಿದ್ದರೆ ಅದು

ಡಿಸೆಂಬರ ೨೭ರಿಂದ ಜನೆವರಿ ೨೧, ಎಪ್ರಿಲ ೫ರಿಂದ ೨೮, ಮೇ ೨೨ ರಿಂದ ಜೂನ ೧೫ ಈ ಕಾಲದಲ್ಲಿ ಆಗುವ ಯೋಗವಿದೆ. ಈ ವರ್ಷ ಅವರ ಉನ್ನತಿ ಮನಸ್ಸಿನಂತೆ ಆಗುವದು. ಆದರೆ ಅವರ ಮಾತುಕತೆ, ಜೀವನ, ವರ್ತನೆ ಮೊದಲಾದವುಗಳು ನಿಮ್ಮ ಮನಸ್ಸಿಗೆ ತೊಂದರೆ ಕೊಡುವಂತೆ ವಿಚಿತ್ರವಾಗಿರುವವು. ವಾಹನಗಳು, ದನಕರುಗಳು ಮತ್ತು ನೌಕರ ಚಾಕರರು ಮೊದಲಾದವರ ಸುಖ ಜುಲೈ ೧೨ ರ ವರೆಗೆ ಮನಸ್ಸಿನಂತೆ ಸಿಕ್ಕುವದು. ಅಂದಿನಿಂದ ನಿಮ್ಮ ತಾಯಿತಂದೆಗಳ ಆರೋಗ್ಯವನ್ನು ಬಹಳ ಮಟ್ಟಿಗೆ ಕಾಪಾಡಲಿಕ್ಕೆಬೇಕು.

ಧಂದೆ ಮತ್ತು ಕೂಲಿಕುಂಬಳಿ ಮಾಡುವವರಿಗೆ ಈ ವರ್ಷ ಬಹಳ ಉತ್ತಮವಿದ್ದು ಮಾರ್ಚ ಮುಗಿಯುವಷ್ಟೊತ್ತಿಗೆ ಬಹಳ ಜೋರಿನಿಂದ ಪ್ರಗತಿಯಾಗುವದು. ಔಷಧದ ವ್ಯಾಪಾರಿಗಳು, ಬುಕ್‌ಸೆಲರರು, ಪಲ್ಲೆಕಾಯಿ ಹಣ್ಣುಹಂಪಲ ಮಾರುವವರು, ತೋಟಗರು, ಗುಡ್ಡದ ಕಂಟ್ರಾಕ್ಟದಾರರು, ಎಣ್ಣೆವ್ಯಾಪಾರಿಗಳು ಇವರಿಗೆ ಬಹಳ ಲಾಭವಾಗುವದು. ಅದರಂತೆಯೇ ಡಾಕ್ಟರರು ಸಂಶೋಧಕರು, ಹರಿದಾಸರು, ಪುರಾಣಿಕರು, ವ್ಯಾಖ್ಯಾತರು, ಮಾಸಿಕ ಇಲ್ಲವೆ ವೃತ್ತಪತ್ರಿಕೆಯ ಸಂಪಾದಕರು ಇಂಥ ಬುದ್ಧಿಜೀವಿಗಳಿಗೂ ಈ ವರ್ಷ ಬಹಳ ಲಾಭವಿದೆ. ಅದರಂತೆ ವೈದ್ಯಕೀಯ, ಸೀರಾವರಿ, ಜಕಾತಿ ತಂತಿಖಾತೆಗಳಲ್ಲಿಯ ನೌಕರರಿಗೆ ಈ ವರ್ಷ ಸುಖದಾಯಕವಾಗಿದೆಯಲ್ಲದೆ ಮೇಲಿನ ಗ್ರೇಡು ಸಿಕ್ಕುವದು. ಬದಲಿಯಾದರೆ ಅನುಕೂಲ ಸ್ಥಳಕ್ಕೆ ಆಗುವದು. ವಿಶೇಷವಾಗಿ ನವಂಬರ ೧೫ ರಿಂದ ಜನೆವರಿ ೧೨ ಮತ್ತು ಆಗಸ್ಟ ೧೨ರಿಂದ ಸಪ್ಟಂಬರ ೧೨ ಈ ಕಾಲ ಹೆಚ್ಚು ಪ್ರಗತಿಯದು ಮತ್ತು ಒಳ್ಳೆ ಲಾಭದಾಯಕವಾದುದು. ಮಿತ್ರಸುಖ ಒಟ್ಟಿಗೆ ಅನುಕೂಲವಿದ್ದರೂ ಜನೆವರಿ ೧೨ರಿಂದ ಆಗಸ್ಟ ೧೨ರ ವರೆಗಿನ ಕಾಲದಲ್ಲಿ ಪರಸ್ಪರರಲ್ಲಿ ಐಕಮತ್ಯ ಕೆಲಮಟ್ಟಿಗಾದರೂ ಶಿಥಿಲವಾಗುವದು.

ವಾದ ವಿವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಜುಲೈ ೧೨ ರ ವರೆಗೆ ಬಹಳ ಹಿನ್ನೆಮಟ್ಟಬೇಕಾಗುವದು. ಆದರೆ ಅನಂತರ ಮಾತ್ರ ಪ್ರತಿಕಕ್ಷಿಗಳ ಬೆನ್ನೆಲಬು ಮುರಿಯುವಂತೆ ಯಶಸ್ಸು ಸಿಕ್ಕುವದು.

ಈ ರಾಶಿಯ ಸ್ತ್ರೀಯರು ನವಂಬರ ೨ ರಿಂದ ಡಿಸೆಂಬರ ೧, ಡಿಸೆಂಬರ ೨೭ ರಿಂದ ಜನೆವರಿ ೨೧, ಫೆಬ್ರವರಿ ೧೫ ರಿಂದ ಮಾರ್ಚ ೧೦, ಎಪ್ರಿಲ ೫ ರಿಂದ ೨೮, ಮೇ ೨೨ ರಿಂದ ಜೂನ ೧೫, ಜುಲೈ ೧೦ ರಿಂದ ಆಗಸ್ಟ ೩, ಮತ್ತು ಆಗಸ್ಟ ೨೮ ರಿಂದ ಸಪ್ಟಂಬರ ೨೧ ರ ಅವಧಿಯಲ್ಲಿ ಹಡೆದರೆ ಅವರಿಗೆ ಬಹುಶಃ ಹೆಣ್ಣು ಹುಟ್ಟುವವು. ಆದರೆ ಅವರು ಸುಸೂತ್ರ ಹಡೆಯುವರಲ್ಲದೆ ಬಾಣಂತಿತನವೂ ತೊಂದರೆಯಿಲ್ಲದೆ ಕೊನೆಗೊಳ್ಳುವದು. ಉಳಿದ ಅವಧಿಯಲ್ಲಿ ಹಡೆದರೆ ಬಹಳ ಕಷ್ಟವಾಗುವದು. ಆದರೆ ಪುತ್ರರತ್ನವಾಗುವದೆಂಬ ಮಾತನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಮಕ್ಕಳು ಮಾತ್ರ ಒಳ್ಳೆ ನಿರೋಗಿ ಮತ್ತು ಗಟ್ಟಿಮುಟ್ಟಾಗಿರುವವು.

ಯಾರ ಪರೀಕ್ಷೆ ಮಾರ್ಚ ೨೯ ರೊಳಗಾಗಿ ಆಗುವದೋ ಅವರು ಬಹುಶಃ ಅಲ್ಪಾಯಾಸದಿಂದ ಯಶಸ್ವಿಯಾಗುವರು. ಅನಂತರ ಪರೀಕ್ಷೆಯಾದರೆ ನರಿಬೇಟೆಯಾಡಬೇಕಾದರೆ ಹುಲಿಬೇಟೆಯುಷ್ಟು ಸಿದ್ಧತೆ ಮಾಡಬೇಕಾಗುವಂತೆ ಅಭ್ಯಾಸದ ಸಿದ್ಧತೆಯನ್ನು ಮಾಡಬೇಕಾಗುವದು. ಅಂದರೆ ಸರಸ್ವತಿಯು ನಿಮ್ಮ ಮೇಲೆ ವರದ ಹಸ್ತವನ್ನು ಇಡುವಳೆಂದು ತಿಳಿಯಿರಿ.

ಕುಂಭ

ಈ ವರ್ಷ ಈ ರಾಶಿಯವರಿಗೆ ಅಷ್ಟಮ ಶನಿಯಿದ್ದರೂ ಸಾಂಸಾರಿಕ ಮತ್ತು ಔದ್ಯೋಗಿಕ ದೃಷ್ಟಿಯಿಂದ ಬಹಳ ಅನುಕೂಲವಿರುವದೆಂಬದನ್ನು ಚೆನ್ನಾಗಿ ನೆನಪಿನಲ್ಲಿಟ್ಟುಕೊಂಡು ನಡೆಯಿರಿ.

ಈ ರಾಶಿಯವರ ಆರೋಗ್ಯ ಜುಲೈ ೧೨ರ ವರೆಗೆ ಸುಸ್ಥಿರವಿರುವದಿಲ್ಲ. ಅದರಲ್ಲಿಯೂ ನವಂಬರ ೧೫ ರಿಂದ ಜನೆವರಿ ೧೨ರ ವರೆಗೆ ಬಹಳ ಜಪ್ಪಿಸಿಕೊಂಡಿರಬೇಕು. ಅಪಘಾತದ ಭೀತಿಯೂ ಅದೆ ಈ ವರುಷ. ಆದರೂ ಜೀವಕ್ಕೆ ಯಾವದೇ ಬಗೆಯ ಅಂಜಿಕೆಯಿಲ್ಲ. ಸ್ವಭಾವ ಬಹಳ ಸಿಡುಕನಾಗುವದು. ಅನುಕೂಲ ಕೆಲಸ ಎಷ್ಟು ಒದಗಿ ಬಂದರೂ ಮನಸ್ಸು ಅಸಂತುಷ್ಟವೇ ಉಳಿಯುವದು. ಅನಂತರ ದೇಹಸುಖಕ್ಕೆ ಈ ವರ್ಷ ಸ್ವಲ್ಪೂ ಪ್ರತಿಕೂಲವಿಲ್ಲ. ಆವಶ್ಯಕ ಎಲ್ಲ ವಿಷಯಗಳು ಸಮೃದ್ಧಿಯೆನಿಸುವವು. ಜನೆವರಿ ೧೨ ರಿಂದ ಅಗಸ್ಟ ೧೨ರ ವರೆಗೆ ಸಮಾಧಾನದ ಘಟನೆಗಳು ವಿಶೇಷ ಸಂಭವಿಸುವವು. ಧಾರ್ಮಿಕ ಬುದ್ಧಿ, ಯಾವದೊಂದು ವಿಶಿಷ್ಟ ದೈವಿಕ ಪ್ರಾರ್ಥನೆಯನ್ನು ಮಾಡುವ ಯೋಗ. ಆದರೆ ಪರೋತ್ಕರ್ಷದ ಬಗ್ಗೆ ಮನಸ್ಸು ಮತ್ಸರಗ್ರಸ್ತವಾಗುವದು.

ಸ್ತ್ರೀಸುಖಕ್ಕೆ ಈ ವರ್ಷದ ಜುಲೈ ೧೨ ರ ವರೆಗೆ ಬಹಳ ಹಿತಕರವಿರುವದಿಲ್ಲ. ಆರೋಗ್ಯಕ್ಕಿಂತ ಅವಳ ಮಾನಸಿಕ ಸ್ವಾಸ್ಥ್ಯ ಹೆಚ್ಚು ಕೆಡುತ್ತಹೋಗುವದು. ಉಭಯತರಲ್ಲಿ ವೃಥಾವಾದದ ಪ್ರಸಂಗ ಮೇಲಿಂದ ಮೇಲೆ ಬರುವದು. ಅಂಥ ಸಂದರ್ಭದಲ್ಲಿ ಅವಳ ದಾರಿಯೇ ಸರಿಯೆನಿಸುವದು. ಉಳಿದ ವಿಷಯಗಳಲ್ಲಿ ಕೌಟುಂಬಿಕ ಉತ್ಕರ್ಷಕ್ಕೆ ಪೂರಕವಾಗಲು ಅನುಕೂಲವಿದೆ. ಸಂಗ್ರಹವು ಹೆಚ್ಚುವಂಥ ಅನೇಕ ಘಟನೆಗಳು ನಡೆಯುವವು. ಯಾರದಾದರೂ ಮದುವೆಯಾಗುವದಿದ್ದರೆ ಅವರಿಗೆ ಎಪ್ರೀಲಿನಿಂದ ಮುಂದೆ ಹೆಚ್ಚು ಗುರುಬಲ, ಅಂದರೆ ಬಾಸಿಂಗಬಲವಿರುವದು. ಆದರೂ ಮಾರ್ಚ ವರೆಗೆ ಮನೆಯಲ್ಲಿ ನಿಮ್ಮ ಮಕ್ಕಳಲ್ಲಿ ಯಾರದಾದರೂ ವಿವಾಹವಾಗುವದಿದ್ದರೆ ಅವರ ಮದುವೆ ನಿಶ್ಚಯವಾಗಿ ಆಗುವದು. ಉಳಿದ ಕೆಲಸಗಳು ಕಷ್ಟದ್ದಾಗಿರುವವು. ಪ್ರಿಯಜನರ ಕೂಡ ಬಹಳ ಸಮಯ ಸಹವಾಸ ಒದಗಿಬರುವದು. ಆಪ್ತರು ಸುಖಪ್ರದ ರೀತಿಯಲ್ಲಿ ವರ್ತಿಸುವರು. ನೆರೆಯವರೂ ಸಹಾನುಭೂತಿಯಿಂದ ನಡೆಯುವರು. ವಾಹನಗಳು ದನಗಳು ನೋಕರ ಚಾಕರರು ಇವರಿಂದಲೂ ವ್ಯವಸ್ಥಿತ ಸುಖ ಸಿಕ್ಕುವದು. ನಿಮ್ಮ ನಿದ್ರೆ ಬಹಳ ಕಡಿಮೆಯಾಗುವದು ಮತ್ತು ಶುಭಾಶುಭ ಸ್ವಪ್ನಬಿದ್ದರೆ ಅವೆಲ್ಲ ಬಹುಶಃ ಭಾವೀ ಸೂಚಕವೆನಿಸುವವು. ಮಾರ್ಚ ೨೯ ರ ವರೆಗೆ ಸ್ಥಾವರ ಜಂಗಮ ಸಂಗ್ರಹದಲ್ಲಿ ಸ್ವಲ್ಪಾದರೂ ಹೊಸದು ಕೂಡಬೀಳುವದು. ಸಿಹಿ ಪದಾರ್ಥವನ್ನು ಹೆಚ್ಚಿಗೆ ತಿನ್ನಬೇಕೆನ್ನಿಸುತ್ತದೆ. ಮಕ್ಕಳ ಉನ್ನತಿಗೆ ಈ ವರ್ಷ ಸಂಸ್ಮರಣೀಯವಾಗಿದ್ದು ಅದು ನವಂಬರ ೨೫ ರಿಂದ ಜನೆವರಿ ೨೯, ಫೆಬ್ರುಅರಿ ೧೯ ರಿಂದ ಮಾರ್ಚ ೨ ಮತ್ತು ಜೂನ ೧೦ ರಿಂದ ೨೬ ಈ ಮಧ್ಯಂತರ ಕಾಲದಲ್ಲಿ ಹೆಚ್ಚು ಗೋಚರವಾಗುವದು.

ಧಂದೆ ಮತ್ತು ಕೂಲಿಕಾರರಿಗೆ ಈ ವರ್ಷ ಯಾವಾಗಲೂ ಅನುಕೂಲವೇ. ಅದರಲ್ಲಿಯೂ ಡಿಸೆಂಬರ ೧ ರಿಂದ ೨೬, ಜನೆವರಿ ೨೧ ರಿಂದ ಫೆಬ್ರುಅರಿ ೧೫, ಮಾರ್ಚ ೧೦ರಿಂದ ಎಪ್ರಿಲ ೫, ಮೇ ೨೨ ರಿಂದ ಜೂನ ೧೫, ಅಗಸ್ಟ ೩ ರಿಂದ ೨೮ ಮತ್ತು ಸಪ್ಟಂಬರ ೨೧ ರಿಂದ ಅಕ್ಟೋಬರ ೧೬ ಈ ಮಧ್ಯಂತರ ಕಾಲವು ಮಹತ್ವದ ಯಶಸ್ಸನ್ನು ಮತ್ತು ಲಾಭವನ್ನು ಕೊಡುವದು. ಮಾರ್ಚ ೨೯ರ ವರೆಗೆ ನೋಕರರಿಗೆಅನಂತರ ಸ್ವತಂತ್ರ ಉದ್ಯೋಗ ಮಾಡುವವರಿಗೆ ಹೆಚ್ಚು ಲಾಭದಾಯಕಕಾಲವಿದೆ. ಆದರೆ ನೋಕರರಿಗೆ ಜನೆವರಿ ೧೨ ರಿಂದ ಅಗಸ್ಟ ೧೨ ರ ವರೆಗಿನ ಕಾಲದಲ್ಲಿ ಕೆಲಸದ ಭಾರ ಬಹಳ ಬೀಳುವದು. ಅದರಂತೆ ಸಪ್ಟಂಬರ ೨೬ ರ ನಂತರ ಧಂದೆಯವರಿಗೆ ಯಾವನೊಬ್ಬ ಗಿರಾಕಿಯು ಬಹಳ ಏರಿ ಮಾತಾಡುವದರಿಂದ ಮನಸ್ಸಿನಲ್ಲಿ ಬಹಳ ಅಸ್ವಸ್ಥತೆಯೆನಿಸುವದು. ಆದರೂ ಧನಲಾಭದಲ್ಲಿ ಮಾತ್ರ ಸ್ವಲ್ಪೂ ಕಡಿಮೆಯಾಗುವದಿಲ್ಲ. ಬುದ್ಧಿಜೀವಿಗಳಲ್ಲಿ ವಕೀಲರು, ಕವಿಗಳು ಮತ್ತು ಶಿಕ್ಷಕರು ಇವರಿಗೆ ಈ ವರ್ಷ ಹೆಚ್ಚು ಲೌಕಿಕವನ್ನೊದವಿಸಿ ಕೊಡುವದು. ಗಂಧಕ, ಪೆಟ್ರೋಲು ಮುಂತಾದ ಜ್ವಾಲಾಗ್ರಾಹಿಪದಾರ್ಥ, ಸಿನೇಮಾ ನಾಟಕ ಸರ್ಕಸ್ಸು ಕಂಪನಿಗಳ ಒಡೆಯರು, ದನಗಳ ಖರೀದಿ ಮಾಡುವವರು, ಕನ್ನಡಿ ಕಾರ್ಖಾನೆದಾರರು ಮತ್ತು ಫರ್ನಿಚರ ಮಾಡುವವರು ಇಂಥ ಧಂದೆಯವರಿಗೆ ಈ ವರ್ಷ ಮನಸ್ಸು ಸಂತೋಷಗೊಳ್ಳುವಷ್ಟು ಲಾಭವಾಗುವದು. ದೂರ ಪ್ರವಾಸ ಕನಿಷ್ಠ ಒಂದೆರಡು ಸಲವಾದರೂ ಒದಗಿಬರುವದು. ಸಮಾಜದಲ್ಲಿ ಪ್ರತಿಷ್ಠೆ ಮತ್ತು ಲಾಭ ನೌಕರಿಯಲ್ಲಿಯ ವರ್ಚಸ್ಸು ಉತ್ತಮ ಉಳಿದು ಧಂದೆ ಪ್ರಸಾರಹೊಂದುವದು ಇಲ್ಲವೆ ನೋಕರಿಯಲ್ಲಿ ಮೇಲಿನ ಗ್ರೇಡು ಸಿಕ್ಕುವದು. ಅಗಸ್ಟ ೧೨ ರಿಂದ ಸಪ್ಟಂಬರ ೨೬ ರ ವರೆಗಿನ ಅವಧಿಯಲ್ಲಿ ಈ ಯೋಗ ಅವಶ್ಯವಾಗಿ ಒದಗಿಬರುವದು.

ವಾದವಿವಾದಗಳಲ್ಲಿ ಇಲ್ಲವೆ ಸ್ಪರ್ಧೆಯಲ್ಲಿ ಮಾರ್ಚ ೨೯ ವರೆಗೆ ಸ್ವತಃ ನಿಮಗೆ ಬಹಳ ಅಪಯಶಸ್ಸು ದೊರೆತು ವೆಚ್ಚವೂ ಹೆಚ್ಚು ಬರುವದು. ಆದರೆ ಎಪ್ರೀಲಿನಿಂದ ಜುಲೈ ೧೨ರ ವರೆಗೆ ಈ ವಿಷಯದಲ್ಲಿ ಬಹಳ ಮಟ್ಟಿಗೆ ಸನ್ಮಾನನೀಯ ಒಡಂಬಡಿಕೆಯಾಗುವ ಸಂಭವ ಹೆಚ್ಚಿಗೆ ಇದೆ. ಅನಂತರವಂತೂ ಶತ್ರುಗಳ ಮೇಲೆ ಒಳ್ಳೇ ವಿಜಯ ಸಂಪಾದಿಸುವಿರಿ. ಜುಲೈ ೧೨ ರ ವರೆಗೆ ಸುಲಭವಾಗಿ ಹೆರಿಗೆಯಾಗುವದು. ಬಹುಶಃ ಗಂಡು ಹುಟ್ಟುವವು. ಅನಂತರ ಆಗುವ ಬಾಣಂತಿತನ ಬಹಳ ತೊಂದರೆಯದಾಗಿ ಬಹುಶಃ ಹೆಣ್ಣು ಹುಟ್ಟುವವು. ಯಾರ ಪರೀಕ್ಷೆ ಜುಲೈ ೧೨ ರೊಳಗೆ ಆಗುವದಿದೆಯೋ ಅವರ ಯಶಸ್ಸು ಹದಿನಾರಾಣೆ ಖಾತ್ರಿ ಇರುವದು.

ಮೀನ

ಈ ರಾಶಿಯುವರಿಗೆ ಈ ವರ್ಷ ಕಿರುಕಳ ಸ್ವರೂಪದ ಕೆಲ ತೊಂದರೆಗಳನ್ನು ಬಿಟ್ಟರೆ ಉಳಿದ ಎಲ್ಲ ವಿಷಯುಗಳಲ್ಲಿ ಬಹಳ ಸುಖಸಮಾಧಾನ ಉಂಟಾಗುವದೆಂಬಲ್ಲಿ ಸ್ವಲ್ಪವೂ ಸಂದೇಹವಿಲ್ಲ.

ಈ ರಾಶಿಯುವರಿಗೆ ಮಾರ್ಚ ೨೨ ರಿಂದ ಜೂನ ೪ ರ ವರೆಗಿನ ಕಾಲದಲ್ಲಿ ತಮ್ಮ ಆರೋಗ್ಯವನ್ನು ಕಣ್ಣುಗಳನ್ನು ಜಪ್ಪಿಸಿಕೊಳ್ಳಬೇಕು. ಉಳಿದ ಎಲ್ಲ ವಿಷಯುಗಳಲ್ಲಿ ಪೂರ್ಣ ಅನುಕೂಲತೆಯುಂಟಾಗುವದು. ದೇಹ ಸ್ವಾಸ್ಥ್ಯವೂ ಬಹಳ ಮಟ್ಟಿಗೆ ಲಭಿಸುವದು. ಸ್ವಭಾವದಲ್ಲಿ ಸಾತ್ವಿಕಭಾವ ಹೆಚ್ಚಿ, ದೇವದೇವತಾರ್ಚನೆಯಲ್ಲಿ ಲಕ್ಷ್ಯ ಹತ್ತುವದು. ಮಾನಸಿಕ ಸಮಾಧಾನ ಬಹುಶಃ ಎಲ್ಲ ಸಮಯುದಲ್ಲಿ ದೊರೆಯುವದು. ಮಾತು ಮತ್ತು ನಡವಳಿಯು ಛಾಪು ಬಹಳ ಬೀಳುವದು. ಸ್ವಹಿತಕ್ಕಿಂತ ಪರಹಿತ ಸಾಧನೆಯತ್ತ ಮೊದಲು ಲಕ್ಷ್ಯ ಹತ್ತುವದು. ವಿದ್ವಾಂಸರು, ಸತ್ಯಶೀಲರು, ಪ್ರಖ್ಯಾತ ಮತ್ತು ಪ್ರಿಯು ಸ್ವಭಾವದವರ ಸಹವಾಸ ಮೇಲಿಂದ ಮೇಲೆ ಲಭಿಸುವದು.

ಸ್ತ್ರೀಸುಖಕ್ಕೆ ಈ ವರ್ಷ ಪ್ರತಿಕೂಲವಿಲ್ಲದಿದ್ದರೂ ಅವಳ ಆರೋಗ್ಯಕ್ಕೆ ನವಂಬರ ೧೫ ರಿಂದ ಜನೇವರಿ ೧೨ ರವರೆಗೆ ಅಲ್ಪಸ್ವಲ್ಪ ತೊಂದರೆಯಾಗುವ ಸಂಭವವಿದೆ: ಅವಳ ಸಹವಾಸ ಸದಾ ಸಂಭವಿಸಿದರೂ ಫೆಬ್ರುವರಿ ೧೪ ರಿಂದ ಮಾರ್ಚ ೨, ಮೇ ೭ ರಿಂದ ೨೫ ಮತ್ತು ಸಪ್ಟಂಬರ ೧ ರಿಂದ ೨೦ ಈ ಕಾಲದಲ್ಲಿ ಅವಳು ಇಲ್ಲವೆ ನೀವು ಗ್ರಾಮಾಂತರಕ್ಕೆ ಹೋಗುವದರಿಂದ ಆಗ ಆ ಸಹವಾಸ ತಪ್ಪುವದು. ಉಭಯುತರಲ್ಲಿ ಏಕನಿಷ್ಠ ಪ್ರೇಮವುಳಿಯುವದಾದರೂ ಗೃಹಕೃತ್ಯದ ಸಲುವಾಗಿ ಎಷ್ಟೋ ಸಲ ಮತಭೇದವೂ ಹೆಚ್ಚುವದು. ಮದುವೆಯಾಗುವವರಿದ್ದರೆ ಮಾರ್ಚ ೨೦ರ ವರೆಗೆ ಬಾಸಿಂಗಬಲ ಹೆಚ್ಚಿಗಿದೆಂದು ತಿಳಿಯುಬೇಕು. ಆನಂತರ ನಿಮ್ಮ ಕುಟುಂಬದಲ್ಲಿ ಮದುವೆಯಾಗುವದಿದ್ದರೆ ಅದಕ್ಕೆ ಯೋಗವಿದೆಂದು ತಿಳಿಯುಬೇಕು. ಈ ವರ್ಷ ಮನೆಯಲ್ಲಿ ಒಂದೆರಡಾದರೂ ಲಗ್ನ-ಮುಂಜಿವೆಯುಂಥ ಮಂಗಳ ಕಾರ್ಯಗಳಾಗುವವು. ಕದಾಚಿತ್ ನಿಮ್ಮಲ್ಲಿ ಅಂಥ ಯೋಗವಿಲ್ಲದಿದ್ದರೆ ಹೊರಗಿನವರಾದರೂ ಬಂದು ನಿಮ್ಮ ಮನೆಯಲ್ಲಿ ಈ ಮಂಗಳ ಕಾರ್ಯವನ್ನು ಮಾಡುವರು. ಆಪ್ತೇಷ್ಟರ ಸುಖ ತುಂಬ ಸಿಕ್ಕುವದು. ಆದರೆ ಅವರಲ್ಲಿ ಕೆಲವರು ಹೊಟ್ಟೆಯಲ್ಲಿ ಏನಾದರೂ ಕಪಟವನ್ನಿಟ್ಟುಕೊಂಡು ಡೆಯುವರು. ಎಪ್ರಿಲಿನಿಂದ ಮುಂದೆ ಸ್ವಲ್ಪಾದ ೨ ಸ್ಥಾವರಜಂಗಮ ಆಸ್ತಿ ಹೆಚ್ಚುವದು. ಯಾವದೊಂದು ವಾರಸಾ ಹಕ್ಕು ಸಿಕ್ಕುವದಿದ್ದರೆ ಅದು ಅಲ್ಪಾಯಾಸದಿಂದ ಒದಗಿಬರುವದು. ವಾಹನಗಳು, ದನಕರುಗಳು, ನೋಕರ ಚಾಕರರು ಇವರಿಂದ ನವೆಂಬರ ೧೫ ರಿಂದ ಜನೇವರಿ ೧೨, ಮತ್ತು ಸಪ್ಟಂಬರ ೨೭ ರಿಂದ ಮೂರು ದಿನವನ್ನು ಬಿಟ್ಟು ಉಳಿದೆಲ್ಲ ಕಾಲದಲ್ಲಿ ಬಹಳ ಸುಖ ಸಿಕ್ಕುವ ಯೋಗವಿದೆ. ಮಿತ್ರಸುಖವೂ ಅನುಕೂಲ ದೊರೆಯುವದು. ಆದರೆ ಜುಲೈ ೧೨ ರ ನಂತರ ಒಬ್ಬಿಬ್ಬರಿಗೆ ಪ್ರಾಣಾಂತಕ ಕ್ಲೇಶದ ಸಂಭವವಿದೆ.

ಧಂದೆ ಕೂಲಿಕಾರರಿಗೆ ಈ ವರ್ಷ ದಿನದಿನಕ್ಕೆ ಉನ್ನತಿದಾಯುಕವೇ ಇದೆ. ಎಪ್ರಿಲಿನಿಂದ ಅದು ಹೆಚ್ಚಿ ಅದರಲ್ಲಿಯು ಹೊಸೆ ಮಹತ್ವ ಮತ್ತು ಲೋಕಪ್ರಿಯುತೆ ಪರಾಕಾಷ್ಠೆಗೆ ಮುಟ್ಟುವದು. ನೋಕರರಿಗೆ ಗ್ರೇಡ ಹೆಚ್ಚುವದು. ಲಾಭ ಯಾವಾಗಲೂ ಕಿಸೆಯುಲ್ಲಿದ್ದಂತೆಯೇ. ಅದರಲ್ಲಿಯೂ ಅಗಸ್ಟ ೧೨ ರಿಂದ ಸಪ್ಟಂಬರ ೨೭ರ ವರೆಗಿನ ಕಾಲದಲ್ಲಿ ಅದು ತುಂಬಿತುಳುಕುವದು. ಡಾಕ್ಟರರು, ಸರಕಾರೀ ಕೆಲಸದಲ್ಲಿ ಸಲಹೆ ಕೊಡುವವರು, ಅಪೂರ್ವ ಸಂಗತಿಯು ಶೋಧಕರು, ಜ್ಯೋತಿಷಿಗಳು, ನಾಟಕಕಾರರು ಮತ್ತು ತಾತ್ವಿಕ ಗ್ರಂಥಕಾರರು ಇಂಥ ಬುದ್ಧಿಜೀವಿಗಳಿಗೆ ಬಹಳ ಲಾಭವಿದೆ. ಮಾರ್ಚ ೫ರ ವರೆಗೆ ಆಗುವ ವೆಚ್ಚ ಸಕಾರಣವಿದ್ದಷ್ಟು ಮುಂದೆ ಅಷ್ಟೇ ನಿಷ್ಕಾರಣವೆನಿಸುವದು. ಸರಾಫರು, ಪತ್ತಾರರು, ಸಿಂಪಿಗರು, ಮಚ್ಚಿಗಾರರು, ಸಟ್ಟಾ ಆಡುವವರು, ಶೇರ ದಲ್ಲಾಳರು ಮತ್ತು ದೊಡ್ಡ ಪ್ರಮಾಣದಲ್ಲಿ ಪರದೇಶದೊಡನೆ ಸಂಬಂಧವಿಟ್ಟುಕೊಳ್ಳುವವರು ಮುಂತಾದ ಧಂದೆ

ಯವರಿಗೆ ಈ ವರ್ಷ ಬಹಳ ಲಾಭವಾಗುವದು. ಮುಖ್ಯವಾಗಿ ಯಾರ ನೌಕರಿಯು ಸಂಚಾರಕ ವಿರುವದೋ ಅಂಥ ಶಾಖೆಗಳಲ್ಲಿಯ ನೌಕರರಿಗೆ ಹೆಚ್ಚು ಸುಖವಿದೆ. ಈ ವರ್ಷ ಎಪ್ರಿಲಿನಿಂದ ಶುಭ ಸ್ವಪ್ನ ಮತ್ತು ಭಾವೀ ಸೂಚಕವಾದವುಗಳು. ಆದರೆ ಅದಕ್ಕೂ ಮೊದಲು ಯಾವದೊಂದು ಯಾತ್ರೆ ಮಾಡುವ ಸಂಭವವಿದೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಜುಲೈ ೧೨ರ ವರೆಗೆ ನಿಶ್ಚಯವಾಗಿ ಯಶಸ್ಸು ಸಿಕ್ಕುವದು. ಆದರೆ ಅನಂತರ ಶತ್ರುಗಳು ಬಹಳ ಮಟ್ಟಿಗೆ ನಿಮ್ಮನ್ನು ಸೋಲಿಸುವರು.

ಈ ರಾಶಿಯ ಸ್ತ್ರೀಯರು ಹಡೆಯುವವರಿದ್ದರೆ ಮಾರ್ಚ ೨೯ ರೊಳಗಾಗಿ ಹಡೆದರೆ ಸ್ವಲ್ಪೂ ಕಷ್ಟ ವಿಲ್ಲ. ಆದರೆ ಅವರಿಗೆ ಬಹುಶಃ ಹೆಣ್ಣು ಹುಟ್ಟು ವದು. ಅನಂತರ ಜುಲೈ ೧೨ ರ ವರೆಗೆ ಗಂಡು ಹುಟ್ಟಿ ಹೆರಿಗೆಯೂ ಸುಖಕರವಾಗುವದು. ಆದರೆ ಮುಂದೆ ಬಾಳಂತಿತನ ಮಾತ್ರ ಅಷ್ಟೊಂದು ಮೈ-ಹಿಡಿಯುವದಿಲ್ಲ. ಅನಂತರವಂತೂ ಹೆರಿಗೆಯ ಕಷ್ಟವೇ ಹೆಚ್ಚಾಗಿ ಹೆಣ್ಣೂ ಹುಟ್ಟುವವು.

ಯಾರ ಪರೀಕ್ಷೆ ಮಾರ್ಚ ೨೯ ರೊಳಗಾಗಿ ಆಗುವದಿದೆಯೊ ಅವರಿಗೆ ಖಾತ್ರಿಯಿಂದ ಯಶಸ್ಸು ಸಿಕ್ಕುವದು. ಅನಂತರ ಜುಲೈ ೧೨ ರ ವರೆಗೆ ೧೨ ಆಣೆ ಯಶಸ್ಸು ಸಿಕ್ಕುವದು. ಅನಂತರ ಆದರೆ ಮಾತ್ರ ಅಷ್ಟು ಅನುಕೂಲಯೋಗವಿಲ್ಲ.

ಸೂಚನೆ

ಪ್ರತಿಯೊಂದು ರಾಶಿಯ ಸರ್ವ ಗ್ರಹಗಳ ವಿಚಾರ ವನ್ನು ಸಾಕಲ್ಯವಾಗಿ ಮಾಡಿ ಅವುಗಳ ಪರಿಣಾಮ ಪ್ರತಿಯೊಬ್ಬರ ಮೇಲೆ ಪ್ರತಿಪ್ರತ್ಯೇಕವಾಗಿ ಎಷ್ಟರ ಮಟ್ಟಿಗೆ ಆಗುವದೆಂಬುದರ ಸ್ಥೂಲ ಅನುಮಾನವು ಮಾತ್ರ ಈ ವಿವೇಚನೆಯಿಂದ ಆಗುವದು.

ವಾಸ್ತವವಾಗಿ ವೈಯಕ್ತಿಕ ಭವಿಷ್ಯವನ್ನು ಅವರ ವರ ಜನ್ಮಕುಂಡಲಿಯ ಮೇಲಿಂದಲೆ ಹೇಳಿದರೆ ಅದು ಶಬ್ದಶಃ ನಿಜವಾಗಿ ಪರಿಣಮಿಸುವದೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಆದರೂ ಈ ವರ್ಷಭವಿಷ್ಯವು ಆಯಾ ರಾಶಿ ಯವರು ಸರ್ವಸಾಮಾನ್ಯವಾಗಿ ಈ ವರ್ಷ ಸುಖ ದುಃಖಗಳನ್ನು ಎಷ್ಟರ ಮಟ್ಟಿಗೆ ಅನುಭವಿಸ ಬೇಕಾಗುವದು ಎಂಬುದರ ಪರಿಜ್ಞಾನ ಮಾಡಿ ಕೊಡಲು ಬಹಳ ಮಟ್ಟಿಗೆ ಉಪಯುಕ್ತವಾಗುವ ದೆಂಬಲ್ಲಿ ಸಂದೇಹವಿಲ್ಲ. ಅರ್ಥಾತ್ ಜನ್ಮಲಗ್ನ ಮತ್ತು ಜನ್ಮರಾಶಿ ಇವೆರಡರ ಭವಿಷ್ಯವನ್ನೋದಿ ಆ ತಾರತಮ್ಯಕ್ಕನುಸಾರವಾಗಿ ಹೆಜ್ಜೆ ಇಡುತ್ತ ನಡೆ ದರೆ ಅಶುಭ ಫಲದ ವಿಷಯದಲ್ಲಿ ಜಾಗ್ರತವುಳಿದು ಶುಭ ಫಲದ ವಿಷಯದಲ್ಲಿ ಹೆಚ್ಚು ಪ್ರಯತ್ನ ಮಾಡಲು ಅನುಕೂಲವಾಗುವದು. ಇದೇನು ಅಷ್ಟು ಕಡಮೆ ಲಾಭವಲ್ಲ.

ನಮಸ್ತೇ ಶುಭಂ ಭವತು.

ಕವಿಯ ಹೆಮ್ಮೆ

ಇದೊ ಇಳೆಯ ಕಥೆಯು—ಋತುಕಾಲಕ್ರಮದಿ ಮಳೆಗಾಲ ಕೃಪೆಯ ಮಾಡಿ
ಸುರಿಸಿರಲು ಹಾಲು, ನೆಲವೀವುದದನು, ಸಂತೋಷ ಕಡಲೊಳಾಡಿ.
ಮೈ ಆಗ ತಣಿಯೆ, ಹರೆನವಿರ ಪರಿಗೆ ಕುದುರುವವು ಹಸಿರು-ಹೂವು.
ದರಿ ಗುಡ್ಡ ಬೆಟ್ಟ ಝರಿ ಹಳ್ಳ ದಟ್ಟ ಸೊಂಪಹುದು ಎಲ್ಲ ಠಾವು.

ಇದರಂದ ಕಂಡು ಸೋತಿರಲು ಕಣ್ಣು, ನುಡಿಯುವೆವು : ಶಿಸ್ತು ಕಡಿಮೆ !
ಒಳ ಕುರುಡು ದಿಟ್ಟೆ ಹೊರತೋರೆ ನಾಚಿ, ಹುಡುಕುವೆವು ಬೇರೆ ಹಿರಿಮೆ.
ನವಬ್ರಹ್ಮರಂತೆ ನಿರವಿಸುವೆವಣ್ಣ ಹೊಸದೊಂದು ಹುಲ್ಲ ಗುಡಿಲು.
ಮರೆಯುವೆವು ಒಡನೆ ಘನ ವಿಶ್ವಋಣವ, ಅದು ಇಟ್ಟ ದಿವ್ಯ ಮಹಲು.

ಗುಡಿಲೆದುರು ಬೇಲಿ ಸೀಮೆಯಲಿ ಕಿರಿಯ ಬನವೊಂದ ಕಾಣೆ ರಚಿಸಿ,
ದರಿ ಹೂವ ಗಿಡವ ಮರೆಯಾಗಿ ತಂದು ಕೃತಕದಲಿ ನಟ್ಟು ಬೆಳಸಿ,
ಚಪ್ಪರದ ನೀರ ಹರಿನಳಿಗೆಯಿಂದ ಹಣಿಸುವೆವು ಗಿಡದ ಮುಡಿಗೆ,
ಅದು ಅಲರನೊಂದ ಸಲಿಸಿರಲು ಆಗ **ಕರೆಯುವೆವು ಜನವ ಮನೆಗೆ.**

"ನೋಡುವಿರ ಇಲ್ಲಿ ಈ ಬನದ ಸೊಬಗ—
ನರುಗಂಪ ಕೇಳಿ ಪೂರ್ತಿ !"
ಎಂದೇನೊ ಹೊಗಳಿ, ಇಳೆ ಶೋಭೆ ತೆಗಳಿ,
ಬಾಜಿಸುವೆವೆಮ್ಮ ಕೀರ್ತಿ !

ಇಂತಹುದು ಗೆಳೆಯ, ನಾ ಬರೆದ ಕವನಪ್ರತಿಭೆಯದು ಚರಿತೆ ಎಲ್ಲ.
ಈ ಸೃಷ್ಟಿ ಬದುಕೆ ಘನ ಕವನವಿರಲು ಮರೆಯುವೆನು ಹುಚ್ಚಮಲ್ಲ.
ಏನೇನೊ ಕೃತಕ ನುಡಿತೊಡವಿನಲ್ಲಿ ಹಿಡಿಯುವೆನು ಅದರ ಛಾಯೆ.
ಹೆಸರಿಸುವೆನದಕೆ ಇದು ನನ್ನ ಕವನದವತಾರ ! ಎಂಥ ಮಾಯೆ !
ಓ ಹುಚ್ಚು ಪೆಚ್ಚು ! ನಾನೆಂಬುದೆಷ್ಟು ? ಬರಿ ಕಿರಿಯ ತೋಟಗಾರ.
ಆ ಶಿವನ ನಟನೆ ಮಾಡಲಿಕೆ ಪಾತ್ರ ತೊಟ್ಟಂಥ ಆಟಗಾರ.

ಆದರೂ ಬಲ್ಲೆ ಪಟ್ಟ ಶ್ರಮದಲ್ಲಿ ಸ್ವಪ್ರತಿಭೆ ನನ್ನದೆಂದು.
ಇರಬಹುದು ಅವನ ಹರಕೆಯದೆ ಭಾಗ್ಯ ಹಣ್ಣಾದ ಫಲಕೆ ಸಂದು.
ಅದಕೆಂದು ಅವಗೆ ಈ ವಿಶ್ವಭವಗೆ ಈ ಕವನ ಸಾಕ್ಷಿಯಾಗಿ
ವಂದಿಸುವೆನಣ್ಣ, ಮನದಂದು ಪೂರ್ಣ, ಶಿವಲೀಲೆಗಾಗಿ ಬಾಗಿ !!

—ಚಿದಂಬರ ದೀಕ್ಷಿತ

ಪ್ರಾ. ಬಿ. ಎಚ್. ಶ್ರೀಧರ,
ಎಂ. ಎ., ಅವರಿಂದ

ಆಧುನಿಕ ಕನ್ನಡ ಕವಿತೆ: ಗುಣದೋಷ ಚರ್ಚೆ

ಕನ್ನಡ ಕವಿತೆ ಪ್ರಾಚೀನ ಮಾರ್ಗವನ್ನು ಬಿಟ್ಟು ಆಂಗ್ಲ ಪ್ರಭಾವದಿಂದ ಹೊಸ ಹಾದಿಯನ್ನು ಅವಲಂಬಿಸಿ ಮೂವತ್ತು ವರ್ಷ ಮೀರಿತು. ಈಗ ಈ ಪುನರ್ಜನ್ಮದ ಶೈಶವಾವಸ್ಥೆ ಮುಗಿದಿದೆಯೆನ್ನಬಹುದು. ಈ ಅವಧಿಯಲ್ಲಿ ಕವಿಗಳು ಇಟ್ಟ ತಪ್ಪು ಹೆಜ್ಜೆಗಳೆಷ್ಟು ಸರಿ ಹೆಜ್ಜೆಗಳೆಷ್ಟು ಎಂದು ಸಿಂಹಾವಲೋಕನ ಮಾಡುವುದು ಅಪ್ರಸ್ತುತವಲ್ಲ. ಸ್ವತಃ ಕವಿಯಾದ ಶ್ರೀ. ಶ್ರೀಧರರು ಇದನ್ನು ನಿರ್ವಿಕಾರ ಮನಸ್ಸಿನಿಂದ ಮಾಡಿದ್ದಾರೆ.

ಗದ್ಯಪದ್ಯ ಭೇದವು ಸುಪ್ರಸಿದ್ಧ. ಆದರೂ ಈ ವಿಷಯದಲ್ಲಿ ಚರ್ಚೆ ಮಾಡುವುದು ಇನ್ನೂ ಹೋಗಿಲ್ಲ. ಮುಕ್ತ ಛಂದಸ್ಸು, ಸರಳ ರಗಳೆ, ಗದ್ಯಗಂಧಿ ಪದ್ಯ ಮುಂತಾದ ಬುರುಕಿಯಲ್ಲಿ ಗದ್ಯವನ್ನಿಟ್ಟು ಪದ್ಯವೆಂದು ಸಾಧಿಸುವ ಆಧುನಿಕತೆ ಕೆಲವೆಡೆ ತಲೆದೋರಿದೆ. **ವಚನವನ್ನು** ಸಂಗೀತಿಸುವ ಬಳಗ ಅದಕ್ಕೆ ಮತ್ತಷ್ಟು ಕಳೆ ಕೊಟ್ಟಿದೆ. ಈ ವಾದವನ್ನು ಹಿಡಿದರೆ ಸ್ತ್ರೀಪುರುಷ ಭೇದವನ್ನು ಕೂಡ ಅಲ್ಲಗಳೆಯ ಬೇಕಾದೀತು ವ್ಯವಹಾರ ಪ್ರಪಂಚದಲ್ಲಿ! ಶಾರೀರಿಕ ಲಿಂಗಚಿಹ್ನದಿಂದ ಸ್ತ್ರೀಪುರುಷರನ್ನು ಪ್ರತ್ಯೇಕಿಸುವಂತೆ ಪದವಿನ್ಯಾಸದ ಗತಿ ಗದ್ಯಪದ್ಯಗಳನ್ನು ಬೇರ್ಪಡಿಸುತ್ತದೆ. 'ವಾಗರ್ಥಾವಿವ ಸಂಪೃಕ್ತೌ' ಎಂಬ ಕಾಲಿದಾಸೋಕ್ತಿಯಿಂದ ಧ್ವನಿತವಾಗುವಂತೆ ಶಬ್ದ ಅಥವಾ ಪದ ಸಾಹಿತ್ಯಕೃತಿಗಳ ಶರೀರ; ಅರ್ಥ ಅದರ ಆತ್ಮ. 'ಶರೀರಂ ತಾವ ದಿಷ್ಟಾರ್ಥವ್ಯವಚ್ಛಿನ್ನಾ ಪದಾವಲೀ' ಎಂಬ ದಂಡ್ಯುಕ್ತಿಯಾದರೂ ಇದನ್ನೇ ಸಮರ್ಥಿಸುತ್ತದೆ. ಆದುದರಿಂದ ಛಂದೋಬಂಧವೇ ಪದ್ಯ ಜಾತಿಯ ಅವಚ್ಛೇದಕ; ಛಂದವು ಪದ್ಯದ ಪದವಿನ್ಯಾಸ ಪದ್ಧತಿಯ ನಿಯಾಮಕ. ತದ್ರಹಿತವಾದುದು ಪದ್ಯವಲ್ಲ; ತತ್ಸದೃಶವಾದ ಇನ್ನೇನಾದರೂ ಆದೀತು. ಪದವೆಂಬ ಕಾವ್ಯಶರೀರದ ವಿನ್ಯಾಸ ಅಥವಾ ಅಂಗರಚನೆಯಲ್ಲಿ ಕಂಡುಬರುವ ಲಕ್ಷಣಭೇದವೊಂದೇ ಪದ್ಯವನ್ನು ಗದ್ಯದಿಂದ ಪ್ರತ್ಯೇಕಿಸುವುದು. ಇದರ ಅರ್ಥ ಛಂದೋಮಯ ವಾಣಿಯೆಲ್ಲ ಒಳ್ಳೆಯ ಕವಿತೆ ಎಂದಾಗದು; ಅದು ಕೆಟ್ಟರೂ ಕೆಟ್ಟ ಕವಿತೆ ಎನಿಸೀತಲ್ಲದೆ ಗದ್ಯವೆನಿಸಲಾರದು – ಇಷ್ಟೆ.

ಆಧುನಿಕ ಕನ್ನಡ ಕವಿತೆಗಳಲ್ಲಿ ಬಹುಸಂಖ್ಯ ಕೃತಿಗಳು ಷಟ್ಪದಿ-ಜನ್ಯವಾದ ಮಾತ್ರಾಘಟಿತ ಪದವಿನ್ಯಾಸಪದ್ಧತಿಯನ್ನು ಅನುಸರಿಸಿವೆ. ದ್ವಿತೀಯಾಕ್ಷರ ಪ್ರಾಸತ್ಯಾಗ, ಅಂತ್ಯಾಕ್ಷರ ಪ್ರಾಸಸ್ವೀಕಾರ, ಗಣ ವಿಪರ್ಯಾಸ, ಗಣಸಂಖ್ಯಾವಿಕಲ್ಪ, ಸಂಪೂರ್ಣ ಪ್ರಾಸತ್ಯಾಗ ಮುಂತಾದ ಅತಿವರ್ತನೆಗಳು ಇಂದಿನ ಕನ್ನಡ ಪದ್ಯಗಳ ಹೊಸತನದ ಎದ್ದು ಕಾಣುವ ಲಕ್ಷಣಗಳು. ಆದರೆ ಇವಾವುವೂ ಪದ್ಯದ ಪದ್ಯತ್ವಕ್ಕೆ ಭಂಗತಂದಿಲ್ಲ. ಭಾರತೀಯ ಸ್ತ್ರೀ ಯುರೋಪಿಯನ್ ಉಡುಪಿನಲ್ಲಿ ಬಂದರೂ ಸ್ತ್ರೀ ಎಂದೇ ಪ್ರತೀತಳಾಗುವಳಲ್ಲವೇ? ಹಾಗೆಯೇ. ಆದರೆ ಛಂದಕ್ಕೆ ತಿಲಾಂಜಲಿಯಿತ್ತು ಸ್ವಚ್ಛಂದ ಹಿಡಿದ ಅತ್ಯಲ್ಪಸಂಖ್ಯರ ಪದ್ಯಬ್ರುವ ಪದಸಮುಚ್ಚಯವು ಪದ್ಯ ಗದ್ಯ ಎರಡೂ ಅಲ್ಲದ ಷಂಢ ರೂಪದಲ್ಲಿ ಕಂಗೊಳಿಸುತ್ತದೆ! ಇಂಥವು ವಿಮರ್ಶೆಯ ಗಡಿಯಿಂದ ಹೊರಗೇ ಇರತಕ್ಕವು.

ಆಂಗ್ಲ ವಿದ್ಯಾಪ್ರಸಾರದ ಫಲವಾಗಿ ಆಂಗ್ಲೇಯ ಕಲ್ಪನೆಗಳ ಜೊತೆಗೆ ಆಂಗ್ಲಭಾಷೆಯ ವಾಕ್ಯರಚನಾಕ್ರಮದ ಅನುಕರಣಬುದ್ಧಿಯೂ ಕೆಲ ಸಾಹಿತಿಗಳ ತಲೆಯನ್ನು ಹೊಕ್ಕಿತು. ಇದರ ದುಷ್ಪರಿಣಾಮ ಗದ್ಯದ ಮೇಲೆ ಹೇಗೋ ಹಾಗೆಯೇ ಪದ್ಯರಚನೆಯ ಮೇಲೂ ಕೆಲವೆಡೆ ಆಗಿದೆ. ಕಲ್ಪನೆಗಳ ಹಾವಳಿ ಮುಖ್ಯವಾಗಿ ಕಂಡುಬರುವುದು ದುರಂತಪ್ರಿಯತೆಯಲ್ಲಿ. ದುರಂತದ ಮೂಲಸೂತ್ರವನ್ನರಿಯದೆ ದುಃಖಾಂತವನ್ನೇ ದುರಂತವೆಂದು ಕವಿತ್ವಕ್ಕೆ ಕೈಹಾಕಿದ ಉದಾಹರಣೆಗಳಿವೆ. ಎರಡನೆಯದು ಆಂಗ್ಲಸಾಹಿತ್ಯಾನುಗತವಾದ ಅವಿಚಾರಘಟಿತ ಸ್ತ್ರೀ-ದಾಕ್ಷಿಣ್ಯ. ಮೂರನೆಯದು ಸೌಂದರ್ಯಸರ್ವೋತ್ತಮತೆಯ ಅಂಧ ವಾದ. ಇವು ಸಂಸ್ಕೃತಿಕ್ಷೇತ್ರಕ್ಕೆ ಸೇರಿದ ತರ್ಕವಿಷಯಗಳು. ಇಂಥ ದೃಷ್ಟಿವೈಪರೀತ್ಯವನ್ನು ಬಿಂಬಿಸುವ ಪದ್ಯಗಳೆಂದೂ ನಿಜಭಾರತೀಯ ಶಿಷ್ಟನಿಗೆ ರಸ್ಯ

ಮಾನವೆನಿಸಲಾರವು. ಗೃಹಕಾರ್ಯನಿರತಳಾದ ಸ್ತ್ರೀ ಜಾತಿಯನ್ನುದ್ದೇಶಿಸಿ ಪುಟ್ಟಪ್ಪನವರು ಬರೆದ ಒಂದು ಪದ್ಯ, ಬೇಂದ್ರೆಯವರ ಪುಟ್ಟ ವಿಧವೆಯ ಚಿತ್ರಣ ಮುಂತಾದವುಗಳಲ್ಲಿ ಈ ದೌರ್ಬಲ್ಯ ಅಂತರ್ಧ್ವನಿಸುತ್ತದೆ. ಸೌಂದರ್ಯವನ್ನು ಸತ್ಯದ ಪರ್ಯಾಯವೆಂದು ಸಾರುವ ಅಂಧಾನುಕರಣವನ್ನು ಪುಟ್ಟಪ್ಪನವರೂ ಗುಂಡಪ್ಪನವರೂ ಮಾಡಿದ್ದಾರೆ. ಆಂಗ್ಲ ಕವಿ ಕೀಟ್ಸನು ಒಂದು ಉಚಿತ ಸಂದರ್ಭದಲ್ಲಿ ಉದ್ಧರಿಸಿದ ಕಾವ್ಯ ಸತ್ಯ ಅಥವಾ ಭಾವಿಕ ತೀರ್ಮಾನವನ್ನು ತರ್ಕಶುದ್ಧವೆಂಬಂತೆ ತೆಗೆದುಕೊಂಡು ವಿಮರ್ಶಕರು ಕೂಡ ಸಾಧಿಸಹೊರಟ ವಿಡಂಬನೀಯ ಉದಾಹರಣೆಗಳು ನಡೆದುಹೋಗಿವೆ.

ಸಂಸ್ಕೃತ ಕನ್ನಡಗಳು ಮೂಲತಃ ಪ್ರತ್ಯೇಕ ಗೋತ್ರಗಳಿಗೆ ಸೇರಿದವೆಂಬ ತಜ್ಞೋಕ್ತಿಯನ್ನು ಒಪ್ಪಿದರೂ ಪರಸ್ಪರವಾದ ದೀರ್ಘಕಾಲಿಕ ಕೊಡುಕೊಳುವಿನ ದೆಸೆಯಿಂದ ಅವುಗಳ ಪದರೂಪ, ಪದವಿನ್ಯಾಸ ಪದ್ಧತಿ, ಪಡೆನುಡಿ ಮೇಳ ನುಡಿಗಳ ನಿಷ್ಪಾದನ ಕ್ರಮ ಮುಂತಾದವು ಏಕಮುಖವಾಗಿ ಬೆಳೆದುಕೊಂಡು ಬಂದಿವೆ. ಆಂಗ್ಲ ಭಾಷೆ ಭಾರತದ ಅತ್ಯಲ್ಪಸಂಖ್ಯ ವಿದ್ಯಾವಂತರಲ್ಲಿ ಎಷ್ಟೇ ಪ್ರಚುರವಾಗಿದ್ದರೂ ಅದರ ಕರ್ತೃಕರ್ಮಾದಿ ಪದಗಳ ಜೋಡಣೆ, ಪಡೆನುಡಿ ಪ್ರಯೋಗಗಳ ಸ್ವಾಭಾವಿಕ ಆಕರ ಮತ್ತು ಆ ಮೂಲಕ ಪ್ರಕಟವಾದ ಕಲ್ಪನೆ, ಭಾವನೆ, ಅನುಭವಗಳ ಮಾದರಿ ಇವು ಕೇವಲ ವಿದೇಶೀಯ, ವಿಲಕ್ಷಣ ; ಇಂಥ ಮಾದರಿಗಳನ್ನು ಭಾರತೀಯ ಅಲಂಕಾರಶಾಸ್ತ್ರದ ಗಂಧಗಾಳಿಯಿಲ್ಲದ ಮತ್ತು ಮಾತೃಭಾಷೆಯ ಮೈಮೇಲೆ ಬೇಕಾದಹಾಗೆ ಕೈ ಹಾಕಬಹುದೆಂಬ ಹುರುಡಿನ ಕೆಲ ಕವಿಂಮನ್ಯರು ತಮ್ಮ ಅಚಿರಸ್ಥಾಯಿ ಕೃತಿಗಳಲ್ಲಿ ಬಳಸಿಕೊಂಡದ್ದುಂಟು.

ಮೇಲೆ ಹೇಳಿದ ಹಲಕೆಲ ದುಷ್ಟ ಭಾವಗಳ ಜೊತೆಗೆ ಭಾಷಣ ಶೈಲಿಯ ಅತಿಪ್ರಾಚುರ್ಯವು ಕನ್ನಡ ಗದ್ಯ ಪದ್ಯಗಳ ಮೇಲಾದುದು ಅತಿ ಗಣ್ಯವಾದುದು. ವಾಗ್ಮಿತ್ವಪ್ರದರ್ಶನದಲ್ಲಿ ಉಚಿತವೆನಿಸಬಹುದಾದ ಏಕಾರ್ಥವಾಚಕವಾದ ಅನೇಕ ಪದಗಳ ಪ್ರಯೋಗ ಅಥವಾ ಪುನರುಕ್ತಿ ಗದ್ಯಕ್ಕಿಂತ ಹೆಚ್ಚಾಗಿ ಪದ್ಯದಲ್ಲಿ ಬರುವುದು ರಸ್ಯಮಾನವಲ್ಲ. ಈ ಕೆಳಗಿನ ಪದ್ಯಭಾಗವನ್ನು ನೋಡಿ:

"ದರ್ಶದಲ್ಲಿನ ನಿಬಿಡ ಕತ್ತಲೆಯ ತಿರುಳ್ಗಪ್ಪು
ಕವಿದಿತ್ತು ದಿಶೆದೇಶ ಅಳಿಸಿ ಆಗ;
ನಡುರಾತ್ರಿ ನಿಃಶಬ್ದ ನೀರವತೆ ಸಿಡು ನೆಲಸಿ
ಕತ್ತಲೆಯ ನೀರವತೆ ಹೆಚ್ಚಿಸಿತ್ತು."

ಇಲ್ಲಿ ಒಂದೇ ನುಡಿಯಲ್ಲಿ ಎರಡು ಸಲ 'ಕತ್ತಲೆ' ಎಂಬ ಪದ ಬರುವುದು ಕವಿಯ ಪದದಾರಿದ್ರ್ಯವನ್ನು ಸೂಚಿಸುತ್ತದೆ. 'ನೀರವತೆ' ಯಾದರೂ ಅದೇ ಮೇರೆಗೆ ಎರಡು ಸಲ ಬಂದಿದೆ. ಇದರ ಮೇಲೆ ಭಾಷಣ ಕಲಾಸಹಜವೋ ಎಂಬಂತೆ ಏಕಾರ್ಥಗಳಾದ 'ನಿಃಶಬ್ದ', 'ನೀರವತೆ'ಗಳು ಒಂದರ ಮೇಲೊಂದಾಗಿ ಜೋಡಿಸಲ್ಪಟ್ಟಿವೆ. ಇಲ್ಲಿಯ ಅರ್ಥದಾರಿದ್ರ್ಯವನ್ನು ಇದರ ಕರ್ತೃಗಳಾದ ವೀ. ಸೀ. ಅವರು ಹೇಗೆ ಸಮರ್ಥಿಸಿಕೊಳ್ಳಬಲ್ಲರು?

ಹೊಸಗನ್ನಡ ಕವಿತೆ ಸಾಧಿಸಿದ ಅಂಶಗಳಾದರೂ ಹೇರಳವಾಗಿವೆ. ಮೊದಲನೆಯದಾಗಿ, ಭಾರತೀಯ ಕವಿಪರಂಪರೆಹಾಕಿ ಕೊಟ್ಟ ಕವಿಸಮಯಗಳ ಅಂಧಾನುಕರಣವನ್ನು ಬಿಟ್ಟುಕೊಟ್ಟದ್ದು ಅತಿಗಣ್ಯವಾದ ಮತ್ತು ಪ್ರಶಂಸನೀಯವಾದ ಗುಣ. ಅಕ್ಷಿಕಮಲ, ಆನನಕಮಲ, ಕರಕಮಲ, ನಾಭಿಕಮಲ, ಚರಣಕಮಲ ಮುಂತಾದ ಚರ್ವಿತಚರ್ವಣ ರೂಪಕೋಕ್ತಿಗಳನ್ನೂ ಅತಿ ಪೌರಾಣಿಕ ಕವಿ ಪ್ರೌಢೋಕ್ತಿಬದ್ಧ ಅಲಂಕಾರಗಳನ್ನೂ ಮೂಲೆಗೆಸೆದು, ಕೆಲವೆಡೆ ಆಂಗ್ಲ ಸಾಹಿತ್ಯಪರಿಚಯದಿಂದಲೂ ಕೆಲವೆಡೆ ಸ್ವಾನುಭವದಿಂದಲೂ ಉತ್ತಮವಾದ ಉಪಮಾ ರೂಪಕ, ಅತಿಶಯೋಕ್ತಿ, ಉತ್ಪ್ರೇಕ್ಷೆ, ಸಮಾಸೋಕ್ತಿ, ನಿದರ್ಶನ, ವಿನೋಕ್ತಿ, ಅರ್ಥಾಂತರನ್ಯಾಸ ಮುಂತಾದ ಅಲಂಕಾರಗಳನ್ನು ರಚಿಸಿ, ರಸನಿಷ್ಯಂದಿಯಾದ ಹಲವಾರು ಸುಂದರ ಕವಿತೆಗಳನ್ನು ನಿರ್ಮಿಸಿದ್ದು ಸುಶ್ಲಾಘ್ಯವೆನಿಸಿದೆ.

"ಬಂಗಾರ ಬಂಗಾರ, ಉಳ್ಳವರ ಸಿಂಗಾರ,
ಬಡವರನು ಸುಟ್ಟು ಹಣೆಗಿಟ್ಟ ಅಂಗಾರ!"

ಎಂಬ ರೂಪಕೋಕ್ತಿಯು ಅರ್ಥಗೌರವ ಅದ್ವಿತೀಯವಾಗಿಲ್ಲವೆ? ರೂಪಕ ಚಕ್ರವರ್ತಿ ಕುಮಾರವ್ಯಾಸನಿದ್ದಿದ್ದರೆ ಬೇಂದ್ರೆಯವರ ಈ ರೂಪಕ ಶಕ್ತಿಗೆ ತಲೆದೂಗುತ್ತಿದ್ದನೆನ್ನಬಹುದಲ್ಲವೆ?

"ನಾತೊಟ್ಟ ದೇಹಗಳ ಲೆಕ್ಕ, ಇಡುವರಣ ಸೊಕ್ಕ
ಯಮಾ ನೋಡಿ ನಕ್ಕ."

"ಆತ ಕೊಟ್ಟ ವಸ್ತು ಒಡನೆ ಅವಗೆ ನನಗೆ ಗೊತ್ತು—
ತೋಳುಗಳಿಗೆ ತೋಳುಬಂದಿ ಕೆನ್ನೆ ತುಂಬ ಮುತ್ತು."

"ಇದ್ದಷ್ಟು ದಿನವಾರೆ ಇರುವಷ್ಟು ಪ್ರೀತಿಯ
ಇನ್ನಷ್ಟು ರುಚಿನೋಡಿ ಹೋಗುವದೆ."

"ಮುಗಿಲಬಾಯ ಗಾಳಿಕೊಳಲ ಬೆಳಕಹಾಡ ಬೀರಿ."

ಈ ಮಾದರಿಯ ಗಾದೆವಾತಾಗುವಷ್ಟು ರಸವತ್ತಾದ ಚತುರೋಕ್ತಿಗಳು ಬೇಂದ್ರೆಯವರ ಕವಿತೆಗಳಲ್ಲಿ ಹೇರಳವಾಗಿ ದೊರಕುತ್ತವೆ. ಕನ್ನಡ ಕವಿವಾಕ್ಯರಚನೆಯಲ್ಲಿ ಅವರಿಗೆ 'ವಶ್ಯವಾಕ್' ಎಂಬ ಬಿರುದನ್ನು ಕೊಡಬಹುದು ಎಂಬಷ್ಟು ಪ್ರತಿಭಾಪೂರ್ಣವಾದ ಅನನ್ಯ ಪರತಂತ್ರ ಅಲಂಕಾರ ಸುಂದರ ವಾಕ್‌ಶ್ರೀ ಅವರಲ್ಲಿ ನೆಲೆಗೊಂಡಿದೆ.

"ಚಿಂತೆಯ ಮುಗಿಲಂತರದೊಳ
ಗಿದೆ ಸಂತಸದುದಯ
ತಂತಿಯ ಮರೆಯೊಳಗಿರುವೊಲು
ಸಂಗೀತದ ಹೃದಯ."

ಎಂಬ ಪಾಂಡೇಶ್ವರರ ಸೊಲ್ಲು;

"ಕಗ್ಗಲ್ಲಿನೆದೆಯಲ್ಲಿ ನುಗ್ಗಿ ನೋಡಿದೊಡಲ್ಲಿ
ಹೂವಾಗಿ ತೋರುತಿರುವೆ!
ಹೂವುಗಳ ಹೃದಯದಲಿ ಹುಡುಕಿನೋಡಿದೊಡಲ್ಲಿ
ಕಲ್ಲಾಗಿ ತೋರುತಿರುವೆ."

"ಚೆಲುವಿಕೆಯ ಚೈತನ್ಯ ಬಿಲ್ಲಾದುದೆಂಬಂತೆ!
ಮಾಯೆ ಬರೆದಿಹ ಮಧುರ ಚಿತ್ರದಂತೆ!
ಆದಿಕವಿ ಹಾಡುತಿಹ ನಬ್ಬಲ್ಲವೆಂಬಂತೆ!
ವೈಣಿಕನು ಮೀಟುತಿಹ ಬೀಣೆಯಂತೆ!"

ಎಂಬ ಪುಟ್ಟಪ್ಪನವರ ರಸವಾಣಿ ಮುಂತಾದವುಗಳನ್ನು ಬೇಕಾದಷ್ಟು ಎತ್ತಿ ಹೇಳಬಹುದು.

ಎಲ್ಲ ಭಾಷೆಗಳಲ್ಲೂ ಗದ್ಯ ಪದ್ಯಗಳ ವಾಗ್ವೈಖರಿಯ ಭೇದವಿದ್ದೇ ಇದೆ. ಆದರಂತೆ ಹೊಸಗನ್ನಡದಲ್ಲಾದರೂ ಕವಿತೆ ತನ್ನದೇ ಆದ ಹೊಸ ಶೈಲಿಯೊಂದನ್ನು ಅಳವಡಿಸಿಕೊಂಡಿದೆ. ಹಳಗನ್ನಡದ ದೇಸಿ ಮಾರ್ಗಗಳನ್ನು ಹೋಲುವಂತೆ ಹೊಸಗನ್ನಡದಲ್ಲಿ ಬೇಂದ್ರೆ ಪುಟ್ಟಪ್ಪ

ನವರ ಭಾಷಾಶೈಲಿಗಳು ಎರಡು ಧ್ರುವಗಳಾಗಿ ನಿಂತಿವೆಯೆನ್ನಬಹುದು. ಬೇಂದ್ರೆಯವರು ವರ್ತಮಾನ ಕಾಲದ ರೂಢಿಗತ ಪಡೆನುಡಿ, ಮೇಳ ನುಡಿ, ನಾಣ್ಣುಡಿ ಮುಂತಾದವುಗಳನ್ನು ಅವಲಂಬಿಸಿ, ಗ್ರಾಮ್ಯವನ್ನು ಕೂಡ ಕೆಲವೆಡೆ ಬಳಸಿಕೊಳ್ಳುವ ವರೆಗೆ ಹೋದವರು. ಪುಟ್ಟಪ್ಪನವ ರಾದರೆ ಹಾಗಲ್ಲ; ಹಳಗನ್ನಡದಿಂದಲೇ ಅವರು ಹೆಚ್ಚಾಗಿ ಸ್ಫೂರ್ತಿ ಪಡೆದಿರುವುದರಿಂದ ಅವರ ಕವಿಭಾಷೆಯಲ್ಲಿ ಹಳ–ನಡು–ಹೊಸಗನ್ನಡ ಸಂಮಿಶ್ರಣ ಕಂಡುಬರುತ್ತದೆ. ಬೇಂದ್ರೆಯವರ ದೇಶ್ಯವನ್ನು ಇಲ್ಲಿ ನೋಡಿ :

"ಬಾಣಂತಿಯೆಲುಬ ಸಾಬಾಣದ ಬಿಳುಪಿನಾ
ಕಾಣದ ಕಿರುಗೆಜ್ಜಿ ಕಾಲಾಗ ಇತ್ತೋ
ಸಣ್ಣ ಕಂದಮ್ಮಗಳ ಕಣ್ಣಿನ ಕವಡಿಯ
ಸಣ್ಣನ್ನ ಜೋಮಾಲೆ ಕೊರಳೊಳಗಿತ್ತೋ."

ಈ ಗ್ರಾಮ್ಯ ಪ್ರಯೋಗದಲ್ಲಿಯ ಗ್ರಾಮ್ಯತೆಯನ್ನು ಮರೆಸುವಷ್ಟು ಸಹಜಕವಿತ್ವದ ಲಕ್ಷಣವಾದ ಪಾಂಚಾಲೀಗುಣ ಶಬ್ದಸಂಯೋಜನೆ ಯಲ್ಲಿ ಮೂಡಿರುವುದರಿಂದ ಇದರ ರಸ್ಯಮಾನತೆಗೆ ಭಂಗ ಬಂದಿಲ್ಲ. ಎರಡನೆಯದಾಗಿ, ಗ್ರಾಮ್ಯರೂಪಗಳನ್ನು ಬಳಸಿದರೂ ಅವು ಕನ್ನಡಕ್ಕೆ ಸಹಜವಾದ ವಾಕ್ಯರಚನೆ, ಛಂದೋಬಂಧ, ತಾಳ, ಲಯ, ಅನುಪ್ರಾಸ ಈ ಯಾವೊಂದನ್ನು ದುರ್ಲಕ್ಷಿಸದೆ ನಿರರ್ಗಳವಾಗಿ ಜೋಡಿಸಲ್ಪಟ್ಟಿರು ವುದು ಗಣಿಸತಕ್ಕ ಅಂಶ. ಪುಟ್ಟಪ್ಪನವರ ಒಂದು ಮಾದರಿಯನ್ನು ಎತ್ತಿಕೊಳ್ಳೋಣ :

"ಹೇಳಿದಳು ತನ್ನ ಕಥೆಯಾದ್ಯಂತಮಂ, ಬಹಳ
ಸಂಕ್ಷೇಪದಿಂದೆ. ನರನಾಮಾಂಕಿತ ಮುದ್ರಿ
ಯುಂಗುರವನಿತ್ತಳಾತನ ಕೈಗೆ ಸಾಕ್ಷಿಯಾಗಿ.
ಕೈಯೊಂದರೊಳ್ ಮಗನ ಮತ್ತೊಂದರೊಳ್ ಪತಿಯು
ಪಾಣಿಯಂ ಪಿಡಿದು, ಸಂಧಿಯನೊರೆದು, ಶಾಂತಿಯಂ
ನುಡಿದು ಶಾಂತಾತ್ಮದಿಂ ಶಿವನಾಮವಂ ಸ್ಮರಿಸಿ
ಕಣ್ಣುಮುಚ್ಚಿದಳಮೃತಮಯ ಚಿರಸಮಾಧಿಯಲಿ!"

ಇಲ್ಲಿಯ ಪಂಡಿತರಂಜಕ ಶ್ರೀಮದ್ಗಾಂಭೀರ್ಯ ಸುವ್ಯಕ್ತವಾಗಿದೆ. ಇವರ ಸ್ವಾತಂತ್ರ್ಯಪ್ರಿಯತೆ ಕನ್ನಡಕ್ಕೆ ಸಹಜವಾದ ಛಂದೋವ್ಯಾಕರಣಾದಿ ನಿಯಮಗಳೊಡನೆ ಕುಸ್ತಿಮಾಡಿರುವುದು ಸ್ಪಷ್ಟವೇ ಇದೆ. ಆದರೆ ಈ ಎರಡು ರೀತಿಗಳ ಅತಿವರ್ತನೆಗಳನ್ನೂ ದೂರವಿಟ್ಟು ಪದವಿನ್ಯಾಸ ಮಾಡಿದ ಒಂದೆರಡು ಉದಾಹರಣೆಗಳನ್ನು ಕೆಳಗೆ ನೋಡಬಹುದು.

"ಆಶೆಯೆಂಬ ತಳವೊಡೆದ ದೋಣಿಯಲಿ
ದೂರತೀರಯಾನ;
ಯಾರ ಲೀಲೆಗೋ ಯಾರೊ ಏನೊ ಗುರಿ-
ಯಿರದೆ ಬಿಟ್ಟಬಾಣ!
ಇದು ಬಾಳು ನೋಡು; ಇದ ತಿಳಿದೆನೆಂದರೂ
ತಿಳಿದ ಧೀರನಿಲ್ಲ;
ಹಲವುತನದ ಮೈಮರೆಸುವಾಟವಿದು;
ನಿಜವು ತೋರದಲ್ಲ!"

ಎಂಬ ಗೋಪಾಲಕೃಷ್ಣ ಅಡಿಗರ ನುಡಿಯನ್ನೂ

"ಮುನಿಸು ಹೊಗೆ ಸೂಸುವುದೆ ಕಾನನದ ಮೌನದಲಿ?
ಮನವ ದಹಿಸುವ ಮೋಡಿ ದಳ್ಳುರಿವುದೇ?
ಹುಸಿಬೆಸುಗೆಯುಕ್ಕಿಹುದೆ ಎಳಲತೆಯ ಹಾಸದಲಿ?
ಕಟ್ಟುಬಣ್ಣದ ಬೆಡಗು ಮಿರುಗುತಿಹುದೆ?
ಜೀವನವನುಕ್ಕಿಸುವ ಕೀರ್ತಿಮದಿರಾನಂದ
ಕೋಗಿಲೆಯ ಕಲರವದಿ ಹೊಮ್ಮುತಿಹುದೆ?
ಸೃಷ್ಟಿಯೂ ಸೋಗಿಲಿದು, ಶಾಂತಿಯಾ ಬಾಗಿಲಿದು
ಕವಡಿರದ ಬಾಳುವೆಯು ಹಂದರಿದುವೆ."

ಎಂಬ ಕಡೆಂಗೋಡ್ಲು ಶಂಕರಭಟ್ಟರ ಸಾಲುಗಳನ್ನೂ ಪರೀಕ್ಷಿಸಿದರೆ ಹೊಸಗನ್ನಡದ ಹಿತಮಿತ ಮೃದುಮಧ್ಯ ಶೈಲಿಯ ಲಕ್ಷಣಗಳೇ-ನೆಂಬುದು ಗೊತ್ತಾಗುವುದು. ಇಂಥ ಉಭಯ ರಂಜಕ ಕವಿತಾ ಮಾರ್ಗ ಇತ್ತೀಚೆಗೆ ಹೆಚ್ಚು ಮಾನ್ಯತೆ ಪಡೆಯುತ್ತಿದೆ. ಬೇಂದ್ರೆ ಪುಟ್ಟಪ್ಪನವರ ಕೃತಿಗಳಲ್ಲೂ ಎಷ್ಟೋ ಈ ಹಾದಿಹಿಡಿದಂಥವಿವೆ.

"ಆರು ನೀನೆಂದೆನ್ನ ಕೇಳಿದವರುಂಟೆ ಈ
ಧಾರಿಣಿಯೊಳಿನಿತೊಂದು ಜನರ ಮಧ್ಯದಲಿ?
ನೊರೆವ ತೊರೆಯನೆ ಮುಟ್ಟಿ, ನೊರೆವಿಂಡುಗಳ ದಿಟ್ಟಿ
ಸಿರುವರಲ್ಲದೆ ಎನ್ನ ಎದೆಯಾಳದಿ
ಮಿರುಗುವೀ ಮೌನದೇಕಜ್ಯೋತಿಯನೆ ಕಂಡು
ಬೆರಗುವಟ್ಟವರಿಲ್ಲ; ಬರಿಯ ಗುಲ್ಲು!"

ಎಂಬ ಪಾಂಡೇಶ್ವರ ಗಣಪತಿರಾಯರ ಶೈಲಿಯಾದರೂ ಸುಗ್ರಾಹ್ಯವಾದ ನವ್ಯಕಾವ್ಯ ಶೈಲಿಗೊಂದು ಉದಾಹರಣೆಯಾಗಿದೆ.

ಪ್ರಾಚೀನ ವಾಙ್ಮಯದಲ್ಲಿ ಮಹಾಕಾವ್ಯ, ಖಂಡಕಾವ್ಯಗಳು ಗಣ್ಯ ವಾಗಿವೆ. ಇಂದಾದರೆ ಹಾಗಲ್ಲ. ಆಂಗ್ಲ ಸಾಹಿತ್ಯದ ಪ್ರಭಾವದ ದೆಶೆಯಿಂದ ತುಂಡು ಪದ್ಯಗಳು ಅಸಂಖ್ಯವಾಗಿ ಬೆಳೆಯುತ್ತಿವೆ. ಭಾವ ಗೀತ, ಸುನೀತ ಅಥವಾ ಅಷ್ಟಷಟ್ಪದಿ ಮುಂತಾದ ಹಲವಾರು ಜಾತಿಯ ಒಂದು ನುಡಿಯಿಂದ ೩೦–೪೦ ನುಡಿಗಳ ವರೆಗಿನ ಕವನಗಳು ಯಥೇಚ್ಛ ವಾಗಿ ಹೊರಬಿದ್ದಿವೆ. ಪ್ರಾಚೀನ ಪರಂಪರೆಯ ತುಂಡು ಪದ್ಯಗಳಲ್ಲಿ ಕೂಡ ದೃಶ್ಯಸ್ಪೃಶ್ಯ ಪ್ರಪಂಚದ ವಾಸ್ತವಿಕ ನಿದರ್ಶನಗಳನ್ನೇ ಹೆಚ್ಚಾಗಿ ಬಳಸಿಕೊಳ್ಳುವ ರೂಢಿ ಕಂಡುಬಂದಿದೆ. ಆದರೆ ಆಧುನಿಕರು ಕೇವಲ ವೇದಾಂತಸಹಜವಾದ ಅತೀಂದ್ರಿಯ ಕಲ್ಪನೆಗಳನ್ನು ಕೂಡ ಕವಿತೆಗೆ ವಸ್ತುವನ್ನಾಗಿ ತೆಗೆದುಕೊಂಡು ಪದ್ಯಗಳನ್ನು ಬರೆದಿದ್ದಾರೆ. ಬೇಂದ್ರೆ ಯವರ 'ಬನ್ನಿ ಬನ್ನಿ ಕನಸುಗಳೇ' ಎಂಬುದು ಇಂಥ ಪದ್ಯಕ್ಕೊಂದು ಒಳ್ಳೆಯ ಉದಾಹರಣೆ. ಕೇವಲ ಬೌದ್ಧಿಕ ಅಥವಾ ಭಾವಿಕ ಗುಣ ಕರ್ಮರೂಪಗಳನ್ನೆತ್ತಿಕೊಂಡು ಕವನ ಹೆಣೆವ ಈ ರೂಢಿ ಆಂಗ್ಲ ವಾಙ್ಮ ಯದ ಪರಿಚಯದಿಂದ ಬಂದುದೆಂದು ಧಾರಾಳವಾಗಿ ಹೇಳಬಹುದು.

ಮತ್ತೊಂದು ಹೊಸತನವೆಂದರೆ ವಸ್ತುಭೇದರಾಹಿತ್ಯ.

"ಕಾಲಾಯಸದಿಂದ ನಿರ್ಮಿಸಿದ ಕಂಠಿಕೆ
ಕಾಂಚನಮಾಲೆಯಂತುಪಾದೇಯಮೆ?"

ಎಂದ ಅಭಿನವ ಪಂಪನ ವಸ್ತುಪಂಕ್ತಿಭೇದ ಇಂದು ಮಾನ್ಯವಾಗಿಲ್ಲ. ಆದರಿಂದಲೇ ಇಂದಿನೊಬ್ಬ ಕವಿ—

"ವಸ್ತು ಭೇದವೆ ಕವಿಗೆ? ರಸೆಯೊಳೆಸೆಯುವ ಸರ್ವ
ವಸ್ತುಗಳೊಳೊಂದೊಂದು ಗುಣವ ಕಂಡು
ಚಿತ್ತದೊಳಗುದಿಸಿರುವ ಭಾವನಾವಳಿಯನು ಸ-
ಮಸ್ತರಂಗಿತ್ತು ಸಂತೋಷಿಸುವನು."

ಎಂದು ಉದ್ಗರಿಸಿದ್ದಾನೆ. ವೇದಾಂತಮಯ ಕವನ, ಕಥನ ಕವನ, ವರ್ಣನಾಪ್ರಧಾನ ಕವನ, ಪ್ರಚಾರ ಕವನ ಮುಂತಾದ ವಿವಿಧ ಜಾತಿಯ ಕವನಗಳೂ ಇಂದು ಹೊರಬಿದ್ದಿವೆ. ಅವುಗಳಲ್ಲಿ ಭಾವ ಗೀತ ಗಳಲ್ಲಿಯಂತೆಯೇ ಶೃಂಗಾರ ಅಥವಾ ಸ್ತ್ರೀ ಸಂಬಂಧವುಳ್ಳ ಕಲ್ಪನೆ, ಭಾವನೆ, ಪದಬಂಧ, ಅಲಂಕಾರ ಸಮಯ ಸಿಕ್ಕಿದಾಗಲೆಲ್ಲ ಪೂರ್ವ

ಕವಿಗಳಿಗೂ ಒಂದು ಕೈ ಮೇಲಾಗುವಂತೆ ಆಧುನಿಕತೆಯೆನಿಸಿಕೊಂಬ ನೀತ್ಯತೀತತೆಯ ದೃಷ್ಟಿಯಿಂದ ಪ್ರಕಟವಾದ ಅಗ್ರಾಹ್ಯ ಅಂಶಗಳೂ ಉಂಟು. ವೀರರಸ ಪ್ರಧಾನವಾದ ಪುಟ್ಟಪ್ಪನವರ ತಾನಾಜಿ ಉತ್ತಮ ಕಥನ ಕವನ. ಬೇಂದ್ರೆಯವರ ಮೇಘದೂತಾನುವಾದವಂತೂ ಇದ್ದೇ ಇದೆ. ಮಾಸ್ತಿಯವರ 'ಮಥನ ಕವನ'ಗಳನ್ನು ಹೆಸರಿಸುವುದು ಬೇಡ. ಶೃಂಗಾರಾಂಧತೆಗೆ ತರುಣಕವಿಗಳು ಬಹಳ ನಿದರ್ಶನ ಕೊಡಬಲ್ಲರು. ಭಕ್ತಿಯ ಬಣ್ಣಕ್ಕೆ ತಿರುಗಿಸಿದ ಪುರುಷಗತ ಸ್ತ್ರೀದಾಸ್ಯಕ್ಕೆ ಪ್ರೌಢ ಕವಿಗಳ ಕೃತಿಗಳಲ್ಲೂ ಯಥೇಷ್ಟ ದೃಷ್ಟಾಂತಗಳಿವೆ:

"ಸ್ತ್ರೀತಿ ಶ್ರುತೇ ಗತಂ ಧೈರ್ಯಂ
ಸುರೂಪೇತಿ ಕಿಮುಚ್ಯತೇ ।
ಕಷ್ಟಂ ಸಹೃದಯಾ ಸಾ ಚೇತ್
ಸ್ಪೃಹತೀತ್ಯತಿದುಃಸಹಂ"

ಎಂಬ ಮಾತು ಕಲೆಗಾರಿಕೆಯಲ್ಲಿ ದೇಶ, ಕಾಲಗಳನ್ನು ಮೀರಿ ನಿಂತ ಸತ್ಯವೋ ಏನೋ ಎನಿಸುತ್ತದೆ!

ಆಧುನಿಕ ಕವಿತಾಪ್ರಪಂಚದಲ್ಲಿ ಪರಿಮಾಣವನ್ನು ಬದಿಗಿಟ್ಟು ಪ್ರಕಾರವನ್ನು ಮಾತ್ರ ಲಕ್ಷಿಸಿ ನೋಡಿದಲ್ಲಿ ಉತ್ಸಾಹಜನಕ ವಾತಾವರಣ ತುಂಬಿದೆ ಎಂದು ನಿಃಸಂದೇಹವಾಗಿ ಹೇಳಬಹುದು. ಈವರೆಗಿನದು ಹೊಸಗನ್ನಡದ ಶೈಶವಕಾಲ ಎಂದು ಮುಂದಿನ ವಿಮರ್ಶಕರು ಗಣಿಸಬಹುದಾದರೆ, ಈ ಕಾಲಕ್ಕೆ ತಕ್ಕಂತೆ ತೃಪ್ತಿಕರವಾದ ಸಾಹಿತ್ಯಕೃತಿಗಳು ಉದಿಸಿವೆಯೆನ್ನಬಹುದು. ಅಗ್ರಪಂಕ್ತಿಗೆ ಸೇರಿದ ಕವಿಕೃತಿಗಳು ಈಗ ಅಲ್ಪಸಂಖ್ಯೆಯಿದ್ದರೂ ಅವು 'ಹೊಸಗನ್ನಡದ ಉಚ್ಛ್ರಾಯದಶೆಯ ದಿಕ್ಸೂಚಿಗಳಾಗಿ ನಿಂತಿವೆ. ಲೇಖನವಿಸ್ತಾರಕ್ಕಂಜಿ ಎಷ್ಟೋ ಗಣ್ಯ ಕವಿಗಳ ಕೃತಿಗಳಿಂದ ಉದಾಹರಣೆಗಳ ವಿವಿಧ ಮಾದರಿಗಳನ್ನೆತ್ತಿಕೊಂಡಿಲ್ಲ. ಇಲ್ಲಿ ಪರಿಶೀಲಿಸಿದ ಮಾರ್ಗವನ್ನು ಹಿಡಿದು ಕೈಗೆ ಬರುವ ಹೊಸಕನ್ನಡ ಕವಿತಾಸಂಗ್ರಹಗಳನ್ನು ಅವಲೋಕಿಸುತ್ತ ಹೋದರೆ ವಾಚಕರಿಗೆ ಹೊಸಕನ್ನಡ ಕವಿತೆಯ ಛಂದಸ್ಸು, ಲಕ್ಷಣ, ಅಲಂಕಾರ, ಭಾವ, ರಸ, ರೀತಿ, ಧ್ವನಿ, ಕಲ್ಪಕತೆ, ಚಿತ್ರಶಕ್ತಿ ಮುಂತಾದ ವಿವಿಧಾಧಾರಗಳ ಪರಿಚಯ ಸ್ಪಷ್ಟವಾಗಿ ಆಗದಿರದು. ದೇಶ-ಕಾಲ-ಕಲಾ-ಲೋಕ-ನ್ಯಾಯ-ಆಗಮಗಳಿಗೆ ವಿರುದ್ಧವಾಗದಂತೆ ಇಂದಿನ ಹೊಸ ಕವಿತಾ ಶೈಲಿ ಮುನ್ನಡೆಯಿಟ್ಟು ವಿಶ್ವಸಾಹಿತ್ಯಮಾಲಿಕೆಗೆ ಸೇರಬಲ್ಲ ಕೃತಿಗಳನ್ನು ಹಡೆದೀತೆಂದು ಖಂಡಿತವಾಗಿ ನಂಬಬಹುದು. ಅದಕ್ಕೆ ಅಪಾರ್ಥ, ವ್ಯರ್ಥ, ಏಕಾರ್ಥ, ಸಸಂಶಯ, ಅಪಕ್ರಮ, ಶಬ್ದಹೀನ, ಯತಿಭ್ರಷ್ಟ, ಭಿನ್ನವೃತ್ತ, ವಿಸಂಧಿ ಮುಂತಾದ ಶೈಲಿದೋಷಗಳನ್ನರಿತು, ಅವನ್ನು ದೂರೀಕರಿಸಿ, ಸುಂದರವೂ ಶುದ್ಧವೂ ಆದ ವಾಕ್ಸಂಪತ್ತಿಯನ್ನು ಬೆಳೆಸಿಕೊಳ್ಳಲು ಯತ್ನಿಸುವುದು ಅಗತ್ಯ. ಗದ್ಯಪದ್ಯಮಯ ಕೃತಿಗಳಿಗೆ ನಾಟಕಗಳಲ್ಲದೆ ಇಂದು ಚಂಪುವಿನ ಉದಾಹರಣೆಗಳನ್ನು ಕೊಡಲು ಸಿಕ್ಕದು. ಈ ಕೊರತೆಯಾದರೂ ಕೆಲಕಾಲದಲ್ಲಿ ನೀಗಿ, ದ್ರಾವಿಡಾ-ಸಹಜ ಅಂತ್ಯಪ್ರಾಸಕ್ಕಂಟಿಕೊಂಡು ಒದ್ದಾಡದೆ, ಹೊಸ ಕನ್ನಡ ಕವಿತೆ ಪಕ್ವಶೈಲಿಯನ್ನು ಹೊಂದಿ ಉದಿತೋದಿತವಾಗಿ ಕೃತಿಸಂಪತ್ತಿಯನ್ನು ಬೆಳೆಸೀತೆಂದು ಹಾರೈಸೋಣ.

ಒಸರು

ಹೊನಲಾಗು ಒಸರು, ಒಸರೇ! — ಒಸರೆ
ಹೊಲವೆಲ್ಲ ನಿನ್ನಾಸರೆ.

ಒಮ್ಮೊಮ್ಮೆ ನಸುವಾಗಿ ಜಿನುಗಲೇಕೆ? — ಜಿನುಗಿ
ನೆಮ್ಮದಿಯ ಕೆಸರಾಗಿ ನನೆಸಲೇಕೆ?
ಹೊನಲಾಗಿ ಹೊಮ್ಮಿ ಹರಿಯದೆಯೆ ಕೈಪೊಲಕೆ
ಹೊಂಚುತಿರುವೀ ಸಂಚು ಸಾಕೆ?
ಮೊದಲೊಮ್ಮೆ ಕೆಸರು—
ಮತ್ತೆ ಹೊಲ ಹಸುರು,
ತುಂಬಿ ತುಳುಕಲು ಬಹುದು ಬಿದಿಗೆ ಪೆಸರು;
ಎಂತಿದ್ದರೂ ಒಸರೆ ಒಸರು.
ಬೆಲೆಯುಣ್ಣಬೇಕೆಂದು ಬಯಸಲಿಲ್ಲ!
ಹೊಲದಂಚಿಗೂ ಸಂಜೆಯಪ್ಪಲಿಲ್ಲ,
ಆದರೂ ಬಾಳ್‌ಬಂಜೆಯಪ್ಪುದಲ್ಲ!
ಎಲ್ಲ ಹುರುಳಿನ ಮೊತ್ತವಾದ ಮಣ್ಣ,
ಎನಿತಗೆದರೂ ಕಾಣೆ ಹುರುಳು ಹೊನ್ನ!
ಅಲ್ಲೆ ಆ ತಾಣದಲೆ-
ತೋಡಿದಾಳದೊಳಲ್ಲೆ
ನಿನ್ನ ಸೆಲೆಯಾ ಸದ್ದನಾಲಿಸಿದೆನು,
ಹೊನ್ನ ಹುರುಳಿಗೆ ನಿನ್ನ ಹೋಲಿಸಿದೆನು,
ಮತ್ತೆ ದಿಟ ಬಗೆ ಮೂಡಿ
ಒತ್ತುವಾಸೆಯ ದೂಡಿ
ಬಗೆಯ ಪಗೆಯಾರ್ವರಂ ಸೋಲಿಸಿದೆನು,
ನೊಗಕವರನೇ ಕಟ್ಟಿ ಕೀಲಿಸಿದೆನು.

ಕಳೆಯನೆಲ್ಲವ ಕಿತ್ತು ನೆಲವನ್ನೆ ಉತ್ತು
'ಹಳೆ'ಯ ಹೊಟ್ಟನ್ನುಳಿದ ಹೊಸತಾದ 'ಬಿತ್ತು'
ಮೊಳೆಸೆ, ನೀರನು ಹೊತ್ತು
ಹೊಳೆಯಾಗಿ ಬೆಳೆಗಿತ್ತು
ಕಳೆಗೊಳಿಸೆ ನಿನ್ನ ಬರವೀಗ ಬೇಕಿತ್ತು.

ಹರಿವಾಗದೇ ಬಿಟ್ಟೆಯೇಕೆ? ತಡೆಗಳ ಕಟ್ಟೆ-
ಯೊಡೆದು ಬಾ, ಚಿಮ್ಮಿ ಹರಿಹರಿದು ಬಾರ!
ಕೊಳಕನ್ನೆ ಕೊಚ್ಚುತೊಯ್ಯಲಿ ನಿನ್ನ ಪೂರ;
ಆ ಪೂರವಾ ಹಿರಿಯ ಕಡಲಿನಾಳದಲಿ
ಕೂಡಿ ಬೆರೆಯುಲಿ ಅರಗಲೊಂದೆನಿಸಲಿ.
ಹರಿದು ಬಾಂಬೊಚ್ಚ ಸುಡುಗಾಡ ತೊಳೆದಂತೆ
ಹರಿಯುತೊಣ ನೆಲ ತೊಳೆಯದೇತಕ್ಕೆ ನಿಂತೆ?
ಆದರೂ ಕಾದಿಹೆನು ಅಂದು ತನಕ,
ಒಸರುಕ್ಕಿ ಹೊನಲಾಗಿ ಹೊಮ್ಮುವನಕ!
ಹೊನಲಾಗು ಒಸರು, ಒಸರೇ—ಒಸರೆ
ಹೊಲವೆಲ್ಲ ನಿನ್ನಾಸರೆ.

—ಅ. ಗೌ. ಕಿನ್ನಿಗೋಳಿ



ನಲಿನೀ ಜಯವಂತ

ಹತ್ತು ವರ್ಷಗಳಲ್ಲಿ ಕೀರ್ತಿಯ ಶಿಖರ.

(ಪುಟ ೭೩)

ಶ್ರೀ. ಕೆ. ಗೋಪಾಲಕೃಷ್ಣ ಹೆಗಡೆ
ಅವರಿಂದ



ನಳಿನಿ ಜಯವಂತಳೊಡನೆ ಎರಡು ಗಳಿಗೆ

ಭಾರತದ ಚಲಚ್ಚಿತ್ರ ಪ್ರಪಂಚದಲ್ಲಿ ಇಂದು ನಳಿನಿ ಜಯವಂತಳು ಅತಿ ಜನಪ್ರಿಯ ತಾರೆಯರಲ್ಲೊಬ್ಬಳಾಗಿದ್ದಾಳೆ. ಪ್ರತಿ ಚಿತ್ರಗೃಹದಲ್ಲೂ ಅಶೋಕ ನಳಿನಿ ಜೋಡಿಯನ್ನು ನೀವು ರಜತಪಟದ ಮೇಲೆ ಕಾಣುತ್ತೀರಿ ಎನ್ನುವಷ್ಟು ಅವಳ ಮೆರೆತ. ನಮ್ಮ ಚಲಚ್ಚಿತ್ರ ಪ್ರತಿನಿಧಿ ಹೆಗಡೆ ಅವಳನ್ನು ಸಂದರ್ಶಿಸಿದ ವರದಿಯಿದು.

ನಿರ್ದೇಶಕ ವೀರೇಂದ್ರ ಸಿ. ದೇಸಾಯಿಯವರಿಗೆ "ರಾಧಿಕಾ" ಚಿತ್ರಕ್ಕೊಬ್ಬ ಹುಡುಗಿ ಬೇಕಾಗಿದ್ದಳು. ಸಂಗೀತ ನೃತ್ಯಗಳನ್ನು ಬಲ್ಲ ಸುಂದರಿ ಯುವತಿಯನ್ನು ಹುಡುಕಿ ತೆಗೆಯುವುದು ಅವರಿಗೆ ಕಷ್ಟವಾಗಲಿಲ್ಲ. ಹಾಡಿಗೆ ಹಾಡು, ಕುಣಿತಕ್ಕೆ ಕುಣಿತ, ಚೆಲುವಿಗೆ ಚೆಲುವು ಮತ್ತು ಎಲ್ಲಕ್ಕೂ ಮೇಲಾಗಿ ಅವಿವಾಹಿತ ಹರೆಯದ ತರುಣಿ. ಅವಳೇ ನಳಿನಿ ಜಯವಂತ. ಬಾಲ್ಯಾವಸ್ಥೆಯನ್ನು ದಾಟ ಯೌವನದ ಹೊಸ್ತಿಲನ್ನು ಏರುತಿದ್ದ ಮುದ್ದುಮೊಗದ ನಳಿನಿಯ ನೀಳಗಣ್ಣುಗಳನ್ನು ಕಂಡ ದೇಸಾಯಿ ತನ್ನ ಚಿತ್ರ ಯಶಸ್ವಿಯಾಯಿತೆಂದೇ ಬಗೆದರು. ಮಾತ್ರವಲ್ಲ, ಕು. ನಳಿನಿಯ ಸಹಜಸೌಂದರ್ಯಕ್ಕೆ ಸೋತು ವಿವಾಹವಾಗಿಯೇ ಬಿಟ್ಟರು. ಆದರೆ ಈ ಮದುವೆಯ ಪ್ರಶ್ನೆ ಬಂದಾಗ ಚಲಚ್ಚಿತ್ರ ಪ್ರಪಂಚದಲ್ಲೊಂದು ತರದ ಕಿಚ್ಚಿನ ಮಾತಿಗೆ ಪ್ರಾರಂಭವಾಯಿತು. ಅಸೂಯೆ, ಹೊಟ್ಟೆಕಿಚ್ಚು, ಸ್ವಾರ್ಥಗಳ ತವರುಮನೆಯಾದ ರೂಪರಂಗದ ಜನಗಳಿಗೆಲ್ಲ ತಳಮಳವಾಯಿತು! ಆಗ ನಳಿನಿಗೆ ಹದಿನಾಲ್ಕು; ಈಗ ಇಪ್ಪತ್ತನಾಲ್ಕು ತುಂಬಲಿದೆ. ಆದರೂ ಅವಳು ತನ್ನ ಬೆಡಗಿನಿಂದ ಲಕ್ಷಗಟ್ಟಲೆ ಸಿನಿಮಾ ಪ್ರೇಕ್ಷಕರ ಹೃದಯದಲ್ಲಿ ಮನೆ ಮಾಡಿದ್ದಾಳೆ!

ನಳಿನಿ ಮುಂಬಯಿಯಲ್ಲೇ ಹುಟ್ಟಿ ಬೆಳೆದಳು. ಅವಳ ತಂದೆ ತಾಯಿ ಮರಾಠರು. ಹೀಗಾಗಿ ಗುಜರಾಥಿ ದೇಸಾಯಿಯನ್ನು ಮದುವೆಯಾದುದು ಎಲ್ಲರಿಗೂ ಮತ್ಸರಕ್ಕೊಂದು ಕಾರಣವಾಯಿತು. ನಳಿನಿಗೀಗ ಸ್ವಚ್ಛ ಗುಜರಾಥಿ ಭಾಷೆ ಬರುತ್ತದೆ. ದೇಸಾಯಿಗೂ ಮರಾಠಿ ಕಲಿಸಿಬಿಟ್ಟದ್ದಾಳೆ. ಅನಂತರ ಹಿಂದೀ-ಹಿಂದೂಸ್ಥಾನಿ ಇಬ್ಬರೂ ಬಲ್ಲ ಭಾಷೆಯೇ. ಅದಲ್ಲವಾದರೆ ಇಂಗ್ಲೀಷಿದೆ. ಸಂದರ್ಭಾನುಸಾರವಾಗಿ ಅವರೀಗ ನಾಲ್ಕು ಭಾಷೆಗಳನ್ನು ಉಪಯೋಗ ಮಾಡಿ ಸುರಸ ಸಂಸಾರ ಸಾಗಿಸುತ್ತಾರೆ.

"ರಾಧಿಕಾ" ದಲ್ಲಿ ಬೆಳಕನ್ನು ಕಂಡ ನಳಿನಿ ಅನೇಕ ಚಿತ್ರಗಳಲ್ಲಿ ಮನಮೋಹಕ ಅಭಿನಯವನ್ನು ಕೊಟ್ಟದ್ದಾಳೆ. ಅನಂತರ ಹಲವಾರು ಚಿತ್ರಗಳಲ್ಲಿ ಮೆರೆದಳಾಕೆ. ಅವಳ ಎಲ್ಲಾ ಚಿತ್ರಗಳು ಪ್ರತಿಯೊಂದು ದೃಷ್ಟಿಯಿಂದಲೂ ಉತ್ತಮ ದರ್ಜೆಯವುಗಳೆಂದು ಸಾರಲ್ಪಟ್ಟವೆ. ಮಾತ್ರವಲ್ಲದೆ ಅವಳಿಗೂ ನಿರ್ಮಾತೃಗಳಿಗೂ ತುಂಬಾ ಹಣವನ್ನು ಒದಗಿಸಿಕೊಟ್ಟವೆ. ಇತ್ತೀಚೆಗಿನ ಅವಳ "ಸಮಾಧಿ" ಮತ್ತು "ಸಂಗ್ರಾಮ" ಚಿತ್ರಗಳು ಫಿಲ್ಮಿಸ್ತಾನ ಮತ್ತು ಬಾಂಬೇ ಟಾಕೀಸದವರಿಗೆ ಅಪರಿಮಿತ ದ್ರವ್ಯವನ್ನು ದೊರಕಿಸಿವೆ. ಜಗದ್ವಿಖ್ಯಾತ ಭಾರತೀಯ ನಟ ಅಶೋಕ ಕುಮಾರನೆಂದರೆ ನಳಿನಿಗೆ ಬಹಳ ಗೌರವ. ರೂಪರಂಗದ ನೂರಾರು ನಟರಲ್ಲಿ ಮೋತಿಲಾಲನನ್ನು ಬಿಟ್ಟು ಬಿಟ್ಟರೆ ಇವನೊಬ್ಬನೇ ಮಾನ್ಯ ನಟಪುಂಗವನೆಂದು ಅವಳ ಅಭಿಪ್ರಾಯ. "ನವ ಜವಾನ"ದಲ್ಲಿ ಪ್ರೇಮನಾಥನೊಂದಿಗೆ, "ಅನೋಖಾ ಪ್ಯಾರ" ದಲ್ಲಿ ದಿಲೀಪ

ಕುಮಾರ ಮತ್ತು ನರ್ಗೀಸಳೊಂದಿಗೆ ನಟಿಸಿದ ನಳಿನಿ ಇದೀಗ ಐದು ಚಿತ್ರಗಳಿಗೆ ಕರಾರು ಬರೆದು ಕೊಟ್ಟಿದ್ದಾಳೆ. ದಿಗ್ದರ್ಶಕ ಎಸ್. ಕೆ. ಓಝಾರವರ "ನಾಜ್" ಚಿತ್ರ ಒಂದು ಹೊಸ ಅಧ್ಯಾಯವನ್ನೆ ಮಾಡಲಿದೆಯಂತೆ. ಈ ಚಿತ್ರದ "ಶೂಟಿಂಗಿ"ಗಾಗಿ ನಳಿನಿ ಅಶೋಕ ಕುಮಾರರು ಕೈರೋಗೆ ಹೋಗಿದ್ದರು. ಅಲ್ಲಿಂದ ಲಂಡನಿಗೆ ಪ್ರಯಾಣ ಬೆಳೆಸಿದಳವಳು. ಇದೀಗ ವಿದೇಶ ಪ್ರವಾಸದಿಂದ ಹಿಂದಿರುಗಿದ ಅವಳ ಅನುಭವವನ್ನು ಕೇಳಬೇಕೆಂದು ನಳಿನಿಯ ಚೆಂಬೂರಿನ ನಿವಾಸಗೃಹಕ್ಕೆ ಹೋಗಿದ್ದೆ. ತನ್ನನ್ನು ಪ್ರಾತಃಕಾಲದಲ್ಲೇ ಕಾಣಬಹುದೆಂದು ಅವಳೂ ನನಗೆ ಟೆಲಿಫೋನಿನಲ್ಲಿ ಮಾತುಕೊಟ್ಟಿದ್ದಳು.

ನಳಿನಿ ಜಯವಂತಳ ಚೆಂಬೂರಿನ ಮನೆಯೆಂದರೆ ಒಂದು ಚಿಕ್ಕ ಅರಮನೆಯಂತಿದೆ! ಬಲು ಸೊಗಸಾದ ಅಚ್ಚುಕಟ್ಟಿನ ಈ ಚೊಕ್ಕ ಮಾದರಿ ಮನೆಯಲ್ಲಿನ ವಸ್ತು ಒಡವೆಗಳನ್ನಿಟ್ಟಿ ಶಿಸ್ತನ್ನು ಕಂಡರೆ ಸಾಕು! ಮದುವೆಗೋ ಮುಂಜಿಗೋ ಶೃಂಗರಿಸಿಟ್ಟಂತೆ ಕಂಗೊಳಿಸುವ ಈ ಸಣ್ಣ ಬಂಗಲೆಯಲ್ಲಿ ವಿಲಾಸಮಯ ಜೀವನಕ್ಕೆ ಬೇಕಾದ ಎಲ್ಲಾ ಸಾಧನ ಸಂಚಯಗಳಿವೆ. ನಳಿನಿ ತುಂಬಾ ಓದುತ್ತಿಲ್ಲವಾದರೂ ದೇಸಾಯಿಯವರದೊಂದು ಸಣ್ಣ ಪುಸ್ತಕಾಲಯವೇ ಇದೆ. ಈ ಮಹಾಶಯರಿಗೆ ಕನ್ನಡ ಭಾಷೆಯೂ ಬರುತ್ತಿದೆಯೆಂದು ತಿಳಿದಾಗ ನನಗೆ ಬಹಳ ಸಂತೋಷವಾಯಿತು. ಸೂರ್ಯೋದಯವಾಗಿ ಬೆಳಗ್ಗೆ ಚೆಂಬೂರಿನ ಜನತೆಯನ್ನು ಕುಲುಕಿ ಎಚ್ಚರಿಸುತ್ತಿದ್ದಾಗ ನಾನು ನಳಿನಿ ಜಯವಂತಳ ಮನೆ ಸೇರಿದ್ದೆ. ವೀರೇಂದ್ರ ಸಿ. ದೇಸಾಯಿ (ನಳಿನಿಯ ಪತಿದೇವ) ಯರಿಗೆ ನನ್ನ ಪರಿಚಯ ಮಾಡಿಕೊಟ್ಟು ಜಯವಂತಳ ಬರವನ್ನೇ ಕಾದೆ. ತಂಪಾದ ನೀರು ಬಂತು, ಬಿಸಿ ಬಿಸಿ ಚಹಾ ಅನಂತರ. ಸಮಯಕ್ಕೆ ಸರಿಯಾಗಿ ನಳಿನಿ ಜಯವಂತಳು ನನ್ನ ಮುಂದೆ ಬಂದು ಕುಳಿತುಬಿಟ್ಟಳು. ಹಾಲಿವುಡ್ಡಿನ "ಮೇಕ್ಸ್ ಫೇಕ್ಟರ್"— ಮುಖ ಸೌಂದರ್ಯ ಬಣ್ಣ ತಯಾರಕರು ಕತ್ತೆಯನ್ನು ಕುದುರೆ ಮತ್ತು ಕುದುರೆಯನ್ನು ಕತ್ತೆ ಮಾಡುವ ಬಣ್ಣ ತಯಾರಿಸುವರಂತೆ. ಆದರೆ ಬಣ್ಣ ಬರೆಗಳಿಲ್ಲದೆ ಬರಿಯ ಶುಭ್ರ ಮುಖವದನದಲ್ಲೂ ಆದೆಷ್ಟು ಶೋಭೆಯಿದೆಯೆಂಬುದನ್ನು ನಾನು ರೂಪಸಿ ನಳಿನಿಯಲ್ಲಿ ಕಂಡೆ. ರೂಪರಾಣಿ ನಾಸೀಮಳನ್ನು ಕಂಡ ನೆನಪು ನನಗೆ ಆಗ ಬಂತು. ಅವಳಂತೆ ಇವಳೂ ಚೆಲುವಿನಿಂದ ತುಂಬಿ ತುಳುಕುತ್ತಾಳೆ. ವೈಯಾರ, ಮೋಡಿ, ಮಾಟ ಮುಂತಾದ ಅಸಹಜ ಭಾವಭಂಗಿಗಳ ಪ್ರದರ್ಶನಕ್ಕೆ ಅವಕಾಶ ಕೊಡುವದಿಲ್ಲ.

ನಳಿನಿ ಹಸನ್ಮುಖಿ; ನಿರ್ಭೀತೆ. ಒಬ್ಬಂಟಿಗಳಾಗಿಯೇ ಇರಬಲ್ಲಳಾದರೂ ಗಂಡುಬೀರಿಯಲ್ಲ. ಜವಾಬ್ದಾರಿ ಸಂಸಾರವನ್ನು ಬಲ್ಲ ಗೃಹಿಣಿ. ಹಚ್ಚೆ ಬಣ್ಣದ ರೇಶ್ಮೆಯ ಸೀರೆಯನ್ನುಟ್ಟು ಹಳದಿ ಬಣ್ಣದ ರವಿಕೆ ತೊಟ್ಟು ಅವಳು ಬಲು ಸುಂದರಿಯಾಗಿ ಕಂಡುದರಲ್ಲಿ-ಕಾಣುವುದರಲ್ಲಿ ಆಶ್ಚರ್ಯವಿಲ್ಲ. ಅವಳ ತಲೆಕೂದಲು, ಜಡೆ ಮುಡಿಗಳಲ್ಲೂ ಒಂದು ಬಗೆಯ ನವೀನತೆಯಿದೆ. ಅವಳನ್ನು ಪ್ರಶ್ನಿಸಿದಂತೆ ಮುಗುಳ್ನಗುತ್ತ ತನ್ನ ಪರದೇಶ ಪ್ರವಾಸದ ವೃತ್ತವನ್ನು ಹೇಳಿದಳು.

ಕೈರೋ ನಗರ ಬಹಳ ಸುಂದರವಾಗಿರುವುದಂತೆ. ಅಲ್ಲೇ ಬಳಿಯಿರುವ ಪಿರಮಿಡ್ಡುಗಳನ್ನು ಕಂಡು ನಳಿನಿ ಮನಸೋತು ಹೋಗಿದ್ದಾಳೆ. ಬಲು ದೊಡ್ಡ ಎತ್ತರದ ಆ ಕಟ್ಟಡ ರಚನೆಗಳೆಲ್ಲ ಅತ್ಯಾಶ್ಚರ್ಯಕರವಾಗಿವೆಯೆಂದಳು. ಅಲ್ಲಿಂದ ಅವಳು ನೇರವಾಗಿ ಲಂಡನ್ನಿಗೆ ವಿಮಾನ ಪ್ರವಾಸ ಬೆಳಸಿದಳು. ಲಂಡನ್ನಿನಲ್ಲಿ ನಳಿನಿಗೆ ವಿರಾಮವಿಲ್ಲ. ಆದರೂ ತನ್ನ ಬಲು ಸಂಕ್ಷಿಪ್ತ ವಸತಿಯನ್ನು ಸದುಪಯೋಗ ಮಾಡಿದಳು. ಜಗದ್ವಿಖ್ಯಾತ ಇಂಗ್ಲಿಷ್ ಚಲಚ್ಚಿತ್ರ ನಿರ್ಮಾತೃಗಳಾದ ಆರ್ಥರ್ ರೇಂಕರ ಪಾಯಿನ್‌ವುಡ್ ಸ್ಟೂಡಿಯೋವನ. ಅವರನ್ನೂ ಕಂಡಳು. ಅಂತೆಯೆ ಅಲೆಕ್ಸಾಂಡರ್ ಕೋರ್ಡಾರನ್ನು. ಬ್ರಿಟಿಷ್ ಎಸೋಸಿಯೇಷನ್ ಸ್ಟೂಡಿಯೋ, ವಾರ್ನರ್ ಬ್ರದರ್ಸ್‌ರವರ ಚಿತ್ರಾಲಯ ಬಲು ದೊಡ್ಡ ಮತ್ತು ವಿಶಾಲವಾದ ಚಿತ್ರಾಲಯಗಳಂತೆ. ಸಣ್ಣಪುಟ್ಟ ಕೆಲಸಗಳಿಗೂ ನೂರಾರು ಬಗೆಯ ಯಾಂತ್ರಿಕ ಸಲಕರಣೆ-ಸವಲತ್ತುಗಳಿವೆ. ವಾರ್ನರ್ ಬ್ರದರ್ಸರವರ ನಿರ್ದೇಶಕ ಡೇವಿಡ್ ಬಟ್ಲರ್‌ರವರು ಚಿತ್ರ ತೆಗೆಯುವಾಗ ಅವರನ್ನು, ಆ ಚಿತ್ರದ ನಟನಟಿಯರನ್ನು ಕಂಡು ನಳಿನಿ ಮಾತನಾಡಿಸಿದಳು. ವರ್ಣಚಿತ್ರದ ಹೆಸರು "ಚಾರ್ಲಿಯ ಅತ್ತೆ" (Charles' Aunt) ಎಂದು ಲಂಡನ್ನಿನಲ್ಲಿನ ಕೆಲವೇ ದಿವಸಗಳಲ್ಲಿ [ಹಲವಾರು ನಾಟಕಗಳನ್ನು ಕಂಡಳವಳು. ಬರ್ನಾಡ್‌ಶಾರ "ಸೂಪರ್ ಮೇನ್"- "ಸೀಸರ್ ಮತ್ತು ಕ್ಲಿಯೋಪಾತ್ರ" ಮುಂತಾದ ನಾಟಕಗಳು ಬಲು ಚೆನ್ನಾಗಿದ್ದುವಂತೆ. "ಅಲ್ಲಿ ಎಲ್ಲವೂ ಚೆಲುವಾಗಿದೆ. ಎಷ್ಟು ಸೊಗಸಾದ ರಂಗಭೂಮಿ! ಪ್ರೇಕ್ಷಕರು ಬಹಳ ಸಾತ್ವಿಕರು, ವಿನಯಶೀಲರು. ನಾಟಕ ಮುಗಿದೊಡನೆ ಮನೆಗೆ ಓಡುವುದಿಲ್ಲ. ಮೈಮೇಲೆ ಏರಿಬೀಳುವುದಿಲ್ಲ. ಅಲ್ಲಿನ ಜನರು ನಾಟಕವನ್ನು ಇಂದಿಗೂ ಮೆಚ್ಚುತ್ತಾರೆ. ನಾಟಕ ಮುಗಿದ ಬಳಿಕ ಉತ್ತಮ ಅಭಿನಯ ಕೊಟ್ಟ, ಸಂಗೀತಕೊಟ್ಟ ನಟನಟಿಯರನ್ನು ಬಾಯ್ತುಂಬಾ ಹೊಗಳಿ ತಮ್ಮ ಸಂತೋಷವನ್ನು ಪ್ರಕಟಿಸುತ್ತಾರೆ. ಕಷ್ಟಪಟ್ಟು ದುಡಿದ ನಟನಟಿಯರಿಗೆ ಯೋಗ್ಯ ಪ್ರೋತ್ಸಾಹ ಸಿಗಬೇಕಲ್ಲವೆ. ಇಲ್ಲಿ ಬಾಯ್ತುಂಬಾ ಬೈಗಳು, ತಲೆಬುಡವಿಲ್ಲದ ಟೀಕೆಟಿಪ್ಪಣಿಗಳು. ಅಲ್ಲೂ ನಟನಟಿಯರನ್ನುಪ್ರೇಕ್ಷಕರು ಮುತ್ತುತ್ತಾರೆ. ಇಲ್ಲಿನಂತಲ್ಲ. ಇಲ್ಲಿ ನಮಗೆ ಮನ ಬಂದಂತೆ ತಿರುಗಲು ಕೂಡಾ ಸಿಗುವುದಿಲ್ಲ. ಜನರಿಗೆ ನಮ್ಮ ಕಾರಿನ ನಂಬರು ಕೂಡಾ ಗೊತ್ತಿದೆ. ಅಲ್ಲಿನ ಜನರ ನಡೆನುಡಿ ಬಹಳ ಮೆಚ್ಚುವಂತಹುದಾಗಿದೆ. ನಾಗರಿಕರಾದ ಇಂಗ್ಲೀಷರು ನಟನಟಿಯರನ್ನು ಎಷ್ಟು ಮೆಚ್ಚುವರೆಂದು ಹೇಳಿತೀರದು. ಅವರಿಗೆಲ್ಲ ಬಹಳ ಮರ್ಯಾದೆಯಿದೆ. ನಟನಟಿಯರು ವೃದ್ಧಾಪ್ಯಹೊಂದಿದರೂ ಅವರ ಸಾಹಸಮಯ ಜೀವನ, ಬಲು ದೀರ್ಘ ಅನುಭವ ಅತ್ಯುತ್ತಮ ನಾಟಕಗಳನ್ನು ಕೊಡಲು ಸಮರ್ಥವಾಗಿವೆ. "ವಾಟರ್ಸ್ ಆಫ್ ದಿ ಮೂನ್" ಎಂಬ ನಾಟಕವನ್ನು ಕಾಣಲು ಒಂದು ವಾರ ಮೊದಲೇ ಟಿಕೇಟನ್ನು ಕಾದಿಡಬೇಕಾಗಿತ್ತು!"

ಭಾರತೀಯರನ್ನು ಇದೀಗ ಎಲ್ಲೆಲ್ಲೂ ಗೌರವದಿಂದ ಕಾಣುತ್ತಾರಂತೆ. ಇದಾದರೂ ಒಂದು ಸ್ವಾತಂತ್ರ್ಯದ ಸತ್ಪರಿಣಾಮವೆನ್ನಬಹುದು. ಅವಳು ಕಂಡ ಎಲ್ಲಾ ನಗರಗಳಲ್ಲೂ ಊಟ, ತಿಂಡಿ, ತಿನಿಸು, ವಸತಿಸೌಕರ್ಯಗಳು ಬಲು ತೃಪ್ತಿಕರವಾಗಿವೆಯೆಂದೂ ಹೇಳಿದಳು. ಆದರೆ ಲಂಡನ್ನಿಗಿಂತ ಪ್ಯಾರಿಸು ಬಹಳ "ಬಿಸಿಬಿಸಿ"ನಗರ. ಖರ್ಚೂ ಹೆಚ್ಚು. ಸ್ವಿಜರ್ಲೆಂಡಿನ ಪರ್ವತ ರೈಲು ಪ್ರಯಾಣ-ಬಹಳ ರೋಮಾಂಚಕಾರಿಯಂತೆ. ಆ ದೇಶದ ಜನರೆಲ್ಲ ಬಹಳ ಒಳ್ಳೆಯ ನಾಗರಿಕರು. ಬೆಲೆಬಾಳುವ ವಸ್ತು ಒಡವೆಗಳನ್ನು ಬೀದಿಯ ಬದಿಯಲ್ಲೇ ಬಿಟ್ಟು ಅಂಗಡಿ-ಮನೆಯೊಳಗೆ ನಡೆದರೂ ಆದನ್ನಾರಾದರೂ ಎತ್ತಿಕೊಂಡು ಹೋದಾ

ರೆಂಬ ಭಯವೇ ಇಲ್ಲ. ವಿದೇಶ ಅಂದರೆ ಯುರೋಪುಖಂಡದಲ್ಲಿನ ರಾಜ್ಯಗಳಲ್ಲಿ ಪ್ರವಾಸ ಮಾಡಬೇಕಾದರೆ ಇಂಗ್ಲಿಷಿಗಿಂತಲೂ ಫ್ರೆಂಚ ಭಾಷೆಯೇ ಅಗತ್ಯ. ಕೈರೋದಲ್ಲಿ ಕೂಡಾ ಹೆಚ್ಚಿನ ಜನಸಾಮಾನ್ಯರಿಗೆ ಇಂಗ್ಲಿಷಿಗಿಂತ ಹೆಚ್ಚು ಫ್ರೆಂಚ್ ಭಾಷೆ ಬರುವುದೆಂದಳು.

ಬ್ರಿಟನಿನ ಚಲಚ್ಚಿತ್ರ ಕೈಗಾರಿಕೋದ್ಯಮ ಇಳಿಮುಖವಾಗುತ್ತ ಬಂದಿರುವುದೆಂದೂ ಅಮೇರಿಕೆಯ ಅಂದರೆ ಹಾಲಿವುಡ್ಡಿನ ಚಿತ್ರಗಳೆದುರು ಬ್ರಿಟಿಷ್ ಚಿತ್ರಗಳಾಟ ಸಾಗುವುದಿಲ್ಲವೆಂದೂ ಹೇಳಿದಳು.

“ಹೆಚ್ಚು ಕಡಿಮೆ ಎಲ್ಲಾ ದೇಶಗಳನ್ನೂ ಪ್ರಾಮುಖ್ಯ ನಗರಗಳನ್ನು ಕಂಡೆ. ರೋಂ ನಗರದಲ್ಲಿ ಎಷ್ಟು ಹಾಲ್ಗಲ್ಲಿನ ಸುಂದರ ಪ್ರತಿಮೆಗಳು! ಎಲ್ಲಿ ಕಂಡರಲ್ಲಿ ಕೆತ್ತನೆ-ಕಲೆಗಳೇ. ಅಲ್ಲದೆ ಎಲ್ಲೆಡೆಗಳಲ್ಲೂ ಚಿತ್ರಸಂಗ್ರಹಾಲಯ ಮತ್ತು ಪ್ರದರ್ಶನ ಮಂದಿರಗಳಿವೆ. ಅಲ್ಲೆಲ್ಲ ಹೆಸರಾಂತ ಚಿತ್ರಕಲಾವಿದರ ಅಮರಕೃತಿಗಳಿವೆ. ಆದರೆ.... ಇಂಗ್ಲೆಂಡಿನ ಥೇಮ್ಸನದಿಯಾಗಲಿ, ಪ್ಯಾರಿಸಿನ ಕಲಾ ಗ್ಯಾಲರಿಗಳಾಗಲಿ, ಸ್ವಿಜರ್ಲೆಂಡಿನ ಪ್ರಕೃತಿ ಸೌಂದರ್ಯವಾಗಲಿ, ರೋಂ ನಗರದ ಪ್ರತಿಮೆಗಳಾಗಲಿ ನನಗೆ ಅನುಪಮ ಆನಂದವನ್ನು ಕೊಡಲಿಲ್ಲ. ವಿಶೇಷ ವಸ್ತು ವಿಷಯಗಳನ್ನು ಕಾಣಬೇಕಾದರೆ ನಾವು ಪರದೇಶಕ್ಕೆ ಹೋಗಬೇಕಾಗಿಲ್ಲ. ನಾನು ಕಾಶ್ಮೀರವನ್ನು ಕಂಡಿದ್ದೇನೆ. ಆ ಭೂಸ್ವರ್ಗೀಯ ಸುಂದರ ರಮ್ಯ ಪ್ರದೇಶ ಇನ್ನೆಲ್ಲೂ ಇಲ್ಲವೆನ್ನಬಲ್ಲೆ” ಎಂದು ಕಾಶ್ಮೀರವನ್ನು ಕೊಂಡಾಡಿದಳು.

ನಳಿನಿಯೀಗ ನಾಲ್ಕಾರು ಚಿತ್ರಗಳಲ್ಲಿ ನಟಸುತ್ತಾಳೆ. ತ್ರಿವೇದಿ ಪ್ರೊಡಕ್ಷನ್‌ರವರ “ಚಿತ್ರಘುರ್” ಆದವಾನಿ ಗುಡ್‌ಲಕ್ ಪಿಕ್ಚರ್ಸ್‌ರವರ “ಸಲೋನೆ” ಮುನಿಶಿ ಚಿತ್ರದವರ “ಕಫಿಲಾ”, ನ್ಯೂ ಪ್ರೀಮಿಯರ್‌ರವರ “ನವ ಬಹಾರ್” ಮತ್ತು ಎಸ್.ಕೆ. ಓಝಾರ “ನಾಜ್”- ಈ ಎಲ್ಲಾ ಚಿತ್ರಗಳು ನಳಿನಿಗೆ ವಿಜಯ ಗಳಿಸಿಕೊಡಲಿವೆ, ಮಾತ್ರವಲ್ಲ ಅತುಲ ಧನಸಂಗ್ರಹವನ್ನೂ ಕಲ್ಪಿಸಿಕೊಡಲಿವೆ. “ಇಷ್ಟೆಲ್ಲ ಚಿತ್ರಗಳಲ್ಲಿ ಹೇಗೆ ನಟಿಸುವೆಯಪ್ಪಾ?” ಎಂದುದಕ್ಕೆ “ಸೋತಾಗ ವಿರಾಮವನ್ನು ತೆಗೆದುಕೊಳ್ಳುತ್ತೇನೆ” ಎಂದಳು ಜಯವಂತ.

ನಮ್ಮ ಚಿತ್ರೋದ್ಯಮದಲ್ಲಾದ ಪ್ರಗತಿಯೇನು ಎಂದುದಕ್ಕೆ, ಚಿತ್ರಗ್ರಹಣ ಕಲೆ, ಶಬ್ದಗ್ರಹಣ, ವರ್ಣಚಿತ್ರ, ದೊಡ್ಡ-ವಿಶಾಲವಾದ ಸನ್ನಿವೇಶ (Sets) ಮುಂತಾದುವುಗಳಲ್ಲಿ ನಾವು ಲೆಕ್ಕಿಸಬಹುದಾದ ಪ್ರಗತಿಯಾಗಿರುವುದೆಂದಳು. ಆದರೆ ಕಥೆಯಲ್ಲಿಲ್ಲ. ಅವಳಿಗೆ ಹಾಡು ಬರುತ್ತದೆ. ನರ್ತನ ಗೊತ್ತಿದೆ. ಗಿಟಾರ್ ಮತ್ತು ಸಿತಾರ ಬಾರಿಸಲೂ ಸ್ವಲ್ಪ ಸ್ವಲ್ಪ ಬರುತ್ತದೆ. ಆದರೆ ಅವಳು ಚಿತ್ರಗಳಲ್ಲಿ ಈಗೀಗ ಹಾಡಲು ಸಂಗೀತ ನಿರ್ದೇಶಕರು ಅವಕಾಶವನ್ನೆ ಕಲ್ಪಿಸಿಕೊಡುತ್ತಿಲ್ಲವಲ್ಲಾ ಎಂದು ಕಳವಳಿಸುತ್ತಾಳೆ. ಎಲ್ಲಾ ಚಿತ್ರಗಳಲ್ಲೂ ಲತಾಮಂಗೇಶಕರಳಂಥವಳ ಒಂದೇದನಿಯನ್ನು ಕೇಳುವುದಕ್ಕಿಂತ ಹಾಡುಬಲ್ಲ ನಟನಟಿಯರಿಗೇಕೆ ಪ್ರೋತ್ಸಾಹ ಕೊಡಬಾರದು? ಕಾರಣ ವಿಷ್ಟೇ: ಅವರನ್ನು ತಿದ್ದಲು ತುಂಬಾ ಸಮಯ ಬೇಕಾಗುತ್ತದೆ. ನೇಪಥ್ಯದಲ್ಲೆ ಇದ್ದು ಬಿದ್ದು ನುರಿತವರ ಕಂಠ ಸುಲಭದಲ್ಲೆ ರಾಗಗಳನ್ನು ಅಭ್ಯಸಿಸಬಲ್ಲುದಾಗಿದೆ.

ಅವಳಿಗೆ ಓದುವ ಅಭ್ಯಾಸವಿಲ್ಲ. ವಿರಾಮ ಬೇಕಲ್ಲ? ಇನ್ನು ಬ್ಯಾಡಮಿಂಟನ್ ಆಡಲು ಅಭ್ಯಸಿಸುವಳಂತೆ. ಮನೆಯ ಮುಂದೊಂದು ಕ್ರೀಡಾಂಗಣ ತಯಾರಿಸಿದ್ದಾಳೆ. ಮಾತು ಸಾಗಿದಂತೆ ಅವಳ ಊಟ ತಿಂಡಿತಿನಿಸುಗಳ ವಿಚಾರವೂ ಬಂತು. ಸ್ತ್ರೀಸೌಂದರ್ಯವನ್ನು ಉಳಿಸಿಕೊಳ್ಳಬೇಕಾದರೆ,- ಅದರಲ್ಲೂ ನಟಿಯು ನಟಿಯಾಗಿಯೇ ಇರಬಯಸುವುದಾದರೆ ಅನ್ನಪಾನಗಳ ಜಾಗ್ರತೆ ನೋಡಬೇಕು. ಸಕ್ಕರೆಯ ಸಿಹಿ ಪದಾರ್ಥಗಳನ್ನು ತುಂಬಾ ತಿನ್ನುವಂತಿಲ್ಲ. ಕೊಬ್ಬಿನ ಆಹಾರ ತಿಂದು ಬಿಟ್ಟರೆ ಮೈಯಲ್ಲಿ ಮಾಂಸ ಬೊಜ್ಜು ತುಂಬಿದರೆ ಚಪಲತೆ, ಓಡುತ್ತದೆ ಜಡ್ಡು-ಆಲಸ್ಯ ಮೂಡುತ್ತದೆ. ಅವಳು ತನ್ನ ದೈಹಿಕ ಸೌಂದರ್ಯವನ್ನು ಕಾಪಾಡಲೆಂದು ಮೈಕಟ್ಟುಗಳನ್ನು ಕ್ರಮವಾಗಿ ಇಡಲೆಂದು ದಿನಾಲೂ ವ್ಯಾಯಾಮ ಮಾಡುತ್ತಾಳೆ. ಹೆಚ್ಚಾಗಿ ಬೇಯಿಸಿದ ಕಾಯಿಪಲ್ಲೆಗಳನ್ನೆ ತಿನ್ನುತ್ತಾಳೆ. ಆಗಾಗ್ಗೆ ಕೋಳಿಮರಿ, ಮೀನು ಮತ್ತು ಆಡುಕುರಿಗಳ ಮಾಂಸ ತಿನ್ನುತ್ತಾಳೆ. ಎಣ್ಣೆಯಲ್ಲಿ ಕರಿದ ಮತ್ತು ಹುರಿದ ಪದಾರ್ಥಗಳೆಲ್ಲ ವರ್ಜ್ಯ. ಅವಳು ರೊಟ್ಟಿ (Bread) ಯನ್ನು ತಿನ್ನುವುದಿಲ್ಲ. ಕೆಲವೊಂದು ದಿನ ಬರಿಯ ತರಕಾರಿ ತಿಂದಾಗ ಬಹಳ ಭಾರವನ್ನು ಕಳೆದುಕೊಂಡಳಂತೆ. ಪಾಪ! ಗಂಡ ಶುದ್ಧ ಸಸ್ಯಾಹಾರಿ. ಆದರೆ ಅವಳೂ ಹಾಗೆ ಇರಲು ಸಾಧ್ಯವಿಲ್ಲ! ಅಂಗಾಂಗಗಳ ಚೆಲುವನ್ನು ಕಾಪಾಡಬೇಕಾದರೆ ಅವಳು ಡಾಕ್ಟರ್ ಸೂಚಿಸಿದ ಮಿಶ್ರಾಹಾರವನ್ನೇ ಸೇವಿಸಬೇಕಾಗಿದೆ. ಬಾಯಿಗೆ ರುಚಿಸಿದಂತೆ ತಿನ್ನಲು ತನಗೆ ಇಲ್ಲ ಎಂದು ಮುಖದಿಂದ ಹೇಳಿದಳು. ಹಸಿ ತರಕಾರಿ ಪಲ್ಲೆಗಳ “ಕೋಸುಂಬುರಿ” ಮಾಡಿ ತಿನ್ನುತ್ತಾಳೆ.

ಅವಳು ತಿರುಗಿದ ಎಲ್ಲ ದೇಶದ ಜನರೂ ಭಾರತದ ವಿಷಯವಾಗಿ ಬಹಳ ಆಸ್ಥೆ ವಹಿಸಿರುವರೆಂದೂ ಅವರೆಲ್ಲ ಹಿಂದುಸ್ಥಾನವನ್ನು ಕಾಣಬೇಕೆಂಬ ಬಯಕೆಯನ್ನು ಪ್ರಕಟಿಸಿರುವರೆಂದೂ ಹೇಳಿದಳಾಕೆ. ಇಂಗ್ಲೆಂಡ್, ಫ್ರಾನ್ಸ ಮತ್ತು ಇಟಾಲಿ, ಸ್ವಿಜರ್ಲೆಂಡಗಳಲ್ಲೆಲ್ಲ ವಿದೇಶಿ ಪ್ರಯಾಣಿಕರಿಗೆ, ವಿಹಾರಿಗಳಿಗೆ ಪ್ರತ್ಯೇಕ ಅಂದರೆ ಅದಕ್ಕಾಗಿಯೇ ಮೀಸಲಾಗಿಟ್ಟ ಬಸ್ಸುಗಳಿವೆಯಂತೆ. ಯಾರೊಬ್ಬ ಟ್ಯಾಕ್ಸಿಡ್ರ್ಯಾವರನನ್ನು ಕೇಳಿದರೂ ಅವನಿಗೆ ಗೊತ್ತಿಲ್ಲದ ಸಂಗತಿಯಿಲ್ಲ. ಇದೇನು, ಅದೇನು ಎಂದು ಪ್ರಶ್ನಿಸಿದರೆ ಅವರು ಇತಿಹಾಸದ ಪ್ರಾಧ್ಯಾಪಕರಂತೆ ಎಲ್ಲಾ ವೃತ್ತವಿವರಗಳನ್ನೂ ಹೇಳುತ್ತಾರೆ. ಭಾರತದಲ್ಲಿನ್ನು ಆ ಬಗ್ಗೆ ವಿಶೇಷ ಲಕ್ಷ್ಯಕೊಡದಿರುವುದು ವಿಷಾದಕರವೆನ್ನುತ್ತಾಳೆ. ವಿದೇಶೀಯರು ತಮ್ಮ ತಮ್ಮ ದೇಶದ ಹಿರಿಮೆಯನ್ನೆತ್ತಿ ಪ್ರವಾಸಿಗಳನ್ನಾಕರ್ಷಿಸಲು ಮಾಡುವಷ್ಟು ಪ್ರಚಾರ ಭಾರತ ಸರಕಾರವಿನ್ನೂ ಮಾಡಿಲ್ಲ. “ನಮ್ಮ ದೇಶದಲ್ಲಿ ಚಿತ್ತಾಕರ್ಷಕ ಸಂಗತಿ ಸೋಜಿಗಗಳಿಲ್ಲವೇ? ತಾಜಮಹಾಲಿದೆ, ಅಜಂತಾ ಎಲ್ಲೋರ ಗವಿಗಳಲ್ಲಿ ಅಪ್ರತಿಮ ಶಿಲ್ಪವಿದೆ. ಕಾಶ್ಮೀರ-ನೀಲಗಿರಿಗಳಿವೆ. ಇನ್ನೆಷ್ಟೋ ಆಶ್ಚರ್ಯಕಾರಿ ವಿಷಯಗಳಿವೆ. ಪರದೇಶಿಯರದನ್ನೆಲ್ಲ ಕಂಡು ಬೆಕ್ಕಸ ಬೆರಗಾಗದಿಲ್ಲ. ಅಮೇರಿಕನರು ಬಂದರೆ ನಮಗೆ ಡಾಲರುಗಳೂ ಸಿಗುತ್ತವೆ. ಆದರೆ ತುಂಬಾ ಪ್ರಚಾರ ಕಾರ್ಯ ಸಾಗಬೇಕು. ವಿದೇಶದ ವಿಲಾಸೀ ಪ್ರವಾಸಿಗಳಿಗೆ ಬೇಕಾದ ಸವಲತ್ತುಗಳನ್ನೊದಗಿಸಿಕೊಡಬೇಕು. ಸರಕಾರವು ಬಹಳ ದಕ್ಷತೆಯಿಂದ ಈ ಕಾರ್ಯದಲ್ಲಿ ಮುಂದುವರಿಯಬೇಕು. ಅಲ್ಲದೆ ಉತ್ತಮ ಹೋಟೇಲು ಇರಬೇಕು” ಎಂದು ತನ್ನ

ಪರದೇಶದ ರೈಲು, ಮೋಟಾರು, ವಿಮಾನಗಳ ಮೂಲಕವಾದ ಸುಖಮಯ ಪ್ರವಾಸದ ವರದಿ ನೀಡಿದಳು.

ಮಾತಿಗೆ ಮಾತು ಸಾಗಿದಂತೆ ಸಮಯ ಸಂದುದು ನಮಗಿಬ್ಬರಿಗೂ ಗೊತ್ತೇ ಇಲ್ಲ. ನಾನು ಕೇಳುತ್ತಿದ್ದೆ; ಅವಳು ಹೇಳುತ್ತಿದ್ದಳು. ಪ್ರಶ್ನೋತ್ತರ ಮುಗಿಯಬೇಕಾದರೆ ದಾದರದ ಶ್ರೀ ಸೌಂಡ್ ಸ್ಟುಡಿಯೋದಿಂದ ಟೆಲಿಫೋನ್ ಕರೆ ಬರಲೇಬೇಕಾಯಿತು. ಅವಳು ನನಗೆ ಹದಿನೈದು ಮಿನಿಟಿನ ಅವಕಾಶಕ್ಕೆ ಒಪ್ಪಿದ್ದಳು. ಆದರೆ ನಿರುಪಾಯನಾದ ನಾನು ಅದರ ಮೂರು ಪಟ್ಟು ಅವಳ ಅಮೂಲ್ಯ ಸಮಯವನ್ನು ತೆಗೆದುಕೊಂಡೆ. ನಟನಟಿಯರು ಜನಪ್ರಿಯರಾಗಲು ಪ್ರಚಾರವೂ ಒಂದು ಸಾಧನವಲ್ಲವೇ? ಸಚಿತ್ರ "ಕರ್ಮವೀರ"ದ ಪರಿಚಯ ಮಾಡಿ ಕೊಟ್ಟು ನನ್ನ ಕ್ಯಾಮರಾ ಕೆಲಸವನ್ನು ಮುಗಿಸಿದೆ. ಅವಳಿಗೆ "ಮುಗುಳ್ನಗು" ಎನ್ನಬೇಕಾಗಿಲ್ಲ. ಪ್ರತ್ಯಕ್ಷ ಕಂಡರೂ ಅವಳೊಂದು ಚಿತ್ರ. ಚಿತ್ರದಲ್ಲಂತೂ ಕೇಳಲೇಬೇಡ.

ಅಷ್ಟರಲ್ಲೇ ಕಾರು ಬಂತು, ಸ್ಟೂಡಿಯೋವಿಗೆ "ಶೂಟಿಂಗ್"ಗೆ ಹೋಗಬೇಕಾಗಿದೆ. "ರೈಲು ನಿಲ್ದಾಣದತ್ತ ನಿಮಗೆ ಹೋಗಬೇಕಲ್ಲ- ಬನ್ನಿ ಕೂತುಕೊಳ್ಳಿ" ಎಂದಂತೆ ಕಾರು ಓಡಿತು. ದಾದರಿನಲ್ಲಿ ಅವಳ ಉಪಕಾರವನ್ನು ಸ್ಮರಿಸಿ ಧನ್ಯವಾದಗಳನ್ನು ಕೊಟ್ಟು ನಾನು ಇಳಿದೆ!

ಇತರ ಕಾಲೇಜುಗಳಲ್ಲಿರುವುದಕ್ಕಿಂತ ಮುಂಬಯಿಯ ಲಾ ಕಾಲೇಜಿನಲ್ಲಿ ಸ್ತ್ರೀ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿರುವುದಕ್ಕೆ ಪ್ರೊ. ಟೋಪೆಯವರು ಕೊಟ್ಟ ಕಾರಣ :

"ಹುಡುಗಿಯರು ಲಾಕ್ಕಿಂತ ಲಾಯರರನ್ನೇ ಮೆಚ್ಚುವಂತೆ ತೋರುತ್ತದೆ."

ಶ್ರೀಮತಿ ಕಮಲಾ ಡೋಂಗರಕೇರಿ
ಅವರಿಂದ



ಕರ್ನಾಟಕದ ಕಸೂತಿಗಾರ್ತಿಯರು

ಕರ್ನಾಟಕದ ಕಸೂತಿ ಕಲೆ

ಕಸೂತಿ ಕಲೆಯು ಹಿರಿಮೆಯನ್ನು ಜನ ಸಾಕಷ್ಟು ಅರಿತಿಲ್ಲ. ಕರ್ನಾಟಕವು ಕಸೂತಿ ಕಲೆಯಲ್ಲಿ ಯಾರಿಗೂ ಹಿಂದುಳಿದಿಲ್ಲ. ಅದರ ಇತಿಹಾಸ, ಕಲಾಪ್ರೌಢಿ, ಅದರ ಇಂದಿನ ಸ್ಥಿತಿಗತಿಗಳನ್ನು ಶ್ರೀಮತಿ ಕಮಲಾ ಡೋಂಗರಕೇರಿಯವರು ಆಳವಾಗಿ ಅಭ್ಯಸಿಸಿ ಬೆಳಕಿಗೆ ತಂದಿದ್ದಾರೆ.

ಕಸೂತಿ ಕಲೆಯು ಮಹತ್ವವನ್ನು ನಾವಿನ್ನೂ ಸರಿಯಾಗಿ ತಿಳಿದುಕೊಂಡಿಲ್ಲ. ಗೃಹಿಣಿಯು ವಿರಾಮಕಾಲದ ಕೈಗಾರಿಕೆಯಿದೆಂದು ಬಗೆಯಲಾಗಿದೆ. ಗೃಹಕೃತ್ಯದ ಅರಿವೆಅಂಚಡಿಗಳ ಶೃಂಗಾರ ಅಥವಾ ಅಲಂಕಾರವೇ ಈ ಕೈಗಾರಿಕೆಯ ಉದ್ದೇಶವೆಂದೂ ದೇಶದ ಆರ್ಥಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗಾಗಿ ನಾವು ಬೆಳೆಸಿಕೊಳ್ಳಬೇಕಾದ ಮಹತ್ವದ ಕೈಗಾರಿಕೆ-ಉದ್ಯಮಗಳಲ್ಲಿ ಅದಕ್ಕೆ ವಿಶೇಷ ಸ್ಥಾನವೇನೂ ಇಲ್ಲವೆಂದೂ ಸಾಮಾನ್ಯ ತಿಳಿವಳಿಕೆ. ಆದರೆ ಕಲಾದೃಷ್ಟಿಯಿಂದ ಕಸೂತಿಯ ಬೆಲೆ ಅದಕ್ಕಿಂತ ಎಷ್ಟೋ ಉನ್ನತವಾಗಿದೆಯೆಂದು ನಾವು ಮನಗಾಣಬೇಕು. ಅತ್ಯಲ್ಪ ಸಲಕರಣೆಗಳನ್ನುಪಯೋಗಿಸಿ, ಅತ್ಯಧಿಕ ಪ್ರಮಾಣದ ತಾಳ್ಮೆಯಿಂದ ದುಡಿದು ಸಾಧಿಸಬೇಕಾಗಿರುವ ಈ ಕಲೆಯು ಸೌಂದರ್ಯಾನುಸಂಧಾನದ ಒಂದು ಪ್ರಕಾರವಾಗಿರುವುದರಿಂದ ಅದರ ಕಲಾತ್ಮಕ ಮೂಲ್ಯವನ್ನು ನಾವು ಉಪೇಕ್ಷಿಸುವಂತಿಲ್ಲ. ಬದಲಾಗುತ್ತಿರುವ ಜನಜೀವನ, ಜನತೆಯ ಆಶೋತ್ತರ ಶ್ರದ್ಧಾವಿಶ್ವಾಸಗಳು, ವಿವಿಧ ಸಂಸ್ಕೃತಿಗಳ ಸಂಘರ್ಷದಿಂದ ಆದ ಮಾರ್ಪಾಟುಗಳು ಇವುಗಳ ಚಿತ್ರಮಾಲೆಯನ್ನು ನಮ್ಮ ಮುಂದೆ ಹಿಡಿಯುವ ಅದರ ಇತಿಹಾಸವೂ ಕೌತುಕಪ್ರದವಾಗಿದೆ.

ಕಸೂತಿಯ ಕಲೆ ಜಗತ್ತಿನ ವಿವಿಧ ಜನಾಂಗಗಳ ಮನಸ್ಸನ್ನು ಸೆರೆಹಿಡಿದಿದೆ. ಅದರ ಇತಿಹಾಸವೂ ಪ್ರಾಚೀನವಾಗಿದೆ. ಆಯಾ ಜನಾಂಗದ ಅದೃಷ್ಟ ಪರಿವರ್ತನೆಯೊಡನೆ ಅಲ್ಲಲ್ಲಿಯ ಕಸೂತಿ ಕಲೆ ಉತ್ಕರ್ಷ ಅಪಕರ್ಷಗಳನ್ನು ಕಂಡಿದೆ. ಮಧ್ಯಯುಗೀನ ಯುರೋಪಿನಲ್ಲಿ ಕಸೂತಿ ಕಲೆಗೆ ಚಿತ್ರಕಲೆಯ ಒಂದು ಮಹತ್ವದ ಶಾಖೆಯೆಂಬಷ್ಟು ಗೌರವವಿತ್ತು. ಎರಡರಲ್ಲಿಯೂ ಆಕೃತಿ, ವರ್ಣವಿನ್ಯಾಸಗಳ ಕಲ್ಪನೆಗೆ ಪ್ರಾಮುಖ್ಯವಿದೆ. ಅದರಲ್ಲಿಯೂ ಕಸೂತಿ ಸಾಮಾನ್ಯ ಜನರ—ವಿಶೇಷವಾಗಿ ಸ್ತ್ರೀಯರ—ಕಲಾಸ್ಫೂರ್ತಿಯ ವಾಹನವೆಂದು ಹೇಳಬಹುದು. ಚಿತ್ರಕಲೆಗೆ ಅವಶ್ಯವಾದ ಬೆಲೆಬಾಳುವ ಸಲಕರಣೆಗಳು ಇಲ್ಲಿ ಬೇಕಾಗಿಲ್ಲ. ಆದರಿಂದ ಬಡವರಿಗೂ ನಿಲುಕುವ ಕಲೆ ಇದು.

ಪಾಶ್ಚಾತ್ಯ ದೇಶಗಳಲ್ಲಿಯೂ ಕಸೂತಿ ಕಲೆಯ ಬೆಳವಣಿಗೆಯಾಗಿದ್ದರೂ ಅದರ ಜನನವಾದುದು ಪೌರಸ್ತ್ಯ ದೇಶಗಳಲ್ಲೇ ಎಂಬಲ್ಲಿ ಸಂದೇಹವಿಲ್ಲ. ಚೀನ, ಜಪಾನ, ಭಾರತ, ಏಶಿಯಾಮೈನರ್, ಅರಬಸ್ತಾನಗಳಲ್ಲಿ ಶತಮಾನಗಳ ವರೆಗೆ ಉತ್ಕರ್ಷ ಹೊಂದಿದ ನಂತರವೇ ಅದು ಇರಾಣಿ ಮತ್ತು ಚೀನಿ ವ್ಯಾಪಾರಿಗಳ ಮೂಲಕ ಪಾಶ್ಚಾತ್ಯ ದೇಶಗಳನ್ನು ಸೇರಿರಬೇಕು. ಆರನೇ ಶತಮಾನದಲ್ಲಿ ಇದು ಸಂಭವಿಸಿದಂತೆ ತೋರುತ್ತದೆ. ಏಕೆಂದರೆ ಅದಕ್ಕಿಂತ ಪೂರ್ವದಲ್ಲಿ ಯುರೋಪಿನಲ್ಲಿ ಈ ಕಲೆ ಪ್ರಚಲಿತವಾಗಿದ್ದುದಕ್ಕೆ ಆಧಾರ ದೊರೆಯುವುದಿಲ್ಲ. ಆದರೆ ಪೂರ್ವ ದೇಶಗಳಲ್ಲಿ ಕ್ರಿ. ಪೂ. ೧೫೦೦ ರಿಂದಲೇ ಕಸೂತಿ ಪ್ರಚಲಿತವಾಗಿದ್ದಿತೆಂದು

ಲಿಖಿತ ದಾಖಲೆಗಳಿಂದ ಅನುಮಾನಿಸಬಹುದಾಗಿದೆ.

ಭಾರತದ ಮಟ್ಟಿಗೆ ಹೇಳುವುದಾದರೆ ವೇದ ಮತ್ತು ಪುರಾಣಗಳಲ್ಲೇ ಈ ಕಸೂತಿಗೆ ಸಂಬಂಧಿಸಿದ ಉಲ್ಲೇಖಗಳನ್ನು ಕಾಣಬಹುದು. ಭಾರತೀಯರಲ್ಲಿ ಸೂಜಿಯ ಉಪಯೋಗದ ಬಳಕೆ ಮುಸ್ಲಿಮರ ಆಕ್ರಮಣದ ನಂತರವೇ ಬಂತೆಂದೂ ಆದ್ದರಿಂದ ಕಸೂತಿ ಕಲೆ ಇಲ್ಲಿ ಈಚೆಗಿನದೆಂದೂ ತೋರಿಸಲು ಪಾಶ್ಚಾತ್ಯ ಇತಿಹಾಸಲೇಖಕರು ಪ್ರಯತ್ನಿಸುವುದುಂಟು. ಆದರೆ ಋಗ್ವೇದದಲ್ಲಿಯೂ ಐತರೇಯ ಬ್ರಾಹ್ಮಣದಲ್ಲಿಯೂ ಬರುವ ಸ್ತೋತ್ರಾತ್ಮಕ ಋಕ್ಕುಗಳಲ್ಲಿ ಹೊಲಿಗೆ, ಸೂಜಿಗಳ ಸ್ಪಷ್ಟ ಉಲ್ಲೇಖಗಳಿವೆ. ''ಪೇಶಸ್'' ಎಂಬ ವೈದಿಕ ಶಬ್ದವಂತೂ ಕಸೂತಿವಾಚಕವೆಂದೇ ಹಲ ವಿದ್ವಾಂಸರ ಮತ. ''ಪೇಶಸ್ಕರಿ'' ಯೆಂದರೆ ಕಸೂತಿ ಹಾಕುವ ಹೆಂಗಸೆಂದು ಅರ್ಥ. ಮೆಗಾಸ್ತನೀಸನು ಅತಿ ನವಿರಾದ ಮಖಮಲ್ಲಿನ ಮೇಲೆ ಹೂಗಳನ್ನು ಹಾಕುವುದರಲ್ಲಿ ಭಾರತೀಯರು ಪ್ರವೀಣರಾಗಿದ್ದರೆಂದು ಹೇಳುತ್ತಾನೆ. ನಾನಾ ಲೌಕಿಕ ಸುಖಸಾಧನಗಳ ಸಹಿತ ಪೆಟ್ಟಿಗೆಯಲ್ಲಿಟ್ಟು ಹೆಣವನ್ನು ಹುಗಿಯುವ ಸಂಪ್ರದಾಯ ಹಿಂದುಗಳಲ್ಲಿ ಇಲ್ಲವಾದ್ದರಿಂದ ಇಜಿಪ್ತ ಮೊದಲಾದೆಡೆಗಳಲ್ಲಿ ಉತ್ಖನನ ಮಾಡಿದಾಗ ದೊರೆತಂತೆ ಇಲ್ಲಿ ಕಸೂತಿ ಹಾಕಿದ ಪ್ರಾಚೀನಕಾಲದ ಬಟ್ಟೆಬರೆಗಳು ದೊರೆತಿಲ್ಲ, ಅಷ್ಟೆ.

ಕ್ರಿ. ಶ. ನಾಲ್ಕನೇ ಶತಕದಲ್ಲಿ ಉಚ್ಛ್ರಾಯಕ್ಕೆ ಬಂದ ಗುಪ್ತರ ಆಳಿಕೆಯ ಕಾಲ ಭಾರತೀಯ ಇತಿಹಾಸದ ''ಸ್ವರ್ಣಯುಗ''ವೆಂದು ಹೇಳಬಹುದು. ಆ ಕಾಲದ ಕಾಲಿದಾಸನ ನಾಟಕಗಳಲ್ಲಿ ಬರುವ ವಸ್ತ್ರವರ್ಣನೆಗಳು ಆಗ ಉತ್ತಮ ತರಗತಿಯ ಕಸೂತಿ ಕಲೆ ಇದ್ದಿತೆಂಬುದಕ್ಕೆ ಸಾಕ್ಷಿಯಾಗಿವೆ. ಬಾಣಭಟ್ಟನ ''ಹರ್ಷಚರಿತ್ರ''ದಲ್ಲಿ ಹರ್ಷನ ಬಟ್ಟೆಗಳನ್ನು ಸ್ಫುಟವಾಗಿ ವಿವರಿಸಲಾಗಿದೆ. ಅದರಲ್ಲಿ ''ನೇತ್ರ'' ವಸ್ತ್ರದ ಉಲ್ಲೇಖವಿದೆ. ನೇತ್ರವೆಂದರೆ ಚಿನ್ನದ ಜರದ ಕೆಲಸ ಮಾಡಿದ ನವಿರಾದ ಬಟ್ಟೆಯೆಂದು ಕಾವೆಲ್ಲನ ಅಭಿಪ್ರಾಯ.

ಇಷ್ಟು ಪ್ರಾಚೀನ ಕಾಲದಿಂದ ಭಾರತದಲ್ಲಿ ಕಸೂತಿ ಕಲೆಯಿತ್ತೆಂದು ಹೇಳಿದಾಕ್ಷಣ ಮುಸ್ಲಿಮರಿಂದ ನಾವೇನೂ ತೆಗೆದುಕೊಂಡಿಲ್ಲವೆಂದು ಅರ್ಥವಲ್ಲ. ಮುಸ್ಲಿಮ ಅರಸರೂ ಅಮೀರರೂ ಈ ಕಲೆಗೆ ಪ್ರೋತ್ಸಾಹ ಕೊಟ್ಟು ಬೆಳೆಸಿದಂತೆ, ಮುಸ್ಲಿಮ ಕಸಬುದಾರರ ಕಲಾಕೌಶಲವು ಭಾರತೀಯ ಕಸೂತಿಯ ಅಪೂರ್ವ ಸೌಂದರ್ಯಸಿದ್ಧಿಗೆ ಅಪಾರ ಸೇವೆ ಮಾಡಿದೆ. ಇಂದಿಗೂ ಕೆಲ ವಿಶಿಷ್ಟ ಪ್ರಕಾರದ ಕಸೂತಿಗಳಲ್ಲಿ ಮುಸ್ಲಿಮ ಕೆಲಸಗಾರರೇ ಹೆಚ್ಚು ಸಂಖ್ಯೆಯಲ್ಲಿ ತೊಡಗಿರುವುದೂ ಇನ್ನೂ ಕೆಲವು ಪ್ರಕಾರಗಳಲ್ಲಿ ಅವರು ಅದ್ವಿತೀಯ ಕೌಶಲ ಪಡೆದಿರುವುದೂ ಕಂಡುಬರುತ್ತದೆ. ಅದೇ ಪ್ರಕಾರ ಲವಾಣೆಗಳು, ಬಂಜಾರರು, ಪಶ್ಚಿಮಘಟ್ಟ ಮತ್ತು ಖಾಸಿ ಪರ್ವತನಿವಾಸಿಗಳು ಮತ್ತು ಈ ವರೆಗೆ ಅಪರಾಧಿ ಜನಾಂಗಗಳೆಂದು ಪರಿಗಣಿಸಲ್ಪಟ್ಟದ್ದವರೇ ಮೊದಲಾದ ದೇಶಸಂಚಾರಿ ಕುಲಗಳ ಜನರು ಈ ಕಲೆಯ ಮೇಲ್ಮೆಗೆ ತಮ್ಮ ಸೇವೆ ಸಲ್ಲಿಸಿದ್ದಾರೆ. ಅವರ ಹೆಣ್ಣುಮಕ್ಕಳು ತೊಡುವ ಕಸೂತಿ ಹಾಕಿದ ಲಂಗಗಳು ಮನೋಹರವಾಗಿವೆ.

ಇಂದಿನ ಭಾರತೀಯ ಕಸೂತಿ ಮೇಲೆ ಹೇಳಿದಂತೆ ಹಲವು ಸಂಸ್ಕೃತಿಗಳ ಸಂಘರ್ಷದ ಫಲವಾಗಿದೆ. ಅಲ್ಲಲ್ಲಿಯ ಹವಾಮಾನ, ನೈಸರ್ಗಿಕ ಆವರಣ, ದೊರೆಯುವ ಸಲಕರಣೆಗಳು, ಜನರ ಆರ್ಥಿಕ ಸಾಮಾಜಿಕ ಸ್ಥಿತಿಗತಿಗಳು ಮತ್ತು ಧಾರ್ಮಿಕ ವಿಶ್ವಾಸಗಳು ಎಲ್ಲ ಕಲೆಗಳಂತೆ ಕಸೂತಿ ಕಲೆಗೂ ಪ್ರೇರಕವಾಗಿರುವವು. ಈ ಸ್ವಾಭಾವಿಕ ಪ್ರೇರಣೆಗಳೊಡನೆ ಬಾಹ್ಯ ಸಂಪರ್ಕದ ಪ್ರಭಾವವೂ ಸೇರಿ ಭಾರತದಲ್ಲಿ ಅಪೂರ್ವ ವೈವಿಧ್ಯದ ಮತ್ತು ನಾನಾ ನಾಮರೂಪಗಳ ಕಸೂತಿ ಕಲೆ ಬೆಳೆದು ಬಂದಿದೆ. ಕಾಶ್ಮೀರದ ಜಗತ್ಪ್ರಸಿದ್ಧ "ಕಸೀದಾ'', ಪಂಜಾಬದ "ಫೂಲಕರಿ'', ಸಿಂಧ ಬಲೂಚಿಸ್ತಾನಗಳ ಅರಬೀ ಪ್ರಭಾವತೋರಿಸುವ ಕಸೂತಿ, ಗುಜರಾಥ ಮಹಾರಾಷ್ಟ್ರಗಳ "ಜರದೋಜಿ'', ಕಚ್ಛದ ಹಂಸ-ಪುಷ್ಪಮಯ ಕಸೂತಿಗಳು, ಕಾಠೇವಾಡದ ಪತ್ರಪುಷ್ಪ




ಕಾಳಿಂಗನ ಮಡದ ಆಕೃತಿ

ಮಯ ಕಸೂತಿಗಳು ಉತ್ತರ ಪ್ರದೇಶದ "ಚಿಕನಕರಿ'' ಕರ್ನಾಟಕದ ಕಸೂತಿ, ಬಂಗಾಲದ "ಕಂಥಾ'', ತಿರ್ವಾಂಕೂರಿನ ಲೇಸು—ಪ್ರತಿಯೊಂದೂ ಭಾರತದ ಸಂಸ್ಕೃತಿಯ ಏಕಸೂತ್ರದಲ್ಲಿ ಹೆಣೆಯಲ್ಪಟ್ಟಿದ್ದರೂ ಅಲ್ಲಲ್ಲಿಯ ಆವರಣ, ಜನಮನದ ಒಲವು, ಪರಕೀಯ ಪ್ರಭಾವದ ಸಮ್ಮಿಲನ ಇವುಗಳಿಂದ ವರ್ಣವಿನ್ಯಾಸ, ಕುಸುರು ಗೆಲಸ, ಆಕೃತಿಕಲ್ಪನೆ ಇವುಗಳಲ್ಲಿ ತನ್ನದೇ ಆದ ವೈಶಿಷ್ಟ್ಯವನ್ನು ಪ್ರದರ್ಶಿಸುತ್ತದೆ. ಭೂತಲನಂದನವನವಾದ ಕಾಶ್ಮೀರದ ಕಸೂತಿಗೆ ಚೀನದಿಂದ ಇರಾಣದ ಮೂಲಕ ಎರವು ತಂದ ಪರಂಪರೆಯೇ ಬುನಾದಿಯಾಗಿದ್ದರೂ ಕಾಶ್ಮೀರದ ರಥರೂಪಿ ಸಸ್ಯಗಳೂ ಅನಂತ ಪುಷ್ಪಸಂಪತ್ತಿಯೂ ಅಲ್ಲಿಯ ಕಲೆಯ ಮೇಲೆ ತಮ್ಮ ಅಚ್ಚಳಿಯದ ಮುದ್ರೆಯನ್ನೊತ್ತಿವೆ. ಇದೇ ಬಗೆಯಾಗಿ ಪ್ರತಿಯೊಂದು ಪ್ರದೇಶದಲ್ಲಿ ಕಾಣಬರುವ ವೈವಿಧ್ಯಕ್ಕೂ ಒಂದೊಂದು ಪ್ರಾಕೃತಿಕ ಹಿನ್ನೆಲೆ, ಇತಿಹಾಸ, ಪ್ರಭಾವ ಇದೆ.

ಇತಿಹಾಸದ ಮುದ್ರೆ ಕಸೂತಿಯ ಮೇಲೆ ಬಿದ್ದದ್ದು ಕರ್ನಾಟಕದಲ್ಲಿ ಎದ್ದುಕಂಡಂತೆ ಬೇರೆಲ್ಲಿಯೂ ಕಾಣಿಸುವುದು ವಿರಳ. ಮುಂಬಯಿ ಕರ್ನಾಟಕದ ಜಿಲ್ಲೆಗಳ ಕಸೂತಿ ಕಲೆ ಪ್ರಸಿದ್ಧವಾಗಿದೆ. ಚಾಲುಕ್ಯ ಮತ್ತು ವಿಜಯನಗರ ರಾಜ್ಯಗಳ ಉಚ್ಛ್ರಾಯ ಕಾಲವು ಕರ್ನಾಟಕದ ನಾನಾ ಕಲೆಗಳ ಉನ್ನತಿಕಾಲವೂ ಹೌದು. ಒಂದಾನೊಂದು ಕಾಲದಲ್ಲಿ ಚಾಲುಕ್ಯ ಮತ್ತು ವಿಜಯನಗರ ರಾಜ್ಯಗಳು ಮೆರೆದುಹೋದ ಪ್ರದೇಶಗಳಲ್ಲೆ ಕರ್ನಾಟಕದ ಕಸೂತಿ ಕಲೆಯ ಅತ್ಯುತ್ತಮ ವೈಖರಿಯನ್ನು ನಾವಿಂದು ಕಾಣುತ್ತೇವೆ. "ಕಶಿದಾನ್'' ಎಂಬ ಪರ್ಶಿಯನ್ ಶಬ್ದವೇ ಕನ್ನಡದಲ್ಲಿ ಕಸೂತಿಯೆಂದು ರೂಪಾಂತರ ಹೊಂದಿದೆ. ಏಳನೇ ಶತಮಾನದಲ್ಲಿ ಎರಡನೇ ಪುಲಿಕೇಶಿಯ ಆಳಿಕೆಯಲ್ಲಿ ಇರಾಣಕ್ಕೂ ಕರ್ನಾಟಕಕ್ಕೂ ರಾಜಕೀಯ ಸಂಪರ್ಕವಿದ್ದಿತೆಂಬುದನ್ನು ಇಲ್ಲಿ ನೆನೆದುಕೊಳ್ಳಬಹುದು.

ಬಾದಾಮಿಯ ಗುಹಾಲಯಗಳಲ್ಲಿ ಕಾಣಿಸುವ ಅಪ್ರತಿಮ ಶಿಲ್ಪದ ಕೌತುಕಗಳಿಗೆ ಯಾವುದು ಸ್ಫೂರ್ತಿಯಿತ್ತಿತ್ತೋ ಅದೇ ಕರ್ನಾಟಕದ ಕಸೂತಿಗೂ ಪ್ರೇರಣೆಯನ್ನಿತ್ತಿರಬೇಕೆಂದು ಊಹಿಸಬಹುದಾಗಿದೆ. ಧಾರ್ಮಿಕ ಜಾಗೃತಿ ಮತ್ತು ಭಕ್ತಿಯ ಉದ್ದೀಪನೆಯು ಯಾವ ಬಗೆಯ ವೈಯಕ್ತಿಕ ಕೀರ್ತಿಕಾಂಕ್ಷೆಗಳಿಂದಲೂ ದೂಷಿತವಾಗದ ಉಚ್ಚತಮ ಧ್ಯೇಯವಾದವನ್ನು ಶಿಲ್ಪಿಗಳ ಹೃದಯದಲ್ಲಿ ತುಂಬಿ ತುಳುಕಿಸಿ, ಅವರ ಕಲ್ಪನೆಯನ್ನು ಉತ್ತೇಜಿಸಿ, ನೀಸ್ಪೃಹ ಕಲಾಸೃಷ್ಟಿಯ ಭವ್ಯ ವಾಸ್ತುಗಳನ್ನು ಅವರ ಕೈಯಿಂದ ನಿರ್ಮಾಣ ಮಾಡಿಸಿದವು. ಆದರೆ ಗಂಡಸರು, ತಮ್ಮ ದೇಹದಾರ್ಢ್ಯವನ್ನುಪಯೋಗಿಸಿ ಕಗ್ಗಲ್ಲಿನಿಂದ ಕಲಾವೈಭವವನ್ನು ಸೃಷ್ಟಿಸುತ್ತಿದ್ದಾಗಲೇ ಮನೆಯ ನೆರಳಲ್ಲಿ, ತಮ್ಮ ಕೋಮಲ ಹಸ್ತಗಳಿಂದ, ಆದರೆ ಅದೇ ಉಚ್ಚತರ ಧ್ಯೇಯಾತ್ಮಕ ಪ್ರೇರಣೆಯ ರಭಸಕ್ಕೊಳಗಾಗಿ, ಗೃಹಿಣಿಯರು ಕಸೂತಿಯ ಕಲೆಯ ಮೂಲಕ



ರಥ

ತಮ್ಮ ಕಲಾಭಿರುಚಿಯನ್ನು ವ್ಯಕ್ತಗೊಳಿಸುತ್ತಿದ್ದಿರಬೇಕು. ಇಲ್ಲಿ ಉಬ್ಬಿದ ಮಾಂಸಖಂಡಗಳ ಬಲ ಇಲ್ಲವೆಂದಾಕ್ಷಣ ಇದಕ್ಕೆ ಕಾರಣವಾದ ಪ್ರೇರಣೆಯ ಬಲ ಕಡಿಮೆಯಾಗಿತ್ತೆಂದಾಗಲಿ ಇದರಲ್ಲಿ ಕಲಾದೃಷ್ಟಿ, ಕಲ್ಪನಾಚಾತುರ್ಯಗಳ ಅವಶ್ಯಕತೆ ಮುಂದವಾಗಿತ್ತೆಂದಾಗಲಿ ತಿಳಿಯಕೂಡದು. ನಾಡಿನಲ್ಲಿ ಚಿರಂತನವಾಗಿ ನಿಲ್ಲಬಲ್ಲ ಭವ್ಯ ವಾಸ್ತುಗಳಿಗಾಗಿ ಗಂಡಸರು ಕಲ್ಲುಗಳನ್ನು ಕೆತ್ತುತ್ತಿದ್ದಾಗ ಹೆಂಗಸರು ತಮ್ಮ ಪರಿಮಿತ ಆವರಣವನ್ನು ಅಲಂಕರಿಸುವ ಹಂಬಲದಿಂದ ಕೈಗೆ ಬಂದ ವಸ್ತ್ರಗಳ ಮೇಲೆ ತಮ್ಮ ಚಪಲ ಹಸ್ತದಿಂದ ಸೂಜಿಯನ್ನು ನಡೆಸುತ್ತಿದ್ದರು. ಮೂಲತಃ ಮನೆಮಂದಿಯ ಸಂತೋಷಕ್ಕಾಗಿ ಹೆಂಗಸು ಈ ಕಲೆಯನ್ನು ಅವಲಂಬಿಸಿರಬೇಕು. ಈ ನಿರಭಿಮಾನ ಕಲಾಕೃತಿಗಳು ಸಮಾಜದ ಚಿತ್ರವನ್ನು ಸೆಳೆಯಬಹುದೆಂಬ ನಿರೀಕ್ಷೆ ಅವಳ ಮನಸಿನಲ್ಲಿ ಎಂದೂ ಇದ್ದಿರಲಾರದು.

ಕರ್ನಾಟಕದ ಕಸೂತಿ ಕಲೆಯ ಪ್ರಾಚೀನತೆಯ ಬಗ್ಗೆ ಸಂಶಯಕ್ಕೆಡೆಯಿಲ್ಲ. ಅಜಂತದ (೫, ೬ ನೆ ಶತಮಾನಗಳು) ಚಿತ್ರಗಳಿಂದ ಈ ಕಲೆ ಆಗಿನ ಕಾಲದಲ್ಲಿಯೂ ಪ್ರಚಲಿತವಾಗಿತ್ತೆಂದು ತೀರ್ಮಾನಿಸಬಹುದು. ೧೧-೧೨ ನೇ ಶತಮಾನಗಳಿಗೆ ಸೇರಿದ ಬ್ರಾಹ್ಮೀ ವಿಗ್ರಹವೊಂದು ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯಲ್ಲಿದೆ. ಅದರ ಉಡುಗೆಯ ಮೇಲೆ ಕಸೂತಿಯ ಆಕೃತಿಗಳು ಸ್ಪಷ್ಟವಾಗಿ ಗೋಚರಿಸುತ್ತಿವೆ. ಕನ್ನಡ ಸಾಹಿತ್ಯದಲ್ಲಿ ಅಲ್ಲಲ್ಲಿ ಬರುವ ಉಲ್ಲೇಖಗಳೂ ಚಾಲುಕ್ಯ, ಹೊಯ್ಸಳ, ವಿಜಯನಗರ ಅರಸರ ಕಾಲದಲ್ಲಿ ಈ ಕಲೆಗೆ ರಾಜಾಶ್ರಯವಿತ್ತೆಂದು ಊಹಿಸಲೆಡೆ ಮಾಡಿವೆ.

ಕರ್ನಾಟಕದಲ್ಲಿ ಕಸೂತಿಯ ಮನೋಹರ ಮಾದರಿಗಳು ಇಂದಿಗೂ ದೊರೆಯುತ್ತಿರುವುದು ವಿಜಾಪುರ ಮತ್ತು ಧಾರವಾಡ ಜಿಲ್ಲೆಗಳಲ್ಲಿ. ಬೆಳಗಾವಿ ಜಿಲ್ಲೆಯಲ್ಲಿಯೂ ಜತ್ತಿ, ಸಾಂಗಲಿ, ಮಿರಜಿ, ಜಮುಖಂಡಿಗಳಲ್ಲಿಯೂ ಪಶ್ಚಿಮದಲ್ಲಿ ಗೋವೆಯವರೆಗೂ ಕಸೂತಿಯ ಕೆಲಸ ಪ್ರಚಲಿತವಾಗಿದೆ. ನೆರೆಯ ಮಹಾರಾಷ್ಟ್ರದಲ್ಲಿಯೂ ಈ ಕಲೆಯ ಗುರುತುಗಳು ಲಭ್ಯವಾಗುತ್ತವೆ. ಆದರೆ ಅಲ್ಲಿ ಅದು ಹೆಚ್ಚು ಸರಳವೂ ಕಡಿಮೆ ಕಲಾತ್ಮಕವೂ ಆದ ರೂಪದಲ್ಲಿ ಪ್ರಕಟವಾಗುತ್ತದೆ. ದಂಡಯಾತ್ರೆ, ರಾಜಕಾರಣ ಮೊದಲಾದ ಸಾಹಸಗಳಿಗೆ ಹೆಚ್ಚು ಮನತೆತ್ತ ಮಹಾರಾಷ್ಟ್ರವು ಈ ಕೋಮಲ ಕಲೆಗೆ ಅಷ್ಟು ಗಮನವೀಯಲಿಲ್ಲವೇನೊ.

ಧಾರ್ಮಿಕ ಜಾಗೃತಿ ಕರ್ನಾಟಕದ ಕಲೆಗೆ ಮುಖ್ಯ ಪ್ರೇರಣೆಯಾಗಿತ್ತೆಂದು ಹೇಳಿದೆಯಷ್ಟೆ. ವಸ್ತುತಃ ಕರ್ನಾಟಕದ ಕಸೂತಿಯಲ್ಲಿ ವಿಪುಲವಾಗಿ ದೊರೆಯುವ ಆಕೃತಿಗಳಿಗೂ ದೇವಾಲಯಗಳ ಶಿಲ್ಪದ ಆಕೃತಿಗಳಿಗೂ ತುಂಬ ಹೋಲಿಕೆಯಿದೆ. ಗೋಪುರ, ಕಮಲ, ರಥ, ದೇವರನ್ನು ಕೂಡಿಸಿದ ಪಲ್ಲಕ್ಕಿ ಮೊದಲಾದ ಆಕೃತಿಗಳು ಉತ್ತರ ಚಾಲುಕ್ಯ ಕಾಲದ ಶಿಲ್ಪಕಲಾ ಸಂಪ್ರ



ಶಂಖಿನ ಕಮಲ

ದಾಯಕ್ಕೆ ಋಣಿಯಾದಂತಿವೆ. ಅದಕ್ಕಿಂತಲೂ ಸರಳ ಆಕೃತಿಗಳೆಂದರೆ ತುಳಸಿಕಟ್ಟೆ, ತೊಟ್ಟಿಲು, ಬಸವ ಮೊದಲಾದ ದೈನಂದಿನ ವಸ್ತುಗಳ ಅನುಕೃತಿಗಳು. ಮೃಗಗಳಲ್ಲಿ ಆನೆ-ಅಂಬಾರಿ, ಗರಿಗೆದರಿದ ನವಿಲು, ಮತ್ತು ಸ್ವಲ್ಪ ವಿರಳವಾಗಿ ಒಮ್ಮೊಮ್ಮೆ ಕುದುರೆ, ಹುಲಿ, ಸಿಂಹಗಳನ್ನು ಉಲ್ಲೇಖಿಸಬಹುದು. ಪುಷ್ಪಾಕೃತಿಗಳೂ ಹೇರಳವಾಗಿ ಸಿಗುತ್ತವೆ. ಕಮಲಪುಷ್ಪ ಅತ್ಯಂತ ಜನಪ್ರಿಯ ಆಕೃತಿಯಾಗಿದ್ದು ಅದರ ಹೊರ ಅಂಚನ್ನು ತುಂಬಲು ಗಿಳಿ, ಹಂಸ, ಶಂಖ, ಗೆಜ್ಜೆಗಳ ಆಕೃತಿಗಳನ್ನು ತೆಗೆಯುವುದುಂಟು. ಅನೇಕ ಆಕೃತಿಗಳು ಭೂಮಿತಿಯ ಆಕೃತಿಗಳಂತಿರುವುವು.

ಬಾಹ್ಯಸಂಪರ್ಕದ ಪರಿಣಾಮುವನ್ನು ತೋರಿಸುವ ಆಕೃತಿಗಳೆಂದರೆ ಅಜಂತದ ಭಿತ್ತಿಚಿತ್ರಗಳಲ್ಲಿ ಮತ್ತು ದಕ್ಷಿಣ ಭಾರತದಲ್ಲಿ ಕಾಣಿಸುವ ಕಲಶದ ಮೇಲೆ ನಿಂತ ನಾಲ್ಕು ಎರಳೆಗಳ ಆಕೃತಿಯಿಂದ ಸ್ಫೂರ್ತವಾದ ಎರಡು, ನಾಲ್ಕು, ಎಂಟು ಎರಳೆಗಳನ್ನೊಳಗೊಂಡ ಆಕೃತಿಗಳು. "ವರಹ-ಗೋಡಂಬಿ'' ಎಂಬ ಇನ್ನೊಂದು ಆಕೃತಿಯು ಭಾರತದ ಕಸೂತಿ ಕೆಲಸದಲ್ಲಿ ಬೇರೆ ಕಡೆ ವಿಪುಲವಾಗಿರುವ ಮಾವಿನ ಹಣ್ಣಿನ ಆಕೃತಿಯ ರೂಪಾಂತರವೇ. "ಬಾಸಿಂಗ'' ಮತ್ತು "ಕಾಲಿಂಗನ ಮಡ''ದ ಆಕೃತಿಗಳು ದಕ್ಷಿಣ ಭಾರತದ ಸಂಸ್ಕೃತಿಯ ಪ್ರಭಾವದ ದ್ಯೋತಕವಾಗಿವೆ.

ಕರ್ನಾಟಕದ ಕಸೂತಿಯ ನೈಜ ಕಲಾವೈಖರಿಯನ್ನು ಕಾಣಬೇಕಾದುದು ಅದರ ವರ್ಣವಿನ್ಯಾಸ ಚಮತ್ಕಾರದಲ್ಲಿ. ಬರಿ ಒಂದೆರಡೇ ಬಣ್ಣಗಳನ್ನು ಉಪಯೋಗಿಸಿದ ಕಸೂತಿಯ ಮಾದರಿಗಳು ತೀರ ವಿರಳ. ಈ ಬಗೆಯ ಕಸೂತಿಯ ಜೀವಾಳವೇ ವರ್ಣವೈಖರಿಯೆನ್ನಬಹುದು. ಕೆಂಪು, ಕುಂಕುಮ ನೇರಳೆ, ಹಸುರು, ಕಿತ್ತಳೆ ಮೊದಲಾದ ಬಣ್ಣಗಳ ಮಧುರ ವಿನ್ಯಾಸದಲ್ಲಿ ಕಸೂತಿಗಾರಳ ಕಲಾದೃಷ್ಟಿ ದೃಗ್ಗೋಚರವಾಗುತ್ತದೆ.

ಮೊದಮೊದಲು ಹೆಂಗಸರು ಸೀರೆಯ ಕರೆ ಕತ್ತರಿಸಿ ಸಿಗುವ ಅರ್ಧ ಗೇಣುದ್ದದ ರೇಶ್ಮೆ ನೂಲಿನ ತುಣುಕುಗಳಿಂದ ಕಸೂತಿಹಾಕುತ್ತಿದ್ದರೆಂದು ತೋರುವುದು. ಕಸೂತಿ ಕೆಲಸಕ್ಕೆ ಬೇಕಾದ ರೇಶ್ಮೆ ನೂಲು ಈಗ ಮೈಸೂರಿನಿಂದ ಬರುತ್ತದೆ. ಹಿಂದೆ ಅದನ್ನು ಕಲಕತ್ತೆ, ಮುರ್ಶಿದಾಬಾದಗಳಿಂದ ತರಿಸಿ ವಿಜಾಪುರದಲ್ಲಿ ಅದಕ್ಕೆ ಬಣ್ಣ ಹಾಕುತ್ತಿದ್ದರು. ಈ ಬಂಗಾಲಿ ರೇಶ್ಮೆ "ಭಂಗಾರ ಗುಂಡು'' ಎಂದು ಹೆಸರಾಗಿತ್ತು. ಅದಕ್ಕೂ ಮೊದಲು ಕಸೂತಿಯ ರೇಶ್ಮೆ ಚೀನದಿಂದ ಬರುತ್ತಿತ್ತಂತೆ.

ಕರ್ನಾಟಕದಲ್ಲೆಲ್ಲ ಹೆಸರಾದ ಇಳಕಲ್ಲ ಸೀರೆ ಮತ್ತು ಖಣಗಳೇ ಈ ಕಸೂತಿ ಕೆಲಸದ ಮುಖ್ಯ ವಾಹನ. ನವಿರಾದ ಕರಿಬಣ್ಣದ ಮೈ, ಅಗಲವೂ ಆಕರ್ಷಕವೂ ಆದ ರೇಶ್ಮೆ ಸೆರಗು, ಸುಂದರವಾದ ಎದ್ದು ಕಾಣುವ ರೇಶ್ಮೆ ಅಂಚು ಇರುವ ಈ ಸೀರೆಗಳಲ್ಲಿ ಕರಿಯ (ನೂಲಿನ) ಮೈಯ ಮೇಲೆ ಮಾತ್ರ ಕಸೂತಿ ಹಾಕುವುದು ರೂಢಿ. ಸೆರಗಿನ ಬಳಿ ಗೋಪುರ, ಆನೆ ಮೊದಲಾದ ದೊಡ್ಡ ಆಕೃತಿಗಳಿಂದ ಆರಂಭ ಮಾಡಿ, ಸೆರಗಿನಿಂದ ದೂರ ಹೋದಂತೆಲ್ಲ ಚಿಕ್ಕದಾಗುತ್ತ ಕೊನೆಗೆ ಬರಿ ಚುಕ್ಕಿಗಳಾಗುವ ವಿವಿಧಾಕೃತಿಗಳು, ನಡು ನಡುವೆ ಸಾಲಾಗಿ ಹೂಗಳು—ಇದು ಸೀರೆಯ ಮೇಲಿನ ಕಸೂತಿಯ ಸಾಮಾನ್ಯ ಯೋಜನೆ. ಯಾವ ಆಕೃತಿಯೂ ಪುನರುಕ್ತವಾಗದಿರುವುದು ಇದರ ಒಂದು ವೈಶಿಷ್ಟ್ಯ.

ಕಸೂತಿಯ ಹೊಲಿಗೆಯ ವಿಧಾನಗಳು ನಾಲ್ಕು: ಗಂಟ, ನೇಗಿ, ಮೆಂತಿ ಮತ್ತು ಮುರಗಿಯೆಂದು. ಇದರಲ್ಲಿ ಗಂಟಿ ಎಲ್ಲಕ್ಕೂ ಹೆಚ್ಚು ಪ್ರಚುರವಾದುದು. ಕಸೂತಿಯ ಈ ಪ್ರಕಾರದಲ್ಲಿ ಹಿಂಬದಿ ಮುಂಬದಿಗಳೆರಡರಲ್ಲೂ ಒಂದೇ ಆಕೃತಿ ಬರುವಂತೆ ಮುಂಬದಿಯಲ್ಲಿ ಹಾಕಿದ ಸೂಜಿಯನ್ನು ಹಿಂಬದಿಯಲ್ಲಿ ತಿರುಗಿ ಮೂಲಸ್ಥಾನಕ್ಕೆ ತರಬೇಕಾಗುವುದು. ಎರಡೂ ಕಡೆ ಅಷ್ಟೇ ಚನ್ನಾಗಿ ಮತ್ತು ಏಕರೂಪವಾಗಿ ಆಕೃತಿ ಬಿದ್ದರೇನೇ ಈ ಬಗೆಯ ಕಸೂತಿಯಲ್ಲಿ ಪಟುತ್ವಬಂತೆಂದು ಪರಿಗಣಿಸಲಾಗುತ್ತದೆ. ಇದಕ್ಕೆ ಅಸಾಧಾರಣ ಕೈಚಳಕವೂ ಬೇಕಾಗುತ್ತದೆ. ಸರಳ ಮತ್ತು ದುಂಡನ್ನ ರೇಖೆಗಳಿಂದ ಕೂಡಿದ ಅಪೂರ್ವ ಸುಂದರಾಕೃತಿಗಳನ್ನು ಈ ಪದ್ಧತಿಯಿಂದ ತೆಗೆಯುತ್ತಾರೆ. "ನೇಗಿ'' (ನೆಯ್ಗೆ) ಪದ್ಧತಿಯಲ್ಲಿ ಸೂಜಿ ನೇರವಾಗಿ ಮುಂದೆ ಮುಂದೆ ಹೊಕ್ಕು ಹೊರಡುವುದರಿಂದ ನೆಯ್ಗೆಯನ್ನು ಹೋಲುವ ಆಕೃತಿಗಳುಸಿದ್ಧವಾಗುವುವು. ಇದರಲ್ಲಿ ಹಿಂಬದಿಯು ಮುಂಬದಿಗಿಂತ ಬೇರೆ ಬಗೆಯಾಗುತ್ತದೆ; ಆದರೂ ಹಿಂಬದಿಯೂ ಓರಣವಾಗಿಯೇ ಕಾಣುತ್ತದೆ. ಈ ಪದ್ಧತಿಯಲ್ಲಿ ಬರುವ ಆಕೃತಿಗಳಲ್ಲಿ ಹಲವನ್ನು ಮಗ್ಗದವರು ಅನುಸರಿಸಿದ್ದಾರೆ. ನವಿಲಿನ ಕೆದರಿದ ಗರಿಗಳಂಥ ಹಿನ್ನೆಲೆಯ

ರಚನೆಯ ಕಾರ್ಯದಲ್ಲಷ್ಟೆ "ಮೆಂತಿ" ಹೊಲಿಗೆ ಉಪಯೋಗಕ್ಕೆ ಬರುತ್ತಿದ್ದು ಅದಕ್ಕೆ ಹಿಡಿಯುವ ದಾರವೂ ಹೆಚ್ಚು, ಹಿಂಬದಿಯಲ್ಲಿ ಅದು ತುಸು ಅಂದಗೇಡಾಗಿಯೂ ಕಾಣುತ್ತದೆ. "ಮುರಗಿ"ಯೆಂದರೆ ಹೆಸರೇ ಸೂಚಿಸುವಂತೆ ಅಂಕುಡೊಂಕು ಹೊಲಿಗೆ.

ಕರ್ನಾಟಕದ ಕಸೂತಿಯ ಕೆಲಸದ ಒಟ್ಟು ಪರಿಣಾಮವನ್ನು ನಿರೀಕ್ಷಿಸಿದರೆ ಅದು ಅತ್ಯಂತ ಪರಿಪೂರ್ಣವಾಗಿದೆ. ಈ ಕುಂದಿಲ್ಲದ ಪರಿಪೂರ್ಣತೆಯೇ ಅದರ ಒಂದು ಕುಂದೇನೋ ಎನಿಸುತ್ತದೆ; ಏಕೆಂದರೆ ಎಷ್ಟೋ ವೇಳೆ ಕೈಕಸೂತಿಯನ್ನು ನೇಯ್ಗೆಯ ಅಥವಾ ಮುದ್ರಿತ ಆಕೃತಿಯೆಂದು ಭ್ರಮಿಸುವಷ್ಟು ಅದು ಅಚ್ಚುಕಟ್ಟಾಗಿರುತ್ತದೆ. ಕಸೂತಿ ಗುರ್ತು ತೆಗೆಯುವ ಆಕೃತಿಗಳ ಆಕಾರಶುದ್ಧತೆ ಪ್ರಶಂಸನೀಯವಾದುದು. ಏಕೆಂದರೆ ಕ್ಯಾನವಾಸಿನ ಸಹಾಯವಿಲ್ಲದೆ ಪ್ರತ್ಯಕ್ಷವಾಗಿ ಬಟ್ಟೆಯ ಮೇಲೆಯೇ ಆಕೃತಿಯನ್ನು ಕಸೂತಿ ಹಾಕುವ ಕೌಶಲ್ಯವೇನೂ ಸಾಮಾನ್ಯವಲ್ಲ. ಆಕೃತಿಗಳು ಪ್ರಮಾಣಬದ್ಧವಾಗುವಂತೆ ರಂಗವಲ್ಲಿಯಲ್ಲಿ ಮಾಡುವ ಹಾಗೆಯೇ ಕಸೂತಿಯಲ್ಲಿಯೂ ಚುಕ್ಕಿಗಳನ್ನಿಟ್ಟು ಯೋಜಿಸುವ ರೂಢಿಯುಂಟು.

ಈ ಪ್ರಕಾರ ಕರ್ನಾಟಕದ ಕಸೂತಿ ಕಲೆಗೆ ತನ್ನದೇ ಇತಿಹಾಸ, ಪರಂಪರೆ ಇದೆ; ಮತ್ತು ಕಲಾಕೌಶಲ್ಯದ ಉನ್ನತ ಮಟ್ಟದಿಂದ ಹೇಳುವುದಾದರೆ ಉಜ್ವಲ ಭವಿತವ್ಯವೂ ಇದೆ-ಅಥವಾ ಇರಬೇಕಾದ್ದು ವಿಹಿತ. ಆದರೆ ಈ ಭವಿತವ್ಯದ ವಿಷಯದಲ್ಲಿ ಮಹತ್ವದ ಅಡಚಣೆಗಳಿವೆ. ಇವುಗಳಲ್ಲಿ ಮುಖ್ಯವಾದುದು ಸಾರ್ವಜನಿಕರ ಪ್ರೋತ್ಸಾಹದ ಅಭಾವ.

ಕಸೂತಿ ಕಲೆಯು ಒಂದು 'ಮನೆ ಕೈಗಾರಿಕೆ'ಯ ಮಟ್ಟಕ್ಕೇರಿಲ್ಲ. ಬಹುಶಃ ಅದು ಮಾರಾಟ ಮಾಡಬಹುದಾದ ಕಲೆಯೆಂದು ಅದರ ಪ್ರವರ್ತಕರಿಗೆ ಅನಿಸಿರಲಿಕ್ಕಿಲ್ಲ. ಸುಂದರವಾದ ಕಸೂತಿ ಹಾಕಿ ತಂತಮ್ಮ ಕುಪ್ಪಸ, ಸೀರೆಯ ಸೆರಗು, ಮಕ್ಕಳ ಕುಂಚಿಗೆ-ಕುಲಾಯಿಗಳನ್ನು ಅಲಂಕರಿಸುವಷ್ಟು ಕೈಚಳಕವನ್ನು ಪಡೆಯುವುದು ಗೃಹಿಣೀತ್ವದ ಒಂದು ಸಾರ್ಥಕ್ಯವೆಂದು ಅವರು ಬಗೆದಿರಬೇಕು; ಆದರಿಂದಲೇ ಗೃಹಿಣಿ ಸಂತುಷ್ಟಳಾಗುತ್ತಿದ್ದಳು. ಸಾಮಾನ್ಯ ಗೃಹಿಣಿಯರಿಗೆ ಕಸೂತಿಯ ತಯಾರಿ ಉಡುಗೆ ತೊಡುಗೆಗಳನ್ನು ಕೊಂಡುಕೊಳ್ಳುವಷ್ಟು ಅನುಕೂಲವೂ ಇರಲಿಲ್ಲ. ಹೀಗೆ ಇದು ಒಂದು 'ಕೈಗಾರಿಕೆ'ಯಾಗಿ ಬೆಳೆಯದೆ ಕಲೆಯಾಗಿ ಮಾತ್ರ ಉಳಿಯಿತು. ಆದರೂ ಅನೇಕ ಸ್ಥಳಗಳಲ್ಲಿ ಸಂಜೆಯ ವಿರಾಮದ ಹೊತ್ತಿನಲ್ಲಿ ಅಂಗಳದಲ್ಲಿ ನೆರೆದು ಹರಟೆ ಹೊಡೆಯುತ್ತ ಚುರುಕು ಬೆರಳುಗಳಿಂದ ಸುಂದರ, ನಾನಾ ವರ್ಣರಂಜಿತ ಆಕೃತಿಯ ಕಸೂತಿಯನ್ನು ಹಾಕುತ್ತಿರುವ ಹೆಂಗಸರ ಕೂಟಗಳನ್ನು ಇಂದಿಗೂ ಕಾಣಬಹುದು. ಕಸೂತಿ ಕಲೆಯು ಎಲ್ಲ ಜಾತಿಪಂಥಗಳ, ವೃತ್ತಿ ಉದ್ಯೋಗಗಳ ಜನರಲ್ಲಿ ಪ್ರಚಲಿತವಾಗಿದೆ. ಹೊಟ್ಟೆಯ ಪಾಡಿಗಾಗಿ ದಿನವಿಡೀ ದುಡಿಯಬೇಕಾಗುವ ಜನರಲ್ಲಿಯೇ ಈ ಕಲೆಯ ಆರಾಧಕರು ಇರುವರೆಂಬುದು ಆಶ್ಚರ್ಯಕರ ಮತ್ತು ಮೆಚ್ಚತಕ್ಕ ವಿಷಯ. ಸೌಂದರ್ಯಾರಾಧನೆ ಯಾವೊಂದು ವರ್ಗದ ಮೀಸಲು ಸೊತ್ತಲ್ಲವೆಂದು ಇದು ತೋರಿಸುತ್ತದೆ. ಉಚ್ಚ ವರ್ಗದವರಲ್ಲಿ ಕಸೂತಿಯ ಕಲೆ ಮೆಲ್ಲ ಮೆಲ್ಲಗೆ ಮರವೆಗೀಡಾಗುತ್ತಿದೆ. ಅವರು ತಮ್ಮ ಬಟ್ಟೆ ಬರೆಗಳಿಗೆ ಕಸೂತಿ ಹಾಕುವುದರಲ್ಲಿ ಆಸಕ್ತಿ ತೋರಿಸುತ್ತಿಲ್ಲ; ಬದಲಿಗೆ ತಯಾರಿ ಕಸೂತಿ ಸರಕುಗಳನ್ನು ಕೊಳ್ಳುತ್ತಾರೆ. ಶ್ರೀಮಂತರ ಮನೆಗಳಲ್ಲಿ ಕಸೂತಿ ಹೀಗೆ ಅಸ್ತಂಗತವಾಗುತ್ತಿದ್ದರೆ ಬಡವರ ಮನೆಗಳಲ್ಲಿ ಜೀವನಸಂಗ್ರಾಮ ದಿನೇ ದಿನೇ ಕಷ್ಟತರವಾಗುತ್ತಿರುವುದರಿಂದಲೂ ಅಗ್ಗವಾದ ಪ್ರಿಂಟ್ ಮತ್ತು ನೇಯ್ಗೆಯ ಮಾದರಿಗಳು ಪೇಟೆಯಲ್ಲಿ ಸಿಗುತ್ತಿರುವುದರಿಂದಲೂ ಕಸೂತಿ ಅವನತಿ ಹೊಂದುತ್ತಿದೆ. ಕನ್ನಡಿತಿಯ ಅನೇಕ ಕಸೂತಿ ಮಾದರಿಗಳನ್ನು ಮುಗ್ಗದವರು ಪ್ರತಿ ತೆಗೆದುಬಿಟ್ಟಿದ್ದಾರೆ. ಇದೂ ಕಸೂತಿ ಕಲೆಯ ಅವನತಿಗೆ ಕಾರಣವಾಗಿದೆ.

ಮುಗ್ಗದ ಕೆಲ ಮಾದರಿಗಳು ಕಸೂತಿಯ ಆಕೃತಿಗಳನ್ನು ಹೋಲುತ್ತಿರುವುದು ನಿಜ. ಆದರೆ ನಿಜವಾದ ಕಲಾಪ್ರೇಮಿಗಳು ಯಂತ್ರದಲ್ಲಿ ಹುಟ್ಟಿದ ಮಾದರಿಗಳಿಗೆ ಮನಸೋಲದೆ ಕೈಕೆಲಸದವನ್ನೇ ಮೆಚ್ಚುತ್ತಾರೆ. ಕಸೂತಿಯವರು ನಿಜವಾದ ಕಲಾವಿದರು. ಅವರು ಬರಿ ಹಳೆಯ ಮಾದರಿಗಳನ್ನೇ ಪ್ರತಿ ತೆಗೆಯುವುದರಲ್ಲಿ ಸಂತುಷ್ಟರಾಗದೆ ನವನವೋನ್ಮೇಷಶಾಲಿಗಳಾಗಿ ಹೊಸ ಹೊಸ ಆಕೃತಿಗಳನ್ನು ತಯಾರಿಸುತ್ತಿರುತ್ತಾರೆ. ಮುಗ್ಗದ ಮಾದರಿಗಳು ಕೆಲ ಕಾಲದಲ್ಲಿ ಚರ್ವಿತಚರ್ವಣವಾಗಿಬಿಡುತ್ತವೆ. ಮುಗ್ಗದ ವಸ್ತುಗಳು ಕಸೂತಿಯನ್ನು ಮೂಲೆಗುಂಪುಮಾಡಿಬಿಟ್ಟರೆ ಅದು ದುರ್ದೈವವೇ ಸರಿ.

ಆದರೆ ಕಲಾವಿದರಿಗೆ ಯೋಗ್ಯ ಪುರಸ್ಕಾರ, ಪ್ರತಿಫಲ ದೊರೆಯದಿದ್ದರೆ ಕಲೆ ಬಹಳ ಕಾಲ ಬಾಳುವುದು ಶಕ್ಯವಿಲ್ಲ. ಕಲಾವಿದರಿಗೆ ಪ್ರೋತ್ಸಾಹ ಅತ್ಯಗತ್ಯ. ಪ್ರಿಂಟಿನ ಮತ್ತು ಮುಗ್ಗದ ನಾನಾ ಮಾದರಿಗಳು ಪೇಟೆಯನ್ನು ಆಕ್ರಮಿಸಿದ ಈ ಕಾಲದಲ್ಲಿ ದೇಶದ ಸಂಸ್ಕೃತಿಯ ಒಂದು ಅಮೂಲ್ಯ ಪ್ರಕಾರವಾದ ಕಸೂತಿ ಕಲೆಯನ್ನು ಉಳಿಸಿಕೊಂಡು ಹೋಗಬೇಕಾದರೆ ಅದಕ್ಕೆ ಬುದ್ಧಿಪೂರ್ವಕ ಪ್ರಯತ್ನ ಅವಶ್ಯ. ಕೆಲವರು ಇಂಥ ಪ್ರಯತ್ನದಲ್ಲಿ ತೊಡಗಿರುವುದರಿಂದಲೇ ಅದಿನ್ನೂ ಪೂರ್ತಿ ಅಳಿಯದೆ ಉಳಿದಿದೆ. ಕೆಲ ಕನ್ನಡ ಹೆಣ್ಣು ಮಕ್ಕಳ ಸಾಲೆಗಳೂ ಧಾರವಾಡದ ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜೂ ಕಸೂತಿ ಕಲೆಯನ್ನು ಕಲಿಸುತ್ತಿವೆ. ಗದುಗಿನಲ್ಲಿ ಒಂದು ಮಿಶನರಿ ಕೇಂದ್ರವೂ ತನ್ನ ಹಾಸ್ಟೆಲಿನ ಸ್ತ್ರೀ-ಬೋರ್ಡರುಗಳ ಸಹಾಯದಿಂದ ವಿಶಿಷ್ಟ ಮಾದರಿಯ ಕಸೂತಿ ಕೆಲಸಗಳನ್ನು ಮಾಡಿಸುತ್ತಿದೆ. ಆದರೆ ಸಾರ್ವಜನಿಕರಿಂದ ಈ ಕಲೆಗೆ ದೊರೆಯುತ್ತಿರುವ ಪ್ರೋತ್ಸಾಹ ಕಡಿಮೆ. ಇದ್ದ ಪ್ರೋತ್ಸಾಹವೂ ಈಚೆಗೆ ಇಳಿಮುಖವಾಗುತ್ತಿರುವ ಲಕ್ಷಣಗಳಿವೆ. ಕಸೂತಿ ಕಲೆಯ ಪ್ರಶಸ್ತಿಯನ್ನು ಹೆಚ್ಚು ಪ್ರಚಾರ ಮಾಡುವದವಶ್ಯ. ಅದು ಅಪೇಕ್ಷಣೀಯವಾದ, ಸಂಗ್ರಾಹ್ಯವಾದ ಶ್ರೇಷ್ಠ ಕಲೆಯೆಂಬ ಭಾವನೆಯನ್ನು ಬೆಳೆಸಬೇಕು. ಜನತೆಯು ಕೈಕಸೂತಿಯ ಬಟ್ಟೆಬರೆಗಳನ್ನು ಆದರದಿಂದ ಕೊಂಡು, ಮತ್ತು ಈ ಕಲೆಯನ್ನು ಜೀವನವೃತ್ತಿಯಾಗಿ ಮಾಡಿಕೊಂಡವರಿಗೆ ಪ್ರೋತ್ಸಾಹಕೊಟ್ಟು, ಅದರ ಪುನರುಜ್ಜೀವನಕ್ಕೆ ನೆರವಾಗಬೇಕು.

[ಈ ಲೇಖದ ರಚನೆಗೆ ಶ್ರೀಮತಿ ಕಮಲಾ ಎಸ್. ಡೊಂಗರಕೇರಿಯವರು ಇಂಗ್ಲಿಷಿನಲ್ಲಿ ಬರೆದ "The Romance of Indian Embroidery" ಎಂಬ ಗ್ರಂಥದಲ್ಲಿನ ವಿಷಯ ಸಂಗ್ರಹವು ಆಧಾರವಾಗಿದೆ. ಚಿತ್ರಗಳನ್ನೂ ಅಲ್ಲಿಂದಲೇ ಆಯ್ದುಕೊಳ್ಳಲಾಗಿದೆ. ಆ ಗ್ರಂಥದಲ್ಲಿ ಕರ್ನಾಟಕದ ಕಸೂತಿ ಕಲೆಗೆ ಒಂದು ಅಧ್ಯಾಯವು ಮೀಸಲಾಗಿದೆ. ಈ ಗ್ರಂಥದ ಪ್ರಕಾಶಕರು Thakcer & Co. Ltd., Rampart Row' Fort Bombay. ಬೆಲೆ: ರೂ. ೧೨-೮-೦]

ಶ್ರೀ. ವೈ. ಎಂ. ಷಣ್ಮುಖಯ್ಯ,
ಬಿ. ಎ., ಅವರಿಂದ



ಸಂಜೆ ಮುಂಜಾನೆ ಬೀಬಿಗೆ ಅಮೀರನ ಉಡುಗರೆ

ಕಾಂತೆ ಪೇಳಿದಳೆನಗೆ ನಿಜ ಕತೆಯನೊಂದ

(ಚಿಕ್ಕ ಕತೆ)

ಅಮೀರನ ಎದೆಯ ಹುಣ್ಣು ಡಾಕ್ಟರರ ಚಿಕಿತ್ಸೆಗೂ ಮೀರಿತ್ತು. ಆದರೆ ಅವನಿಗೆ ವಿಶ್ವಾಸವೆಂಬ ಔಷಧಿ ಅಮೃತವಾಯಿತು.

ಬರಿ ಮೈಯಲ್ಲಿ ಮಲಗಿದ್ದಾಗ ಎದೆಯಮೇಲೆ ಕೈಯಾಡಿಸುತ್ತ ಎದೆಯ ಗುಂಡಿಯಲ್ಲಿದ್ದ ಘಾಯದ ಕಲೆಯನ್ನು ನೋಡಿ ನಿಟ್ಟುಸಿರುಕರೆಯುತ್ತ ಹೇಳಿದಳು: 'ಎಂಥ ಘಾಯ!' ಎದೆಯ ಮೇಲಿನ ಹುಣ್ಣನ್ನು ನೋಡಿ ಅವಳು ಶೋಕಿಸಿದ್ದಳು. ಈಗ ಆ ಘಾಯದ ಕಲೆಯನ್ನು ನೋಡಿ ನಡುಗುವಳು. ಎದೆಯ ಒಳಗಿನ ಘಾಯುಗಳನ್ನು, ಮನಸ್ಸಿನೊಳಗಿನ ಹಲವು ಘಾಯದ ಕಲೆಗಳನ್ನು ಅವಳು ಅರಿಯಳೇನೋ!

'ನಿಮಗೀ ಹುಣ್ಣು ಎದ್ದಾಗ, ನನಗೆ ಬಲು ಭಯವಾಗಿತ್ತು.'

'ಏಕೆ, ಅದು ಅಂಥ ಕೆಟ್ಟ ಹುಣ್ಣೆ?'

'ಹೌದು, ನಾನು ಡಾಕ್ಟರುಗಳನ್ನೂ ಕೇಳಿದ್ದೆ. ಅವರೂ ಬಹಳ ಎಚ್ಚರಿಕೆಯಿಂದ ಇರಬೇಕೆಂದು ಹೇಳಿದ್ದರು. ಆದರೆ ನಿಮಗೆ ಅದರ ಭಯವೇ ಇರಲಿಲ್ಲ.'

'ಭಯ ಇದ್ದಿತೇನೋ, ಹುಣ್ಣಿನ ನೋವನ್ನು ಅನುಭವಿಸುತ್ತಿರುವಾಗ ಭಯದ ನೋವನ್ನೂ ಕೂಡಿಸಿ ಏಕೆ ಅನುಭವಿಸಬೇಕು?'

'ಆದರೆ ನನಗೆ ಬಹಳ ಭಯ, ಅದು ಗುಣವಾಗದಿದ್ದರೇನು ಗತಿ, ಎಂಬ ಕಳವಳ. ನನ್ನ ಸ್ನೇಹಿತೆಯರು ಹಲವರು ಡಾಕ್ಟರುಗಳನ್ನು ಕೇಳಿದ್ದೆ. ಅವರು ಅದು ಬಹಳ ಅಪಾಯದ ಸ್ಥಳವೆಂದೂ ಬಹು ಎಚ್ಚರಿಕೆಯಿಂದ ಅದಕ್ಕೆ ಚಿಕಿತ್ಸೆಯಾಗಬೇಕೆಂದೂ ಹೇಳಿದ್ದರು. ಹುಣ್ಣು ಒಳಗಿನ ಎಲುಬಿನ ತನಕ ಹೋದರೆ ಆ ಮೃದು ಎಲುಬಿನ ಮೇಲೂ ಅದು ಹಬ್ಬಿ ಗುಣವಾಗುವುದೇ ಇಲ್ಲವಂತೆ.'

'ಓ, ನಿನಗೆ ಇಷ್ಟೆಲ್ಲ ತಿಳಿಯುವುದೆಂದು ನನಗೆ ತಿಳಿದಿರಲಿಲ್ಲ.'

'ಯಾಕೆ ತಿಳಿಯುವುದಿಲ್ಲ? ನಮ್ಮಲ್ಲಿನ ಒಬ್ಬ ಆಳಿಗೂ ಹೀಗೆ ಆಗಿ, ರಣರಂಪವಾಗಿ, ಕೊನೆಗೆ ಹುಳು ಕೂಡ ಬಿದ್ದಿತ್ತು. ಎದೆಯ ಗುಂಡಿಗೆಯ ಮೇಲಿನ ಹುಣ್ಣು ಅಂಥ ಭಯಂಕರ ವ್ರಣ.'

'ಹೌದೇ? ಅದೇನು ವಿಷಯ ಹೇಳು.'

* * * *

ಆವನ ಹೆಸರು ಅಮೀರ್. ಇವರು ಹುಡುಗರಾಗಿದ್ದಾಗ ಇವರ ಮನೆಯ ಸೇವಕ. ಅವನು ಅಂಥ ಬಡವನೇನೂ ಅಲ್ಲ. ಆತನಿಗೂ ಕೊಂಚ ಜಮೀನು ಇತ್ತು. ಅವನಿಗೆ ಅಣ್ಣ, ತಮ್ಮ, ತಾಯಿ ಇದ್ದರು. ಅವರು ಮನೆಜಮೀನು, ದನಕರು ನೋಡಿಕೊಳ್ಳುತ್ತಿದ್ದರು.

ಅಮೀರನ ತಾಯಿಯನ್ನು ಇವರು ಬೂಬಮ್ಮ ಎನ್ನುತ್ತಿದ್ದರು. ಅಮೀನಾಬೀ—ಕುಲಸಂಬೀ ಏನೊ ಇಂಥ ಹೆಸರಿರಬೇಕು. ಈ ಹುಡುಗರು ಕರೆಯುತ್ತಿದ್ದುದು ಆಕೆಯನ್ನು ಬೂಬಮ್ಮ ಎಂದು. ಆಕೆ ಲಂಗ ದಾವಣಿ ಹಾಕುತ್ತಿದ್ದ ಹೆಂಗಸು. ಆಕೆ ಎತ್ತರವಾಗಿದ್ದಳಂತೆ; ತುಂಬಿದ ಮೈಯವಳಂತೆ; ಬೆಳ್ಳಗಿದ್ದಳಂತೆ; ಅರಳಿದ ಮುಖದ ಚಲುವೆಯಂತೆ. ವಯಸ್ಸಿನ ಮುಕ್ಕಳಿದ್ದರೂ ಆಕೆಯ ಚೆಲುವು ಇನ್ನೂ ಮಾಸದೆ ಇತ್ತು.

ಅಮೀರನು ಅವಳ ಕಣ್ಣು ಮಣಿ. ಇವನ ಜೀವದ ಉಸಿರು ಆ ತಾಯಿ. ಆ ತಾಯಿ ಆಕಾರ ರೂಪಗಳಿಂದ ಉನ್ನತಳಾಗಿದ್ದಂತೆ, ಗುಣದಲ್ಲೂ ಉನ್ನತಳಾಗಿದ್ದಳು. ಅಂಥ ತಾಯಿಯನ್ನು ಪ್ರೀತಿಸುವುದು, ಅವಳಲ್ಲಿ ಭಕ್ತಿಯಿಡುವುದು ಏನೂ ಅಂಥ ವಿಶೇಷವಲ್ಲವೇನೊ.

ಆದರೆ ಅಮೀರನ ಬಗೆ ತನ್ನ ತಾಯಿಯ ಬಗ್ಗೆ ಒಂದು ವಿಶೇಷ ನಡವಳಿಕೆಯಿಂದ ಕೂಡಿತ್ತು. ತಾಯಿಗೆ ಉಪಚಾರ ಈತನೇ ಮಾಡಬೇಕು. ತಾಯಿ ವೃದ್ಧೆಯಲ್ಲ, ತನ್ನ ಉಪಚಾರ ತಾನೇ ಮಾಡಿಕೊಳ್ಳಬಲ್ಲಳು. ಆದರೂ ಮಗ ಮಾಡುವನು. ಇವನ ಅಣ್ಣನಿಗೂ ಇವನಿಗೂ ಆಕೆ ಮದುವೆ ಮಾಡಿದ್ದಳು. ಅಣ್ಣನ ಹೆಂಡತಿ, ತನ್ನ ಗಂಡನೂ ತಾನೂ ಸೇರಿ ಬೇರೆ ಹೋಗಬೇಕೆಂಬ ಪ್ರಯತ್ನ

ಸಫಲವಾಗದಿರಲು, ಆಕೆ, ಜಗಳವಾಡಿಕೊಂಡು ತೌರು ಸೇರಿದ್ದಳು. ಅಮೀರನ ವಿಲಕ್ಷಣ ಸಂಸಾರ ವ್ಯವಹಾರವಿದು: ಬೆಳಗಿನಲ್ಲಿ ಎದ್ದು ಮುಖ ಕೈಕಾಲು ತೊಳೆದುಕೊಂಡು ತಾನು ನಾಸ್ತ ಮಾಡುವ ಮೊದಲು ತನ್ನ ಹೆಂಡತಿಯನ್ನು ಕರೆಯಬೇಕು; ಅವಳು ಮಾತಿಲ್ಲದೆ ಬರಬೇಕು; ಬಂದು ಮೌನವಾಗಿ ಇವನ ಎದುರು ನಿಂತು ಕೈಚಾಚಬೇಕು; ಇವನು ಬೆತ್ತ ತೆಗೆದುಕೊಂಡು ಅವಳಿಗೆ ಏಳು ಏಟು ಹಾಕಬೇಕು. ಈ ಏಳು ಏಟು ಏತಕ್ಕೆ? ಅವಳು ದಿನವೆಲ್ಲ ಏನೂ ತಪ್ಪುಮಾಡದಿರಲು, ಸಂಸಾರದಲ್ಲಿ ಕಲಹ ತರದಿರಲು, ಇದು, ಈ ಏಟು ಆವಳಿಗೆ ಎಚ್ಚರಿಕೆ. ಈತ, ರಾತ್ರಿ, ತನ್ನ ಚಾಕರಿ ಮುಗಿಸಿಕೊಂಡು ಮನೆಗೆ ಬಂದು, ಊಟ ಮುಗಿಸಿ ಮಲಗುವಾಗ, ಮತ್ತೆ, ಈ ಬೀಬೀ ಜಾನ್— ಹೆಂಡತಿ ಮಾತಿಲ್ಲದೆ ಕೈಚಾಚಬೇಕು. ಈ ಬಹಾದ್ದೂರ್ ಸಾಬಿ ಮತ್ತೆ ಏಳು ಏಟು ಹೊಡೆಯಬೇಕು, ಆ ಕೋಮಲ ಅಂಗೈಯ ಮೇಲೆ. ಅದೇತಕ್ಕೆಎನ್ನುವಿರಿ ಅಲ್ಲವೆ? ಹಗಲಿನಲ್ಲಿ ಏನಾದರೂ ತಪ್ಪು ಮಾಡಿದ್ದಕ್ಕೆ ರಾತ್ರಿ ಈ ಏಳು ಹೊಡೆತ. ತರ್ಕಶಾಸ್ತ್ರದಲ್ಲಿ ''ಹಾರ್ನ್ಸ ಆಫ್ ಎ ಡೈಲೆಮ'' (ಉಭಯ ಸಂಕಟ) ಎನ್ನುವುದಿಲ್ಲವೆ? ಹಾಗೆ ಈ ತುರುಕರವನ ಶಿಕ್ಷೆ-ಶಿಕ್ಷಣ; ಮಾಡದಿರುವುದಕ್ಕೆ ಏಟು, ಮಾಡಿರಬಹುದಾಗಿದ್ದಿತೇನೊ ಎಂದೂ ಏಟು. ಅಲೆಗ್ಸಾಂಡ್ರಿಯದ ಬಹು ಪ್ರಾಚೀನ ಗ್ರಂಥ ಭಾಂಡಾಗಾರವನ್ನು ಮುಸಲ್ಮಾನರು ನಾಶಗೊಳಿಸಿದಾಗ ಅವರು ಹೇಳಿದ ಕಾರಣ ಪ್ರಸಿದ್ಧವಾಗಿದೆಯಲ್ಲವೆ? ಖೊರಾನಿನಲ್ಲಿ ಹೇಳಿರುವ ವಿಷಯಗಳನ್ನು ಈ ಪುಸ್ತಕಗಳೂ ಹೇಳಿದ್ದರೆ ಅವು ನಿರುಪಯುಕ್ತ. ಆದ್ದರಿಂದ ಈ ಪುಸ್ತಕಾಲಯ ನಾಶವಾಗಬೇಕು. ಖೊರಾನಿನಲ್ಲಿ ಹೇಳಿರದ ವಿಷಯ ಹೇಳಿದ್ದರೆ ಇವು ಅಸತ್ಯ ಬೋಧಿಸುವ ಗ್ರಂಥಗಳು. ಆಗಲೂ ಇವು ನಾಶವಾಗಬೇಕು. ಇದೂ ಹಾಗೆಯೆ, ಈ ಅಮೀರನ ಹೆಂಡತಿಯನ್ನು ಆಳುವ ಗಂಡತನ.

ತನ್ನ, ಈ, ಹೆಂಡತಿಯ ಮೇಲೆ ನಡೆಸುವ ಹತೋಟಿಯನ್ನು ಅಮೀರ್ ಈ ಹುಡುಗರೊಂದಿಗೆ ಹೇಳಿಕೊಳ್ಳುತ್ತ, 'ನಿಮಗೂ ನಿಮ್ಮ ಯಜಮಾನ್ರು ಹೀಂಗೆ ಹದ್ದಿನಲ್ಲಿ ಇಡ್ತಾರ್ರಮ್ಮಣ್ಣೀ' ಎನ್ನುತ್ತಿದ್ದ ನಂತೆ ಕುಚೋದ್ಯದಿಂದ.

'ನಾನೂ ನಿನಗೆ ಹಾಗೇ ಮಾಡಲೆ-ಬೆಳಿಗ್ಗೆ ಏಳು ಏಟು, ಸಂಜೆ ಏಳು ಏಟು?' ಎಂದು ಕೇಳಿದೆ. ಕಥೆ ಹೇಳದೆ ಸಿಡುಕಿಕೊಂಡು, ಕೊಸರಿಕೊಂಡು ಹೋದಳು. ಬೆಣ್ಣೆ ತೋರಿಸದೆ ಎಷ್ಟೋ ಬೆಣ್ಣೆಯಂಥ ಮಾತಾಡಬೇಕಾಯಿತು.

ಇದು ಹೆಂಡತಿಯ ಮೇಲಿನ ಹತೋಟಿ. ಇನ್ನು ತಾಯಿಯ ಸೇವೆ. ತಲೆನೋಡಿಸಿಕೊಳ್ಳುವ ಹೆಂಗಸನ್ನು ಕಂಡರೆ ನಮಗೆ-ಗಂಡಸರಿಗೆ ಮನಸ್ಸಿಗೆ ಅಂಥ ಅಸಹ್ಯವಾಗುತ್ತದೆ. ಅದು, ಹೆಂಗಸರಿಗೆ ನಾವು ಗಡ್ಡ ಬೋಳಿಸಿಕೊಳ್ಳುವಷ್ಟು ಪುನರಾವರ್ತವಾಗುವ ಕೆಲಸವೇನೋ. ಅದರಲ್ಲೂ, ಆ ಬೂಬಮ್ಮಳಿಗೆ ಅದರ ಆವಶ್ಯಕತೆ ಹೆಚ್ಚಿರಬೇಕು. ತನ್ನ ತಾಯಿಯ ತಲೆ ನೋಡಲು ಈತ ತನ್ನ ಹೆಂಡತಿಗೆ ಬಿಡುತ್ತಿರಲಿಲ್ಲ; ಅವಳು ಸರಿಯಾಗಿ ನೋಡಳೇನೋ. ತಾನೇ ನೋಡಬೇಕು. ಹೆಂಗಸಿನ ತಲೆ ಹೇನು ಗಂಡಸು ನೋಡಿ ಕುಕ್ಕುವುದು ಕಲ್ಪನೆಗೂ ಹೊಳೆಯುದಲ್ಲವೆ? ಆದರೆ ಈತ, ಯೌವನಸ್ಥನಾದ ಈತ, ವೃದ್ಧೆಯಲ್ಲದ ತನ್ನ ತಾಯಿಯ ತಲೆಯ ಹೇನನ್ನು ನೋಡಬೇಕು. ಕಣ್ಣಿಟ್ಟು ಆರಿಸಿ, ಆ ಹೀನಜಂತುವನ್ನು ತೆಗೆದು ಕುಕ್ಕಬೇಕು. ತನ್ನ ತಾಯಿಗೆ ನಡೆಸುವ ಉಪಚಾರಗಳಲ್ಲಿ ಇದೂ ಒಂದು. ತಾಯಿಯ ಸೀರೆ ಲಂಗಗಳನ್ನು ಒಗೆಯುತ್ತಿದ್ದನೇನೋ. ಅವಳು ಒಪ್ಪುವಂತಿದ್ದರೆ ತಾಯಿಗೆ ಸ್ನಾನವನ್ನೂ ಮಾಡಿಸುತ್ತಿದ್ದನೇನೊ. ಇಂಥ ನಿಷ್ಠೆ, ಇಂಥ ಶ್ರದ್ಧೆ ತಾಯಿಯ ಮೇಲೆ ಅಮೀರನಿಗೆ ಇದ್ದಿತು.

ಒಂದು ದಿನ, ಅಮೀರನ ಎದೆಯ ಮೇಲೆ, ಗುಂಡಿಗೆಯ ಮಧ್ಯದಲ್ಲಿ ಕುರು ಕಾಣಿಸಿತು. ಅದನ್ನು ಉಪೇಕ್ಷಿಸಿದ, ಅದು ಕೀವುಗಟ್ಟಿತು. ನವೆಯಾಯಿತೆಂದು ನಿದ್ದೆಗಣ್ಣಿನಲ್ಲಿ ಕೆರೆದನೇನೊ. ದೊಡ್ಡದಾಯಿತು; ಹರಡಿತು; ಹರಡಿ ವ್ರಣವಾಯಿತು. ಎದೆಯಲ್ಲಿ ಹರಡಿಕೊಂಡುಬಂದಿತು.

ಒರಟು ಔಷಧಿಗಳನ್ನೇನೊ ಮಾಡಿದ. ಕಡಿಮೆಯಾಗಲಿಲ್ಲ; ಹೆಚ್ಚಾಯಿತು. ಹೆದರಿ ಆಸ್ಪತ್ರೆಗೆ ಹೋಗಿ ತೋರಿಸಿದ. ಅವರು, ಮೈಸೂರಿನ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಹೋಗು ಎಂದರು. ಅಲ್ಲಿ ಹೋಗಿ, ಅಲ್ಲಿ ಇನ್ ಪೇಷೆಂಟ್ ಆದ. ಹುಣ್ಣಿನಲ್ಲಿ ಹುಳು ಬಿದ್ದಿತ್ತು. ದಿನಗಳು ಕಳೆದವು; ವಾರಗಳು ಕಳೆದವು; ತಿಂಗಳುಗಳೂ ಕಳೆದವು. ಗುಣವಾಗುವ ಚಿಹ್ನೆಯೇ ಇಲ್ಲ. ನೋವು. ಅಪಾರ ಯಾತನೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ನಡೆದಿದೆ. ದೇಶವಿದೇಶಗಳಲ್ಲಿ ಅಭ್ಯಾಸ ಮಾಡಿಬಂದು ಪ್ರವೀಣರೆನಿಸಿಕೊಂಡ ವೈದ್ಯರುಗಳಿದ್ದಾರೆ. ಅತ್ಯಾಧುನಿಕ ಔಷಧ ಪ್ರಯೋಗಗಳು, ಚಿಕಿತ್ಸಾವಿಧಾನಗಳು ಇವೆ. ಆದರೆ ಇವೊಂದೂ ಇವನಿಗೆ ಗುಣ ಕೊಡಲಿಲ್ಲ. ಬಡವನಾದ ಇವನಿಗೆ ಅವೂ ಆ ವೈದ್ಯರೂ ಮೀರಿದವರಾಗಿದ್ದರೊ ಅಥವಾ ಅವರ ರೋಗನಿದಾನವೇ ತಪ್ಪಾಗಿತ್ತೊ, ಇಲ್ಲವೆ, ಔಷಧಗಳಲ್ಲಿ ಶಕ್ತಿಯೇ ಇರಲಿಲ್ಲವೊ. ಅಮೀರನಿಗೆ ಗುಣ ತೋರಲೆ ಇಲ್ಲ. ನಿದ್ದೆ ಬಾರದು, ದೇಹ ಕ್ಷೀಣಿಸಿತು. ಮೇಲೆ ಭಯಂಕರ ವ್ರಣಯಾತನೆ. ಇವನ ಎದೆಯ ಕೇಂದ್ರವನ್ನೆ ಕಿತ್ತು ತಿನ್ನುವ ಹುಳುಗಳು. ಬಿಳಿಯ ಹುಳುಗಳು.

ಒಂದು ದಿನ ಮಧ್ಯಾಹ್ನ ರೋಸಿ, ಆಸ್ಪತ್ರೆಯಿಂದ ಬಿಡುಗಡೆ ಮಾಡಿಸಿಕೊಂಡು, ಮನೆಗೆ ಹೋಗಿ ಅಲ್ಲಿಯೆ ಸಾಯುವೆನು, ಎಂದು ನಿರ್ಣಯ ಮಾಡಿಕೊಂಡ.

ಊರಿಗೆ ಕರೆತಂದರು.' ಏನೂ ಚಿಕಿತ್ಸೆ ಮಾಡಲಿಲ್ಲ; ಮಾಡಲಾಗುವಂತಿರಲಿಲ್ಲ. ಹಂಜಿಕಡ್ಡಿಯನ್ನು ಚಿಮ್ಮಟಮಾಡಿ ಅದರಿಂದ ಹುಳುಹಿಡಿದು ತೆಗೆದು ಹಾಕಬೇಕು. ಇವನ ಜನ ಹೀಗೆ ಮಾಡುತ್ತಿದ್ದರು. ಎಂಥ ಹುಳು ತೆಗೆಯುವ ವಿಧಾನ! ಇವನು ಇಡುವ ಬೊಬ್ಬೆ ಎಷ್ಟು ಕಠೋರವಾಗಿತ್ತೊ! ಅಮೀರನಿಗೆ ತಾನೆಂಥ ಅವಿವೇಕ ಮಾಡಿಕೊಂಡೆ ಎನಿಸಿತಂತೆ. ಕೈಯಲ್ಲಿ ಪರುಸಮಣಿ ಹಿಡಿದು ಬೀದಿಯ ಕಲ್ಲ ಹುಡುಕುವರೆ ಒಂದು ದಿನ ಆತನಿಗೇನೊ ನಿಶ್ಚಯ, ಏನೊ ತಿಳಿವು ಬಂದಿತು.

ಮೂರನೆ ದಿನ ಬೆಳಿಗ್ಗೆ ಎದ್ದು ಸ್ನಾನ ಮಾಡಬೇಕೆಂದನಂತೆ. ಅಣ್ಣ, ತಾಯಿ ಬೇಡವೆಂದರೂ ಕೇಳಲಿಲ್ಲ. 'ದಾದಾ, ಸಾಯುವ ಮನುಷ್ಯನಿಗೆ ನೀವು ಇಷ್ಟು ನಡೆಸಬಾರದೆ?' ಎಂದನಂತೆ ಅಣ್ಣನಿಗೆ. ಅಣ್ಣ ಕಣ್ಣೀರು ತುಂಬಿಕೊಂಡು, ತಮ್ಮನಿಗೆ ಸ್ನಾನ ಮಾಡಿಸಿದನಂತೆ. ಒಗೆದ ಬಟ್ಟೆಯುಡಿಸು, ಎಂದನಂತೆ. ಹಾಗೆಯೆ ಮಾಡಿದರು. ಬಟೆಯುಟ್ಟು, ತಾಯಿ ಕುಳಿತಲ್ಲಿಗೆ ಬಂದು ಮೂರು ಸಾರಿ ತಾಯಿಗೆ ಪ್ರದಕ್ಷಿಣೆ ಮಾಡಿ, ಅವಳ ಮುಂದೆ ಮಂಡಿಯೂರಿ ಬಾಗಿ, ತಾಯಿಯ ಕೈಯನ್ನು ಕಣ್ಣಿಗೊತ್ತಿಕೊಂಡನಂತೆ. ದಿನವೂ ಹೀಗೆಯೇ ನಡೆಯಿತು ದಿನವೂ ತಾಯಿಯನ್ನು, ತನ್ನನ್ನು ಹೊತ್ತ ತಾಯಿಯನ್ನು, ಅವಳ ದೇಹದಿಂದ ತನ್ನನ್ನು ಹೊರಕ್ಕೆ ಇಳುಹಿದ ತಾಯಿಯನ್ನು ಪೂಜಿಸಿದನು, ಮೌನವಾಗಿ ಪ್ರಾರ್ಥಿಸಿದನು, ತನ್ನ ನೋವನ್ನು ಹರಿಸಬಲ್ಲ ದಿವ್ಯ ತೇಜಸ್ಸೆಂದು ಮಾತಿಲ್ಲದೆ ಹಾಡಿ ಮೌನವಾಗಿ ಬೇಡಿ, ನುತಿಸಿದನು. . .

ಮಹಾಸತ್ತ್ವನ್ವಿತವಾಗಿದ್ದ ಗ್ರೀಕ್ ರಾಷ್ಟ್ರ ರೋಮನರಿಗೆ ಅಧೀನವಾಯಿತು. ಆಗ, ತೇಜೋಹೀನವಾದ ಕಾಲದಲ್ಲಿ ಹಲವರು ವಿತಂಡವಾದಿಗಳೆನಿಸಿದ ತಾತ್ವಿಕರು ಹುಟ್ಟಿಕೊಂಡರು. ಚರಿತ್ರಕಾರ ಅವರನ್ನು ಕುರಿತು ಕುಚೋದ್ಯದಿಂದ ಹೀಗೆ ಹೇಳುತ್ತಾನೆ: ದೇ ಕ್ವೆಶ್ಚನ್ಡ್ ಎವ್ವೆರಿಥಿಂಗ್, ಬಟ್ ಸೆಟ್ಲ್ಡ್ ನಥಿಂಗ್. ಈ ಮಾತು ನಮಗೂ ಈಗ ಅನ್ವಯಿಸೀತಲ್ಲವೆ?

ಹೋ, ಮಹಾ ಕೌತುಕವೇ ನಡೆದುಹೋಯಿತು! ಈ ಬೀಳುಕಾಲದಲ್ಲಿ ಪವಾಡಗಳು ನಡೆಯವೆ? ಪವಾಡಗಳೂ ನಡೆದಾವು! ಅವನ ತಾಯಿ, ಪ್ರಕಟವಾಗದ ಅವನ ತಾಯಿಯ ಶಕ್ತಿ, ಅವನನ್ನು ಉದ್ಧರಿಸಿತು. ಅಮೀರನ ಹುಣ್ಣು ಗುಣವಾಯಿತು, ಪೂರ್ಣ ಗುಣವಾಯಿತು.

ಹಿಂದಿನವರು ಸುಮ್ಮನೆ ಹಾಡಿದರೆ?

ನಂಬು ನಂಬೆಲೆ ಮನವೆ। ಹಂಬಲಿಸದಿರು ಬರಿದೆ।
ನಂಬುಗೆಯೆ ಕಾರಣವು। ಸಂಬಾಬನೊಲಿವುದಕೆ॥

ಪ್ರೊ. ಬಿ. ಎ. ಕೃಷ್ಣಸ್ವಾಮಿರಾವ್,
ಎಂ. ಎಸ್‌ಸಿ.,
ಮೈಸೂರು ವಿಶ್ವವಿದ್ಯಾನಿಲಯ, ಅವರಿಂದ

ವಿಶ್ವವು ಬೆಳೆಯುತ್ತಿರುವುದೆ?

**ವಿಶ್ವದ ಸೃಷ್ಟಿ ಯಾವಾಗ ಆಯಿತು ?
ಅದು ಅನಂತವೋ ಸಾಂತವೋ? ಎಂಬ ಅನಾದಿ ಪ್ರಶ್ನೆ
ತತ್ವಜ್ಞಾನಿಗಳನ್ನೂ ವಿಜ್ಞಾನಿಗಳನ್ನೂ ಗೊಂದಲಕ್ಕೆ ಕೆಡಹಿದೆ.
ವಿಶ್ವವು ಪರಿಮಿತಿಯುಳ್ಳದ್ದು, ಅದು ಇನ್ನೂ ಬೆಳೆಯುತ್ತಿದೆ, ಅದು
ಉಬ್ಬುತ್ತಿರುವ ಬಲೂನಿನಂತಿರುವ ಮಹಾಗೋಲ. ಅದರ ಹೊದಿಕೆಯ
ಮೇಲೆ ನಮ್ಮ ಸೂರ್ಯನಂಥ ಕೋಟ್ಯಂತರ ನಕ್ಷತ್ರಗಳುಳ್ಳ ಕೋಟ್ಯಂತರ
ನಕ್ಷತ್ರಪುಂಜಗಳು ಹಬ್ಬಿವೆ. ಅವೆಲ್ಲ ನಮ್ಮಿಂದ ದೂರ ದೂರ ಓಡುತ್ತಿವೆ.
ದೂರದ ನಕ್ಷತ್ರಪುಂಜಗಳು ಸೆಕಂಡಿಗೆ ೧೦೫ ಮೈಲುಗಳಂತೆ ನಮ್ಮಿಂದ
ದೂರ ಸಿಡಿಯುತ್ತಿವೆ. ಈ ವಿಶ್ವದ ಸೃಷ್ಟಿ ೩೦೦೦೦೦ ಲಕ್ಷ ವರ್ಷಗಳ
ಹಿಂದಾಯಿತು. ೭೭೦೦೦೦ ಲಕ್ಷ ವರ್ಷಗಳಲ್ಲಿ
ನಿಮ್ಮ ಬೆನ್ನು ನಿಮಗೆ (ಬದುಕಿದ್ದರೆ) ಕಾಣಬಹುದು!...
ತಲೆ ತಿರುಗುತ್ತಿದೆಯೋ? ವಿಜ್ಞಾನಿಗಳ ಊಹೆಗಳಿವು.**

ಕ್ರಿ. ಶ. ೧೭ ನೆಯ ಶತಮಾನದಲ್ಲಿ ನ್ಯೂಟನ್ (Newton) ಎಂಬ ಭೌತವೈಜ್ಞಾನಿಕನು ವಸ್ತುಗಳ ಚಲನೆಯ ವಿಷಯದಲ್ಲಿ ಕೆಲವು ವಿಶಾಲವಾದ ಮತ್ತು ಸರ್ವವ್ಯಾಪಿಗಳಾದ ತತ್ವಗಳನ್ನು ಪ್ರತಿಪಾದಿಸಿವನು. ಪ್ರತಿಯೊಂದು ವಸ್ತುವೂ ತಾನು ಚಲಿಸುವ ರೀತಿಯಲ್ಲೇ ಚಲಿಸುವ ಸ್ವಭಾವ ಉಳ್ಳದ್ದೆಂದೂ ಅದರ ಚಲನೆಯನ್ನು ಬದಲಾಯಿಸಲು ಬಲ (Force) ಎಂಬುದು ಬೇಕೆಂದೂ ಚಲನ ನಿಯಮಗಳನ್ನು ಆತನು ಸ್ಥಾಪಿಸಿದನು. ಹಾಗೆಯೇ ಪ್ರಪಂಚದಲ್ಲಿ ಪ್ರತಿಯೊಂದು ವಸ್ತುವೂ ಮಿಕ್ಕಿತರ ವಸ್ತುಗಳನ್ನು ಆಕರ್ಷಿಸುವುದೆಂದೂ ಆತನು ಪ್ರತಿಪಾದಿಸಿದನು. ಈ ಆಕರ್ಷಣೆಯಿಂದಲೇ ಕಲ್ಲು ಭೂಮಿಗೆ ಬೀಳುವುದು; ಗ್ರಹಗಳು ಸೂರ್ಯನ ಸುತ್ತಲೂ ಪ್ರದಕ್ಷಿಣೆ ಮಾಡುವುವು; ಧೂಮಕೇತುಗಳು ಅನೇಕ ವರ್ಷಗಳಿಗೊಮ್ಮೆ ಮರಳಿ ಮರಳಿ ಬರುವುವು; ಸಮುದ್ರದಲ್ಲಿ ಏರಿಳಿತಗಳಾಗುವುವು.

ಆದರೆ ಈ ರೀತಿಯ ಪ್ರತಿಪಾದನೆಯಲ್ಲಿ ಒಂದು ಲೋಪವಿದೆ. ಆಕರ್ಷಣಬಲವನ್ನು ಅಳೆಯಲು ವೇಗವನ್ನು ಮತ್ತು ವೇಗದಲ್ಲಿ ಉಂಟಾಗುವ ಬದಲಾವಣೆಯನ್ನು ಅಳೆಯಬೇಕು. ಏಕೆಂದರೆ ಬಲವು ವೇಗದ ಬದಲಾವಣೆಗೆ ಅನುಗುಣವಾಗಿರುವುದು. ವೇಗವನ್ನು ಅಳೆಯಲು ಯಾವುದಾದರೊಂದು ತಾತ್ಕಾಲಿಕವಾಗಿ ಅಚಲವೆಂದು ಪರಿಗಣಿಸಿದ ವಸ್ತುವಿನ ಆಶ್ರಯವು ಬೇಕು. ವಸ್ತುವಿನ ವೇಗವು ಮತ್ತೊಂದು ವಸ್ತುವನ್ನು ಅವಲಂಬಿಸಿರುವುದರಿಂದ ವೇಗವು ಸಾಪೇಕ್ಷವು (Relative). ಓಡುತ್ತಿರುವ ರೈಲುಗಾಡಿಯಲ್ಲಿರುವ ಜನರು ಗಾಡಿಯಲ್ಲಿ ಕುಳಿತಿದ್ದರೆ ಗಾಡಿಯ ಅಪೇಕ್ಷೆಯಿಂದ ಅವರ ವೇಗವು ಏನಿರದಿದ್ದರೂ ರೈಲು ಕಂಬಿಯ ಅಪೇಕ್ಷೆಯಿಂದ ಅವರ ವೇಗವು ರೈಲುಗಾಡಿಯ ವೇಗವೇ ಆಗಿರುವುದು. ರೈಲುಗಾಡಿಯು ಓಡುತ್ತಿರದಿದ್ದರೂ ಭೂಮಿಯು ಸೂರ್ಯನ ಸುತ್ತಲೂ ವೇಗವಾಗಿ ಸುತ್ತುತ್ತಿರುವುದರಿಂದ ಸೂರ್ಯನ ಅಪೇಕ್ಷೆಯಿಂದ ಅವರ ವೇಗವು ಭೂಮಿಯ ವೇಗವೇ ಆಗಿರುವುದು. ಆದುದರಿಂದ ಒಂದು ವಸ್ತುವಿನ ವೇಗವು ಎಷ್ಟು ಎಂಬ ಪ್ರಶ್ನೆಗೆ ಉತ್ತರ ಹೇಳಲು ಯಾವ ವಸ್ತುವಿನ ಅಪೇಕ್ಷೆಯಿಂದ ಎಂಬ ಪ್ರಶ್ನೆಯು ಏಳುವುದು. ವಸ್ತುವಿನ ವೇಗವು ಇಷ್ಟು ಎಂದು ನಿರ್ಣಯಿಸಲು ಮತ್ತೊಂದು ವಸ್ತುವು ಬೇಕಾಗಿರುವುದರಿಂದ ಪ್ರಪಂಚದಲ್ಲಿ ಯಾವುದಾದರೊಂದು ಅಚಲವಾದ ವಸ್ತುವಿದ್ದ ಪಕ್ಷದಲ್ಲಿ ಆಗ ವಸ್ತುವಿನ ನೈಜವಾದ ವೇಗ ಎಂಬುದಕ್ಕೆ ಒಂದು ನಿರ್ದಿಷ್ಟವಾದ ಅಳತೆಯು ಸಿಗುವುದು. ಅಚಲವಾದ ಎಲ್ಲೆಡೆಯಲ್ಲಿಯೂ ವ್ಯಾಪ್ತವೆಂದು ಪರಿಗಣಿಸಿದ್ದ ಈಥರ್ (Ether) ಎಂಬ ಸೂಕ್ಷ್ಮ ದ್ರವ್ಯವು ಈ ರೀತಿಯಾದ ವಸ್ತುವಾಗಿರಬಾರದೇಕೆ ಎಂದು ವೈಜ್ಞಾನಿಕರಿಗೆ ತೋರಿತು. ಅಂತಹ ಅಚಲವಾದ ದ್ರವ್ಯವಿದ್ದ ಪಕ್ಷದಲ್ಲಿ ಭೂಮಿಯು ಅದರಲ್ಲಿ ಓಡುವ ವೇಗವನ್ನು ಕಂಡುಹಿಡಿಯಲು ಸಾಧ್ಯ. ಬೆಳಕು ಈಥರ್ ಎಂಬ ದ್ರವ್ಯದಲ್ಲಿ ಉಂಟಾಗುವ ಅಲೆಗಳ ರೂಪವಾದದ್ದೆಂದು ಭಾವಿಸಲ್ಪಟ್ಟಿತು. ಬೆಳಕಿನ ವೇಗವನ್ನು ನಾನಾ ದಿಕ್ಕುಗಳಲ್ಲಿ ಅಳೆದರೆ ಅದು ಬೇರೆ ಬೇರೆ ವೇಗದಿಂದ ಕೂಡಿದುದಾಗಿ ಕಂಡು ಬರಬೇಕು. ಏಕೆಂದರೆ ಒಂದು ಘಂಟೆಗೆ ೩೦ ಮೈಲು ವೇಗದಿಂದ ಓಡುವ ರೈಲು ಗಾಡಿಯ ಎದುರು ದಿಕ್ಕಿನಲ್ಲಿ ನಾವು ಒಂದು ಘಂಟೆಗೆ ೨೦ ಮೈಲು ವೇಗದಿಂದ ಓಡುವ ರೈಲು ಗಾಡಿಯಲ್ಲಿ ಕುಳಿತು ವೇಗವನ್ನು ಅಳೆದರೆ ಒಂದು ಘಂಟೆಗೆ ೫೦ ಮೈಲು ವೇಗವು ಆಗುವುದು; ಆದರೆ ಅದೇ ದಿಕ್ಕಿನಲ್ಲಿ ಓಡುವ ರೈಲು ಗಾಡಿಯಲ್ಲಿ ಕುಳಿತು ವೇಗವನ್ನು ಅಳೆದರೆ ಒಂದು ಘಂಟೆಗೆ ೧೦ ಮೈಲು ವೇಗವು ಆಗುವುದು. ಹೀಗೆಯೇ ಭೂಮಿಯೂ ಒಂದು ವೇಗದಿಂದ ಈಥರ್ ಎಂಬ ದ್ರವ್ಯದಲ್ಲಿ ಚಲಿಸುತ್ತಿದ್ದರೆ ಭೂಮಿಯಲ್ಲಿ ನಿಂತು ಬೆಳಕಿನ ವೇಗವನ್ನು ನಾನಾ ದಿಕ್ಕುಗಳಲ್ಲಿ ಅಳೆದರೆ ವೇಗವು ವ್ಯತ್ಯಾಸವಾಗಬೇಕು. ಹಾಗೆ ಬೆಳಕಿನ ವೇಗವು ವ್ಯತ್ಯಾಸವಾದ ಪಕ್ಷದಲ್ಲಿ ಈಥರ್ ಎಂಬ ಅಚಲವಾದ ವಸ್ತುವಿದೆ ಎಂದು

ನಂಬಬಹುದಾಗಿದೆ. ಬೆಳಕಿನ ವೇಗವನ್ನು ನಾನಾ ದಿಕ್ಕುಗಳಲ್ಲಿಯೂ ಮೈಕಲ್ಸನ್ ಮತ್ತು ಮಾರ್ಲಿ (Michelson and Morley) ಎಂಬ ವೈಜ್ಞಾನಿಕರು ಅತ್ಯಂತ ಚತುರತೆಯಿಂದ ಅಳೆಯಲು ಅದ್ಭುತವಾದ ಒಂದು ಪ್ರಯೋಗವನ್ನು ನಡೆಸಿದರು. ಆ ಪ್ರಯೋಗದಿಂದ ಬೆಳಕಿನ ವೇಗವನ್ನು ಯಾವ ದಿಕ್ಕಿನಲ್ಲಿಯಾಗಲಿ ಅಥವಾ ಯಾವ ವೇಗದಿಂದ ಓಡುತ್ತಿರುವ ಯಂತ್ರದಿಂದಾಗಲಿ ಅಳೆದಾಗ ವೇಗವು ಒಂದೇ ಸಮನಾಗಿರುವುದೆಂದು ಕಂಡುಬಂದಿತು. ಈ ಪ್ರಯೋಗದಿಂದ ಈಥರ್ ಎಂಬ ಅಚಲವಾದ ದ್ರವ್ಯವನ್ನು ಕಂಡುಹಿಡಿಯಲು ಮತ್ತು ವಸ್ತುಗಳ ನೈಜವಾದ ವೇಗವನ್ನು ಕಂಡುಹಿಡಿಯಲು ಆಗಲಾರದೆಂಬ ಭಾವನೆಯು ವೈಜ್ಞಾನಿಕರಲ್ಲಿ ಬೇರೂರಿತು.

ಬೆಳಕಿನ ವೇಗವು ಅದನ್ನು ಅಳೆಯುವವರ ವೇಗವನ್ನು ಅವಲಂಬಿಸದೆ ಒಂದೇ ಸಮನಾಗಿರುವುದನ್ನು ಅರ್ಥ ಮಾಡಿಕೊಳ್ಳಲು ಕ್ರಿ. ಶ. ೧೯೦೫ ರಲ್ಲಿ ಆಲ್ಬರ್ಟ್ ಐನ್‌ಸ್ಟೈನ್ (Albert Einstein) ಅವರು ತಮ್ಮ ವಿಶೇಷ ಸಾಪೇಕ್ಷ ಸಿದ್ಧಾಂತ (Special Theory of Relativity) ವನ್ನು ಪ್ರತಿಪಾದಿಸಿದರು. ವೇಗ ಎಂದರೆ ಇಷ್ಟು ಕಾಲದಲ್ಲಿ ಇಷ್ಟು ದೂರ ಹೋಗುವುದು ಎಂದು ಅರ್ಥ. ವೇಗದ ಅಳತೆಗೆ ದೇಶ (ದೂರ) ಮತ್ತು ಕಾಲಗಳು ಅವಶ್ಯಕಗಳು. ಸಾಮಾನ್ಯವಾಗಿ ದೇಶ ಮತ್ತು ಕಾಲಗಳು ಎಲ್ಲರಿಗೂ ಒಂದೇ ಎಂದೂ ದೇಶವೆಂಬ ತತ್ವವು ಕಾಲವೆಂಬ ತತ್ವದಿಂದ ಭಿನ್ನವಾದುದೆಂದೂ ನಾವು ತಿಳಿದಿರುತ್ತೇವೆ. ಈ ಭಾವನೆಯು ತಪ್ಪೆಂದು ಐನ್‌ಸ್ಟೈನ್ ಅವರು ಪ್ರತಿಪಾದಿಸಿದರು. ಎಲ್ಲರಿಗೂ ಕಾಲವು ಒಂದೇ ಸಮವಲ್ಲ; ವೇಗವಾಗಿ ಹೋಗುವಾಗ ಕಾಲವು ವಿಳಂಬವಾಗುವುದು; ದೇಶವು ಸಂಕೋಚವಾಗುವುದು. ಬೆಳಕಿನ ವೇಗವು ಒಂದೇ ಸಮನಾಗಿರಲು ಒಂದೊಂದು ವಸ್ತುವಿನ ಕಾಲದ ಮಾನವು ಬೇರೆ ಬೇರೆಯಾಗಿರುವುದೇ ಕಾರಣ. ಬೇರೆ ಬೇರೆ ವೇಗದಿಂದ ಚಲಿಸುತ್ತಿರುವ ವಸ್ತುಗಳ ಕಾಲಮಾನವನ್ನು ತೆಗೆದುಕೊಂಡು ಬೆಳಕಿನ ವೇಗವನ್ನು ಲೆಖ್ಖ ಹಾಕಿದರೆ ಬೆಳಕಿನ ವೇಗವು ಏಕಪ್ರಕಾರವಾದುದೆಂದು ಕಂಡುಬರುವುದೆಂದು ಐನ್‌ಸ್ಟೈನ್ ಅವರು ತೋರಿಸಿದರು. ಅಷ್ಟೇ ಅಲ್ಲ; ದೇಶ ಮತ್ತು ಕಾಲಗಳು ಭಿನ್ನ ತತ್ವಗಳೆಂದು ಭಾವಿಸುವುದೂ ತಪ್ಪು. ಓಡುತ್ತಿರುವ ರೈಲುಗಾಡಿಯಲ್ಲಿ ಒಂದು ಚೆಂಡನ್ನು ಕೆಳಗೆ ಹಾಕಿದರೆ ಗಾಡಿಯಲ್ಲಿರುವವರಿಗೆ ಚೆಂಡು ನೇರವಾಗಿ ಬಿದ್ದಂತೆ ತೋರುವುದು. ಆದರೆ ಗಾಡಿಯ ಹೊರಗಿರುವವರಿಗೆ ಚೆಂಡು ಒಂದು ವಕ್ರವಾದ ಮಾರ್ಗದಲ್ಲಿ ಬಿದ್ದಂತೆ ತೋರುವುದು. ಚೆಂಡು ಹೇಗೆ ಬಿತ್ತು ಎಂದು ಪ್ರಶ್ನೆಮಾಡಿದರೆ ನೇರವಾಗಿ ಬಿತ್ತು ಎಂದು ಗಾಡಿಯಲ್ಲಿರುವವರ ದೃಷ್ಟಿಕೋನದಿಂದ ಉತ್ತರವು; ವಕ್ರವಾಗಿ ಬಿತ್ತು ಎಂದು ಗಾಡಿಯ ಹೊರಗಿರುವವರ ದೃಷ್ಟಿಕೋನದಿಂದ ಉತ್ತರವು. ಆದರೆ ಎಲ್ಲರ ದೃಷ್ಟಿಕೋನಗಳನ್ನೂ ಒಳಗೊಂಡ ಒಂದು ವಾಸ್ತವಿಕ (absolute) ರೀತಿಯಲ್ಲಿ ಚೆಂಡು ಬೀಳುವುದು. ಅದನ್ನು ಕಂಡುಹಿಡಿಯಲು ದೇಶ ಮತ್ತು ಕಾಲಗಳನ್ನು ಅಂಗಗಳಾಗಿ ಉಳ್ಳ "ದೇಶ-ಕಾಲ" ಎಂಬ ತತ್ವವನ್ನು ಒಡಂಬಡಬೇಕಾಗುವುದು. ನಮ್ಮ ಅನುಭವಸಿದ್ಧಗಳಾದ ದೇಶಕಾಲಗಳು ಈ ದೇಶ-ಕಾಲ ತತ್ವದ ಏಕದೇಶಗಳು. ಚಲನೆ ಎಂದರೆ ದೇಶ-ಕಾಲದಲ್ಲಿ ಉಂಟಾದ ವ್ಯತ್ಯಾಸವು. ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಹೋಗುವುದೂ ಚಲನವೇ; ಒಂದು ಸ್ಥಳದಲ್ಲಿ

ದ್ದರೂ ಕಾಲಬದಲಾವಣೆಯಾಗುವುದೂ ಚಲನವೆ.

ಕ್ರಿ. ಶ. ೧೯೧೫ ರಲ್ಲಿ ಐನ್‌ಸ್ಟೈನರು ಸಾಮಾನ್ಯ ಸಾಪೇಕ್ಷ ಸಿದ್ಧಾಂತವನ್ನು (General Theory of Relativity) ಪ್ರತಿಪಾದಿಸಿದರು. ಈ ಸಿದ್ಧಾಂತದ ಅನುಸಾರವಾಗಿ 'ದೇಶ-ಕಾಲವು' ಆಕಾರ ಉಳ್ಳದ್ದು. ಆಕಾರ ಎಂದರೆ ಬಾಗಿರುವುದು ಎಂದು ಅರ್ಥವಾಗುವುದು. ಗಾಳಿಯು ಎಲ್ಲೆಡೆಯಲ್ಲಿಯೂ ವ್ಯಾಪಿಸಿದ್ದು ಆಕಾರರಹಿತವಾದುದೆಂದು ತೋರುವುದು. ಆದರೆ ಗಡಿಗೆಯು ಆಕಾರ ಸಹಿತವಾಗಿದ್ದ ಪರಿಮಿತಿಯುಳ್ಳದ್ದಾಗಿ ತೋರುವುದು. ಹೀಗೆಯೇ "ದೇಶ-ಕಾಲವು" ಆಕಾರದಿಂದ ಯುಕ್ತವಾಗಿ ಪರಿಮಿತಿಯುಳ್ಳದ್ದಾಗಿರುವುದು. ವಸ್ತುಗಳ ಸನ್ನಿಧಾನದಿಂದ 'ದೇಶ-ಕಾಲ'ದಲ್ಲಿ ಹಳ್ಳತಿಟ್ಟುಗಳುಂಟಾಗುವುವು. ವಸ್ತುವು ದೊಡ್ಡದಾಗಿದ್ದರೆ ತಿಟ್ಟು ಬೆಟ್ಟದಂತಿರುವುದು; ಸಣ್ಣದಾಗಿದ್ದರೆ ತಿಟ್ಟು ಗುಡ್ಡದಂತಿರುವುದು. ಸೂರ್ಯನ ಹತ್ತಿರ 'ದೇಶ-ಕಾಲವು' ಒಂದು ಬೆಟ್ಟದಂತಿರುವುದು. ಆ ಬೆಟ್ಟವನ್ನು ಗ್ರಹಗಳು ಸುತ್ತುವುದೇ ಸೂರ್ಯನ ಸುತ್ತಲೂ ಪ್ರದಕ್ಷಿಣೆಯು. ಸೂರ್ಯನು ಅವುಗಳನ್ನು ಆಕರ್ಷಿಸುವುದಿಲ್ಲ. ಗ್ರಹಗಳು ನೇರವಾಗಿಯೇ ಚಲಿಸುವುವು; ಆದರೆ ಅವು ಚಲಿಸುವ 'ದೇಶ-ಕಾಲವು' ವಕ್ರವಾಗಿರುವುದರಿಂದ ಅವುಗಳ ಪಥವೂ ವಕ್ರವಾಗಿರುವುದು. ರೈಲುಕಂಬಿಯು ನೇರವಾಗಿರಲಿ ವಕ್ರವಾಗಿರಲಿ ಅದರ ಮೇಲೆಯೇ ಗಾಡಿಗಳು ಹೇಗೆ ಓಡಬೇಕೋ ಹಾಗೆಯೇ ದೇಶ-ಕಾಲದ ಹಳ್ಳತಿಟ್ಟುಗಳಲ್ಲಿ ಗ್ರಹಗಳು ಓಡಾಡುವುವು. ಸೂರ್ಯನ ಸುತ್ತಲು ದೇಶಕಾಲ ಡೊಂಕುಡೊಂಕಾಗಿರುವುದೇ ಗ್ರಹಗಳು ಅದರ ಸುತ್ತಲೂ ಸುತ್ತಲು ಕಾರಣ.


ದೇಶ-ಕಾಲವು ಕೇವಲ ವಸ್ತುಗಳ ಸನ್ನಿಧಾನದಿಂದ ಹಳ್ಳತಿಟ್ಟುಗಳಾಗಿ ಬಾಗಿರುವುದಲ್ಲದೆ ಸ್ವಾಭಾವಿಕವಾಗಿಯೂ ಬಾಗಿರುವುದು. ಈ ರೀತಿಯಲ್ಲಿ ಅದು ಬಾಗಿರದಿದ್ದರೆ ವಿಶ್ವವು ಸ್ಥಾಯಿಯಾಗಿರಲು ಆಗುತ್ತಿರಲಿಲ್ಲವೆಂದು ಐನ್‌ಸ್ಟೈನ್ ಅವರು ಮನಗಂಡರು. ಆದುದರಿಂದ ವಿಶ್ವವು ಗೋಲಾಕಾರವಾಗಿರುವುದೆಂದು ಅವರು ಭಾವಿಸುವರು. ವಿಶ್ವವು ಗೋಲಾಕಾರವಾಗಿರುವುದರಿಂದ ಅದು ಎಲ್ಲೆ ಇದ್ದದ್ದಾದರೂ ಪರಿಮಿತಿಯುಳ್ಳದ್ದಾಗಿರುವುದು. ಭೂಮಿಯ ಮೇಲ್ಮೈ ಹೇಗೆ ಪರಿಮಿತಿಯುಳ್ಳದ್ದೋ ಹಾಗೆಯೇ ವಿಶ್ವವೂ ಪರಿಮಿತಿ ಉಳ್ಳದ್ದು; ಭೂಮಿಯ ಮೇಲೆ ಎಲ್ಲಿ ಸುತ್ತಿದರೂ ಎಲ್ಲೆ ಸಿಗದಂತೆ ವಿಶ್ವವೂ ಎಲ್ಲೆಯಿಲ್ಲದಿರುವುದು. 'ದೇಶ-ಕಾಲ' ಅಥವಾ ವಿಶ್ವವು ಪರಿಮಿತಿಯುಳ್ಳದ್ದು, ಆದರೆ ಎಲ್ಲೆ ಇಲ್ಲದುದು ಎಂದು ಪರಿಗಣಿತವಾಗಿವೆ.

ಐನ್‌ಸ್ಟೈನ್ ಅವರ ತತ್ವಗಳನ್ನು ಅನುಸರಿಸಿ

ವಿಶ್ವದ ಸ್ವರೂಪವನ್ನು ನಿರ್ಣಯಿಸಲು ಹೊರಟಾಗ ವಿಶ್ವದ ಸ್ವರೂಪವು ಐನ್‌ಸ್ಟೈನ್ ವಿಶ್ವ (Einstein Universe) ಮತ್ತು ಡಿ ಸಿಟ್ಟರ್ ವಿಶ್ವ de Sitter Universe) ಎಂಬ ಎರಡು ರೂಪಗಳಲ್ಲಿರಬಹುದೆಂದು ಕಂಡು ಬಂದಿತು. ಈ ಎರಡು ವಿಶ್ವಗಳೂ ಭೂಮಿಯಂತೆ ಬಾಗಿ ಪರಿಮಿತಿ ಉಳ್ಳವೇ. ಆದರೆ ಐನ್‌ಸ್ಟೈನ್ ವಿಶ್ವವು ವಸ್ತುಗಳಿಂದ ತುಂಬಿ ಚಲನರಹಿತವಾದದ್ದು; ಡಿ ಸಿಟ್ಟರ್ ವಿಶ್ವವು ವಸ್ತುರಹಿತವಾಗಿ ಚಲನೆಯಿಂದ ತುಂಬಿರುವುದು. ಐನ್‌ಸ್ಟೈನ ವಿಶ್ವವು ಸ್ಥಾಯಿಯಾದದ್ದಾದರೂ ಅದರ ಸ್ಥಾಯಿತ್ವವು ಸೂಕ್ಷ್ಮವಾದದ್ದು. ಅಲ್ಪಸ್ವಲ್ಪ ವ್ಯತ್ಯಾಸವಾದರೂ ವಿಶ್ವವು ಬದಲಾವಣೆಗೆ ಈಡಾಗುವುದು. ಈಗಿನ ನಮ್ಮ ವಿಶ್ವವು ಯಾವ ರೀತಿಯಾದದ್ದೆಂದು ಪ್ರಶ್ನೆ ಬರುವುದು. ಅದು ಐನ್‌ಸ್ಟೈನ್ ವಿಶ್ವದ ಸ್ಥಿತಿಯಲ್ಲಿ ಪ್ರಾರಂಭಿಸಿತೆಂದು ಒಡಂಬಟ್ಟರೂ ಈಗ ಆ ಸ್ಥಿತಿಯಲ್ಲಿ ಇಲ್ಲ; ಮತ್ತು ಉತ್ತರೋತ್ತರದಲ್ಲಿ ಅದು ಡಿ ಸಿಟ್ಟರ್ ವಿಶ್ವವಾಗಿ ಪರಿವರ್ತಿಸುವುದೆಂದು ನಂಬಬಹುದಾಗಿದೆ. ಇವೆರಡು ವಿಶ್ವಗಳ ಸ್ಥಿತಿಗಳಿಗೂ ಮಧ್ಯಸ್ಥವಾದ ವಿಶ್ವಸ್ಥಿತಿಗಳಿರಬಹುದೆಂದು ಫ್ರೈಡ್‌ಮ್ಯಾನ್ ಮತ್ತು ಲೆಮ್ಮೆಟ್ರ ಎಂಬವರು ತೋರಿಸಿದರು. ಈ ಮಧ್ಯ ಸ್ಥಿತಿಯಲ್ಲಿರುವ ವಿಶ್ವವೇ ವಿಸ್ತಾರಶೀಲ ವಿಶ್ವವು (Expanding Universe). ಈ ವಿಶ್ವದಲ್ಲಿ ವಸ್ತುಗಳೂ ಅವುಗಳಿಗೆ ಆಶ್ರಯವಾದ 'ದೇಶ-ಕಾಲ' ತತ್ವವೂ ವಿಸ್ತರಿಸುತ್ತ ಹೋಗುವವು.

ಐನ್‌ಸ್ಟೈನ್ ಅವರ ವಿಶ್ವದಲ್ಲಿ ದೇಶ-ಕಾಲವು ಅಚಲವಾಗಿರುವುದು. ಅದರಲ್ಲಿ ಆಶ್ರಿತವಾದ ವಸ್ತುಗಳು ಪರಸ್ಪರ ಸಂಪರ್ಕವಿಶೇಷವಾದ ಚಲನೆ ಹೊಂದುವವು. ಆದರೆ ಡಿ ಸಿಟ್ಟರ್ ಮತ್ತು ಇತರ ಮಧ್ಯಸ್ಥ ವಿಶ್ವಗಳಲ್ಲಿ ದೇಶವೇ ವಿಸ್ತಾರ ಹೊಂದುವುದು; ಅದರ ಜೊತೆಯಲ್ಲಿ ದೇಶದಲ್ಲಿ ಆಶ್ರಿತವಾದ ವಸ್ತುಗಳೂ ಪರಸ್ಪರ ದೂರ ಸರಿಯುವವು. ಈ ರೀತಿಯಾದ ದೇಶದ ಚಲನೆ ಅಥವಾ ವಿಸ್ತಾರಶೀಲತೆಯು ಡಿ ಸಿಟ್ಟರ್ ಮತ್ತು ಇತರ ಮಧ್ಯಸ್ಥ ವಿಶ್ವಗಳ ಹೆಗ್ಗುರುತು. ಈ ರೀತಿಯ ವಿಸ್ತಾರಶೀಲತೆಯು ಪ್ರಪಂಚದಲ್ಲಿ ಕಂಡುಬರುವುದೇ ಎಂಬ ಪ್ರಶ್ನೆಯು ತಲೆದೋರಿ ಪ್ರಾಯೋಗಿಕವಾಗಿ ಅಂತಹ ಚಲನೆಯು ಇದೆ ಎಂದು ಸ್ಥಿರಪಟ್ಟದೆ. ಈ ಚಲನೆಯು ಅತ್ಯಂತ ದೂರವಾದ ವಸ್ತುಗಳಲ್ಲಿ ಪ್ರಭಾವಶಾಲಿಯಾಗಿರುವದು. ಆದುದರಿಂದ ನಮಗೆ ಬಹಳ ದೂರದಲ್ಲಿರುವ ವಸ್ತುಗಳು ನಮ್ಮಿಂದ ದೂರ ಸರಿಯುತ್ತಿರಬೇಕು. ದೂರವನ್ನು ಈ ಸಂದರ್ಭದಲ್ಲಿ ಅಳೆಯುವಾಗ ಸಾಮಾನ್ಯವಾದ ಅಳತೆಗಳು ಉಪಯೋಗವಾಗುವುದಿಲ್ಲ. ದೂರವನ್ನು ಜ್ಯೋತಿರ್ವರ್ಷ (light-year) ಎಂಬ ಮಾನದಿಂದ ಅಳೆಯಬೇಕು. ಒಂದು ಜ್ಯೋತಿರ್ವರ್ಷ ಎಂದರೆ ಒಂದು ಸೆಕೆಂಡಿಗೆ

೧೮೬೦೦೦ ಮೈಲು ದೂರ ಹೋಗುವ ಬೆಳಕು ಒಂದು ವರ್ಷದಲ್ಲಿ ಹೋಗುವ ಅಂದರೆ ೧೮೬೦೦೦× ೩೬೫ × ೨೪ × ೬೦ × ೬೦ = ೫೮೬೫೯೬೦೦೦೦೦೦ ಮೈಲುಗಳು. ಆಕಾಶದಲ್ಲಿ ಕಾಣುವ ವಿವಿಧ ಜ್ಯೋತಿಗಳು ಬೇರೆಬೇರೆ ಗುಂಪಿಗೆ ಸೇರಿದವುಗಳಾಗಿ ಬೇರೆ ಬೇರೆ ದೂರಗಳಲ್ಲಿರುವವು. ಭೂಮಿಯೂ ಬುಧ, ಶುಕ್ರ ಮೊದಲಾದ ಗ್ರಹಗಳೂ ಸೂರ್ಯನ ಸುತ್ತಲೂ ಸುತ್ತುತ್ತಾ ಇರುವುವು. ಆ ವ್ಯೂಹವು ಸೂರ್ಯವ್ಯೂಹವೆನಿಸುವದು. ಸೂರ್ಯನಿಂದ ಬೆಳಕು ಬರಲು ಸುಮಾರು ಎಂಟು ನಿಮಿಷಗಳಾಗುವುವು. ಸೂರ್ಯನು ನೈಜವಾಗಿ ಒಂದು ಸಾಮಾನ್ಯವಾದ ನಕ್ಷತ್ರದ ಜಾತಿಗೆ ಸೇರಿದುದು. ಮೇಘರಹಿತವಾದ ಆಕಾಶದಲ್ಲಿ ರಾತ್ರಿವೇಳೆಯಲ್ಲಿ ಆಕಾಶವನ್ನು ಎರಡು ಭಾಗವಾಗಿ ಮಾಡುವಂತೆ ತೋರುವ ಆಕಾಶಗಂಗೆ (milkyway) ಎಂಬ ಮಾಸಲು ಮಾಸಲಾಗಿ ಕಾಣುವ ತೇಜೋವಸ್ತುವನ್ನು ಎಲ್ಲರೂ ನೋಡಿರುವೆವು. ಅದನ್ನು ದುರ್ಬೀನಿನಲ್ಲಿ ನೋಡಿದರೆ ಅದು ಕೋಟ್ಯನುಕೋಟಿ ನಕ್ಷತ್ರಗಳಿಂದ ಕೂಡಿದುದಾಗಿ ಕಂಡು ಬರುವುದು. ಅದರ ದೂರವು ಸುಮಾರು ೪೦ ಸಾವಿರ ಜ್ಯೋತಿರ್ವರ್ಷಗಳೆಂದು ಗೊತ್ತು ಮಾಡಲ್ಪಟ್ಟಿರುವುದು. ನಮ್ಮ ಸೂರ್ಯನು ಆಕಾಶಗಂಗೆಗೆ ಸೇರಿದ ಒಂದು ಸಾಮಾನ್ಯವಾದ ನಕ್ಷತ್ರವು. ಆಕಾಶಗಂಗೆಯಂತೆಯೇ ಕೋಟ್ಯಂತರ ನಕ್ಷತ್ರಗಳಿಂದ ಕೂಡಿದ ಅತ್ಯಂತ ದೂರದಲ್ಲಿರುವ ವಸ್ತುಗಳು ದೂರದರ್ಶಕ ಯಂತ್ರಗಳಲ್ಲಿ ಕಂಡು ಬರುವವು. ಅವುಗಳಲ್ಲಿ ನಕ್ಷತ್ರಗಳನ್ನು ಪ್ರತ್ಯೇಕವಾಗಿ ನೋಡಲು ಸಾಧ್ಯವಾಗಿಲ್ಲ. ಅವುಗಳು ಮಸಕುಮಸಕಾಗಿ ಮೋಡಗಳಂತೆ ತೋರುವುದರಿಂದ ಅವುಗಳನ್ನು ಅಸ್ಪಷ್ಟ ಜ್ಯೋತಿಗಳೆಂದು (Nebulae) ಕರೆಯುವರು. ಈ ನಕ್ಷತ್ರಪುಂಜಗಳಾದ ಅಸ್ಪಷ್ಟ ಜ್ಯೋತಿಗಳು ಸಮುದ್ರದಂತೆ ವಿಶಾಲವಾದ ಆಕಾಶದಲ್ಲಿ ದ್ವೀಪಗಳಂತೆ ಬೇರೆ ಬೇರೆಯಾಗಿ ತೇಲಾಡುತ್ತಿರುವುವು. ಆದುದರಿಂದ ಅವುಗಳನ್ನು ದ್ವೀಪ—ವಿಶ್ವಗಳೆಂದೂ (Island-Uiniverses) ಕರೆಯುವರು ಆಕಾಶಗಂಗೆಯ ಎಲ್ಲೆಯನ್ನು ಮೀರಿ ಅತ್ಯಂತ ದೂರದಲ್ಲಿರುವ ಈ ಅಸ್ಪಷ್ಟ ಜ್ಯೋತಿಗಳ ದೂರವು ೨೫೦೦ ರಿಂದ ೨೪೦೦ ಲಕ್ಷ ಜ್ಯೋತಿರ್ವರ್ಷಗಳಷ್ಟು ಎಂದು ಕಂಡುಬರುವುದು. ಇಷ್ಟು ದೂರದಲ್ಲಿರುವ ವಸ್ತುಗಳಲ್ಲಿ ಹಿಂದೆ ಹೇಳಿದ ದೇಶಿಕ ಚಲನೆಯು ಪ್ರಭಾವಯುತವಾಗಿರಲು ಸಾಧ್ಯ. ಅವುಗಳು ನಮ್ಮಿಂದ ವೇಗವಾಗಿ ದೂರ ಓಡುತ್ತಿರುವುವೆಂದು ಪ್ರಯೋಗಗಳು ಸಿದ್ಧಪಡಿಸಿವೆ. ಅವುಗಳ ವೇಗಗಳು ದೂರ ಹೆಚ್ಚಿದಷ್ಟು ಹೆಚ್ಚುವುವು. ೧೦ ಲಕ್ಷ ಜ್ಯೋತಿರ್ವರ್ಷದಷ್ಟು ದೂರವಿದ್ದ ವಸ್ತುವು ಒಂದು ಸೆಕೆಂದಿಗೆ ೧೦೫ ಮೈಲಿಯ ವೇಗದಿಂದ ಓಡುವುದು. ವಿಶ್ವವು ವಿಸ್ತಾರಶೀಲವೆಂಬದಕ್ಕೆ ಇದು ಋಜುವಾತಾಗಿರುವುದು.



ವಿಸ್ತಾರಶೀಲ ವಿಶ್ವವನ್ನು ಒಂದು ರಬ್ಬರ್ ಬೆಲೂನ್‌ಗೆ ಹೋಲಿಸಬಹುದು. ಆಕಾಶಗಂಗೆ ಮುಂತಾದ ಅಸ್ಪಷ್ಟ ಜ್ಯೋತಿಗಳು ಬೆಲೂನಿನ ಹೊದಿಕೆಯಲ್ಲಿ ಚಲಿಸುತ್ತಿರುವಂತೆ ಭಾವಿಸಬಹುದು. ಇದು ವಸ್ತುವಿನ ಚಲನೆಯು. ಬೆಲೂನಿಗೆ ಗಾಳಿಯನ್ನು ತುಂಬಿದರೆ ಅದು ಊದುವುದು ಮತ್ತು ಅದರ ಚರ್ಮದಲ್ಲಿದ್ದ ಪರಸ್ಪರವಸ್ತುಗಳ ದೂರವು ಹೆಚ್ಚುವುದು. ಇದೇ 'ದೇಶ-ಕಾಲ'ದ ಚಲನೆಯು. ಗಾಳಿಯಿಂದ ತುಂಬಿ ಊದುತ್ತಿರುವ ಬೆಲೂನೇ ವಿಸ್ತಾರಶೀಲ ವಿಶ್ವದ ಪ್ರತೀಕವು.

ಹೀಗೆ ಸ್ವಾಭಾವಿಕ ವಿಸ್ತಾರಶೀಲ ಧರ್ಮದಿಂದ ಯುಕ್ತವಾದ ವಿಶ್ವದ ವಿಷಯದಲ್ಲಿ ಕೆಲವು ವಿಶೇಷ ಅಂಶಗಳನ್ನು ಸೂಚಿಸಬಹುದಾಗಿದೆ. ಐನ್‌ಸ್ಟೈನ್ ವಿಶ್ವದ ತ್ರಿಜ್ಯವು ಸುಮಾರು ೧೦೬೪೦ ಲಕ್ಷ ಜ್ಯೋತಿರ್ವರ್ಷಗಳೆಂದೂ ಈಗಿನ ವಿಶ್ವದ ತ್ರಿಜ್ಯವನ್ನು ಈ ಅಸ್ಪಷ್ಟ ಜ್ಯೋತಿಗಳ ವೇಗದಿಂದ ಲೆಕ್ಕ ಹಾಕಿದರೆ ೨೦೦೦೦ ಲಕ್ಷ ಜ್ಯೋತಿರ್ವರ್ಷಗಳಾಗುವುವೆಂದೂ ಸರ್ ಆರ್ಥರ್ ಎಡ್ಡಿಂಗ್‌ಟನ್

(Sir Arthur Eddington) ಅವರು ಹೇಳುವರು. ಲಿಮೇಟ್ರಿ (Lemaitre) ಅವರು ಈ ವಿಶ್ವದ ವಯುಸ್ಸು ಸುಮಾರು ೩೦೦೦೦೦ ಲಕ್ಷ ವರ್ಷಗಳೆಂದು ಹೇಳುವರು. ಐನ್‌ಸ್ಟೈನ್ ವಿಶ್ವದಲ್ಲಿ ಬೆಳಕು ೬೭೦೦೦೦ ಲಕ್ಷ ವರ್ಷಗಳಲ್ಲಿ ಒಂದು ಪ್ರದಕ್ಷಿಣೆಯನ್ನು ಮಾಡುವುದು, ಅಂದರೆ ಅಷ್ಟು ದೀರ್ಘ ಕಾಲ ನಾವು ಬದುಕಿದ್ದರೆ ನಮ್ಮ ಬೆನ್ನು ನಮಗೆ ಕಾಣುವುದು. ಆದರೆ ಈ ವಿಸ್ತಾರಶೀಲ ವಿಶ್ವದಲ್ಲಿ ಬೆಳಕು ಈ ರೀತಿಯ ಪ್ರದಕ್ಷಿಣೆಯನ್ನು ಮಾಡಲು ಉಪಕ್ರಮಿಸಿದರೂ ಪ್ರದಕ್ಷಿಣೆಯನ್ನು ಮಾತ್ರ ಪೂರೈಸಲಾರದು. ಏಕೆಂದರೆ ಅದು ಮುಂದೆ ಮುಂದೆ ಹೋದಂತೆಲ್ಲಾ ವಿಶ್ವವೂ ವಿಸ್ತಾರ ಹೊಂದುತ್ತ ಹೋಗುವುದು. ಜೂಜಿನ ಕುದುರೆಗಳು ಹೋಗಿ ಸೇರುವ ಸ್ಥಳವು ದೂರ ದೂರ ಸರಿಯುತ್ತಿದ್ದರೆ ಜೂಜು ಎಂದಿಗೆ ತಾನೆ ಮುಗಿದೀತು? ಹೀಗೆ ಕಾಲಾನುಕಾಲದಲ್ಲಿ ಒಂದು ಅಸ್ಪಷ್ಟ ಜ್ಯೋತಿಯಿಂದ ಮತ್ತೊಂದು ಅಸ್ಪಷ್ಟ ಜ್ಯೋತಿಗೆ ಬೆಳಕು ಬರುವುದೇ ಅಸಾಧ್ಯವಾಗಿ ಪರಸ್ಪರ ಸಂಪರ್ಕವೇ ನಾಶಹೊಂದುವುದು. ಅಂದು ಜಗತ್ತು ತನ್ನ ಕೊನೆಯ ಅವಸ್ಥೆಯನ್ನು ಹೊಂದಿತೆಂದು ಹೇಳಬಹುದು.

ಕ್ರಿ. ಶ. ೧೯೩೨ ರಲ್ಲಿ ಪ್ರೊ. ಮಿಲ್ನೆ (Prof-Milne) ಅವರು ದೂರ ಸರಿಯುತ್ತಿರುವ ಈ ಅಸ್ಪಷ್ಟ ಜ್ಯೋತಿಗಳ ಸ್ವರೂಪವನ್ನು ಬೇರೆ ವಿಧದಲ್ಲಿ ಪ್ರತಿಪಾದಿಸಿದರು. ಪ್ರಪಂಚಸೃಷ್ಟಿಯು ಒಂದು ಮದ್ದು ಸಿಡಿದಂತೆ ಎಂದು ಅವರು ಭಾವಿಸುವರು. ಮದ್ದು ಸಿಡಿದಾಗ ದೂರ ಹೆಚ್ಚಿದಷ್ಟು ಸಿಡಿದ ಚೂರುಗಳ ವೇಗವೂ ಹೆಚ್ಚುವುದು. ಹಾಗೆಯೇ ಈ ಅಸ್ಪಷ್ಟ ಜ್ಯೋತಿಗಳ ವೇಗಗಳೂ ಅವುಗಳ ಪರಸ್ಪರ ದೂರವು ಹೆಚ್ಚಿದಂತೆಲ್ಲಾ ಹೆಚ್ಚುವುವು. ಇವರ ಸಿದ್ಧಾಂತದಲ್ಲಿ ದೇಶವು ಆಕಾರರಹಿತವಾದುದು ಮತ್ತು ಅನಂತವಾದುದು. ವಿಶ್ವವು ವಿಸ್ತಾರಶೀಲವಾದುದೇ, ಅನಂತವಾದುದೇ ಅಥವಾ ಎಲ್ಲೆಯುಳ್ಳದ್ದೋ, ದೇಶವು ಆಕಾರ ಉಳ್ಳದ್ದೋ ಅಥವಾ ಚಪ್ಪಟೆ (flat) ಯಾದುದೋ ಇವೇ ಮುಂತಾದ ಪ್ರಶ್ನೆಗಳಿಗೆ ಉತ್ತರಗಳು ನಾವು ಕಾಲವನ್ನು ಯಾವ ರೀತಿಯಲ್ಲಿ ಅಳೆಯುವೆವೋ ಅದನ್ನು ಅವಲಂಬಿಸಿವೆ ಎಂದು ಪ್ರೊ. ಮಿಲ್ನೆ ಅವರು ಹೇಳುವರು. ಕಾಲವನ್ನು ಭೂಮಿಯು ಸೂರ್ಯನ ಸುತ್ತಲೂ ಸುತ್ತುವ ಕಾಲಮಾನದಿಂದ ಅಳೆದರೆ ವಿಶ್ವವು ಅನಂತವಾದುದೆಂದೂ ಆದರೂ ಆಕಾರದಿಂದ ಕೂಡಿರುವುದೆಂದೂ ಕಂಡುಬರುವುದು; ಕಾಲವನ್ನು ಪರಮಾಣುಗಳಲ್ಲಿರುವ ಅಂತರ ಚಲನೆಗಳ ಕಾಲಮಾನದಿಂದ ಅಳೆದರೆ ದೇಶವು ವಿಸ್ತಾರಶೀಲಸ್ವಭಾವ ಉಳ್ಳದ್ದಲ್ಲವೆಂದೂ ದೇಶ ಮತ್ತು ಕಾಲಗಳು ಅನಂತವಾದುವುಗಳೆಂದೂ ಕಂಡುಬರುವುದು— ಎಂದು ಇವರು ಪ್ರತಿಪಾದನೆ ಮಾಡಿರುವರು. ಪ್ರೊ. ಮಿಲ್ನೆಯವರ ಸಿದ್ಧಾಂತವು ಸಂಪೂರ್ಣ ಮನ್ನಣೆಯನ್ನು ಇನ್ನೂ ಪಡೆದಿಲ್ಲ.

ಶ್ರೀ. ದೇಸಾಯಿ ಪಾಂಡುರಂಗರಾಯರು
ಅವರಿಂದ

ಸಂಗೀತ ಸಭೆ

(ಮಕ್ಕಳ ಕತೆ)

ಒಂದು ಸಂಗೀತಸಭೆ ಇದ್ದರೆ ಮೇಲು. ಎಲ್ಲರು ಒಳ್ಳೆಯ ಹಾಡನ್ನೋ, ವಾದ್ಯವನ್ನೋ ಕೇಳಿ ಸಂತೋಷಪಡಬಹುದು. ಇದಕ್ಕಾಗಿ ಆಲೋಚನೆ ಮಾಡಲು ಪಶುಪಕ್ಷಿಗಳು ಒಂದೆಡೆ ಸೇರಿದವು. ಗಜರಾಯನು ಈ ಆಲೋಚನಾ ಸಭೆಯ ಅಧ್ಯಕ್ಷನಾದನು.

ನಾಳಿನ ದೀಪಾವಳಿಯ ದಿವಸ ಸಂಗೀತ ಸಭೆಯನ್ನು ಪ್ರಾರಂಭಿಸಬೇಕು ಎಂದು ಗೊತ್ತಾಯಿತು. ಈ ಆರಂಭ ಉತ್ಸವವನ್ನು ಸಡಗರದಿಂದ ಮಾಡಬೇಕು ಎಂದು ಎಲ್ಲರು ಒಪ್ಪಿಕೊಂಡರು. ಈ ಉತ್ಸವಕ್ಕೆ ಪ್ರಖ್ಯಾತರಾದ ಇಬ್ಬರು ಸಂಗೀತಗಾರರನ್ನು ಕರೆಯಿಸಬೇಕು ಎಂದು ಸಭಿಕರು ಸೂಚಿಸಿದರು. ಒಬ್ಬರು ಭರತನಾಟ್ಯ ಶಾಸ್ತ್ರದಂತೆ ಸೊಗಸಾಗಿ ಕುಣಿಯುವವರು. ಇನ್ನೊಬ್ಬರು ಕರ್ನಾಟಕ ಸಂಗೀತ ಶಾಸ್ತ್ರದಂತೆ ಇಂಪಾಗಿ ಹಾಡುವವರು.

ಹೀಗೆ ಉತ್ತಮವಾಗಿ ಕುಣಿಯಬಲ್ಲವರು ಮತ್ತು ಹಾಡಬಲ್ಲವರು ಯಾರು ಇರುವರು ಎಂಬ ವಿಚಾರವು ನಡೆದಾಗ ಸಭೆಯಲ್ಲಿ ಬಹಳ ಗೊಂದಲವೆದ್ದಿತು. ಪ್ರತಿಯೊಬ್ಬನು ತನಗೆ ಬೇಕಾದವರ ಹೆಸರುಗಳನ್ನು ಹೇಳುವನು. ಅವರ ಗುಣಗಳನ್ನು ಹೊಗಳುವನು. ವಿರುದ್ಧ ಪಕ್ಷದವರು ಅವರನ್ನು ತೆಗಳುವರು. ಹೀಗಾಗಿ ಸಭೆಯಲ್ಲಿ ಜಗಳವು ಹುಟ್ಟಿ ಬಣಗಳು ಉಂಟಾದವು. ಕೊನೆಗೆ ಬಹುಮತದಿಂದ ಈ ಇಬ್ಬರನ್ನು ಕರೆಯಿಸಬೇಕೆಂದು ನಿರ್ಣಯವಾಯಿತು. ೧ ಕುಣಿಯಲಿಕ್ಕೆ, ಕರಡಿ ಗುಡ್ಡದ ಜಾಂಬವತೀದೇವಿ. ೨ ಹಾಡಲಿಕ್ಕೆ, ಎತ್ತಿನಕೊಳ್ಳದ ಬಸವನಂದಿ.

ಇದರಿಂದ ಒಳಗೊಳಗೆ ಬಹಳ ಮನಸ್ತಾಪವಾಯಿತು. ದೀಪಾವಳಿಯ ದಿವಸ ಸಂಗೀತ ಸಭೆ ಸ್ಥಾಪನವಾಗಬಾರದೆಂದು ವಿರುದ್ಧ ಪಕ್ಷದವರು. ಪ್ರಯತ್ನಿಸಿದರು. ಅದನ್ನು ಸ್ಥಾಪಿಸಿಯೇ ಬಿಡುವೆವು ಎಂದು ಗಜರಾಯ ಮೊದಲಾದವರು ಹಟತೊಟ್ಟರು. ಅಂದಿನ ಸಭೆಯಲ್ಲಿ ಪುಕ್ಕಟೆಯಾಗಿ ಒಬ್ಬರನ್ನೂ ಬಿಡಬಾರದು ಮತ್ತು ಸಭೆಯಲ್ಲಿ ಗಲಾಟೆ ಆಗಬಾರದೆಂದು ಸ್ವಯಂಸೇವಕರ ದಂಡನ್ನು ಸಿದ್ಧಪಡಿಸಿದರು. ಚಿರತೆಗಳೆಲ್ಲ ಈ ದಂಡಿನಲ್ಲಿ ಸೇರಿದವು. ಹುಲಿಭೀಕರನು ಸ್ವಯಂಸೇವಕರ ನಾಯಕನಾದನು. ಸಿದ್ಧತೆ ಭರದಿಂದ ಸಾಗಿತು.

ಸಮಾರಂಭದ ಉತ್ಸವಕ್ಕಾಗಿ ಮಂಟಪವನ್ನು ಕಟ್ಟುವುದು, ರಂಗಸ್ಥಳವನ್ನು ಏರ್ಪಡಿಸುವುದು, ಮುಂತಾದ ಕೆಲಸಗಳು ಮುಗಿಯುವಷ್ಟರಲ್ಲಿ ದೀಪಾವಳಿ ಬಂದೇ ಬಿಟ್ಟಿತು.

ಲಕ್ಷ್ಮೀ ಪೂಜನ ಸಾಂಗವಾಯಿತು. ಈ ದಿನ ನಾಳಿನ ಉತ್ಸವದ ತಿಕೇಟುಗಳು ಬಹಳ ಮಾರಾಟವಾದವು. ನಾ ನೀ ಎಂದು ಮೇಲಾಟ ನಡೆಯಿತು. ೧೦ ರಿಂದ ೨೫ ರೂಪಾಯಿವರೆಗಿನ ತಿಕೇಟುಗಳೆಲ್ಲ ತೀರಿದವು. ಉತ್ಸವದ ಅಧ್ಯಕ್ಷನಾದ ಗಜರಾಯನಿಗೆ ಬಹಳ ಸಂತೋಷವಾಯಿತು. ಜಾಂಬವತೀದೇವಿಗೆ ಒಂದು ಹರಳಿನ ಉಂಗುರವನ್ನು ಮತ್ತು ಬಸವನಂದಿಗೆ ಜರತಾರಿ ಶಾಲನ್ನು ಸಂಭಾವನೆಯಾಗಿ ಕೊಡಬೇಕೆಂದು ಆತನು ನಿರ್ಧಾರ ಮಾಡಿದನು.

ಬಲಿಪಾಡ್ಯದ ದಿನ ಸಾಯಂಕಾಲ ಉತ್ಸವವು ಪ್ರಾರಂಭವಾಯಿತು. ಸಭಾಮಂಟಪವು ಪ್ರೇಕ್ಷಕರಿಂದ ಕಿಕ್ಕಿರಿದು ತುಂಬಿತು. ಮೊದಲು ಭರತನಾಟ್ಯದ ಕಾರ್ಯಕ್ರಮ; ಆ ಮೇಲೆ ಕರ್ನಾಟಕ ಸಂಗೀತವಿದ್ದಿತು.

ಜಾಂಬವತೀದೇವಿ ರಂಗಸ್ಥಳಕ್ಕೆ ಬಂದಳು. ಸಭಿಕರು ಕಿವಿ ಗಡಚಿಕ್ಕುವಂತೆ ಚಪ್ಪಾಳೆ ತಟ್ಟಿದರು. ಕೆಲವರು "ಹಶ್-ಹುಶ್" ಎಂದರು. ಆದರೆ ಈ ಸದ್ದು ಆ ದನಿಯಲ್ಲಿ ಅಡಗಿಹೋಯಿತು.

ಜಾಂಬವತೀದೇವಿಯ ವೇಷ ಭೂಷಣಗಳು ಅಬ್ಬರವಾಗಿದ್ದವು. ಆಕೆ ಹಸಿರು ಪೀತಾಂಬರ ಉಟ್ಟಿದ್ದಳು. ಕಾಲಲ್ಲಿ ಗೆಜ್ಜೆಗಳನ್ನು ಕಟ್ಟಿದ್ದಳು. ಮುಖಕ್ಕೆ ಪೌಡರ್ ಮತ್ತು ತುಟಿಗೆ ಬಣ್ಣವನ್ನು ಹಚ್ಚಿಕೊಂಡಿದ್ದಳು.

ಜಾಂಬವತೀದೇವಿ ಶಿವಪಾರ್ವತಿಯರಿಗೆ ಆರತಿಯನ್ನು ಮಾಡಿ ಹೂವನ್ನು ಹಾರಿಸಿದಳು.

ಅಂದಿನ ಮುಖ್ಯ ನರ್ತನ ಕಾಲಿಯಾಮರ್ದನ. ಜಾಂಜವತೀದೇವಿ ಕೃಷ್ಣನ ಪಾತ್ರವನ್ನು ನಟಿಸಿದಳು. ಕೃಷ್ಣನು ಹಾಡುತ್ತ ಕುಣಿಯುತ್ತ ಗೋಪಾಲಕರೊಂದಿಗೆ ಯಮುನಾ ನದಿಗೆ ಬಂದನು. ಕಾಲಿಯಾ ನಾಗನು ನದಿಯ ಮಡುವಿನಲ್ಲಿ ಅಡಗಿದ್ದನು. ಕೃಷ್ಣನು ಮಡುವಿನಲ್ಲಿ ಧುಮುಕಿದನು.

ಇದ್ದಕ್ಕಿದ್ದ ಹಾಗೆ "ಕೇ ಓಽಽ" ಎಂಬ ಕರ್ಕಶವಾದ ಕೂಗು ಕೇಳಿಸಿತು. ಘೋರವಾದ ಘಟಸರ್ಪವು ಹೆಡೆಯನ್ನು ಬಿಚ್ಚಿ ಜಾಂಬವತಿಯ





ಮುಂದೆ ಎದ್ದು ನಿಂತಿತು. ಅದು ಕಣ್ಣುಗಳಿಂದ ಕಿಡಿಯನ್ನು ಕಾರುತ್ತ ಭುಸ್ ಭುಸ್ ಎಂದು ಕಚ್ಚಲಿಕ್ಕೆ ಹೋಯಿತು. ''ಅಯ್ಯೊ ! ಹಾ !'' ಎಂದು ಕಿರಚಿ ಜಾಂಬವತೀದೇವಿ ಎಚ್ಚರದಪ್ಪಿ ಬಿದ್ದು ಬಿಟ್ಟಳು.

ಹುಲಿಭೀಕರನು ಅಪಾಯದ ಸೀಟಿಯನ್ನು ಊದಿದನು. ''ಹಿಡಿಯಿರಿ, ಬಡಿಯಿರಿ !'' ಎಂದು ಗದ್ದರಿಸಿದನು. ಚಿರತೆಗಳು ಓಡಿ ಬಂದವು. ಆದರೆ ಅಲ್ಲಿ ಯಾರೂ ಇರಲಿಲ್ಲ. ಹಾವು ಮಾಯವಾಗಿ ಹೋಗಿತ್ತು. ಜಾಂಬವತೀದೇವಿಯನ್ನು ಆರಯ್ಕೆ ಬಂಡಿಯಲ್ಲಿ ಹಾಕಿ ಆಸ್ಪತ್ರೆಗೆ ಸಾಗಿಸಿದರು.

ಈ ಅನಾಹೂತದಿಂದ ಸಭೆಯಲ್ಲಿ ಗಲಭೆಯೆದ್ದಿತು. ಗಜರಾಯನು ಶಾಂತರಾಗಲು ಸಭಿಕರಿಗೆ ಬೇಡಿಕೊಂಡನು. ಸ್ವಲ್ಪ ಹೊತ್ತಿನಲ್ಲಿ ಕಾರ್ಯಕ್ರಮವು ಮುಂದುವರಿಯಿತು.

ಬಸವನಂದಿ ಅಂಜುತ್ತ ಅಳುಕುತ್ತ ರಂಗಸ್ಥಳವನ್ನು ಏರಿದನು. ಜಾಂಬವತೀದೇವಿಯ ಅವಸ್ಥೆಯನ್ನು ನೋಡಿ ಆತನು ಮೊದಲು ಬಹಳ ಗಾಬರಿ ಆಗಿದ್ದನು. ಆದರೆ ಗಜರಾಯ ಮತ್ತು ಹುಲಿಭೀಕರರು ಧೈರ್ಯ ಹೇಳಿದ ಬಳಿಕ ಹಾಡಲು ಒಪ್ಪಿದನು.

ಬಸವನಂದಿ ಒಂದು ಲೋಟ ಕಾಫಿಯನ್ನು ಗಂಟಲಿಗೆ ಇಳಿಸಿ ''ಹಾ-ಹೂ'' ಎಂದು ಕರ್ನಾಟಕ ಸಂಗೀತವನ್ನು ಪ್ರಾರಂಭಿಸಿದನು. ಬಾದಾಮಿಯ ಗಣಪತಿಯನ್ನು ಸ್ತೋತ್ರ ಮಾಡಿದನು. ಅಂದಿನ ಸಂಗೀತ ಸಮಾರಂಭದ ನಿಮಿತ್ತ ತಾನು ಹೊಸದಾಗಿ ಕಟ್ಟಿದ ಒಂದು ಗೀತವನ್ನು ಹಾಡತೊಡಗಿದನು.

ಬಸವನಂದಿ ಹಾಡಿನಲ್ಲಿ ತಲ್ಲೀನನಾಗಿದ್ದನು. ಈ ಹೊತ್ತಿಗೆ ಒಮ್ಮಿಂದೊಮ್ಮೆ ''ಭೋಂss'' ಎಂಬ ಶಂಖನಾದವು ಕೇಳಿಸಿತು. ಮರುಗಳಿಗೆಯಲ್ಲಿ ರಂಗಸ್ಥಳದ ಪಕ್ಕಕ್ಕೆ ಕುಳಿತಿದ್ದ ಒಂಟೆ ಭಾಗವತರು ''ಆss'' ಎಂದು ಆಕಳಿಸುತ್ತ ಎದ್ದು ನಿಂತರು. ತಮ್ಮ ಉದ್ದವಾದ ಗೋಣನ್ನು ಚಾಚಿ ಬಸವನಂಧಿಯ ಹತ್ತಿರಕ್ಕೆ ಒಯ್ದರು.

ಸಂತೋಷದಿಂದ ಬಸವನಂದಿಯ ಬೆನ್ನು ತಟ್ಟುವರು ಎಂದು ಕೆಲವರು ಅಂದುಕೊಂಡರು. ಆದರೆ ಒಂಟೆ ಭಾಗವತರು ಬಸವನಂದಿಯ ಬೆನ್ನನ್ನು ತಟ್ಟಲಿಲ್ಲ. ತಮ್ಮ ಕೊಡಲಿಯಂತಹ ಹಲ್ಲುಗಳಿಂದ ಆತನ ಬಾಲವನ್ನು ಬಲವಾಗಿ ಕಡಿದರು.

''ಅಯ್ಯೊ, ಅಪ್ಪ, ಸತ್ತೆನು !'' ಎಂದು ಬಸವನಂದಿ ಗೋಳಿಟ್ಟನು. ಆತನ ಬಾಲವು ರಕ್ತಮಯವಾಯಿತು.

ಸಭೆಯಲ್ಲಿ ಕೋಲಾಹಲವೆದ್ದಿತು. ಹುಲಿಭೀಕರನು ಮತ್ತೆ ಅಪಾಯದ ಸೀಟಿಯನ್ನು ಊದಿದನು. ಹಿಡಿಬಡಿಯ ಗರ್ಜನೆ ಮಾಡಿದನು. ಆದರೆ ಆತನ ಮಾತನ್ನು ಯಾರು ಕೇಳಬೇಕು ?

ಒಂಟೆ ಭಾಗವತರು ಸಭಾ ಮಂಟಪದ ಹಿಂಬಾಗಿಲಿಗೆ ನುಗ್ಗಿ ಅದನ್ನು ಮುರಿದು ಪಾರಾದರು. ಅವರ ಹಿಂದೆ ಇನ್ನೂ ಕೆಲವರು ಓಡಿ ಹೋದರು.

ಸಭೆಯಲ್ಲಿ ಶಾಂತತೆಯನ್ನು ಸ್ಥಾಪಿಸುವುದು ಅಶಕ್ಯವೆನಿಸಿತು. ಗಜರಾಯನು ಕಂಗೆಟ್ಟನು. ''ಇನ್ನು ಮುಂದಿನ ಸರದಿ ನನ್ನ ಮೇಲೆ'' ಎಂದುಕೊಂಡು ಯಃಪಲಾಯ ಮಾಡಿದನು. ಇದನ್ನು ನೋಡಿ ಎಲ್ಲರು ಕಾಲಿಗೆ ಬುದ್ಧಿ ಹೇಳಿದರು. ಐದು ನಿಮಿಷವೆನ್ನುವಷ್ಟರಲ್ಲಿ ಅಲ್ಲಿ ಒಬ್ಬರೂ ಇರಲಿಲ್ಲ.

ಹೀಗೆ ಸಂಗೀತ ಸಭೆ ಹುಟ್ಟುಹುಟ್ಟುವಾಗಲೆ ಸಾವನ್ನು ಕಂಡಿತು. ಮುಂದೆ ಆ ರಾಜ್ಯದಲ್ಲಿ ಸಂಗೀತ ಸಭೆಯನ್ನು ಸ್ಥಾಪಿಸುವ ಧೈರ್ಯವನ್ನು ಯಾರೂ ಮಾಡಲಿಲ್ಲ.

ಸಂಗೀತ ಸಭೆ ಇಲ್ಲದಿದ್ದರೂ ಸಂಗೀತಕ್ಕೆ ಮಾತ್ರ ಆ ರಾಜ್ಯದಲ್ಲಿ ಕೊರತೆಯಿಲ್ಲ. ಅದು ನೈಸರ್ಗಿಕ ಸಂಗಿತ. ಇಂಪಾದ ಹಾಡು, ಕುಣಿತ, ಎಲ್ಲವೂ ನಡೆಯುತ್ತಿದೆ. ಅದನ್ನು ನೀವು ಕೇಳಿದ್ದೀರಾ ?

ಡಾ|| ಆರ್. ಆರ್. ಉಮರ್ಜಿ

ಅವರಿಂದ



ಸಂಖ್ಯಾಶಾಸ್ತ್ರ: ಭಾರತದಲ್ಲಿ ಅದರ ಬೆಳವಣಿಗೆ ಅವಶ್ಯ

ಡಾಕ್ಟರ ಉಮರ್ಜಿಯವರು ಅಮೇರಿಕದಲ್ಲಿ ಸಂಖ್ಯಾಶಾಸ್ತ್ರವನ್ನಭ್ಯಸಿಸಿ ಬಂದವರು. ಭಾರತದಲ್ಲಿ ಅಂಕೆ ಸಂಖ್ಯೆಗಳನ್ನು ಸಶಾಸ್ತ್ರೀಯವಾಗಿ ಕಲೆಹಾಕುವ ಕ್ರಮ ಇನ್ನೂ ಸರಿಯಾಗಿಲ್ಲ. ದೇಶದ ಜೀವನದ ಪ್ರತಿಯೊಂದು ಅಂಗದಲ್ಲಿ ಸಂಖ್ಯಾಶಾಸ್ತ್ರದ ಅವಶ್ಯಕತೆ ಬಹಳವಾಗಿದೆ. ಅದನ್ನು ಬೆಳೆಸುವುದು ನಮ್ಮ ಸಮಸ್ಯೆಗಳ ಪರಿಹಾರಕ್ಕೆ ಅಗತ್ಯ.

ಸಂಖ್ಯಾಶಾಸ್ತ್ರ! ಇದರ ಬಗ್ಗೆ ಸಾಮಾನ್ಯನ ಕಲ್ಪನೆ ಹೇಗಿರುವುದು? ಸರಕಾರವಾಗಲಿ ಇಲ್ಲವೆ ಖಾಸಗಿ ಉದ್ಯಮ, ವ್ಯಾಪಾರಸಂಸ್ಥೆಗಳಾಗಲಿ ಒಂದು ಅಚ್ಚುಕಟ್ಟಿನಿಂದ ಕೂಡಿಸಿ ಪ್ರಕಟಿಸಿದ ಸಂಗತಿಗಳ ಮತ್ತು ಅಂಕಿ-ಸಂಖ್ಯೆಗಳ ಕೋಷ್ಟಕಪಟ್ಟಿ ಎಂದರೇನೆ ಸಂಖ್ಯಾಶಾಸ್ತ್ರ ಎಂದು ತಿಳಿಯುವನು ಸಾಮಾನ್ಯ ಮನುಷ್ಯನು. ಈ ಕೋಷ್ಟಕಪಟ್ಟಿಗಳನ್ನು ನೋಡಿ ಸಾಮಾನ್ಯ ಮನುಷ್ಯನು ಚಕಿತನಷ್ಟೆ ಅಲ್ಲ, ದಿಗ್ಭ್ರಾಂತನಾಗಬಹುದು. ಆದರೆ ವಸ್ತುಸ್ಥಿತಿಯನ್ನು (ಹಾರಿಕೆಯ ಸುದ್ದಿಯನ್ನಲ್ಲ) ಅನುಲಕ್ಷಿಸಿ ತಮ್ಮ ಧೋರಣವನ್ನು ಗೊತ್ತುಪಡಿಸಲು ಉದ್ದಿಮೆದಾರರಿಗೂ ವ್ಯವಸಾಯಗಳ ಕಾರ್ಯಕರ್ತರಿಗೂ ಸರಕಾರೀ ಖಾತೆಗಳ ಮುಖ್ಯಸ್ಥರಿಗೂ ಈ ಪಟ್ಟಿಗಳು ಅತ್ಯಗತ್ಯವಾಗಿವೆ. ದೇಶದ ಆರ್ಥಿಕ ಭದ್ರತೆ ಮತ್ತು ಔದ್ಯೋಗಿಕ ಪ್ರಗತಿಗೆ ಸಂಬಂಧಿಸಿದ ಪ್ರಶ್ನೆಗಳ ವಿಷಯದಲ್ಲಿ ತಪ್ಪು ಅಂಕಿ-ಸಂಖ್ಯೆಗಳನ್ನು ನಂಬಿ ನಡೆಯುವುದು ಸರಕಾರಕ್ಕಾಗಲಿ, ಉದ್ದಿಮೆದಾರನಿಗಾಗಲಿ ಶಕ್ಯವಿಲ್ಲ. ಈ ಪಟ್ಟಿಗಳಾದರೊ ಒಂದು ತಜ್ಞತೆಯ ಕೊನೆಯ ಮೆಟ್ಟಿಲಾಗಿರುವುವು. ಅಸಂಖ್ಯಾತ ಅಂಕಿ-ಸಂಖ್ಯೆಗಳನ್ನು ಮೊದಲು ಒಂದೆಡೆ ಕೂಡಿಸುವುದು, ಆ ಮೇಲೆ ಅವುಗಳನ್ನು ಒಂದು ಕ್ರಮದಲ್ಲಿ ಹೊಂದಿಸುವುದು, ತರುವಾಯ ಅವುಗಳನ್ನು ಅರ್ಥವಾಗುವಂತೆ ಕ್ರೋಡೀಕರಿಸುವುದು; ಮುಂಚೆ ತಜ್ಞರು ಈ ಕೆಲಸವನ್ನು ಮಾಡಿದ ಮೇಲೆ ಈ ಪಟ್ಟಿಗಳು ತಯಾರಾಗುವುವು. ಈ ಪಟ್ಟಿಗಳಿಂದ ಒಂದು ಪ್ರಶ್ನೆಯ ಸಮರ್ಪಕ ಚಿತ್ರ ನಮ್ಮ ಮುಂದೆ ನಿಲ್ಲುವುದು; ಆವಾಗಲೆ ಯೋಗ್ಯವಾದುದನ್ನು ಮಾಡಲು ಧೋರಣವನ್ನು ಗೊತ್ತುಪಡಿಸಲು ಶಕ್ಯವಾಗುವುದು.

ಸಂಖ್ಯಾಶಾಸ್ತ್ರದ ಬಗ್ಗೆ ಇಂದು ಬಲವಾದ ಅವಿಶ್ವಾಸ ಇದೆ ಎಂಬುದು ನಿಜ. ಆದರೆ ಸ್ವಾರ್ಥಕ್ಕಾಗಿ ಕೆಲವರು ತಮಗೆ ಅನುಕೂಲವಾಗುವಂತೆ ಅಂಕಿ-ಸಂಖ್ಯೆಗಳನ್ನು ಹೊಂದಿಸುವುದರಿಂದ ಇಲ್ಲವೆ ಕೆಲವರು ಉತ್ಸಾಹದ ಭರದಲ್ಲಿ ಇವುಗಳಿಂದ ಹೊರಡದ ಅರ್ಥವನ್ನು ಹಚ್ಚುವುದರಿಂದ ಅವಿಶ್ವಾಸವು ಹುಟ್ಟುತ್ತಲಿದೆ. ಸಂಖ್ಯಾಶಾಸ್ತ್ರವೂ ಒಂದು ಸಾಧನ, ಮಿಕ್ಕ ಸಾಧನಗಳಂತೆ ಇದನ್ನೂ ದುರುಪಯೋಗಿಸಬಹುದಾಗಿದೆ ಎಂಬುದನ್ನು ಇಲ್ಲಿ ಒತ್ತಿ ಹೇಳಬೇಕಾಗಿದೆ. ಇದಕ್ಕೊಂದು ಉದಾಹರಣವನ್ನು ಕೊಡಬಹುದು. ಡಾಕ್ಟರನು ಒಂದು ಸ್ಟೆಥೊಸ್ಕೋಪ್ (ಕಿವಿಯಲ್ಲಿಟ್ಟುಕೊಂಡು ದೇಹದೊಳಗಿನ ಸ್ಥಿತಿಯನ್ನು ಪರೀಕ್ಷಿಸುವ ರಬರ್ ಕೊಳವೆ) ಮತ್ತು ಒಂದು ಥರ್ಮಾಮೀಟರ್ (ಜ್ವರವನ್ನು ಅಳೆಯುವುದು) ಇವುಗಳನ್ನು ಉಪಯೋಗಿಸುವನಷ್ಟೆ. ಇವುಗಳಿಂದ ಚಿಕಿತ್ಸೆಮಾಡಿ ಔಷಧವನ್ನು ನಿರ್ಣಯಿಸುವನು. ಇವು ಕೇವಲ ಸಾಧನ ಮಾತ್ರ. ನಿದಾನ ತಪ್ಪದಂತೆ ನೋಡಲು ಜಾಣತನ ಮತ್ತು ಅನುಭವ ಬೇಕಲ್ಲದೆ, ನಿದಾನ

ತಪ್ಪಿ ರೋಗಿಗೆ ಅಪಾಯವಾದರೆ, ಈ ಸಾಧನಗಳನ್ನು ದೂಷಿಸಿ ಪ್ರಯೋಜನವಿಲ್ಲ. ಸಂಖ್ಯಾಶಾಸ್ತ್ರವೂ ಸ್ಟೆಥೊಸ್ಕೋಪ್-ಥರ್ಮಾಮೀಟರಗಳಂತೆ ಒಂದು ಸಾಧನ ಮಾತ್ರ.

ಸಂಖ್ಯಾಶಾಸ್ತ್ರವನ್ನು ಬೇಕಾದಲ್ಲಿ ಅನ್ವಯಿಸಬಹುದು ಎಂದರೆ ಅತಿಶಯೋಕ್ತಿಯಿಲ್ಲ. ವಿಜ್ಞಾನ ಸಂಶೋಧನದ ಅನೇಕ ಕಡೆಗಳಲ್ಲಿ, ಸಾಮಾಜಿಕ ಮತ್ತು ಆರ್ಥಿಕ ಪರಿಶೋಧನ ಕಾರ್‍ಯದಲ್ಲಿ, ವ್ಯವಸಾಯ-ಉದ್ಯಮಗಳ ಸಂದರ್ಭದಲ್ಲಿ, ಸರಕಾರೀ ಕಾರ್ಯದಲ್ಲಿ ಸಂಖ್ಯಾಶಾಸ್ತ್ರಪದ್ಧತಿಯಿಂದಲೆ ಬಿಡಿಸಲು ಶಕ್ಯವಾದ ಪ್ರಶ್ನೆಗಳಿವೆ. ಹೆಚ್ಚು ಮುಂದರಿದ ಇಂಗ್ಲಂಡ-ಅಮೇರಿಕಗಳಂತಹ ದೇಶಗಳಲ್ಲಿ ಇದನ್ನು ನೋಡಬಹುದು. ನಮ್ಮ ದೇಶದಲ್ಲಿ ಸಂಖ್ಯಾಶಾಸ್ತ್ರದ ಉಪಯೋಗದ ಅಗತ್ಯ ಹೆಚ್ಚಿದೆ ಎಂದು ಬೇರೆಯಾಗಿ ಹೇಳಬೇಕಾಗಿಲ್ಲ. ಈ ಚಿಕ್ಕ ಲೇಖದಲ್ಲಿ ಅದರ ಕೆಲವೇ ಸ್ವರೂಪಗಳನ್ನು ಹೇಳಲಾಗುವುದು.

ಆಹಾರ ಮತ್ತು ಬೇಸಾಯ

ಭಾರತವು ಇಂದು ಒಂದು ಇಕ್ಕಟ್ಟಿನಲ್ಲಿದೆ. ಭೂಮಿಯ ಮೇಲೆ ಜನಸಂಖ್ಯೆಯ ಒತ್ತಡ ಹೆಚ್ಚಾಗುತ್ತಲಿದೆ; ಒಂದೆಡೆ ಬೆಳೆಯುತ್ತಿರುವ ಜನನಪ್ರಮಾಣ, ಇನ್ನೊಂದೆಡೆ ಪಾಕಿಸ್ತಾನದಿಂದ ನುಗ್ಗುತ್ತಿರುವ ನಿರಾಶ್ರಿತರ ತಂಡಗಳು. ಈ ಕೋಟಿಗಟ್ಟಲೆ ಜನರಿಗೆ ಅನ್ನ-ಬಟ್ಟೆ-ವಸತಿಗಳನ್ನು ಒದಗಿಸುವುದು ಹೇಗೆ? ನಮ್ಮ ಜನಸಂಖ್ಯೆಯು ಪರಮಾವಧಿಯನ್ನು ಎಂದೋ ಮುಟ್ಟಿದ್ದು ಈ ಅಧಿಕಸಂಖ್ಯೆಯಿಂದ ಅನಿವಾರ್‍ಯವಾಗಿಯೆ ದೇಶಕ್ಕೆ ತೊಂದರೆಗಳು ಒದಗಿವೆ ಎಂದು ವಿಚಾರಸರಣಿ. ಆದರೆ ದೇಶದ ಗರ್ಭದಲ್ಲಿದ್ದ ಪೋಷಕ ಶಕ್ತಿ-ಸಾಮುಗ್ರಿಯನ್ನು ಮೀರುವಷ್ಟು ನಮ್ಮ ಜನಸಂಖ್ಯೆ ಇನ್ನೂ ಬೆಳೆದಿಲ್ಲ, ಆಹಾರದ ಉತ್ಪಾದನ-ಆದಾನ (procurement)—ಸಂಗ್ರಹ-ಮತ್ತು ಹಂಚುವಿಕೆ ಇವುಗಳನ್ನು ತಪ್ಪು ರೀತಿಯಲ್ಲಿ ನಡೆಸಿದ ಆಡಳತ ದೋಷಕ್ಕಾಗಿ ಇಂದಿನ ಕಷ್ಟಗಳು ಎಂದು ಇನ್ನೊಂದು ವಾದಸರಣಿಯು ಪ್ರತಿಪಾದಿಸುತ್ತಿದೆ. ಈ ಎರಡನೆಯ ಅಭಿಪ್ರಾಯದ ಮೇರೆಗೆ, ಪ್ರತಿಯೊಬ್ಬನಿಗೂ ಎಲ್ಲ ಸೌಕರ್‍ಯಗಳು ದೊರಕುವಂತೆ ಬೇಸಾಯವನ್ನೂ ಉದ್ಯಮವನ್ನೂ ತೃಪ್ತಿಕರವಾದ ರೀತಿಯಲ್ಲಿ ಬೆಳೆಸುವುದು ಶಕ್ಯವಿದೆ. ಪ್ರಶ್ನೆ ಗಹನವಾಗಿದೆ, ಸರಿಯಾದ ಅಂಕಿ-ಸಂಖ್ಯೆಗಳಿಲ್ಲ, ಆದುದರಿಂದ ಇಂತಹ ಭಿನ್ನಾಭಿಪ್ರಾಯವಿದ್ದಲ್ಲಿ ಆಶ್ಚರ್‍ಯವಿಲ್ಲ. ೧೯೩೭ರಲ್ಲಿ ಬ್ರಹ್ಮದೇಶವು, ೧೯೪೭ರಲ್ಲಿ ಪಾಕಿಸ್ತಾನವು ಪ್ರತ್ಯೇಕವಾದುದರಿಂದ ಫಲವತ್ತಾದ ಭೂಭಾಗವನ್ನು ಕಳೆದುಕೊಂಡು, ಅಧಿಕ ಆಹಾರದ ಭಾರತದಲ್ಲಿ ಆಹಾರದ ಕೊರತೆಯುಂಟಾಯಿತು. ಇಂದು ಆಹಾರ, ಹತ್ತಿ ಮತ್ತು ಸಣಬುಗಳ ಆಯಾತ ಮಾಡುತ್ತಿರುವುದರಿಂದ ನಮ್ಮದು ಒಕ್ಕಲುತನದ ದೇಶ ಎನ್ನುವಂತಿಲ್ಲ; ಈ ಆಯಾತಗಳಿಗೆ ಕೊಡುವಷ್ಟು ವಿದೇಶದ ಹಣವನ್ನು, ಯಂತ್ರೋಪಕರಣ ಮೊದಲಾದುವುಗಳನ್ನು ವಿದೇಶಕ್ಕೆ ಮಾರಿ ದೊರಕಿಸುವುದಿಲ್ಲವಾದ್ದರಿಂದ, ನಮ್ಮದು ಔದ್ಯೋಗೀಕರಣದ ದೇಶವೂ ಎನ್ನಿಸುವುದಿಲ್ಲ. ಭಾರತವು ಕೊನೆಯವರೆಗೂ ವಿದೇಶಗಳ ಸಾಲದ ಮೇಲೆ ಅವಲಂಬಿಸಿ ನಿಲ್ಲಲು ಶಕ್ಯವಿಲ್ಲ; ಅದರಂತೆಯೆ ತಾನು ಸಂಗ್ರಹಿಸಿದ ವಿದೇಶೀಕೋಶದಿಂದ ಅನಿಯತಾವಧಿಯವರೆಗೆ ಹಣವನ್ನುಪಯೋಗಿಸಿಕೊಳ್ಳಲೂ ಶಕ್ಯವಿಲ್ಲ. ನಮ್ಮ ಬೇಸಾಯವು ಸ್ವೈರವೃತ್ತಿಯ ಮನ್ಸೂನ್ (ಮಳೆಗಾಲ)ನ್ನು ಅವಲಂಬಿಸಿದೆ; ಮಳೆ ಕಡಿಮೆ ಆದರೆ, ಹೆಚ್ಚು ಅದರೆ, ಅಕಾಲದಲ್ಲಿ ಆದರೆ ಅದು ಹಾನಿಗೀಡಾಗುವುದು. ಆಹಾರೋತ್ಪಾದನೆಯನ್ನು ಶೀಘ್ರವಾಗಿ ಹೆಚ್ಚಿಸಬೇಕಾದರೆ ಒಕ್ಕಲುತನದ ಪದ್ಧತಿಯನ್ನು ಸುಧಾರಿಸಬೇಕು, ಸಣ್ಣ ಪುಟ್ಟ ಜಮೀನುಗಳನ್ನು ಆರ್ಥಿಕವಾಗಿ ಲಾಭದಾಯಕವಾಗುವಂತೆ ಶೇಖರಿಸಬೇಕು ಮತ್ತು ಕಾಲುವೆ ಪದ್ಧತಿಯಿಂದ ಪಡಭೂಮಿಯನ್ನು ಸಾಗುಮಾಡುವುದರಿಂದ ಹೆಚ್ಚು ಭೂಮಿಯನ್ನು ಬೇಸಾಯಕ್ಕೆ ಅಣಿಮಾಡಬೇಕು. ಈ ಬಗ್ಗೆ ಎಷ್ಟೋ ಯೋಜನೆಗಳು ಸೂಚಿಸಲ್ಪಟ್ಟಿವೆ; ಕೆಲವಂತೂ ಕಾರ್ಯರೂಪಕ್ಕೆ ಇಳಿಸಲ್ಪಟ್ಟಿವೆ. ಆದರೂ ಪ್ರಶ್ನೆ ಬಿಟ್ಟಿಲ್ಲ, ಇದ್ದಷ್ಟೆ ಕಷ್ಟದಾಯಕವಾಗಿದೆ. ಯಾಕೆ? ಕಾರಣವು ಸ್ಪಷ್ಟವಾಗಿದೆ. ಈ ಯೋಜನೆಗಳು ಎಷ್ಟರ ಮಟ್ಟಿಗೆ ಒಳಿತಾಗಿ ನಡೆದಿವೆ, ಅಗ್ಗಂಟುಗಳು ಎಲ್ಲಿವೆ ಮುಂತಾಗಿ ನಮಗೆ ಗೊತ್ತೇ ಇಲ್ಲ, ಯಾಕೆಂದರೆ ಸರಿಯಾದ ಅಂಕಿ-ಸಂಖ್ಯೆಗಳೆ ನಮಗೆ ಉಪಲಬ್ಧವಿಲ್ಲ. ಅಂಕಿ-ಸಂಖ್ಯೆಗಳ ಸಂಗ್ರಹವು ಸಶಾಸ್ತ್ರೀಯವಾಗಿರಬೇಕಾಗುವುದು; ಪರಿಸ್ಥಿತಿಯ ಜ್ಞಾನವಾಗುವಂತೆ ಅವುಗಳನ್ನು ಸಚಿತ್ರ ರೂಪದಲ್ಲಿ ಇಲ್ಲವೆ ಕೋಷ್ಟಕಪಟ್ಟಿಗಳಲ್ಲಿ ಪ್ರಕಟಿಸಬೇಕು. ಪ್ರತಿ ಐದು ವರ್ಷಕ್ಕೊಮ್ಮೆ ಬೇಸಾಯದ ಗಣತಿ (ಖಾನೇಸುಮಾರಿ) ಯಾಗಬೇಕು, ನಡುವಿನ ಅವಧಿಯಲ್ಲಿ ಅಲ್ಲಲ್ಲಿ ಮಾದರಿ 'ಸರ್ವೆ' ಗಳನ್ನು ನಡೆಯಿಸಬೇಕು; ಎಂದರೆ ಆಹಾರ ಸಮಸ್ಯೆಯನ್ನು ಬಿಡಿಸಲು ಎಷ್ಟೋ ಸಹಾಯವಾಗಬಹುದು. ಬೆಳೆಗಳ

ಅಂದಾಜನ್ನು ಕಟ್ಟುವ ತಂತ್ರ ಇನ್ನಿಷ್ಟು ಉತ್ತಮಗೊಳ್ಳಬೇಕು; ಅಂದಾಜು ತಪ್ಪಿದಲ್ಲಿ ಅಸಂಖ್ಯಾತ ಜನರು ನಿರಾಹಾರಕ್ಕೆ ತುತ್ತಾಗಬಹುದು, ಉಪವಾಸದಿಂದ ಬಳಲಬಹುದು.

ಉದ್ಯಮ ಮತ್ತು ವ್ಯವಸಾಯ

ಸಿದ್ಧ ಸರಕುಗಳ ತರಗತಿಯನ್ನು ಉತ್ತಮಗೊಳಿಸಲು ಒಂದು ಚನ್ನಾಗಿ ರೂಢವಾದ ಮತ್ತು ನಿಯತವಾದ ತಂತ್ರವಿದೆ; ಅದಕ್ಕೆ ಸ್ಟೆಟಸ್ಟಿಕಲ್ ಕ್ವಾಲಿಟಿ ಕಂಟ್ರೋಲ್ (ಸಂಖ್ಯಾಶಾಸ್ತ್ರ ರೀತಿಯಿಂದ ಸರಕುಗಳ ಸಂಪೂರ್ಣತೆಯನ್ನು ಹತೋಟಿಯಲ್ಲಿಡುವುದು) ಎನ್ನುತ್ತಾರೆ. ಈ ತಂತ್ರವು ಹೀಗಿದೆ: ಒಂದು ಯಂತ್ರವು ಸರಕುಗಳನ್ನು ಸಿದ್ಧಗೊಳಿಸುವಾಗ ಆದರಲ್ಲಿ ಕೆಲವು ನ್ಯೂನತೆಗಳು ಕಂಡುಬಂದರೆ ಅವುಗಳನ್ನು ಸಚಿತ್ರ ರೂಪದಲ್ಲಿ ಸಂಖ್ಯಾಶಾಸ್ತ್ರಜ್ಞನು ಬರೆದಿಡುವನು. ಉತ್ಪಾದನೆಯ ಮಟ್ಟು ಇಳಿದಲ್ಲಿ ತಟ್ಟನೆ ಅವನು ಕಂಡು ಹಿಡಿಯುವನಲ್ಲದೆ, ದೋಷದ ಮೂಲದ ಮೇಲೆಯೆ ಅವನು ಬೆರಳನ್ನಿಡಬಲ್ಲನು. ಈ ರೀತಿಯಲ್ಲಿ ಸಿದ್ಧ ಸರಕುಗಳು ಅವು ನೇಯ್ಗೆಯ ಸರಕುಗಳಿರಲಿ, ಜೋಡಣೆಯ ಉಪಯಂತ್ರ (tools of precision) ಗಳಿರಲಿ, ಮಟ್ಟನ್ನು ಉತ್ತಮವಾಗಿಡಲು ಶಕ್ಯವಾಗುವುದು. ಇದರಂತೆ ಇನ್ನೊಂದು ತಂತ್ರವಿದೆ; ಮಾಸಲೆ ಸರಕಿನ ತಂತ್ರ (Acceptance Sampling Plan). ಉತ್ಪಾದಕನು ತನ್ನ ಸಿದ್ಧ ಸರಕುಗಳನ್ನು ಮಾರುವಾಗ, ಒಳ್ಳೆಯದಾದ ಸರಕುಗಳನ್ನೆ ಕೊಳ್ಳಲು ಕೊಳ್ಳುವವನು ಭರವಸೆಯನ್ನು ಬಯಸುತ್ತಾನೆ. ಪ್ರತಿಯೊಂದು ಸರಕನ್ನೂ ಪರೀಕ್ಷಿಸಿಯೆ ಕೊಂಡುಕೊಳ್ಳುವುದೆಂದರೆ ಹಣ ಮತ್ತು ವೇಳೆಗಳ ವೆಚ್ಚ ಹೆಚ್ಚಾಗುವುದು; ಅಲ್ಲದೆ, ಅದು ಅಶಕ್ಯವೂ ಆಗಬಹುದಾಗಿದೆ. ದೃಷ್ಟಾಂತಕ್ಕೆ, ಒಬ್ಬನು ಕಾಡತೂಸಗಳನ್ನು ಕೊಳ್ಳುವವನಿದ್ದಾನೆ ಎನ್ನೋಣ. ಎಲ್ಲ ಕಾಡತೂಸಗಳೂ ಉತ್ತಮ ತರಗತಿಯವೆಂದು ಅವನಿಗೆ ಭರವಸೆಯಾಗಬೇಕಾದರೆ ಪ್ರತಿಯೊಂದು ಕಾಡುತೂಸನ್ನು ಅವನು ಪರೀಕ್ಷಿಸಿ ನೋಡಬೇಕು. ಪ್ರತಿಯೊಂದನ್ನು ಪರೀಕ್ಷೆಗಾಗಿಯೆ ಹಾರಿಸಿಬಿಟ್ಟರೆ ಮುಂದೆ ಉಪಯೋಗಿಸಲು ಉಳಿಯುವುದೇನು? ಆದ್ದರಿಂದ ಮಾರಾಟಕ್ಕಿದ್ದ ಸರಕುಗಳಲ್ಲಿ ಕೆಲವನ್ನೆ, ಮಾಸಲೆಯಾಗಿ, ಪರೀಕ್ಷಿಸಬೇಕಾಗುವುದು. ಮಿಕ್ಕವುಗಳು ಇವುಗಳಷ್ಟೆ ಒಳ್ಳೆಯ ತರಗತಿಯವೆಂದು ನಂಬಬೇಕಾಗುವುದು. ಇಲ್ಲಿ ತರಗತಿಯ ಭರವಸೆಯನ್ನು ಸಂಖ್ಯಾಶಾಸ್ತ್ರಜ್ಞನೊಬ್ಬನೆ ಕೊಡಬಲ್ಲನು. ತಪ್ಪಿ ಕೂಡ ತರಗತಿಯಲ್ಲಿ ವ್ಯತ್ಯಾಸವಾಗದಂತೆ ಮಾರುವವನ ಮತ್ತು ಕೊಳ್ಳುವವನ (ಇಭ್ರತ್ತಿನ) ಸಂರಕ್ಷಣೆಯನ್ನು ಇವನು ಮಾಡುವನು. ಇಬ್ಬರಿಗೂ ಭರವಸೆ ಕೊಡುವಂತಹ ಒಂದು ಸಶಾಸ್ತ್ರೀಯ ವಿಧಾನವನ್ನು ಸಂಖ್ಯಾಶಾಸ್ತ್ರಜ್ಞನು ಹುಡುಕಿದ್ದಾನೆ. ಇದರಿಂದ ಆಯಾತ, ನಿರ್ಯಾತ ವ್ಯಾಪಾರಕ್ಕೆ ಪ್ರೋತ್ಸಾಹ ದೊರಕುವುದು. ಒಂದು

ದೇಶದ ಸರಕಾರವು ತನ್ನ ಭೂಜಲ ವಾಯು ಪಡೆಗಳಿಗಾಗಿ ವಿಪುಲವಾದ ಸರಕುಗಳನ್ನು ಕೊಳ್ಳಬೇಕಾಗುವುದು ದೇಶದ ರಕ್ಷಕ ದಳಗಳಿಗಾಗಿ ಒಳ್ಳೆಯ ತರಗತಿಯ ಸರಕುಗಳೆ ಅಗತ್ಯ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಪೇಟೆ-ಸಂಶೋಧನ ಕಾರ್ಯಕ್ರಮದಿಂದ ವ್ಯಾಪಾರವನ್ನು ಬೆಳೆಸಲು ಸಾಕಷ್ಟು ಅವಕಾಶವಿದೆ. ಗ್ರಾಹಕರ ಇಷ್ಟ-ರೂಢಿ-ಒಲವುಗಳನ್ನು ಚನ್ನಾಗಿ ಅಭ್ಯಸಿಸಿದಲ್ಲಿ ಗ್ರಾಹಕರ ಅಭಿರುಚಿಗೆ ಬೇಕಿದ್ದ ಸರಕುಗಳನ್ನೆ ತಯಾರಿಸಬಹುದು. ಪೇಟೆಯ ಇಂತಹ 'ಸರ್ವೆ'ಗಳನ್ನು ನಡೆಯಿಸುವುದು ಮುಖ್ಯವಾಗಿ ಸಂಖ್ಯಾಶಾಸ್ತ್ರಕ್ಕೆ ಸಂಬಂಧಿಸಿದ ವಿಷಯವಾಗಿದೆ.

ಒಲವಿನ ಪರೀಕ್ಷೆ ಮತ್ತು ವ್ಯಕ್ತಿಯ ಯೋಗ್ಯತೆಯ ಪರೀಕ್ಷೆ

ಭಿನ್ನಾಭಿರುಚಿಯ ಈ ಜಗತ್ತಿನಲ್ಲಿ, ದೇಶದ ಜನಶಕ್ತಿಯ ಸದುಪಯೋಗವನ್ನು ಮಾಡಿಕೊಳ್ಳಬೇಕಾಗುವುದು. ದೇಶದ ಜನರ ಉತ್ಸಾಹ-ಶಕ್ತಿಗಳನ್ನು ಸರಿಯಾದ ಮಾರ್ಗದಲ್ಲಿ ತೊಡಗಿಸದೆ ಹೋದರೆ ನಮ್ಮ ಬಾಂಧವಕೋಟಿಗಳು ನಮಗೆ ಸಂಪತ್ತಾಗದೆ ಸಾಲದಂತೆ ಶೂಲವಾಗಬಹುದಾಗಿದೆ. ಗಂಡನ್ನಾಗಲಿ, ಹೆಣ್ಣನ್ನಾಗಲಿ, ಅವರವರ ಒಲವು ಮತ್ತು ಶಿಕ್ಷಣಕ್ಕೆ ಅನುಗುಣವಾಗಿ, ತಕ್ಕ ಕೆಲಸದಲ್ಲಿಯೆ ತೊಡಗಿಸಬೇಕಾಗುವದು. ಮಾನಸಶಾಸ್ತ್ರಜ್ಞರೂ ಸಂಖ್ಯಾಶಾಸ್ತ್ರಜ್ಞರೂ ಕೂಡಿ ಬೇರೆ ಬೇರೆ ತರದ ಕೆಲಸ ಮತ್ತು ವ್ಯವಸಾಯಗಳಿಗಾಗಿ ಮನುಷ್ಯನ ಒಲವನ್ನು ಪರೀಕ್ಷಿಸುವ ಪದ್ಧತಿಯನ್ನು ಹಾಕಿ ಕೊಟ್ಟಿದ್ದಾರೆ. ಕಳೆದ ಯುದ್ಧದಲ್ಲಿ ಅಮೇರಿಕದಲ್ಲಿ ಈ ಪದ್ಧತಿಯನ್ನು ದೊಡ್ಡ ಪ್ರಮಾಣದಲ್ಲಿ ಕಾರ್ಯಕ್ಕಿಳಿಸಿ ಭೂ-ಜಲ-ವಾಯು ಪಡೆಗಳಿಗಾಗಿ ಯೋಗ್ಯರಾದವರನ್ನು ಯಶಸ್ವಿಯಾಗಿ ಆರಿಸಲಾಯಿತು. ಇಂದಿಗೂ ಅಮೇರಿಕದಲ್ಲಿ ಆಡಳಿತ-ನೇಮಕ-ಮಂಡಳವು (ಸಿವ್ಹಿಲ್ ಸರ್ವಿಸ್ ಕಮಿಶನ್), ಬೇರೆ ಬೇರೆ ಪರೀಕ್ಷಾಮಂಡಳಗಳು ನಿರಾತಂಕವಾಗಿ, ಭರವಸೆಯುಳ್ಳವಾಗಿ ಈ ಪದ್ಧತಿಯನ್ನೆ ಉಪಯೋಗಿಸುತ್ತಿವೆ. ಇದರ ಫಲವಾಗಿ ಅಮೇರಿಕದಲ್ಲಿ ಕುರ್ಚಿಯ ಮೇಲೆ ಕೋತಿ ಕುಳಿತುಕೊಂಡಿಲ್ಲ.

ಸರಕಾರದ ಅಂಕಿ-ಸಂಖ್ಯೆಗಳು

ಅಂಕಿ-ಸಂಖ್ಯೆಗಳನ್ನು ವಿಪುಲವಾಗಿ ಹುಟ್ಟಿಸುವವರು ಮತ್ತು ಹಾಗೇ ಉಪಯೋಗಿಸುವವರು ಎಂದರೆ ಕೇಂದ್ರದ ಮತ್ತು ಘಟಕದ ಸರಕಾರಗಳು. ಯೋಗಕ್ಷೇಮದ ಸರಕಾರವಿದ್ದಲ್ಲಿ (Welfare state), ದುಡಿಯಲು ಸಿದ್ಧನಿದ್ದ ಪ್ರತಿಯೊಬ್ಬ ಸಶಕ್ತ ನಾಗರಿಕನಿಗೆ ಸರಕಾರವು ಕೆಲಸವನ್ನು ಕೊಡಲು ಯತ್ನಿಸುವುದು. ಸಮಂಜಸವಾದ ಶ್ರಮನೀತಿ (Labour policy)ಯನ್ನು ಆಚರಣೆಯಲ್ಲಿ ತರುವುದಾದರೆ ಕಾಲಕಾಲಕ್ಕೆ ದುಡಿಯುವವರ ಲಿಂಗ-ವಯಸ್ಸು-ಪ್ರದೇಶಗಳನ್ನಲ್ಲದೆ ದುಡಿಮೆಗೆ ಸಂಬಂಧಿಸಿದ ಕಾಯಿದೆಗಳನ್ನು, ದುಡಿತದ ವೇತನಪ್ರಮಾಣಗಳನ್ನು, ದುಡಿಮೆಯ ಪ್ರಮಾಣವನ್ನೂ ಸರಿಯಾಗಿ ವರದಿಯಾಗಿಸಲು ಸರಕಾರವು ಸಮರ್ಥವಾಗಿರಬೇಕಾಗುವುದು.

ನಮ್ಮ ರಾಷ್ಟ್ರೀಯ ಉತ್ಪನ್ನ (ಸರಾಸರಿ ಉತ್ಪನ್ನ) ಎಷ್ಟಿದೆ? ಮೊನ್ನೆಮೊನ್ನಿನ ವರೆಗೆ ಇದನ್ನು ಅಲ್ಲೊಬ್ಬ ಇಲ್ಲೊಬ್ಬ ವ್ಯಕ್ತಿಯಾಗಲಿ, ಊಹೆಯಿಂದಾಗಲಿ ಹೇಳಬಹುದಿತ್ತು. ಊಹೆಯಿಂದ ಹೇಳುವುದಾದಲ್ಲಿ ಬೇಕಾದವನು ಬೇಕಾದಂತೆ ಊಹಿಸಬಹುದಷ್ಟೆ? ಜನರಲ್ಲಿ ಆರ್ಥಿಕ ದೃಷ್ಟಿಯಿಂದ ಹೇಗೆ ಬೇರೆ ಬೇರೆ ಗುಂಪುಗಳನ್ನು ಮಾಡಬಹುದು, ಇವರಲ್ಲಿ ಗ್ರಾಹಕನ ಉತ್ಪನ್ನ-ವೆಚ್ಚ-ಉಳಿತಾಯಗಳ ಪರಸ್ಪರ ಪ್ರಮಾಣವೇನು ಎಂಬುದು ಗೊತ್ತಿದ್ದರೆ ಮಾತ್ರ ಜನರ ಕ್ರಯಸಾಮರ್ಥ್ಯವು ಸದ್ಯಕ್ಕೆ ಎಷ್ಟಿದೆ, ಮುಂದೆ ಎಷ್ಟಿರಬಹುದು ಎಂಬುದರ ಸಮರ್ಪಕ ಅಂದಾಜನ್ನು ಮಾಡಲು ಶಕ್ಯವಾಗುವುದು. ಈ ಅಂದಾಜಿನ ಮೇಲೆ ಸರಕಾರವು ತನ್ನ ಕರಭಾರವನ್ನು ಬೇರೆ

ಬೇರೆ ಆರ್ಥಿಕ ಗುಂಪುಗಳಿಗೆ ಹಾಯಾಗುವಂತೆ ಹಂಚಲು ಸಮರ್ಥವಾಗುವುದು. ಇದಲ್ಲದೆ ತನ್ನ ಉಪಯೋಗಕ್ಕಾಗಿ, ಉದ್ಯಮ-ಶ್ರಮಗಳ ಉಪಯೋಗಕ್ಕಾಗಿ ಸರಕಾರವು ಇನ್ನೂ ಅನೇಕ ಉಪಾಯಗಳನ್ನು ಅಗತ್ಯವಾಗಿ ಸಿದ್ಧಪಡಿಸುವುದು. ಇದೂ ಅಲ್ಲದೆ ಸಾರ್ವಜನಿಕ ಆರೋಗ್ಯ, ಜನನ-ಮರಣ, ವಿವಾಹ, ಕ್ಷಯ-ಪ್ಲೇಗಗಳಂತಹ ಘೋರ ರೋಗ-ಪಿಡುಗುಗಳ ನಿಯಂತ್ರಣ, ಆಸ್ಪತ್ರೆ, ತರಬೇತಾದ ಡಾಕ್ಟರ-ನರ್ಸ ಇವುಗಳ ಸಮರ್ಪಕತೆ ಮುಂತಾದ ಎಷ್ಟೊ ವಿಷಯಗಳ ಬಗ್ಗೆ ಸರಕಾರವು ಅಂಕಿ-ಸಂಖ್ಯೆಗಳನ್ನು ಕಲೆಹಾಕಿ ವಿನಿಯೋಗಿಸುವುದು. ಶಾಲೆ-ವಿಶ್ವವಿದ್ಯಾಲಯ-ಸಾರ್ವಜನಿಕ (ಖಾಸಗಿ) ಶಾಲೆ-ಕಾಲೇಜು-ಗ್ರಂಥಾಲಯ-ಅಭ್ಯಾಸಕ್ರಮ ಮುಂತಾದವುಗಳಲ್ಲಿ ಅಂಕಿ ಸಂಖ್ಯೆಗಳ ಸಹಾಯದಿಂದ ಸರಕಾರವು ಶಿಕ್ಷಣದ ಮಟ್ಟವನ್ನು ಸುಧಾರಿಸಬಲ್ಲದು.

ಈ ಎಲ್ಲ ಅಂಕಿಸಂಖ್ಯೆಗಳನ್ನು ಕೂಡಿಸಲು ಸರಕಾರವು ಎರಡು ವಿಧಾನಗಳನ್ನು ಕೈಕೊಳ್ಳುವುದು. ಒಂದು, ಜನಗಣನೆ, ಎಂದರೆ ಪ್ರತಿ ಅಯ್ದು ಇಲ್ಲವೆ ಹತ್ತು ವರ್ಷಗಳಿಗೊಮ್ಮೆ ದೇಶದ ಜನಸಂಖ್ಯೆ, ಬೇಸಾಯ, ಉದ್ಯಮ ಇವುಗಳ ಬಗ್ಗೆ ಸಂಪೂರ್ಣ ಗಣನೆ (ಎಣಿಕೆ); ಇನ್ನೊಂದು, ಅಗತ್ಯಕಂಡಾಗ ತಾತ್ಪೂರ್ತಿಕ (ಮಾಸಲೆ) ವಾಗಿ ನಡೆಸುವ ನಿರೀಕ್ಷಣೆ ('ಸರ್ವೆ') ಗಳು. ಜನಗಣನೆಗೆ ವೆಚ್ಚ, ವೇಳೆ, ಗಣಕರು, ಮೇಲ್ವಿಚಾರಕರು ಹೇರಳವಾಗಿ ಬೇಕು; ನಿರೀಕ್ಷಣೆಗಳ ವೆಚ್ಚ ಕಡಿಮೆ, ತಗಲುವ ಕಾಲಾವಧಿ ಸ್ವಲ್ಪ ಮತ್ತು ಅವೂ ನಂಬಲು ಯೋಗ್ಯವಾದುವುಗಳೆ. ಅಂಕಿ-ಸಂಖ್ಯೆಗಳನ್ನು ಕಲೆಹಾಕುವಾಗ ಸರಕಾರದ ಮುಖ್ಯ ಉದ್ದೇಶವೆಂದರೆ ವಾಸ್ತವಿಕ ಸಂಗತಿಗಳನ್ನು ಕಂಡುಕೊಳ್ಳುವದು, ಆದರಿಂದ ಸಮರ್ಪಕ ಯೋಜನೆಗಳನ್ನು ಸಿದ್ಧಪಡಿಸಿ ದೇಶದ ಪ್ರಗತಿಯ ಬಗ್ಗೆ ಭರವಸೆಯಿಂದ ಯತ್ನಿಸುವದು.

ಸಂಖ್ಯಾಶಾಸ್ತ್ರದ ಇತರ ಉಪಯೋಗಗಳು

ದೇಶದ ಪ್ರಗತಿಗೆ ಸಂಖ್ಯಾಶಾಸ್ತ್ರವು ಅನೇಕ ರೀತಿಗಳಲ್ಲಿ ಸಹಾಯವಾಗುವುದು. ಅವನ್ನು ಒಂದೊಂದು ಹೇಳಲು ಅಶಕ್ಯವೆನ್ನಿಸುವಷ್ಟು

ಅಸಂಖ್ಯಾತ ರೀತಿಗಳಿವೆ. ಉದಾಹರಣೆಗಾಗಿ, ಜನರಿಗೆ ತಕ್ಕದಾದ ಆಹಾರ ಪದ್ಧತಿಯನ್ನು ಹುಡುಕುವ ಪ್ರಯೋಗಗಳು, ಇಲ್ಲವೆ ಅತಿವೃಷ್ಟಿಯನ್ನು ತಡೆದುಕೊಂಡು ಹೆಚ್ಚಾದ ಕಾಳನ್ನು ಕೊಡುವಂತಹ ಗೋದಿಯ ಬೆಳೆಯನ್ನು ಕಂಡುಹಿಡಿಯುವುದಕ್ಕಾಗಿ ಸಸ್ಯಗಳ ಪೋಷಣೆಯ ಬಗ್ಗೆ ಪ್ರಯೋಗಗಳು, ಒಳ್ಳೇ ಹೈನದ ಹಸುಗಳನ್ನೂ ಹೆಚ್ಚು ಭಾರವನ್ನೆಳೆಯಬಲ್ಲ ಎತ್ತುಗಳನ್ನೂ ಕೊಡುವಂತೆ ಬೀಜದ ದನಗಳನ್ನು ಪೋಷಿಸಿ ವರ್ಧಿಸುವ ಪ್ರಯೋಗಗಳು, ಇಲ್ಲವೆ ಅಗತ್ಯವಿದ್ದ ಔಷಧಿ—ರಾಸಾಯನಿಕೆಗಳ ಸಂಶೋಧನ ಪ್ರಯೋಗಗಳು-ಇಂತಹ ಎಲ್ಲ ಪ್ರಯೋಗಗಳಿಗೆ ಸಂಖ್ಯಾಶಾಸ್ತ್ರವು ಪ್ರೇರಕವಾಗುವುದು, ಸಹಾಯಕವಾಗುವುದು.

೧೯೩೧ ರಲ್ಲಿ ಪ್ರೊ. ಮಹಾಲನೊಬಿಸ್ ಎಂಬವರು ಕೆಲವು ತರುಣ ಗಣಿತಜ್ಞರನ್ನೂ ಭೌತಿಕಶಾಸ್ತ್ರದ ತಜ್ಞರನ್ನೂ ಅರ್ಥ ಮತ್ತು ಅಂಕಿಶಾಸ್ತ್ರ ತಜ್ಞರನ್ನೂ ಕಲೆಹಾಕಿ ಅವರಲ್ಲಿ ಸಂಖ್ಯಾಶಾಸ್ತ್ರದ ಜಿಜ್ಞಾಸೆಯನ್ನು ಹುಟ್ಟಿಸಿದರು. ಭಾರತೀಯ ಸಂಖ್ಯಾಶಾಸ್ತ್ರಸಂಸ್ಥೆಯು ಅಂದು ಪ್ರಾರಂಭವಾಯಿತೆನ್ನಬಹುದು. ಮಾಸಲೆ ಪದ್ಧತಿಯನ್ನು ಬೇಸಾಯದ ಪ್ರಯೋಗಗಳಿಗೆ ಅನ್ವಯಿಸುವುದರ ಬಗ್ಗೆ ಈ ಸಂಸ್ಥೆಯು ಮಹತ್ವದ ಜ್ಞಾನವನ್ನು ಕಂಡುಹಿಡಿದಿದೆ. ಸರಕಾರದಲ್ಲಿ ಬೇರೆ ಬೇರೆಯಾಗಿ ನಡೆದ ಕೆಲಸದ ಸಮೀಕರಣವನ್ನು ಮಾಡಲು ಒಂದು ಕೇಂದ್ರ ಸಂಖ್ಯಾಶಾಸ್ತ್ರ ಸಂಸ್ಥೆ ಇಲ್ಲ; ತರಬೇತಾದ ತಜ್ಞರಿಲ್ಲ; ಅದಕ್ಕಾಗಿ ಪ್ರಗತಿ ಕುಂಠಿತವಾಗಿದೆ. ಆದರೆ ೧೯೪೯ ರಲ್ಲಿ ಕೇಂದ್ರ ಮಂತ್ರಿಮಂಡಳದ ಸಂಖ್ಯಾಶಾಸ್ತ್ರದ ಸಲಹೆಗಾರನ ನಿರೀಕ್ಷಣೆಯಲ್ಲಿ ಒಂದು ಕೇಂದ್ರ ಸಂಖ್ಯಾಶಾಸ್ತ್ರ ಸಂಸ್ಥೆ ಸ್ಥಾಪಿತವಾಗಿದೆ. ಇತ್ತೀಚೆಗೆ ಈ ಶಾಸ್ತ್ರದಲ್ಲಿ ಸಂಶೋಧನಕ್ಕಾಗಿ ಮತ್ತು ಶಿಕ್ಷಣವನ್ನು ಕೊಡುವುದಕ್ಕಾಗಿ ಕೆಲವು ವಿಶ್ವವಿದ್ಯಾಲಯಗಳು ಏರ್ಪಾಟನ್ನು ಮಾಡಿವೆ. ಸಂಖ್ಯಾಶಾಸ್ತ್ರದ ಉಪಯೋಗವನ್ನೂ ಸಂಘಟನೆಯನ್ನೂ ಹೀಗೆ ಸರಿಯಾಗಿ ತಿಳಿದುಕೊಂಡುದಕ್ಕಾಗಿ, ಇನ್ನು ಸರಿಯಾದ ಮಾರ್ಗಕ್ಕೆ ಹತ್ತಿ ದೇಶವು ಪ್ರಗತಿಯನ್ನು ಮುಟ್ಟುವುದೆಂಬ ಆಶೆ ಇದೆ.

●●●

ಶ್ರೀ. ದ. ಬಾ. ಕುಲಕರ್ಣಿ
ಅವರಿಂದ

ನಾನು ಕಂಡ ಕೆಲ ಕನ್ನಡ ಕವಿಗಳು

ಕವಿಗಳೆಲ್ಲ ಭಾವಜೀವಿಗಳೆನಿಸಿದರೂ ಒಬ್ಬೊಬ್ಬರ ರೀತಿನೀತಿ, ಭಾವಭಂಗಿ, ಸ್ವಭಾವ ವೃತ್ತಿ ಒಂದೊಂದು ವಿಧ. ಕನ್ನಡದ ಕೆಲ ಪ್ರಸಿದ್ಧ ಕವಿಗಳ ಶಬ್ದಚಿತ್ರವನ್ನು ಲೇಖಕರು ಮನೋರಂಜಕವಾಗಿ ಕೊಟ್ಟಿದ್ದಾರೆ.

ಕವಿಗಳ ಮಟ್ಟಿಗೆ ಕನ್ನಡ ನುಡಿಗೆ ಬಡತನವಿಲ್ಲ. ನಾಡು ಹರಿದು ಹಂಚಿದ್ದರೂ ಎಲ್ಲ ಹರಕಲು ನೆಲದಲ್ಲಿಯೂ ಕವಿಗಳ ಬೆಳೆ ಹುಲುಸಾಗಿದೆ. ಎಂತಲೇ ಕವಿತೆಗಳಿಗೆ, ಕವಿಕರ್ಮಕ್ಕೆ ನಿಯಂತ್ರಣದ ಆವಶ್ಯಕತೆ ಎನಿಸಲಾರದು. ಕವಿಗಳ ಮೇಲೆ ಮತ್ತು ಕವಿತೆ ಬರೆಯುವ ಕಾಗದದ ಕೋಟಾದ ಮೇಲೆ ನಿಯಂತ್ರಣ ಬೇಕೆಂದು ಕೆಲವರು ವಾದಿಸಬಹುದು. ಆದರೆ ನಾನಿಲ್ಲಿ ಹೇಳಹೊರಟಿರುವುದು ಕಾವ್ಯವಿಮರ್ಶೆಯೂ ಅಲ್ಲ; ಕವಿತಾನಿಯಂತ್ರಣದ ಪ್ರತಿಪಾದನೆಯೂ ಅಲ್ಲ.

ಪಾಶ್ಚಾತ್ಯ ಕವಿಗಳು ಜೀವಂತರಾಗಿದ್ದಾಗ ಪ್ರಸಿದ್ಧಿಗೆ ಬರುವುದು ವಿರಳವಂತೆ. ಕನ್ನಡದ ಕವಿಗಳು ಮಾತ್ರ 'ಇಹೈವ ಫಲಮಶ್ನುತೇ' ಎಂಬ ಗೀತಾವಾಕ್ಯದ ಮೇಲೆ ವಿಶ್ವಾಸವಿಟ್ಟಂತೆ ಕಾಣುತ್ತದೆ. ಅವರು ಪ್ರತಿಯೊಂದು ಸಭೆ ಸಮ್ಮೇಲನದಲ್ಲಿಯೂ ತಮ್ಮ ಕವಿತೆಗಳನ್ನು ಹಾಡಿತೋರಿಸಿ ಕೀರ್ತಿಪತಾಕೆಯನ್ನು ಜೀವನಕಾಲದಲ್ಲಿಯೇ ಹಾರಿಸಿಬಿಟ್ಟಿದ್ದಾರೆ.

ಈ ಪರಂಪರೆಯನ್ನು ಹಾಕಿಕೊಟ್ಟವರು ನಮ್ಮ ಹಿರಿಯ ಕವಿಗಳೇ. ಅವರು ಹಾಗೆ ಮಾಡಲೇಬೇಕಾಗಿತ್ತು. ಇಂದಿನ ಹಿರಿಯ ಕವಿಗಳಲ್ಲಿ ಹೆಚ್ಚಿನವರು ಈ ಶತಕದ ಮೂರನೆಯ ದಶಕದಿಂದ ಆರಂಭವಾದ ಕನ್ನಡದ ಪುನರುಜ್ಜೀವನಕಾಲದಲ್ಲಿ ತಲೆಯೆತ್ತಿದವರು. ಅವರು ಸಾಹಿತ್ಯದ ರಚನೆಯಲ್ಲದೆ ಸಾಹಿತ್ಯ ಪ್ರಚಾರದ ಪಂಜನ್ನೊ ಹಿಡಿದು ನಾಡನ್ನು ಎಚ್ಚರಗೊಳಿಸಲು ಊರೂರು ಸುತ್ತಬೇಕಾಯಿತು. ಹೀಗೆ ನಮ್ಮ ನಾಡಿನ ಜನರಿಗೆ ನಮ್ಮ ಕವಿಗಳು-ಅನ್ಯಭಾಷೆಯ ಜನರಿಗೆ ಅವರ ಕವಿಗಳಿಗಿಂತ ಹೆಚ್ಚು ಪರಿಚಿತರಾಗಿದ್ದಾರೆ. ಅನೇಕ ಸಭೆಸಮ್ಮೇಲನಗಳಲ್ಲಿ ಭಾಗವಹಿಸಿ ಮತ್ತು ವ್ಯವಹಾರದಲ್ಲಿ ಅನೇಕ ಕವಿಗಳ ನಿಕಟ-ದೂರ ಸಂಪರ್ಕ ಬಂದು, ನಮ್ಮ ಕವಿಗಳ ರೀತಿ-ನೀತಿ, ಭಾವ-ಭಂಗಿ, ಸ್ವಭಾವ-ವೃತ್ತಿಗಳ ಅಪೂರ್ವವೈವಿಧ್ಯ ನನ್ನ ಮನಸಿನಲ್ಲಿ ಅಚ್ಚೊತ್ತಿದೆ. ಕವಿಗಳೆಲ್ಲ ಒಂದು ಜಾತಿ, ಭಾವಜೀವಿಗಳೆಂದು ಹೇಳಲಾದರೂ ಒಬ್ಬೊಬ್ಬ ಕವಿಗೂ ಒಂದಲ್ಲ, ಹಲವು ವೈಶಿಷ್ಟ್ಯಗಳಿವೆ. ಕೆಲವನ್ನು ಇಲ್ಲಿ ಹೇಳುತ್ತೇನೆ.

* * *

ಬೇಂದ್ರೆಯವರು ಕಾವ್ಯಗಾಯನ ಮಾಡುವುದನ್ನು ನೋಡಿದ್ದೀರಾ? ಅವರಂತೆಯೇ ಇತರರೂ ತಾರಸ್ವರದಲ್ಲಿ, ಜಾನಪದ ಧಾಟಿಯಲ್ಲಿಯೇ ಕವಿತೆಗಳನ್ನು ಹಾಡುವುದನ್ನು ನೀವು ಕೇಳಿರಬಹುದು. ಆದರೆ ಅವರ ಆ ಕೊಂಕಿಸಿದ ಕಣ್ಣಿನ ನೇರನೋಟ, ಅರೆಬಾಯಿ ಡೊಂಕಲ್ಲದ ನಗೆ; ಹಾವಭಾವದ ಕೈತಿರುವು ಅವರವೇ. ಅದು ಬೇಂದ್ರೆ ಭಂಗಿ, 'ಕಾಪಿರೈಟ್!' ಕವಿತೆ ಹೇಳಲು ಬಾಯಿ ತೆರೆದಾಗ 'ಕಣ್ ಒಳಗ ಹೊರಳೀಸಿ, ಎದೆ ಮುಗುಳನರಳೀಸಿ, ಹೂನೀರನುರುಳೀಸಿ'' ಅಂದ ಹಾಗೆ ಹೊರಳಿ, ಅರಳಿ, ಉರುಳಿಸಿಯೇ ತೋರಿಸುತ್ತ ಹೋಗುವ ಬೇಂದ್ರೆಯವರನ್ನು ನೀವು ಒಮ್ಮೆ ಕಂಡರೆ ಆ ಕವಿತೆಯನ್ನೋದುವಾಗೆಲ್ಲ ಅಕ್ಷರ ಅಕ್ಷರವೂ ಬೇಂದ್ರೆ ಮೂರ್ತಿಯಾಗಿ ಎದ್ದು ನಿಲ್ಲುತ್ತದೆ. ಆದರೆ ಇಷ್ಟು ತನ್ಮಯತೆಯಲ್ಲಿ ಅವರು ಮುಳುಗಿದಂತೆ ಕಂಡರೂ ಶ್ರೋತೃಗಳ ಮೇಲೆಯೇ ಅವರ ದೃಷ್ಟಿ-ಮಾಂತ್ರಿಕದೃಷ್ಟಿ.

ಅದೇ 'ಕುವೆಂಪು' ವನ್ನು ನೋಡಿರಿ. ಅವರು ಕವಿತೆ ಓದುವವರು; ರಾಗವಾಗಿ ಹಾಡುವವರಲ್ಲ. ಅವರ ತನ್ಮಯತೆ ಅದ್ಭುತವಾದದ್ದು. ಅವರ ಕವಿತೆ ಕೇಳುತ್ತ ಸಭೆ ಮಂತ್ರಮುಗ್ಧವಾಗುವುದು. ಆದರೆ ಅವರ ದೃಷ್ಟಿ ಸಭೆಯ ಮೇಲಿರುವುದಿಲ್ಲ. ತಮ್ಮ ಲೋಕದಲ್ಲೇ ಅವರ ಸಂಚಾರ. ಅವರನ್ನು ನಾನು ಮೊಟ್ಟಮೊದಲು ನೋಡಿದ್ದು ಹುಬ್ಬಳ್ಳಿಯ ಸಾಹಿತ್ಯ ಸಮ್ಮೇಲನದ ಕವಿಸಮ್ಮೇಲನಕ್ಕೆ ಅವರು ಅಧ್ಯಕ್ಷರಾಗಿ ಬಂದಿದ್ದಾಗ. ಅವರು ಆಗ ತಮ್ಮ 'ಕಲ್ಕಿ' ಕವನವನ್ನೋದಿದ ದೃಶ್ಯ ನನ್ನ ಕಣ್ಣಲ್ಲಿ ಕುಳಿತುಬಿಟ್ಟಿದೆ. ಅವರ ಒಂದು ಪಕ್ಕದಲ್ಲಿ ಪುರುಷರೂ ಇನ್ನೊಂದರಲ್ಲಿ ಸ್ತ್ರೀಯರೂ ಕುಳಿತಿದ್ದರು. ಪುಟ್ಟಪ್ಪನವರು ತಮ್ಮ ಗಂಭೀರ ಸ್ವರದಲ್ಲಿ ಪುರುಷ ಸಭೆಯ ಕಡೆಗೊಮ್ಮೆ, ಸ್ತ್ರೀಸಭೆಯ ಕಡೆಗೊಮ್ಮೆ ಮುಖ ಹೊರಳಿಸಿ ಒಂದೊಂದೇ ಪಂಕ್ತಿಯನ್ನು ಉಚ್ಚರಿಸುತ್ತಿದ್ದರು. "ಆ ಕಡೆ ಉದ್ಯಾನ" ಎಂದರು; "ಈ ಕಡೆ ಸ್ಮಶಾನ" ಎಂದರು. ಪುನಃ "ಪೀತಾಂಬರಗಳ ಹೊದೆಯುವರಿಲ್ಲಿ" ಎಂದಾಗ, ಅವರ ಮುಖ, ಅಲ್ಲಿಯೇ ಪೀತಾಂಬರವನ್ನು ಹೊದ್ದವರೆಲ್ಲ ಇರುವರೋ ಎಂಬಂತೆ ಪುರುಷರ ಕಡೆ ನೀಡಿತು; ಕೊನೆಯ ಸಾಲಿನ "ಕೌಪೀನಕೆ ಚಿಂದಿಯು ಸಿಗದಿಲ್ಲಿ" ಎಂದಾಗ ನಿಜವಾಗಿ ಪೀತಾಂಬರಗಳನ್ನೇ ಉಟ್ಟ ಸ್ತ್ರೀಯರ ಕಡೆ, ಅಲ್ಲಿಯೇ ತಾವು ಹೇಳುತ್ತಿರುವ ವಸ್ತುವನ್ನು ನಿರ್ದೇಶಿಸುವಂತೆ, ಅವರ ಮುಖ ನೀಡಿತ್ತು. ಆದರೆ ಯಾರೂ ನಗಲಿಲ್ಲ; ಈ ಪ್ರಮಾದವನ್ನು ಗಮನಿಸಿರಲಿಕ್ಕಿಲ್ಲ ಕೂಡ. ಪುಟ್ಟಪ್ಪನವರು "ಗೋಮಟೇಶ್ವರ" ಕವನದಲ್ಲಿ "ಎದೆಯಿದ್ದರಿಲ್ಲಿ ನಗು, ನೋಡುವಂ" ಎಂದು ಆಹ್ವಾನವಿತ್ತಿದ್ದಾರೆ. ಸ್ವತಃ ಅವರೇ ಒಂದು ಗೋಮಟೇಶ್ವರ; ನಗ್ನತೆಗೂ ಗಾಂಭೀರ್ಯದಾನ ಮಾಡುವ ಆ ಸನ್ನಿಧಾನದಲ್ಲಿ ನಗುವ 'ಎದೆ' ಯಾರಿಗೆ?

* * *

ಕೀರ್ತಿಯನ್ನು 'ಶನಿ' ಎಂದವರು 'ಕುವೆಂಪು' ಆದ್ದರಿಂದಲೆಯೋ ಏನೊ, ಯಾರು ಯಾವ ಸಂದರ್ಭದಲ್ಲಿ ಭಾಷಣಕ್ಕೆ ಕರೆದರೂ ಅವರು ತಮ್ಮ ಕಾವ್ಯಯೋಗದಿಂದೆದ್ದು ಬಂದವರೇ ಅಲ್ಲ. ಅವರನ್ನು ಅವರ ಗುಹೆಯಲ್ಲೇ ಕಾಣಬೇಕು. ಏಳು ವರ್ಷಗಳ ನಂತರ ೧೯೪೦ರಲ್ಲಿ ಧಾರವಾಡದ ಸಾಹಿತ್ಯ ಸಮ್ಮೇಲನಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಪ್ರತಿನಿಧಿಯಾಗಿ ಅವರು ಬರಲೇಬೇಕಾದಾಗ ಅವರನ್ನು ಪುನಃ ಕಂಡೆ. ಅಂದು ಅವರು

"ಸೂರ್ಯೋದಯ—ಚಂದ್ರೋದಯ" ವನ್ನು ತಮ್ಮದೇ ಆದ ಗಾಂಭೀರ್ಯದಿಂದ ಹಾಡಿದರು. ಸುತ್ತ ಅವರನ್ನು ಕಾಣುವ ಯೋಗ ಇತ್ತ ಕಡೆಯ ಜನಕ್ಕೆ ಬರಲೇ ಇಲ್ಲ.

ಮತ್ತೊಮ್ಮೆ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಕೋಣೆಯಲ್ಲಿ 'ಕುವೆಂಪು' ದರ್ಶನ. "ನೀವು ಯಾರು?" ಎಂದು ಕೇಳಿದರು. "ಅವರೇ ನೀವು?" ಎಂದರು. "ಜನ ಕರೆದರೆ ನೀವು ಯಾಕೆ ಬರುವುದಿಲ್ಲ?" ಎಂದೆ. "ಕೂತು ಮಾಡುವುದಕ್ಕೇ ಬೇಕಾದಷ್ಟು ಕೆಲಸವಿದೆ" ಎಂದರು. ನಿಜ, ಅವರಿಂದು ಕಂಡುಬರುವಂತೆ ಕೆಲಸ ಮಾಡಿದ್ದಾರೆ. ಇವರು ಕುಳಿತು ಬರೆದ ಸಾಹಿತ್ಯವನ್ನು ಬಹಳ ಜನ ಅರಗಿಸಿಕೊಂಡಾರೆನ್ನುವಂತಿಲ್ಲ: ಅಷ್ಟು ವೈಪುಲ್ಯ-ಅಂಥ ವಿವಿಧತೆ. ಆದರೆ ಅವರ ಪುಸ್ತಕಗಳಿಗಿರುವಷ್ಟು ಗಿರಾಕಿ ಇನ್ನಾವ ಕನ್ನಡ ಕವಿಗೂ ಇಲ್ಲವೆಂದು ಪುಸ್ತಕ ಭಂಡಾರಿಗಳು ಹೇಳುತ್ತಾರೆ. ಪುಟ್ಟಪ್ಪನವರ ಬರಹ ಬಹಳ; ಮಾತು ವಿರಳ, ಎಷ್ಟು ಬೇಕೋ ಅಷ್ಟೆ. ಅವರು ವಾದವಿವಾದಕ್ಕಿಳಿಯುವುದೇ ಇಲ್ಲ ನೆಂದರೂ ಸಲ್ಲುವುದು. ಆದರೆ ಬೇಂದ್ರೆಯೋ? ಮಾತಿಗಿಳಿದರೆ ಹಗಲು ರಾತ್ರಿ ಉರುಳಿದ್ದೂ ಅವರಿಗೆ ಗಮನವಿಲ್ಲ. ನಿಮ್ಮ ಸಮಸ್ಯೆಗಳು, ತಾಪತ್ರಯಗಳು, ಸಾಂಸಾರಿಕ ಕ್ಲೇಶ-ಕಲ್ಮಷ-ವೈಷಮ್ಯಗಳು, ಎಲ್ಲವನ್ನೂ ಬಗೆಹರಿಸಲು ಅವರು ಸದಾ ಸಿದ್ಧ. ತರ್ಕಕ್ಕಿಳಿದರೆ ಅವರ ಮಾತೇ ಕೊನೆಯಾಗಬೇಕು, ಬೇಕಾದಷ್ಟು ಹೊತ್ತು ಹೋಗಲೊಲ್ಲದೇಕೆ? ಅವರು ಬರೆಯಬಯಸಿದ್ದನ್ನೆಲ್ಲ ಬರೆದಿದ್ದರೆ ಅವರು ಗ್ರಂಥ ನಿರ್ಮಾಣದಲ್ಲಿ ಪ್ರತಿ ಪುಟ್ಟಪ್ಪನೇ ಆಗುತ್ತಿದ್ದರು. ಆದರೆ ಅವರಿಗೆ ವೇಳೆಯೇ ಇಲ್ಲ. ಅವರಿಗೂ ಒಬ್ಬ ಬಾಸ್ವೆಲ್ಲ ಸಿಕ್ಕಿದ್ದರೆ ಅವರ ಸಂಭಾಷಣೆಗಳ ವರದಿ ಕನ್ನಡ ಸಾಹಿತ್ಯಕ್ಕೊಂದು ಅಪೂರ್ವ ರತ್ನವಾಗುತ್ತಿತ್ತೆಂದು ಒಮ್ಮೊಮ್ಮೆ ಅನಿಸುತ್ತದೆ.

* * *

ನಮ್ಮ 'ಯೆಂಡ್ಕುಡ್ಕ ರತ್ನ' ಮಡಿಕೇರಿಯಲ್ಲಿ (೧೯೩೧) ಕುಣಿದು—ಕುಣಿಸಿದ್ದನಂತೆ. ಮೊದಲ ಸಾರೆ ಅವರನ್ನು ಮುಂಬಯಿ ಸಾಹಿತ್ಯ ಸಮ್ಮೇಲನದಲ್ಲಿ (೧೯೩೪) ಕಾವಸಜೀ ಜಹಾಂಗೀರ ಭವನದಲ್ಲಿ ಕಂಡೆ.

"ಎಲ್ಲ್ವೋ ಚಂದ್ರ ಪೆಂಗೆ

ನಾಚ್ಕೆ ಇಲ್ವೇ ನಿಂಗೆ"—ಎಂದಾಗ ಅವರು ಕುಡಿದಿಲ್ಲವೆಂದು ನಾವೆಣಿಸಲಿಲ್ಲ. ಆದರೆ ಆ ಮೂರ್ತಿ ನೋಡಿ ನಮಗೂ ಮದಿರೆಯಾಯಿತು. ಆಗ ಎಲ್ಲಾ 'ಹಸಿ' ದಿನಗಳು. ಈಗಿನಂತೆ 'Dry' ಅಲ್ಲ. ಎಂತಲೇ ಕುಡಿಯದ ಪೋಲೀಸರೂ ಇದ್ದಿಲ್ಲ. ಅದರಿಂದಲೇ ನಮ್ಮನ್ನು ಹಿಡಿಯಲೂ ಇಲ್ಲ. ಈ ಕವಿ ಬರಹದಲ್ಲಿ ಧಾರಾಳ. ಕಾಫಿ ತಿಂಡಿಗೂ ಪರವಾಯಿಲ್ಲ. ದೋಸೆ ಮಸಾಲೆಯೇ ಆಗಬೇಕೆಂದು 'ವೀ. ಸೀ.' ಹಾಗೆ ಹಟವಿಲ್ಲವಾದರೂ 'ಖಾಲಿ'ಯ ಹಟವೂ ಇಲ್ಲ. ಆದರೆ ವೇಷ ಮಾತ್ರ ತೀರ ಸಾದಾ. ಬುದ್ಧವಚನ ಪರಿಚಯ ಬರೆದಾಗಲಂತೂ ಬುರ್ಲಿ ಬಿಂದುಮಾಧವರ (ಇವರು ಕವಿಗಳಲ್ಲವಾದರೂ ವೇಷ ಯಾವ ಕವಿಗೂ ಕಡಿಮೆಯದಲ್ಲ.) ಸರಿಸಾಟಿ. ಬುರ್ಲಿ ಕಚ್ಚೆ ಹಾಕಿ ಪಂಚೆ ಉಟ್ಟು ನಾಲ್ಕು—ಇಲ್ಲವೇ ಮೂರು ಮೊಳ 'ಹಾಲು' ಮಾಡುತ್ತಾರೆ. ಆದರೆ ರತ್ನ ದುಂಡು ದಟ್ಟಿ ಸುತ್ತಿ ಅಂಥದನ್ನೇ ಒಂದು ಅಷ್ಟರಲ್ಲೇ ಹೊದ್ದು ಹೊರಟರೆ ತೀರಿತು. ಅಂದರೂ ಈಚೆಗೆ ಒಂದು ಪುಟ್ಟ ಕಾಲೇಜ ಮೇಷ್ಟ್ರು ಆದಂದಿನಿಂದ ಒಂದು ರವಿಕೆ ಹಾಕುತ್ತಾರೆ. ಕಾಲೇಜಿನಲ್ಲಿ ಒಂದು ಕಾವಿ ಚಣ್ಣ-ಒಂದು ಕೋಟು ನೇಲಿಸುತ್ತಾರಂತೆ--ಪೊಲೀಸು ಡ್ಯೂಟಿ ಮೇಲೆ ಇದ್ದಂತೆ!

ಬೇಂದ್ರೆ ವೇಷದಂತೆ ಇನ್ನೊಬ್ಬ ಯಾರಾದರೂ ವೇಷಕಟ್ಟಲು ಸಾಧ್ಯವಿದೆಯೇ? ಸಿಂಪಿಗನಿಗೆ ಅವರು ಹೊಲಿಗೆಯ ಕಲೆಯ ಬಗ್ಗೆ, ತಮ್ಮ ರುಚಿವಿಶೇಷದ ಬಗ್ಗೆ ಹೇಳುತ್ತಾರೆ. ಸಿಂಪಿಗನೂ ವೇಷಬ್ರಹ್ಮ. ಹೇಳಿದಂತೆ ಹೊಲಿದರೆ ಅವನದೇನು ವೈಶಿಷ್ಟ್ಯ? ಅಲ್ಲದೆ ಬೇಂದ್ರೆ ಹೇಳಿದಂತೆ ಅವನಿಗೆ ಹೊಲಿಯಲು ಬರಬೇಕಲ್ಲ! ಯಾವದೇ ಕವನದ ಛಂದಸ್ಸಿನ ನಯ-ನಾಜೋಕು, ಶಯ್ಯೆಯನ್ನು ಬಟ್ಟೆಯಲ್ಲಿ ತಾ-ಎನ್ನುತ್ತಾರವರು ಎಂದವನ ವಾದ. ನಾನು ಹೇಳುತ್ತೇನೆ: ಸಿಂಪಿಯೂ ಪೂರಾ ಕವಿ. ಒಮ್ಮೆ-ಒಬ್ಬರಿಗೆ ಹೊಲಿದಂತೆ ಇನ್ನೊಮ್ಮೆ ಅವರಿಗೇ ಆದರೂ ಅವನು ಹೊಲಿಯಲಾರ.

'ವೀ. ಸೀ.' ವೇಷ ನೋಡಿ-ಎಂಥ ನಯ-ಎಂಥ ನಾಜೋಕು! ಅವರು ಅನುದಿನವೂ ಬಟ್ಟೆ ಬದಲಿಸಿದರೂ ಒಂದೇ ಶಿಸ್ತು. ಅವರಲ್ಲಿ ಮಾತ್ರ ಈ ಶಿಸ್ತಿನ ವೈವಿಧ್ಯ ಒಳಗಣ್ಣಿಗೇ ಕಾಣಬೇಕು. ಆದರೆ ಅವರ ಕವನಸಂಗ್ರಹಗಳ ಅಚ್ಚುಕಟ್ಟು ಎಷ್ಟು ನಯವೋ - ಅವರ ಬರವಣಿಗೆಯಲ್ಲಿ ಎಂಥ ಅಸಮಾಧಾನವನ್ನೂ ನುಂಗಿ ನಯವಾಗಿ ನುಡಿಯುವ ಒಪ್ಪವಿದೆಯೋ--ಅದೇ ವಿನಯ, ಅನುನಯ ಅವರ ನಡೆಯಲ್ಲಿ ಕಾಣಬಹುದು. 'ವೀ. ಸೀ.' ನಮ್ಮ ನಯದ ಪತಾಕೆ!

* * * *

ಮಧುರ ಚೆನ್ನ ಹುಟ್ಟು ವೇದಾಂತಿ, ಬೆಳೆದು ಉಳಿದದ್ದೂ ಹಾಗೇ. ಇವರ ಅಸಡ್ಡೆಗೆ ಹಲ್ಲುಗಳೂ ಉಳಿದಿಲ್ಲ. ಅಪಾರವಾದ ಭಗವದ್ ಶ್ರದ್ಧೆ ಕ್ಷಣ ಕ್ಷಣಕ್ಕೆ ಕೈ ಮುಗಿಸುತ್ತದೆ. 'ಬರುವದೇನುಂಟೊಮ್ಮೆ ಬರುವ ಕಾಲಕೆ ಬಹುದು' ಎಂಬ ಭರವಸೆ ಹೇಳಿದರು. 'ಬಯಕೆ ಬರುವುದರ ಕಣ್ಣನ್ನೆ' ಎಂದರು. ಇವೆಲ್ಲ ವೇದಾಂತದ ಬಯಕೆಗಳು. ಈ ಲೌಕಿಕದ ಬಯಕೆಗಳಿಗೆ ಕಣ್ಣೂ ಇಲ್ಲ, ಸನ್ನೆಯೂ ಇಲ್ಲ. ಈ ವೇದಾಂತಿ ರತ್ನಾಕರ ವರ್ಣಿಯ ರಸಪಂಥದವರು. ಕೃಷ್ಣಪಾರಿಜಾತ ಆಟ, ಜನಪದ ಜೀವನಸಂಗೀತದಲ್ಲಿಯೂ ಅರವಿಂದ ತತ್ವದಲ್ಲಿಯೂ ಸಮಶ್ರದ್ಧೆ.

ಮಂಗಳೂರಿನ ಕಡೆಂಗೋಡ್ಲು ಶಂಕರ ಭಟ್ಟರಾದರೆ ಒಳ್ಳೆ ಗಂಭೀರ ಪ್ರಕೃತಿ. ಮಾತು ಆಡಿದರೆ ಆಡಿದರು, ಇಲ್ಲವಾದರೆ ಇಲ್ಲ. ಭೆಟ್ಟಿಗೆ ಬಂದವ ಸುಪ್ತ ಚೇತನದ ಹೋರಾಟದಲ್ಲಿ ಸಂಭಾಷಿಸಿ ಇವರ ಹಿರಿ ಹುಡುಗತನದ ರೂಪವನ್ನು ಮೆಚ್ಚುತ್ತಾನೆ. ಇವರದು, 'ಶಾದ ಬಳಗದ ಸಸ್ಯಶಾದ್ವಲದ

ಶಾಂತಿಯುಳಿ ತರಗರೆದ ತತ್ವ'ಗಳನ್ನಾರಿಸುವ ಮೌನ. ಈಚೆಗೆ ಅವರ ಕವಿತೆಯೂ ಮೌನ ತಾಳಿ ದಂತಿದೆ.

ಆದರೆ ಅದೇ ಜಿಲ್ಲೆಯ ಗೋವಿಂದ ಪೈಗಳು ಮೌನವನ್ನೆಲ್ಲಿಂದ ತಂದಾರು? 'ಅಲ್ಲವೊ' ಎನ್ನುತ್ತ ತಾರೀಖುಗಳ ತಾನದಲ್ಲಿ ತಾವು ಎದ್ದು ಬಂದವ ರನ್ನು ದಬ್ಬುತ್ತಾರೆ. ಬಾಯ್ತುಂಬ ಮಾತಾಡಿದರೂ ಎಲ್ಲವೂ ಪ್ರಮಾಣಬದ್ಧ-ಆಧಾರಪೂರ್ಣ-ಅಧಿ ಕಾರವಾಣಿ ಅವರ ಮಾತಿನಲ್ಲಿ. ಮುದಿಮುಖದ ಎಳನಗೆಯಲ್ಲಿ ನೀವು ತಲ್ಲೀನರಾಗಿ ಅವರಿಂದ ಪದ್ಯ ಹೇಳಿಸಲು ಬಯಸುವದಿಲ್ಲ. ಹುಬ್ಬಿನಿಂದ ನಗುತ್ತಾರವರು. ತುಂಬ ಔದಾರ್ಯ. ಮನೆಗೆ ಹಿರಿ ಯರೇ ಬರಲಿ, ಕಿರಿಯರೇ ಬರಲಿ, ಪೈಗಳ ಸ್ವಾಗತ ರೂಪಾಯದ್ದು. ಅದೇ ಆಸ್ಥೆ, ಅದೇ ಧಾರಾಳ ಎಲ್ಲದರಲ್ಲೂ. ''ಮಂಗಳೂರಲ್ಲಿ ನುಸಿ ಕಾಟ; ಮಂಜೇಶ್ವರದಲ್ಲಿದ್ದುಕೊಂಡೇ ಮಂಗ ಳೂರಿನ ಕೆಲಸ ಮಾಡಿ'' ಎಂದರು ನನಗೆ. (ಮಂಗ ಳೂರಿಗೆ ಹೊರಟಾಗ ನನ್ನಿಂದ ಮೂರಾಣೆ ಪಡೆದೇ ತಿಕೀಟು ತೆಗೆಸಿಕೊಟ್ಟರು.) ಕಾರ್ಕಳದಲ್ಲಿ 'ಶಕ್ತಿ' ಅಚ್ಚಾಗುತ್ತಿದ್ದಾಗ ತಮ್ಮ ಲೇಖನದ ಕರಡು ಪ್ರತಿ (ಪ್ರೂಫ) ನೋಡಲು ಸ್ವಂತ ವೆಚ್ಚದಿಂದ ಅಲ್ಲಿಗೆ ಹೋಗಿಬರುತ್ತಿದ್ದರಂತೆ. ಅವರ ಬರವಣಿಗೆ ನಿರ್ದುಷ್ಟವಾಗಿ ಅಚ್ಚಿಸಲು ಅವರ ಹೆಣಗಾಟ. ಲೇಖನದ ಹಾಳೆಯ ಬುಡದಲ್ಲಿ ನಿರ್ದೇಶದ ಸಾಲುಗಳಿದ್ದದ್ದೇ. ಕವಿತೆ ಬರೆದರೂ ಅಡಿ ಟಿಪ್ಪಣಿ ಇದ್ದದ್ದೇ. ಆಧಾರವಿಲ್ಲದೇ ಯಾವುದೂ ನಡೆಯು ವಂತಿಲ್ಲ. ಇವರ ನೆನಪಿನ ಶಕ್ತಿಯಿಂದ ಯಾವುದೂ ತಪ್ಪಿಸಿಕೊಳ್ಳುವಂತಿಲ್ಲ. ಅದರಲ್ಲಿ ಅಪಾರವಾದ ಶ್ರದ್ಧೆ—ಸಂತೋಷ ಅವರಿಗೆ. ದ. ಕ. ಜಿಲ್ಲೆಯ ಯಾವ ಊರಿಗೇ ಹೋಗಲಿ, ಸಂಜೆಗೆ 'ಮನೆ'ಗೇ ಬರಬೇಕು. ಆ ನೆಲದಲ್ಲಿ ಅವರದು ಅಷ್ಟು ಪ್ರೇಮ. ವೇಷಕ್ಕೇನು,-ಮನೆಯಲ್ಲಿ ಒಂದು ಮುಂಡು, ಒಂದು ಮಂಡ ಅಂಗಿ. ಹೊರಕ್ಕೆ ಹೊರಟಾಗೂ ವಿಶೇಷ ಬೇಕಿಲ್ಲ. ಟೊಂಕಕ್ಕೆ ಒಂದು ಕಟ್ಟು ಬೀಡಿ (ಈಗ ಸಿಗರೇಟಂತೆ), ನಡಿಗೆಯಲ್ಲಿ ತರಾತುರಿ ಇಲ್ಲವಾದರೂ ಪೂರ್ತಿ ಚಟುವಟಿಕೆ ಯಿಂದ ಸಜೀವ ವೇಗವೇ ಕಾಣುತ್ತದೆ. ಒಳಗಣ್ಣಿಗೆ ಪೈ ಒಂದು ಪ್ರವಾಹವಿದ್ದಂತೆ. ಅದರ ಸುಳಿಗಳ ವೈಭವ ಅದರದು; ದಂಡೆ ಕೊರೆದೀತು, ನೀರು ನೀರೇ.

* * * *

'ಪುತಿನ' ನುಣ್ಣಗಿನ ತಲೆ, ಅವರ ಪದ್ಯದ ಮೊಂಡಳಿರು ಚಿಗುರು ಮುಖದಲ್ಲೂ ಇರುತ್ತದೆ. ಆದರೆ ನೋಟ ಶುಚಿ, ಮಾತು ಶುಚಿ. ಅವರ ಪದ್ಯದ 'ಶಿವ'ದ ದರ್ಶನ ಅವರ ನಿಲುವಿನಲ್ಲೂ ಇದೆ. ಮಿಲಿಟರಿ ಖಾತೆಯಲ್ಲಿದ್ದು ಇವರು ಕಾವ್ಯಾ ರಾಧನೆ ಮಾಡುತ್ತಾರೆಂದರೆ—ಮುದ್ದಣ ಕುಸ್ತಿ ಮಾಸ್ತರಾಗಿ ಕಾವ್ಯ ಬರೆದನೆಂದರೆ ಯಾಕೆ ಅಚ್ಚರಿ ಪಡಬೇಕು ?

ಮಾಸ್ತಿ ಕಂದಾಯ ಖಾತೆಯಲ್ಲಿದ್ದೇ ಐವತ್ತು ಪುಸ್ತಕ ಬರೆದರು. ಇವರ ನಿಲುವಿನಲ್ಲಿ ಕಾವ್ಯವಿದೆ. ಕೈ ಕುಲುಕುವ ಕಾವಿನಲ್ಲಿ ಕಾವ್ಯವಿದೆ. ಮುಕ್ತ ಹಾಸದಲ್ಲಿ ಕಾವ್ಯವಿದೆ. ಹೃದಯದ ಔದಾರ್ಯದಲ್ಲಿ, ಸಂಪ್ರದಾಯದ ರುಚಿಯಲ್ಲಿ, ಅದೇಕೆ ಅವರ ಹಣೆಯ ನಾಮದಲ್ಲಿ ಕಾವ್ಯವಿದೆ. ಮಾಸ್ತಿ ಮೂರ್ತಿ ಮಂತ ಮಾನವ ಕಾವ್ಯ. 'ಕೆಟ್ಟದ್ದು' ಎನ್ನುವದಿಲ್ಲ ಇವರು, 'ಒಳ್ಳೆಯದಲ್ಲದ್ದು' ಎಂದಾರು. ಕಲೆಕ್ಟರ ರಾಗಿ ಮೈಸೂರ ಸೂಟು ಧರಿಸುತ್ತಿದ್ದರೂ ಮನೆ ಯಲ್ಲಿ—ಹೊರಗೆ ಮಾಸ್ತಿ ವೇಷ ತೀರ ಸಾದಾ. ಈಗಂತೂ ಕೋಟೂ ಬೇಕೆಂದಿಲ್ಲ. ಟೊಪ್ಪಿಯನ್ನು ಇಡದೆ ಒಂದು ಬನೀನಿನ ಮೇಲೆ ವಲ್ಲಿ ಹೊತ್ತು ಹೊರಡುತ್ತಾರೆ. ಅವರ 'ಕೆಲಸ'ದ ಕೂಡ ಭಾರದ ವೇಷಕ್ಕೆ ನಿವೃತ್ತಿಯಾಯಿತು. ಇವರದು ಮೈದಡ ವದೇ ಮಾತಿಲ್ಲ. ಒಂದು ಕೈಯಿಂದ ಕೈ ಕುಲಕಿ ಇನ್ನೊಂದು ಕೈಯಿಂದ ಬೆನ್ನ ಮೇಲೋ—ಭುಜದ ಮೇಲೋ ಆಡಿಸಿ ನಮ್ಮನ್ನು ತಮ್ಮ ಎದೆಯೊಳಗೆ ಕೊಂಡುಹೋಗುತ್ತಾರೆ. 'ಸೌಖ್ಯವೆ?'—ಎನ್ನು ತ್ತಾರೆ. ಆ ನೆರೆಯಲ್ಲಿ ಸೌಖ್ಯವಲ್ಲದೆ ಏನಿದ್ದೀತು?

ಅಧುನಿಕ ಕನ್ನಡಕ್ಕೆ 'ಶ್ರೀ' ಕಾರವಾಗಿದ್ದ ಬಿ. ಎಂ. ಶ್ರೀಕಂಠಯ್ಯನವರದು ಶ್ರೀಮದ್ಗಾಂಭೀರ್ಯ. ಅವರು ರಾಜಕವಿ. ಇಷ್ಟಗಲದ ತುಂಬಿಕೊಂಡ ಮುಖದಲ್ಲಿ ಶ್ರೀಮಂತಿಕೆಯೇ ಇತ್ತು. ಆ ವಿಶಾಲ ಫಾಲದಲ್ಲಿ ಅವರ ಪಾಂಡಿತ್ಯ ಬರೆದಿತ್ತು. ಸ್ಥೂಲವಲ್ಲದಿದ್ದರೂ (?) ಎತ್ತರದ ತೋರ ದೇಹದಲ್ಲಿ ರಸಿಕತೆ ತುಂಬಿತ್ತು. ಅವರದೇ ಆದ ನಿಲುವಿನಲ್ಲಿ ಗೊಮ್ಮಟನ ಸ್ಥೈರ್ಯವಿತ್ತು. ವೇದಿ ಕೆಯ ಮೇಲೆ ನಿಂತುಕೊಂಡು ಅವರು ಮಾತಿನ ಜಾಡಿನೊಡನೆ ಉಟ್ಟ ಅಂಚಿನ ಧೋತರದ ಚುಂಗನ್ನು ಹಿಡಿದು ಅತ್ತ ಇತ್ತ ಅಲೆದಾಡುತ್ತ-ಒಲೆದಾಡುತ್ತ ಹೇಳುವ ಮಾತು-ಶ್ರೋತೃಗಳಿಗೆ ಕನ್ನಡ ದೀಕ್ಷೆಯನ್ನೇ ಅಂಟಿಸುತ್ತಿತ್ತು. 'ಕನ್ನಡ ತಾಯ್ನೋಟ' - ಅವರ ಅಮರ ಕಾವ್ಯ-ಓದುವಾಗ, ಕನ್ನಡ ದೇವಿಯನ್ನು 'ಕಂಡೆ' — ಎನ್ನುವಾಗ, 'ಮುತ್ತಯ್ದೆ' ಎನ್ನುವಾಗ, ಅವರ ಎದುರ್ಗೆ ಕನ್ನಡ ತಾಯ ಶ್ರೀಮೂರ್ತಿ ನಿಂತಿದೆಯೆಂದು ಜನ ಹುಡುಕುವಂತಾಗುತ್ತಿತ್ತು. ಆ ಕಾಮ ಅವರೇ ಹೇಳಬೇಕು. ಕನ್ನಡದ ಕಳಕಳಿ, ಕುದಿ ಗಳು ಶ್ರೀಯವರಲ್ಲಿ ಮೂರ್ತಿಮಂತ ಸ್ಫೂರ್ತಿ ಯಾಗಿದ್ದವು. ಉಪನಿಷತ್ತಿನ ಮೇಲೆ ಅವರು ಮಾತಾಡಲಿ, ಅವರನ್ನು ಉಪನಿಷತ್ತಿನ ಋಷಿ ಗಳಿಂದ ಬೇರ್ಪಡಿಸುವಂತಿದ್ದಿಲ್ಲ.

"ಕವಿಶಿಷ್ಯ" (ಮಂಗೇಶರಾಯರು)ರನ್ನು ಒಮ್ಮೆ ಕಂಡಿದ್ದೆ. ತೆಳ್ಳಗೆ, ಬೆಳ್ಳಗೆ, ದೇಹಯಷ್ಟಿ, ಸಾಧು ವಾದ ನಿಲವು, ಹುಡುಕುವ ಕಣ್ಣು, ಹಣ್ಣಾದ ಮೀಸೆ, ಮುಖದಲ್ಲಿ ಸಾತ್ವಿಕ ತೇಜ! ಕುಮಾರ ವ್ಯಾಸನ ಬಗ್ಗೆ ಹೇಳುತ್ತ ನೆನಪಿಸಿಕೊಂಡ ಪದ್ಯ ದೊರೆತಾಗ 'ಹಂ' ಎಂದು ಎದುರೇ ಕಂಡಂತೆ ಸಂತೋಷಿಸುವ--ಎತ್ತಿಕೊಂಡಂತೆ ಉಸುರುವ ಆ ಮೋಡಿ ಅವರದೇ.

ಗೋಕಾಕ ವಿನಾಯಕರನ್ನು ನೋಡಿ. ಆ ಗೋದಿಗೆಂಪಿನ ಮುಖ, ಎತ್ತರದ ನಿಲುವು-ಮಾತಾಡುವಾಗಲೂ ಚಿಂತನೆಯನ್ನು ನಡೆಸಿದಂತೆ ಅಭಿನಯ, ಕವಿತೆ ಹೇಳುವಾಗ ಸ್ವಸ್ತಿ ಮಂತ್ರ ಹೇಳುವಂಥ ಸಾವಧಾನ. ಈ ಸಂದರ್ಶನ, ಸಂಭಾ

ಷಹೆಗಳಲ್ಲಿ ಹುಬ್ಬು ಏರಿಸಿ, ಕೈ ಬೆರಳನ್ನು ತುಂದಲೆಯಲ್ಲಿ ಆಡಿಸುತ್ತ, 'ಅದೇ'-'ಅದೇ' ಎಂದು ಎದುರಿನವರನ್ನು ಆಲಿಸುತ್ತ-ಹೂವಿನಂತೆ ನಗುತ್ತ, ಒಂದು ಚಿಟಕೆ ನಸ್ಯ ಮೂಗಿಗೇರಿಸುತ್ತಾರೆ.

*　　*　　*　　*

ಮುಗಳಿಯವರು ಹದಿನಾರಾಣೆ ಸಿನ್ಸಿಯರ್ ಕವಿ. ಸಣ್ಣಗೆ, ನುಣ್ಣಗೆ ಮಾತಾಡುತ್ತಾರೆ. ಇವರದು ಬಹುಶಃ ಎಲ್ಲ ಪೂರ್ವತಯಾರಿ ಕೆಲಸಗಳು. ಊರಿಗೆ ಬಂದಾಗ ಯಾರು ಯಾರನ್ನು ನೋಡಬೇಕು-ಏನೇನು ಮಾಡಬೇಕೆಂಬ ಪಟ್ಟಿ ಸಿದ್ಧಪಡಿಸಿಕೊಂಡಿರುತ್ತಾರೆ. ಆ ಕರ್ತವ್ಯ ನೆರವೇರಿಸದೆ ಇದ್ದವರಲ್ಲ. ಮರೆವಿಗೆ ಆಸ್ಪದವೇ ಇಲ್ಲ. (ಇವರ ಕಾವ್ಯಗುರು ಬೇಂದ್ರೆ ಮಾತ್ರ ತದ್ವಿರುದ್ಧ.) ಚೀಟಿ ಹಾಕಿ ಕವನ ಬರೆಯುವಾಗೊಮ್ಮೆ ಇವರು ಗೆಳೆಯರ ಗದ್ದಲದಿಂದ ಕಾವ್ಯ ಸಮಾಧಿ ಸೇರಲಾರದೆ ಶಾಂತಿ ಕೋರಿದರು. ಬರೆಯಲು ಕೂತರೆ ಬರೆಯಲೇಬೇಕು. ಸದ್ದೇ ಕಾರಣವಾಗಿ ಕವಿತೆ ಬರೆಯದೆ ಹೇಗಿರಬೇಕು? ಕವಿತೆ ಬರೆಯಬೇಕಾದರೆ ಒಳಗೆ ಗದ್ದಲ ನಡೆಯಬೇಕು—ಹೊರಗಲ್ಲ—ಎಂಬಂತೆ ಅವರ ರೀತಿ. ಯಾರೇ ಆಗಲಿ ಅವರನ್ನು ಕಂಡರೆ 'ಬಂದಾರ ತಂದಾರ ಮಂದಾರ ಹೂವಾ', 'ಮಲ್ಲಿಕಾ ಬಕುಲ ಚಂಪಕಾ' ಕೇಳದೆ ಇರಬೇಡಿ. 'ನೀಹೆಯ ದನಿ'ಯಲ್ಲಿ ಅವರು ಹೇಳುವ ಆ ಪದ್ಯಗಳೇ ಸಾಕು; ಕವನ ಬರೆದರಾಗಲಿಲ್ಲ. ಅದನ್ನು ಹೀಗೆ ಹೇಳಿ ತೋರಿಸಬೇಕೆಂದು ನಿಮಗನಿಸದಿರದು.

'ಆನಂದಕಂದ'ರನ್ನು ನೋಡಿ, ಅವರ ನಯವಾಗಿ ಬಾಚಿದ ತಲೆ, ಫ್ರೆಂಚ್ ಕಟ್ ಮೀಸೆ, ಪೈರಣಿನ ಮೇಲೆ ಹೂವಿನ ಶಾಲು. ಬಂದವರನ್ನು ಮೊದಲು ಬರಮಾಡಿಕೊಂಡು - 'ಏನು' ಎಂದು ಸಂಭಾಷಣೆಗೆ ತೊಡಗುತ್ತಾರೆ. ಚಹಾ-ಕಾಫಿ ಸರಬರಾಯಿಯಾಗುತ್ತದೆ. ತಮ್ಮ 'ಜಯಂತಿ' ಕಚೇರಿಯಲ್ಲಿ ಕುಳಿತುಕೊಂಡು-ವಿಶ್ವದ ಆಗುಹೋಗುಗಳನ್ನು ನಿರೀಕ್ಷಿಸುತ್ತಾರೆ. ನೀವು ಯಾವ ವಿಷಯಕ್ಕೇ ಮಾತಾಡಿ-ಅದಕ್ಕೆ ಅವರ ಅಭಿಪ್ರಾಯವಿದ್ದೇ ಇದೆ. ಇವರು ಪದಗಳನ್ನು ರಾಗಬದ್ಧವಾಗಿ ಬರೆಯಬಲ್ಲರಷ್ಟೆ ಅದನ್ನೇ ಹಾಡುವಾಗ ನಡುಕ ಅನಿವಾರ್ಯ. ಪ್ರಸಂಗ ಗೀತಗಳು ಬೇಕಾದರೆ ಇವರನ್ನು ಕೇಳಿ.

ಇವರೆಲ್ಲ ಬಹುಶಃ ಈ ಶತಕದ ಎರಡು ಮೂರನೆಯ ದಶಕದಲ್ಲಿ ತೊಡಗಿದ ಕವಿಗಳಲ್ಲಿ ಕೆಲವರು. ಎಲ್ಲರನ್ನೂ ಕಾಣುವದು-ಕಾಣಿಸುವದು ನನಗೆ ಸಾಧ್ಯವಿಲ್ಲ, ನಿಮಗೂ ಬೇಸರ. ಈಗ ಎರಡು ಪಟ್ಟಗಳಿಂದ ಕಾವ್ಯಸಾಧನೆ ಮಾಡಿದವರಿವರು. ಇವರೆಲ್ಲರ ಕೃಷಿ ಕವಿಗಳ ಕಾರಖಾನೆಗೆ ಕಾರಣವಾಗಿದೆ. ಈಗ ನಾಲ್ಕನೆಯ ದಶಕದಲ್ಲಿಯೇ ಒಂದು ಶತ ಕವಿಗಳಿದ್ದಾರೆ. ಅವರೂ ಒಂದೊಂದು ಜಾತಿ ಎಂಬಂತೆಯೇ ರೂಪುಗೊಳ್ಳುತ್ತಿದ್ದಾರೆ. ಇನ್ನಷ್ಟು ರೂಪುಗೊಳ್ಳಲಿ. ಈಗ ಈ ಹಿರಿ ಕವಿಗಳು ಹೀಗೆಲ್ಲ ಬರೆದರೆ ಕರೆದು ಬಯ್ಯಲಿಕ್ಕಿಲ್ಲವೆಂಬ ಧೈರ್ಯವಿದೆ. ಇವರ ನಂತರದವರಾದರೆ ಕುಸ್ತಿಗೇ ಕರೆದಾರು! ನಾನು ಸದ್ಯ ಅದಕ್ಕೆ ಸಿದ್ಧನಿಲ್ಲ. ಬಹುಶಃ ನಾನೇ ಸಿದ್ಧನಾಗಬೇಕು, ಇಲ್ಲವೆ ಈ ಹಿರಿಯರಷ್ಟು ಸಾವಧಾನ ಅವರಿಗೆಲ್ಲ ಬರುವವರೆಗೆ ನಾನು ತಡೆಯಬೇಕಾಗುವದು.

ಕಾವ್ಯ ಮತ್ತು ವಿಮರ್ಶೆ

ಕಾವ್ಯವೂ ಅದರ ಶಕ್ತಿ-ಅಧಿಕಾರಗಳನ್ನು ನಿಯಂತ್ರಿಸಿ ಮಿತಗೊಳಿಸುವೆನೆಂದು ಹೇಳಿಕೊಳ್ಳುವ ಕಲೆಯೂ ಒಟ್ಟೊಟ್ಟಾಗಿ ಬಾಳಲಾರವು.

—ಶೆಲಿ

ಶ್ರೀ. ' ಎನ್ಕೆ ' ಅವರಿಂದ

ಅಳಿಯುದೇವರಿಗೆ ಮಾನಪತ್ರ

ಮಾವಂದಿರನ್ನು ಸುಲಿಯುವ ಅಳಿಯದೇವರು ನಿಮಗೆ ಗಂಟುಬಿದ್ದುದುಂಟೆ ?
ಹಾಗಾದರೆ ಅದಕ್ಕೆ
' ಎನ್ಕೆ ' ರಾಮಬಾಣ ಪ್ರಯೋಗಿಸಿರಿ !

ಅತ್ತೆ-ಸೊಸೆಗಳೆಂದರೆ ಬೆಕ್ಕು—ಇಲಿಯೆಂದರೆ ಮಾವ-ಅಳಿಯ ಎಂದರೆ ಸಬಾರ್ಡಿನೇಟ ಮತ್ತು ಬಾಸ್ ಇದ್ದ ಹಾಗೆ. ಸೊಸೆಯಾಗಿ ತಲೆಬಾಗಿ ನಡೆದರೆ ಅಳಿಯನಾಗಿ ಮೂಗು ಮೇಲೆ ಮಾಡಿಕೊಂಡು ನಡೆಯುವನು. ಸೊಸೆಯ ಅತ್ತೆಯಾದವಳಿಗಿರುವ ಹಮ್ಮು ಬಿಗುಮಾನಗಳೇನು, ಅಳಿಯನ ಮಾವನಾದವನ ದೈನ್ಯದಾಕ್ಷಿಣ್ಯಗಳೇನು! ನಮ್ಮಲ್ಲಿ ಹೆಣ್ಣಿಗಿರುವ ಅನವಸ್ಥೆಯೆ ಗಂಡಿನ ಬೆಲೆಯನ್ನು ಅನವಶ್ಯಕವಾಗಿ ಮೇಲಕ್ಕೇರಿಸಿದೆ. 'ಹೆಣ್ಣು ಹುಟ್ಟದರೆ ಹುಣ್ಣು ಹುಟ್ಟದ ಹಾಗೆ' ಎಂಬ ಗಾದೆಯ ಮಾತು ಸುಳ್ಳಾಗುವ ಕಾಲ ಇನ್ನೂ ಬರಬೇಕಾಗಿದೆ. ಹೆಣ್ಣಿನ ಹೀನಾಯಕ್ಕಿಂತ ಹೆಣ್ಣು ಹಡೆದವರ ಹೀನಾಯ ಬಣ್ಣಿಸಲಸಾಧ್ಯ. ಈ ಅಳಿಯಂದಿರು ಅಳಿಯ-ದೇವರಾಗಿ ಮಾವಂದಿರನ್ನು ಶನಿರಾಯನಂತೆ ಕಾಡುತ್ತಾರೆ! ಹುಂ! ಅಳಿಯದೇವರಂತೆ! ಯಾರೊ ಈ ದೈತ್ಯರಿಗೆ ದೇವತ್ವದ ಸ್ಥಾನಕೊಟ್ಟವರು? ಇಂದು ಅಳಿಯಂದಿರಾಗಿ ಮೆರೆಯುವವರು ನಾಳೆ ತಾವೂ ಹೆಣ್ಣಿನ ತಂದೆಯಾಗಿ ತಲೆ ಬಗ್ಗಿಸಬೇಕಾಗುವುದೆಂಬುದನ್ನು ಮರೆಯಬಾರದು. ಹಾಗೆ ಇಂದಿನ ಅಳಿಯದೇವರು ನಾಳಿನ ಹೆಣ್ಣಿನ ತಂದೆಯಾಗಿ ಊರೂರಿಗೆ ವರಶೋಧನೆಗಾಗಿ ಅಲೆದಾಡಿ ಹತ್ತು ಜನರಿಗೆ ಕೈಜೋಡಿಸಿ ಮನೆಮಾರು ಮಾರಿಕೊಂಡು ವರದಕ್ಷಿಣೆಗೆ ಭರತಿ ಮಾಡಿ ಇದ್ದ ಗಂಡಸು ಮಕ್ಕಳಿಗೆ ಪರಟೆಯನ್ನು ದಯಪಾಲಿಸಿ ಹೆಣ್ಣುಕೊಟ್ಟ ಮಾವನೆಂದು ಸಮಾಜ ಶಾಪಭ್ರಷ್ಟನೇನೊ ಎಂಬಂತೆ ಕಂಡವರ ಕಣ್ಣು ತಪ್ಪಿಸಿ ನಾಚಿ ತಲೆ ಮಾಚಿಕೊಂಡು ಓಡಾಡುವ ಪರಿಸ್ಥಿತಿ ನೋಡಿ ಸಂತಸಬಡುವ ತಾಳ್ಮೆ ನನಗೆಲ್ಲಿ? ಯಾವ ಕಾಯದೆಗೂ ಬಾಗದ ಕನಿಕರಕ್ಕೆ ಮಾರುವೋಗದ ಈ ಅಳಿಯಂದಿರ ಅವಸ್ಥೆಯನ್ನು ಇಂದೇ ಮಾಡಬೇಕೆಂಬ ಹೌಸು ನನ್ನದು. ಅಳಿಯಂದಿರ ಮೇಲೆ ಇಷ್ಟೊಂದು ಗದೆಯೆತ್ತುವ ನಾನು ಯಾರು ಎಂದು ನಿಮಗೆಲ್ಲ ಕುತೂಹಲವಾಗಿರಬೇಕು. ನಾನೇನೊ ಹನ್ನೆರಡು ಹೆಣ್ಣುಮಕ್ಕಳ ತಂದೆಯಾದರೂ ಇದ್ದಿರಬೇಕೆಂದು ನಿಮಗೆನಿಸಿರಬಹುದು. ಆದರೆ ಹಾಗೇನೂ ಇಲ್ಲ. ನಾನು ಮಾವನೂ ಅಲ್ಲ, ಅಳಿಯನೂ ಅಲ್ಲ. ನಮ್ಮ ತಂಗಿ ಸಾವಿತ್ರಿ, ನಮ್ಮಪ್ಪ ಧರ್ಮರಾಯರು. ಈ ನಮ್ಮ ಅಳಿಯದೇವರು ದುರ್ವಾಸರಾಯರ ಉರುವಣೆಗೆಯಿಂದ ನೊಂದು ಬೆಂದು ಕಳವಳಿಸಿದ ಪರಿಯನ್ನೂ ಪರಿಸ್ಥಿತಿಯನ್ನೂ ಕಣ್ಣಾರೆ ನೋಡಿ ಕನಿಕರಪಟ್ಟು ಕಿಡಿಕಿಡಿಯಾದ ನಾನು ಇಂತಹ ಅಳಿಯಂದಿರ ಫಜೀತಿಯನ್ನೊಮ್ಮೆ ಮಾಡಿಬಿಡಬೇಕೆಂದು ನಿಶ್ಚಯ ಮಾಡಿದುದು!

ನನಗಿನ್ನೂ ನೆನಪಿದೆ. ಈ ದೂರ್ವಾಸರಾಯರು ದೊಡ್ಡ ಜಹಗೀರುದಾರರೆಂಬ ಹೆಮ್ಮೆಯಿಂದ ನಮ್ಮಪ್ಪ ಧರ್ಮರಾಯನಿಂದ ಅವನ ತಲೆಯ ಮೇಲೆ ಎರಡೆಳೆಯನ್ನೂ ಬಿಡದಂತೆ ಭದ್ರಮಾಡಿದುದು. ವರದಕ್ಷಿಣೆ ಎಣಿಸಿದ ಮೇಲೆಯೇ ಅಕ್ಕೀಕಾಳಿಗೆ ಏಳುವೆನೆಂದು ಅಳಿಯ ದೇವರು ಹಠ ಹಿಡಿದರು. ನಮ್ಮಣ್ಣ ಟ್ರೆಜರಿ ಕಚೇರಿಗೆ ಹೋದವರು ಇನ್ನೂ ಬಂದಿರಲಿಲ್ಲ. ಲಾಜಾಹೋಮದ ಕಾಲಕ್ಕೆ ಎಣಿಸುತ್ತೇವೆಂದು ನಮ್ಮಪ್ಪ ಧರ್ಮರಾಯ ಬಾಯಿ ತೆರೆದು ಬೇಡಿಕೊಂಡ. ತೆರಿಗೆ ವಸೂಲಿಗೆ ಬಂದ ರೆವಿನ್ಯೂ ಅಧಿಕಾರಿಗಳಿಗೂ ಮಿಗಿಲಾದ ಬಿಗುಮಾನದಿಂದ ಅಳಿಯ-ದೇವರೂ ಅವರ (ಯಮ) ದೂತರೂ ಕಟ್ಟು ಹಿಡಿದು ಕೂತರು, ವರದಕ್ಷಿಣೆ ಎಣಿಸದೆ ಅಕ್ಕೀಕಾಳಿಗೆ ಏಳುವುದಿಲ್ಲ ಎಂದು. ನಮ್ಮಪ್ಪನ ಕಣ್ಣೀರು ಕಪಾಳಕ್ಕೆ ಬಂದವು. ನಮ್ಮವ್ವ ಧೂರ್ತತನದಿಂದ, ಔದಾರ್ಯದಿಂದ ತನ್ನ ಕೈಯೊಳಗಿನ ಸೇರಿನ ಬಂಕಿಗಳನ್ನೂ ಅರ್ಧ ಸೇರಿನ ಗೋಟು ಪಾಟ್ಲಗಳನ್ನೂ ಬಿಚ್ಚಿಟ್ಟು 'ಇಗೊಳ್ಳಿರಿ, ವರದಕ್ಷಿಣೆ ಮುಟ್ಟುವ ವರೆಗೂ ಇವನ್ನು ಒತ್ತಿಯಿಟ್ಟದ್ದೇನೆ' ಎಂದು ಧೈರ್ಯವಾಗಿ ನುಡಿದಳು. ಮತ್ತೊಂದು ಇಂತಹದೇ ಘಟನೆ ನೆನಪಿದೆ. ಕಳುವೂಟದಲ್ಲಿ ಗ್ರಾಮೋಫೋನ ಬೇಕೆಂದು ಹಟ ಹಿಡಿದರು ದೇವರು. ನಮ್ಮ ಧರ್ಮರಾಯರು ಅಂಗಲಾಚಿ 'ಬ್ರಾಹ್ಮಣರ ಭೋಜನಕ್ಕೆ ಅಡ್ಡಿಯಾಗುತ್ತದೆ, ದಯವಿಟ್ಟು ಹಾಗೆ ಹಟ ಹಿಡಿಯಬಾರದು; ಇನ್ನು ತಿಂಗಳೊಪ್ಪತ್ತಿನೊಳಗಾಗಿ ನಾನು ತರಿಸಿಕೊಡುತ್ತೇನೆಂ'ದರು. ಅಳಿಯಂದಿರು ಮಣಿಯಲಿಲ್ಲ, ಹಣಿಯಲಿಲ್ಲ. 'ಸರಿ, ಅದರ ಕ್ರಯವನ್ನೇ ನಗದಿನಲ್ಲಿ ಕೊಟ್ಟರಾದೀತೆ? ' ಎಂದು ದೈನ್ಯದಿಂದ ಕೇಳಿದ ಅಪ್ಪನ ಮನ್ನಣೆಗೆ ಅಪ್ಪಣೆಯಾಯಿತು: 'ಸಾವಿರ ರೂಪಾಯಿ ಛಲ್ಲಿರಿ' ಎಂದು! ಕೇಳಿದುದು. ಗ್ರಾಮೋಫೋನ್, ಅದಕ್ಕೆ ತಪ್ಪು ದಂಡ ಸಾವಿರ ರೂಪಾಯಿ ನಗದು!.... 'ಏನಿದು! ಛಂದಕ್ಕಾಗಿ ಕಳುವೂಟದಲ್ಲಿ ಸೆಟಗೊಂಡು ಕೂಡುತ್ತಾರೆ; ಛಂದಕ್ಕಾಗಿ ಒಂದು ಉಂಗುರ, ಗಡಿಯಾರ ಏನಾದರೂ ಕೊಟ್ಟರೆ ಅಷ್ಟಕ್ಕೇ ಒಪ್ಪಿಕೊಳ್ಳುತ್ತಾರೆ. ಇದೇನು ಗಝ್ನಿ ಮಹಮ್ಮದನ ಸುಲಿಗೆಯಾಯಿತಲ್ಲ' ಎಂದು ಅಲ್ಲಲ್ಲಿ ಜನ ಕಿವಿಯಲ್ಲಿ ಕಚ್ಚಾಡುತ್ತಿದ್ದರು. ಆದರೇನು ಯಾವ ಮೊರೆ, ಬಿನ್ನಹ, ಬೇಡಿಕೆಗಳೂ ಉಪಯೋಗಬೀಳಲಿಲ್ಲ. ಸರಿ, ನಮ್ಮಪ್ಪ ಅರ್ಧ ಸೇರಿನ ಬಂಗಾರದ ಸರವನ್ನೂ ಅಡವಾಗಿ ಕೊಟ್ಟ. ಬ್ರಾಹ್ಮಣರ ಭೋಜನ ಸಾಂಗವಾಯಿತು. ಆದರೆ ಬೀಗರು (ಎಂದರೆ ಗಂಡಿನ ಬೀಗರು) ಕೈತೊಳೆದುಕೊಂಡು ಮನೆಗೆ ಹೋಗುವ ಮುಂದೆ ನಾಲ್ಕು ಬೆಳ್ಳಿಯ ವಾಟಗಳು ಮಾಯವಾಗಿ ಹೋಗಿರಬೇಕೆ? ಸರಿ, ಅಂದೇ ಸಂಜೆ ಬೀಗರು ಹೊರಡುವುದು. ದೊಡ್ಡದೊಂದು ರಂಪವೇ ನಡೆಯಿತು. ಅಳಿಯಂದಿರ ಜೊತೆಗೆ ಬಂದ ಒಂದೆರಡು ತೋಳಗಳಿಗೆ ಸರಿಯಾದ ಉಪಚಾರವಾಗಲಿಲ್ಲವಂತೆ! ಸಾಡೇ ಆಗುವ ವರೆಗೂ ಅಳಿಯ

ವಧೂಗೃಹದಲ್ಲಿ ಇರಬೇಕಲ್ಲವೆ? ಆಗ ಅಳಿಯನ ಜೊತೆಗಿರುವವರು ಬಂದರೆ 'ಬನ್ನಿರಿ' ಎನ್ನಲಿಲ್ಲವಂತೆ! 'ಕೂಡಿರಿ' ಎನ್ನಲಿಲ್ಲವಂತೆ! ನಮ್ಮ ಧರ್ಮರಾಯರು ಮತ್ತೆ ಕೈಜೋಡಿಸಿ ಕ್ಷಮಾಪಣೆ ಕೇಳಿದರು. ಆದರೆ ಅವರ ಒಳಹೊಡೆತದ ಅರ್ಥ ನಮ್ಮಪ್ಪನಿಗೆ ಆಗಲಿಲ್ಲ. ಲಗ್ನದ ಕರಾರು ಪತ್ರದಲ್ಲಿ ನಾವು ಪ್ರವಾಸದ ಒಂದು ವೆಚ್ಚವನ್ನೂ ಕೊಡುವುದು ಎಂದಿತ್ತು. ಈ ಗಲಭೆಯಿಂದಾಗಿ ಪ್ರವಾಸದ ಎರಡೂ ವೆಚ್ಚ ಕೊಡಬೇಕಾಗಿ ಬಂತು! ಇದು ನಮ್ಮಣ್ಣನಿಗೂ ಸಹನವಾಗಲಿಲ್ಲ. ಅವಳಿಗೆ ಸಲ್ಲಬೇಕಾಗಿದ್ದ 'ಹೊಟ್ಟೆ ತಣ್ಣಗೆ ಮಾಡಿದ ಸೀರೆ' ಮುಟ್ಟರಲಿಲ್ಲವಂತೆ! ಆದರೆ ಹೆಣ್ಣಿನ ಬೀಗಿತ್ತಿಯನ್ನು ಕೇಳುವವರಾರು? ನಮ್ಮಣ್ಣ ಎಷ್ಟೇ ಸನ್ನೆಸೂಕ್ಷ್ಮದಿಂದ ಹೇಳಿದರೂ ಕೇಳದೆ ಅಪ್ಪ ಎರಡೂ ವೆಚ್ಚಕ್ಕೆ ಹೂಂಗುಟ್ಟಿದ ನಿಷ್ಟೆ ಅಲ್ಲ, ಓಕುಳಿ ತಂಬಿಗೆಯೊಂದು, ಒಂದು ಬೆಳ್ಳಿ ತಂಬಿಗೆ, ಪುರೋಹಿತರಿಗೆ ಹೋಗುವ ಓಡಾಡುವ ಮುಂಡಾಸವೆಂದು ಒಂದು ಜರದ ರುಮಾಲ, ಭೂಮಕ್ಕೆ ಬಡಿಸಿದ ಬೆಳ್ಳಿಯ ತಾಟು ಇಷ್ಟೆಲ್ಲಾ ಸುಲಿಗೆ ಮಾಡಿಕೊಂಡು ಹೊರಟರು. ಇಷ್ಟೆಲ್ಲಾ ಸುಲಿಗೆ ಮುಗಿದು ಆ ಮೇಲೆ ಬೆಳ್ಳಿಯ ಎಲಡಿಕೆ ಡಬ್ಬಿ, ಕುತ್ನಿ ಗಾದೆ, ಕಿರ್ಲೋಸ್ಕರ ಪಲ್ಲಂಗ, ಮತ್ತೆ ಬೆಳ್ಳಿಯ ತಾಟು, ಚವಪೂಲು, ತಂಬಿಗೆ ತಾಲಿ ಇಷ್ಟೆಲ್ಲ ಆದ ಮೇಲೆ ಸಾವಿರ ರೂಪಾಯಿಯಷ್ಟು ನಗದು ಎಣಿಸಿದ ಹೊರತು ಫಲಶೋಭನ ಮಾಡಿಕೊಳ್ಳುವದಿಲ್ಲವೆಂದು ಅಸಹಕಾರ ಹೂಡಿದರು. 'ಹೋಗಲಿ ಬಿಡಿರಿ. ಎಷ್ಟು ದಿನ ಈ ಅಸಹಕಾರ ನಡೆಯುತ್ತದೋ ನೋಡೋಣ' ಎಂದು ನಾನೂ ಅಣ್ಣನೂ ದನಿಗೂಡಿಸಿ ಹೇಳಿದೆವು. ನಮ್ಮ ಧರ್ಮರಾಯರು ಕೇಳಲಿಲ್ಲ. 'ಸರಿ, ಇದ್ದ ಗಂಡಸು ಮಕ್ಕಳ ಕೈಗೆ ಪರಟಿಕೊಟ್ಟು ಬಿಡಿರಿ' ಎಂದು ಅಣ್ಣನು ಅಬ್ಬರಿಸಿದಳು! . . . ಇನ್ನು ಸುಲಿಗೆಯ ಮೂರನೆಯ ಅಂಕವಾಗಿ ಬಂತು ಅಳಿಯತನ! ಇದೇನು ಕರಾರುಪತ್ರದಲ್ಲಿಲ್ಲ ಸುಮ್ಮನೆ ಇದ್ಯಾಕೆ?-ಎಂದು ನನ್ನ ತಕರಾರು. ಇದು ಲೌಕಿಕಕ್ಕಾಗಿ ಅಂತೆ! ಹುಂ! ಈ ಲೌಕಿಕದ ಕಣ್ಣಿಗೆ ಇಲ್ಲಿಯವರೆಗೂ ನಡೆದ ಸುಲಿಗೆ ಕಾಣುವುದಿಲ್ಲವೆ? . . .ಸರಿ, ನನ್ನ ಆ ಕ್ರೋಶದ ಉಪಯೋಗವೇನಾಗಬೇಕು? ಅಂತೂ ಅಳಿಯತನದ ಆಮಂತ್ರಣ ಹೋಯಿತು. . . . ನಾನು ಹಾಕಿದ ಹಂಚಿಕೆ ಅಣ್ಣನಿಗೂ ಗೊತ್ತಿರಲಿಲ್ಲ, ಅಪ್ಪನಿಗಂತೂ ಇಲ್ಲವೇ ಇಲ್ಲ.

ಇಷ್ಟೆಲ್ಲಾ ಸುಲಿಗೆ ಮಾಡಿದ ನಮ್ಮ ಅಳಿಯಂದಿರಿಗೆ ನಮ್ಮ ತಂಗಿ ಸಾವಿತ್ರಿ ಮೂರನೆಯ ಸಂಬಂಧ ಎಂಬುದನ್ನು ನೆನಪಿಡಬೇಕು. ಹಿಂದಿನ ಎರಡು ಸಂಬಂಧಗಳಿಂದಾಗಿಯೂ ಅಳಿಯ ದೇವರು ಎಷ್ಟೊ ಆಸ್ತಿ ಸಂಪಾದಿಸಿದ್ದರಂತೆ. ಪ್ರತಿ ವರುಷವೂ ಒಂದೊಂದು ಸಂಬಂಧ ಬೆಳೆದರೆ ನಮ್ಮ ಜಹಗೀರದಾರರಿಗೆ ವರದಕ್ಷಿಣೆ ಪರೋಪಚಾರಗಳೂ ಒಂದು ಕಾಯಂ ಉತ್ಪನ್ನವಾಗಬಹುದಿತ್ತು. ಆ ಹಂಚಿಕೆಯೂ ಅವರದಿತ್ತೆಂದು ಕಾಣುತ್ತದೆ,

ಏಕೆಂದರೆ ಮಾತುಮಾತಿಗೆ ನಮ್ಮಪ್ಪನ ಮುಂದೆ 'ಹಾಗಾದರೆ ಹುಡಿಗೆಯನ್ನು ನಿಮ್ಮಲ್ಲೇ ಇಟ್ಟು ಕೊಳ್ಳಿರಿ' ಎಂಬ ಮಹಾ—ಶಸ್ತ್ರವನ್ನು ಎತ್ತುತ್ತಿದ್ದರು. ನಮ್ಮಪ್ಪನಿಗೆ ಅಳಿಯಂದಿರು ಈ ಅಸ್ತ್ರವನ್ನು ಹಿರಿದಾಗಲೆಲ್ಲಾ ಆ್ಯಟಂಬಾಂಬಿನ ಬಾಯಿಗೆ ಸಿಕ್ಕಷ್ಟು ಅಂಜಿಕೆ ಬರುತ್ತಿತ್ತು! 'ಒಳ್ಳೇದು ಮನೆಯಲ್ಲೇ ಇರಲಿ ನಮ್ಮ ಹುಡಿಗೆ' ಎಂದು ಬಿಟ್ಟರೆ ಈ ಅಳಿಯಂದಿರು ಮುಂದೇನು ಮಾಡುತ್ತಾರೆ? ಎಂದು ನಾನು ಎಷ್ಟು ಕೇಳಿದರೂ 'ಮೂರ್ಖಾ' ನಿನಗೆ ಲೌಕಿಕದ ಕಾಳಜಿ ಏನು?, ಎಂದು ನನ್ನನ್ನು ಬಾಯ ಕಟ್ಟಬಿಡುತ್ತಿದ್ದರು. ಈ 'ಲೌಕಿಕ'ದ ಅರ್ಥವೇ ನನಗಾಗುತ್ತಿರಲಿಲ್ಲ.

ನಮ್ಮ ಅಳಿಯಂದಿರ ವಯಸ್ಸು ಒಂದು ಹೇಳಬೇಕಲ್ಲವೆ? ನಮ್ಮ ಸಾವಿತ್ರಿಗೆ ವಯಸ್ಸು ಹದಿನೈದು, ಅಳಿಯಂದಿರ ವಯಸ್ಸು ಅವಳ ಮೂರ‍್ರು ಪಟ್ಟು ಮೇಲೆ ನಾಲ್ಕೈದೇ ವರುಷಗಳಾಗಿರಬೇಕು. ಜಹಗೀರದಾರರೆಂಬುದೇ ಅವರ ದೊಡ್ಡ ಜಂಬ! ಇದೊಂದರ ಹೊರತು ಇನ್ನೇನೂ ಇಲ್ಲ. ನಮ್ಮ ಸಾವಿತ್ರಿ ಒಂದು ಇಂಗ್ಲಿಷ್ ಒಗಟ ಹಾಕಿದಾಗ ಯಜಮಾನರು ಗಾಬರಿಗೊಂಡು ಅದರರ್ಥ ತಿಳಿಯದೆ ಸಾವಿತ್ರಿಯ ಮುಖ ನೋಡುತ್ತಿರುವಾಗ ಸಾವಿತ್ರಿ ನನ್ನ ಕಡೆಗೆ ನೋಡಿ ನಕ್ಕುಬಿಟ್ಟಿದ್ದಳು. ಆ ಇಂಗ್ಲೀಷ್ ಒಗಟ ರಚಿಸಿದ್ದವನು ನಾನೇ.

ಅಂತೂ ಅಳಿಯಂದಿರು ಸಾಯಂಕಾಲದ ಗಾಡಿಗೆ ನೀರುತುಂಬುವ ಹಬ್ಬಕ್ಕೆ ಬರುವದೆಂದು ನಿಶ್ಚಿತವಾಯಿತು. ನಮ್ಮ ಹಳ್ಳಿ ರೇಲ್ವೆ ನಿಲ್ದಾಣದಿಂದ ಹತ್ತು ಮೈಲು; ಹಾದಿಯಲ್ಲಿ ಒಂದು ಹಳ್ಳ ಬೇರೆ ದಾಟಬೇಕು. ಅಳಿಯಂದಿರು ಸರಿಯಾಗಿ ಸಂಜೆಯ ಗಾಡಿಗೆ ಬಂದರು, ಬೀಗ ಮಂಡಳಿ ಸಹಿತವಾಗಿ. ಅಳಿಯಂದಿರಿಗಾಗಿ ಕುದುರೆ ಸಿದವಾಗಿತ್ತು. ಬೀಗರಿಗೆ ಎತ್ತಿನ ಚಕ್ಕಡಿ. ನಿಬ್ಬಣ ಹೊರಟಿತು. ಕರ್ಮ-ಧರ್ಮ ಸಂಯೋಗದಿಂದ ದೊಡ್ಡ ಮಳೆ ಹೊಡೆದು ಬಿಡಬೇಕೆ? ಹಳ್ಳ-ಬಂದು ಬಿಟ್ಟಿತ್ತು. ಚಕ್ಕಡಿ ಅರ್ಧಮೈಲು ಹಿಂದೆ. ರಾಯರ ತಟ್ಟು ಅರ್ಧಮೈಲು ಮುಂದೆ. ನಾನೂ ವಾಲಿಕಾರ ನಡುವೆ. ಮಳೆ ಧೋ ಧೋ ಎಂದು ಹೊಡೆಯಿತು. ಪಾಪ! ಅಳಿಯ ದೇವರ ಹತ್ತಿರ ಒಂದು ಚತ್ತರಗಿಯೂ ಇದ್ದಿರಲಿಲ್ಲ. ನಾನೂ ವಾಲಿಕಾರನೂ ಅಳಿಯಂದಿರ ಭದ್ರತೆಗೆಂದು ಓಡಿದೆವು. ರಾಯರು ಲಾಗಹೊಡೆದು ಹೇಗೊ ಎದು ನಿಂತು ಅರಿವೆ ಕೊಡವಿಕೊಳ್ಳುತ್ತಿದ್ದರು. 'ಅಯ್ಯೋ ಪಾಪ, ಕುದುರೆ ಕೆಡವಿಬಿಟ್ಟತೇನು? ಅಳಿಯದೇವರನ್ನು ಕೆಡುವುದಕ್ಕೆ ತಿಳಿಯಬಾರದೆ ಅದಕ್ಕೆ?' ಎಂದು ಮುಮ್ಮಲ ಮರುಗಿ ವಾಲೀಕಾರನಿಗೂ ನಾಲ್ಕು ಬೈದೆ. ಅಳಿಯಂದಿರು ಸುಮ್ಮನೆ ಇದ್ದರು. ತಾವೂ ನಮ್ಮೊಡನೆ ನಡೆಯುತ್ತಲೆ ಬರುವುದಾಗಿ ಹೇಳಿದರು. ಹಳ್ಳ ದಾಟುವಾಗ ದೇವರ ಕಾಲೊಳಗಿನ ಒಂದು ಮೊಚ್ಚೆ ಕೊಸರಿಕೊಂಡು ಹೋಗಿ ಬಿಡಬೇಕೆ? ದೇವರು ಕೆಟ್ಟ ಮುಖಮಾಡಿ ಉಳಿದೊಂದು ಮೊಚ್ಚೆಯನ್ನು ಒಗೆಯಲು ಹೋದರು. 'ಛೆ, ಛೆ, ಬರಿಗಾಲಿನಿಂದ ಹೋಗುವುದು ಅಗೌರವ. ನಾಳೆ ನಮ್ಮೂರ ಸಮಗಾರನಿಗೆ ಹೇಳಿ ಮತ್ತೊಂದು ಮೊಚ್ಚೆ ಮಾಡಿಸೋಣ. ಅದು ಇರಲಿ' ಎಂದೆ. ಅಳಿಯಂದಿರು ಪುಕ್ಕಟೆಯಲ್ಲೇ ಇನ್ನೊಂದು ಮೊಚ್ಚೆ ಬರುತ್ತದಲ್ಲ ಎಂದು ಹಿಗ್ಗಿ ಅದನ್ನು ಕುದುರೆಯ ಮೇಲೆ ಹಾಕಿದ ಖೋಗಿಲದಲ್ಲಿ ತುರುಕಿದರು.

ಮರುದಿನ ಮೊದಲೇ ನಿಶ್ಚಿತಪಡಿಸಿದಂತೆ ನಮ್ಮೂರ ಪೇಟೆಯೊಳಗೆ ಅಳಿಯಂದಿರ ಮೆರವಣಿಗೆ ಹೊರಟಿತು. ನಮ್ಮಪ್ಪನಿಗೆ ಇದೊಂದು ದೊಡ್ಡ ಗೌರವದ ರಕ್ಷೆ ಎಂದು ಅಭಿಪ್ರಾಯವಾಗಿದ್ದಿರಬೇಕು. ನಾಲ್ಕು ಎತ್ತಿನ ಬೋಳ ಚಕ್ಕಡಿಯಲ್ಲಿ ಮೆರವಣಿಗೆ ಊದುತ್ತ ಬಾರಿಸುತ್ತ ಹೊರಟಿತು. (ಅಳಿಯಂದಿರ ತೋಳಗಳಾವೂ ಬಂದಿರಲಿಲ್ಲವೆಂದು ನನಗೂ ಸಮಾಧಾನವಾಯಿತು.) ಹಾದಿಯೊಳಗೆ ಹೆಜ್ಜೆ ಹೆಜ್ಜೆಗೆ ಮೊದಲೆ ಗೊತ್ತುಪಡಿಸಿದ್ದಂತೆ ಒಬ್ಬೊಬ್ಬರಾಗಿಯೆ ಬಂದು 'ಓಹೋ ಅಳಿಯಂದಿರೇನು? ಬಹಳ ಸಂತೋಷ! ಪಾಪ ಇನ್ನೂ ಎಷ್ಟು ಚಿಕ್ಕವರು! ನಿಮ್ಮ ಸಾವಿತ್ರಿ ಪುಣ್ಯವಂತೆ! ಅಳಿಯದೇವರು ಬಹಳ ಕಲಿತವರೆಂದು ಕೇಳುತ್ತೇವೆ. ವಿಲಾಯತಿಗೇನಾದರೂ ಹೋಗಿಬಂದಿದ್ದಾರೆಯೆ?' ಎಂದೆಲ್ಲಾ ಪ್ರಶ್ನೆ

ನೋಡುತ್ತಿದ್ದರು. ನಾನು ಬೀದಿಯಲ್ಲೆಲ್ಲಾ ಎಲ್ಲರಿಗೂ ರಾಯರ ಪರಿಚಯ ಮಾಡಿಕೊಡುತ್ತಿದ್ದೆ.

ಮರುದಿನವೇ ದುರ್ದೈವಕ್ಕೆ ಸಾವಿತ್ರಿ ಒಳಗಿರಬಾರದೆ? (ಇದೂ ನಿಶ್ಚಿತಪಡಿಸಿದ್ದಂತೆಯೆ ಎನ್ನಬೇಡಿರಿ ಮತ್ತೆ!) ಆ ದಿನ ರಾತ್ರಿ ರಾಯರು ಒಳಗಿನ ಕೋಣೆಯಲ್ಲೇ ಮಲಗಬೇಕಾಯಿತು. ನಾನು ನಡುರಾತ್ರಿಯಲ್ಲಿ ಎದ್ದಾಗ ನೋಡುತ್ತೇನೆ. ರಾಯರು ಎದ್ದು ಕೂತಿದ್ದಾರೆ, ಒಂದೊಂದೇ ಕಡ್ಡಿ ಕೊರೆಯುವುದು, ಒಮ್ಮೆ ತಗಣೆ ಒರೆಯುವುದು, ಇನ್ನೊಮ್ಮೆ ಪಳಕ್ಕನೆ ಸುಳಿದು ಹೋಗುವ ಇಲಿಯ ಮೇಲೆ ಕೈ ಮಾಡುವುದು. ಮತ್ತೆ ಅಲುಗಾಡದಂತೆ ಮುಸುಕೆಳೆಯುವುದು. ಮತ್ತೆ ಕಡ್ಡಿ ಕೊರೆಯುವುದು. 'ಛೆ. ಇದೇನಿದು. ಅಳಿಯಂದಿರ ಕೋಣೆಯಲ್ಲಿ ಒಂದು ದೀಪ ಕೂಡ ಇಟ್ಟಿರಬಾರದೆ?... ಪಾಪ, ದೀಪ ಇಟ್ಟಿದ್ದಾರೆ, ಕಂದೀಲಿನಲ್ಲಿ ಎಣ್ಣೆಯೆ ಇಲ್ಲ. ಯಾರಾದರೂ ನೋಡಬಾರದೆ? ಕೋಣೆಯಲ್ಲಿ ಒಂದು ಇಲಿ ಬಲೆಯಾದರೂ ಇಡಬಾರದೆ?...' ಎಂದೆಲ್ಲಾ ನಾನು ಜಬರಿಸಿದೆ. (ಯಾರನ್ನೊ ನನಗೇ ಗೊತ್ತಿಲ್ಲ.)

ಸಾವಿತ್ರಿ ಒಳಗಿಲ್ಲವೆಂಬ ನೆನವಿಂದ ರಾಯರ ಅಳಿಯತನವ ವೈವಿಧ್ಯಕ್ಕೆಂದು ಅಂದು ರಾತ್ರಿ ಅವರ ತಲೆದಿಂಬದೆಸೆಗೆ ಬರಿ ಹರಕು ಮುರುಕು ಕರ್ಚಿಕಾಯಿ ಚಕ್ಕುಲಿಗಳನ್ನು ಬಡಿಸಿಟ್ಟುದರ ವಾಸನೆಗೆ (ರಾಯರು ಇವನ್ನು ಸಂಪೂರ್ಣ ಸೇವಿಸಿರಲಿಲ್ಲವೆಂಬುದನ್ನು ಲಕ್ಷಿಸಬೇಕು.) ಇಲಿಗಳು ಅಡುಗೆಯ ಮನೆಯಿಂದ ಅವರ ಅಡಕಲು ಕೋಣೆಗೇ ಸುರಂಗ ಮಾರ್ಗ ಕೊರೆದು ದಂಡೆತ್ತಿ ಬಂದುವು. ರಾಯರು ಹೌಹಾರಿಹೋದರು.

ಇನ್ನು ಮರುದಿನವೇ ಅಳಿಯದೇವರು ತೆರಳುವವರು. ಅದರ ಮುನ್ನಾದಿನ ಸಂಜೆಗೆ ಮಾನಪತ್ರ ಸಮಾರಂಭ! ಊರ ಸರಪಂಚರಿಂದ. (ಇದು ನಮ್ಮಪ್ಪನಿಗೆ ಗೊತ್ತಿರಲಿಲ್ಲ). ರಾಯರಿಗೆ ಹುರಿದುಂಬಿಸಿ ಬಂಗಾರದ ಸಲಖಡೆ, ಪೋಚೆ, ವಜ್ರದ ಉಂಗುರ ಮೊದಲಾದ ಅವರು ತಂದ ತಮ್ಮ ಎಲ್ಲಾ ಅಲಂಕಾರಗಳಿಂದ ಸಾಲಂಕೃತರಾಗಿ ಬರಬೇಕು, ಮಾನಪತ್ರವೆಂದರೆ ಸುಮ್ಮನೆ ಹೋಗುವುದಕ್ಕಾಗುವುದೆ?- ಎಂದುದಕ್ಕೆ ರಾಯರೂ ಬೀಗಿದರು. ರಾತ್ರಿ ಹನ್ನೊಂದು ಗಂಟೆಯ ಸುಮಾರಿಗೆ ಊರ ಅಗಸೆಯ ಬಳಿಯಲ್ಲಿ ಪ್ರತ್ಯೇಕವಾಗಿ ಏರ್ಪಟ್ಟದ್ದ ಭವ್ಯ ವೇದಿಕೆಯ ಮೇಲೆ ಸಮಾರಂಭ ಜರುಗಲಿದ್ದಿತು. ಬಹಳ ಜನ ಬಂದಿಲ್ಲವೆಂದು ರಾಯರಿಗೆ ಸ್ವಲ್ಪ ಅಸಮಾಧಾನವಾಯಿತು. ಆಮಂತ್ರಣ ಕಳಿಸಿದ್ದರೂ ಯಾಕೆ ಬಂದಿಲ್ಲವೊ ಎಂದು ನಾನೂ ಒದರಾಡಿದೆ. 'ಕೊಲಿಗದಕನಂತೆ ಎಗ್ಗನಾಗಿ ಕಾಣುವ ನಮ್ಮ ಸರಪಂಚನನ್ನು ನೋಡಿ ನೀವು ಅಸಹ್ಯಪಟ್ಟುಕೊಳ್ಳಬಹುದು. ಆದರೆ ಈ ಊರಿಗೆ ನಮ್ಮ ಪಂಚ ಪಂಪಣ್ಣ ಎತ್ತಿದ ಕೈ' ಎಂದು ಪಂಚ ಪಂಪಣ್ಣನ ಪರಿಚಯ ಮಾಡಿಕೊಟ್ಟೆ. ಆ ಮೇಲೆ ಇಂತಿರುವ ಮಾನಪತ್ರ ಓದಿದೆ:

'ಮಾವನ ಮನೆಯ ಹೆಗ್ಗಣದಂತಿರುವ ದಶಮುಗ್ರಹ ಜಾಮಾತಮಾತ್ಯರ ಸನ್ನಿಧಿಗೆ,

ನಿಮ್ಮ ಅಪಾರ ಮಹಿಮೆಯನ್ನು, ನಿಮ್ಮ ಕಪಿಗೈ ಔದಾರ್ಯವನ್ನು ನೋಡಿ ನಮಗೆ ಹಿಡಿಸಲಾರದಷ್ಟು ಹಿಗ್ಗಾಗಿದೆ. ಯಾವ ಪ್ರಕಾರ ಗಝುನಿ ಮಹಮ್ಮದನು ಸೋಮನಾಥ ದೇವಾಲಯವನ್ನು ೨೭ ಸಲ ಸಂದರ್ಶಿಸಿದನೊ ಅದೇ ತರಹ ನೀವು ನಮ್ಮ ಊರನ್ನು ಸಂದರ್ಶಿಸಿದ್ದೀರಿ. ನಿಮ್ಮ ಈ ದೊಡ್ಡಸ್ತಿಕೆಗೆ ಸಲ್ಲುವ ಕಾಣಿಕೆಯೆಂದು ಈ ಊರ ಪಂಚರೆಲ್ಲಾ ಸೇರಿ ಸಲ್ಲಿಸುವ ಕಾಣಿಕೆಯನ್ನು ಅಲ್ಲಗಳೆಯದೆ ಸ್ವೀಕರಿಸಬೇಕು.

...... ನಮ್ಮೂರ ಸಮಗಾರನ ಸಪ್ರೇಮ ಕಾಣಿಕೆಯೆಂದೂ ನಿಮ್ಮ ಬಗ್ಗೆ ನಮ್ಮಲ್ಲಿರುವ ಗೌರವಾದರಗಳ ಪ್ರತೀಕವೆಂದೂ ನಾವು ಅರ್ಪಿಸಲಿ

ರುವ ಈ ಒಂಟಿ ನೊಚ್ಕೆಯನ್ನು ನಿಮ್ಮ ಬಳಿ ಉಳಿದಿರುವ ಒಂಟಿ ನೊಚ್ಚಿಗೆ ಜೋಡು ಮಾಡಿ ಸ್ವೀಕರಿಸಬೇಕು.

ಇಂತು ತಮ್ಮ ಕೃಪಾಭಿಲಾಷಿ
ಹೊನ್ನೂರಿನ ಸರಪಂಚರು.'

ಮಾನಪತ್ರ ಮುಗಿಯುವುದೊಂದೇ ತಡ ಐವರೂ ಮುತ್ಸಾಳರು ಒನಕೆಗಳನ್ನೆತ್ತಿ ನಿಂತರು. ರಾಯರು ಚಿಟ್ಟನೆ ಚೀರಿದರು. ನನ್ನನ್ನು ತಬ್ಬಿಕೊಂಡರು. 'ಸುಮ್ಮನೆ ಒಳ್ಳೇ ಮಾತಿನಿಂದ ನಿಮ್ಮ ಮೈಮೇಲಿನ ಬಂಗಾರದ ಸಾಮಾನುಗಳನ್ನೆಲ್ಲಾ ಬಿಚ್ಚಿಡಿರಿ'-ಒನಿಕೆಯ Point ಗೆ ಅಳಿಯಂದಿರು ಎಲ್ಲಾ ಸಾಮಾನುಗಳನ್ನು ಬಿಚ್ಚಿಟ್ಟರು. 'ಇನ್ನು ಮೇಲೆ ನಿಮ ಮಾವನನ್ನು ಕಾಡಿಬೇಡುವದಿಲ್ಲವೆಂದು ಆಣೆ ಮಾಡಿರಿ' ಎಂದರು. ಒನಿಕೆಯ Point ಗೆ ರಾಯರು ಆಣೆತೊಟ್ಟರು.

'ವರದಕ್ಷಿಣೆ ನೊದಲುಮಾಡಿಕೊಂಡು ಅಳಿಯತನದ ವರೆಗೆ ನೀವು ಮಾವಂದಿರ ಮೇಲೆ ಮಾಡಿದ ಸುಲಿಗೆಯನ್ನು ಪ್ರತ್ಯುತ್ತರವಿಲ್ಲದೆ ಮರಳಿ ಕೊಡುವದಾಗಿ ಆಣೆ ಮಾಡಿರಿ' ಎಂದು ಒನಿಕೆಯ Point ಗೆ ಗದ್ದರಿಸಿ ಹೇಳಿದರು. ರಾಯರು ಹೂಂಗುಟ್ಟಿ ಆಣೆ ಹೊತ್ತರು. 'ಸುಲಿಗೆ ಹೊನ್ನು-ಹಣಗಳನ್ನು ಮರಳಿ ಕೊಡುವ ವರೆಗೆ ನಿಮ್ಮ ಮೈಮೇಲಿನ ಆಭರಣಗಳನ್ನು ಅಡುವಾಗಿ ಇಡಬೇಕು' ಎಂದು ಅಡುವಿನ ಮಾತನ್ನು ಅವರಿಗೆ ಮುಟ್ಟಿಸಲು ಅದಕ್ಕೂ ಹೂಂಗುಟ್ಟಿದರು.

'ಈ ವಿಷಯವನ್ನು ಇನ್ನೊಬ್ಬರ ಮುಂದೆ ಒಡೆಯುವದಿಲ್ಲವೆಂದು ಆಣೆ ಮಾಡಿರಿ' ಎಂದರು. ಒನಿಕೆಯ Point ಗೆ ರಾಯರು ಆಣೆತೊಟ್ಟರು. ಝುರ್ರನೆ ಬೆಮತ ರಾಯರನ್ನು ಮೆಲ್ಲಗೆ ಮನೆಗೆ ಕರೆದುಕೊಂಡು ಹೋದೆ.

ರಾಯರು ಮನೆಗೆ ಬಂದ ಮೇಲೂ ಊರಿಗೆ ತೆರಳಿದ ಮೇಲೂ ತಮಗೆ ಅರ್ಪಿತವಾದ ಮಾನಪತ್ರದ ವಿಷಯವಾಗಿ ಯಾರ ಮುಂದೆಯೂ ಪಿಟ್ಕೆಂದು ತುಟಿ ಎರಡು ಮಾಡಿದಂತಿಲ್ಲ. ರಾಯರು ಅಳಿಯತನ ಮುಗಿಸಿಕೊಂಡು ಊರಿಗೆ ತೆರಳುವಾಗ ತಮ್ಮ ವರದಕ್ಷಿಣೆ ನೊದಲ್ಗೊಂಡು ಎಲ್ಲ ಕಾಣಿಕೆಯನ್ನೂ ಮರಳಿಕೊಟ್ಟ ಅವರ ಔದಾರ್ಯ, ಹೃದಯಪರಿವರ್ತನೆಯನ್ನು ಕುರಿತು ನಮ್ಮಪ್ಪ ಧರ್ಮರಾಯರು ಇನ್ನೂ ಕೊಂಡುಕೊನೆದಾಡುತ್ತಿದ್ದಾರೆ. (ನಾವೂ ಅಷ್ಟೇ ಔದಾರ್ಯದಿಂದ ಅಡುವಾಗಿಟ್ಟುಕೊಂಡಿದ್ದ ಅಳಿಯಂದಿರ ಆಭರಣಗಳನ್ನು ಮರಳಿ ಕೊಟ್ಟುದು ನಮ್ಮಪ್ಪನಿಗೇನು ಗೊತ್ತು!)

ಮುಂದೇನಾಯಿತು? ತೆಗೆದುಕೊಂಡು ನಮಗೇನು ಮಾಡುವುದು? ಆದರೆ ಇಂತಹ ಪ್ರಯೋಗವನ್ನು ಮಾಡಬೇಕೆನ್ನುವ ಧಾಡಸಿಗಳು ನಮ್ಮ ಸಲಹೆ ಸೂಚನೆಗಳನ್ನು ಪಡೆಯದೆ ಒಮ್ಮೆಲೆ ದುಡುಕಬಾರದೆಂದು ನಮ್ಮ ನಮ್ರ ವಿನಂತಿ.

ಶ್ರೀಮನ್ಮಧ್ವಾಚಾರ್ಯರ ಮುಖ್ಯ ಸಂಸ್ಥಾನಾಧೀಶ್ವರರ ಸಮಾಗಮ



ಪ್ರಹ್ಲಾದಾಂಶಸಂಭೂತ ಶ್ರೀಮದ್ರಾಘವೇಂದ್ರಸ್ವಾಮಿ ಮಠದ ಮತ್ತು ಶ್ರೀ ವ್ಯಾಸರಾಯಮಠದ ದಿಗ್ವಿಜಯವಿದ್ಯಾಸಿಂಹಾಸನಾರೂಢ ಶ್ರೀ ಸುಯಮೀಂದ್ರ ತೀರ್ಥರು ಮತ್ತು ಕರ್ನಾಟಕ ರತ್ನಸಿಂಹಾಸನಾರೂಢ ಶ್ರೀ ವಿದ್ಯಾಪ್ರಸನ್ನ ತೀರ್ಥರು ಚಳ್ಳಕೆರೆಯಲ್ಲಿ ದಿನಾಂಕ ೨೪-೬-೫೧ನೇ ದಿನ ಸಮಾವೇಶವಾದಾಗ.



ಶ್ರೀ ವಿದ್ಯಾಪ್ರಸನ್ನ ತೀರ್ಥರು ಮತ್ತು ಶ್ರೀ ಸುಯಮೀಂದ್ರ ತೀರ್ಥರು ಮೆರವಣಿಗೆಯಲ್ಲಿ ಬರುತ್ತಿರುವುದು.

ಶ್ರೀ. ‘ಅಚ್ಯುತ’
ಅವರಿಂದ

ಚಲಚ್ಚಿತ್ರ ಸಿಂಹಾವಲೋಕನ

೧೯೫೧ ರಲ್ಲಿ ಭಾರತೀಯ ಚಲಚ್ಚಿತ್ರ ನಿರ್ಮಾಪಕರು ಸಾಧಿಸಿದ್ದೇನು ? ಬಿಟ್ಟಿದ್ದೇನು ?

ಹಿಂದಿ ಚಲಚಿತ್ರೋದ್ಯಮವು ಕಳೆದ ಐದಾರು ವರ್ಷಗಳಿಂದ ರಭಸದಿಂದ ಸಾಗಿದ್ದರೂ ಪ್ರಗತಿ ಮಾತ್ರ ಕುಂಠಿತವಾಗಿರುವದು. ಈ ವರ್ಷವೂ ಚಿತ್ರಗಳಲ್ಲಿ ವಿಶೇಷ ಪ್ರಗತಿ ಕಂಡುಬರುವದಿಲ್ಲ. ಚಿತ್ರ ತಯಾರಿಕೆಯ ವೆಚ್ಚದಲ್ಲಿ ಹೆಚ್ಚಳವಾದ್ದರಿಂದ ಹೇಗಾದರೂ ರೊಕ್ಕವಾದರೆ ಸಾಕೆಂದು ಮನೋರಂಜನೆಯ ಚಿತ್ರಗಳಲ್ಲಿ ಮಾತ್ರ ಚಿತ್ರ ನಿರ್ಮಾಪಕರು ಹಣತೊಡಗಿಸುತ್ತಿರುವರು. ಬಾಂಬೆ ಟಾಕೀಜ, ಹಿಂದುಸ್ತಾನ ಚಿತ್ರ, ಫಿಲ್ಮಿಸ್ತಾನ, ಫಿಲ್ಮಕಾರ, ಮೋತಾವಾನೆ ಫಿಲ್ಮ್ಸ, ಮಿನರ್ವಾ ಮುವಿಟೋನ, ನ್ಯೂಥಿಯೇಟರ್ಸ ಈ ಕೆಲವೊಂದು ಸಂಸ್ಥೆಗಳು ತಮ್ಮ ಪರಂಪರೆಯನ್ನು ಕಾಯ್ದುಕೊಂಡು ಉತ್ತಮ ಚಿತ್ರಗಳನ್ನು ತಯಾರಿಸುವ ಪ್ರಯತ್ನವನ್ನು ಮಾಡುತ್ತಿರುವವು.

ಈ ವರ್ಷದಲ್ಲಿ ಸುಮಾರು ೨೦೦ ಚಿತ್ರ ನಿರ್ಮಾಣ ಸಂಸ್ಥೆಗಳು ೨೫೦ ಕ್ಕಿಂತ ಸ್ವಲ್ಪ ಹೆಚ್ಚು ಹಿಂದೀ ಚಿತ್ರಗಳನ್ನು ತಯಾರಿಸಿರುವವು. ಅವುಗಳಲ್ಲಿ ಪೌರಾಣಿಕ ಚಿತ್ರಗಳ ಸಂಖ್ಯೆ ಮತ್ತೆ ಹೆಚ್ಚಾಗಿರುವದು ಕಂಡುಬರುತ್ತದೆ.

ಜಯ ಮಹಾಕಾಳಿ, ವೀರ ಭೀಮಸೇನ, ಲವ-ಕುಶ, ಗೋರಖನಾಥ, ರಾಮವಿವಾಹ, ಶ್ರೀ ವಿಷ್ಣು ಭಗವಾನ್, ಶ್ರೀ ಗಣೇಶ ಮಹಿಮಾ, ಜಯ ಶಂಕರ, ಜಯ ಮಹಾಲಕ್ಷ್ಮಿ, ನಂದಕಿಶೋರ, ಜನ್ಮಾಷ್ಟಮಿ, ರಾಮಜನ್ಮ, ದಶಾವತಾರ ಹೀಗೆ ಹಲವಾರು ಪೌರಾಣಿಕ ಚಿತ್ರಗಳು ತಯಾರಿಸಲ್ಪಟ್ಟದ್ದು ಕೆಲಮಟ್ಟಿಗೆ ಹಣವನ್ನು ಗಳಿಸಿರುವವು. ಇತ್ತೀಚೆಗೆ ಪ್ರದರ್ಶನಕ್ಕೆ ಬಂದ ರಾಮಜನ್ಮದಲ್ಲಿ ರಾಮಾಯಣದ ಮುಖ್ಯಾಂಶಗಳನ್ನು ಸ್ವಲ್ಪದರಲ್ಲಿ ತೋರಿಸುವ ಪ್ರಯತ್ನ ಮಾಡಲಾಗಿದ್ದು ದಶಾವತಾರದಲ್ಲಿ ದಿಗ್ದರ್ಶಕ ಜಯಂತ ದೇಸಾಯಿಯವರು ಹೊಸ ಪ್ರಯೋಗವನ್ನು ಮಾಡಿದ್ದಾರೆ. ಮಹಾತ್ಮಾ ಗಾಂಧಿಯವರನ್ನು ಅವತಾರಪುರುಷರೆಂದು ಸೂಚಿಸಿರುವದೇ ಈ ಹೊಸ ಪ್ರಯೋಗವಾಗಿರುವದು. ಈ ಪೌರಾಣಿಕ ಚಿತ್ರಗಳಲ್ಲಿ ಕೆಲವು ಉತ್ತಮ ಅಂಶಗಳಿಂದ ಕೂಡಿವೆ. ತ್ರಿಲೋಕ ಕಪೂರ—ನಿರೂಪಾರಾಯ ನಟಿಸಿದ ಪೌರಾಣಿಕ ಚಿತ್ರಗಳೇ ಅಧಿಕವಾಗಿದ್ದು ಕಂಡ ಮುಖವನ್ನೇ ಮತ್ತೆ ಕಾಣುವ ದುರ್ಭಾಗ್ಯ ಪ್ರೇಕ್ಷಕನದಾಗುವದು.

ಇನ್ನು ಸಾಮಾಜಿಕ ಚಿತ್ರಗಳಲ್ಲಿ ವಿಶೇಷ ಪ್ರಗತಿ ಈ ವರುಷ ಕಂಡುಬರುವದಿಲ್ಲ. ಕಾಲೇಬಾದಲ, ಆರಾಂ, ಢೋಲಕ, ನಿರಾಲಾ, ಪ್ಯಾರಕಿಮಂಜಿಲ್, ಏಕ ಥಿ ಲಡಕಿ, ಬಡಿ ದೀದಿ, ಛೋಟೀ ಭಾಬಿ ಹೀಗೆ ಹಲವಾರು ಚಿತ್ರಗಳು ಛಾಯಾಗ್ರಹಣ, ಅಭಿನಯಗಳಿಂದ ಉತ್ತಮವಾದ ಚಿತ್ರಗಳಾಗಿದ್ದರೂ ಕಥಾವಸ್ತುವಿನ ಕೊರತೆಯಿಂದ ಸಪ್ಪೆಯಾಗಿ ಪ್ರೇಕ್ಷಕನ ಸಹಾನುಭೂತಿಯನ್ನು ಕಳೆದುಕೊಳ್ಳುವವು. ವಿದೇಶಿ ಚಿತ್ರಗಳಿಂದ ಕಥೆಯನ್ನು ತೆಗೆದುಕೊಳ್ಳುವದೂ ಕಂಡುಬರುತ್ತಿರುವದು. ನಿರ್ಮಾಪಕರು ಕಥಾವಸ್ತುವಿಗೆ ವಿಶೇಷ ಮಹತ್ವ ಕೊಡಬೇಕೆಂದು ಈ ಉದ್ದಿಮೆಯಲ್ಲಿ ನುರಿತವರನೇಕರು ಹೇಳುತ್ತ ಬಂದಿದ್ದರೂ ಕೇವಲ ಹಣದಾಸೆಯುಳ್ಳ ನಿರ್ಮಾಪಕರು ಈ ಸಲಹೆಯನ್ನು ಗಾಳಿಗೆ ತೂರಿರುವರು.

ಈ ವರುಷದಲ್ಲಿ ತಯಾರಾದ ಬಾಂಬೆ ಟಾಕೀಜದವರ ಮಹಲ, ಮಶಾಲ, ಗೋಪಾಲ ಪಿಕ್ಚರ್ಸದವರ ಅಫಸಾನಾ, ಮಿನರ್ವಾ ಮುವಿಟೋನದವರ ಶೀಶ ಮಹಲ, ಫಿಲ್ಮಕಾರರವರ ದೀದರ ನ್ಯೂಥಿಯೇಟರ್ಸದವರ ಛೋಟಾ ಭಾಯಿ ಹಿಂದುಸ್ಥಾನ ಚಿತ್ರದವರ ಕಾಲಿಘಟಾ ಕೆಲ ಉತ್ತಮ ಚಿತ್ರಗಳಾಗಿರುವವು.

ಪುನರ್ಜನ್ಮ ತತ್ವವಿವೇಚನೆಯ ಚಿತ್ರವಾದ ಮಹಲದಲ್ಲಿಯ ಸಂಭಾಷಣೆ ಉಚ್ಚಮಟ್ಟದ್ದಾಗಿದೆ. ಮಧುಬಾಲಾ ಅಶೋಕ ಕುಮಾರ ಚೆನ್ನಾಗಿ ಅಭಿನಯಿಸಿದ್ದಾರೆ. ನಾರೀ ಜೀವನವನ್ನು ರೂಪಿಸಿರುವ ಮಶಾಲ ಚಿತ್ರಪಟದಲ್ಲಿ ಸುನಾಲಿನಿ ದೇವಿ ಅಶೋಕಕುಮಾರ ಅಭಿನಯಿಸಿದ್ದಾರೆ. ಪ್ರೇಮಕಥೆಗೆ ಸಂಬಂಧಿಸಿದ ಕಥಾವಸ್ತು ದೀದರ ಚಿತ್ರದ್ದು. ನಿಮ್ಮಿ ಮತ್ತು ದಿಲೀಪಕುಮಾರರ ಅಭಿನಯವು ನರ್ಗಿಸ ಹಾಗೂ ಅಶೋಕಕುಮಾರರಿಗಿಂತ ಹೆಚ್ಚು ಚನ್ನಾಗಿದ್ದು ನಿತಿನಬೋಸರ ದಿಗ್ದರ್ಶನ ಶ್ರೇಷ್ಠತರಗತಿಯದಿರುವದು. ಛೋಟಾ ಭಾಯಿ ಶರಚ್ಚಂದ್ರರ ನೀಳ್ಗತೆಯೊಂದನ್ನು ಆಧರಿಸಿ ಚಿತ್ರಿತವಾಗಿದೆ.

ಮೋತಿವಾನೆ ಲಿ. ದವರ ‘ಆಂದೋಲನ’ ಭಾರತೀಯ ಸ್ವಾತಂತ್ರ್ಯ ಹೋರಾಟದ ಭವ್ಯ ನಿರೂಪಣೆಯಿಂದ ಕೂಡಿದ್ದು ಇದೀಗ ಪ್ರದರ್ಶನಕ್ಕೆ ಬಂದಿರುವದು. ಕಲಕತ್ತೆಯ ಫಿಲ್ಮ ಟ್ರಸ್ಟ ಆಫ್ ಇಂಡಿಯಾದವರ ‘೧೯೪೨’ ಚಿತ್ರವಾದರೂ ಇದೇ ಬಗೆಯದು. ಆಂದೋಲನ ಚಿತ್ರದ ದಿಗ್ದರ್ಶಕರು ಫಣಿ ಮುಜುಮದಾರ ಅವರು. ಜೆಮಿನಿಯವರ ‘ಸಂಸಾರ’ ಇನ್ನೂ ಪ್ರದರ್ಶನಕ್ಕೆ ಬರಬೇಕಾದ ಚಿತ್ರ. ವನಜಾ, ಸ್ವರಾಜ ಎಂಬ ಹೊಸ ತಾರೆಯರನ್ನು ಬೆಳಕಿಗೆ ತಂದ ಈ ಚಿತ್ರ ಉತ್ತಮವಾದುದೆಂದು ತಿಳಿದಿದೆ. ಈ ಚಿತ್ರದ ಸಂಭಾಷಣೆ ಹಾಗೂ ಗೀತಗಳನ್ನು ಮುಂಬಯಿಯ ಸುಪ್ರಸಿದ್ಧ ಬರೆಹಗಾರರಾದ ಪಂಡಿತ ಇಂದ್ರರು ಬರೆದಿರುವರು. ಮದ್ರಾಸದ ಎ. ವಿ. ಎಂ. ದವರ ‘ಬಹಾರ’ ಎಂಬ ಹಿಂದೀ ಚಿತ್ರವು ಬೇಗನೆ ಪ್ರದರ್ಶನಕ್ಕೆ ಬರಲಿದೆ. ಜೀವನದ ರೀತಿ ನೀತಿಗಳನ್ನು ತೋರ್ಪಡಿಸುವ ಚಿತ್ರವಿದಾಗಿದೆಂದು ವರದಿ. ಎಸ್. ಕೆ. ಫಿಲ್ಮ್ಸದವರ ‘ನಾಝು’ ಚಿತ್ರದ ತಯಾರಿಕೆ ಭರದಿಂದ

ಸಾಗಿದ್ದು ಕೆಲವು ಹೊರ ದೃಶ್ಯಗಳಿಗಾಗಿ ದಿಗ್ದರ್ಶಕ ಓರ್ಝಾರು ತಮ್ಮ ತಾರಾಗಣದೊಂದಿಗೆ ಲಂಡನ—ಕಾಯರೊ ಪ್ರಯಾಣ ಮಾಡಿಕೊಂಡು ಬಂದಿರುವರು. ಪಾಲ್ ಝುಲ್‌ರು ರವೀಂದ್ರರ ಸುಪ್ರಸಿದ್ಧ ಕಾದಂಬರಿಯೊಂದರ ಆಧಾರದಿಂದ 'ಝುಲಾ ಝುಲ' ಎಂಬ ಚಿತ್ರ ತಯಾರಿಕೆಯಲ್ಲಿ ತೊಡಗಿರುವರು. ರವೀಂದ್ರರ ಮತ್ತೊಂದು ಕಾದಂಬರಿ 'ಫುಲವಾರಿ' ಚಿತ್ರವಾಗಿ ಬಂದಿದ್ದು ಪ್ರಣತಿ ಘೋಷ ಎಂಬ ಹೊಸ ತಾರೆ ಅದರಲ್ಲಿ ಅಭಿನಯಿಸಿದ್ದಾಳೆ.

ಬಂಕಿಮ ಚಂದ್ರರ 'ಮೃಣಾಲಿನಿ' 'ಆನಂದ ಮಠ' ಗಳು ಚಲಚ್ಚಿತ್ರಗಳಾಗಿ ಬರಲಿರುವವು.

ಸೋಹರಾಬ ಮೋದಿಯವರು ಝಾಂಸಿ ರಾಣಿಯ ಕಥಾವಸ್ತುವುಳ್ಳ ವರ್ಣಚಿತ್ರವನ್ನು ತಯಾರಿಸ ತೊಡಗಿರುವರು. ಸಲೀಮ—ಅನಾರಕಲಿಯರ ಅಮರ ಪ್ರೇಮವನ್ನು ನಿರೂಪಿಸುವ 'ಅನಾರಕಲಿ' ಚಿತ್ರವನ್ನು ಫಿಲ್ಮಕಾರ, ಫಿಲ್ಮಸ್ತಾನ ಈ ಎರಡೂ ಸಂಸ್ಥೆಗಳು ಪ್ರತ್ಯೇಕವಾಗಿ ತಯಾರಿಸತೊಡಗೀರು ವವು.

ನಮ್ಮ ಚಲಚ್ಚಿತ್ರಗಳ ಸಂಗೀತ ನೃತ್ಯ-ತಂತ್ರ ಗಳಲ್ಲಿ ಬಹಳಷ್ಟು ಪ್ರಗತಿಯಾಗಬೇಕಾಗಿರುವದು. ಸಂಗೀತವು ಮನೋರಂಜನೆಯ ಸಾಧನವಾಗಿದೆ ಯೆಂದು ೨॥ ಗಂಟೆಗಳ ಒಂದು ಚಿತ್ರದಲ್ಲಿ ೧ ಗಂಟೆಯ ವರೆಗೆ ಗೀತಗಳನ್ನು ತುಂಬಿದರೆ ಏನು ಪ್ರಯೋಜನ? ಚಲಚ್ಚಿತ್ರಗಳಲ್ಲಿ ಸಂಗೀತದ ದುರುಪಯೋಗವಾಗಿದೆಯೆಂದು ಹೇಳಿದರೆ ಅದು ಅತಿಶಯೋಕ್ತಿಯೆನಿಸಲಾರದು.

ಹಿನ್ನೆಲೆಯ ಸಂಗೀತದ ಪ್ರಭಾವ ವಿಶೇಷವಾಗ ತೊಡಗಿದೆ. ಸಂಗೀತ ಬರಲಿ-ಬರದಿರಲಿ ಎಲ್ಲ ತಾರೆಯರಿಗೂ ಹಿನ್ನೆಲೆಯ ಸಂಗೀತವನ್ನೊದಗಿಸ ಲಾಗುತ್ತಿದೆ. ಮುಖೇಶ, ಗೀತಾ ರಾಯ, ಲತಾ ಮಂಗೇಶಕರ, ಶಮಶದ ಬೇಗಂ ಈ ಹಿನ್ನೆಲೆಯ ಗಾಯಕರು ಇಂದು ಒಳ್ಳೆ ಪ್ರಸಿದ್ಧಿಗೆ ಬಂದಿರು ವರು. ಸಂಗೀತ ದಿಗ್ದರ್ಶಕರಲ್ಲಿ ಸಿ. ರಾಮ ಚಂದ್ರ, ಪಂಕಜಮಲಿಕ, ಬರಮನ್, ಭಗತ ರಾಮ, ಮುರಾರಿ, ಹುಸನಲಾಲ ಇವರ ಸಂಗೀ ತವು ಮೇಲ್ತರಗತಿಯದಿರುವದು. ನೌಶದರ ಸಂಗೀತವೂ ತಕ್ಕಮಟ್ಟಿಗಿರುವದು.

ತಾರಾಗಣದ ಆಯ್ಕೆಯ ಅವ್ಯವಸ್ಥೆ ಇನ್ನೂ ಹಾಗೆಯೇ ಇದೆ. ಅಶೋಕಕುಮಾರ, ನಲಿನಿ ಜಯವಂತರ ಜೋಡಿಯು ಈಗ ಹಲವಾರು ಚಿತ್ರಗಳಲ್ಲಿ ನಟಸಿದ್ದಲ್ಲದೆ ಇನ್ನೂ ೨೨ ಚಿತ್ರಗಳಲ್ಲಿ ನಟಸಲು ಒಪ್ಪಿಕೊಂಡಿದೆ. ಹೀಗೆ ಹಳೆಯ ತಾರೆ ಯರು ಮಾತ್ರ ಅಭಿನಯಿಸುತ್ತ ಹೋದರೆ ಹೊಸ ತಾರೆಯರಿಗೆ ಪ್ರವೇಶವೆಲ್ಲಿ ದೊರಕಬೇಕು ? ಈ ಹಿಂದೆ ಸುರಯ್ಯಾಳಿಗಿದ್ದ ಖ್ಯಾತಿ ಇದೇ ಕಾರಣ ಕ್ಕಾಗಿಯೇ ಕಡಿಮೆಯಾದುದು ಲಕ್ಷಿಸತಕ್ಕ ಮಾತಾ ಗಿದೆ. ಒಂದು ಚಿತ್ರದಲ್ಲಿ ಯಾವುದೇ ಕಾರಣ ದಿಂದ ಯಶಸ್ವಿಯಾದ ತಾರೆಯನ್ನು ತಮ್ಮ ಕಥಾ ವಸ್ತುವಿಗೆ ಯೋಗ್ಯಳಿರಲಿ, ಅಯೋಗ್ಯಳಿರಲಿ ನಟಸಲು ಕೇಳಿಕೊಳ್ಳುವರು. ನೂತನಾ ಸಮ ರ್ಥಳು 'ಹಮಾರಿ ಬೇಟಿ'ಯಲ್ಲಿ ಅಭಿನಯಿಸಿದ ಕೆಲ ದಿನಗಳಲ್ಲಿಯೇ 'ನಗೀನಾ' 'ಹಂಗನಾಮ' ಗಳಲ್ಲಿ ಅಭಿನಯಿಸಿರುವದಲ್ಲದೆ ಇನ್ನು ಹಲವಾರು ಚಿತ್ರಗಳಲ್ಲಿ ಅಭಿನಯಿಸಲು ಒಪ್ಪಿಕೊಂಡಿದ್ದಾಳೆ.

ವಾಸ್ತವ ಜೀವನದಲ್ಲಿಯ ಸಖ್ಯವು ಚಲಚ್ಚಿತ್ರ ರಂಗದಲ್ಲಿಯೂ ಇಳಿದು ಬರಬೇಕೆಂದೂ ತಮ ಗಾಗಿಯೇ ಕಥೆ ರಚಿತವಾಗಬೇಕೆಂದೂ ಕೆಲ ತಾರೆಯರ ಜೋಡಿಗಳು ಭಾವಿಸಿದ್ದಂತೆ ತೋರು ವದು. ನರ್ಗಿಸ-ರಾಜಕಪೂರ, ಮಧುಬಾಲಾ-ದಿಲೀಪಕುಮಾರ, ನಲಿನಿ ಜಯವಂತ-ಅಶೋಕ ಕುಮಾರ ಈ ಜೋಡಿಗಳು ಇತ್ತೀಚಿನ ಅನೇಕ ಚಿತ್ರಗಳಲ್ಲಿ ಕಂಡುಬರುತ್ತಿರುವವು. ನರ್ಗಿಸಳು ಅಭಿನಯಿಸಬೇಕಾದರೆ ಆ ಚಿತ್ರದಲ್ಲಿ ರಾಜಕಪೂ ರನೇ ನಾಯಕನಾಗಿರಬೇಕು. ಇದಕ್ಕಾಗಿಯೇ ಪ್ರೇಮನಾಥನು ಒಂದು ಚಿತ್ರದಲ್ಲಿ ನರ್ಗಿಸಳ ನಾಯಕನಾಗಿ ಅಭಿನಯಿಸಲು ನಿರಾಕರಿಸ ಬೇಕಾಯಿತು. ಇತ್ತೀಚೆಗೆ ನೂತನ-ನಸೀರ ಖಾನರ ಜೋಡಿಯು ಕಂಡುಬರುತ್ತಿರುವದು. ಈ ಪದ್ಧತಿಯು ಬೇಗ ಮಾಯವಾದಷ್ಟು ಚಿತ್ರ ನಿರ್ಮಾಪಕರಿಗೂ ಕ್ಷೇಮ; ಪ್ರೇಕ್ಷಕರಿಗೂ ಕ್ಷೇಮ.

ಈ ವರ್ಷ ಅನೇಕ ಹೊಸ ತಾರೆಯರು ಚಲ ಚ್ಚಿತ್ರರಂಗದಲ್ಲಿ ಕಾಲಿರಿಸಿದ್ದಾರೆ. 'ಕಾಲಿಘಟಾ' ಚಿತ್ರದಲ್ಲಿ ಬೀನಾರಾಯ, ಆಶಾ ಮಾಥುರ ಹಾಗೂ

ಇಂದಿರಾ ಪಾಂಚಾಲ ಹೀಗೆ ಮೂವರು ತಾರೆಯರು ಬೆಳಕಿಗೆ ಬಂದಿದ್ದಾರೆ. ಶೋಭನಾ ಸಮರ್ಥಳ ಮಗಳು ನೂತನಾ 'ಹಮಾರಿ ಬೇಟಿ'ಯಲ್ಲಿ ಅಭಿನಯಿಸಿದ ನಂತರ ಈಗ 'ನಗಿನಾ' 'ಹಂಗಾಮ' ಚಿತ್ರಗಳಲ್ಲಿ ಅಭಿನಯಿಸಿರುವಳು. 'ಬಾಜಿ' ಚಿತ್ರದಲ್ಲಿ ಕಲ್ಪನಾಕಾರ್ತಿಕ ಎಂಬ ಹೊಸ ತಾರೆ ಕಾಣಿಸಿಕೊಂಡಿದ್ದಾಳೆ. ಮಹಬೂಬರ 'ಆನ'ದಲ್ಲಿ ನಾದಿರಾ ಎಂಬ ಹೊಸ ತಾರೆಗೆ ಸ್ಥಾನ ಕೊಡಲಾಗಿದೆ. ವಿ. ಶಾಂತಾರಾಮರ ಮರಾಠಿ ಚಿತ್ರಪಟ 'ಅಮರ ಭೂಪಾಳಿ'ಯಲ್ಲಿ ಸಂಧ್ಯಾ ಮತ್ತು ನಗರಕರ ಎಂಬ ಹೊಸ ತಾರೆಯರು ಬೆಳಕಿಗೆ ಬಂದಿರುವರು. ಅವರು ಹಿಂದೀ ಚಿತ್ರರಂಗದಲ್ಲಿಯೂ ಕಾ ಲಿ ರಿ ಸ ಬ ಹು ದು.

ಇದಲ್ಲದೆ ಇನ್ನೂ ಪ್ರದರ್ಶನಕ್ಕೆ ಬರಬೇಕಾದ ಹಾಗೂ ಪ್ರದರ್ಶನಕ್ಕೆ ಸಿದ್ಧವಾದ ಅನೇಕ ಚಿತ್ರಗಳಲ್ಲಿ ಹೊಸ ತಾರೆಯರು ಕಾಣಿಸಿಕೊಂಡಿದ್ದಾರೆ. 'ಮಾಲತಿಮಾಧವ' ಚಿತ್ರದಲ್ಲಿ ಮೋತಿಸಾಗರ, ಶಶಿಮಾ, 'ಶೀಶವ್'ದಲ್ಲಿ ನೀಲಪ್ರಭಾ, 'ಆನಂದಮಠ'ದಲ್ಲಿ, 'ಸಾಜ'ದಲ್ಲಿ ಕಮಲ, ಆರತಿ, '25th July' ದಲ್ಲಿ ಮೀರಾ ಸರಕಾರ, ಮೋಲಿಚಟರ್ಜಿ, 'ಸನವರಿ'ಯಲ್ಲಿ ನಿರ್ಮಲ ಹಾಗೂ ಪ್ರೀತಂ, 'ಝುಲ್ ಝುಲ್'ದಲ್ಲಿ ಜಗದೇವ ಹಾಗೂ ರಾಜಿ, 'ಸಂಸಾರ'ದಲ್ಲಿ ಸ್ವರಾಜ, ವನಜಾ, ಹೀಗೆ ಹೊಸ ತಾರೆಯರು ಕಾಣಿಸಿಕೊಂಡಿದ್ದಾರೆ. 'ಆರಜೂ' ಚಿತ್ರದ ನಂತರ ಚಲಚ್ಚಿತ್ರರಂಗದಿಂದ ಕಣ್ಮರೆಯಾಗಿದ್ದ ಕಾಮಿನಿ ಕೌಶಲ ಪುನಃ ಚಿತ್ರರಂಗದಲ್ಲಿ ಪ್ರವೇಶಿಸಲು ನಿರ್ಧರಿಸಿದ್ದು ಪಿ. ಎನ್. ಆರೋರಾರ 'ಪೂನಂ' ಚಿತ್ರದಲ್ಲಿ ನಟಿಸಲು ಒಪ್ಪಿದ್ದಾಳೆ. ಆ ಚಿತ್ರದ ತಯಾರಿಕೆಯಲ್ಲಿ ಅವಳು ಪಾಲುಗಾರಳೂ ಇದ್ದಾಳೆ. ಪಾಕಿಸ್ತಾನಕ್ಕೆ ಹೋಗಿದ್ದ 'ರಾಗಿಣಿ' ಮರಳಿ ಬಂದಿದ್ದು 'ಚಮಕ' ಚಿತ್ರದಲ್ಲಿ ಅಭಿನಯಿಸಿರುವಳು.

ಹೊಸ ತಾರೆಯರ ಶೋಧಕ್ಕಾಗಿ ಕರದಾರ—ಕಾಲಿನಾಸ-ಟಿರೆಸಾರವರು ಏರ್ಪಡಿಸಿದ ಸ್ಪರ್ಧೆಯ ಫಲಿತಾಂಶವು ಇದೀಗ ಪ್ರಕಟವಾಗಿದ್ದು ಮುಂಬಯಿಯ ಕು. ಪೀಸ ಕಮಲ ಹಾಗೂ ಶ್ರೀ ಸಹದೇವ ರಾಣಾರವರು ಈ ಸ್ಪರ್ಧೆಯಲ್ಲಿ ಯಶಸ್ವಿಯಾಗಿರುವರು. ಮುಂಬಯಿ, ಕಲಕತ್ತಾ ಹಾಗೂ ದಿಲ್ಲಿಗಳಿಂದ ಕೊನೆಯ ಆಯ್ಕೆಗಾಗಿ ಆರಿಸಿದ ೧೨ ಯುವಕ ಯುವತಿಯರಲ್ಲಿ ಇವರಿಬ್ಬರನ್ನು ಆರಿಸಲಾಗಿದೆ. ಇವರಿಗೆ ಕರದಾರ ಚಿತ್ರಗಳಲ್ಲಿ ನಟಿಸುವ ಅವಕಾಶ ಕೊಡುವುದಲ್ಲದೆ ರೋಮ ಪ್ರವಾಸಕ್ಕಾಗಿ ವ್ಯವಸ್ಥೆ ಮಾಡಿಕೊಡಲಾಗುವದು. ಈ ಸ್ಪರ್ಧೆಯಲ್ಲಿ ಭಾಗ ವಹಿಸಿ ಅಯಶಸ್ವಿಯಾಗಿದ್ದರೂ ಯೋಗ್ಯರಿದ್ದವರಿಗೆ ಅವಕಾಶ ಕೊಡಲಾಗುವದೆಂದೂ ಶ್ರೀ ಕರದಾರರು ಹೇಳಿರುವರು. ಈ ಪ್ರಯತ್ನದಿಂದಾಗಿ ಹೊಸ ತಾರೆಯರು ಚಲಚ್ಚಿತ್ರ ರಂಗವನ್ನು ಹೆಚ್ಚೆಚ್ಚಾಗಿ ಪ್ರವೇಶಿಸಲು ಮಾರ್ಗವಾದಂತಾಗಿದೆ.

ದಕ್ಷಿಣದ ತಾರೆಯರು ಉತ್ತರದ ಚಲಚ್ಚಿತ್ರಗಳಲ್ಲಿ, ಉತ್ತರದ ತಾರೆಯರು ದಕ್ಷಿಣದ ಚಿತ್ರಗಳಲ್ಲಿ ಅಭಿನಯಿಸಲು ಮುಂದೆ ಬಂದಿರುವದು ಈ ಸಲದ ಒಂದು ವೈಶಿಷ್ಟ್ಯವಾಗಿದೆ. ಸಂತೋಷಿಯ 'ಶಿನ್‌ಶಿನಾಕಿ ಬೂಬಿಲ್ ಬಾ' ಹಾಗೂ 'ಸಿಂದಬಾದ ದಿ ಸೇಲರ' ಚಿತ್ರಗಳಲ್ಲಿ ಜೆಮಿನಿಯವರ ಚಿತ್ರಗಳಲ್ಲಿ ಅಭಿನಯಿಸಿ ಖ್ಯಾತಿ ಪಡೆದ ರಂಜನ ಅಭಿನಯಿಸಿದ್ದಾನೆ. ಅವು ಬೇಗನೆ ಪ್ರದರ್ಶನಕ್ಕೆ ಬರುವವು. ಎ. ವ್ಹಿ. ಎಂ. ಪ್ರೊಡಕ್ಶನ್ನದವರ 'ಬಹಾರ'ದಲ್ಲಿ ಕರನ ದಿವಾನ, ಪ್ರಾಣ, ಓಂಪ್ರಕಾಶ, ಸುಂದರ, ಲೀಲಾ ಮಿಶ್ರ, ಗೋಪ ಅಭಿನಯಿಸಿದ್ದಾರೆ. ಜೆಮಿನಿಯವರ 'ನಿಶಾನ' ದಲ್ಲಿ ಆಗಾ ಅಭಿನಯಿಸಿದ್ದು 'ಲವಂಗಿ' ಚಿತ್ರದಲ್ಲಿ ಕುಕ್ಕೂ ನೃತ್ಯ ಪ್ರದರ್ಶಿಸಿದ್ದಲ್ಲದೆ ಅಭಿನಯಿಸಿಯೂ ಇದ್ದಾಳೆ.

ಇನ್ನು ಈ ವರ್ಷದ ಕನ್ನಡ ಚಲಚ್ಚಿತ್ರಗಳ ಬಗ್ಗೆ ಒಂದೆರಡು ಮಾತು ಹೇಳಬೇಕಾಗಿದೆ. 'ಕೆಂಪರಾಜ'ರ ರಾಜಾ ವಿಕ್ರಮ ಚಿತ್ರವು ಇದ್ದುದರಲ್ಲಿಯೇ ಉತ್ತಮವಾಗಿದ್ದು ಇದರಲ್ಲಿ ರಾಜಮ್ಮ, ಜಯಮ್ಮ, ಕೆಂಪರಾಜ ಮೊದಲಾದವರು ಅಭಿನಯಿಸಿದ್ದಾರೆ. ಸ್ವತಃ ಕೆಂಪರಾಜರು ದಿಗ್ದರ್ಶಿಸಿದ್ದಾರೆ. ಮಹಾತ್ಮರವರ ಜಗನ್ಮೋಹಿನಿ

ಯಲ್ಲಿ ಕೆಲ ಸುಂದರ ಔಟಡೋರ ದೃಶ್ಯಗಳನ್ನು ಸೇರಿಸಿದ್ದು ಹರಿಣಿ ಎಂಬ ಹೊಸ ತಾರೆಯು ಅಭಿನಯಿಸಿರುವಳು. ಸುಖಸಂಪತ್ ಚಿತ್ರಪಟದವರ ತಿಲೋತ್ತಮ ಮತ್ತು ಸತಿ ತುಳಸಿ ಇದೀಗ ಪ್ರದರ್ಶನಕ್ಕೆ ಬಂದಿವೆ. ಇದಲ್ಲದೆ ಬಿಂದು ಬಿ ಏ, ತಾಯಿ, ಸಮರ್ಥ ರಾಮದಾಸ, ಗುಣಸುಂದರಿ, ಸುಬೋಧರವರ ಬಸವೇಶ್ವರ ತಯಾರಿಕೆಯಲ್ಲಿರುವದಾಗಿ ವರದಿಯಾಗಿದೆ.

ಕನ್ನಡ ಚಲಚ್ಚಿತ್ರರಂಗವು ನಿರಾಶಾದಾಯಕವಿಲ್ಲದಿದ್ದರೂ ಅಷ್ಟು ಉತ್ತೇಜಕಾರಿಯಾಗಿರುವದಿಲ್ಲ. ತಯಾರಿಕೆಯಲ್ಲಿರುವ ಚಿತ್ರಗಳ ಪಟ್ಟಿಯೇನೋ ದೊಡ್ಡದಿದೆ. ಅದರೆ ಎಷ್ಟು ಚಿತ್ರಗಳು ಪ್ರದರ್ಶನಕ್ಕೆ ಬರುವುವೋ ಕಾದು ನೋಡಬೇಕು.

ಸರಕಾರಿ ಚಿತ್ರವಿಭಾಗದ ಚಿತ್ರಗಳ ಬಗ್ಗೆ ಒಂದೆರಡು ಮಾತು ಇಲ್ಲಿ ಹೇಳಬೇಕಾಗಿದೆ. ಜ್ಞಾನಪ್ರಸಾರ ಹಾಗೂ ವಿದೇಶಗಳಲ್ಲಿ ಭಾರತದ ಸಂಸ್ಕೃತಿಯ ಹಿರಿಮೆಗಳ ಪರಿಚಯ ಮಾಡಿಕೊಡುವದೇ ಈ ವಿಭಾಗದ ಮುಖ್ಯ ಕಾರ್ಯವಾಗಿದೆ. ಈ ವಿಭಾಗದ 'ರಾಜಸ್ತಾನ' ಎಂಬ ಡಾಕ್ಯುಮೆಂಟರಿ ಚಿತ್ರಕ್ಕೆ ಜಾಗತಿಕ ಚಲಚ್ಚಿತ್ರ ಉತ್ಸವದಲ್ಲಿ ಪಾರಿತೋಷಕ ದೊರೆತಿರುವದು ಅಭಿಮಾನದ ಸಂಗತಿಯಾಗಿದೆ. ಆದರೆ ಈ ಸುದ್ದಿ ಚಿತ್ರಗಳಲ್ಲಿ ಇನ್ನೂ ಬಹಳಷ್ಟು ಸುಧಾರಣೆಗಳಾಗಬೇಕಾಗಿರುವದು.

ಚಲಚ್ಚಿತ್ರ ವಿಚಾರಣಾ ಸಮಿತಿಯವರ ವರದಿಯು ಇದೀಗ ಹೊರಬಿದ್ದಿದ್ದು ಅವರು ಮಾಡಿದ ಕೆಲ ಸೂಚನೆಗಳು ಚಲಚ್ಚಿತ್ರ ಪ್ರಂಪಂಚದ ದೃಷ್ಟಿಯಿಂದ ಮಹತ್ವದವಿರುವವು. ೧ ಲಕ್ಷ೨೦ ಸಾವಿರ ಶಬ್ದಗಳ ಈ ವರದಿಯಲ್ಲಿ ಸ್ವಾಯತ್ತ ಚಲಚ್ಚಿತ್ರ ಮಂಡಳವೊಂದನ್ನು ಚಲಚ್ಚಿತ್ರ ಉದ್ದಿಮೆಗೆ ಸಲಹೆ ಹಾಗೂ ಮಾರ್ಗದರ್ಶನಕ್ಕಾಗಿ ಸ್ಥಾಪಿಸಬೇಕೆಂದು ಸೂಚಿಸಲಾಗಿರುವದು. ಅದರಲ್ಲಿ ತಾಂತ್ರಿಕ ಕಲೆಯಲ್ಲಿ ಸುಧಾರಣೆಯಾಗಿದ್ದರೂ ಕಥೆಗಳ ದೃಷ್ಟಿಯಿಂದ ಬಹಳಷ್ಟು ಸುಧಾರಣೆಯಾಗಬೇಕೆಂದು ಹೇಳಿರುವದು ಚಲಚ್ಚಿತ್ರ ನಿರ್ಮಾಪಕರಿಗೆ ಒಂದು ಬಗೆಯ ಎಚ್ಚರಿಕೆ ಕೊಟ್ಟಂತಾಗಿದೆ. ಈ ಬಗ್ಗೆ ನಿಯಂತ್ರಣ ಹೇರಬಹುದೆಂದೂ ಸಮಿತಿಯು ಸೂಚಿಸಿರುವದು. ಒಟ್ಟಾರೆ ಈ ವರದಿಯು ಚಲಚ್ಚಿತ್ರ ಸುಧಾರಣೆಗೆ ಸಹಾಯಕವಾಗುವಂತಿದೆ.

ಈ ವರ್ಷದಲ್ಲಿ ತಯಾರಿಕೆಯಲ್ಲಿದ್ದರೂ ಮುಂದಿನ ವರ್ಷದ ಪ್ರಾರಂಭದಲ್ಲಿ ಪ್ರದರ್ಶನಕ್ಕೆ ಬರಬಹುದಾದ 'ಝಾಂಸಿ-ಕಿ-ರಾಣಿ', 'ಅನಾರಕಲಿ', 'ಆನಂದಮಠ' ಮೊದಲಾದ ಕೆಲ ಚಿತ್ರಗಳು ಭಾರತೀಯ ಚಲಚ್ಚಿತ್ರರಂಗದಲ್ಲಿ ಪ್ರಕಾಶಿಸಬಹುದೆಂದು ನಿರೀಕ್ಷಿಸಲಾಗಿದೆ.

ನಮ್ಮಲ್ಲಿ ಸಹನೆಯೂ ಇರಬೇಕು, ಅಸಹನೆಯೂ ಇರಬೇಕು. ನಮ್ಮ ಅಭಿಪ್ರಾಯಕ್ಕೆ ಸಹಮತರಾಗದವರ ಬಗ್ಗೆ ಸಹನೆ ಬೇಕು. ಸ್ವತಃ ನಮ್ಮ ಬಗ್ಗೆ ಅಸಹನೆಯೇ ಬೇಕು. —ಮೋತೀಲಾಲ ನೆಹರು

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಪ್ರೆಸ್ಸಿನಲ್ಲಿ "ಲೋಕಶಿಕ್ಷಣ ಟ್ರಸ್ಟಿ" ನ ಪರವಾಗಿ ಹ. ರಾ. ಮೊಹರೆಯವರು ಮುದ್ರಿಸಿ ಪ್ರಕಟಿಸಿದರು.

REG. No. B. 3148 LICENCE No. 3 Licenced to post without prepayment KARMAVEER 31 - 10 - 1951

